START

ಕಾಲಾ ಪತ್ಥೆ

ಸ್ಥಾಪನೆ : ೧೮೬೫ 1913 ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ತರ ಬೆಳ್ಳಿ ಹಬ್ಬ
(ಎಸ್ರಿಬಿ ೧೯೮೯ ರಿಂದ)

ಪೂಜ್ಯ ಬಸವಪ್ಪನವರು
(೧೮೬೫–೧೯೪೯)

ವರ್ಷ 1913

ಸೇವೆಯ ಸಂಕ್ಷಿಪ್ತ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮



ಸಿದ್ಧಾಪುರ ನಾಚನ್ಯಾಯಿಕ.
ಮೈಸೂರು ಪ್ರಕಾಶಕರು

ಪುಸ್ತಕ ೪೯	ಜನವರಿ ೧೯೧೩.	ಸಂಚಿಕೆ ೧.

ಸ್ಫುಟವಿಚಾರಗಳು.

೧. ಸಂಸಾರಯಾತ್ರೆಯು ಸರ್ವಾಂಗಗಳಿಂದ ಪರಿಪೂರ್ಣವಾಗಿ ಯಶಸ್ವಿಯಾಗುವಂತೆ ಪ್ರತಿಯೊಂದು ವ್ಯಕ್ತಿಯಲ್ಲಿ ಯೋಗ್ಯತೆಯನ್ನುಂಟುಮಾಡುವದೇ ಶಿಕ್ಷಣದ ಉದ್ದೇಶವಾಗಿರುತ್ತದೆ. ಸದ್ಯಕ್ಕೆ ಬಹು ಜನರಿಗೆ ಶಿಕ್ಷಣದ ಮಹತ್ವವು ಹೆಚ್ಚು ಕಡಿಮೆ ಪ್ರಮಾಣದಿಂದ ತಿಳಿಯ ಹತ್ತಿರುವದು. ತಾನು ಸ್ವತಃ ಕಲಿತವನಿರಲಿ, ಕಲಿಯದವನಿರಲಿ, ತನ್ನ ಮಕ್ಕಳಿಗೆ ಸದ್ಯದ ವ್ಯವಹಾರದ ಪೂರ್ತಿಯಾದರೂ ಓದಲಿಕ್ಕೂ ಬರೆಯಲಿಕ್ಕೂ ಬರಬೇಕೆಂತಲೂ, ಅಷ್ಟು ಸಹ ಬಾರದಿದ್ದರೆ ಈಗಿನ ಕಾಲದಲ್ಲಿ ಅವರು ಕೈಸಾಗದೆ ಕೂಡ್ರಬೇಕಾಗುವದೆಂತಲೂ ಪ್ರತಿಯೊಬ್ಬ ಮನುಷ್ಯನ ಮನಸಿನಲ್ಲಿ ಬರಹತ್ತಿರುವದು. ಈ ಮೇರೆಗೆ ಶಿಕ್ಷಣದ ವಿಷಯವಾಗಿ ನಮ್ಮ ಜನರ ಮನಸ್ಸಿನಲ್ಲಿ ಆಸ್ಥೆಯು ಉತ್ಪನ್ನವಾದದ್ದನ್ನು ಕಂಡು ನಮ್ಮ ಸರಕಾರದವರು ಬಹುಶಃ ಎಲ್ಲ ದೊಡ್ಡ ದೊಡ್ಡ ಊರುಗಳಲ್ಲಿ ಸಾಲೆಗಳನ್ನು ಸ್ಥಾಪಿಸಿ ಅವು ಚನ್ನಾಗಿ ನಡೆಯುವದಕ್ಕಾಗಿ ಪ್ರತಿವರ್ಷ ಲಕ್ಷಾವಧಿ ರೂಪಾಯಿಗಳನ್ನು ವೆಚ್ಚ ಮಾಡಹತ್ತಿರುವರು. ಈ ಮೇರೆಗೆ ಶಿಕ್ಷಣದ ಸಲುವಾಗಿ ಪ್ರತಿವರ್ಷ ವೆಚ್ಚವಾಗುತ್ತಿರುವ ಲಕ್ಷಗಟ್ಟಲೆ ರೂಪಾಯಿಗಳ ಯೋಗ್ಯ ಉಪಯೋಗವು ಕೇವಲ ನಮ್ಮ ಶಿಕ್ಷಕವರ್ಗದ ಕರ್ತೃತ್ವವನ್ನೇ ಅವಲಂಬಿಸಿರುವದು. ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ಜರುಗಿಸಿ ಈ ಹಣವನ್ನು ಸಾರ್ಥಕಗೊಳಿಸುವರೆಂದು ನಾವು ನಂಬಿದ್ದೇವೆ. ಶಿಕ್ಷಕರು ತಮ್ಮ ಕೆಲಸಗಳನ್ನು ಮಾಡುವಾಗ ಅವರಿಗೆ ಹಲವು ಬಗೆಯ ತೊಂದರೆಗಳು ತಟ್ಟುವವೆಂಬದನ್ನು ನಾವು ಬಲ್ಲೆವು. ಅವುಗಳೊಳಗಿಂದ ಪಾರಾಗುವ ಹಂಬಿಕೆಗಳನ್ನು

ಶಿಕ್ಷಣಪದ್ಧತಿ.

ನಾವು ಆಗಾಗ್ಗೆ ಸೂಚಿಸುತ್ತಿರುವೆವು. ಆದರೆ ಎಷ್ಟೋ ಶಿಕ್ಷಕರಿಗೆ ತಮ್ಮ ಮುಖ್ಯ ಕರ್ತವ್ಯದ ಬಗ್ಗೆ, ಅಂದರೆ ಶಿಕ್ಷಣಪದ್ಧತಿಯ ಬಗ್ಗೆ ಯಥಾರ್ಥ ಜ್ಞಾನವಿರುವದಿಲ್ಲ. ಇದು ಶಿಕ್ಷಕರಿಗೆ ತಪ್ಪುವಷ್ಟು ಮೊದಲನೇ ತೊಂದರೆಯಾದ ಕಾರಣ, ಈ ವಿಷಯವನ್ನು ಕುರಿತು ಇಲ್ಲಿ ವಿವೇಚಿಸುತ್ತೇವೆ.

ಸ್ವಾಭಾವಿಕವಾದ ಶಕ್ತಿಗಳನ್ನು ವಿಕಾಸಗೊಳಿಸುವದೇ ಶಿಕ್ಷಣದ ನಿಜವಾದ ಹೇತುವು. ಈ ಶಕ್ತಿಗಳಲ್ಲಿ ಶಾರೀರಿಕ, ಮಾನಸಿಕ, ನೈತಿಕ ಗಳಿಂದು ಮೂರು ಪ್ರಕಾರಗಳುಂಟು. ಈ ಮೂರೂ ಬಗೆಯ ಶಕ್ತಿಗ ಳನ್ನು ಎಚ್ಚರಿಸುವದೂ, ಸುಸಂಗತವಾಗಿ ವಿಕಾಸಗೊಳಿಸಿ ಶಕ್ಯವಿ ದ್ದಷ್ಟು ಮಟ್ಟಿಗೆ ಪೂರ್ಣಸ್ಥಿತಿಗೆ ತಿಯ್ಯುವದೂ ಶಿಕ್ಷಕರ ನಿಜವಾದ ಮುಖ್ಯ ಕರ್ತವ್ಯಗಳಾಗಿರುತ್ತವೆ. ಚಿಕ್ಕಮಕ್ಕಳು ಸಶಕ್ತರೂ ಬುದ್ಧಿವಂ ತರೂ ಬಳ್ಳೀ ನಡತೆಯವರೂ ಆಗುವಂತೆ ಮಾಡುವದರಲ್ಲಿಯೇ ಕರ್ತ ವ್ಯದಕ್ಷರಾದ ಶಿಕ್ಷಕರಿಗೆ ನಿಜವಾಗಿ ಆನಂದವೆನಿಸಲಿಕ್ಕೆಬೇಕು.

ಹುಡುಗರಿಗೆ ಬೇರೆ ಬೇರೆ ವಿಷಯಗಳ ಸಾಕಷ್ಟು ಜ್ಞಾನವನ್ನು ಮಾಡಿಕೊಟ್ಟರೆ ತಮ್ಮ ಕರ್ತವ್ಯವಾಯಿತೆಂದು ತಿಳಿಯಕೂಡದು. ಒಂದ ಚೀಲದಲ್ಲಿ ಹಲವು ವಸ್ತುಗಳನ್ನು ತುಂಬುವಂತೆ ಹುಡುಗರ ಮನಸ್ಸಿನಲ್ಲಿ ಅವರಿಗೆ ಉಪಯುಕ್ತವಾದ ಅಥವಾ ನಿರುಪಯುಕ್ತವಾದ ಹಲವು ಸಂ ಗತಿಗಳನ್ನು ಹ್ಯಾಗಾದರೂ ಮಾಡಿ ತುಂಬಿ ಬಿಡುವದರಿಂದ ಅವ ಮನಸ್ಸಿನ ನೈಸರ್ಗಿಕ ಶಕ್ತಿಗಳ ವಿಕಾಸವು ಆಗಲಾರದು. ಆದರೆ ಅವೆ ಸಂಗತಿಗಳನ್ನು ಶಿಕ್ಷಕನು ತಾನಾಗಿಯೇ ಹೇಳಿ, ಅಥವಾ ಪುಸ್ತಕವನ್ನ ಓದಿಸಿ ನೆನಪಿನಲ್ಲಿಡಿಸುವದಕ್ಕಿಂತ ಹುಡುಗರಿಗೇ ಆ ಸಂಗತಿಗಳ ಜ್ಞಾ ವನ್ನು ಮಾಡಿಕೊಳ್ಳಲಿಕ್ಕೆ ಹಚ್ಚುವದರಿಂದ ಹೆಚ್ಚು ಉಪಯೋಗವಾಗ ವದು. ಮೊದಲನೆಯ ಪ್ರಕಾರದ ಶಿಕ್ಷಣಪದ್ಧತಿಯಿಂದ ಅವರ ಸ್ಮರಣ ಶಕ್ತಿಯ ಹೊರತು ಬೇರೆ ಮಾನಸಿಕ ಶಕ್ತಿಗಳಿಗೆ ಅಭ್ಯಾಸವನ್ನು ಕೊಟ್ಟಂ ಆಗುವದಿಲ್ಲ. ಆದರೆ ಎರಡನೆಯ ಪ್ರಕಾರದ ಶಿಕ್ಷಣಪದ್ಧತಿಯಿಂ ನಿರೀಕ್ಷಣ, ತುಲನೆ, ವಿಚಾರ, ನಿರ್ಣಯ ಮೊದಲಾದ ಶಕ್ತಿಗಳಿಗೆ ಅಭ್ಯಾ ಸವು ದೊರೆತು, ಅವು ವಿಕಾಸಹೊಂದುವವು. ಇದಲ್ಲದೆ ಸ್ವಂತ ಶ್ರಮ ದಿಂದ ಸಂಪಾದಿಸಿದ ಜ್ಞಾನದಿಂದ ಮನಸ್ಸಿಗೆ ಹೇಳಕೂಡದಷ್ಟು ಆನಂ ವಾಗುತ್ತದೆ. ಈ ಜ್ಞಾನದ ಮಹತ್ವವು ಎಷ್ಟಿರುವದೆಂಬದನ್ನು ಮುಂದಿ

ದೃಷ್ಟಾಂತದಿಂದ ಗೊತ್ತಾಗುವದು. ಒಬ್ಬ ಜಟ್ಟಿಯು ಕಸರತ್ತು ಮಾಡಿ ತನ್ನ ಶರೀರಸಾಮರ್ಥ್ಯವನ್ನು ಮಿತಿ ಮೀರಿ ಬೆಳೆಸಿ, ತನ್ನಂತೆಯೆ ಬೆಳೆದು ನಿಂತು ಹೆಸರಾದ ಮತ್ತೊಬ್ಬ ಜಟ್ಟಿಯು ಕೂಡ ಕುಸ್ತೀಯಿಂದಿದು ಅವನನ್ನು ಕೆಡವಿ ಒಂದು ಬಂಗಾರದ ಕಡೆಯನ್ನು ಇನಾಮಾಗಿ ಪಡೆದನೆಂದು ತಿಳಿಯಿರಿ. ಈ ಕಡೆಯ ಬೆಲೆಯು ಅವನಿಗೆ ಅವನ ಹಿರಿಯರು ಸಂಪಾದಿಸಿಟ್ಟ ಅಂಥದೇ ಮತ್ತೊಂದು ಕಡೆಗಿಂತ ಎಷ್ಟೋಪಟ್ಟು ಹೆಚ್ಚು ಕಾಣುವದು. ಯಾಕಂದರೆ, ಅದು ಅವನ ಸ್ವಂತ ಕಷ್ಟಾರ್ಜಿತವಾದದ್ದು. ಅದರಲ್ಲಿ ಅವನಿಗೆ ಸ್ವಾಭಾವಿಕವಾಗಿ ಅಭಿಮಾನವು ಬಹಳ ಇರುವದು.

ಸದ್ಯದ ಶಿಕ್ಷಣಪದ್ಧತಿಯಿಂದ ಹುಡುಗರ ಸ್ಮರಣಶಕ್ತಿಗೇ ಹೆಚ್ಚು ಕೆಲಸವು ಬೀಳುವದೆಂಬದು ಸಹಜವಾಗಿ ಕಂಡು ಬರುವಂತೆ ಅದೆ. ಆದರೆ ಇದರಿಂದ ಹುಡುಗರಿಗೆ ಮೂಲತಃ ಏನಾ ಮಾಡಿಸಲೇ ಬಾರದೆಂತಲೂ ಅವರು ಏನಾ ಮಾಡುವ ಅವಶ್ಯಕತೆಯೇ ಇಲ್ಲೆಂತಲೂ ಯಾರೂ ತಿಳಿಯಕೂಡದು. ಬೇರೆ ಹಲವು ಮಾನಸಿಕ ಶಕ್ತಿಗಳ ಸಂಗಡ ಸ್ಮರಣಶಕ್ತಿಯನ್ನೂ ವಿಕಾಸಗೊಳಿಸುವದು ಶಿಕ್ಷಕರ ಕರ್ತವ್ಯವಾಗಿರುತ್ತದೆ. ಆದರೆ ಮನಸ್ಸು ಬಾಹ್ಯ ಸೃಷ್ಟಿಯ ಜ್ಞಾನವನ್ನು ಇಂದ್ರಿಯಗಳ ದ್ವಾರಾ ನಿರೀಕ್ಷಣ ಮಾಡಿ ಹ್ಯಾಗೆ ದೊರಕಿಸುವದು? ಈ ಇಂದ್ರಿಯ ಜನ್ಯಜ್ಞಾನವನ್ನು ಸ್ಮರಣೆಯಲ್ಲಿಟ್ಟುಕೊಂಡು ಅದರ ಸಹಾಯದಿಂದ ತುಲನಾ, ವಿಚಾರ, ಕಲ್ಪನೆಗಳಿಂದ ಹೊಸ ಜ್ಞಾನವನ್ನು ಹ್ಯಾಗೆ ಹೊಂದುವದು? ಎಂಬದನ್ನು ಆಲೋಚಿಸಿದರೆ, ಮೊದಲು ನಿರೀಕ್ಷಣಸಾಮರ್ಥ್ಯವೂ ತರುವಾಯ ಸ್ಮರಣ ಶಕ್ತಿಯೂ ವಿಕಾಸಗೊಳ್ಳುವವೆಂಬದೂ, ತುಲನಾ, ವಿಚಾರ, ಕಲ್ಪನಾ, ನಿರ್ಣಯ ಮೊದಲಾದ ಮಾನಸಿಕ ಶಕ್ತಿಗಳ ವಿಕಾಸಕ್ಕೆ ನಿರೀಕ್ಷಣದಿಂದೊಡಗೂಡದ ಸ್ಮರಣಶಕ್ತಿಯು ನಿರುಪಯುಕ್ತವಾದದ್ದೆಂಬದೂ ಗೊತ್ತಾಗುವದು. ಆದ್ದರಿಂದ ಶಿಕ್ಷಕರು ಹುಡುಗರಿಗೆ ನಿರೀಕ್ಷಣದಿಂದ ಹೊಸ ಹೊಸ ಜ್ಞಾನವನ್ನು ಮಾಡಿಕೊಳ್ಳಲಿಕ್ಕೆ ಹಚ್ಚಿ, ಆ ಜ್ಞಾನವನ್ನು ಅವರು ಸ್ಮರಣದಲ್ಲಿಟ್ಟುಕೊಳ್ಳುವಂತೆಯೂ ಅದರಿಂದ ತುಲನಾ-ಕಲ್ಪನಾ-ವಿಚಾರಗಳನ್ನು ಮಾಡಿ ನಿರ್ಣಯಗಳನ್ನು ಗೊತ್ತುಪಡಿಸುವಂತೆಯೂ ಶಿಕ್ಷಣಪದ್ಧತಿಯ ಯೋಜನೆಯನ್ನು ಮಾಡಬೇಕು.

ಇದಲ್ಲದೆ ಶಿಕ್ಷಕರು ಹುಡುಗರ ಶಾರೀರಿಕ ಮಾನಸಿಕ ನೈತಿಕಗ ಗಳೆಂಬ ಮೂರು ಬಗೆಯ ಶಕ್ತಿಗಳನ್ನು ವಿಕಾಸಗೊಳಿಸಬೇಕೆಂದು ಹಿಂದೆ ಹೇಳಿದ್ದೀವೆ. ಆದರೆ ಎಷ್ಟೋ ಸಾಲೆಗಳಲ್ಲಿ ಮೊದಲನೇ ಮೂರನೇ ಸಂಗ ತಿಗಳನ್ನು ದುರ್ಲಕ್ಷ ಮಾಡಿ, ಎರಡನೇ ಸಂಗತಿಯ ಬಗ್ಗೆಯೇ, ಅದರ ಲ್ಲಿಯೂ ವಿಶೇಷವಾಗಿ ಸ್ಮರಣಶಕ್ತಿಯೆಂಬದೊಂದೇ ಭಾಗದ ಕಡೆಗೆ ಬಹಳ ಲಕ್ಷ ಕೊಡುವರು. ಇಂಥ ಏಕದೇಶೀಯವಾದ ಶಿಕ್ಷಣದಿಂದ ಏನೂ ಪ್ರ ಯೋಜನವಾಗುವದಿಲ್ಲ. ತಮ್ಮ ಕರ್ತವ್ಯವನ್ನು ಪ್ರಾಮಾಣಿಕತನದಿಂದಲೂ ನಿಷ್ಠೆಯಿಂದಲೂ ಮಾಡಬೇಕೆಂಬ ಮನಸ್ಸುಳ್ಳ ಶಿಕ್ಷಕರು ತಮ್ಮ ಕೈ ಕೆಳ ಗೆ ಬಂದ ವಿದ್ಯಾರ್ಥಿಗಳು ಶರೀರದಿಂದ ಸುದೃಢರಾಗುವಂತೆಯೂ, ಬುದ್ಧಿ ಯಿಂದ ಚತುರಾಕರಾಗುವಂತೆಯೂ, ಒಳ್ಳೇ ನಡತೆಯಿಂದ ಸಂಪನ್ನರಾಗು ವಂತೆಯೂ ಯತ್ನಮಾಡಲಿಕ್ಕೆ ಬೇಕು. ಈ ಮೇರೆಗೆ ಶಿಕ್ಷಕವರ್ಗಕ್ಕೆ ತಮ್ಮ ಕರ್ತವ್ಯಜ್ಞಾನವಾಗಿ ಅವರಲ್ಲಿ ಕರ್ತವ್ಯ ಜಾಗ್ರತೆಯು ಉತ್ಪನ್ನವಾ ಗುತ್ತ ಹೋದಂತೆ ಅವರ ಸಾಲೆಯಿಂದ ಗಟ್ಟಿಗರೂ, ನಿರೋಗಿಗಳೂ, ಕರ್ತವ್ಯತತ್ಪರರೂ, ಸದ್ಗುಣಿಗಳೂ, ಸಹೃದಯರೂ, ಸುಶೀಲರೂ ಆದ ವಿದ್ಯಾರ್ಥಿಗಳು ಹೊರಬೀಳಹತ್ತುವರೆಂಬದಕ್ಕೆ ಸಂದೇಹವಿಲ್ಲ.

ಇಲ್ಲಿಯವರೆಗೆ ನಿಜವಾದ ಶಿಕ್ಷಣಪದ್ಧತಿಯ ಸ್ವರೂಪವು ಹ್ಯಾಗಿರಬೇ ಕೆಂಬ ಬಗ್ಗೆ ಹೇಳಿದಂತಾಯಿತು. ಇನ್ನೊಂದು ಸಂಗತಿಯನ್ನು ಕುರಿತು ಸ್ವಲ್ಪ ಮಾತು ಹೇಳಿ ಸದ್ಯಕ್ಕೆ ಈ ವಿಷಯವನ್ನು ಮುಗಿಸುವೆವು.

ಎಷ್ಟೋ ಶಿಕ್ಷಕರು ತಮ್ಮ ವರ್ಗದೊಳಗಿನ ಹೆಚ್ಚು ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ತಮ್ಮ ಕೆಲಸವು ಚನ್ನಾಗಿ ಆಯಿತೆಂ ದು ತಿಳಿಯುತ್ತಾರೆ. ಒಂದು ರೀತಿಯಿಂದ ನೋಡಿದರೆ ಈ ತಿಳುವಳಿಕೆ ಯಲ್ಲಿ ಬಹಳ ತಪ್ಪಿಲ್ಲ. ಕೆಲಮಟ್ಟಿಗೆ, ವಾರ್ಷಿಕ ಪರೀಕ್ಷೆಯು ಶಿಕ್ಷಕನ ಕೆಲಸದ ಒರೆಗಲ್ಲೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಅವನು ತನ್ನ ಕೆಲಸ ವನ್ನು ಈ ಒರೆಗಲ್ಲಿಗೆ ತಿಕ್ಕಿ ಅದರಲ್ಲಿ ನ್ಯೂನತೆಗಳು ಕಡಿಮೆಯುಂಟೆಂ ಬದನ್ನು ಎರಡನೆಯವರ ಅನುಭವಕ್ಕೆ ತಂದುಕೊಡುವದು ಯೋಗ್ಯ ವಾದದ್ದು. ಆದರೆ ಪರೀಕ್ಷೆಗೋಸ್ಕರ ಹುಡುಗರನ್ನು ಸಿದ್ಧಪಡಿಸುವದ ರಲ್ಲಿ ತಪ್ಪಾಗುತ್ತದೆ. ಹುಡುಗರಿಗೆ ಅವರ ಇಯತ್ತೆಗೆ ಗೊತ್ತುಪಡಿಸಿ ದ ವಿಷಯಗಳನ್ನು ಸರಿಯಾಗಿ ತಿಳಿಸಿಕೊಟ್ಟು, ಅವರ ಮಾನಸಿಕ

ಶಕ್ತಿಗಳನ್ನು ವಿಕಾಸಪಡಿಸಿದರೆ ಅವರು ಪರೀಕ್ಷೆಯ ಕಾಲಕ್ಕೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟೇಕೊಡುವರು. ಆದರೆ ವಸ್ತುಸ್ಥಿತಿಯು ಹಾಗಿರುವದಿಲ್ಲ. ಈ ಕಷ್ಟಸಾಧ್ಯವಾದ ಮಾರ್ಗವನ್ನು ಬಿಟ್ಟು ಕೊಟ್ಟು ಪರೀಕ್ಷೆಯ ದಿವಸಗಳು ಸಮೀಪಿಸಿದಂತೆ ಪ್ರತಿಯೊಂದು ವಿಷಯದ ಮುಖ್ಯ ಮುಖ್ಯ ಸಂಗತಿಗಳನ್ನಷ್ಟು ಹುಡುಗರಿಂದ ಪಾಠ ಮಾಡಿಸಿ ಬಿಡುವರು. ಅದರಿಂದ ಪರೀಕ್ಷೆಯ ಕಾಲಕ್ಕೆ ಶಿಕ್ಷಕನ ಕೆಲಸವು ಮಾತ್ರ ಚೆನ್ನಾಗಿರುವದೆಂದು ಕಂಡುಬರುವದು; ಹುಡುಗರು ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ, ಮತ್ತೊಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಸಾಗುತ್ತ ಸಾಲೆಯೊಳಗಿನ ತಮ್ಮ ಎಲ್ಲ ಅಭ್ಯಾಸಕ್ರಮವನ್ನು ಮುಗಿಸಿ ಚರಿತಾರ್ಥದ ಉದ್ಯೋಗವನ್ನು ಕೈಕೊಳ್ಳುವರು. ಆದರೆ ಅವರು ಸಾಲೆಯಲ್ಲಿ ಗಳಿಸಿದ ವಿದ್ಯೆಯಿಂದ ಅವರಿಗೆ ವ್ಯವಹಾರದಲ್ಲಿ ಎಳ್ಳಷ್ಟು ಸಹ ಉಪಯೋಗವಾಗುವದಿಲ್ಲ. ನಿಜವಾಗಿ ಸಾಲೆಯಲ್ಲಿ ಕಲಿಸುವ ಇತಿಹಾಸ, ಭೂಗೋಲ, ಭೂಮಿತಿ, ವ್ಯಾಕರಣ, ವ್ಯುತ್ಪತ್ತಿ ಈ ಮೊದಲಾದ ವಿಷಯಗಳಿಂದ ವಿದ್ಯಾರ್ಥಿಗಳಿಗೆ ವ್ಯವಹಾರದಲ್ಲಿ ಅಷ್ಟೊಂದು ಉಪಯೋಗವಾಗುತ್ತದೆಂತಲ್ಲ. ಯಾಕಂದರೆ ಈ ವಿಷಯಗಳನ್ನು ಅಭ್ಯಾಸಕ್ರಮದಲ್ಲಿ ಸೇರಿಸುವವರ ಉದ್ದೇಶವೇ ಹಾಗಿರುವದಿಲ್ಲ. ಈ ವಿಷಯಗಳು, ಹುಡುಗರ ನಿರೀಕ್ಷಣಶಕ್ತಿಯು ಬೆಳೆಯಬೇಕೆಂತಲೂ, ಯಾವದೊಂದು ಸಂಗತಿಯ ಬಗ್ಗೆ ಅವರಿಗೆ ನಿರ್ದೋಷವಾದ ಅನುಮಾನವನ್ನು ಗೊತ್ತುಪಡಿಸುವದಕ್ಕೆ ಬರಬೇಕೆಂತಲೂ, ಅವರು ಅನೇಕ ಸಂಗತಿಗಳ ತುಲನೆಯಿಂದ ಒಂದು ವ್ಯಾಪಕವಾದ ನಿಯಮವನ್ನು ಕಟ್ಟಲು ಸಮರ್ಥರಾಗಬೇಕೆಂತಲೂ ಸಾಲೆಯಲ್ಲಿ ಕಲಿಸಲ್ಪಡುತ್ತವೆ. ಆ ವಿಷಯಗಳಿಂದ ವ್ಯವಹಾರದಲ್ಲಿ ಪ್ರತ್ಯಕ್ಷ ಉಪಯೋಗವು ವಿಶೇಷವಿಲ್ಲದಿದ್ದರೂ, ಅವುಗಳನ್ನು ಸರಿಯಾದ ಪದ್ಧತಿಯಿಂದ ಕಲಿಸಿದರಿಂದ ಹುಡುಗರಲ್ಲಿ ಹುಟ್ಟುವ ಒಂದು ಪ್ರಕಾರದ ಯೋಗ್ಯತೆಯ ಉಪಯೋಗವು ಮಾತ್ರ ಅವರಿಗೆ ವ್ಯವಹಾರದಲ್ಲಿ ಕಾಲಕಾಲಕ್ಕೆ ಆಗುವದು. ಹುಡುಗರು ವಿಷಯಗಳನ್ನು ಗಿಳಿಯಂತೆ ಪಾಠಮಾಡಿ ಇಂಥ ಯೋಗ್ಯತೆಯನ್ನು ಸಂಪಾದಿಸಬಹುದೆ? ಹಾಗಿರದಿದ್ದರೆ ಶಿಕ್ಷಕರು ಈ ದೋಷಯುಕ್ತವಾದ ಶಿಕ್ಷಣಪದ್ಧತಿಯನ್ನು ಯಾಕೆ ಅಂಗೀಕರಿಸಬೇಕು? ಆದಕಾರಣ, ಶಿಕ್ಷ

ಇದಲ್ಲದೆ ಶಿಕ್ಷಕರು ಹುಡುಗರ ಶಾರೀರಿಕ ಮಾನಸಿಕ ನೈತಿಕಗಳೆಂಬ ಮೂರು ಬಗೆಯ ಶಕ್ತಿಗಳನ್ನು ವಿಕಾಸಗೊಳಿಸಬೇಕೆಂದು ಹಿಂದೆ ಹೇಳಿದ್ದೇವೆ. ಆದರೆ ಎಷ್ಟೋ ಸಾಲೆಗಳಲ್ಲಿ ಮೊದಲನೇ ಮೂರನೇ ಸಂಗತಿಗಳನ್ನು ದುರ್ಲಕ್ಷ ಮಾಡಿ, ಎರಡನೇ ಸಂಗತಿಯ ಬಗ್ಗೆಯೇ, ಅದರಲ್ಲಿಯೂ ವಿಶೇಷವಾಗಿ ಸ್ಮರಣಶಕ್ತಿಯೆಂಬದೊಂದೇ ಭಾಗದ ಕಡೆಗೆ ಬಹಳ ಲಕ್ಷ ಕೊಡುವರು. ಇಂಥ ಏಕದೇಶೀಯವಾದ ಶಿಕ್ಷಣದಿಂದ ಏನೂ ಪ್ರಯೋಜನವಾಗುವದಿಲ್ಲ. ತಮ್ಮ ಕರ್ತವ್ಯವನ್ನು ಪ್ರಾಮಾಣಿಕತನದಿಂದಲೂ ನಿಷ್ಠೆಯಿಂದಲೂ ಮಾಡಬೇಕೆಂಬ ಮನಸ್ಸುಳ್ಳ ಶಿಕ್ಷಕರು ತಮ್ಮ ಕೈ ಕೆಳಗೆ ಬಂದ ವಿದ್ಯಾರ್ಥಿಗಳು ಶರೀರದಿಂದ ಸುದೃಢರಾಗುವಂತೆಯೂ, ಬುದ್ಧಿಯಿಂದ ಚುರುಕರಾಗುವಂತೆಯೂ, ಒಳ್ಳೇ ನಡತೆಯಿಂದ ಸಂಪನ್ನರಾಗುವಂತೆಯೂ ಯತ್ನಮಾಡಲಿಕ್ಕೆ ಬೇಕು. ಈ ಮೇರೆಗೆ ಶಿಕ್ಷಕವರ್ಗಕ್ಕೆ ತಮ್ಮ ಕರ್ತವ್ಯಜ್ಞಾನವಾಗಿ ಅವರಲ್ಲಿ ಕರ್ತವ್ಯ ಜಾಗ್ರತಿಯು ಉತ್ಪನ್ನವಾಗುತ್ತ ಹೋದಂತೆ ಅವರ ಸಾಲೆಯಿಂದ ಗಟ್ಟಿಗರೂ, ನಿರೋಗಿಗಳೂ, ಕರ್ತವ್ಯತತ್ಪರರೂ, ಸದ್ಗುಣಿಗಳೂ, ಸಹೃದಯರೂ, ಸುಶೀಲರೂ ಆದ ವಿದ್ಯಾರ್ಥಿಗಳು ಹೊರಬೀಳಹತ್ತುವರೆಂಬದಕ್ಕೆ ಸಂದೇಹವಿಲ್ಲ.

ಇಲ್ಲಿಯವರೆಗೆ ನಿಜವಾದ ಶಿಕ್ಷಣಪದ್ಧತಿಯ ಸ್ವರೂಪವು ಹ್ಯಾಗಿರಬೇಕೆಂಬ ಬಗ್ಗೆ ಹೇಳಿದಂತಾಯಿತು. ಇನ್ನೊಂದು ಸಂಗತಿಯನ್ನು ಕುರಿತು ಸ್ವಲ್ಪ ಮಾತು ಹೇಳಿ ಸದ್ಯಕ್ಕೆ ಈ ವಿಷಯವನ್ನು ಮುಗಿಸುವೆವು.

ಎಷ್ಟೋ ಶಿಕ್ಷಕರು ತಮ್ಮ ವರ್ಗದೊಳಗಿನ ಹೆಚ್ಚು ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ತಮ್ಮ ಕೆಲಸವು ಚನ್ನಾಗಿ ಆಯಿತೆಂದು ತಿಳಿಯುತ್ತಾರೆ. ಒಂದು ರೀತಿಯಿಂದ ನೋಡಿದರೆ ಈ ತಿಳುವಳಿಕೆಯಲ್ಲಿ ಬಹಳ ತಪ್ಪಿಲ್ಲ. ಕೆಲಮಟ್ಟಿಗೆ, ವಾರ್ಷಿಕ ಪರೀಕ್ಷೆಯು ಶಿಕ್ಷಕನ ಕೆಲಸದ ಒರೆಗಲ್ಲೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಅವನು ತನ್ನ ಕೆಲಸವನ್ನು ಈ ಒರೆಗಲ್ಲಿಗೆ ತಿಕ್ಕಿ ಅದರಲ್ಲಿ ನ್ಯೂನತೆಗಳು ಕಡಿಮೆಯುಂಟೆಂಬದನ್ನು ಎರಡನೆಯವರ ಅನುಭವಕ್ಕೆ ತಂದುಕೊಡುವದು ಯೋಗ್ಯವಾದದ್ದು. ಆದರೆ ಪರೀಕ್ಷೆಗೋಸ್ಕರ ಹುಡುಗರನ್ನು ಸಿದ್ಧಪಡಿಸುವದರಲ್ಲಿ ತಪ್ಪಾಗುತ್ತದೆ. ಹುಡುಗರಿಗೆ ಅವರ ಇಯತ್ತೆಗೆ ಗೊತ್ತುಪಡಿಸಿದ ವಿಷಯಗಳನ್ನು ಸರಿಯಾಗಿ ತಿಳಿಸಿಕೊಟ್ಟು, ಅವರ ಮಾನಸಿಕ

ಶಕ್ತಿಗಳನ್ನು ವಿಕಾಸಪಡಿಸಿದರೆ ಅವರು ಪರೀಕ್ಷೆಯ ಕಾಲಕ್ಕೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟೇಕೊಡುವರು. ಆದರೆ ವಸ್ತುಸ್ಥಿತಿಯು ಹಾಗಿರುವದಿಲ್ಲ. ಈ ಕಷ್ಟಸಾಧ್ಯವಾದ ಮಾರ್ಗವನ್ನು ಬಿಟ್ಟು ಕೊಟ್ಟು ಪರೀಕ್ಷೆಯ ದಿವಸಗಳು ಸಮೀಪಿಸಿದಂತೆ ಪ್ರತಿಯೊಂದು ವಿಷಯದ ಮುಖ್ಯ ಮುಖ್ಯ ಸಂಗತಿಗಳನ್ನಷ್ಟು ಹುಡುಗರಿಂದ ಪಾಠ ಮಾಡಿಸಿ ಬಿಡುವರು. ಅದರಿಂದ ಪರೀಕ್ಷೆಯ ಕಾಲಕ್ಕೆ ಶಿಕ್ಷಕನ ಕೆಲಸವು ಮಾತ್ರ ಚನ್ನಾಗಿರುವದೆಂದು ಕಂಡುಬರುವದು; ಹುಡುಗರು ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ, ಮತ್ತೊಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಸಾಗುತ್ತ ಸಾಲೆಯೊಳಗಿನ ತಮ್ಮ ಎಲ್ಲ ಅಭ್ಯಾಸಕ್ರಮವನ್ನು ಮುಗಿಸಿ ಚರಿತಾರ್ಥದ ಉದ್ಯೋಗವನ್ನು ಕೈಕೊಳ್ಳುವರು. ಆದರೆ ಅವರು ಸಾಲೆಯಲ್ಲಿ ಗಳಿಸಿದ ವಿದ್ಯೆಯಿಂದ ಅವರಿಗೆ ವ್ಯವಹಾರದಲ್ಲಿ ಎಳ್ಳಷ್ಟು ಸಹ ಉಪಯೋಗವಾಗುವದಿಲ್ಲ. ನಿಜವಾಗಿ ಸಾಲೆಯಲ್ಲಿ ಕಲಿಸುವ ಇತಿಹಾಸ, ಭೂಗೋಲ, ಭೂಮಿತಿ, ವ್ಯಾಕರಣ, ವ್ಯುತ್ಪತ್ತಿ ಈ ಮೊದಲಾದ ವಿಷಯಗಳಿಂದ ವಿದ್ಯಾರ್ಥಿಗಳಿಗೆ ವ್ಯವಹಾರದಲ್ಲಿ ಅಷ್ಟೊಂದು ಉಪಯೋಗವಾಗುತ್ತದೆಂತಲ್ಲ. ಯಾಕಂದರೆ ಈ ವಿಷಯಗಳನ್ನು ಅಭ್ಯಾಸಕ್ರಮದಲ್ಲಿ ಸೇರಿಸುವವರ ಉದ್ದೇಶವೇ ಹಾಗಿರುವದಿಲ್ಲ. ಈ ವಿಷಯಗಳು, ಹುಡುಗರ ನಿರೀಕ್ಷಣಶಕ್ತಿಯು ಬೆಳೆಯಬೇಕೆಂತಲೂ, ಯಾವದೊಂದು ಸಂಗತಿಯ ಬಗ್ಗೆ ಅವರಿಗೆ ನಿರ್ದೋಷವಾದ ಅನುಮಾನವನ್ನು ಗೊತ್ತುಪಡಿಸುವದಕ್ಕೆ ಬರಬೇಕೆಂತಲೂ, ಅವರು ಅನೇಕ ಸಂಗತಿಗಳ ತುಲನೆಯಿಂದ ಒಂದು ವ್ಯಾಪಕವಾದ ನಿಯಮವನ್ನು ಕಟ್ಟಲು ಸಮರ್ಥರಾಗಬೇಕೆಂತಲೂ ಸಾಲೆಯಲ್ಲಿ ಕಲಿಸಲ್ಪಡುತ್ತವೆ. ಆ ವಿಷಯಗಳಿಂದ ವ್ಯವಹಾರದಲ್ಲಿ ಪ್ರತ್ಯಕ್ಷ ಉಪಯೋಗವು ವಿಶೇಷವಿಲ್ಲದಿದ್ದರೂ, ಅವುಗಳನ್ನು ಸರಿಯಾದ ಪದ್ಧತಿಯಿಂದ ಕಲಿಸಿದರಿಂದ ಹುಡುಗರಲ್ಲಿ ಹುಟ್ಟುವ ಒಂದು ಪ್ರಕಾರದ ಯೋಗ್ಯತೆಯ ಉಪಯೋಗವು ಮಾತ್ರ ಅವರಿಗೆ ವ್ಯವಹಾರದಲ್ಲಿ ಕಾಲಕಾಲಕ್ಕೆ ಆಗುವದು. ಹುಡುಗರು ವಿಷಯಗಳನ್ನು ಗಿಳಿಯಂತೆ ಪಾಠಮಾಡಿ ಇಂಥ ಯೋಗ್ಯತೆಯನ್ನು ಸಂಪಾದಿಸಬಹುದೆ? ಹಾಗಿರದಿದ್ದರೆ ಶಿಕ್ಷಕರು ಈ ದೋಷಯುಕ್ತವಾದ ಶಿಕ್ಷಣಪದ್ಧತಿಯನ್ನು ಯಾಕೆ ಅಂಗೀಕರಿಸಬೇಕು? ಆದಕಾರಣ, ಶಿಕ್ಷ

ಕರು ಎಲ್ಲಕ್ಕೂ ಮೊದಲು ಪರೀಕ್ಷೆಯಲ್ಲಿ ತೇರ್ಗಡೆ ಹೊಂದತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಮಹತ್ವಾಕಾಂಕ್ಷೆಯನ್ನು ಬಿಟ್ಟುಕೊಡತಕ್ಕದ್ದು. ವಿದ್ಯಾರ್ಥಿಗಳನ್ನು ಪರೀಕ್ಷಾಸತ್ರದೊಳಗಿಂದ ಪಾರುಮಾಡುವದಕ್ಕಿಂತ ಅವರ ಮುಂದಿನ ಆಯುಷ್ಯಕ್ರಮವು ಸಫಲವಾಗುವಂತೆ ಅವರನ್ನು ಸಿದ್ಧಗೊಳಿಸುವದು ಶಿಕ್ಷಕನಿಗೆ ಹೆಚ್ಚು ಯೋಗ್ಯವು. ಆದಕಾರಣ ಪ್ರತಿಯೊಬ್ಬ ಶಿಕ್ಷಕನು ಶಿಕ್ಷಣದ ಉದ್ದೇಶವನ್ನು ತನ್ನ ಮೇಲಿನ ಜವಾಬುದಾರಿಯನ್ನೂ ಚನ್ನಾಗಿ ಅರಿತುಕೊಂಡು ತನ್ನ ಕರ್ತವ್ಯವನ್ನು ಮಾಡುವದಕ್ಕೆ ಯತ್ನಮಾಡಬೇಕು.

---

೨. ಮನುಷ್ಯನು ಜ್ಞಾನಸಂಪನ್ನನಾಗಿ ತನ್ನ ವ್ಯವಹಾರವನ್ನು ದಕ್ಷತೆಯಿಂದ ಸಾಗಿಸಿಕೊಂಡು ನಾಲ್ಕು ಜನರಲ್ಲಿ ಮಾನ್ಯತೆಯನ್ನು ಹೊಂದಬೇಕಾದರೆ, ಅವನಲ್ಲಿ ಇತರ ಗುಣಗಳಂತೆ ಬಹುಶ್ರುತತ್ವವೆಂಬ ಗುಣವು ಅತ್ಯವಶ್ಯವಾಗಿ ಇರತಕ್ಕದ್ದು. ಬಹುಶ್ರುತತ್ವವುಂಟಾಗಬೇಕಾದರೆ ಅವನಿಗೆ ಚಿಕ್ಕಂದಿನಿಂದಲೇ ವಾಚನಾಭಿರುಚಿಯುಂಟಾಗಿರಲಿಕ್ಕೆ ಬೇಕು. ಅಂದ ಮೇಲೆ, ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯನ್ನುಂಟು ಮಾಡುವದು ಶಿಕ್ಷಕರ ಮುಖ್ಯಕರ್ತವ್ಯಗಳಲ್ಲಿ ಒಂದಾಗಿದೆಯೆಂದು ಪುನಃ ಹೇಳಬೇಕಾಗಿಲ್ಲ.

ಶಾಲೆಗಳಲ್ಲಿ ವಾಚನಾಲಯಗಳನ್ನು ಸ್ಥಾಪಿಸುವ ಬಗ್ಗೆ.

ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿಯನ್ನುಂಟು ಮಾಡುವದಕ್ಕಾಗಿ ಶಿಕ್ಷಕನು ತನ್ನ ಶಾಲೆಯಲ್ಲಿ ಅದಕ್ಕೆ ತಕ್ಕಂಥ ಒಂದು ಚಿಕ್ಕ ವಾಚನಾಲಯವನ್ನು ಸ್ಥಾಪಿಸಿ ಅದರಲ್ಲಿ ವಿದ್ಯಾ ಇಲಾಖೆಯವರಿಂದ ಇನಾಮಿಗೂ ವಾಚನಾಲಯಗಳಿಗೂ ಮಂಜೂರಾದ ಪುಸ್ತಕಗಳಲ್ಲಿ ಬೇರೆ ಬೇರೆ ವರ್ಗದ ವಿದ್ಯಾರ್ಥಿಗಳ ಯೋಗ್ಯತೆಗೆ ತಕ್ಕಂಥ ಬೇರೆ ಬೇರೆ ವಿಷಯಗಳ ಮೇಲಿನ ಚಿಕ್ಕ ಚಿಕ್ಕ ಪುಸ್ತಕಗಳನ್ನು ಅರಿಸಿ ಸಂಗ್ರಹಿಸಿಡಬೇಕು. ಈ ಪುಸ್ತಕಗಳು ಬೇರೆ ಬೇರೆ ಶಾಸ್ತ್ರವಿಚಾರಗಳನ್ನೂ ವ್ಯವಹಾರನೀತಿಗಳನ್ನೂ ಬೋಧಿಸುವಂಥವಿರಬೇಕಲ್ಲದೆ, ಅವುಗಳಿಂದ ಚಿಕ್ಕಮಕ್ಕಳ ಮನೋರಂಜನೆಯೂ ಆಗುವಂತೆ ಇರಬೇಕು; ಯಾಕಂದರೆ ಮನೋರಂಜಕ ವಿಷಯಗಳ ಕಡೆಗೆ ವಿದ್ಯಾರ್ಥಿಗಳ ಲಕ್ಷವು ವಿಶೇಷವಾಗಿ ಹೋಗುವದು ಸ್ವಾ

ಭಾವಿಕವು. ನೀತಿಪ್ರಚುರವಾದ ಕಾದಂಬರಿಗಳೂ ಅನುಕರಣೀಯವಾದ ಚಾರಿತ್ರ್ಯ ವಿಶೇಷಗಳಿಂದ ಕೂಡಿದ ಚರಿತ್ರ ಗ್ರಂಥಗಳೂ ವಿದ್ಯಾರ್ಥಿಗಳ ಮನೋರಂಜನದ ಕಾರ್ಯವನ್ನು ಚನ್ನಾಗಿ ಮಾಡುವದಲ್ಲದೆ, ಅವರಿಗೆ ನೀತಿಯನ್ನೂ ಉದಾತ್ತವಾದ ಚಾರಿತ್ರ್ಯವನ್ನೂ ಬೋಧಿಸುವವು.

ಶಾಲೆಗಳಲ್ಲಿ ಸ್ಥಾಪಿತವಾದ ವಾಚನಾಲಯಗಳಿಗೆ ಸರಕಾರದಿಂದ ಯೋಗ್ಯ ಸಹಾಯವು ದೊರೆಯುವಂತೆ ಇದ್ದರೂ ಅವು ಮೊಟ್ಟ ಮೊದಲು ಲೋಕಾಶ್ರಯದಿಂದಲೇ ಆರಂಭಿಸಲ್ಪಡಬೇಕಾಗುವದು. ಈ ತರದ ಲೋಕಾಶ್ರಯವನ್ನು ಸಂಪಾದಿಸುವ ಕೆಲಸವನ್ನು ಶಾಲೆಯ ಮಾಸ್ತರರು ಮಾಡತಕ್ಕದ್ದು. ಪ್ರತಿಯೊಂದು ಊರಲ್ಲಿ ಶಿಕ್ಷಣದ ಮಹತ್ವವನ್ನು ಅರಿತಂಥ ಹಾಗು ವಾಚನಾಭಿರುಚಿಯುಳ್ಳಂಥ ಸುಶಿಕ್ಷಿತ ಜನರು ಹೆಕ್ಕು ಚಕಡಿಮೆ ಮಾನದಿಂದ ಇದ್ದೇ ಇರುವರು. ಮಾಸ್ತರರು ಅಂಥವರಿಗೆ ತಮ್ಮ ಉದ್ದೇಶವನ್ನು ತಿಳಿಸಿ ಅವರ ಸಹಾಯವನ್ನು ಪಡೆದುಕೊಂಡರೆ ಪುಸ್ತಕಾಲಯದ ಸ್ಥಾಪನೆಗೆ ಬೇಕಾಗಿರುವ ಹಣದ ಸಂಬಂಧದ ಅಡ್ಡಿಯು ಸುಲಭವಾಗಿ ದೂರಾಗುವದು. ಯಾಕಂದರೆ, ಈ ತರದ ಸುಶಿಕ್ಷಿತ ಜನರೇ ಊರೊಳಗಿನ ಜನರಲ್ಲಿ ಮುಖಂಡರೆನಿಸಿಕೊಳ್ಳುತ್ತಿರುವರು. ಅವರ ಹೇಳಿಕೆಯನ್ನು ಊರ ಜನರು ಬಹುಶಃ ಅವಮಾನ್ಯ ಮಾಡುತ್ತಿರುವದಿಲ್ಲ. ಅದರಿಂದ ಊರ ಜನರಿಂದ ತಕ್ಕಷ್ಟು ಹಣದ ಸಹಾಯವು ದೊರೆತೇ ದೊರೆಯುವದು. ಇದಲ್ಲದೆ ಈ ಕೆಲಸಕ್ಕೆ ಒಮ್ಮೇಲೆ ಅಷ್ಟು ದೊಡ್ಡ ಖರ್ಚು ತಾಗುತ್ತದೆಂಬಂತೆಯೂ ಇಲ್ಲ. ಪ್ರತಿವರ್ಷ ಕೆಲವು ಹೊಸ ಪುಸ್ತಕಗಳನ್ನು ಕೂಡಿಸುತ್ತ ಹೋದರಾಯಿತು. ಶಾಲೆಯನ್ನು ನೋಡಲಿಕ್ಕೆ ಬಂದ ಸುಶಿಕ್ಷಿತರೂ ಶ್ರೀಮಂತರೂ ಆದ ಸಭ್ಯ ಗೃಹಸ್ಥರಿಗೆ ಶಾಲೆಯೊಳಗಿನ ವಾಚನಾಲಯದ ಸ್ಥಿತಿಗತಿಯನ್ನೆಲ್ಲ ತಿಳಿಸಿ ಅವರಿಂದ ಯೋಗ್ಯ ಸಹಾಯವನ್ನು ಅಪೇಕ್ಷಿಸಿದರೆ ಅವರಾದರೂ ತಕ್ಕಷ್ಟು ಸಹಾಯ ಮಾತೇ ಮಾಡುವರು. ಹಾಗು ಪರಸ್ಥಳದ ಇಂಥ ಸದ್ಗೃಹಸ್ಥರು ಏನಾದರೊಂದು ಕೆಲಸದನಿಮಿತ್ತವಾಗಿ ಆ ಊರಿಗೆ ಬಂದಿದ್ದರೆ ಅವರನ್ನು ಕರೆದು ಕೊಂಡು ಬಂದು ಶಾಲೆಯ ಹಾಗು ವಾಚನಾಲಯದ ಸ್ಥಿತಿಗತಿಗಳನ್ನೂ ತಮಗಿರುವ ಕೊರತೆಯನ್ನೂ ಅವರ ಮುಂದಿರಿಸಿದರೆ ಅವರು ಇಂಥ ಸಂಸ್ಥೆಗೆ ಸಂತೋಷದಿಂದ ತಕ್ಕಷ್ಟು ಸಹಾಯ ಮಾಡುವರು. ಸಾರಾಂಶವೇನಂದರೆ, ಶಿಕ್ಷಕನು

ಶಾಲೆಯಲ್ಲಿ ವಾಚನಾಲಯವನ್ನು ಸ್ಥಾಪಿಸುವ ಕಾರ್ಯದಲ್ಲಿ ಮನಸ್ಸುಳ್ಳ ವನೂ ಉದ್ಯೋಗಶೀಲನೂ ಆಗಿದ್ದರೆ ಅದಕ್ಕೆ ಹತ್ತುವಂಥ ಅಲ್ಪ ಸ್ವಲ್ಪ ಹಣವು ನಿರಾಯಾಸವಾಗಿ ದೊರೆಯುವದೆಂಬದರಲ್ಲಿ ಸಂದೇಹವಿಲ್ಲ.

ಈ ರೀತಿಯಾಗಿ ವಾಚನಾಲಯವನ್ನು ಸ್ಥಾಪಿಸಿದ ನಂತರ ಅದರ ಉಪಯೋಗವು ಶಾಲೆಯೊಳಗಿನ ವಿದ್ಯಾರ್ಥಿಗಳಿಗೆ ಸರಿಯಾಗಿ ಆಗುವಂತೆ ಮಾಡುವದು ಎರಡನೆಯ ಕೆಲಸವು. ಈ ಕೆಲಸವನ್ನು ಹೆಡ್ ಮಾಸ್ತರರು ಸ್ವತಃ ಕೈಕೊಳ್ಳಬೇಕು, ಅಥವಾ ಕರ್ತವ್ಯದಕ್ಷನೂ ಉತ್ಸಾಹಿಯೂ ಆದ ಉಪಶಿಕ್ಷಕನು ಸ್ವಸಂತೋಷದಿಂದ ಸ್ವೀಕರಿಸುವೆಂತಿದ್ದರೆ ಅವನ ಕಡೆಗೆ ಒಪ್ಪಿಸಬಹುದು. ಹುಡುಗರಿಗೆ ಪುಸ್ತಕಗಳನ್ನು ಮನೆಗೆ ಒಯ್ಯು ಲಿಕ್ಕೆ ಕೊಡುವ ವ್ಯವಸ್ಥೆಯನ್ನಿಟ್ಟರೆ ಮಾಸ್ತರನು ಹೆಚ್ಚಿಗೆ ಕೆಲಸ ಮಾಡ ಬೇಕಾಗುವದು. ವಾರದೊಳಗೆ ಮೂರು ದಿವಸ, ಅಥವಾ ಅನುಕೂಲತೆಯ ಪ್ರಕಾರ ಹೆಚ್ಚು ದಿವಸ, ಪ್ರತಿ ದಿವಸ ಒಂದೊಂದು ತಾಸು ವಾಚನಾಲ ಯದ ವ್ಯವಸ್ಥಾಪಕನಾದ ಮಾಸ್ತರನು ಹುಡುಗರಿಗೆ ಪುಸ್ತಕಗಳನ್ನು ಕೊ ಟ್ಟು ತನ್ನೆದುರಿಗೆ ಓದಲಿಕ್ಕೆ ಹಚ್ಚಬೇಕು. ಈ ಕಾಲವನ್ನು ಆಯಾ ಶಾಲೆಗಳ ಸ್ಥಿತಿಗತಿಗಳನ್ನನುಸರಿಸಿ ಗೊತ್ತುಮಾಡಬಹುದು. ಎರಡೂ ಹೊತ್ತು ಅಭ್ಯಾ ಸ ನಡೆಯುತ್ತಿರುವ ಶಾಲೆಗಳಲ್ಲಿ ಮಧ್ಯಾಹ್ನದ ಸಾಲೆಯು ಆರಂಭವಾಗುವ ಪೂರ್ವದಲ್ಲಿ ಒಂದು ತಾಸು, ೧೧ ಘಂಟೆಯಿಂದ ೫ ಘಂಟೆಯವರೆಗೆ ಕ್ಲಾ ಸುಗಳು ನಡೆಯುತ್ತಿದ್ದ ಶಾಲೆಗಳಲ್ಲಿ ನಡುವಿನ ಸೂಟಿಯ ಒಂದು ತಾಸು ಈ ವಾಚನಕಾರ್ಯವನ್ನು ನಡೆಯಿಸಿದರೆ ಒಳ್ಳೆಯದಾಗಿ ತೋರುತ್ತದೆ.

ಈ ವಾಚನಕಾರ್ಯವನ್ನು ವಿದ್ಯಾರ್ಥಿಗಳು ಸಾಧ್ಯವಿದ್ದಮಟ್ಟಿಗೂ ಮನಸ್ಸಿನಲ್ಲಿಯೇ ಸಾಗಿಸತಕ್ಕದ್ದು, ಇಲ್ಲದಿದ್ದರೆ ಗದ್ದಲವಾಗಿ ಓದುವ ವರು ಏಕಾಗ್ರಚಿತ್ತದಿಂದ ಓದಲಿಕ್ಕೆ ಅಡ್ಡಿಯುಂಟಾಗುವದು. ಪ್ರತಿ ಯೊಬ್ಬ ಹುಡುಗನಿಗೆ ಒಂದೊಂದು ಪುಸ್ತಕವನ್ನು ಕೊಟ್ಟು ಓದಲಿಕ್ಕೆ ಹಚ್ಚಬೇಕು; ಹಾಗು ವೇಳೆಯು ಮುಗಿಯಲಿಕ್ಕೆ ಇನ್ನೂ ತುಸು ಆವ ಕಾಶವಿರುವಾಗಲೇ ಓದುವದನ್ನು ನಿಲ್ಲಿಸಿ ಆ ವರೆಗೆ ಓದಿದ್ದನ್ನೆಲ್ಲ ವಿಭಾ ಗಾನುಕ್ರಮದಂತೆ ಸಂಕ್ಷೇಪವಾಗಿ ಬರೆಯಲಿಕ್ಕೆ ಹಚ್ಚಬೇಕು. ಆ ಮೇಲೆ ಎಲ್ಲಿಯತನಕ ಓದುವದಾಗಿದೆಯೆಂಬದನ್ನು ಗುರ್ತು ಮಾಡಿಸಿ,

(ಈ ವಿಷಯವು ಇದೇ ಸಂಚಿಕೆಯ ೯ನೆಯ ಪುಟದಲ್ಲಿ ಮುಂದೆಸಾಗಿದೆ.)

(ಇದೇ ಸಂಚಿಕೆಯ ೨೬ನೆಯ ಪುಟದಿಂದ ಮುಂದೆ ನಾಗಿದ್ದು.)

ಪುಸ್ತಕಗಳನ್ನು ತಿರುಗಿ ತೆಗೆದುಕೊಂಡು ಶಾಲೆಯ ಕೆಲಸವನ್ನು ಆರಂಭಿಸಬೇಕು. ಇದರಂತೆ ಪುಸ್ತಕವನ್ನು ಪೂರಾ ಓದುವತನಕ ಮಾಡುತ್ತ ಹೋಗಬೇಕು. ಒಂದು ಪುಸ್ತಕವನ್ನು ಓದುವದು ಮುಗಿದ ಬಳಿಕ ಹುಡುಗರು ಹಿಂದೆ ಹೇಳಿದ ಮೇರೆಗೆ ಬರೆದುಕೊಂಡ ಟಿಪ್ಪಣಿಯನ್ನು ಮಾಸ್ತರನು ಓದಿ ನೋಡಿ, ಅವರಿಗೆ ತಿಳಿಸಿಕೊಡತಕ್ಕ ಹೆಚ್ಚಿನ ಸಂಗತಿಗಳನ್ನು ತಿಳಿಸಬೇಕು; ಹಾಗು ಅವರಿಗೆ ಬಂದ ಸಂಶಯಗಳನ್ನೆಲ್ಲ ದೂರ ಮಾಡಬೇಕು. ಹೀಗೆ ಮಾಡುವದರಿಂದ ಹುಡುಗರಿಗೆ ಏಕಾಗ್ರಚಿತ್ತದಿಂದ ಪುಸ್ತಕಗಳನ್ನು ಓದುವ ರೂಢಿಯುಂಟಾಗುವದಲ್ಲದೆ ಅವರ ನಿಬಂಧಲೇಖನಕ್ಕೆ ಒಳ್ಳೇ ಸಹಾಯವಾಗುವದು; ಹಾಗು ಅವರಲ್ಲಿ ವಾಚನಾಭಿರುಚಿಯುಂಟಾಗಿ ಅವರು ಪ್ರತಿಯೊಂದು ಮಾತಿನ ಬಗ್ಗೆ ಸೂಕ್ಷ್ಮವಿಚಾರ ಮಾಡಿ ತಪ್ಪುಗೆ ಗೊತ್ತಾಗುವ ಸಂಗತಿಗಳನ್ನು ಸ್ವಲ್ಪದರಲ್ಲಿ ಬರೆಯಲಿಕ್ಕೆ ಸಮರ್ಥರಾಗುವರು,

ಒಟ್ಟಿನಮೇಲೆ ಈ ತರಹ ವ್ಯವಸ್ಥೆಯಿಂದ ವಿದ್ಯಾರ್ಥಿವರ್ಗಕ್ಕೆ ಬಹು ಮಟ್ಟಿಗೆ ಲಾಭವಾಗುವದೆಂಬದರಲ್ಲಿ ಸಂದೇಹವಿಲ್ಲ. ಆದ್ದರಿಂದ ಯಾವತ್ತು ಶಿಕ್ಷಕರು ಈ ಸೂಚನೆಯನ್ನು ಚನ್ನಾಗಿ ವಿಚಾರ ಮಾಡಿ ಆಚರಣೆಯಲ್ಲಿ ತರುವರೆಂದು ಆಶಿಸುತ್ತೇವೆ.

ಪ್ಲೇಗಬೇನೆಯ ಕಾರಣವೂ ಅದು ಬಾರದಂತೆ ಮಾಡತಕ್ಕ ಉಪಾಯಗಳೂ.

ಧಾರವಾಡದಲ್ಲಿ ಇಳಗಡೆಯಲ್ಲಿ ಸ್ಥಾಪಿಸಲ್ಪಟ್ಟ "ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್" ಎಂಬ ಆರೋಗ್ಯರಕ್ಷಕಸಂಘದವರಿಗೋಸ್ಕರ ಧಾರವಾಡದ ಸಿವ್ಹಿಲ್ ಸರ್ಜನರಾದ ಮೇಜರ್ ಆರ್. ಡಬ್ಲ್ಯು. ಅಂಥೋನಿ ಸಾಹೇಬರವರು "ಪ್ಲೇಗಬೇನೆಯ ನಿವಾರಣೆಯ ಸಂಬಂಧವಾಗಿ ಒಂದು ಚಿಕ್ಕ ಲೇಖನವನ್ನು ಬರೆದಿರುವರು. ಈ ಲೇಖನವು ಸದರೀ ಆರೋಗ್ಯರಕ್ಷಕಸಂಘದವರಿಂದ ಜನರ ತಿಳುವಳಿಕೆಗೋಸ್ಕರ ೧೯೧೭–೧೪ ಇಸವಿಯ ಮೊದಲನೆಯ ಪತ್ರಕವೆಂದು ಪ್ರಸಿದ್ಧಿಸಲ್ಪಟ್ಟಿರುವದು. ಅದನ್ನು ಕಾಲಾ ಪತ್ರಕದ ವಾಚಕರಿಗೋಸ್ಕರ ಇದರಡಿಯಲ್ಲಿ ಕೊಡುತ್ತೇವೆ:—

"ಇಂದೇ ಧಾರವಾಡ ಜಿಲ್ಲೆಯಲ್ಲಿ ಹೋದವರುಷ ೫೫,೦೦೦ ಜನರನ್ನು ಕೊಂದ "ಪ್ಲೇಗ್" ಎಂಬ ಭಯಂಕರ ರೋಗವು ಪ್ರತಿ ಒಬ್ಬನಿಗೆ ಗೊತ್ತಿರಲಿಕ್ಕೆ ಸಾಕು. ಮೊದಲು ಈ ಬೇನೆಯು ಉಂಟಾಗುವ ಕಾರಣವನ್ನೂ ಆ ಮೇಲೆ ಅದು ಹ್ಯಾಗೆ ಹಬ್ಬುತ್ತದೆಂಬದನ್ನೂ ವಿಚಾರ ಮಾಡೋಣ.

ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದಲೇ ಮಾತ್ರ ಕಾಣಿಸುವಂಥ ಅತಿ ಸೂಕ್ಷ್ಮವಾದ ಉಭ್ಭಜ್ಜ ಕೋಟಿಯೊಳಗಿನ ಒಂದು ಜಾತಿಯ ಜಂತುಗಳೇ ಈ ರೋಗಕ್ಕೆ ಮೂಲ ಕಾರಣವು. ಈ ಜಂತುಗಳು ಪ್ಲೇಗ ಬಂದ ಮನುಷ್ಯನ ರಕ್ತದಲ್ಲಿ ಬೆಳೆಯುತ್ತ ಹೋಗುತ್ತವೆ. ಇವು ಉಸುಬಿನ ತೀರ ಸಣ್ಣ ಕಣಕ್ಕಿಂತಲೂ ಸೂಕ್ಷ್ಮವಾದವುಗಳು ಇರುತ್ತವೆ. ಇವು ರಕ್ತದಲ್ಲಿ ಸೇರಿದ ಕೂಡಲೆ ಒಂದಕ್ಕೆ ಎರಡು, ಆ ಎರಡಕ್ಕೆ ನಾಲ್ಕು, ಈ ಪ್ರಕಾರ ಕೋಟ್ಯಾವಧಿ ಜಂತುಗಳಾಗುವವರೆಗೆ ಬಹು ತೀವ್ರವಾಗಿ ಬೆಳೆಯುತ್ತವೆ. ಈ ಜಂತುಗಳು ರೋಗಿಯ ರಕ್ತವನ್ನು ಮೇಯಿದು, ಅದರಲ್ಲಿ ಒಂದು ತರದ ವಿಷವನ್ನುಂಟುಮಾಡುತ್ತವೆ; ಮತ್ತು ಈ ವಿಷದಿಂದಲೇ ಜ್ವರ ಹುಟ್ಟಿ ರೋಗಿಯು ಸಾಯುತ್ತಾನೆ.

ಈ ಜಂತುಗಳು ರೋಗಿಯ ರಕ್ತದಲ್ಲಿ ಹ್ಯಾಗೆ ಪ್ರವೇಶಮಾಡುತ್ತವೆ ನೋಡಿರಿ! ಇಲಿಗಳ ಮೈಮೇಲೆ ಇರುವ ಚಿಕ್ಕಾಡುಗಳೇ ಇದಕ್ಕೆ ಕಾರಣವು. ಪ್ಲೇಗ ರೋಗವು ಇಲಿಗಳಿಗೆ ಬಹು ಬೇಗ ತಗಲುತ್ತದೆ; ಅವುಗಳ ಮೈತುಂಬ ಚಿಕ್ಕಾಡುಗಳು ಇರುತ್ತವೆ. ಇವು ಪ್ಲೇಗ ಬಂದ ಇಲಿಯ ರಕ್ತವನ್ನು ಕುಡಿಯುತ್ತವೆ. ಮತ್ತು ಅದು ಸತ್ತ ಕೂಡಲೆ ಅದನ್ನು ಬಿಟ್ಟು ಬೇರೆ ಇಲಿಗಳನ್ನು ಕಡಿಯಲು, ಅವೂ ಪ್ಲೇಗಬೇನೆಯಿಂದ ಸಾಯುತ್ತವೆ. ಈ ಪ್ರಕಾರ ಇಲಿಗಳು ಸತ್ತು ಹೋದವೆಂದರೆ ಚಿಕ್ಕಾಡುಗಳಿಗೆ ಕೂಳಿಲ್ಲದಂತೆ ಆಗಿ, ಅವು ಮನುಷ್ಯನಿಗೆ ಕಚ್ಚಿದಕೂಡಲೆ ಅವನಿಗೂ ಪ್ಲೇಗ ಬೇನೆಯು ಬರುತ್ತದೆ.

ಇದರಮೇಲಿಂದ ಕಂಡು ಬರುವದೇನಂದರೆ:—ಇಲಿಗಳು ಇಲ್ಲದೆ ಇದ್ದರೆ ಪ್ಲೇಗ ಬೇನೆಯು ಎಂದೂ ಬರುತ್ತಿದ್ದಿಲ್ಲ. ಆದರೆ ದುರ್ದೈವದಿಂದ ಇಲಿಗಳು ಅಸಂಖ್ಯವಾಗಿರುತ್ತವೆ. ಮತ್ತು ಅವು ಬಹು ಬೇಗ ವೃದ್ಧಿಮಾಡಿ ವಿಪರೀತ ಬೆಳೆಯುವದರಿಂದ ಊರೊಳಗಿನ ಯಾವತ್ತೂ ಇಲಿಗಳನ್ನು ನಾಶಪಡಿಸುವದು ಪೂರಾ ಅಸಾಧ್ಯವಾಗಿರುತ್ತದೆ. ಆದರೂ ಇಲಿಗಳನ್ನು ಅನೇಕ

ಕೊಗ್ಗದಿಂದ ಕಡಿಮೆ ಮಾಡಬಹುದು. ಇಲಿಗಳು ಬದುಕಿ ಹೆಚ್ಚಾಗ ಬೇಕಾದರೆ ಅವುಗಳಿಗೆ ತಿನ್ನಲಿಕ್ಕೆ ಸಾಕಷ್ಟು ಆಹಾರ ಬೇಕಷ್ಟೇ? ಅದ್ದ ರಿಂದ ಕಾಳುಕಡಿ ಮುಂತಾದ ತಿನ್ನುವ ಪದಾರ್ಥಗಳನ್ನು ಇಲಿಗಳು ಪ್ರವೇ ಶಿಸದಂಥ ಪಾತ್ರೆಗಳಲ್ಲಿ ಮುಚ್ಚಿಡಬೇಕು. ಎಂಜಲು ಅಥವಾ ತಂಗಳ ಪದಾ ರ್ಥಗಳನ್ನು ಮನೆಯ ಹತ್ತರ ಚೆಲ್ಲಕೂಡದು. ಕಸಕಡ್ಡಿಗಳನ್ನು ಪಿಣಿಗಳಲ್ಲಿ ಚೆಲ್ಲಬಾರದು. ಇಲಿಗಳನ್ನು ನಾಶ ಮಾಡುವದಕ್ಕೆ ಬೆಕ್ಕುಗಳನ್ನು ಸಾಕಬ ಹುದು; ಮತ್ತು ಬಲಿಗಳು ಈ ಕೆಲಸಕ್ಕೆ ಬಹಳ ಉಪಯೋಗಬೀಳುವವು.

ಈ ರೀತಿಯಾಗಿ ಪ್ಲೇಗ ಬೇನೆಯು ಬಾರದಂತೆ ಮಾಡಬಹುದು. ಅದು ಸಾಧ್ಯವಾಗದೆ ಹೋದಲ್ಲಿ ಅದರ ಪ್ರಖರತೆಯನ್ನಾದರೂ ಅದಷ್ಟು ಕಡಿಮೆ ಮಾಡಲಿಕ್ಕೆ ಬರಬಹುದು. ಈ ಎಲ್ಲ ಉಪಾಯಗಳನ್ನು ಮಾಡಿ ದಾಗ್ಯೂ ಪ್ಲೇಗಬೇನೆಯು ಊರೊಳಗೆ ಪ್ರಾರಂಭವಾದರೆ ಮಾಡುವದೇನು? ಊರು ಬಿಟ್ಟು ಹೋಗುವಿರೋ? ಊರು ಬಿಟ್ಟರೆ ನಿಮ್ಮ ಅರಿವೆಗಳಲ್ಲಿ ಇರುವ ಪ್ಲೇಗ ದೂಷಿತ ಚಿಕ್ಕಾಡುಗಳು ನಿಮ್ಮ ಕೂಡ ನೀವು ಹೋದ ಸ್ಥಳಕ್ಕೆ ಬಂದು, ಅಲ್ಲಿಯೂ ಪ್ಲೇಗವನ್ನುಂಟು ಮಾಡುತ್ತವೆ. ಇದಲ್ಲದೆ ಊರು ಬಿಡುವದರಿಂದ ಬಹಳ ಅನಾನುಕೂಲತೆಯಾಗುವದಲ್ಲದೆ ಹೆಚ್ಚಿನ ಖರ್ಚು ಬರುತ್ತದೆ. ಊರು ಬಿಟ್ಟು ಸವಿಾಪದ ಗುಡಿಸಲುಗಳಲ್ಲಿ ಹೋಗಿ ರುವದರಿಂದಲೂ ಅನೇಕ ತೊಂದರೆಗಳಾಗುತ್ತವೆ. ಊರೊಳಗೆ ಮನೆಯಲ್ಲಿ ಬಿಟ್ಟು ಬಂದ ಸಾಮಾನುಗಳನ್ನು ಯಾರು ಕಾಯುವರು? ಮೇಲಾಗಿ ಗುಡಿ ಸಲುಗಳು ಊರ ಸವಿಾಪದಲ್ಲಿರುವದರಿಂದ ಇಲಿಗಳು ಹೊಟ್ಟೆಗಾಗಿ ನಿಮ್ಮ ಬೆನ್ನು ಹತ್ತುತ್ತವೆ. ಮಳೆಗಾಲದಲ್ಲಿ ಗುಡಿಸಲುಗಳಲ್ಲಿ ಇರುವದಂತೂ ಬಹಳ ತೊಂದರೆಗೆ ಕಾರಣವಾಗುವದು.

ಹಾಗಾದರೆ ದೈವದಲ್ಲಿದ್ದದ್ದು ಆಗುವದೆಂದು ನಂಬಿ, ಪ್ಲೇಗು ಬರುವ ವರೆಗೆ ಅದರ ಪ್ರತೀಕಾರಕ್ಕೆ ಏನೂ ಉಪಾಯ ಮಾಡದೆ, ಬೇನೆ ಬಂದ ಬಳಿಕ ಔಷಧೋಪಚಾರಗಳಿಂದ ಜೀವ ಉಳಿಸಿಕೊಳ್ಳಬಹುದೋ? ಆದರೆ, ದುರ್ದೈವದಿಂದ ಈವರೆಗೂ ಪ್ಲೇಗದ ಮೇಲೆ ಔಷಧವು ಗೊತ್ತಾ ಗಿಲ್ಲ. ಒಂದಾವರ್ತಿ ಪ್ಲೇಗ ಬಂದ ಮೇಲೆ ಬಹುಶಃ ಸಾಯುವದೇ ಬಹಳವಾಗಿ ನಿಜವು.

"ಬೇನೆ ಬಂದ ಮೇಲೆ ನೆಟ್ಟಗಾಗಲಿಕ್ಕೆ ಪ್ರಯತ್ನ ಮಾಡುವದಕ್ಕಿಂತ ಅದು ಬಾರದಂಥ ಮೊದಲೇ ಉಪಾಯ ಮಾಡಿಕೊಳ್ಳುವದು ಒಳ್ಳೇದು"

"ಒಂದೇ ಧಾರವಾಡ ಜಿಲ್ಲೆಯಲ್ಲಿ ಹೋದವರುಷ ೩೫,೦೦೦ ಜನರನ್ನು ಕೊಂದ "ಪ್ಲೇಗ್" ಎಂಬ ಭಯಂಕರ ರೋಗವು ಪ್ರತಿ ಒಬ್ಬನಿಗೆ ಗೊತ್ತಿರಲಿಕ್ಕೆ ಸಾಕು. ಮೊದಲು ಈ ಬೇನೆಯು ಉಂಟಾಗುವ ಕಾರಣವನ್ನೂ ಆ ಮೇಲೆ ಅದು ಹ್ಯಾಗೆ ಹಬ್ಬುತ್ತದೆಂಬದನ್ನೂ ವಿಚಾರ ಮಾಡೋಣ.

ಸೂಕ್ಷ್ಮದರ್ಶಕ ಯಂತ್ರದ ಸಹಾಯದಿಂದಲೇ ಮಾತ್ರ ಕಾಣಿಸುವಂಥ ಅತಿ ಸೂಕ್ಷ್ಮವಾದ ಉದ್ಭಿಜ್ಜ ಕೋಟಿಯೊಳಗಿನ ಒಂದು ಜಾತಿಯ್ಯ ಜಂತುಗಳೇ ಈ ರೋಗಕ್ಕೆ ಮೂಲ ಕಾರಣವು. ಈ ಜಂತುಗಳು ಪ್ಲೇಗ ಬಂದ ಮನುಷ್ಯನ ರಕ್ತದಲ್ಲಿ ಬೆಳೆಯುತ್ತ ಹೋಗುತ್ತವೆ. ಇವು ಉಸುಬಿನ ತೀರ ಸಣ್ಣ ಕಣಕ್ಕಿಂತಲೂ ಸೂಕ್ಷ್ಮವಾದವುಗಳು ಇರುತ್ತವೆ. ಇವು ರಕ್ತದಲ್ಲಿ ಸೇರಿದ ಕೂಡಲೆ ಒಂದಕ್ಕೆ ಎರಡು, ಆ ಎರಡಕ್ಕೆ ನಾಲ್ಕು, ಈ ಪ್ರಕಾರ ಕೋಟ್ಯಾವಧಿ ಜಂತುಗಳಾಗುವವರೆಗೆ ಬಹು ತೀವ್ರವಾಗಿ ಬೆಳೆಯುತ್ತವೆ. ಈ ಜಂತುಗಳು ರೋಗಿಯ ರಕ್ತವನ್ನು ಮೇಯಿದು, ಅದರಲ್ಲಿ ಒಂದು ತರದ ವಿಷವನ್ನುಂಟುಮಾಡುತ್ತವೆ; ಮತ್ತು ಈ ವಿಷದಿಂದಲೇ ಜ್ವರ ಹುಟ್ಟಿ ರೋಗಿಯು ಸಾಯುತ್ತಾನೆ.

ಈ ಜಂತುಗಳು ರೋಗಿಯ ರಕ್ತದಲ್ಲಿ ಹ್ಯಾಗೆ ಪ್ರವೇಶಮಾಡುತ್ತವೆ ನೋಡಿರಿ! ಇಲಿಗಳ ಮೈಮೇಲೆ ಇರುವ ಚಿಕ್ಕಾಡುಗಳೇ ಇದಕ್ಕೆ ಕಾರಣವು. ಪ್ಲೇಗ ರೋಗವು ಇಲಿಗಳಿಗೆ ಬಹು ಬೇಗ ತಗಲುತ್ತದೆ; ಅವುಗಳ ಮೈತುಂಬ ಚಿಕ್ಕಾಡುಗಳು ಇರುತ್ತವೆ. ಇವು ಪ್ಲೇಗ ಬಂದ ಇಲಿಯ ರಕ್ತವನ್ನು ಕುಡಿಯುತ್ತವೆ. ಮತ್ತು ಅದು ಸತ್ತ ಕೂಡಲೆ ಅದನ್ನು ಬಿಟ್ಟು ಬೇರೆ ಇಲಿಗಳನ್ನು ಕಡಿಯಲು, ಅವೂ ಪ್ಲೇಗಬೇನೆಯಿಂದ ಸಾಯುತ್ತವೆ. ಈ ಪ್ರಕಾರ ಇಲಿಗಳು ಸತ್ತು ಹೋದವೆಂದರೆ ಚಿಕ್ಕಾಡುಗಳಿಗೆ ಕೂಳಿಲ್ಲದಂತೆ ಆಗಿ, ಅವು ಮನುಷ್ಯನಿಗೆ ಕಚ್ಚಿದಕೂಡಲೆ ಅವನಿಗೂ ಪ್ಲೇಗ ಬೇನೆಯು ಬರುತ್ತದೆ.

ಇದರಮೇಲಿಂದ ಕಂಡು ಬರುವದೇನೆಂದರೆ:—ಇಲಿಗಳು ಇಲ್ಲದೆ ಇದ್ದರೆ ಪ್ಲೇಗ ಬೇನೆಯು ಎಂದೂ ಬರುತ್ತಿದ್ದಿಲ್ಲ. ಆದರೆ ದುರ್ದೈವದಿಂದ ಇಲಿಗಳು ಅಸಂಖ್ಯವಾಗಿರುತ್ತವೆ. ಮತ್ತು ಅವು ಬಹು ಬೇಗ ಮರಿಮಾಡಿ ವಿಪರೀತ ಬೆಳೆಯುವದರಿಂದ ಊರೊಳಗಿನ ಯಾವತ್ತೂ ಇಲಿಗಳನ್ನು ನಾಶಪಡಿಸುವದು ಪೂರಾ ಅಸಾಧ್ಯವಾಗಿರುತ್ತದೆ. ಆದರೂ ಇಲಿಗಳನ್ನು ಅನೇಕ

ಕೊರ್ಗದಿಂದ ಕಡಿಮೆ ಮಾಡಬಹುದು. ಇಲಿಗಳು ಬದುಕಿ ಹೆಚ್ಚಾಗ ಬೇಕಾದರೆ ಅವುಗಳಿಗೆ ತಿನ್ನಲಿಕ್ಕೆ ಸಾಕಷ್ಟು ಆಹಾರ ಬೇಕಷ್ಟೇ? ಅದ್ದ ರಿಂದ ಕಾಳುಕಡಿ ಮುಂತಾದ ತಿನ್ನುವ ಪದಾರ್ಥಗಳನ್ನು ಇಲಿಗಳು ಪ್ರವೇ ಶಿಸದಂಥ ಪಾತ್ರೆಗಳಲ್ಲಿ ಮುಚ್ಚಿಡಬೇಕು. ಎಂಜಲು ಅಥವಾ ತಂಗಳ ಪದಾ ರ್ಥಗಳನ್ನು ಮನೆಯ ಹತ್ತರ ಇಟ್ಟುಕೂಡದು. ಕಸಕಡ್ಡಿಗಳನ್ನು ಓಣಿಗಳಲ್ಲಿ ಬಿಸಾಕಲ್ಲಬಾರದು. ಇಲಿಗಳನ್ನು ನಾಶ ಮಾಡುವದಕ್ಕೆ ಬೆಕ್ಕುಗಳನ್ನು ಸಾಕಬ ಹುದು; ಮತ್ತು ಬಲೆಗಳು ಈ ಕೆಲಸಕ್ಕೆ ಬಹಳ ಉಪಯೋಗಬೀಳುವವು.

ಈ ರೀತಿಯಾಗಿ ಪ್ಲೇಗ ಬೇನೆಯು ಬಾರದಂತೆ ಮಾಡಬಹುದು. ಅದು ಸಾಧ್ಯವಾಗದೆ ಹೋದಲ್ಲಿ ಅದರ ಪ್ರಖರತೆಯನ್ನಾದರೂ ಅದಷ್ಟು ಕಡಿಮೆ ಮಾಡಲಿಕ್ಕೆ ಬರಬಹುದು. ಈ ಎಲ್ಲ ಉಪಾಯಗಳನ್ನು ಮಾಡಿ ದಾಗ್ಯೂ ಪ್ಲೇಗಬೇನೆಯು ಊರೊಳಗೆ ಪ್ರಾರಂಭವಾದರೆ ಮಾಡುವದೇನು? ಊರು ಬಿಟ್ಟು ಹೋಗುವಿರೋ? ಊರು ಬಿಟ್ಟರೆ ನಿಮ್ಮ ಅರಿವೆಗಳಲ್ಲಿ ಇರುವ ಪ್ಲೇಗ ದೂಷಿತ ಚಿಕ್ಕಾಡುಗಳು ನಿಮ್ಮ ಕೂಡ ನೀವು ಹೋದ ಸ್ಥಳಕ್ಕೆ ಬಂದು, ಅಲ್ಲಿಯೂ ಪ್ಲೇಗವನ್ನುಂಟು ಮಾಡುತ್ತವೆ. ಇದಲ್ಲದೆ ಊರು ಬಿಡುವದರಿಂದ ಬಹಳ ಅನಾನುಕೂಲತೆಯಾಗುವದಲ್ಲದೆ ಹೆಚ್ಚಿನ ಖರ್ಚು ಬರುತ್ತದೆ. ಊರು ಬಿಟ್ಟು ಸವಿಾಪದ ಗುಡಿಸಲುಗಳಲ್ಲಿ ಹೋಗಿ ರುವದರಿಂದಲೂ ಅನೇಕ ತೊಂದರೆಗಳಾಗುತ್ತವೆ. ಊರೊಳಗೆ ಮನೆಯಲ್ಲಿ ಬಿಟ್ಟು ಬಂದ ಸಾಮಾನುಗಳನ್ನು ಯಾರು ಕಾಯುವರು? ಮೇಲಾಗಿ ಗುಡಿ ಸಲುಗಳು ಊರ ಸವಿಾಪದಲ್ಲಿರುವದರಿಂದ ಇಲಿಗಳು ಹೊಟ್ಟೆಗಾಗಿ ನಿಮ್ಮ ಬೆನ್ನು ಹತ್ತುತ್ತವೆ. ಮಳೆಗಾಲದಲ್ಲಿ ಗುಡಿಸಲುಗಳಲ್ಲಿ ಇರುವದಂತೂ ಬಹಳ ತೊಂದರೆಗೆ ಕಾರಣವಾಗುವದು.

ಹಾಗಾದರೆ ದೈವದಲ್ಲಿದ್ದದ್ದು ಆಗುವದೆಂದು ನಂಬಿ, ಪ್ಲೇಗು ಬರುವ ವರೆಗೆ ಅದರ ಪ್ರತೀಕಾರಕ್ಕೆ ಏನೂ ಉಪಾಯ ಮಾಡದೆ, ಬೇನೆ ಬಂದ ಬಳಿಕ ಔಷಧೋಪಚಾರಗಳಿಂದ ಜೀವ ಉಳಿಸಿಕೊಳ್ಳಬಹುದೋ? ಅದರೆ, ದುರ್ದೈವದಿಂದ ಈವರೆಗೂ ಪ್ಲೇಗದ ಮೇಲೆ ಔಷಧವು ಗೊತ್ತಾ ಗಿಲ್ಲ. ಬಂದಾವರ್ತಿ ಪ್ಲೇಗ ಬಂದ ಮೇಲೆ ಬಹುಶಃ ಸಾಯುವದೇ ಬಹಳವಾಗಿ ನಿಜವು.

"ಬೇನೆ ಬಂದ ಮೇಲೆ ನೆಟ್ಟಗಾಗಲಿಕ್ಕೆ ಪ್ರಯತ್ನ ಮಾಡುವದಕ್ಕಿಂತ ಅದು ಬಾರದಂತೆ ಮೊದಲೇ ಉಪಾಯ ಮಾಡಿಕೊಳ್ಳುವದು ಒಳ್ಳೇದು"

ಎಂದು ಇಂಗ್ಲೀಷ ಭಾಷೆಯೆಲ್ಲಿ ಬಂದು ಗಾದೆಯು ಮಾತು ಅದೆ. ಹಾಗಾ ದರೆ, ಪ್ಲೇಗ ಬರುವ ಸಂಭವವನ್ನು ಬಹಳ ಮಟ್ಟಿಗೆ ಕಡಿಮೆ ಮಾಡತಕ್ಕ ಉಪಾಯವ್ಯಾವದು? ಮೈಲೀ ತೆಗಿಸಿಕೊಳ್ಳುವದು. ಇದನ್ನು ಸಿದ್ಧ ಮಾಡಿ ಕೊಡುವೆವು. ನಿಮ್ಮ ಸ್ನೇಹಿತರಲ್ಲಿ ಮೈಲೀ ತೆಗಿಸಿಕೊಂಡವರು ಯಾರಾ ದರೂ ಇದ್ದರೆ, ಅವರಿಗೆ ಅದರಿಂದ ಏನಾದರೂ ಅಪಾಯವಾಗಿರುವದೇ ನೆಂದು ಅವರನ್ನು ಕೇಳಬಹುದು. ಮೈಲೀ ತೆಗೆದ ಸ್ಥಳದಲ್ಲಿ ಸ್ವಲ್ಪ ನೋವು ಮತ್ತು ತುಸು ಜ್ವರ ಇವುಗಳು ಹೊರ್ತಾಗಿ ಎರಡನೇ ಯಾವ ಅಪಾ ಯವೂ ಸಂಭವಿಸಲಿಲ್ಲೆಂದು ಅವರು ಹೇಳುವರು. ಮತ್ತು ಮೈಲೀ ತೆಗಿಸಿ ಕೊಂಡವರಿಗೆ ಯಾರಿಗಾದರೂ ಪ್ಲೇಗ ಬಂದಿದ್ದರೆ ಕೇಳಬಹುದು. ಬಹುಶಃ ಎಲ್ಲರೂ ಇಲ್ಲವೆಂದೇ ಉತ್ತರ ಕೊಡುವರು. ಸಾರಾಂಶ ವೇನಂದರೆ, ಮೈಲೀ ತೆಗಿಸಿಕೊಂಡವರ ಮತ್ತು ತೆಗಿಸಿಕೊಳ್ಳದೆ ಇದ್ದ ವರ ಸಂಖ್ಯೆಯು ಸರಿಯಾಗಿ ಇದ್ದರೆ, ಮೈಲೀ ತೆಗೆಯದಿದ್ದವರಲ್ಲಿ ೬ ಜನರು ಪ್ಲೇಗದಿಂದ ಸತ್ತರೆ, ತೆಗಿಸಿಕೊಂಡವರಲ್ಲಿ ಒಬ್ಬನು ಮಾತ್ರ ಸಾಯಬಹುದು.

ಬೆಳಗಾವಿ ಜಿಲ್ಹೆಯಲ್ಲಿ ಗೋಕಾವಿಯ ಗಿರಣಿಯ ಕೂಲಿಕಾರರು ಇರುವ ಭಾಗದಲ್ಲಿ ಹೋದ ವರುಷ ಸಪ್ಟಂಬರ, ಅಕ್ಟೋಬರ ತಿಂಗಳಲ್ಲಿ ಪ್ಲೇಗ ಬೇನೆಯು ಪ್ರಾರಂಭವಾಯಿತು. ಆಗ ಸುಮಾರು ೧೫೦೦ ಜನರಲ್ಲಿ ೧೫೦ ಜನರು ಮಾತ್ರ ಮೈಲೀ ತೆಗಿಸಿಕೊಂಡರು. ಉಳಿದ ೧೩೫೦ ಜನ ರಲ್ಲಿ ೭೩ ಜನರಿಗೆ ಪ್ಲೇಗ ಬಂದು ಅವರೊಳಗಿನ ೪೭ ಜನರು ತೀರಿದರು. ಆದರೆ ಮೈಲೀ ತೆಗಿಸಿಕೊಂಡವರಲ್ಲಿ ಒಬ್ಬನಿಗೆ ಮಾತ್ರ ಪ್ಲೇಗ ಬಂದು ಅವನು ಸಹ ಬದುಕಿಕೊಂಡನು.

ಕೆಲವು ದಿವಸಗಳ ಹಿಂದೆ ಹುಬ್ಬಳ್ಳಿಯಲ್ಲಿ ಪ್ಲೇಗ ಪ್ರಾರಂಭಿಸಿದಾಗ ಅಲ್ಲಿಯೆ ರೇಲ್ವೆ ನವಕರರಲ್ಲಿ ೧೫೬೦ ಜನರು ಮೈಲೀ ತೆಗಿಸಿಕೊಂಡರು. ಮತ್ತು ೭೬೦ ಜನರು ಮೈಲೀ ತೆಗಿಸಲಿಕ್ಕೆ ಒಡಂಬಡಲಿಲ್ಲ. ಮೈಲೀ ತೆಗಿಸಿದವರಲ್ಲಿ ಇಬ್ಬರು ಮಾತ್ರ ಮರಣ ಹೊಂದಿದರು; ಆದರೆ ಮೈಲೀ ತೆಗಿಸದೆ ಇದ್ದ ೭೬೦ ಜನರಲ್ಲಿ ೨೧ ಜನರು ತೀರಿಕೊಂಡರು. ಇದರ ಮೇಲಿಂದ ಮೈಲೀ ತೆಗಿಸಿಕೊಂಡದ್ದರಿಂದ ೩೩ ಜೀವಗಳು ಉಳಿದಂತೆ ಆಯಿತು.

ಇನ್ನು, ಮೈಲೀ ತೆಗಿಸಿಕೊಳ್ಳುವ ವೇಳೆ ಯಾವದು? ಊರೊಳಗೆ ಇಲ್ಲಿಗಳು ಬಾಳಹತ್ತಿದ್ದು [illegible]

ತೆಗಿಸಿಕೊಳ್ಳಬೇಕು. ಇಲ್ಲದೆ ಇದ್ದರೆ ನಿಮ್ಮ ಜೀವದ ಮೇಲೆಯೇ ಪ್ರಸಂಗ ಒದಗಬಹುದು. ಮೈಲಿಯ ಪೂರ್ಣ ಗುಣವು ಸುಮಾರು ೬ ತಿಂಗಳು ಮಟ್ಟಿಗೆ ಮಾತ್ರ ಉಳಿಯುವದರಿಂದ ಮೈಲೀ ತೆಗಿಸಿಕೊಂಡ ೬ ತಿಂಗಳ ಮೇಲೆ ಪುನಃ ಬೇನೆಯು ಪ್ರಾರಂಭಿಸಿದರೆ ಮತ್ತೊಮ್ಮೆ ಮೈಲೀ ತೆಗಿಸಿಕೊಳ್ಳಬೇಕು. ಈ ಮಾತು ಬಹಳ ಮಹತ್ವದ್ದು.

ಧಾರವಾಡ ಜಿಲ್ಲೆಯ ಮಾಕನೂರ ಗ್ರಾಮದ ಜನಸಂಖ್ಯೆಯು ೧೫೦೦ ಇರುವದು. ಆ ಗ್ರಾಮದಲ್ಲಿ ಹೋದ ವರುಷ ಪ್ಲೇಗ ಬೇನೆಯು ಪ್ರಾರಂಭವಾಗಿ, ೧೬ ಜನರಿಗೆ ಪ್ಲೇಗ ಬಂದು ಅವರಲ್ಲಿ ೧೩ ಜನರು ಸತ್ತರು. ಆದರೆ ಅವರಲ್ಲಿ ೧೩೧ ಜನರು ಮೈಲೀ ತೆಗಿಸಿಕೊಂಡಿದ್ದು, ಅವರಲ್ಲಿ ಒಬ್ಬನಾದರೂ ಸಾಯಲಿಲ್ಲ.

ಧಾರವಾಡ ಶಹರದ ಜನಸಂಖ್ಯೆಯು ೩೦,೩೮೯ ಇರುತ್ತದೆ. ಇದರಲ್ಲಿ ೩೮೫೬ ಜನರು ಮೈಲಿ ತೆಗಿಸಿಕೊಂಡರು; ಮತ್ತು ೨೫೪೩೩ ಜನರು ತೆಗಿಸಿಕೊಳ್ಳದೆ ಉಳಿದರು. ಮೈಲೀ ತೆಗಿಸಿಕೊಳ್ಳದೆ ಇದ್ದವರಲ್ಲಿ ೪೦೩ ಜನರಿಗೆ ಪ್ಲೇಗ ಬೇನೆ ಬಂದು ಅವರಲ್ಲಿ ೩೩೪ ಜನರು ಸತ್ತರು. ಆದರೆ, ಮೈಲೀ ತೆಗಿಸಿಕೊಂಡವರಲ್ಲಿ ೭ ಜನರಿಗೆ ಮಾತ್ರ ಪ್ಲೇಗ ಬಂತು ಮತ್ತು ಅವರಲ್ಲಿ ಒಬ್ಬನೇ ಸತ್ತನು. ಈ ಸಂಖ್ಯೆಗಳ ಮೇಲಿಂದ ಮೈಲೀ ತೆಗೆಯುವ ರಸಿಕೆಯಲ್ಲಿರುವ ಪ್ಲೇಗಪ್ರತಿಬಂಧಕ ಗುಣದ ಸಾಧಾರಣ ಕಲ್ಪನೆಯಾಗುವದು, ಮತ್ತು ಲಾಭಗಳೂ ಕಂಡು ಬರುವವು.

೧೯೧೩ನೇ ಇಸವಿಯ ದಶಂಬರ ತಿಂಗಳಲ್ಲಿ ಧಾರವಾಡ ಟ್ರೇನಿಂಗ ಕಾಲೇಜಿನಲ್ಲಿ ಆದ ಪರ್ಡ್‌ಪಾಯಿಂಟು ಪರೀಕ್ಷೆಯ ಪ್ರಶ್ನೆಗಳು.

ಗದ್ಯ ಪದ್ಯಾದಿಗಳು.

೧. (ಅ) ವೃತ್ತವಿಳಾಸದವನು ಯಾವ ಮತದವನು? ಇತರ ಯಾವ ಮತಗಳಲ್ಲಿ ಆಯಾ ಮತಗಳ ಯಾವ ಗ್ರಂಥಗಳ ಆಧಾರದಿಂದ ಏನು ದೋಷವಿದೆ? ಎಂದು ಹೇಳಿರುವನು?

(ಬ) "ಪಶ್ಯತಿ ಪಶ್ಯತಿ ಪರದೋಷಾಣಿ ಆತ್ಮದೋಷಂ ನಪಶ್ಯತಿ" ಎಂಬ ಗಾದೆಗೆ ಮೇಲಿನವನು ಉದಾಹರಣೆಯಾಗುತ್ತಾನೆಂಬದನ್ನು ಅವನ ಗ್ರಂಥದಿಂದಲೇ ಸಿದ ಮಾಡಿರಿ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

೪. ಪಿಡಿವಪಾತ್ರೆ ಪಿತಾಮಹನ ತಲೆ, ಆತನೆ ಮಾತೆ ನೀನೆದಾರು, ಕುರುವಮ್ಮಿಗೆ ನಿರ್ಮಿಸಿ ನಾವೆಯಂ, ಪುರದ ಬಾಹೆಗೆ ತಂದು ಬಿಟ್ಟರ್, ಕಂಬಳಿಹೊದ್ದರೆ, ಮಹಿಮನೆನರಿವರಾರು, ಹನಮಂ ಕಂಡಾಕಡಿಗಳಂ ರೂಪಿನಲ್ಲಿ ಕುಂದಿಲ್ಲ.

ಈ ವಾಕ್ಯಗಳಲ್ಲಿರುವ ಸಮಸಂಸ್ಕೃತ ಲಿಂಗಗಳು ದರ್ಪಣದ ಯಾವ ವಿಯಮದಂತೆ ಆಗಿರುವವು?

೫. ಕೊಡುಗೂಸು, ತಡಿಕೆವಲೆ, ಹೆಡತಲೆ, ಪನ್ನೆರಳ್ತಡಿ, ಕೆಲದೆಗೆದಂ, ಬಾಯ್ಬಡಕ, ಗಂಡಪೆಂಡರು, ಕೊಡವಾಲ್ಗಳಂ, ಈ ಸಮಸ್ತ ಪದಗಳ ರೂಪ ನಿಷ್ಪತ್ತಿ ಕ್ರಮವನ್ನು ಆಯಾ ಸೂತ್ರೋಪನ್ಯಾಸಪೂರ್ವಕವಾಗಿ ಹೇಳಿರಿ.

೬. ನೆಟ್ಟನೆ ನಿನಗಂ ಗೃಹಂ ಸತಿಯೊಳಿಲ್ಲವು, ಒಮ್ಮಿಗೆ ನವೋಸ್ತುಯೆನಲ್ಕೆ, ಬಾರೆಯೋ ಹೇಳು ನಿಶ್ಚಯವಾ, ಕಾವುಕಾವೆಂದರಚುವರ್ ಈ ವಾಕ್ಯಗಳಲ್ಲಿರುವ ವ್ಯಾಕರಣ ವಿಶೇಷಗಳೇನು?

೭. (ಅ) ಕಾಂತಾ, ಚನ್ನೆ, ಕಿವುಡಿಕೆ, ಮಡಿವಳ, ಭೋಗಭ್ರಾಂತಿತನ, ಸುಂಕಿಗ, ಹಾರುವಿತೆ ಇವುಗಳ ವ್ಯುತ್ಪತ್ತಿಯನ್ನು ಹೇಳಿರಿ.

(ಬ) ತಾಳಿಗೆ, ಬೈತ್ರ, ಹೇಳಿಗೆ, ಅವಗೆ, ಪೊತ್ತಿಗೆ, ಬಿನ್ನಾಣ, ಅವ್ವ, ಬಾಣಸ, ಕೂಳು, ಬಾಹತ್ತರ ಇವುಗಳ ತತ್ಸಮ ಶಬ್ದಗಳನ್ನು ಹೇಳಿರಿ.

೮. ಪ್ರತಿಪಾದ್ಯ ಮುತ್ವವಿತ್ವಂ।
ಮತಿವಂತರಿನೆಯ್ದೆ ಪೂರ್ವಕಾಲಕ್ರಿಯೆಗಾ ॥
ಯುತುಮುತ್ತು ಮುತ್ತೆಯುತೆಯೆಂ।
ದು ತಗುಳ್ದಂ ವರ್ತಮಾನವಿಹಿತ ಕ್ರಿಯೆಯೊಳ್ ॥
ಆದಂ ಪಂಚಮಿಯಪ್ಪುದ।
ಪಾದಾನಸ್ಥಲದೊಳದೆ ದಲೊದವು ಗವಾತಂ।
ಕಾದಾನೇಷ್ಟಾ ನಿಷ್ಟಾ।
ಪಾದಿತಹೇತುವಿನೊಳುದಯದೊಳ್ಗಾರವದೊಳ್ ॥

ಈ ಸೂತ್ರಾರ್ಥಗಳನ್ನು ಸ್ಪಷ್ಟವಾಗಿ ಬರೆದು ಹೊಸಗನ್ನಡ ವಾಕ್ಯಗಳನ್ನೇ ಉದಾಹರಿಸಿರಿ.

೯. ಕನ್ನಡದಲ್ಲಿ ಯಾವ ಯಾವ ಜಾತಿಯ ವರ್ಣವೃತ್ತಗಳೂ ಮಾತ್ರಾವೃತ್ತಗಳೂ ಅತಿವಿಶೇಷವಾಗಿವೆ? ಏಕೆ? ದಾಸರ ಪದಗಳ ಲಕ್ಷಣ ಬೋಧಕ ಛಂದಸ್ಸು ಕನ್ನಡದಲ್ಲಿ ಈ ವರೆಗೂ ಏಕೆ ಆಗಿಲ್ಲ? ಇಲ್ಲದಿದ್ದಲ್ಲಿ ಅವುಗಳ ಲಕ್ಷಣಜ್ಞಾನವು ಹೇಗೆ ಆಗುವದು?

ಶಾಲಾಪತ್ರಿಕೆ.

ಪುಸ್ತಕ ೪೯. | ಫೆಬ್ರುವರಿ ೧೯೧೩. | ಸಂಚಿಕೆ ೨.

ಸ್ಫುಟವಿಚಾರಗಳು.

ಬಾಲ್ಕನ್ ಯುದ್ಧವು.

ಯುರೋಪ ಖಂಡದ ದಕ್ಷಿಣದಲ್ಲಿ ಇದ್ದ ಮೂರು ದ್ವೀಪಕಲ್ಪಗಳಲ್ಲಿ ಒಂದಾದ ಬಾಲ್ಕನಿನದಲ್ಲಿ ಸದ್ಯಕ್ಕೆ ಯುದ್ಧವು ನಡೆದಿರುತ್ತದಷ್ಟೆ. ಈ ಯುದ್ಧದಲ್ಲಿ ಒಂದು ಕಡೆಗೆ ಬಾಲ್ಕನ್ ಸಂಘವೂ ಮತ್ತೊಂದು ಕಡೆಗೆ ಯುರೋಪದೊಳಗಿನ ತುರ್ಕಸ್ತಾನವೂ ಇರುವವು. ಮಾಂಟೆನಿಗ್ರೋ, ಬಲ್ಗೇರಿಯಾ, ಸರ್ವಿಯಾ, ಗ್ರೀಸ ಈ ನಾಲ್ಕು ರಾಷ್ಟ್ರಗಳಿಗೆ ಕೂಡಿ 'ಬಾಲ್ಕನ್‌ಸಂಘ' ವೆಂಬ ಹೆಸರುಂಟು. ಈ ಸಂಘದೊಳಗಿನ ಯಾವತ್ತು ರಾಷ್ಟ್ರದವರು ಕ್ರಿಸ್ತೀ ಧರ್ಮದವರಿರುವರು. ಪ್ರತಿಪಕ್ಷಿಗಳಾದ ತುರ್ಕರು ಮಹಮ್ಮದೀಯರು. ಆದರೆ ಬಾಲ್ಕನ್‌ಯುದ್ಧವು ಧರ್ಮಸಂಬಂಧದ ಯುದ್ಧವಲ್ಲ. ಯಾಕಂದರೆ, ತಮ್ಮ ಧರ್ಮವನ್ನು ಪ್ರಸಾರ ಮಾಡುವ ಉದ್ದೇಶವು ಎರಡೂ ಪಕ್ಷದವರದಿಲ್ಲ. ಆದರೆ, ತುರ್ಕಸ್ತಾನದ ಅಧಿಕಾರಕ್ಕೊಳಗಾದ ಕ್ರಿಸ್ತೀಧರ್ಮದ ಜನರ ಸ್ಥಿತಿಯನ್ನು ಸುಧಾರಿಸುವದೂ, ಅವರಿಗೆ ಕೆಲವು ಹಕ್ಕುಗಳನ್ನು ದೊರಕಿಸಿ ಕೊಡುವದೂ ಈ ಯುದ್ಧದ ಮುಖ್ಯೋದ್ದೇಶಗಳಾಗಿವೆ. ಈ ಯುದ್ಧದ ಸಂಬಂಧದ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕೆ ತುರ್ಕಸ್ತಾನದ ಪ್ರಾಚೀನ ಇತಿಹಾಸವನ್ನು ತುಸು ಮಟ್ಟಿಗೆ ಅರಿತುಕೊಳ್ಳುವದು ಅವಶ್ಯವಿದೆ.

ತುರ್ಕೀ ಜನರು ಮೊಟ್ಟಮೊದಲು ಮಧ್ಯ ಏಶಿಯಾಖಂಡದಲ್ಲಿ ವಾಸ ಮಾಡುತ್ತಿದ್ದರು. ಅಲ್ಲಿಂದ ಮೊಗಲರು ಇವರನ್ನು ಹೊರಗೆ ಹಾಕಿದ್ದರಿಂದ, ಇವರು ಮೊದಲು ಏಸಿಯಾಮೈನರಕ್ಕೆ ಹೋಗಿ, ಅಲ್ಲಿಂದ ೧೩೫೫ ನೇ ಇಸವಿಯಲ್ಲಿ ಬಾಲ್ಕನ್ ದ್ವೀಪಕಲ್ಪದೊಳಗಿನ 'ಗ್ಯಾಲಿಪ್ರೋಲಿ' ಬಂದರವನ್ನು ತೆಗೆದುಕೊಂಡರು. ಮುಂದೆ ಫಾರೀಖು ೯೯ ನೇ ಮೇ ಸನ್ ೧೪೫೩ ನೇ ಇಸವಿಯ ದಿವಸ 'ಕಾನ್‌ಸ್ತಾಂತಿನೋಪಲ್' ಪಟ್ಟಣವನ್ನು ಕೈವಶಮಾಡಿಕೊಂಡರು; ಮತ್ತು ಮುಂದೆ ಕೆಲವು ದಿವಸಗಳಲ್ಲಿ ಯಾವತ್ತು ಬಾಲ್ಕನ್

ದ್ವೀಪವನ್ನೇ ಆಕ್ರಮಿಸಿ ಅಲ್ಲಿದ್ದ ರೋಮರಾಜ್ಯವನ್ನು ನಿರ್ಮೂಲಮಾಡಿದರು. ಅವರು ಮುಂದೆ ಎರಡು ಶತಮಾನಗಳ ವರೆಗೆ ಭೂಮಧ್ಯಸಮುದ್ರದ ದಂಡೆಯ ಮೇಲಿದ್ದ ಯುರೋಪ ಮತ್ತು ಆಫ್ರಿಕಾ ಖಂಡಗಳೊಳಗಿನ ರಾಷ್ಟ್ರಗಳ ಕೂಡ ಯುದ್ಧಮಾಡಿ ಅಲ್ಲಿ ತಮ್ಮ ವರ್ಚಸ್ಸನ್ನು ನೆಲೆಗೊಳಿಸಿದರು. ಆದರೆ ೧೮ನೇ ಶತಮಾನದಲ್ಲಿ ಅವರ ಇಳಿಕೆಯು ಪ್ರಾರಂಭವಾಯಿತು. ೧೯ನೇ ಶತಮಾನದಲ್ಲಂತೂ ತುರ್ಕರ ಸ್ಥಿತಿಯು ಬಹಳ ಶೋಚನೀಯವಾಯಿತು. ಆ ಕಾಲದಲ್ಲಿ ತುರ್ಕಸ್ತಾನದಲ್ಲಿ ವಾಸವಾಗಿದ್ದ ಅಶಿಕ್ಷಿತ ಮುಸಲ್ಮಾನರು ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗಿದ್ದರು. ಸುಶಿಕ್ಷಿತರೆಂದೆನಿಸಿಕೊಳ್ಳುವ ಕೆಲವು ಜನರು ಸುಖೋಪಭೋಗಗಳಲ್ಲಿ ಮಗ್ನರಾಗಿದ್ದರು. ಈ ಕಾಲಕ್ಕೆ ಇಂಗ್ಲಿಷರು ಇಜಿಪ್ತ ದೇಶವನ್ನು ತಕ್ಕೊಂಡರು; ಹಾಗೂ ಸುತ್ತುಮುತ್ತಲಿರುವ ಬಾಲ್ಕನ್‌ರಾಷ್ಟ್ರಗಳು ತಮತಮ್ಮಷ್ಟಕ್ಕೆ ಸ್ವತಂತ್ರವಾದವು. ಆ ಕಾಲದಲ್ಲಿ ರಶಿಯಾದವರು ತುರ್ಕಸ್ತಾನವನ್ನು ಸುಲಭವಾಗಿ ಗೆಲ್ಲುವಂತೆ ಇತ್ತು. ಆದರೆ ಹೀಗಾಗುವದು ಉಳಿದ ರಾಷ್ಟ್ರಗಳಿಗೆ ಅನಿಷ್ಟವಾದ್ದರಿಂದ ಆ ರಾಷ್ಟ್ರಗಳು ಹಾಗೆ ಮಾಡಗೊಡಲಿಲ್ಲ. ಇತ್ತ್ಯಕಡೆಯಲ್ಲಿ "ತರುಣ ತುರ್ಕೀ ಜನರೆಂ"ಬ ಹೊಸಪಕ್ಷವು ತುರ್ಕಸ್ತಾನದಲ್ಲಿ ಉಂಟಾಯಿತು. ಅವರಿಗೆ ತಮ್ಮ ದೇಶದ ದುಸ್ಥಿತಿಯು ಅಸಹ್ಯವಾಗಿ, ಅವರು ಸನ್ ೧೯೦೮ನೇ ಇಸವಿಯಲ್ಲಿ ರಾಜ್ಯಕ್ರಾಂತಿಯನ್ನುಂಟು ಮಾಡಿದರು. ಅವರು 'ಅಬ್ದುಲ್‌ಸಾಮೀದ'ನೆಂಬ ಮೊದಲಿನ ಅರಸನನ್ನು ಪಟ್ಟದಿಂದ ತಳ್ಳಿ 'ಕಾನ್‌ಸ್ತಾಂತಿನೋಪಲ'ದಲ್ಲಿ ಪಾರ್ಲಿಮೆಂಟನ್ನು ಸ್ಥಾಪನೆ ಮಾಡಿದರು. ಆಗ ತುರ್ಕಸ್ತಾನದ ಪುನರುಜ್ಜೀವನವುದೀತೆಂದು ಎಲ್ಲರೂ ತರ್ಕಿಸಿದರು. ಆದರೆ ಈ ತರ್ಕವು ನಿಜವಾಗಲಿಲ್ಲ. ಯಾಕಂದರೆ ನಿಜವಾಗಿ ತರುಣ ತುರ್ಕೀ ಜನರ ಆ ವರ್ಚಸ್ಸು ತುರ್ಕಸ್ತಾನದಲ್ಲಿ ಬಹಳ ಇದ್ದಿಲ್ಲ.

ಈ ಸಮಯದಲ್ಲಿ ತುರ್ಕಸ್ತಾನದ ಆಳಿಕೆಗೆ ಸೇರಿದ ಕ್ರೈಸ್ತರಿಗೆ ಮೊದಲಿನದಕ್ಕಿಂತಲೂ ಹೆಚ್ಚು ಹೆಚ್ಚು ತೊಂದರೆಯಾಗಲಾರಂಭಿಸಿತು. ತುರ್ಕಸ್ತಾನದಲ್ಲಿ ಮುಸಲ್ಮಾನರ ಸಂಖ್ಯೆಗಿಂತ ಉಳಿದ ಯುರೋಪಿಯನ್ ಜನರ ಸಂಖ್ಯೆಯು ಹೆಚ್ಚು ಇರುತ್ತದೆ. ಈ ಜನರಿಗೆ ಬಹಳ ಪೀಡೆಯಾದ ಕಾರಣ ಅವರು ತುರ್ಕಸ್ತಾನವನ್ನು ಬಿಟ್ಟು ಸರ್ವಿಯಾ ಮುಂತಾದ ದೇಶಗಳಿಗೆ ಹೋಗಲಾರಂಭಿಸಿದರು. ಆಲ್ಬೇನಿಯಾ ಪ್ರಾಂತದಲ್ಲಿಯಂತೂ ಮರಣ ಸಂಖ್ಯೆಯಲ್ಲಿ ೧೦೦ಕ್ಕೆ ೩೦ರಿಂದ ೭೫ರ ವರೆಗೆ ಖೂನುಗಳೇ ಆಗಹತ್ತಿದವು. ೧೮೭೮ನೇ ಇಸವಿಯಲ್ಲಿ ಬರ್ಲಿನ್‌ಪಟ್ಟಣದಲ್ಲಿ ಯುರೋಪದ ರಾಷ್ಟ್ರಗಳಲ್ಲಿ

ಆದ ಒಪ್ಪಂದದೊಳಗಿನೆ ೨೩ನೇ ಕಲಮಿನಂತೆ ಉಳಿದ ರಾಷ್ಟ್ರಗಳು ತುರ್ಕ ಸ್ತಾನದೊಳಗಿನ ಯುರೋಪಿಯನ್ ಜನರಿಗೆ ಕೆಲವು ಹಕ್ಕುಗಳನ್ನು ಕೊಡಿಸುತ್ತೇವೆಂದೂ, ಅಲ್ಲಿ ಕೆಲವು ಸುಧಾರಣೆಗಳನ್ನು ಮಾಡಿಸುತ್ತೇವೆಂದೂ, ಆಶ್ವಾಸನೆಯನ್ನು ಕೊಟ್ಟಿದ್ದವು. ಅನಂತರ ಸರ್ವಿಯಾ ಸರಕಾರದವರು ಬಂದು ಪ್ರಸಂಗದಲ್ಲಿ ಯುರೋಪದ ರಾಷ್ಟ್ರಗಳಿಗೆ ವಿನಂತಿ ಮಾಡಿಕೊಂಡರೂ ಅವರ ದಾದುಹತ್ತಲಿಲ್ಲ. ೧೯೦೮ ರಲ್ಲಿ ಆಸ್ಟ್ರಿಯಾದೇಶದ ಸರಕಾರದವರು ಬಾಸ್ನಿಯಾ, ಹರ್ಜಗೋವಿನಾ ಇವೆರಡು ಪ್ರಾಂತಗಳನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಆದರೆ ಅಲ್ಲಿ ವಾಸಮಾಡುವ ಜನರು ಸರ್ವಿಯಾ ದೇಶದ ವರಿದ್ದದರಿಂದ ಸರ್ವಿಯಾ ಸರಕಾರದವರು ತಕರಾರು ತೆಗೆದರು. ಆದರೆ ಅವರ ತಕರಾರನ್ನು ಯಾರೂ ಕೇಳಲಿಲ್ಲ. ಸರ್ವಿಯಾ ದೇಶದಸ್ಥಿತಿಯು ಬಹಳ ಬಿಕ್ಕಟ್ಟಾದದ್ದಿರುತ್ತದೆ. ಯಾಕಂದರೆ ಈ ದೇಶಕ್ಕೆ ದಕ್ಷಿಣದಲ್ಲಿ ತುರ್ಕ ಸ್ತಾನವೂ, ಉತ್ತರದಲ್ಲಿ ಆಸ್ಟ್ರಿಯಾದೇಶವೂ, ಪಶ್ಚಿಮದಲ್ಲಿ ಮಾಂಟಿನಿ ಗ್ರೋದೇಶವೂ, ಪೂರ್ವದಲ್ಲಿ ಬಲ್ಗೇರಿಯಾದೇಶವೂ ಇದ್ದು, ನಾಲ್ಕೂ ಕಡೆಯಿಂದ ಈ ದೇಶಕ್ಕೆ ತೊಂದರೆ ಇರುತ್ತದೆ. ಸರ್ವಿಯಾದೇಶದವರಿಗೆ ಪರ ದೇಶಗಳೊಡನೆ ವ್ಯಾಪಾರ ನಡಿಸುವದಕ್ಕೆ ಬಂದರವಿಲ್ಲ. ಆದ್ದರಿಂದ ಆ ದೇಶದ ಪ್ರಗತಿಗೆ ಅಡ್ಡಿಯಾಗುತ್ತದೆ

ತಮ್ಮ ಹಿತದಕಡೆಗೆ ಇದೇ ಪ್ರಕಾರ ದುರ್ಲಕ್ಷವಾಡುತ್ತ ಹೋದರೆ, ಕಡೆಗೆ ತಮ್ಮ ನಾಶವಾದೀತೆಂದು ತಿಳಿದುಕೊಂಡು, ಮೇಲೆ ಹೇಳಿದ ನಾಲ್ಕು ರಾಷ್ಟ್ರಗಳು ಕೂಡಿ, 'ಬಾಲ್ಕನ್‌ಸಂಘ'ವೆಂಬ ಸಂಘವನ್ನು ಮಾಡಿಕೊಂಡು ಈ ದುಃಸ್ಥಿತಿಯ ಪ್ರತೀಕಾರವನ್ನು ಮಾಡಬೇಕೆಂದು ನಿಶ್ಚಯಿಸಿದರು. ಇದೇ ಕಾಲದಲ್ಲಿ ಇತಲಿ ಮತ್ತು ತುರ್ಕಸ್ತಾನ ಈ ದೇಶಗಳ ನಡುವೆ ತ್ರಿಪೋಲಿಯ ಸಲುವಾಗಿ ಯುದ್ಧವು ನಡೆದಿತ್ತು. ಅದರಲ್ಲಿ ತುರ್ಕಸ್ತಾನದವರು ಸೋತು, ತ್ರಿಪೋಲಿಯು ಅವರ ಕೈಬಿಟ್ಟಿತು. ಈ ಯುದ್ಧದಲ್ಲಿ ತುರ್ಕಸ್ತಾನಕ್ಕೆ ಯಾರೂ ಸಹಾಯಮಾಡಲಿಲ್ಲ. ಈ ಸಂಧಿಯನ್ನು ಸಾಧಿಸಿ ಬಾಲ್ಕನ್ ಸಂಘದವರು ತುರ್ಕಸ್ತಾನಕ್ಕೆ ತಮ್ಮ ರಾಜ್ಯದಲ್ಲಿ ಸುಧಾರಣೆ ಮಾಡಲಿಕ್ಕೆ ವಿನಂತಿ ಮಾಡಿಕೊಂಡರು. ಆದರೆ ಅದರಿಂದ ಏನೂ ಉಪಯೋಗವಾಗಲಿಲ್ಲ. ಆಗ ಅವರು ಕಡೆಗೆ ತುರ್ಕರನ್ನು ಯುದ್ಧಕ್ಕೆ ಕರೆದರು. ಈ ಯುದ್ಧಕ್ಕೆ ಬಾಳುವಾರಗಳ ಯುದ್ಧವೆಂಬ ಹೆಸರುಂಟು. ಯಾಕಂದರೆ ಈ ಯುದ್ಧವು ಅಕ್ಟೋಬರ ತಿಂಗಳ ೨೪ನೆಯ ವಾರದಲ್ಲಿ ಪ್ರಾರಂಭವಾಗಿ ನವಂಬರದ ಕೊನೆಗೆ ಮುಗಿಯಿತು. ಮೊದಲು ಮಾಂಟೆನಿಗ್ರೋದವರು ತಾರೀಖು ೮-೧೦-೧೨ನೆಯ ದಿವಸ

ಯುದ್ಧವನ್ನು ಪ್ರಾರಂಭಮಾಡಿದರು. ಅದೇ ವೇಳೆಗೆ ಗ್ರೀಕರು ಸಾಲೋನಿಕಾ ಬಂದರವನ್ನು ಮುತ್ತಿದರು. ಬಲ್ಗೇರಿಯಾ, ಸರ್ವಿಯಾದವರು ಆದ್ರಿಯಾನೋಪಲ್ ಕೋಟೆಯ ಮೇಲೆ ದಂಡೆತ್ತಿ ಹೋದರು. ಈ ಬಗೆಯಾಗಿ ಶತ್ರುಗಳು ನಾಲ್ಕೂ ಕಡೆಯಿಂದ ಒಮ್ಮೇಲೆ ಏರಿಬಂದರೂ ತುರ್ಕಸ್ತಾನಕ್ಕೆ ಅದರಿಂದ ಬಹಳ ಭಯವೆನಿಸಲಿಲ್ಲ. ಯಾಕಂದರೆ ತುರ್ಕೀ ಸೈನ್ಯವು ೧೦ ಲಕ್ಷ, ಬಾಲ್ಕನ್‌ಸಂಘದವರ ಸೈನ್ಯ ೫ ಲಕ್ಷ ಇದ್ದವು. ಆದ್ದರಿಂದ ತಮ್ಮ ಶತ್ರುಗಳಾದ ರಾಷ್ಟ್ರಗಳನ್ನು ಸುಲಭ ರೀತಿಯಿಂದ ಮುರಿಬಡಿಯಬಹುದೆಂದು ತುರ್ಕಸ್ತಾನದವರು ಎಣಿಸಿದರು. ತುರ್ಕೀಜನರ ನಂಬಿಗೆಯು ತಮ್ಮ ಹಡಗು ಪಡೆಯಲ್ಲಿ ವಿಶೇಷವಾಗಿತ್ತು. ಆದರೆ ಈ ಯುದ್ಧದಲ್ಲಿ ಅದು ನಿರರ್ಥಕವಾದ್ದೆಂದು ಕಂಡುಬಂತು.

ಈ ಎರಡೂ ಪಕ್ಷಗಳಿಗೆ 'ಕರ್ಕಿಲೀಜ' ಎಂಬಲ್ಲಿ ಬಹುದೊಡ್ಡ ಕಾಳಗವಾಯಿತು. ಅದರಲ್ಲಿ ತುರ್ಕೀಜನರು ಪರಾಜಯವನ್ನು ಹೊಂದಿದರು. ನವಂಬರ ತಿಂಗಳಿನಲ್ಲಿ 'ಲಲೆಬರ್ಗಾಸ' ಎಂಬಲ್ಲಿ ಆದ ಕಾಳಗದಲ್ಲಿಯಂತೂ ತುರ್ಕರು ದಾರಿ ಸಿಕ್ಕ ಕಡೆಗೆ ಬಡಿಹೋದರು. ಗ್ರೀಕ ಜನರು ಸಾಲೋನಿಕಾ ಪಟ್ಟಣವನ್ನು ಕೈವಶ ಮಾಡಿಕೊಂಡರು. ಬಾಲ್ಕನ್ ಸೈನ್ಯವು 'ಲಲೆಬರ್ಗಾಸ' ಯುದ್ಧದಲ್ಲಿ ಬಹಳ ದಣಿದದರಿಂದ, ಆ ಯುದ್ಧದಿಂದಾಗಬಹುದಾದ ಲಾಭವನ್ನು ಮಾಡಿಕೊಳ್ಳಲಿಲ್ಲ. ಇಲ್ಲದಿದ್ದರೆ ಅದೇ ಕಾಲಕ್ಕೆ ತುರ್ಕೀಜನರು ಯುರೋಪಖಂಡವನ್ನು ಬಿಟ್ಟು ಹೋಗಬೇಕಾಗುತ್ತಿತ್ತು.

ಆದ್ರಿಯಾನೋಪಲ್ ಕೋಟೆಯಲ್ಲಿ ೪೦ ಸಾವಿರ ತುರ್ಕೀ ಸೈನ್ಯವು ಬಹಳ ಶೂರತನದಿಂದ ಯುದ್ಧಮಾಡಿ, ಆ ಕೋಟೆಯನ್ನು ಸಂರಕ್ಷಣೆ ಮಾಡಿತು. ಈ ಕೋಟೆಯಲ್ಲಿಯ ಸೇನಾಪತಿಯ ಹೆಸರು ಅಬ್ದುಲ್ ಪಾತಶಾ. ಸ್ವಲ್ಪ ದಿವಸಗಳಲ್ಲಿಯೇ ತುರ್ಕಸ್ತಾನದ ಅವಸ್ಥೆಯು ಸೀಗಾದದ್ದರಿಂದ ತುರ್ಕರು ಒಪ್ಪಂದದ ಸಂಧಾನ ಹಚ್ಚಿದರು. ಈ ಒಪ್ಪಂದದ ಮಾತು ಕತೆಗಳು ಲಂಡನ್ ಪಟ್ಟಣದಲ್ಲಿ ಆಗಬೇಕೆಂದು ಗೊತ್ತಾದದ್ದರಿಂದ ಕೆಲವು ದಿವಸಗಳವರೆಗೆ ಯುದ್ಧವನ್ನು ತಹಕೂಬ ಮಾಡಿ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳು ಅಲ್ಲಿ ಕೂಡಿದರು. ಆದರೆ ಅದರಿಂದ ಏನೂ ನಿರ್ಣಯವಾಗಲಿಲ್ಲ. ಆದಕಾರಣ ಬಾಲ್ಕನೆಸಂಘದವರು ಮತ್ತೆ ಯುದ್ಧವನ್ನು ಹೂಡಿರುವರು.

ಶಾರೀರಿಕ ಶಿಕ್ಷೆ.

೨. ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷೆಯನ್ನು ಮಾಡಬೇಕೋ ಮಾಡಬಾರದೋ ಎಂಬ ಬಗ್ಗೆ ಶಿಕ್ಷಣ ಶಾಸ್ತ್ರಜ್ಞರಲ್ಲಿ ಬಹು ದಿವಸದಿಂದ ಮತಭೇದವುಂಟಾಗಿರುವದು; ಹಾಗು ಅದರ

ಅವಶ್ಯಕತೆಯುಂಟೆಂಬ ಮಾತಿಗೇ ಬಹುಮತವು ದೊರೆತಿರುವದು. ಶಾಲೆಯೊಳಗಿನ ಅಪರಾಧಗಳ ಬಗ್ಗೆ ಈ ಶಿಕ್ಷೆಯು ಅವಶ್ಯಕತೆಯಿದ್ದ ಮೇಲೆ ಮನೆಯೊಳಗಿನ ತಪ್ಪುಗಳ ಬಗ್ಗೆಯೂ ಇದರ ಉಪಯೋಗವು ಆಗಬಹುದೆಂಬ ಮಾತು ಸಹಜವಾಗಿ ಹೊರಡುವದು. ಈ ಅಭಿಪ್ರಾಯವು ಬಹುಜನರಿಗೆ ಮಾನ್ಯವಾಗಿರುವದಿಷ್ಟೇ ಅಲ್ಲದೆ, ಅವರು ಅದನ್ನು ಆಚರಣೆಯಲ್ಲಿ ಸಹ ತಂದಿರುವರು. ಅವರು ಶಾರೀರಿಕ ಶಿಕ್ಷೆಯನ್ನು ಉಪಯೋಗಿಸದೆ ಇದ್ದರೆ, ಹುಡುಗರನ್ನು ಅಂಕಿತದಲ್ಲಿ ಇಟ್ಟುಕೊಳ್ಳಲಿಕ್ಕೆ ಬರುವದಿಲ್ಲವಾದ ಕಾರಣ, ಅದನ್ನು ಉಪಯೋಗಿಸಲೇ ಬೇಕಾಗುವದೆಂದು ಹೇಳುವರು. ಆದರೂ ಕುಶಲರಾದ ತಾಯಿತಂದೆಗಳು ಶಾರೀರಿಕ ಶಿಕ್ಷೆಯನ್ನು ಉಪಯೋಗಿಸದೆಯೇ ತಮ್ಮ ಮಕ್ಕಳನ್ನು ಅಂಕಿತದಲ್ಲಿ ಇಟ್ಟುಕೊಳ್ಳಬಹುದೆಂಬ ಮಾತನ್ನು ಸುವಿಚಾರಿಗಳು ಒಪ್ಪಿಕೊಳ್ಳುವರು; ಹಾಗು ಅಂಥ ತಾಯಿತಂದೆಗಳನ್ನು ನಾವು ಕಣ್ಣಾರೆ ಕಂಡೂ ಕಾಣಬಹುದು. ಅಂದಮೇಲೆ, ಶಾರೀರಿಕ ಶಿಕ್ಷೆಯೆಂಬ ಗೌಣ ಉಪಾಯವನ್ನು ತೆಗೆದು ಹಾಕುವದು ಸಾಧ್ಯವಾದ ಮಾತೆಂದು ಹೇಳಿದಂತಾಯಿತು. ಶಾರೀರಿಕ ಶಿಕ್ಷೆಯು ಅವಶ್ಯವಾಗಿಬೇಕೆಂಬ ಅಭಿಪ್ರಾಯವುಳ್ಳವರು ಜಪಾನ ದೇಶದೊಳಗಿನ ಹುಡುಗರನ್ನು ನಡಿಸಿಕೊಳ್ಳುವ ಪದ್ಧತಿಯು ಹ್ಯಾಗಿರುವದೆಂಬದನ್ನು ವಿಚಾರಮಾಡಬೇಕು. ಟೋಕಿ ಓ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಬ್ಯಾರನ್ ಕಿಕೂಚೀ ಎಂಬವರು ಸನ್ ೧೯೦೭ ನೇ ಇಸವಿಯಲ್ಲಿ ಲಂಡನದ ವಿಶ್ವವಿದ್ಯಾಲಯದಲ್ಲಿ "ಜಪಾನೀ ಶಿಕ್ಷಣ" ಎಂಬ ವಿಷಯದಲ್ಲಿ ಕೊಟ್ಟ ವ್ಯಾಖ್ಯಾನದಲ್ಲಿ ಹೇಳಿರುವದೇನಂದರೆ:—"ಜಪಾನದಲ್ಲಿ ಚಿಕ್ಕಮಕ್ಕಳಿಗೆ ಮೂಲತಃ ಶಾರೀರಿಕ ಶಿಕ್ಷೆಯನ್ನು ಮಾಡುವದೇ ಇಲ್ಲ. ವಿಶೇಷ ಶಿಕ್ಷೆಯನ್ನು ಮಾಡುವದಿದ್ದರೆ ಅವರನ್ನು ಕೆಲವು ಹೊತ್ತು ಕೋಣೆಯಲ್ಲಿ ಸೆರೆ ಹಾಕುವರು. ಆದರೆ ಬಹಳವಾಡಿ ತಾಯಿತಂದೆಗಳು ತಮ್ಮ ಸಿಟ್ಟನ್ನು ವ್ಯಕ್ತಮಾಡುವದಿಷ್ಟೇ ಶಿಕ್ಷೆಯು ಅಲ್ಲಿಯ ಹುಡುಗರಿಗೆ ಸಾಕಾಗುವದು."

ಅಪ್ರೀತಿಯನ್ನು ತೋರಿಸೋಣ, ಅಸಮ್ಮತಿಯನ್ನು ವ್ಯಕ್ತಮಾಡೋಣ, ಸಿಟ್ಟಾಗೇಳೋಣ, ಅಥವಾ ತಡವಾಡಿ ಊಟಕ್ಕೆ ಹಾಕೋಣ, ಕೆಲವು ಹೊತ್ತು ಮಾತಾಡದಿರೋಣ, ಕೆಲವು ವಿಶೇಷ ಪ್ರಸಂಗಗಳಲ್ಲಿ ಕೋಣೆಯಲ್ಲಿ ಸೆರೆ ಹಾಕೋಣ ಮುಂತಾದ ಉಪಾಯಗಳು ಶಾರೀರಿಕ ಶಿಕ್ಷೆಗಿಂತಲೂ ಹೆಚ್ಚು ನಿಜವಾಗಿ ಫಲಕೊಡುವಂಥವುಗಳೂ ಉಪಯೋಗವುಳ್ಳವುಗಳೂ ಆಗಿದ್ದು, ಮರ್ಕಟಸ್ವಭಾವವನ್ನುಂಟುಮಾಡತಕ್ಕ ಶಾರೀರಿಕ ಶಿಕ್ಷೆಯನ್ನು

ಉಪಯೋಗಿಸುವದು ಎಷ್ಟರಮಟ್ಟಿಗೆ ಲಾಭಕರವೆಂಬದನ್ನು ಪಾಲಕರೇ ವಿಚಾರ ಮಾಡತಕ್ಕದ್ದು.

ಚನ್ನಾಗಿ ವಿಚಾರಮಾಡಿದರೆ ತೀರ ಸ್ವಲ್ಪ ಪ್ರಸಂಗಗಳಲ್ಲಿ ಮಾತ್ರ ಶಾರೀರಿಕ ಶಿಕ್ಷೆಯ ಅವಶ್ಯಕತೆಯುಂಟೆಂಬದನ್ನು ಒಪ್ಪಿಕೊಳ್ಳಬೇಕಾಗುವದು. ಆದರೆ ಎಂಥ ಶಾರೀರಿಕ ಶಿಕ್ಷೆಯನ್ನು ಮಾಡಬಹುದು, ಎಂಥ ಶಿಕ್ಷೆಯನ್ನು ಮಾಡಕೂಡದು ಎಂಬದನ್ನು ತಿಳಿದುಕೊಳ್ಳುವದು ಅವಶ್ಯವು. ಈ ತರದ ತಿಳುವಳಿಕೆಯು ಇಲ್ಲದಿರುವದರಿಂದ ಎಷ್ಟೋ ಪ್ರಸಂಗಗಳಲ್ಲಿ ಅನರ್ಥಗಳು ಉಂಟಾಗುವವು. ಪೃಷ್ಠದ ಮೇಲೆ ಬೆತ್ತದಿಂದ ಹೊಡೆಯುವದು ಉತ್ತಮ ತರದ ಶಾರೀರಿಕ ಶಿಕ್ಷೆಯೆಂದು ಆರೋಗ್ಯಶಾಸ್ತ್ರಜ್ಞರ ಅಭಿಪ್ರಾಯವಿರುವದು. ಯಾಕಂದರೆ ಈ ಶಿಕ್ಷೆಯಿಂದ ನೋವು ಮಾತ್ರ ಆಗುವದು; ಇಷ್ಟೇ ಹೊರತು, ಇದರಿಂದ ಶರೀರಕ್ಕೆ ಸ್ಥಿರವಾದ ಅಪಾಯವು ಆಗುವದಿಲ್ಲ. ಕೈ ಮೇಲೆ ಬೆತ್ತದಿಂದ ಹೊಡೆಯುವದರಿಂದ ಕೈಬೆರಳಿಗೆ ನೋವಾಗಿ ಬರೆಯಲಿಕ್ಕೆ ಅಥವಾ ಎರಡನೇ ಕೆಲಸಮಾಡಲಿಕ್ಕೆ ಕೈಯು ನಿರುಪಯೋಗಿಯಾಗುವ ಸಂಭವವಿರುವದರಿಂದ ಈ ಶಿಕ್ಷೆಯು ತಕ್ಕದ್ದಲ್ಲವೆಂದು ಅವರು ಹೇಳುವರು. ಮೊರೆಯ ಮೇಲೆ ಹೊಡೆಯುವ ಶಿಕ್ಷೆಯನ್ನು ಎಂದೆಂದೂ ಉಪಯೋಗಿಸ ಕೂಡದು. ಹೀಗೆ ಹೊಡೆಯುವಾಗ ಸಿಟ್ಟಿನ ಭರದಲ್ಲಿ ಹೊಡತವು ಕಸುವಿ ನಿಂದ ಕೂತರೆ ವಸಡಿಗೆ ಅಥವಾ ಹಲ್ಲುಗಳಿಗೆ ಇಲ್ಲವೆ ಕಿವಿಗಳಿಗೆ ಹೆಚ್ಚು ಅಪಾಯವಾಗುವ ಭೀತಿಯು ವಿಶೇಷವಾಗಿರುವದು. ಮೊರೆಯ ಮೇಲೆ ಕಸುವಿನಿಂದ ಹೊಡೆದದ್ದರಿಂದ ಕಿವಿಯು ಒಡೆದು ಅದು ನಿರುಪಯೋಗಿಯಾ ದಂಥ ದುಃಖಕರವಾದ ಉದಾಹರಣೆಗಳಿರುವವು. ಅದರಂತೆ ಸಿಟ್ಟಿನ ಭರ ದಲ್ಲಿ ತಲೆ, ಹೊಟ್ಟೆ ಮುಂತಾದ ಕಡೆಗಳಲ್ಲಿ ಹೊಡೆಯುವದೂ ಅಯೋಗ್ಯವು. ತಲೆಯ ಮೇಲೆ ಹೊಡೆಯುವದರಿಂದ ಮಿದುಳಿಗೆ ಧಕ್ಕೆಯು ತಾಗಿ ವಿದ್ಯಾ ರ್ಥಿಯು ತಲೆತಿರುಗಿ ಬೀಳುವ ಸಂಭವವಿರುವದು. ಅದರಂತೆ ಹೊಟ್ಟೆಯ ಮೇಲೆ ಹೊಡೆಯುವದರಿಂದ ಪ್ಲೀಹ, ಯಕೃತ್ ಮೊದಲಾದ ಇಂದ್ರಿಯಗಳಿಗೆ ಅಪಾಯವಾಗಬಹುದು. ಅದರಿಂದ ಈ ತರದ ಶಿಕ್ಷೆಯನ್ನು ಎಂದೂ ಮಾಡಕೂಡದು.

---

೩. ನಮಗೆ ಕಣ್ಣು ಕಿವಿ ಕಾಲು ಮೊದಲಾದ ಅವಯವಗಳು ಜೋಡು ಜೋಡಾಗಿರುವಂತೆ ಕೈಗಳಾದರೂ ಜೋಡಾ ಗಿರುವವು. ನಾವು ಕೈಗಳು ಹೊರತಾಗಿ, ಉ

ಎರಡೂ ಕೈಗಳ ಉಪಯೋಗ.

ಳಿದ ಅವಯವಗಳ ಜೋಡಿಯಲ್ಲಿ ಪ್ರತಿಯೊಂದನ್ನು ಸರಿಯಾಗಿ ಕೆಲಸಕ್ಕೆ ಹಚ್ಚುತ್ತಿದ್ದು, ಕೈಗಳ ಕೆಲಸದಲ್ಲಿ ಮಾತ್ರ ವಿಭಾಗಮಾಡಿಕೊಟ್ಟು ವಿಶೇಷತಃ ಬಲಗೈಗೇ ಹೆಚ್ಚಿನ ಕೆಲಸಗಳನ್ನು ಹಚ್ಚುತ್ತೇವೆ. ಇದಕ್ಕೆ ಕಾರಣವೇನಿದ್ದೀತು? ಗಂಡಸರ ಬಲಭಾಗವು ಹೆಚ್ಚು ಬಲಕಟ್ಟಾದದ್ದಿರುವದರಿಂದ ಬಲಗೈಗೆ ಹೆಚ್ಚಿನ ಕೆಲಸಗಳನ್ನು ಹಚ್ಚುತ್ತೇವೆಂದು ಹೇಳಿದರೆ, ಗಂಡಸರು ಬಲಗೈಯಿಂದ ಮಾಡುತ್ತಿರುವ ಈ ಕೆಲಸಗಳನ್ನು ಹೆಂಗಸರು ಎಡಗೈಯಿಂದ ಮಾಡಬೇಕಾಗುವದು. ಅದರೆ ವಸ್ತುಸ್ಥಿತಿಯು ಹಾಗಿಲ್ಲ. ಇಷ್ಟೇ ಅಲ್ಲ; ಅವರಲ್ಲಿ ಆ ತರದ ಸ್ವಾಭಾವಿಕ ಪ್ರವೃತ್ತಿಯು ಸಹ ಕಂಡುಬರುವದಿಲ್ಲ. ಗಂಡಸರಲ್ಲಿ ಸಹ ಬಲಗೈಯಿಂದಲೇ ಹೆಚ್ಚಿನ ಕೆಲಸಗಳನ್ನು ಮಾಡಬೇಕೆಂಬ ಪ್ರವೃತ್ತಿಯು ಸ್ವಾಭಾವಿಕವಾದದ್ದಿರದೆ ಕೃತ್ರಿಮವಾದದ್ದೆಂಬದನ್ನು ಚಿಕ್ಕ ಮಗುವು ತನ್ನ ಎರಡೂ ಕೈಗಳನ್ನು ಸರಿಯಾಗಿ ಉಪಯೋಗಿಸುವದನ್ನು ನೋಡಿ ತಿಳಿದುಕೊಳ್ಳಬಹುದು. ಚಿಕ್ಕಮಗುವು ಆರಂಭದಲ್ಲಿ ಊಟಮಾಡುವಾಗ ಎಡಗೈಯಿಂದ ಉಣ್ಣಲಿಕ್ಕೆ ಹತ್ತಿದಕೂಡಲೆ ಎಡಗೈಯಿಂದ ಉಣ್ಣಬಾರದೆಂದು ಉಪದೇಶಿಸಿ ಬಲಗೈಯಿಂದ ಉಣ್ಣಲಿಕ್ಕೆ ಹಚ್ಚುವದನ್ನೂ, ಅದು ತನ್ನ ಅಣ್ಣನ ಪೆನ್ಸಿಲನ್ನು ತೆಗೆದುಕೊಂಡು ಎಡಗೈಯಿಂದ ಪಾಟಿಯ ಮೇಲೆ ಕರಪರ ಗೀಚಹತ್ತಿದಾಗ ಬಲಗೈಯಿಂದಲೇ ಬರೆಯಬೇಕೆಂದು ಬೋಧಿಸಿದ್ದನ್ನೂ ಅನೇಕರು ನೋಡಿರಬಹುದು. ಹೀಗಾದ ಮೇಲೆ ಮನುಷ್ಯರು ಬಲಗೈ ಎಡಗೈಗಳ ಕೆಲಸಗಳನ್ನು ವಿಂಗಡಿಸುವದರ ಉದ್ದೇಶವೇನು? ಇದಕ್ಕೆ ರೂಢಿಯೇ ಕಾರಣವಲ್ಲದೆ ಹೆಚಿನ ಉದ್ದೇಶವೇನೂ ಕಂಡುಬರುವದಿಲ್ಲ. ಹಾಗು ರೂಢಿಯು ಅನಿಷ್ಟಕರವೆಂಬದು ಸಹಜವು. ಯಾಕಂದರೆ ಬೇನೆ ಬೇಸರಿಕೆಗಳಿಂದಾಗಲಿ ಅಕಸ್ಮಾತ್ ಅಪಘಾತದಿಂದಾಗಲಿ ಬಲಗೈಯು ಕೆಲಸಕ್ಕೆ ಬಾರದಂತಾದರೆ, ಅದರ ಕೆಲಸಗಳು ಎಡಗೈಯಿಂದ ಆಗದ ಕಾರಣ, ಅದು ಇದ್ದೂ ಇಲ್ಲದಂತೆ ಆಗುವದು ಅದರಿಂದ, ಯಾವತ್ತು ಮಹತ್ವದ ಕೆಲಸಗಳನ್ನು ಬಲಗೈಯಿಂದಲೇ ಮಾಡಿಸುತ್ತಾ ಎಡಗೈಗೆ ಆ ತರದ ರೂಢಿಯನ್ನು ಮಾಡಿಸದೆ ಇರುವದು ಅನಿಷ್ಟಕರವು. ಅಥವಾತ್, ಪ್ರತಿಯೊಂದು ಕೆಲಸವನ್ನು ಎರಡೂ ಕೈಗಳಿಂದಲೂ ಸರಿಯಾಗಿ ಮಾಡುವ ರೂಢಿಯನ್ನು ಚಿಕ್ಕಂದಿನಿಂದಲೂ ಇಡುವದು ಅವಶ್ಯವು. ಈ ಸಂಗತಿಯನ್ನು ಲಕ್ಷದಲ್ಲಿಟ್ಟು ಬರೆಯೋಣ, ಚಿತ್ರ ತೆಗೆಯೋಣ, ಮುಂತಾದ

ಯಾವತ್ತು ಕೆಲಸಗಳನ್ನು ಎರಡೂಕೈಗಳಿಂದ ಸರಿಯಾಗಿಮಾಡಲಿಕ್ಕೆ ಕಲಿಸುವ ಪದ್ಧತಿಯನ್ನು ಪಾಶ್ಚಾತ್ಯದಾಸ್ತ್ರಗಳೊಳಗಿನ ಅನೇಕ ಸಾಲೆಗಳಲ್ಲಿ ಪ್ರಚಾರಕ್ಕೆ ತಂದಿರುವರು. ಮುಂಬಯಿಯೊಳಗಿನ ಪಾರ್ಸೀ ಹೆಣ್ಣು ಮಕ್ಕಳ ಸಾಲೆಯಲ್ಲಿಯೂ ಈ ಪದ್ಧತಿಯನ್ನು ಅನುಸರಿಸಿದ್ದು ಕಂಡುಬರುವದು. ಇದರಿಂದ ಹುಡುಗರಿಗೆ ಎರಡೂ ಕೈಗಳಿಂದ ಸರಿಯಾಗಿ ಬರೆಯಲಿಕ್ಕೆ ಬರುತ್ತದೆ. ಹಾಗೂ ಎರಡೂ ಕೈಗಳ ಸ್ನಾಯು ಶಕ್ತಿಯು ಸರಿಯಾಗಿ ಬೆಳೆಸಲ್ಪಡುವದರಿಂದ, ಎಡಗೈಯು ಬಲಗೈಯು ಮಾಡುವಂಥ ಯಾವತ್ತು ಕೆಲಸಗಳನ್ನು ಸಮಾನಶಕ್ತಿಯಿಂದ ಮಾಡಲಿಕ್ಕೆ ಸಮರ್ಥವಾಗುವದು. ಅಲ್ಲದೆ, ಹೀಗೆ ಮಾಡುವದರಿಂದ ಮಿದುಳಿನ ಮೇಲೆ ಸಹ ಒಂದುತರದ ಸತ್ಪರಿಣಾಮವಾಗುವದೆಂದು ಶಾರೀರಶಾಸ್ತ್ರಜ್ಞರು ಹೇಳುವದುಂಟು. ಅವರು ಹೇಳುವದೇನೆಂದರೆ:—ಶರೀರದೊಳಗಿನ ಯಾವತ್ತು ಅವಯವಗಳ ಚಲನವಲನಗಳು ನಡೆಯಲಿಕ್ಕೆ ಮಿದುಳಿನೊಳಗಿನ ಕೆಲವು ವಿವಕ್ಷಿತಕೇಂದ್ರಗಳ ಪ್ರೇರಣೆಯು ಕಾರಣವಾಗಿರುವದು. ಈ ಪ್ರೇರಣೆಯು ಬಲಭಾಗದ ಅವಯವಗಳಿಗೆ ಮಿದುಳಿನೊಳಗಿನ ವಾಮಾರ್ಧದೊಳಗಿನ ಕೇಂದ್ರಗಳಿಂದಲೂ ಎಡಭಾಗದ ಅವಯವಗಳಿಗೆ ದಕ್ಷಿಣಾರ್ಧದೊಳಗಿನ ಕೇಂದ್ರಗಳಿಂದಲೂ ದೊರೆಯುವದು. ಅದರಿಂದ, ನಾವು ಎಡಗಡೆಯ ಅವಯವಗಳ ಉಪಯೋಗವನ್ನು (ಚಲನವಲನಗಳನ್ನು) ಕಡಿಮೆ ಮಾಡುವದರಿಂದ ಮಿದುಳಿನೊಳಗಿನ ದಕ್ಷಿಣಾರ್ಧದೊಳಗಿನ ಎಷ್ಟೋ ಕೇಂದ್ರಗಳಿಗೆ ವ್ಯಾಯಾಮವು ಸರಿಯಾಗಿ ದೊರೆಯದ ಕಾರಣ, ಅವು ಪೂರ್ಣವಾಗಿ ವಿಕಾಸ ಹೊಂದುವದಿಲ್ಲ. ಅರ್ಥಾತ್, ಎಡಗೈಯ ಉಪಯೋಗವನ್ನು ಕಡಿಮೆ ಮಾಡುವದರಿಂದ ಮಿದುಳಿನ ಬಲಭಾಗದೊಳಗಿನ ಕೇಂದ್ರಗಳು ಸರಿಯಾಗಿ ವಿಕಾಸಹೊಂದದೆ ಆ ಭಾಗದ ಶಕ್ತಿಯು ಕಡಿಮೆಯಾಗುವದು. ಅದರಿಂದ ನಮ್ಮ ಮಿದುಳಿನ ಎರಡೂ ಭಾಗದೊಳಗಿನ ಕೇಂದ್ರಗಳು ಸರಿಯಾಗಿ ವಿಕಾಸಹೊಂದಿ ಅವು ಸರಿಯಾಗಿ ಬಲಪಡಬೇಕಾದರೆ ನಾವು ನಮ್ಮ ಎರಡೂ ಕೈಗಳನ್ನು ಸರಿಯಾಗಿ ಕೆಲಸಕ್ಕೆ ಹಚ್ಚಬೇಕು.

ಶಿಕ್ಷಕರೂ ಚಿಕ್ಕಮಕ್ಕಳ ಪಾಲಕರೂ ಈ ಸಂಗತಿಯನ್ನು ನೆನಪಿನಲ್ಲಿಟ್ಟುಕೊಂಡು, ಬರೆಯುವಾಗಲೂ ಬಾಲೋದ್ಯಾನ ಶಿಕ್ಷಣವಿಷಯಕ ವ್ಯವಸಾಯಗಳನ್ನು ಅಥವಾ ಎರಡನೇ ಕೆಲಸಗಳನ್ನು ಮಾಡುವಾಗಲೂ ಹುಡುಗರಿಗೆ ಎರಡೂ ಕೈಗಳನ್ನು ಸರಿಯಾಗಿ ಉಪಯೋಗಿಸಲಿಕ್ಕೆ ಕಲಿಸಬೇಕು.

ವಿದ್ಯಾಖಾತೆಯ ನೋಟೀಸುಗಳು.

ಮೆಹಬ್ಬಾನ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಸಾಹೇಬರವರ ಹುಕುಮಿನ ಪ್ರಕಾರ ಸರಕಾರೀ ವಿದ್ಯಾಖಾತೆಯಿಂದ ಮಂಜೂರ ಆಗತಕ್ಕ ಕನ್ನಡ ಹೊಸಪದ್ಧತಿಯ ಭೂಮಿತಿಯ ಪುಸ್ತಕವು ತಯಾರ ಆಗುವ ವರೆಗೆ, ಮಿ. ಪಿ. ಎಸ್. ಚಂದಾವರಕರ ಬೀ. ಏ ಇವರಿಂದ ರಚಿಸಲ್ಪಟ್ಟ "ಹೊಸಪದ್ಧತಿಯ ಭೂಮಿತಿ ಭಾಗ ೧" ಇದರ ಎರಡನೆಯ ಆವೃತ್ತಿಯೊಳಗಿನ ಕೆಳಗೆ ಕಾಣಿಸಿದ ಭಾಗಗಳನ್ನು ಕಲಿಸತಕ್ಕದ್ದು:—

(೧) ೬ನೆಯ ಇಯತ್ತೆ.

೧. ಅಧ್ಯಾಯ ೧೫—೧, ೨, ೩, ೪, ೫, ೬, ೭, ೮ನೆಯ ಖಂಡಗಳು ಹಾಗು ೨, ೩, ೪, ೫ನೆಯ ಅಧ್ಯಾಯಗಳ ಪ್ರಾಸ್ತಾವಿಕ ಖಂಡ, "ಅ" ದೊಳಗಿನ ಅಭ್ಯಸನೆಗಳು ವಿವರಣೆ ಸಹಿತ.

೨. ೧ರಿಂದ ೬, ಹಾಗು ೮ರಿಂದ ೧೫ ಪ್ರಮೇಯಗಳು.

(೨) ೭ನೆಯ ಇಯತ್ತೆ.

ಮಿ. ಪಿ. ಎಸ್. ಚಂದಾವರಕರ ಬೀ. ಏ. ಇವರಿಂದ ರಚಿತವಾದ "ಹೊಸಪದ್ಧತಿಯ ಭೂಮಿತಿಯ ಭಾಗ ೧" (೨ನೆಯ ಆವೃತ್ತಿ) ಸಂಪೂರ್ಣ, ಪರಿಶಿಷ್ಟ ಸಹಿತ, ಹಾಗು ಇದರಲ್ಲಿದ್ದ ಪ್ರಮೇಯಗಳಿಂದಲೂ ಕೃತ್ಯಗಳಿಂದಲೂ ಹೊರಡುವ ಸುಲಭಪ್ರಶ್ನೆಗಳು.

ಎ. ಇ. ದಕ್ಷಿಣಭಾಗ ಧಾರವಾಡ
ಇವರ ಆಫೀಸು.
ಜನವರಿ ೧೯೧೩ನೆಯ ಇಸವಿ.

P. Lory
ಎ. ಇ. ದಕ್ಷಿಣಭಾಗ.

ಪ್ರಾಥಮಿಕ ಶಾಲೆಗಳ ಬಗ್ಗೆ ಮಂಜೂರಾದ ಕೆಳಗೆ ಕಾಣಿಸಿದ ಪುಸ್ತಕಗಳ ಪಟ್ಟಿಯನ್ನು ಎಲ್ಲರ ತಿಳುವಳಿಕೆಯ ಬಗ್ಗೆ ಪ್ರಸಿದ್ಧ ಮಾಡಿದ್ದೇವೆ:—

ಸಂಖ್ಯೆ.	ಪುಸ್ತಕದಹೆಸರು.	ಪುಸ್ತಕ ಯಾವ ಭಾಷೆಯಲ್ಲಿ ಮುದ್ರಿಸಿದೆ.	ಯಾತರಬಗ್ಗೆ ಮಂಜೂರ ಮಾಡಲ್ಪಟ್ಟಿದೆ.	ಕ್ರಯ ರು.	ಆ.	ಪೈ.
೧	ದಾತಾರ ಆರ್. ಎನ್. ಯು. ಎನ್. ಬಿ. ಎನ್. ಪುಣೆ ಸಿಟೀ:— ಶಾಲೆಯ ಗೋಡೆಗೆ ತೂಗ ಹಾಕತಕ್ಕ ಮುಂಬಯಿ ಇಲಾಖೆಯ ಕನ್ನಡ ನಕಾಶೆ.	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ.	೩	೦	೦
೨	ನರಗುಂದ ಜಿ. ಎಸ್. ಕನ್ನಡ ಬಾಲರಾಮಾಯಣ.	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಅಂಗ್ಲೋ ಹ್ವರ್ನಾಕ್ಯೂಲರ ಶಾಲೆಗಳಲ್ಲಿ ಇನಾಮುಗಳ ಬಗ್ಗೆ ಮತ್ತು ಲೈಬ್ರರಿಗಳ ಬಗ್ಗೆ.	೦	೮	೦

ಪುಣೆ ಡಿರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್‌ರವರ ಆಫೀಸು.
೧೪-೨-೧೯೧೩.

(Sd) P. Wren.
ನಿ. ಡಿರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ್.

ದಕ್ಷಿಣಭಾಗದ ದೇಶಭಾಷೆಯ ಫಾಯನಲ್ ಪರೀಕ್ಷೆಯು.

೧೯೦೩ನೇ ಇಸ್ವಿಯ ೨೧ನೇ ನವಂಬರ ತಿಂಗಳ ಮುಂಬೈಯಿ ಸರಕಾರಿ ಗ್ಯಾಝಿಟೀನ ಮೊದಲನೆಯ ಭಾಗದ ೧೪೯೪-೧೪೯೬ನೆಯ ಪುಟಗಳಲ್ಲಿ ಪ್ರಸಿದ್ಧಪಡಿಸಿದ ನಿಯಮಗಳಿಗನುಸರಿಸಿ ಸನ್ ೧೯೧೩-೧೪ನೇ ಇಸ್ವಿಯ ದೇಶಭಾಷೆಯ ಫಾಯನಲ್ ಸರ್ಟಿಫಿಕೀಟ ಪರೀಕ್ಷೆಗೆ ದಕ್ಷಿಣಭಾಗದ (ಧಾರವಾಡ, ಬೆಳಗಾವ, ವಿಜಾಪೂರ, ಕಾರವಾರ, ರತ್ನಾಗಿರಿ, ಕುಲಾಬಾ) ಹಾಗೂ ಕೊಲ್ಹಾಪುರ ಮತ್ತು ಇತರ ದೇಶೀಯ ಸಂಸ್ಥಾನಗಳಲ್ಲಿರುವ ಉಮೇದವಾರರ ದೆಸೆಯಿಂದ ಕೆಳಗೆ ಬರೆದ ಪುಸ್ತಕಗಳು ಅರಿಸಲ್ಪಟ್ಟವೆಃ—

೨. ಬೆಳಗಾವ, ವಿಜಾಪೂರ, ಕಾರವಾರ, ಸೆಂಟರುಗಳಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲಿಯೂ, ಧಾರವಾಡ ಸೆಂಟರಿನಲ್ಲಿ ಕನ್ನಡದಲ್ಲಿ ಮಾತ್ರವೂ, ರತ್ನಾಗಿರಿ, ಕುಲಾಬಾ, ಕೊಲ್ಹಾಪೂರ ಸೆಂಟರುಗಳಲ್ಲಿ ಮರಾಠಿಯಲ್ಲಿ ಮಾತ್ರವೂ ತೆಗೆದುಕೊಳ್ಳಲಾಗುವದುಃ—

ಧಾರವಾಡ ಜಿಲ್ಲೆಯಲ್ಲಿ ವಾಸವಾಗಿದ್ದು ಮರಾಠೀ ಫ್ಹನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೂಡ್ರಲಪೇಕ್ಷಿಸುವ ಉಮೇದವಾರರು ಮೆಸ್ಸರ್ಸ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಬೆಳಗಾವಿ ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ರಬಹುದು.

ಮರಾಠಿಭಾಷೆ.

೧. ಗದ್ಯಃ—ಹೊಸ ಕ್ರಮಿಕ ಪುಸ್ತಕಮಾಲೆಯ ೭ನೇ ಪುಸ್ತಕ ಪೂರ್ಣ.

೨. ಪದ್ಯಃ—ಹೊಸ ಕ್ರಮಿಕ ಪುಸ್ತಕಮಾಲೆಯ ೭ನೇ ಪುಸ್ತಕದ ೬ನೆಯ ಪುಟದಿಂದ ೧೫೪ನೆಯ ಪುಟದ ವರೆಗೆ ಇರುವ ಪದ್ಯಗಳ ೩೦೦ ಪಂಕ್ತಿಗಳನ್ನು ಬಾಯಿಪಾಠ ಅನ್ನುವದೂ, ಅವುಗಳ ಅರ್ಥ ಹೇಳುವದೂ.

ಕನ್ನಡಭಾಷೆ.

೧. ಗದ್ಯಃ—ಹೊಸ ಕ್ರಮಿಕ ಪುಸ್ತಕ ಮಾಲೆಯ ೭ನೇ ಪುಸ್ತಕ ಪೂರ್ಣ.

೨. ಪದ್ಯಃ—ಹೊಸ ಕ್ರಮಿಕ ಪುಸ್ತಕ ಮಾಲೆಯ ೭ನೇ ಪುಸ್ತಕದ ೨೮ನೆಯ ಪಾಠದಿಂದ ೫೫ನೆಯ ಪಾಠದ ವರೆಗೆ ಇರುವ ಪದ್ಯಗಳ ೩೦೦ ಪಂಕ್ತಿಗಳನ್ನು ಬಾಯಿಪಾಠ ಅನ್ನುವದೂ, ಅವುಗಳ ಅರ್ಥ ಹೇಳುವದೂ.

ಉರ್ದು ಭಾಷೆ.

೧. ಗದ್ಯ:—ಲಾಲಾ ಶಂಕರದಾಸ ಇವರು ಬರೆದ ಗುಲ್‌ದಸ್ತಾಯಿ ತಾಹಬೀಬ.

೨. ಪದ್ಯ:—" ಮಜಮುಯಿ ಸುಖುನ್ ಭಾಗ ೧ " ಎಂಬ ಪುಸ್ತಕದ ಆರಂಭದ ೧೫೦ ದ್ವಿಪದಿಗಳನ್ನು ಬಾಯಿಪಾಠ ಹೇಳುವದೂ, ಅವುಗಳ ಅರ್ಥ ಹೇಳುವದೂ.

ಧಾರವಾಡ ಎ. ಇ. ದ. ಭಾ. ಆಫೀಸ, ತಾ. ೨೯ನೇ ನವಂಬರ ೧೯೧೩.

B. Y. Jathar.
ಅಕ್ಟಿಂಗ ಎಜ್ಯುಕೇಶನಲ್ ಇ. ದ. ಭಾ.

೧೯೧೪ ನೆಯ ಇಸವಿಯ ವರ್ಧಪ್ರಾಯಿರ್ಕು ಪರೀಕ್ಷೆ.

ಕನ್ನಡದಲ್ಲಿ ಆಗತಕ್ಕ ವರ್ಧಪ್ರಾಯಿರ್ಕು ಪರೀಕ್ಷೆಯನ್ನು ೧೯೧೪ ನೆಯ ಇಸವಿಯ ದಶಂಬರ ತಿಂಗಳ ೧೫ ನೆಯ ತಾರೀಖು ಸೋಮವಾರ ದಿವಸದಿಂದ, ಕೆಳಗೆ ಸಹಿ ಮಾಡಿದವರ ಕಡೆಯಿಂದ ೧೯೧೬ ನೆಯ ಇಸವಿಯ ಫೆಬ್ರುವರಿ ತಿಂಗಳ ಕನ್ನಡ ಶಾಲಾಪತ್ರಕದ ೫೯-೪೦ ನೆಯ ಪುಟಗಳಲ್ಲಿ ಪ್ರಕಟಿಸಲ್ಪಟ್ಟ ನಿಯಮಗಳಿಗನುಸರಿಸಿ, ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತೆಗೆದುಕೊಳ್ಳಲಾಗುವದು. ಸದರೀ ಪರೀಕ್ಷೆಯಲ್ಲಿ ೪೦ ರೂಪಾಯಿಯ ಬಷ್ಷೀಸು ಒಂದು, ೨೦ ರೂಪಾಯಿಯ ಬಷ್ಷೀಸು ಒಂದು ಈ ಪ್ರಕಾರ ಎರಡು ಬಷ್ಷೀಸುಗಳಿರುವವು. ಪರೀಕ್ಷೆಗೆ ಬರತಕ್ಕ ಉಮೇದವಾರರು ತಮ್ಮ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ತೀರ ತಡಮಾಡಿಯಾದರೆ, ೧೯೧೪ ನೆಯ ನವಂಬರ ೨೦ ನೆಯ ತಾರೀಖಿಗಾಗಲಿ, ಅಥವಾ ಅದರ ಪೂರ್ವದಲ್ಲಿ ತಪ್ಪದೆ ಮುಟ್ಟುವಂತೆ ಕಳಿಸಬೇಕು. ಪರೀಕ್ಷೆಯು ನೇಮಿಸಿದ ದಿವಸ ೧೦॥ ಘಂಟೆಗೆ ಪ್ರಾರಂಭವಾಗುವದು.

Sd/ P. Lory.
ಎಜ್ಯುಕೇಶನಲ್ ಇನಸ್ಪೇಕ್ಟರ ದಕ್ಷಿಣಭಾಗ.

ಶಾಲಾಪತ್ರಕ.

ಕ ಳ್ಳ. | ಮಾರ್ಚ ೧೯೧೩. | ಸಂಚಿಕೆ ೩.

ಸ್ಫುಟವಿಷಯಗಳು.

೧. ಬ್ರಿಟಿಶ ರಾಜಛತ್ರದ ಕೆಳಗಿನ ಹಿಂದುಸ್ತಾನದ ರಾಜ್ಯಕಾರಭಾರ

ಹಿಂದುಸ್ತಾನದ ಖನಿಜ ದಲ್ಲಿ ಹಿಂದಿನ ಯಾವ ರಾಜ್ಯದಲ್ಲಿಯೂ ಇಲ್ಲದಂಥ
ದ್ರವ್ಯಗಳ ಶೋಧ. ಹಲವು ನೂತನ ಖಾತೆಗಳು ಇರುವವು. "ಜಿಆ
ಲಾಜಿಕಲ್ ಸರ್ವೆ ಆಫ್ ಇಂಡಿಯಾ" ಎಂಬ ಖಾತೆಯು ಅವುಗಳಲ್ಲಿ ಒಂದಾ
ಗಿರುವದು. ಈ ದೇಶದ ಯಾವ ಯಾವ ಭಾಗದ ಭೂಗರ್ಭದಲ್ಲಿ ಯಾವ
ಯಾವ ಪದಾರ್ಥಗಳು ಎಷ್ಟೆಷ್ಟು ಇರುವವು? ಅವುಗಳಲ್ಲಿ ಯಾವ ಯಾವ
ಗುಣಧರ್ಮಗಳಿರುವವು? ಸಾರ್ವಜನಿಕ ಹಿತಕ್ಕಾಗಿ ಅವುಗಳನ್ನು ಹ್ಯಾಗೆ
ಉಪಯೋಗಿಸಬಹುದು? ಇವೇ ಮೊದಲಾದ ಸಂಗತಿಗಳನ್ನು ಶೋಧಿಸುವ
ದು ಈ ಖಾತೆಯವರ ಕೆಲಸವಾಗಿರುವದು. ಪಾಶ್ಚಾತ್ಯದೇಶಗಳಲ್ಲಿ ಇದೊಂದು
ಸ್ವತಂತ್ರವಾದ ವಿದ್ಯೆಯೆಂದು ತಿಳಿಯಲ್ಪಡುತ್ತದೆ; ಹಾಗೂ ಈ ವಿಷ
ಯದ ಸ್ವತಂತ್ರವಾದ ಶಾಸ್ತ್ರವೂ ಇರುವದು. ಪಾಶ್ಚಾತ್ಯರು ಇದರ ಸಂಬಂಧ
ದಿಂದ ಅನೇಕ ಗ್ರಂಥಗಳನ್ನು ಬರೆದಿರುವರು. ಅವುಗಳಲ್ಲಿ ಈ ವಿಷಯದ
ಬೇರೆ ಬೇರೆ ಸಿದ್ಧಾಂತಗಳು ಹೇಳಲ್ಪಟ್ಟಿರುವವು. ಶೋಧಕರು ಆ ಸಿದ್ಧಾಂತ
ಗಳ ಧೋರಣವನ್ನು ಅನುಸರಿಸಿಯೇ ಬೇರೆ ಬೇರೆ ಶೋಧಗಳನ್ನು ಮಾಡು
ತಿರುವರು. ಆದರೆ ಈ ವಿದ್ಯೆಯು ನಮ್ಮ ದೇಶಕ್ಕೆ ತೀರ ಹೊಸದಾಗಿರುವದರಿಂದ
ಇಂಥ ಅಧಿಕಾರಿಗಳನ್ನು ಯುರೋಪದಿಂದಲೇ ತರಿಸಬೇಕಾಗುವದು. ಈ
ದೇಶದ ಭೂಗರ್ಭದೊಳಗಿನ ಪದಾರ್ಥಗಳ ಪರಿಶೋಧನೆದಿಂದ ಒಕ್ಕಲತನ
ಕ್ಕೂ ಖಾಣಿಗಳನ್ನು ತೋಡುವದಕ್ಕೂ ವಿಶೇಷ ಅನುಕೂಲವಾಗುವದು.
ಜಿಆಲಾಜಿಕಲ್ ಸರ್ವೆ ಖಾತೆಯ ಅಧಿಕಾರಿಗಳು ನಮ್ಮ ದೇಶದ ಬೇರೆ
ಬೇರೆ ಭಾಗದ ಭೂಗರ್ಭವನ್ನು ಅವಲೋಕಿಸಿ ಇಡೀ ಹಿಂದುಸ್ತಾನದ

ಭೂಗರ್ಭ ಸಂಬಂಧದ ನಕಾಶೆಗಳನ್ನು ತಯಾರಿಸಿರುವರು. ಇವುಗಳ
ಅನೇಕ ವಿಲಕ್ಷಣ ಸಂಗತಿಗಳು ಗೊತ್ತಾಗಿರುವವು. ಹಿಮಾಲಯದ ಶಿಖ
ಲ್ಲಿ ಶಿಂಪುಗಳ ಅವಶೇಷಗಳು ದೊರೆಯುವವು. ಇದರ ಮೇಲಿಂದ ಬ
ನೊಂದು ಕಾಲದಲ್ಲಿ ಆ ಭಾಗವು ಸಮುದ್ರದ ತಳದಲ್ಲಿ ಮುಳುಗಿಕೆ
ತ್ತೆಂದು ಗೊತ್ತಾಗುವದು. ಅದರಂತೆ ದಕ್ಷಿಣಹಿಂದುಸ್ತಾನದೊಳಗಿನ
ಲಿನ ಭೂಗರ್ಭದಲ್ಲಿ ಜ್ವಾಲಾಮುಖಿಪರ್ವತದ ಸ್ಫೋಟದಿಂದ ಹೊರಡ
ಪದಾರ್ಥಗಳ ಅವಶೇಷಗಳು ದೊರೆಯುವವು. ಇದರಿಂದ ಆ ಸ್ಥಳ
ಪ್ರಾಚೀನಕಾಲದಲ್ಲಿ ಜ್ವಾಲಾಮುಖಿಪರ್ವತಗಳಿದ್ದು ಅವು ಕಾಲಚಕ್ರದ ಪ
ಮೆಯಿಂದ ಈಗ ಭೂಗತವಾಗಿರಬೇಕೆಂದು ಗೊತ್ತಾಗುವದು.

ಜಿಆಲಾಜಿಕಲ್ ಸರ್ವೆ ಖಾತೆಯವರ ಶೋಧದಿಂದ ಕಲ್ಲಿದ್ದಲಿಯ
ಬಿಟ್ಟು ಉಳಿದ ಯಾವತ್ತು ಖನಿಜಗಳನ್ನು ನಮ್ಮ ಪೂರ್ವಜರು ಖಣಿಗಳಿ
ಗಿಂದ ತೆಗೆದು ಉಪಯೋಗಿಸುತ್ತಿದ್ದರೆಂದು ಗೊತ್ತಾಗಿದೆ. ದೂರ ದೂ
ಅಡವಿಗಳಲ್ಲಿ ಪೂರ್ವಕಾಲದಲ್ಲಿ ತೆಗೆದ ಕಬ್ಬಿಣದ ಖಣಿಗಳ ತಗ್ಗು
ಈಗಲೂ ಕಣ್ಣಿಗೆ ಬೀಳುವವು. ಹಿಂದುಸ್ತಾನದ ಕಬ್ಬಿಣದಷ್ಟು ಶುದ್ಧ
ಕಬ್ಬಿಣವು ಇತರ ತೀರ ಸ್ವಲ್ಪ ದೇಶಗಳಲ್ಲಿ ಮಾತ್ರ ದೊರೆಯುವದು. ಪ್ರಾ
ನಕಾಲದಲ್ಲಿ ಹಿಂದುಸ್ತಾನದ ಬೇರೆ ಬೇರೆ ಕಡೆಗಳಲ್ಲಿ ಕಬ್ಬಿಣವನ್ನು
ಯುತ್ತಿದ್ದರು. ಆದರೆ ಆಗಿನ ಕಾರಖಾನೆಗಳಲ್ಲಿ ಕಟ್ಟಿಗೆಯ ಇದ್ದಲಿಯ
ಉಪಯೋಗಿಸುತ್ತಿದ್ದರಾದ್ದರಿಂದ ಕಬ್ಬಿಣದ ಬೆಲೆಯು ಹೆಚ್ಚಿಗೆ ಬೀಳುತ್ತಿ
ಆದರೆ ಈಗ ಖಣಿಗಳೊಳಗಿನ ಇದ್ದಲಿಯನ್ನು ಉಪಯೋಗಿಸುವದರ
ಖರ್ಚು ಕಡಿಮೆ ಹತ್ತಿ ಕಬ್ಬಿಣದ ಖಣಿಯ ಕಂಪನಿಯವರು ತಮ್ಮ ಕ
ಖಾನೆಯನ್ನು ಕಲಕತ್ತೆಯ ಪಶ್ಚಿಮಭಾಗದಲ್ಲಿ ಕಲ್ಲಿದ್ದಲಿಯು ವಿಶೇಷ
ದೊರೆಯುವ "ಬಾರಾಕಾರ" ಎಂಬ ಊರಿನ ಹತ್ತರ ಹಾಕಿರುವರು.

ಹಿಂದುಸ್ತಾನದಲ್ಲಿ ಬಂಗಾರವು ನದಿಯ ಉಸುಕಿನಲ್ಲಿಯೂ ಖಣಿ
ಲ್ಲಿಯೂ ದೊರೆಯುವದು. ನದಿಯ ಉಸುಕಿನೊಳಗಿಂದ ಬಂಗಾರದ ಕ
ಳನ್ನು ಅರಿಸುವದು ಬಹಳ ಶ್ರಮಸಾಧ್ಯವಾದ ಕೆಲಸವಾಗಿರುವದು. ಆದ
ಜಾಲಗಾರರೆಂಬ ಬಡವರಾದ ಎಷ್ಟೋ ಜನರು ಆ ಉದ್ಯೋಗದಿಂದ ತ
ಜೀವಿತಾರ್ಥವನ್ನು ಸಾಗಿಸಿಕೊಳ್ಳುವರು. ಮೈಸೂರಪ್ರಾಂತದಲ್ಲಿ ಕಲ್ಲಿ
ಬಂಗಾರವು ವಿಶೇಷವಾಗಿ ದೊರೆಯುವದು. ಪ್ರಾಚೀನಕಾಲದಲ್ಲಿ ಖಣಿಗಳ
ಬಹಳ ಆಳವಾಗಿ ಅಗಿಯುವದಕ್ಕೆ ಬರುತ್ತಿದ್ದಿಲ್ಲವಾದ್ದರಿಂದ, ಅದ

ಿಚ್ಚಿಗೆ ಉತ್ಪನ್ನವಾಗುತ್ತಿದ್ದಿಲ್ಲ. ಆದರೆ ಈಗಿನ ಕಾಲದಲ್ಲಿ ಉಗೆಯ ಯಂತ್ರ
ಳ ಹಾಗು ವಿದ್ಯುದ್ಯಂತ್ರಗಳ ಸಹಾಯದಿಂದ ಖಣಿಗಳನ್ನು ಬೇಕಾದಷ್ಟು
ಳವಾಗಿ ಅಗಿಯಬಹುದಾಗಿದೆ. ಅದರಿಂದ ಇಲ್ಲಿಯ ಬಂಗಾರದ ಖಣಿಗಳ
ುತ್ಪನ್ನವು ಅತಿಶಯವಾಗಿ ಬೆಳೆದಿರುವದು. ಮೈಸೂರ ವ್ರಾಂತದೊಳಗಿನ
ಲ್ಲ ಖಣಿಗಳಲ್ಲಿ ಕೋಲಾರದ ಖಣಿಗಳು ಮೊದಲನೆಯವಾಗಿರುವವು. ಇವು
ಳನ್ನು ಯುರೋಪಿಯನ್ ಕಂಪನಿಗಳು ಅಗಿಸುತ್ತಿರುವವು. ಆ ಕಂಪನಿಗ
ಳ್ಲಿ ಆರೇಳು ಶಾಖೆಗಳಿದ್ದು ಆ ಎಲ್ಲ ಶಾಖೆಗಳ ಉತ್ಪನ್ನವು ಪ್ರತಿ ತಿಂಗಳಿಗೆ
೧೫ ಲಕ್ಷ ರೂಪಾಯಿಗಳ ವರೆಗೆ ಇರುವದು. ಆ ಕಂಪನಿಯವರು ಭೂಮಿ
ಯ ಸ್ವಾಮಿತ್ವದ ಸಲುವಾಗಿ ಮೈಸೂರ ಮಹಾರಾಜನಿಗೆ ಉತ್ಪನ್ನದಲ್ಲಿ ಶೇಕ
ಾ ೫ನೆಯ ಭಾಗವನ್ನು ಕೊಡುವರು. ಈ ಖಣಿಗಳಲ್ಲಿ ಸಾವಿರಾರು
ಕೂಲಿಕಾರರು ಹಗಲೂ ಇರುಳೂ ಕೆಲಸವಮಾಡುವರು. ಈ ಎಲ್ಲ
ಖರ್ಚು ತಿಂಗಳಿಗೆ ಸುಮಾರು ೬ ಲಕ್ಷ ರೂಪಾಯಿ ಬರುವದಂತೆ. ಈ ಖಣಿ
ಗಳ ಕೆಲಸಕ್ಕೆ ಬೇಕಾಗುವ ಯಾವತ್ತು ಯಂತ್ರಗಳು ಶಿವಸಮುದ್ರದ ಕಾವೇ
ರಿಯ ಧಬಧಬೆಯ ನೀರಿನ ಶಕ್ತಿಯಿಂದ ನಡೆಯುವ ಯಂತ್ರದಿಂದ ಹುಟ್ಟುವ
ವಿದ್ಯುತ್ತಿನಿಂದ ನಡೆಯುವವು.

ರತ್ನದ ಖಣಿಗಳ ವಿಷಯವಾಗಿ ಹಿಂದುಸ್ತಾನವು ಬಹಳ ಪ್ರಾಚೀನ
ಕಾಲದಿಂದ ಹೆಸರಾಗಿರುವದು. ಈಗಿನ ಬ್ರಿಟಿಶಸಾಮ್ರಾಜ್ಯಾಧಿಪರಾದ ಪಂಚ
ಮ ಜಾರ್ಜ ಬಾದಶಹರವರ ಮುಕುಟದಲ್ಲಿರುವ ಜಗತ್ಪ್ರಸಿದ್ಧವಾದ ಕೊಹಿ
ನೂರ ರತ್ನವು ಹಿಂದುಸ್ತಾನದ ಖಣಿಯಲ್ಲಿಯೇ ದೊರೆತಿರುವದು. ಸದ್ಯಕ್ಕೆ
ಪನ್ನಾ ಎಂಬಲ್ಲಿಯ ರತ್ನದ ಖಣಿಯು ವಿಶೇಷ ಹೆಸರಾಗಿರುವದು. ಅದರ
ಉತ್ಪನ್ನವು ಪ್ರತಿವರ್ಷಕ್ಕೆ ಹಿಂದು ಲಕ್ಷ ರೂಪಾಯಿಯ ವರೆಗೆ ಇರುವದು.
ಬ್ರಹ್ಮದೇಶದಲ್ಲಿ ಮಾಣಿಕದ ಖಣಿಗಳಿರುವವು.

ಹಿಂದುಸ್ತಾನದಲ್ಲಿ ಬೆಳ್ಳಿಯು ಎಲ್ಲಿಯೂ ದೊರೆಯುವದಿಲ್ಲ. ಮೊದಲು
ಕೆಲಕೆಲವು ಕಡೆಗಳಲ್ಲಿ ನಡೆಯುತ್ತಿದ್ದ ತಾಮ್ರದ ಖಣಿಗಳು ಈಗ ನಿಂತು
ಹೋಗಿರುವವು. ಬ್ರಹ್ಮದೇಶದೊಳಗಿನ ತೆನಾಸರಿಮ್ ವ್ರಾಂತದಲ್ಲಿಯ ತವ
ನ ಖಣಿಗಳನ್ನು ಚೀನೀ ಜನರು ನಡೆಯಿಸುವರು. ಇದಲ್ಲದೆ ಹಿಮಾಲಯದ
ನೆರೆಯಲ್ಲಿಯೂ ತವರವು ದೊರೆಯುವದು. ಪಂಜಾಬದೊಳಗಿನ ಕೆಲವು
ಗುಡ್ಡಗಳಲ್ಲಿ ಅಂಟಿವುನಿ ಧಾತುವು ದೊರೆಯುವದು. ಅದನ್ನು ಕಣ್ಣಿಗೆ
ಹಚ್ಚುವ ಸುರ್ಮಾ ಎಂಬ ಕರೇ ಪುಡಿಯನ್ನು ಮಾಡುವದಕ್ಕಾಗಿ ಉಪಯೋ

ಗಿಸುವರು. ಹಾಗು ಈ ಧಾತುವು ಅಚ್ಚಿನ ಮೊಳೆಗಳನ್ನು ಮಾಡುವದಕ್ಕೆ ವಿಶೇಷವಾಗಿ ಬೇಕಾಗುವದು. ಅದು ಸದ್ಯಕ್ಕೆ ಯುರೋಪದಿಂದ ಬರುವದು. ಪಂಜಾಬದಲ್ಲಿ ಉಪ್ಪಿನ ಗುಡ್ಡಗಳಿರುವವು. ರಜಪೂತಸ್ಥಾನದೊಳಗಿನ ಸಾಂಬರ ಸರೋವರದಿಂದ ಪ್ರತಿವರ್ಷ ಬಹಳ ಉಪ್ಪು ಹೊರಡುವದು. ಕಲ್ಲೆಣ್ಣೆಯು ಮುಖ್ಯವಾಗಿ ಬ್ರಹ್ಮದೇಶದಲ್ಲಿ ದೊರೆಯುವದು; ಅಲ್ಲದೆ ಪಂಜಾಬದಲ್ಲಿಯೂ ಆಸಾಮಪ್ರಾಂತದಲ್ಲಿಯೂ ತುಸು ಕಡಿಮೆ ಮಾನದಿಂದ ದೊರೆಯುವದು. ಇದರೊಳಗಿನ ಎಷ್ಟೋ ಕಾರಖಾನೆಗಳನ್ನು ನಡೆಯಿಸಲಿಕ್ಕೆ ಕಟ್ಟಿಗೆಯು ಸಾಕಾಗುವದಿಲ್ಲ. ಅವುಗಳಿಗೆ ಕಲ್ಲಿದ್ದಲಿಯು ಬೇಕಾಗಿರುವದು. ಕಲ್ಲಿದ್ದಲಿಯು ಬೆಲ್ಜವದಲ್ಲಿಯೂ ಇಂಗ್ಲಂಡದಲ್ಲಿಯೂ ವಿಪುಲವಾಗಿ ದೊರೆಯುವದು. ಅವುಗಳ ಆಧಾರದಿಂದ ಇಲ್ಲಿಯ ಕಾರಖಾನೆಗಳು ಅಭ್ಯುದಯ ಹೊಂದಿರುವವು.

ಬಹುಕಾಲದ ವರೆಗೆ ಹಿಂದುಸ್ಥಾನದಲ್ಲಿ ಕಬ್ಬಿಣದ ಕಾರಖಾನೆಯು ದೊಡ್ಡ ಪ್ರಮಾಣದಿಂದ ಹೊರಟಿದ್ದಿಲ್ಲ. ಆದರೆ ಸದ್ಯಕ್ಕೆ ಇಂಥಾದ್ದೊಂದು ಪ್ರಚಂಡವಾದ ಕಾರಖಾನೆಯು ಪರಲೋಕವಾಸಿಗಳಾದ ಮಿ. ಟಾಟಾ ಇವರ ಪರಿಶ್ರಮದಿಂದ ಮಧ್ಯಪ್ರಾಂತದಲ್ಲಿ ಆರಂಭವಾಗಿದ್ದು, ಅದಕ್ಕೆ ಸರಕಾರದ ಆಶ್ರಯವಾದರೂ ಚನ್ನಾಗಿ ದೊರೆತಿರುವದು. ಅದರಲ್ಲಿ ತಯಾರಾಗುವ ಕಬ್ಬಿಣಕ್ಕೆ ಗಿರಾಕಿಗಳಾದರೂ ವಿಶೇಷವಾಗಿರುವರು.

ಹಿಂದುಸ್ಥಾನದ ಭೂಗರ್ಭದೊಳಗಿನ ಶಿಲೆಗಳ ಪರೀಕ್ಷೆಯಿಂದ ಈ ದೇಶದಲ್ಲಿ ಕಲ್ಲಿದ್ದಲಿಯು ಹೆಚ್ಚಿಗೆ ದೊರೆಯಲಾರದೆಂದು ಗೊತ್ತಾಗಿರುವದು ಈ ದೇಶದಲ್ಲಿ ಕಲ್ಲಿದ್ದಲಿಯು ಬೇರೆ ಬೇರೆ ಕಡೆಗಳಲ್ಲಿ ತುಸು ತುಸು ದೊರೆಯುವದು. ಆದರೂ ದೊಡ್ಡ ಪ್ರಮಾಣದಿಂದ ದೊರೆಯುವಂತೆ ಇಲ್ಲ. ಈ ಕಲ್ಲಿದ್ದಲಿಯು ಗಲಔಖನೇ ಇಸವಿಯಿಂದ ಕಾರಖಾನೆಗಳಲ್ಲಿ ಉಪಯೋಗಿಸಲ್ಪಡುತ್ತಾ ಇರುವದು. ಇಂಗ್ಲಿಸ ಕಂಪನಿಯವರು ಈ ದೇಶದಲ್ಲಿ ಗಲಆಂನೇ ವರುಷ ಮೊಟ್ಟ ಮೊದಲು ಕಲ್ಲಿದ್ದಲಿ ಖಣಿಯನ್ನು ಕಲಕತ್ತೆಯ ನೆರೆಯಲ್ಲಿ ರಾಣೀಗಂಜ ಎಂಬಲ್ಲಿ ಆರಂಭಿಸಿದರು. ಈಗ ಅಲ್ಲಿ ಅನೇಕ ಖಣಿಗಳು ಆರಂಭಿಸಲ್ಪಟ್ಟು ಅವುಗಳಲ್ಲಿ ಪ್ರತಿವರ್ಷ ಲಕ್ಷಾಂತರ ರೂಪಾಯಿಯ ಕಲ್ಲಿದ್ದಲಿಯು ಹೊರಡುವದು. ಆಸಾಮು, ಮಧ್ಯಹಿಂದುಸ್ಥಾನ ನಿಜಾಮನ ರಾಜ್ಯ, ಮುಂತಾದ ಕಡೆಗಳಲ್ಲಿಯೂ ಬೇರೆ ಕಡೆಗಳಲ್ಲಿಯೆ. ಕಲ್ಲಿದ್ದಲಿಯು ದೊರೆಯುವದು.

ಇದರಂತೆ ಇನ್ನೂ ಅನೇಕ ಖನಿಜಗಳು ನಮ್ಮ ದೇಶದ ಭೂಗಭ‌ದಲ್ಲಿ ಅಡಗಿಕೊಂಡಿರಬಹುದು. ಆದರೆ ಅವುಗಳನ್ನು ಗೊತ್ತು ಹಚ್ಚುವದು ನಮ್ಮ ಜನರಿಗೆ ಸದ್ಯಕ್ಕೆ ಸಾಧ್ಯವಿಲ್ಲದ ಕಾರಣ ಅವು ಹಾಗೆಯೇ ಬಿದ್ದುಕೊಂಡಿರುವವು. ಆದರೂ ನಮ್ಮ ರಾಜ್ಯಕರ್ತರ ಉತ್ತೇಜನದಿಂದ ನಮ್ಮವರ ಮನಸ್ಸು ಈ ಕಡೆಗೆ ಹೊರಳಿ ಆ ಸಂಬಂಧದ ವಿದ್ಯೆಯು ಅವರಿಗೆ ದೊರೆಯುವ ಆಶೆಯದೆ.

ಬಾಲಕರ ದೃಷ್ಟಿರಕ್ಷಣೆ.

೨. ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ದೃಷ್ಟಿಸಂರಕ್ಷಣಾರ್ಥವಾಗಿ ಮುಂಬಯಿಯ "ಸ್ಯಾನಿಟರಿ ಅಸೋಸಿಯೇಶನ್" ಎಂಬ ಸಂಘದವರು ಕೆಲವು ನಿಯಮಗಳನ್ನು ಪ್ರತಿಷ್ಠಪಡಿಸಿರುವರು. ಆ ನಿಯಮಗಳನ್ನು ಧಾರವಾಡದ ಸ್ಯಾನಿಟರಿ ಅಸೋಸಿಯೇಶನದ ಆನರರಿ ಸೆಕ್ರೆಟರಿಯವರು, ಈ ಭಾಗದ ಶಾಲೆಗಳಿಗೆ ಅವು ಉಪಯುಕ್ತವಾಗಿ ಕಂಡರೆ, ಶಾಲಾಪತ್ರಕದಲ್ಲಿ ಪ್ರಸಿದ್ಧಪಡಿಸಬಹುದೆಂದು ನಮ್ಮ ಕಡೆಗೆ ಕಳುಹಿಸಿರುವರು. ಅವುಗಳನ್ನು ಇದರಡಿಯಲ್ಲಿ ಕೊಟ್ಟಿದ್ದೇವೆ. ಶಾಲಾ ಮಾಸ್ತರರು ಈ ನಿಯಮಗಳನ್ನು ದಪ್ಪಕಾಗದದ ಮೇಲೆ ಚಕ್ಕನ್ನಾಗಿ ಬರೆದು ರಟ್ಟಿನಮೇಲೆ ಅಂಟಿಸಿ ಶಾಲೆಯ ಗೋಡೆಗೆ ತೂಗಹಾಕಿ, ಅವುಗಳನ್ನು ಶಾಲೆಯೊಳಗಿನ ವಿದ್ಯಾರ್ಥಿಗಳು ಅನುಸರಿಸುವಂತೆ ನೋಡಿಕೊಂಡರೆ, ವಿದ್ಯಾರ್ಥಿಗಳಲ್ಲಿ ಈಗ ಬೆಳೆಯುತ್ತ ಹೋಗುತ್ತಿರುವ ದೃಷ್ಟಿದೋಷಕ್ಕೆ ಪ್ರತಿಬಂಧ ಉಂಟಾಗಿ, ಹುಡುಗರ ದೃಷ್ಟಿಯನ್ನು ಕೆಡಿಸುವದಕ್ಕೆ ಶಾಲೆಗಳು ಕಾರಣವಾಗಲಿಕ್ಕಿಲ್ಲವೆಂದು ಎಣಿಸುತ್ತೇವೆ:—

ಶಾಲೆಯಲ್ಲಿ ಹುಡುಗರು ಓದುವಬಗ್ಗೆ ನಿಯಮಗಳು.

೧. ಕಡಿಮೆ ಬೆಳಕಿನಲ್ಲಿ ಎಂದೂ ಓದಬೇಡರಿ.

೨. ಓದುವಾಗ ನಿಮ್ಮ ತಲೆಯನ್ನು ಯಾವಾಗಲೂ ಎತ್ತರಿಸಿರಿ.

೩. ಪುಸ್ತಕಕ್ಕಿಂತ ನಿಮ್ಮ ಕಣ್ಣುಗಳು ಹೆಚ್ಚು ಬೆಲೆಯುಳ್ಳವಿರುವವೆಂಬದನ್ನು ಲಕ್ಷದಲ್ಲಿಡಿರಿ.

೪. ಓದುವಾಗ ಪುಸ್ತಕವನ್ನು ಮೋರೆಯಿಂದ ಸುಮಾರು ೧೪ ಇಂಚ ದೂರ ಹಿಡಿಯಿರಿ.

೫. ಬೆಳಕು ನಿಮ್ಮ ಹಿಂದಿನಿಂದ, ಇಲ್ಲವೆ ಎಡಭುಜದ ಮೇಲಿಂದ ಬರಲಿ

೬. ನಿಮ್ಮ ಸುರಕ್ಷಿತತ್ವವೂ ನಿಮ್ಮ ಯಶಸ್ಸೂ ನಿಮ್ಮ ಕಣ್ಣುಗಳನ್ನು ಅವ ಲಂಬಿಸಿರುವವು; ಆದಕಾರಣ ಅವುಗಳಬಗ್ಗೆ ಎಚ್ಚರ ತೆಗೆದುಕೊಳ್ಳಿರಿ.

೭. ಕೆಲ ನಿಮಿಷಗಳವರೆಗೆ ಓದಿದನಂತರ ಪುಸ್ತಕವನ್ನು ಬಿಟ್ಟು ಬೇರೆ ಕಡೆಗೆ ನೋಡಿ ಕಣ್ಣುಗಳಿಗೆ ವಿಶ್ರಾಂತಿಯನ್ನು ಕೊಡಿರಿ.

೮. ಪುಸ್ತಕದ ಮೇಲೆ ಸೂರ್ಯನ ಪ್ರತ್ಯಕ್ಷ ಪ್ರಕಾಶವು ಬಿದ್ದಿರಲು ಎಂದೂ ಓದಬೇಡರಿ.

೯. ರಾತ್ರಿಯಲ್ಲಿ ಮಲಗುವಾಗಲೂ ಮುಂಜಾನೆ ಎದ್ದಕೂಡಲೆಯೂ ಕಣ್ಣು ಗಳನ್ನು ಸ್ವಚ್ಛವಾದ ನೀರಿನಿಂದ ತೊಳೆದುಕೊಳ್ಳಿರಿ.

೧೦. ಓದುವಾಗ ಬಳ್ಳಿಯ ಸ್ವಚ್ಛವಾದ ಬೆಳಕು ಇರುವದನ್ನು ಮನೆಗಾಣಿರಿ.

೧೧. ಎದುರಿನಿಂದ ಬೆಳಕು ಬರುವಲ್ಲಿ ಓದಬೇಡರಿ.

ಪೊಡಲು ಗಿಡದ ಮೇಲಿರುವ ಹುಳಗಳು.

೩. ಈ ಹುಳಗಳ ತತ್ತ್ರಿಗಳು ಪೊಡಲ, ನೆಲಗಡಲೆ (ಬುಯಿ ಮೂಗ) ಇವುಗಳ ಎಲೆಯ ಮೇಲೆ ಇರುತ್ತವೆ. ಅವುಗಳ ಆಕಾರವು ದುಂಡಗಿದ್ದು, ಅವು ಸ್ವಚ್ಛವಾದ ಹಳದೀ ಬಣ್ಣದವಿರುವವು. ಅವು ಎಲೆಗಳ ಕೆಳಗಾಗಲಿ, ಮೇಲಾಗಲಿ ಇರುವವು. ಒಮ್ಮೊಮ್ಮೆ ಅವು ಹುಲ್ಲಿನ ಮೇಲೂ ದೃಷ್ಟಿಗೆ ಬೀಳುವವು. ಆ ತತ್ತ್ರಿಗಳು ೩-೪ ದಿವಸಗಳಲ್ಲಿ ಒಡೆದು, ಅದರೊಳಗಿಂದ ಕರೇ ಬಣ್ಣದ ಹುಳಗಳು ಹೊರಬೀಳುವವು. ಈ ಹುಳ ಗಳು ತಾವು ಕೂಡ್ರುವ ಎಲೆಗಳ ಹಸರು ಭಾಗವನ್ನು ತಿಂದು ಅವುಗಳನ್ನು ಕಾಗದದ ಹಾಗೆ ಬೆಳ್ಳಗೆ ಮಾಡಿ ಅವುಗಳ ಶಿರಗಳನ್ನು ಮಾತ್ರ ಉಳಿಸು ವವು. ಒಂದು ಎಲೆಯ ಹಸರು ಭಾಗವನ್ನು ತಿಂದ ಬಳಿಕ ಆ ಹುಳಗಳು ಮತ್ತೊಂದು ಎಲೆಗೆ ಹೋಗುತ್ತವೆ. ಈ ಹುಳಗಳಿಗೆ ಒಂದು ಅಥವಾ ಎರಡು ವಾರಗಳಾಗಲು ಇವುಗಳ ಬಣ್ಣವು ತುಸು ಕಪ್ಪಿನಮೇಲೆ ಆಗುವದು. ಮತ್ತು ಅವುಗಳ ಬೆನ್ನಮೇಲೆ ಮಧ್ಯಭಾಗದಲ್ಲಿ ಹಳದೀ ಬಣ್ಣದ ಒಂದು ಗೆರೆಯು ಕಾಣುವದು. ಇದಕ್ಕೂ ಹೆಚ್ಚು ದಿವಸದ ಹುಳಗಳು ಕೆಂಪು ಬಣ್ಣದವಿರುವವು. ಹುಳದ ಬೆಳವಣಿಗೆಯು ಪೂರ್ಣವಾದಾಗ ಅದು ಎರಡು ಇಂಚು ಉದ್ದವಾಗುವದು. ಅದು ಬಳ್ಳೀ ಚಪಲವಾಗಿದ್ದು ಆಹಾರವನ್ನು ಹುಡುಕುವದಕ್ಕೆ ಬಹು ದೂರದವರೆಗೆ ಹೋಗುತ್ತದೆ. ಹುಳಗಳು ತತ್ತ್ರಿ

ಯಿಂದ ಹೊರಬಿದ್ದು, ಅವುಗಳಿಗೆ ಕೋಶಸ್ಥಿತಿಯು ಪ್ರಾಪ್ತವಾಗುವವರೆಗೆ ಅವು ಹತ್ತುಸಾರಿ ಪರೆ ಬಿಡುತ್ತವೆ. ಸಾಕಿದ ಹುಳಗಳಿಗೆ ಈ ಸ್ಥಿತಿಯು ಪ್ರಾಪ್ತವಾಗಬೇಕಾದರೆ ೪೫।೫೦ ದಿವಸಗಳು ಬೇಕಾಗುತ್ತವೆ. ಆದರೆ ತಮ್ಮ ಇಚ್ಛೆಯ ಮೇರೆಗೆ ತಿಂದು ಸ್ವತಂತ್ರವಾಗಿರುವ ಹುಳಗಳಿಗೆ ಇದಕ್ಕೂ ಕಡಿಮೆ ದಿವಸಗಳು ಸಾಕಾಗುತ್ತವೆ. ಹುಳದ ಬೆಳವಣಿಗೆಯು ಪೂರ್ಣವಾದ ಮೇಲೆ ಅದು ಮಳೆಯಾಗಿ ಭೂಮಿಯು ಮೆತ್ತಗಾದ ಬಳಿಕ ನೆಲದಲ್ಲಿ ೪ರಿಂದ ೭ ಇಂಚಿನವರೆಗೆ ಒಳಗೆ ಸೇರಿಕೊಳ್ಳುತ್ತದೆ. ಅಲ್ಲಿ ಅದು ಕೋಶವನ್ನು ಸಿದ್ಧಮಾಡಿಕೊಂಡು ಮತ್ತೊಂದು ಮಳೆಯಾಗುವವರೆಗೆ ಇರುತ್ತದೆ. ಒಮ್ಮೊಮ್ಮೆ ಅದರೊಳಗಿಂದ ಪಾತರಗಿತ್ತಿಯು ಹೊರಬೀಳಲಿಕ್ಕೆ ಹದಿನೈದು ದಿವಸಗಳು ಹಿಡಿಯುವವು. ಈ ಪಾತರಗಿತ್ತಿಗಳಲ್ಲಿ ಗಂಡುಹೆಣ್ಣುಗಳು ಕೂಡಿದ ಬಳಿಕ ಗಂಡು ಬೇಗನೆ ಸತ್ತು ಹೋಗುವದು. ಹೆಣ್ಣು ಮೂರು ನಾಲ್ಕು ದಿವಸಗಳವರೆಗೆ ತತ್ತೀ ಹಾಕಿ ಕಡೆಗೆ ಸಾಯುವದು.

ಈ ಪಾತರಗಿತ್ತಿಗಳನ್ನು ಹಿಡಿಯುವದಕ್ಕಾಗಿ ದೀಪದ ಬಲೆಗಳನ್ನು (Light lamp) ಉಪಯೋಗಿಸುವರು. ಸತುವಿನ ತಗಡಿನಿಂದ ಒಂದು ಕಂದೀಲು ಮಾಡಿ, ಅದಕ್ಕೆ ಒಂದು ಮಗ್ಗಲಿಗೆ ಕನ್ನಡಿಯನ್ನು ಕೂಡ್ರಿಸಬೇಕು. ಅದರಲ್ಲಿ ಚಿಮಣೀ ಎಣ್ಣೆ, ಕೊಬ್ಬರೆಯ ಎಣ್ಣೆ ಇವುಗಳ ಮಿಶ್ರಣದಿಂದ ದೀಪವನ್ನು ಹಚ್ಚಬೇಕು. ಅಗಲ ಬಾಯುಳ್ಳ ಒಂದು ಪಾತ್ರೆಯಲ್ಲಿ ನೀರು ಚಿಮಣಿಯ ಎಣ್ಣೆ ಇವುಗಳ ಮಿಶ್ರಣವನ್ನು ತುಂಬಿಡಬೇಕು. ಹೊಲದಲ್ಲಿ ಒಂದು ದಿನ್ನೆಯನ್ನು ನೋಡಿ ಅಲ್ಲಿ ಆ ಪಾತ್ರೆಯನ್ನು ಇಟ್ಟು ಅದರೊಳಗಿನ ನೀರಮೇಲೆ ಆ ಕಂದೀಲು ಜೋತಾಡುವಂತೆ ಮಾಡಬೇಕು, ಅಥವಾ ನೀರೊಳಗೆ ಒಂದು ತಿವಟಿಗೆಯನ್ನು ಇಟ್ಟು, ಅದರ ಮೇಲೆ ಕಂದೀಲು ಇಡಬೇಕು. ಅಂದರೆ, ಕಂದೀಲಿನ ಬೆಳಕಿಗಾಗಿ ಹುಳಗಳು ಬಂದು ಅದರಮೇಲೆ ಅಪ್ಪಳಿಸಿ ಪಾತ್ರೆಯೊಳಗಿನ ನೀರೊಳಗೆ ಬಿದ್ದು ಸತ್ತುಹೋಗುವವು.

ಮಿತಾಹಾರ.

೪. ಪ್ರಾಣಿಮಾತ್ರಕ್ಕೆಲ್ಲ ಒಂದಿಲ್ಲೊಂದು ಬಗೆಯ ಆಹಾರವು ಬೇಕೇ ಬೇಕು. ಅದು ಇಲ್ಲದಿದ್ದರೆ ಶರೀರಪೋಷಣವಾಗುವದಿಲ್ಲ. ನಮ್ಮ ಶರೀರಾರೋಗ್ಯವು ಆಹಾರವನ್ನೇ ಅವಲಂಬಿಸಿರುವದು. ಸೃಷ್ಟಿಯೊಳಗಿನ ಬೇರೆ ಎಷ್ಟೋ ಸಂಗತಿಗಳಂತೆ ಆಹಾರದ ಬಗ್ಗೆಯೂ

ಕೆಲವು ನಿಯಮಗಳು ಉಂಟು. ಆ ನಿಯಮಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಯಾದರೆ ಪುರುಷಾರ್ಥಸಾಧನಕ್ಕೆ ಅತ್ಯಾವಶ್ಯಕವಾದ ಶರೀರಾರೋಗ್ಯವು ಕೆಟ್ಟು ಹೋಗುವದು. ಅದರಿಂದ ಬಹಳ ಹಾನಿಯಾಗುವದು.

ಆಹಾರವನ್ನು ಯಾವಾಗಲು ಮಿತಿಯಿಂದ ತಕ್ಕೊಳ್ಳಬೇಕು. ಅದ ರಿಂದ ಹಾನಿಯಂತೂ ಇಲ್ಲೇ ಇಲ್ಲ. ಲಾಭಗಳು ಮಾತ್ರ ಬಹಳಿರುವವು. ಮಿತಾಹಾರದಿಂದ ಶರೀರವು ಹಗುರಾಗಿ ಯಾವದೊಂದು ಕೆಲಸವಮಾಡಲಿಕ್ಕೆ ಉತ್ಸಾಹವು ಬರುತ್ತದೆ; ಮೈಯಲ್ಲಿ ನೆಣಬೆಳೆಯದೆ ಪ್ರಕೃತಿಯು ನಿರೋಗಿ ಯಾಗಿರುವದು. ನಾವು ಉಂಡ ಎಲ್ಲ ಪದಾರ್ಥಗಳು ಪಚನವಾಗಲಿಕ್ಕೆ ಬೇಕು; ಅಂದರೆ ರಸರೂಪವನ್ನು ಹೊಂದಿ ರಕ್ತದಲ್ಲಿ ಕರಗಲಿಕ್ಕೆ ಬೇಕು. ನಾವು ಉಂಡ ಅನ್ನದ ಎಷ್ಟೋ ಭಾಗವು ಪಚನವಾಗದೆ ಅಪಕ್ವಸ್ಥಿತಿಯಲ್ಲಿ ಮಲದ್ವಾರದಿಂದ ಹೊರಗೆ ಹೋಗುತ್ತದೆ; ಇಲ್ಲವೆ, ಕರಳಿನಲ್ಲಿ ಹಾಗೇ ಉಳಿಯುತ್ತದೆ.

ಎಷ್ಟೋ ಪ್ರಸಂಗಗಳಲ್ಲಿ ಮಕ್ಕಳಿಗೆ ಹಸಿವೆಯಿಲ್ಲದೆ ತಾಯಂದಿರು ಅವರ ಬಾಯಲ್ಲಿ ಅನ್ನವನ್ನು ತುರುಕುತ್ತಿರುವದು ಒಮ್ಮೊಮ್ಮೆ ದೃಷ್ಟಿಗೆ ಬೀಳುತ್ತದೆ. ಹುಡುಗನು ಏಳಕರಿಸಿದರೆ ಅವನ ಬೆನ್ನಮೇಲೆ ಒಂದು ಗುದಿಕೆಯು ಇನಾಮಾಗಿ ದೊರೆಯುವದು. ತಾಯಂದಿರ ಮನಸಿನಲ್ಲಿ ಮಗನು ಬಹಳ ಅನ್ನ ವನ್ನು ಉಂಡು ಸಶಕ್ತನೂ ನಿರೋಗಿಯೂ ಆಗಿರಬೇಕೆಂದು ಇರುತ್ತದೆ. ಈ ಸದ್ಧೇತುವಿನಿಂದಲೇ ಅವರು ಮಕ್ಕಳ ಮೇಲೆ ಊಟದ ವಿಷಯವಾಗಿ ಜುಲುಮೆ ಮಾಡುತ್ತಾರೆ. ಆದರೆ ಈ ಸದ್ಧೇತುಗಳು ಸೃಷ್ಟಿನಿಯಮಗ ಳನ್ನು ತಪ್ಪಿಸಲಾರವೆಂಬ ಮಾತು ಅವರ ಲಕ್ಷಕ್ಕೆ ಬರುವದಿಲ್ಲ. ಹಸಿವೆಯಿ ಲ್ಲದೆ, ಅಥವಾ ಹೊಟ್ಟೆತುಂಬಿದ ಮೇಲೆ ಜುಲುಮೆಯಿಂದ ಹೆಚ್ಚು ಅನ್ನವನ್ನು ಉಣಿಸಿದರೆ ಅದರಿಂದ ಮಕ್ಕಳಿಗೆ ಅಪಾಯವಾಗದೆ ಇರದೆಂಬ ಸಂಗತಿ ಯನ್ನು ಯಾವಾಗಲು ಮರೆಯಕೂಡದು.

ಚಿಕ್ಕವರ ಸಲುವಾಗಿ ಹೇಳಿದ ಈ ಮಾತು ದೊಡ್ಡವರಿಗೂ ಹತ್ತು ವದು. ಎಷ್ಟೋ ತಿಳುವಳಿಕೆಯುಳ್ಳ ಮನುಷ್ಯರು ಕೂಡ ಸೃಷ್ಟಿನಿಯಮಕ್ಕೆ ತಪ್ಪಿ ನಡೆಯುತ್ತಾರೆ. ಒಮ್ಮೊಮ್ಮೆ ಏರಿಗೆಯ ಗೆಳೆಯರೊಡನೆ ಊಟದ ಸಮಾರಂಭವು ನಡೆದಾಗ ಆಗ್ರಹದಿಂದ ಊಟಕ್ಕೆ ಬಡಿಸುವದರಿಂದ ಬಹು ಜನರು ಮಿತಾಹಾರದ ನಿಯಮವನ್ನು ಮುರಿಯುತ್ತಾರೆ. ತೀಕ್ಷ್ಣವಾದ

ಪಾಚಕಶಕ್ತಿಯುಳ್ಳವರು ಉಂಡದ್ದನ್ನೆಲ್ಲ ಒಂದುವೇಳೆ ದಕ್ಕಿಸಿಕೊಳ್ಳ ಬಹುದು. ಆದರೆ ಮಿತಾಹಾರವನ್ನು ಮುರಿದದ್ದಕ್ಕೆ ಒಮ್ಮಿಲ್ಲೊಮ್ಮೆಯಾದರೂ ಅವರಿಗೆ ತಕ್ಕ ಶಿಕ್ಷೆಯಾಗದೆ ಇರದು.

ಆಹಾರವನ್ನು ಮಿತಿಯಿಂದ ತೆಗೆದುಕೊಳ್ಳದಿದ್ದರೆ ಅನ್ನಾಶಯವು ಹೆಚ್ಚು ಕೆಲಸವನ್ನು ಮಾಡಬೇಕಾಗುತ್ತದೆ. ಅದರಿಂದ ನಾನಾ ಪ್ರಕಾರದ ರೋಗ ಗಳು ಅಂಟಿಕೊಳ್ಳುವವು. ಅವುಗಳಲ್ಲಿ ಅನ್ನಾಶಯ, ಕರಳು ಇವುಗಳೊ ಳಗಿನ ಚಾಲಕ ಅಥವಾ ವಾಹಕ (Motor) ಹಾಗೂ ಸ್ಪರ್ಶ (Sensory) ಜ್ಞಾನತಂತುಗಳ ವಿಕಾರವು ಮುಖ್ಯವಾದದ್ದು. ಬದ್ಧಕೋಷ್ಠವೂ ಅಗ್ನಿ ಮಾಂದ್ಯವೂ ಪಿತ್ತವಿಕಾರವೂ ಶರೀರಪ್ರಕೃತಿಯನ್ನು ಕೆಡಿಸಿಬಿಡುವವು. ಮಿತಿಯಿಂದ ಊಟಮಾಡುವ ಅಭ್ಯಾಸವಿಲ್ಲದವನ ಮುಖಮುದ್ರೆಯು ಮಲಿನವಾಗಿ ಕಾಣುವದು. ಮೋರೆಯ ಮೇಲೆಯೂ ಶರೀರದ ಇತರ ಭಾಗ ಗಳ ಮೇಲೆಯೂ ಬಕ್ಕೆಗಳು ಏಳುವವು. ಅವನ ಉಸುರಿಗೆ ಕೆಟ್ಟ ವಾಸನೆಯು ಬರುವದು. ಅವನು ಅಶಕ್ತನೂ ಮಂದನೂ ಆಗುವನು.

ಹೆಚ್ಚಾಗಿ ತೆಗೆದುಕೊಂಡ ಆಹಾರದ ಮೇಲೆ ಹೊಟ್ಟೆಯೊಳಗಿನ ಪಾಚಕ ರಸದ ಪರಿಣಾಮವು ತಡವಾಗಿ ಆಗುತ್ತದೆ. ಎರಡನೇ ಊಟವನ್ನು ಉಣ್ಣುವಾಗ ಮೊದಲು ಉಂಡ ಅನ್ನವು ಇನ್ನೂ ಪಚನವಾಗುತ್ತಲೇ ಇರು ವದು. ಅದರಿಂದ ಅನ್ನವು ಅಪಕ್ವ ಸ್ಥಿತಿಯಲ್ಲಿ ಹೊಟ್ಟೆಯೊಳಗೆ ಬಹಳ ಉಳಿಯುತ್ತದೆ. ಅದರಿಂದ ಪಾಚಕಾವಯವಗಳು ವಿಶ್ರಾಂತಿಯಿಲ್ಲದೆ ಕೆಲಸ ಮಾಡಬೇಕಾಗುತ್ತದೆ. ಬೇರೆ ಅವಯವಗಳಂತೆ ಪಾಚಕಾವಯವಗಳಿಗೂ ಕೆಲವು ಹೊತ್ತು ವಿಶ್ರಾಂತಿಯು ಬೇಕು. ಅದು ಸಿಗದಿದ್ದರೆ ಆ ಅವಯವ ಗಳಲ್ಲಿ ಸ್ವಾಭಾವಿಕವಾಗಿ ಇರುವ ಕಾರ್ಯ ಮಾಡುವ ಶಕ್ತಿಯು ದಿನದಿನಕ್ಕೆ ಕಡಿಮೆ ಕಡಿಮೆಯಾಗುತ್ತ ಹೋಗುತ್ತದೆ; ಮತ್ತು ಉಂಡ ಅನ್ನವು ಆಮ ಸ್ಥಿತಿಯಲ್ಲಿ ಉಳಿದು ಶರೀರಪೋಷಣಕಾರ್ಯಕ್ಕೆ ಏನೂ ಉಪಯೋಗವಾಗದೆ ಅದು ಕೊಳೆತು ಅದರಿಂದ ಒಂದು ಪ್ರಕಾರದ ವಿಷಪದಾರ್ಥಗಳು ಉತ್ಪನ್ನ ವಾಗುತ್ತವೆ. ಅವುಗಳಿಂದ ಆಮವಾತ, ಸಂಧಿವಾತ, ಮೂತ್ರಪಿಂಡವಿಕಾರ, ಅಕಾಲಿಕವಾದ ಮುಪ್ಪು ಇವೇ ಮೊದಲಾದ ರೋಗಗಳು ಉಂಟಾಗುವವು.

ಶರೀರವು ನಿರೋಗಿಯಾಗಿರಲಿಕ್ಕೆ ಮಿತಾಹಾರದಿಂದಿರುವದು ಅತ್ಯ ವಶ್ಯವು. ಈ ಮಿತಾಹಾರವನ್ನು ಸಾಧಿಸಲಿಕ್ಕೆ ಶ್ರೇಷ್ಠವಾದ ಉಪಾಯವು

ಯಾವದೆಂದರೆ ಊಟಕ್ಕೆ ಕುಳಿತಾಗ ಹೊಟ್ಟೆಯಲ್ಲಿ ಇನ್ನೂ ಕೆಲವು ತೆರವು ಪ್ರದೇಶವು ಇರುವಾಗಲೇ ಎಲೆಬಿಟ್ಟು ಏಳಬೇಕು. ಅಂದರೆ ಪ್ರತಿಯೊಂದು ಊಟದ ಕಾಲಕ್ಕೆ ಸ್ವಲ್ಪ ಹಸಿವೆಯನ್ನು ಕಾದಿಟ್ಟು ಊಟವನ್ನು ಮುಗಿಸುವ ಅಭ್ಯಾಸವಿಡಬೇಕು. ಈ ಉಪಾಯವು ಸಾಧಿಸದಿದ್ದರೆ ವಾರದಲ್ಲಿ ಒಂದು ದಿವಸ ನಿರಾಹಾರವನ್ನು ಮಾಡಬೇಕು. ಹಗಲು ಆಹಾರದ ಮಿತಿಯು ತಪ್ಪಿದರೆ ರಾತ್ರಿಯಲ್ಲಿ ಲಂಘನವನ್ನು ಮಾಡಿ ನೀರು ಕುಡಿದು ಮಲಗಿ ಕೊಳ್ಳಬೇಕು.

ಶಿಕ್ಷಣವಿಷಯವಾಗಿ ಪೆಸ್ತಾಲೋಝಿಯವರ ವಿಚಾರಗಳು.

"ಶಿಕ್ಷಣವೆಂದರೆ ಹುಡುಗರಿಗೆ ಬೇರೆ ಬೇರೆ ವಿಷಯಗಳ ಜ್ಞಾನ ಮಾಡಿಕೊಡುವದಲ್ಲ; ಅವರ ಶಾರೀರಿಕ ಹಾಗು ಮಾನಸಿಕ ಶಕ್ತಿಗಳನ್ನು ಸಂಪೂರ್ಣವಾಗಿ ವಿಕಾಸಗೊಳಿಸುವದೇ ನಿಜವಾದ ಶಿಕ್ಷಣವು."

ಪೆಸ್ತಾಲೋಝಿ.

ಪೆಸ್ತಾಲೋಝಿಯೆಂಬ ಹೆಸರುವಾಸಿಯಾದ ಶಿಕ್ಷಕನು ಸ್ವಿತ್ಸರ್ಲಂಡ ದೇಶದೊಳಗಿನ ಝುರಿಚ್ ಎಂಬ ಊರಲ್ಲಿ ಇ. ಸ. ೧೭೪೬ ರಲ್ಲಿ ಹುಟ್ಟಿದನು. ಅವನು ಕೊಡ್ಡ ಕುಟುಂಬದಲ್ಲಿ ಬೆಳೆದವನಾದ ಕಾರಣ ಪ್ರೇಮ, ಭೂತದಯೆ, ಸಹಾನುಭೂತಿ ಮುಂತಾದ ಮನೋವೃತ್ತಿಗಳ ಪರಿಪೋಷಣೆಯು ಅವನ ಮನಸ್ಸಿನಲ್ಲಿ ಚನ್ನಾಗಿ ಆಗಿತ್ತು. ಅವನು ಮೊಟ್ಟಮೊದಲು ಧರ್ಮಶಾಸ್ತ್ರದ ಹಾಗು ಕಾಯಿದೆಯ ಅಭ್ಯಾಸವನ್ನು ಚನ್ನಾಗಿ ಮಾಡಿದನು. ಆದರೆ ಆ ವಿಷಯದಲ್ಲಿ ಅವನ ಮನಸ್ಸಿಗೆ ಸಮಾಧಾನವುಂಟಾಗಲಿಲ್ಲ. ಮುಂದೆ ಕೆಲವು ದಿವಸಗಳ ವರೆಗೆ ಕೃಷಿಕರ್ಮವನ್ನು ಮಾಡಹತ್ತಿದನು; ಆದರೆ ತುಸುದಿವಸಗಳಲ್ಲಿಯೇ ಆ ಕೆಲಸದಲ್ಲಿಯೂ ಬೇಸರಿಕೆಯುಂಟಾದ್ದರಿಂದ, ಅದನ್ನು ಬಿಟ್ಟು ಶಿಕ್ಷಣದ ಉದ್ಯೋಗವನ್ನು ಸ್ವೀಕರಿಸಿದನು. ಅದರಿಂದ ಅವನ ಮನಸ್ಸಿಗೆ ಒಳ್ಳೇ ಆನಂದವುಂಟಾಯಿತು. ಯಾವತ್ತು ಉದ್ಯೋಗಗಳಲ್ಲಿ ಶಿಕ್ಷಣವೇ ಮೇಲಾದ ಉದ್ಯೋಗವೆಂದು ಅವನು ಅನ್ನುತ್ತಿದ್ದನು. ಹದಿನೆಂಟನೇ ಶತಮಾನದಲ್ಲಿ ಫ್ರಾನ್ಸದೇಶದಲ್ಲಿ ಪ್ರಸಿದ್ಧಿಯನ್ನು ಹೊಂದಿದಂಥ "ರೂಸೋ" ಎಂಬ ತತ್ವಜ್ಞನ ಉಪದೇಶದಿಂದ ಕೃಷಿಕರ್ಮ ಹಾಗೂ

ಶಿಕ್ಷಣ ಈ ಎರಡು ವಿಷಯಗಳಲ್ಲಿ ಪೆಸ್ತಾಲೋಝಿಗೆ ಆಸ್ಥೆಯುಂಟಾಗಿತ್ತು. ರೂಸೋ ಹಾಗು ಪೆಸ್ತಾಲೋಝಿ ಇವರಲ್ಲಿ ಗುರುಶಿಷ್ಯ ಸಂಬಂಧವಿತ್ತು. ಆದಾಗ್ಯೂ ಶಿಕ್ಷಣಪದ್ಧತಿಯ ವಿಷಯದಲ್ಲಿ ಮಾತ್ರ ಇಬ್ಬರ ಅಭಿಪ್ರಾಯಗಳೂ ತೀರ ಭಿನ್ನವಾಗಿದ್ದವು. ರೂಸೋನು ಬಹಳಷ್ಟು ವಿಚಾರಗಳನ್ನು ಕೇವಲ ಕಲ್ಪನೆಯಿಂದಲೇ ಹೇಳುತ್ತಿದ್ದನಾದಕಾರಣ ಅವನ ವಿಚಾರಗಳ ಮೂರ್ತ ಸ್ವರೂಪವು ಜನರಿಗೆ ಚನ್ನಾಗಿ ಕಾಣಿಸಲಿಲ್ಲ. ಆದರೆ ಪೆಸ್ತಾಲೋಝಿಯು ಸ್ವತಃ ಶಿಕ್ಷಕನಾಗಿದ್ದು ತನ್ನ ವಿಚಾರಗಳನ್ನು ಕೃತಿಗಳಿಂದ ವ್ಯಕ್ತಪಡಿಸಿ ತೋರಿಸುತ್ತಿದ್ದನಾದಕಾರಣ, ವ್ಯವಹಾರದಲ್ಲಿ ಅವನಿಂದಲೇ ಹೆಚ್ಚಿಗೆ ಲಾಭವಾಯಿತು. ಇಂಗ್ಲಂಡದಲ್ಲಿ ಹದಿನೇಳನೇ ಶತಮಾನದಲ್ಲಿ 'ಲಾಕ್' ನೆಂಬ ಸುಪ್ರಸಿದ್ಧ ತತ್ವವೇತ್ತನು ಆಗಿಹೋದನು. ಅವನ ಬುದ್ಧಿಯಿಂದಲೇ ಶಿಕ್ಷಣ ವಿಚಾರವೆಂಬ ನದಿಯ ಪ್ರವಾಹವು ಮೊಟ್ಟಮೊದಲು ಹೊರಬಿದ್ದಿತೆಂದು ಹೇಳಬಹುದು. "ಪ್ರತಿಯೊಂದು ಮಾತು, ಕಲ್ಪನೆ ಅಥವಾ ಆಚಾರ ಇವುಗಳಲ್ಲಿ ನಿರ್ಮಲವಾದ ಸತ್ಯವನ್ನು ಹುಡುಕಿತೆಗೆಯಲಿಕ್ಕೆ ಬೇಕು; ಹಾಗು ಈ ವಿಚಾರದ ಪ್ರಾಬಲ್ಯವು ಎಲ್ಲಕಡೆಗಳಲ್ಲಿ ಹಬ್ಬಲಿಕ್ಕೆ ಬೇಕು;" ಎಂದು ಲಾಕನು ಹೇಳುತ್ತಿದ್ದನು. ರೂಸೋನ ವಿಚಾರವಾದರೂ ಇದೇ ಪದ್ಧತಿಯದಿತ್ತು. ಅವನು ಹೇಳಿದ್ದೇನಂದರೆ:— "ಪರಂಪರೆಯಿಂದ ನಡೆದುಬಂದ ಶಿಕ್ಷಣಪದ್ಧತಿಯು ಬಹಳ ಕೆಟ್ಟಿದ್ದಿರುವದು. ಅದರಲ್ಲಿ ವಿಚಾರದಿಂದ ಏನಾದರೂ ಬದಲು ಮಾಡಲಿಕ್ಕೆ ಬೇಕು. ಸದ್ಯದ ಸುಧಾರಣೆಯಿಂದ ಮೊದಲಿನ ಎಲ್ಲ ಸಂಸ್ಥೆಗಳು ಬದಲಾಗಿ ಹೋಗಿವೆ. ಮೊದಲು ಮನುಷ್ಯರು ಸುಖಿಗಳಾಗಿದ್ದರು; ಈಗ ಅವರು ದುಃಖಿಗಳಾಗಿ ಕಾಣಿಸುವರು. ಅದರಿಂದ ಪುನಃ ಪೂರ್ವದ ಸ್ವಾಭಾವಿಕ ಸ್ಥಿತಿಯಕಡೆಗೆ ಹೋಗಲಿಕ್ಕೆ ಬೇಕು. ಇದೇ ಮಾತು ಶಿಕ್ಷಣಶಾಸ್ತ್ರದ ವಿಷಯದಲ್ಲಿಯಾದರೂ ಕಂಡುಬರುವದು. ಚಿಕ್ಕಮಕ್ಕಳ ಶಿಕ್ಷಣದ ಸದ್ಯದ ಪದ್ಧತಿಯು ಚನ್ನಾಗಿಲ್ಲ. ಹುಡುಗರಲ್ಲಿ ವಿಚಾರಶಕ್ತಿಯು ಉಂಟಾಗುವದಕ್ಕಿಂತಲೂ ಪೂರ್ವದಲ್ಲಿ ಅವರಿಗೆ ಶಿಕ್ಷಣವು ಕೊಡಲ್ಪಡುತ್ತದೆ. ಇದೇ ಒಂದು ಇದರಲ್ಲಿ ಮುಖ್ಯವಾದ ದೋಷವು. ಹುಡುಗರ ಹನ್ನೆರಡನೆಯ ವರುಷದ ವಯಸ್ಸಿನವರೆಲ್ಲಿ ಅವರಲ್ಲಿ ವಿಚಾರಶಕ್ತಿಯು ಉತ್ಪನ್ನವಾಗುವದು. ಅಲ್ಲಿಯವರೆಗೆ ಅವರಿಗೆ ಯಾವದೇ ಪ್ರಕಾರದ ಶಿಕ್ಷಣವನ್ನು ಕೊಡಕೂಡದು. ಆ ಅವಧಿಯವರೆಗೆ ಹುಡುಗರ ಮನಸ್ಸಿನಲ್ಲಿ ಸತ್ಯಾದಿ ಸದ್ಗುಣಗಳ ಬೀಜಾ

ರೋಪಣೆಯನ್ನು ಮಾಡಲಿಕ್ಕೆ ಯತ್ನಿಸುವದು ಬೀದಿಯಲ್ಲಿ ಬೀಜವನ್ನು ಬಿತ್ತು ವಂತೆಯೇ ಸರಿ. ಹುಡುಗರನ್ನು ಅವರು ಹುಟ್ಟಿದಂದಿನಿಂದ ಕೆಲವು ಕಾಲದ ವರೆಗೆ ಅಶಿಕ್ಷಿತ ಸ್ಥಿತಿಯಲ್ಲಿಯೇ ಇಡುವದು ಒಳ್ಳೆಯದು. ಆ ಕಾಲದಲ್ಲಿ ತಂದೆತಾಯಿಗಳು ಅಥವಾ ಪಾಲಕರು ಅವರ ಮನಸ್ಸಿನಲ್ಲಿ ದುರಾಗ್ರಹಾದಿ ದುರ್ಗುಣಗಳು ಅಥವಾ ವ್ಯಸನಗಳು ಸೇರದಂತೆ ದಕ್ಷತೆಯನ್ನಿಟ್ಟರೆ ಸಾಕು." ಪ್ರಾಥಮಿಕಶಿಕ್ಷಣದ ವಿಷಯವಾಗಿ ಲಾಕನ ಅಭಿಪ್ರಾಯವಾದರೂ ಹೀಗ ಯೇ ಇತ್ತು. ಅವನು– "ಚಿಕ್ಕಮಕ್ಕಳಲ್ಲಿ ವಿಚಾರಶಕ್ತಿಯು ಉಂಟಾಗುವದ ಕ್ಕಿಂತ ಪೂರ್ವದಲ್ಲಿ ಅವರು ಉನ್ಮಾರ್ಗಗಾಮಿಗಳಾಗದಂತೆ ನೋಡಿಕೊಂಡರ ಸಾಕು," ಎಂದು ಹೇಳುತ್ತಿದ್ದನು. ರೂಸೋ, ಮತ್ತು ಲಾಕ ಇವರಿಬ್ಬರ ಹೇಳಿಕೆಯು "ಹುಡುಗರಲ್ಲಿ ಕೆಲವು ಕಾಲದವರೆಗೆ ಬುದ್ಧಿಶಕ್ತಿಯು ನಿರ್ಮಾ ಣವೇ ಆಗುವದಿಲ್ಲ" ಎಂತಲೇ ಇತ್ತು. ಅಂದರೆ, ಶಿಕ್ಷಣಕ್ಕೂ ಮಾನಸಶಾಸ್ತ್ರ ಕ್ಕೂ ನಿಕಟ ಸಂಬಂಧವಿರುವದೆಂದು ಅವರಿಬ್ಬರಿಗೂ ಅನಿಸುತ್ತಿತ್ತು.

ಪೆಸ್ಟಾಲೋಝಿಯಾದರೂ ತಾತ್ವಿಕದೃಷ್ಟಿಯವನಾಗಿದ್ದ ಕಾರಣ ಅವ ನಿಗೂ ಆ ಕಾಲದಲ್ಲಿ ನಡೆಯುತ್ತಿದ್ದ ಶಿಕ್ಷಣಪದ್ಧತಿಯು ಮಾನ್ಯವಾಗಿದ್ದಿಲ್ಲ. "ಬೇರೆ ಬೇರೆ ವಿಷಯಗಳನ್ನು ಪಾಠಮಾಡಿಸುವ ಶಿಕ್ಷಣವು ಒಳ್ಳೆಯದಲ್ಲ. ಹುಡುಗರು ವ್ಯಾಕರಣದ ನಿಯಮಗಳನ್ನೂ ಶಬ್ದಗಳ ರೂಪಗಳನ್ನೂ ಇತಿ ಹಾಸದೊಳಗಿನ ತಾರೀಖುಗಳನ್ನೂ ಪಾಠಮಾಡುವದು ಒಳ್ಳೆಯದಲ್ಲ. ಶಿಕ್ಷಣ ವನ್ನು ಕೊಡತಕ್ಕವರು ವಿದ್ಯಾರ್ಥಿಗಳ ಮಾನಸಿಕಸ್ಥಿತಿಗಳನ್ನು ತಿಳಿದು ಕೊಳ್ಳಲಿಕ್ಕೆಬೇಕು. ಹುಡುಗರ ಮನಸ್ಸು ಪರಿಪಕ್ವದಶೆಯನ್ನು ಹೊಂದದೆ ಇರುವಾಗ ಕಠಿಣ ವಿಷಯಗಳನ್ನು ಕಲಿಸುವದು ಒಳ್ಳೆಯದಲ್ಲ. ವಿದ್ಯಾರ್ಥಿ ಗಳ ಮಾನಸಿಕ ಶಕ್ತಿಯನ್ನು ವಿಚಾರಮಾಡದೆ, ಶಿಕ್ಷಕನ ಯೋಗ್ಯತೆ, ವಿಷ ಯದ ಇಯತ್ತಾತ್ಮಕ್ರಮ ಇವುಗಳ ಕಡೆಗೇ ಲಕ್ಷಗೊಟ್ಟು ಕೆಲಸಸಾಗಿಸುವದು ಬಹಳ ಅಪಾಯಕರವು" ಎಂದು ಅವನು ಹೇಳುತ್ತಿದ್ದನು. 'ಮಾನಸ ಶಾಸ್ತ್ರವನ್ನು ಅನುಸರಿಸಿ ಶಿಕ್ಷಣವನ್ನು ಕೊಡಲಿಕ್ಕೆ ಬೇಕು' ಎಂಬ ತತ್ವ ವನ್ನು ಅವನು ಹೆಚ್ಚು ಬಲವಾಗಿ ಪ್ರತಿಪಾದಿಸುತ್ತಿದ್ದನು. ಆದರೂ ಲಾಕ, ರೂಸೋ ಇವರ ಹೇಳಿಕೆಯೂ ಪೆಸ್ಟಾಲೋಝಿಯ ಹೇಳಿಕೆಯೂ ಬೇರೆ ಬೇರೆಯಾಗಿದ್ದವು. ಪೆಸ್ಟಾಲೋಝಿಯು ಹಿಂದೆ ಹೇಳಿದ ರೂಸೋ, ಲಾಕ, ಇವರ ಹೇಳಿಕೆಯ ವಿಷಯವಾಗಿ ಹೇಳಿದ್ದೇನೆಂದರೆ:– "ಹುಟ್ಟಿದಂದಿನಿಂದಲೇ

ಶಿಕ್ಷಣವು ಆರಂಭವಾಗುವದು. ಅದರಿಂದ ಹನ್ನೆರಡು ವರುಷಗಳ ವರೆಗೆ ಹುಡುಗರ ಮನಸ್ಸಿನ ಮೇಲೆ ಬೇರೆ ಬೇರೆ ಸಂಸ್ಕಾರಗಳು ಆಗದೆ ಅದು ಹಾಗೆಯೇ ನಿರ್ಮಲವಾಗಿ ಉಳಿಯುವದು ಅಸಂಭವವು. ಆ ಹನ್ನೆರಡು ವರುಷಗಳ ಕಾಲಾವಧಿಯಲ್ಲಿ ಹುಡುಗರಿಗೂ ಅವರ ಸಮಾಜಕ್ಕೂ ಸಂಬಂಧವುಂಟಾಗಿ ಅವರಿಗೆ ಎಷ್ಟೋ ಸಂಗತಿಗಳ ಜ್ಞಾನವು ಸ್ವಾಭಾವಿಕವಾಗಿ ಆಗೇ ಆಗುವದು; ಹಾಗು ಹುಡುಗರ ಮನಸ್ಸಿನಲ್ಲಿ ಕೆಟ್ಟ ವಾಸನೆಗಳು ಉಂಟಾಗದಂತೆ ಮಾಡುವದು, ದುಷ್ಟಚಟಗಳು ಹತ್ತದಂತೆ ನೋಡಿಕೊಳ್ಳುವದು ಈತರದ ನಿಷೇಧಾತ್ಮಕವಾದ ಶಿಕ್ಷಣವನ್ನು ಕೊಡುವದು ಶಕ್ಯವಿದ್ದ ಮೇಲೆ, ಅವರ ಮನಸ್ಸಿನಲ್ಲಿ ಕೆಲವು ಸದ್ಗುಣಗಳ ಅಂಕುರಗಳು ಉಂಟಾಗುವಂತೆ ಸಹ ಶಿಕ್ಷಣವನ್ನು ಕೊಡಲಿಕ್ಕೆ ಬರುವದು. ಹುಡುಗರನ್ನು ಕೆಟ್ಟ ವಾಸನೆಗಳಿಂದ ಪರಾಙ್ಮುಖರನ್ನಾಗಿ ಮಾಡುವಾಗಲೇ ಸದ್ವಾಸನೆಗಳ ಕಡೆಗೆ ಅವರ ಮನಸ್ಸನ್ನು ಎಳೆಯುವದು ಶಕ್ಯವಿರುವದು."

ಚಿಕ್ಕಮಕ್ಕಳ ಮನಸ್ಸಿನಲ್ಲಿ ವಿಚಾರಶಕ್ತಿಯು ಒಂದುವೇಳೆ ಬೇಗನೆ ವಿಕಾಸಹೊಂದದೆ ಇದ್ದರೂ ಅದು ಮೊದಲು ಶೂನ್ಯವಾಗಿರುತ್ತದೆಂದು ಹೇಳಲಾಗದು. ಸ್ವಭಾವಸಿದ್ಧವಾದ ಧಾರಣಾಶಕ್ತಿಯು ಆ ವಿಚಾರಶಕ್ತಿಯ ಸ್ಥಳದಲ್ಲಿ ಇರುತ್ತಿರುವದರಿಂದ ಜ್ಞಾನೇಂದ್ರಿಯಗಳ ಕೃತಿಗಳ ಪರಿಣಾಮವು ಅದರ ಮೇಲೆ ಆಗೇ ಆಗುವದು. ಹುಡುಗರು ನೋಡುವ ಹಾಗು ಕೇಳುವ ಪದಾರ್ಥಗಳು ಹಾಗೂ ಸಂಗತಿಗಳು ಅವರ ಮನಸ್ಸಿನಲ್ಲಿ ಪ್ರತಿಬಿಂಬಿತವಾಗುವವು; ಈ ರೀತಿಯಾಗಿ ಬಾಹ್ಯಸೃಷ್ಟಿಯೊಳಗಿನ ಬೇರೆ ಬೇರೆ ವಸ್ತುಗಳ ಹಾಗು ಕಾರ್ಯಗಳ ಸಂಬಂಧದ ಸಂಸ್ಕಾರಗಳು ಅವರ ಮನಸ್ಸಿನಲ್ಲಿ ಆಗುವದರಿಂದ ಅಲ್ಲಿ ಒಂದುತರದ ಕಾರ್ಯವು ನಡೆಯಲಿಕ್ಕೆ ಹತ್ತುವದು. ಅದರಿಂದ ಸ್ಮರಣಶಕ್ತಿಯೂ ಕಲ್ಪನಾಶಕ್ತಿಯೂ ತಮ್ಮ ತಮ್ಮ ಕಾರ್ಯಗಳನ್ನು ಮಾಡಲಿಕ್ಕೆ ಆರಂಭಿಸುವವು. ಸಾರಾಂಶವೇನೆಂದರೆ, ಚಿಕ್ಕಮಕ್ಕಳಿಗೆ ಜ್ಞಾನೇಂದ್ರಿಯಗಳ ದ್ವಾರದಿಂದ ಶಿಕ್ಷಣ ಕೊಡಲಿಕ್ಕೆ ಬರುವದು. ವಿಚಾರಶಕ್ತಿಯು ಉಂಟಾಗುವ ಹಾದಿಯನ್ನು ನೋಡುತ್ತ ಕೂಡ್ರುವ ಕಾರಣವಿಲ್ಲ.

" ಬೇರೆ ಬೇರೆ ವಿಷಯಗಳ ಜ್ಞಾನ ಮಾಡಿಕೊಡುವದಿಷ್ಟೇ ಶಿಕ್ಷಕನ ಕರ್ತವ್ಯವಲ್ಲ. ಅವನು ವಿದ್ಯಾರ್ಥಿಗಳ ಮನಸ್ಸನ್ನು ಸರ್ವರೀತಿಯಿಂದಲೂ

ವಿಕಾಸಗೊಳಿಸಲಿಕ್ಕೆಬೇಕು" ಎಂದು ಪೆಸ್ಟಾಲೋಝಿಯು ಹೇಳುತ್ತಿದ್ದನು. ಇಂದ್ರಿಯಜನ್ಯಜ್ಞಾನವು ಕಲ್ಪನಾಶಕ್ತಿ-ವಿಚಾರಶಕ್ತಿಗಳನ್ನು ವಿಕಾಸಗೊಳಿಸಲಿಕ್ಕೆ ಸಾಧನವಾಗುವಂತೆ ಅಂತರ್ಜ್ಞಾನ ಶಕ್ತಿಯು ಸದ್ಭಾವನೆಗಳನ್ನು ವೃದ್ಧಿಪಡಿಸಲಿಕ್ಕೆ ಉಪಯೋಗವಾಗುವದು.

ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ (೧) ಸದ್ಭಾವನೆ, (೨) ಸತ್ಯ ಭಾವನೆ, (೩) ಸೌಂದರ್ಯಭಾವನೆ, (೪) ಅಂಚಿತ್ಯ ಪ್ರತೀತಿಭಾವನೆ ಎಂಬ ನಾಲ್ಕು ಸ್ವಯಂಸಿದ್ಧಭಾವನೆಗಳು, ಅಥವಾ ಅಂತಃಶಕ್ತಿಗಳು ಜನ್ಮತಃ ಇರುವವು. ಬೌದ್ಧಿಕ ಅಥವಾ ವಿಚಾರಶಕ್ತಿಯ ಕಾರ್ಯಗಳಿಗೂ ಇವುಗಳಿಗೂ ಸಂಬಂಧವಿರುವದಿಲ್ಲವಾದ್ದರಿಂದ ಇವುಗಳಿಗೆ ಮಾನಸಿಕ ಶಕ್ತಿಗಳು ಎಂದು ಹೆಸರು ಕೊಡುವದಕ್ಕಿಂತ ಅಂತರ್ಭಾವನೆಗಳು ಎಂದು ಹೆಸರು ಕೊಡುವದೇ ತಕ್ಕದ್ದು.

೧. ಸದ್ಭಾವನೆ:—ಇದರಿಂದ ಮನುಷ್ಯನಿಗೆ ಜಗತ್ತಿನೊಳಗೆ ಒಳ್ಳೇ ಸಂಗತಿಗಳ ಜ್ಞಾನವಾಗುವದು. ಸದಸದ್ವಸ್ತುಗಳ ಮಿಶ್ರಣದೊಳಗಿಂದ ಸದ್ವಸ್ತುಗಳನ್ನಷ್ಟೇ ಸ್ವೀಕರಿಸುವ ಬುದ್ಧಿಯನ್ನು ಮನುಷ್ಯನಲ್ಲಿ ಪರಮೇಶ್ವರನು ಸ್ವಾಭಾವಿಕವಾಗಿಯೇ ಇಟ್ಟಿರುವನು. ಇದಕ್ಕೇ ಸದ್ಭಾವನೆಯೆಂಬ ಹೆಸರು.

೨. ಸತ್ಯಭಾವನೆ:—ಈ ಭಾವನೆಯು ಮೂಲಕವಾಗಿ ಮನುಷ್ಯನಿಗೆ ಸತ್ಯಾಸತ್ಯಗಳನ್ನು ವಿಂಗಡಿಸಲಿಕ್ಕೆ ಬರುವದು. ಹಾಲು ನೀರುಗಳ ಮಿಶ್ರಣದೊಳಗಿಂದ ಹಾಲನ್ನು ಬೇರ್ಪಡಿಸಿಕೊಳ್ಳುವ ಶಕ್ತಿಯನ್ನು ಹಂಸಪಕ್ಷಿಯಲ್ಲಿ ಈಶ್ವರನು ಜನ್ಮತ: ಇಟ್ಟಿರುವಂತೆ ಸತ್ಯಾಸತ್ಯಗಳ ಮಿಶ್ರಣದೊಳಗಿಂದ ಸತ್ಯವನ್ನು ಆರಿಸುವ ಶಕ್ತಿಯನ್ನು ಮನುಷ್ಯಪ್ರಾಣಿಯಲ್ಲಿ ಈಶ್ವರನು ಸ್ವಾಭಾವಿಕವಾಗಿಯೇ ಇಟ್ಟಿರುವನು. ಈ ಸ್ವಭಾವಸಿದ್ಧವಾದ ಸತ್ಯಪ್ರಿಯತೆಯೆಂಬ ಗುಣಕ್ಕೇ ಸತ್ಯಭಾವನೆಯೆಂಬ ಹೆಸರು.

೩. ಸೌಂದರ್ಯಭಾವನೆ:—ಈ ಭಾವನೆಯ ಸಹಾಯದಿಂದ ಮನುಷ್ಯನು ಪ್ರತಿಯೊಂದು ವಸ್ತುವಿನೊಳಗಿನ ಹಾಗು ವ್ಯವಸ್ಥೆಯೊಳಗಿನ ಸೌಂದರ್ಯವನ್ನು ಗ್ರಹಣಮಾಡಲಿಕ್ಕೆ ಸಮರ್ಥನಾಗುವನು. ವ್ಯವಸ್ಥೆಯಿಂದ ಹೊಂದಿಸಿಟ್ಟ ಕೆಲವು ಪದಾರ್ಥಗಳನ್ನೂ ಅವ್ಯವಸ್ಥೆಯಿಂದ ಚಲ್ಲಿ ಬಿಟ್ಟ ಅಂಥ ಪದಾರ್ಥಗಳ ಎರಡನೇ ಗುಂಪನ್ನೂ ಒಬ್ಬ ಹುಡುಗನಿಗೆ ತೋರಿಸಿ ಇವೆರಡರಲ್ಲಿ

ಯಾವದು ಚಂದಕಾಣಿಸುತ್ತದೆಂದು ಕೇಳಿದರೆ, ಅವನು ವ್ಯವಸ್ಥೆಯಿಂದ ಹೊಂದಿಸಿಟ್ಟ ಪದಾರ್ಥಗಳ ಕಡೆಗೆ ಕೈ ಮಾಡುವದು ಸ್ವಾಭಾವಿಕವು. ಇದಕ್ಕೆ ಅವನ ವಿಚಾರಶಕ್ತಿಯು ಕಾರಣವಲ್ಲ; ಅವನ ಮನಸ್ಸಿನೊಳಗಿನ ಸ್ವಭಾವಸಿದ್ಧವಾದ ಸೌಂದರ್ಯಭಾವನೆಯೇ ಕಾರಣವು. ಉಡಿಗೆ ತೊಡಿಗೆಗಳಲ್ಲಿಯೂ ವ್ಯವಹಾರದೊಳಗಿನ ಪ್ರತಿಯೊಂದು ಕೆಲಸದಲ್ಲಿಯೂ ವ್ಯವಸ್ಥೆಯಿಂದ ನಡೆಯುವದು ಒಳ್ಳೆಯದೆಂದು ವಿಚಾರಶಕ್ತಿ ಇಲ್ಲದ ಮನುಷ್ಯನಿಗೂ ಸಹಜವಾಗಿ ತೋರುವದು. ಈ ತರದ ಸ್ವಾಭಾವಿಕವಾದ ಭಾವನೆಗೇ ಸೌಂದರ್ಯಭಾವನೆಯೆಂಬ ಹೆಸರು.

೪. ಅಚಿಂತ್ಯ ಪ್ರತೀತಿ ಭಾವನೆ:—ಈ ಭಾವನೆಯ ಮೂಲಕವಾಗಿ ಜಗತ್ತಿನೊಳಗಿನ ಅಗಾಧ ವಸ್ತುಗಳ ವಿಷಯವಾಗಿ ಮನುಷ್ಯನ ಮನಸ್ಸಿನಲ್ಲಿ ಸಾನಂದಾಶ್ಚರ್ಯಗಳು ಉಂಟಾಗುವವು. ಅಪಾರವಾದ ಸಮುದ್ರ, ಎಲ್ಲೆಲ್ಲಿಯೂ ತಾನೇ ತಾನಾಗಿ ವ್ಯಾಪಿಸಿರುವ ಆಕಾಶ, ಸೂರ್ಯ-ಚಂದ್ರ-ನಕ್ಷತ್ರಗಳೇ ಮೊದಲಾದ ಅಂತರಿಕ್ಷದೊಳಗಿನ ಅನಂತ ತೇಜೋರಾಶಿಗಳು, ಭಯಂಕರವಾದ ಮೇಘಗರ್ಜನೆ, ದಂಗುಬಡಿಸುವ ವಿದ್ಯುತ್ತೇಜ ಇವೇ ಮೊದಲಾದ ವಸ್ತುಗಳನ್ನು ಆಕಲನ ಮಾಡುವ ಶಕ್ತಿಯು ಮನುಷ್ಯನಲ್ಲಿ ಸ್ವಾಭಾವಿಕವಾಗಿ ಇರಬೆ ಇದ್ದರೂ, ಅವುಗಳನ್ನು ನೋಡಿ ಕೌತುಕಪಡುವದೂ ಅವುಗಳನ್ನು ಹುಟ್ಟಿಸಿರುವ ಸೃಷ್ಟಿಕರ್ತನ ವಿಷಯವಾಗಿ ಅವನ ಮನಸ್ಸಿನಲ್ಲಿ ಆದರಬುದ್ಧಿಯುಂಟಾಗುವದೂ ಸ್ವಾಭಾವಿಕ ಧರ್ಮಗಳಾಗಿರುವವು. ಇದಕ್ಕೇ ಅಚಿಂತ್ಯಪ್ರತೀತಿಭಾವನೆಯೆಂಬ ಹೆಸರು.

ಮೇಲೆ ಹೇಳಿದ ನಾಲ್ಕೂತರದ ಅಂತರ್ಭಾವನೆಗಳು ಪ್ರತಿಯೊಬ್ಬ ಮನುಷ್ಯನ ಮನಸ್ಸಿನೊಳಗೆ ಹುಟ್ಟಿನೊಡಲು ಅನುದ್ಭೂತ ಸ್ಥಿತಿಯಲ್ಲಿರುವವು. ಉತ್ತಮನಾದ ಶಿಕ್ಷಕನು ಈ ನೈಸರ್ಗಿಕ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಹುಡುಗರ ಮನಸ್ಸನ್ನು ಒಳ್ಳೇ ಮಾರ್ಗಕ್ಕೆ ಹಚ್ಚುವನು. ಶಿಕ್ಷಕನು ಈ ಭಾವನೆಗಳ ಕಡೆಗೆ ಲಕ್ಷಕೊಡದೆ ಬೇರೆ ಬೇರೆ ವಿಷಯಗಳ ಸಂಬಂಧದಿಂದ ಜ್ಞಾನ ಮಾಡಿಕೊಡುತ್ತ ಹೋದರೆ ಅದರಿಂದ ಏನೂ ಪ್ರಯೋಜನವಾಗಲಾರದು. ಅವನು ಈ ನಾಲ್ಕು ಅಂತರ್ಭಾವನೆಗಳನ್ನು ಆಧಾರವಾಗಿಟ್ಟುಕೊಂಡು ಈ ನಾಲ್ಕು ಆಧಾರಸ್ತಂಭಗಳಮೇಲೆ ತನ್ನ ಶಿಕ್ಷಣಮಂದಿರವನ್ನು ಕಟ್ಟಲಿಕ್ಕೆ ಯತ್ನಿಸಬೇಕು. ಶಿಕ್ಷಕನು ಈ ಭಾವನೆಗಳನ್ನು

ಮೊದಲು ಉದ್ಭೂತ ಸ್ಥಿತಿಯಲ್ಲಿ ತಂದುಕೊಂಡು, ತರುವಾಯ ಹುಡುಗರ ಮನಸ್ಸಿನ ಸ್ವಾಭಾವಿಕ ಒಲವುಗಳನ್ನು ನಿರೀಕ್ಷಿಸಲಿಕ್ಕೆ ಆರಂಭಿಸಬೇಕು.

ಚಿಕ್ಕಬಾಲಕರ ಶಿಕ್ಷಣದ ಕಡೆಗೆ ಶಿಕ್ಷಕನು ವಿಶೇಷವಾಗಿ ಲಕ್ಷ ಕೊಡ ಬೇಕೆಂದು ಪೆಸ್ತಾಲೋಝಿಯು ಹೇಳುತ್ತಿದ್ದನು. "ಶಾಲೆಯೊಳಗಿನ ಕೆಳಗಿನ ವರ್ಗದ ಶಿಕ್ಷಣದ ಕಡೆಗೆ ವಿಶೇಷ ಲಕ್ಷ ಕೊಡುವ ಕಾರಣವಿಲ್ಲ; ಆ ವರ್ಗ ಗಳಲ್ಲಿ ಕಲಿಸತಕ್ಕ ವಿಷಯಗಳು ಸಾಮಾನ್ಯವಾದವುಗಳಿರುವದರಿಂದ ಸಾಧಾ ರಣತರದ ಶಿಕ್ಷಕರನ್ನು ನೇಮಿಸಿದರೂ ಅಡ್ಡಿಯಿಲ್ಲ," ಎಂದು ಹೇಳುವ ಸಾಮಾನ್ಯ ಜನರ ಹೇಳಿಕೆಯು ಕೇವಲ ತಪ್ಪೆಂದು ಅವನು ಹೇಳುತ್ತಿದ್ದನು. ವನಸ್ಪತಿಗಳ ಅಥವಾ ಪ್ರಾಣಿಗಳ ಅವಯವಗಳ ಬೆಳವಣಿಗೆಯ ಕ್ರಮ ವನ್ನು ಲಕ್ಷಪೂರ್ವಕವಾಗಿ ನಿರೀಕ್ಷಿಸಿದರೆ, ಅವುಗಳ ಯಾವದಾದರೊಂದು ಅವಯವವು ಉದ್ಭೂತ ಸ್ಥಿತಿಯನ್ನು ಹೊಂದಿದ ಕೂಡಲೆ, ಅದರ ಪೋಷಣೆ ಯು ಸರಿಯಾಗಿ ಆದರೆ ಮಾತ್ರ ಅದು ಚನ್ನಾಗಿ ಬೆಳವಣಿಗೆಯನ್ನು ಹೊಂದು ವದೆಂಬ ಮಾತು ನಿದರ್ಶನಕ್ಕೆ ಬರುವದು. ಅದರಂತೆ ವಿದ್ಯಾರ್ಥಿಗಳಲ್ಲಿ ಬಾಲಾವಸ್ಥೆಯಲ್ಲಿ ಕಂಡುಬರುವ ಬೇರೆ ಬೇರೆ ಮಾನಸಿಕ ಶಕ್ತಿಗಳನ್ನು ಶಿಕ್ಷಕನು ಅವಲೋಕನಮಾಡಿ ಅವುಗಳನ್ನು ಆಗಿಂದಾಗ ಸರಿಯಾದ ಮಾರ್ಗಕ್ಕೆ ಹಚ್ಚಿದರೆ ಮಾತ್ರ ಅವರ ಬೇರೆ ಬೇರೆ ಮನೋವಿಕಾರಗಳು ಸರಿಯಾಗಿ ವಿಕಾಸಹೊಂದಿ ಅವರ ಮುಂದಿನ ಆಯುಷ್ಯ ಕ್ರಮವು ಸರಿ ಯಾಗಿ ಸಾಗುವದು.

ಹುಡುಗರಲ್ಲಿರುವ ಈಶ್ವರನಿರ್ಮಿತವಾದ ಭಾವನೆಗಳನ್ನು ಸೂಕ್ಷ್ಮ ರೀತಿಯಿಂದ ಅವಲೋಕನಮಾಡಿ ಅವುಗಳನ್ನು ಯಾವ ರೀತಿಯಿಂದ ಉಪ ಯೋಗಿಸಿಕೊಳ್ಳಬೇಕೆಂಬದನ್ನು ಮೊದಲು ಗೊತ್ತುಮಾಡಿಕೊಂಡು, ಅವುಗ ಳಿಗೆ ಸರಿಯಾದ ಮಾರ್ಗತೋರಿಸುವದೇ ಶಿಕ್ಷಕನ ಯೋಗ್ಯವಾದ ಕರ್ತವ್ಯವು; ಹಾಗು ಅದೇ ನಿಜವಾದ ಶಿಕ್ಷಣವು. ಮಾಸ್ತರನು ಹುಡುಗರಲ್ಲಿ ಕೂಡಿಕೊಂಡು ನಡೆಯುತ್ತಿದ್ದರೆ ಹುಡುಗರ ಮನಸ್ಸಿನ ಸ್ವಾಭಾವಿಕ ಶಕ್ತಿಗಳನ್ನೂ ಅವುಗಳ ಒಲವುಗಳನ್ನೂ ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುವದು.

ಬುದ್ಧಿಯೆಂಬ ವರಪ್ರದಾನವನ್ನು ಕೊಟ್ಟಿದ್ದಕ್ಕಾಗಿ ಪ್ರತಿಯೊಬ್ಬ ವಿದ್ಯಾ ರ್ಥಿಯು ಈಶ್ವರನಿಗೆ ಋಣಿಯಾಗಿರುವನು. ಈ ಋಣದೊಳಗಿಂದ ವಿದ್ಯಾರ್ಥಿ ಗಳನ್ನು ಮುಕ್ತರನ್ನಾಗಿ ಮಾಡಬೇಕಾದರೆ, ಅಂದರೆ ಈಶ್ವರದತ್ತವಾದ

ಬುದ್ಧಿಶಕ್ತಿಯ ಉಪಯೋಗವು ಸರಿಯಾಗಿ ಆಗಬೇಕಾದರೆ ಶಿಕ್ಷಕನು ಆ ಬುದ್ಧಿಕುಸುಮದ ಮೊಗ್ಗೆಯನ್ನು ಸರಿಯಾಗಿ ವಿಕಾಸಗೊಳಿಸಲಿಕ್ಕೆಬೇಕು. ಶಿಕ್ಷಕನಾಗಲಿ ಪಾಲಕನಾಗಲಿ, ಹುಡುಗರನ್ನು ತನ್ನ ಇಚ್ಛೆಯಂತೆ ಯಾವದೊಂದು ಉದ್ಯೋಗಕ್ಕೆ ಹಚ್ಚಬೇಕೆಂದು ಬಯಸದೆ, ಈಶ್ವರನು ಅವರನ್ನು ಯಾವ ಉದ್ಯೋಗದ ಸಲುವಾಗಿ ಹುಟ್ಟಿಸಿರುವನೆಂಬದನ್ನು ತಿಳಿದುಕೊಳ್ಳಲಿಕ್ಕೆಬೇಕು. ಅಂದರೆ ಈಶ್ವರನು ಅವರಲ್ಲಿ ಯಾವ ಉದ್ಯೋಗದ ಸಂಬಂಧದಿಂದ ಪ್ರೀತಿಯುಳ್ಳ ಮನೋಭಾವನೆಯನ್ನು ಇಟ್ಟಿರುವನೆಂಬದನ್ನು ತಿಳಿದುಕೊಂಡು ಅವರನ್ನು ಅದೇ ಉದ್ಯೋಗಕ್ಕೆ ಹಚ್ಚಬೇಕು. ಪ್ರತಿಯೊಬ್ಬ ಮನುಷ್ಯನು ಈಶ್ವರನ ವಿಶ್ವಕುಟುಂಬದೊಳಗಿನ ಒಬ್ಬ ವ್ಯಕ್ತಿಯಾಗಿದ್ದು ಅವನನ್ನು ರಕ್ಷಿಸುವ ಹಾಗು ಅವನ ಕಡೆಯಿಂದ ಯಾವದೊಂದು ಕೌಟುಂಬಿಕ ಕಾರ್ಯವನ್ನು ಮಾಡಿಸಿಕೊಳ್ಳುವ ಸ್ವಾಮಿತ್ವವು ಈಶ್ವರನದಾಗಿರುವದು. ಅದಕ್ಕಾಗಿ ಈಶ್ವರನು ಪ್ರತಿಯೊಬ್ಬನಲ್ಲಿ ಕೆಲವೊಂದು ಉದ್ಯೋಗದ ವಿಷಯವಾಗಿ ಪ್ರೀತಿಯುಳ್ಳ ಮನೋಭಾವನೆಯನ್ನು ಇಟ್ಟಿರುವನು. ಈ ಈಶ್ವರನ ಉದ್ದೇಶವನ್ನು ಸೂಕ್ಷ್ಮ ರೀತಿಯಿಂದ ನಿರೀಕ್ಷಣೆ ಮಾಡಿಕೊಂಡು ಅದೇ ಮಾರ್ಗದಿಂದ ತನ್ನ ಶಿಕ್ಷಣಕಾರ್ಯವನ್ನು ಮುಂದರಿಸುವದು ಶಿಕ್ಷಕನ ಕರ್ತವ್ಯವು. ಅಂದರೆ, ವಿದ್ಯಾರ್ಥಿಯ ನೈಸರ್ಗಿಕ ಮನಃಶಕ್ತಿಗಳನ್ನು ಕಾಪಾಡಿಕೊಂಡು ಅವುಗಳನ್ನು ವಿಕಾಸಗೊಳಿಸುವದಿಷ್ಟೇ ಶಿಕ್ಷಕನ ಶಿಕ್ಷಣದ ಧೋರಣವಿರಬೇಕು. ವಿದ್ಯಾರ್ಥಿಗಳಿಗೆ ಬೌದ್ಧಿಕ-ನೈತಿಕ-ಶಾರೀರಿಕ-ಶಿಕ್ಷಣಗಳನ್ನು ಕೊಡಬೇಕು; ಹಾಗು ಈ ಶಿಕ್ಷಣಗಳನ್ನು ಕೊಡುವಾಗ ಶಿಕ್ಷಕನು ವಿದ್ಯಾರ್ಥಿಗಳ ವಿಷಯವಾಗಿ ಪ್ರೇಮದೃಷ್ಟಿಯಿಂದ ಇರಲಿಕ್ಕೆಬೇಕು. ವಿದ್ಯಾರ್ಥಿಗಳ ಮೇಲೆ ಶಿಕ್ಷಕನ ಪ್ರೀತಿಯು ಇರದಿದ್ದರೆ ಅವನ ಮೇಲೆ ವಿದ್ಯಾರ್ಥಿಗಳ ವಿಶ್ವಾಸವು ಕೂಡ್ರಲಾರದು. ಪೆಸ್ಟಾಲೋಝಿಯು ಈ ವಿಷಯವಾಗಿ ಹೇಳಿರುವದೇನಂದರೆ:– " ಪ್ರೇಮಪೂರ್ವಕವಾಗಿ ಕಲಿಸುವ ಅನುಕೂಲವನ್ನು ಪರಮೇಶ್ವರನು ತಾಯಂದಿರಿಗೆ ಮಾತ್ರ ಜನ್ಮತಃ ಕೊಟ್ಟಿರುವನು. ಅವರ ಕಡೆಯಿಂದ ಉತ್ತಮ ತರದ ಶಿಕ್ಷಣಕಾರ್ಯವು ಬಹುಮಟ್ಟಿಗೆ ಕೊನೆಸಾಗುವದು. ಆದರೆ ಅಶಿಕ್ಷಿತಳಾದ ತಾಯಿಯ ಕೇವಲ ಅಂಧಪ್ರೇಮವು ಮಾತ್ರ ಕಾರ್ಯಕಾರಿಯಲ್ಲವೆಂಬದನ್ನು ಮರೆಯಲಾಗದು. ತಾಯಂದಿರ ನಿಷ್ಕಲಂಕನಾದ ಪ್ರೇಮಕ್ಕೆ ಅವರ ಸಂಸ್ಕೃತವಾದ ಮನಸ್ಸಿನ ದೂರದೃಷ್ಟಿ, ಉದಾತ್ತ

ವಿಚಾರ ಇವು ಜೊತೆಯಾಗಿರಲಿಕ್ಕೆಬೇಕು. ಇಂಥ ತಾಯಿಂದಿರಿಂದ ಪಾಲಿತರಾದ ಹುಡುಗರು ಸರ್ವರೀತಿಯಿಂದಲೂ ಉತ್ತಮರಾಗುವರೆಂಬದಕ್ಕೆ ಸಂದೇಹವಿಲ್ಲ. ತಾಯಿಂದಿರಿಗೆ ಹುಡುಗರ ಹೃದಯ, ಮಿದುಳು, ಹಸ್ತ ಈ ಮೂರೂ ಅವಯವಗಳಿಗೆ ಶಿಕ್ಷಣವನ್ನು ಕೊಡಲಿಕ್ಕೆ ಅನುಕೂಲವಿರುವದು. ಅದರಲ್ಲಿಯೂ ಹೃದಯದ ಮೇಲೆ, ಅಂದರೆ ಹುಡುಗರ ಮನೋವಿಕಾರಗಳ ಮೇಲೆ ತಾಯಿಯ ಶಿಕ್ಷಣದ ಪರಿಣಾಮವು ವಿಶೇಷವಾಗಿ ಆಗುವದು.

ಸ್ಮಾಯಿಲ್ಸ ಸಾಹೇಬರ ಉದ್ಗಾರಗಳಾದರೂ ಹೀಗೆಯೇ ಇರುವವು. ಅವರು ಹೇಳಿರುವದೇನೆಂದರೆ:—"ಗಂಡಸರಲ್ಲಿ ಬುದ್ಧಿವಿಚಾರವೂ ಸ್ತ್ರೀಯರಲ್ಲಿ ಸಹೃದಯತೆಯೂ ವಿಶೇಷವಾಗಿರುವವು. ಅದರಿಂದ ಗಂಡಸರಿಗೆ ಬೌದ್ಧಿಕ ಶಿಕ್ಷಣವನ್ನು ಸರಿಯಾಗಿ ಕೊಡಲಿಕ್ಕೆ ಬರುವದು. ಆದರೆ, ಅಂತಃಕರಣದೊಳಗಿನ ಭಾವನೆಗಳಿಗೆ ಶಿಕ್ಷಣಕೊಡುವ ಕಾರ್ಯವು ಹೆಂಗಸರಿಗೆ ಮಾತ್ರ ಚೆನ್ನಾಗಿ ಸಾಧಿಸುವದು. ಪ್ರೀತಿ, ಶ್ರದ್ಧೆ ಇವೆರಡು ಗುಣಗಳನ್ನು ಹುಡುಗರಲ್ಲಿ ಸರಿಯಾಗಿ ಉಂಟುಮಾಡುವದು ತಾಯಿಯ ಮಾತೃಪದದ ಉಚ್ಚತರದ ಅಧಿಕಾರವಾಗಿರುವದು. ಹುಡುಗರಲ್ಲಿ ಈ ಗುಣಗಳನ್ನು ಉಂಟುಮಾಡುವ ತಾಯಿಯೇ ಕರ್ತವ್ಯದಕ್ಷಳಾದ ತಾಯಿಯು. ಬೌದ್ಧಿಕ ಶಿಕ್ಷಣದಲ್ಲಿ ಎಷ್ಟೇ ಕೊರತೆಯಿದ್ದರೂ ಅದರಿಂದ ಮನಸ್ಸು ವಿಕಾಸಹೊಂದಲಿಕ್ಕೆ ಅಡ್ಡಿಯಾಗುವದಿಲ್ಲ. ಆದರೆ ಪ್ರೀತಿ, ಶ್ರದ್ಧೆ ಈ ಗುಣಗಳಿಲ್ಲದಿದ್ದರೆ ಮಾತ್ರ ಮನೋವಿಕಾಸವು ಸರಿಯಾಗಿ ಎಂದೂ ಆಗಲಾರದು. ಸನ್ಮಾರ್ಗದ ಅಥವಾ ದುರ್ಮಾರ್ಗದ ಕಡೆಗೆ ಪ್ರವೃತ್ತಿಯುಂಟಾಗುವದು ಬೌದ್ಧಿಕ ಶಿಕ್ಷಣವನ್ನೇ ಅವಲಂಬಿಸಿಕೊಂಡಿರುವದಿಲ್ಲ, ಸಹೃದಯತೆಯುಂಟಾಗುವದನ್ನು ವಿಶೇಷವಾಗಿ ಅವಲಂಬಿಸಿರುವದು.

ಪೆಸ್ತಾಲೋಝಿಯ ಶಿಕ್ಷಣದ ರಹಸ್ಯಗಳು:—ಹುಡುಗರ ಶಿಕ್ಷಣವು ಅವರ ಜನ್ಮದ ಸಂಗಡಲೇ ಆರಂಭವಾಗುವದು; ಹಾಗು ಅವರ ಮನಸ್ಸು ಅಂದಿನಿಂದ ಅವರ ಪರಿಸ್ಥಿತಿಗೆ ಅನುರೂಪವಾದ ಸಂಸ್ಕಾರಗಳನ್ನು ಹೊಂದಹತ್ತುವದು ಹುಡುಗರ ಶಿಕ್ಷಣವು ಸಾವಕಾಶವಾಗಿ ಸಾಗಿದರೂ ಅಡ್ಡಿಯಿಲ್ಲ; ಆದರೆ ಅವರು ಕಲಿತಂಥ ಸ್ವಲ್ಪ ಸಂಗತಿಗಳಾದರೂ ಅವರ ಹೃದಯದಲ್ಲಿ ಸಂಪೂರ್ಣವಾಗಿ ಬಿಂಬಿಸಲಿಕ್ಕೆ ಬೇಕು; ಅಂದರೆ, ಅವರಿಗೆ ಆ ಸಂಗತಿಗಳನು

ಉಪಯೋಗಿಸಿಕೊಳ್ಳಲಿಕ್ಕೆ ಬರುತ್ತಿರಬೇಕು. ಬರೇ ಎರಡನೆಯವರ ಭಾವನೆಗಳನ್ನು ಅವರ ಮನಸ್ಸಿನಲ್ಲಿ ತುಂಬುವದರಿಂದ ಏನೂ ಪ್ರಯೋಜನವಾಗಲಾರದು. ಯಾಕಂದರೆ, ಹುಡುಗರ ಸ್ವಂತ ಅನುಭವಕ್ಕೆ ಬಂದಂಥ ಸಂಗತಿಗಳಿಂದಲೇ ಅವರ ಮನಸ್ಸು ವಿಕಾಸ ಹೊಂದುವದು. ಹುಡುಗರ ನಡತೆಯ ಕಡೆಗೆ ಚನ್ನಾಗಿ ಲಕ್ಷ್ಯಗೊಟ್ಟು ಅವರ ತಪ್ಪುಗಳನ್ನು ತಿಳಿಸಿಕೊಟ್ಟು ಮೇಲಿಂದಮೇಲೆ ಬೋಧಿಸುತ್ತಿರಬೇಕು.

ಪ್ರತಿಯೊಬ್ಬ ವಿದ್ಯಾರ್ಥಿಯ ಕಡೆಯಿಂದ ಸೃಷ್ಟಿನಿರೀಕ್ಷಣಕಾರ್ಯವನ್ನು ಚನ್ನಾಗಿ ಮಾಡಿಸಲಿಕ್ಕೆ ಬೇಕು. ಇದು ಇಂದ್ರಿಯಜನ್ಯಜ್ಞಾನವನ್ನು ಬೆಳಿಸಲಿಕ್ಕೆ ಬಹಳ ಉಪಯೋಗವುಳ್ಳದ್ದಿರುವದು. ಅಲ್ಲದೆ, ಇದರಿಂದ ಸದ್ಭಾವನೆಗಳು ಉಂಟಾಗುವವು. ಇದೇ ಉದ್ದೇಶದಿಂದ ಪೆಸ್ಟಾಲೋಝಿಯು ಹುಡುಗರ ಅಭ್ಯಾಸಕ್ರಮದಲ್ಲಿ ಸೃಷ್ಟಿನಿರೀಕ್ಷಣವಿಷಯವನ್ನು ಸೇರಿಸಿದ್ದನು. ಬೇರೆ ಬೇರೆ ವನಸ್ಪತಿಗಳು ಹಾಗು ಅವುಗಳ ಬೇರೆ ಬೇರೆ ಅವಯವಗಳು, ಬೇರೆ ಬೇರೆ ಆಕಾರದ ಹಾಗು ತರತರದ ಅವಯವಗಳುಳ್ಳ ಪ್ರಾಣಿಗಳು ಮುಂತಾದವುಗಳನ್ನು ಹುಡುಗರಿಂದ ಲಕ್ಷಪೂರ್ವಕವಾಗಿ ನಿರೀಕ್ಷಣೆಮಾಡಿಸುತ್ತ ಹೋಗಬೇಕು. ಈ ನಿರೀಕ್ಷಣದಲ್ಲಿ ಯಾವ ಮಾನದಿಂದ ಏಕಾಗ್ರತೆಯುಂಟಾಗುವದೋ ಆ ಮಾನದಿಂದ ಹುಡುಗರ ಮನಸ್ಸಿನಲ್ಲಿ ಹೆಚ್ಚು ಭರದಿಂದ ಹಾಗು ಪೂರ್ಣವಾದ ಪರಿಣಾಮಗಳುಂಟಾಗುವವು; ಹಾಗು ಅವರ ಮನಸ್ಸಿನಲ್ಲಿ ಸೌಂದರ್ಯಭಾವನೆಯು ಚನ್ನಾಗಿ ಉದಯಹೊಂದುವದು. ಚಿತ್ರಕಲೆಯನ್ನು ಕಲಿಸುವ ಪರಿಪಾಠವು ಪೆಸ್ಟಾಲೋಝಿಯ ಕಾಲದಲ್ಲಿ ಇದ್ದೇ ಇತ್ತು. ಅದರ ಸಂಗಡ ಗಾಯನದ ಅಭ್ಯಾಸವನ್ನೂ ಸೇರಿಸಬೇಕೆಂದು ಅವನು ಹೇಳುತ್ತಿದ್ದನು. ಯಾಕಂದರೆ, ಈ ವಿಷಯಗಳಿಂದ ಹುಡುಗರ ಮನೋರಂಜನೆಯಾಗಿ ಶಿಕ್ಷಣದಲ್ಲಿ ಆಸ್ಥೆಯುಂಟಾಗುವದು. ಶಿಕ್ಷಣದ ಗಾಂಭೀರ್ಯವನ್ನು ಕಡಿಮೆಮಾಡದೆ, ಹುಡುಗರ ಮನಸ್ಸನ್ನು ಆನಂದಿತ ಸ್ಥಿತಿಯಲ್ಲಿ ಇಡಲಿಕ್ಕೆ ಇವೇ ವಿಷಯಗಳಲ್ಲಿ ವಿಶೇಷ ಅನುಕೂಲತೆ ಇರುವದು. ಉಳಿದ ವಿಷಯಗಳಲ್ಲಿ ಈ ಅನುಕೂಲತೆ ಇರುವದಿಲ್ಲ. ಮಧುರವಾದ ಧ್ವನಿಯ ಶ್ರವಣದಿಂದ ಕೆಲಕಾಲದ ವರೆಗೆ ಮನಸ್ಸು ಬಂದುತರದ ನಿರ್ವಿಕಲ್ಪಾವಸ್ಥೆಯನ್ನು ಹೊಂದುವದು. ಇದರಿಂದ ಹುಡುಗರಿಗೆ ಯಾವದೇ ಒಂದು ವಿಷಯದಲ್ಲಿ ತಾದಾತ್ಮ್ಯವುಂಟಾಗುವ ರೂಢಿಯುಂಟಾಗುವದು.

ನೈತಿಕ ಶಿಕ್ಷಣ, ಧಾರ್ಮಿಕ ಶಿಕ್ಷಣ ಇವೇ ಯಾವತ್ತು ಶಿಕ್ಷಣದ ಅಸ್ತಿವಾರವೆಂದು ಪೆಸ್ಟಾಲೋಝಿಯು ಹೇಳುತ್ತಿದ್ದನು. ಅವನ ದೇಶದೊಳಗಿನ ಒಕ್ಕಲಿಗರ ದುಃಖಿತಾವಸ್ಥೆಯನ್ನೂ ಅವರ ನೀತಿಭ್ರಷ್ಟತೆಯನ್ನೂ ನೋಡಿ, ಅವನ ಮನಸ್ಸಿನಲ್ಲಿ ಕನಿಕರವುಂಟಾಗಿ ಅವನು ಆ ವಿಷಯದ ಶಿಕ್ಷಣದ ಕಾರ್ಯವನ್ನು ಆರಂಭಿಸಿದನು. ಮನುಷ್ಯನು ಬೌದ್ಧಿಕ ವಿಷಯಗಳಲ್ಲಿ ಎಷ್ಟೇ ಪಾರಂಗತನಾದರೂ ಅವನಲ್ಲಿ ನೈತಿಕ ಹಾಗು ಧಾರ್ಮಿಕ ತತ್ವಗಳು ನೆಲೆಗೊಳ್ಳದಿದ್ದರೆ, ಅವನ ಜ್ಞಾನದ ಉಪಯೋಗವು ಎಷ್ಟು ಮಾತ್ರವೂ ಆಗಲಾರದು. ಧಾರ್ಮಿಕ ಶಿಕ್ಷಣವನ್ನು ಕೊಟ್ಟರೆ, ಅದರ ಸಂಗಡ ನೈತಿಕ ಶಿಕ್ಷಣವು ತಾನಾಗಿಯೇ ದೊರೆಯುವದು. ಅದನ್ನು ಬೇರೆಯಾಗಿ ಕೊಡುವ ಕಾರಣವಿಲ್ಲ. ಪರಮೇಶ್ವರನು ನಮ್ಮ ನಿಯಾಮಕನಾಗಿರುವನು. ಅವನನ್ನು ಸ್ಮರಿಸುವದು ನಮ್ಮ ಆದ್ಯ ಕರ್ತವ್ಯವು. ನಮ್ಮ ಯಾವತ್ತು ಕಾರ್ಯಗಳನ್ನು ಈಶ್ವರಸಾಕ್ಷಿಯಿಂದ ಮಾಡುವದು, ಸಂಕಟಸಮಯದಲ್ಲಿ ಅವನನ್ನು ಸ್ಮರಿಸುವದು, ಈ ಸಂಗತಿಗಳಿಂದ ನಿಜವಾದ ನೈತಿಕ ಶಿಕ್ಷಣವು ದೊರೆಯುವದು. ಬಹು ಜನರು ನೈತಿಕ ಶಿಕ್ಷಣವು ಧಾರ್ಮಿಕ ಶಿಕ್ಷಣದಿಂದ ತೀರ ಭಿನ್ನವಾದದ್ದೆಂದು ತಿಳಿಯುವರು. ಆದರೆ ಪೆಸ್ಟಾಲೋಝಿಯು ಹಾಗೆ ತಿಳಿಯುತ್ತಿದ್ದಿಲ್ಲ. ಅವನು ಪ್ರತಿಯೊಬ್ಬನಿಗೆ ದೇವರನ್ನು ಸ್ತುತಿಸಲಿಕ್ಕೂ, ವಿಚಾರ ಮಾಡಲಿಕ್ಕೂ, ಕೆಲಸ ಮಾಡಲಿಕ್ಕೂ ಕಲಿಸಬೇಕಾಗುವದೆಂದು ಹೇಳುತ್ತಿದ್ದನು. ಧಾರ್ಮಿಕ ಶಿಕ್ಷಣ ಕೊಟ್ಟು ಹುಡುಗರ ಮನೋವೃತ್ತಿಗಳನ್ನು ಯೋಗ್ಯ ಮಾರ್ಗಕ್ಕೆ ಹಚ್ಚಿದರೆ ಅವರ ವಿಚಾರ ಮತ್ತು ಕೃತಿ ಈ ವ್ಯಾಪಾರಗಳು ಸರಳವಾಗಿ ನಡೆಯುವವೆಂದು ಅವನು ನಿಶ್ಚಯವಾಗಿ ತಿಳಿದುಕೊಂಡಿದ್ದನು. ಡಾಕ್ಟರ ಜಾನ್‌ಸನ್ನನು ಒಂದು ಕಡೆಯಲ್ಲಿ ಹೇಳಿರುವದೇನೆಂದರೆ– ಧಾರ್ಮಿಕ ಹಾಗು ನೈತಿಕ ದೃಷ್ಟಿಯಿಂದ, ಸತ್ಯಾಸತ್ಯಗಳನ್ನು ಪರೀಕ್ಷಿಸುವ ಹಾಗು ವಿವೇಚನೆ ಮಾಡುವ ಸಾಮರ್ಥ್ಯವು ಉಂಟಾಗುವದೇ ಯಾವತ್ತು ಗುಣಗಳಲ್ಲಿ ಹೆಚ್ಚಿನ ಹಾಗು ಅತ್ಯಾವಶ್ಯಕವಾದ ಗುಣವಾಗಿರುವದು. ಪೆಸ್ಟಾಲೋಝಿಯ ಅಭಿಪ್ರಾಯವಾದರೂ ಹೀಗೆಯೇ ಇತ್ತು. ಬುದ್ಧಿವಂತರಾದ ಯಾವತ್ತು ಜನರ ಲಕ್ಷವು ಸಂಪೂರ್ಣವಾಗಿ ಭೌತಿಕ ಜ್ಞಾನದ ಕಡೆಗೇ ಹೊರಳಿರುವದರಿಂದ ಧಾರ್ಮಿಕ ವಿಚಾರಗಳು ಎಲ್ಲ ಕಡೆಯಲ್ಲಿಯೂ ಸಂಕೋಚವಾಗಿರುವವು. ಇದು ಒಳ್ಳೆಯ ಲಕ್ಷಣವಲ್ಲ, ಎಂದು ಅವನು ಹೇಳುತ್ತಿದ್ದನು.

ಪೆಸ್ಟಾಲೋಝಿಯ ಶಿಕ್ಷಣವಿಷಯಕ ಅಭಿಪ್ರಾಯದ ಸಾರಾಂಶ ವೇನೆಂದರೆ:—"ಪರಮೇಶ್ವರನು ಪ್ರತಿಯೊಬ್ಬ ವಿದ್ಯಾರ್ಥಿಯ ಮನಸ್ಸಿನಲ್ಲಿ ಇಟ್ಟಿರುವ ಸ್ವಾಭಾವಿಕ ಭಾವನೆಗಳನ್ನು ಜಾಗ್ರತಗೊಳಿಸಲಿಕ್ಕೆ ಶಿಕ್ಷಕನು ಯತ್ನಿಸಬೇಕು. ಅವರ ವಿಶೇಷ ಮಾನಸಿಕ ಶಕ್ತಿಗಳನ್ನು ನಿರೀಕ್ಷಿಸಿ, ಅವುಗಳಿಗೆ ಅನುರೂಪವಾದ ಶಿಕ್ಷಣವನ್ನು ಕೊಡಬೇಕು. ಶಿಕ್ಷಣವನ್ನು ಸಾವಕಾಶವಾಗಿ ಸಾಗಿಸಬೇಕು. ಹುಡುಗರ ಜೀವನಕ್ರಮದೊಳಗಿನ ಸಾಮಾನ್ಯ ಸಂಗತಿಗಳ ವಿವರಣೆಯಿಂದ ಅವರನ್ನು ಬೋಧಿಸಿ, ಒಳಿತು ಕೀನುಗಳ ಹಾಗು ಹಿತಾಹಿತಗಳ ಅನುಭವವನ್ನು ಅವರಿಗೆ ತಂದುಕೊಡಬೇಕು. ಮಾನಸಶಾಸ್ತ್ರದ ನಿಯಮಗಳನ್ನು ಬದಿಗೊತ್ತುವ ಶಿಕ್ಷಣವು ನಿರರ್ಥಕವಾದದ್ದು. ಶಿಕ್ಷಣದ ವಿಷಯಗಳಲ್ಲಿ ಗಾಯನ-ಸೃಷ್ಟಿನಿರೀಕ್ಷಣಗಳನ್ನು ಸೇರಿಸಬೇಕು. ಹುಡುಗರಿಗೆ ಮಮತೆಯಿಂದಲೂ ನಿಜವಾದ ಆಸ್ಥೆಯಿಂದಲೂ ಉತ್ಸಾಹದಿಂದಲೂ ಕಲಿಸಬೇಕು. ವಿದ್ಯಾರ್ಥಿಗಳ ಮನಸ್ಸಿನಲ್ಲಿ ಭೂತದಯೆ, ಭಕ್ತಿ ಎಂಬ ಸಾತ್ವಿಕ ಮನೋಭಾವನೆಗಳನ್ನು ಉಂಟು ಮಾಡಬೇಕು. ಹುಡುಗರಕಡೆಗೆ ಚಿಕ್ಕಂದಿನಿಂದಲೂ ಚನ್ನಾಗಿ ಲಕ್ಷ್ಯಗೊಟ್ಟು, ಅವರ ಬೌದ್ಧಿಕ ಶಾರೀರಿಕ ಶಕ್ತಿಗಳನ್ನು ಬಲಪಡಿಸಿ, ಅವರಲ್ಲಿ ತಮ್ಮ ತಮ್ಮ ವ್ಯವಸಾಯಗಳನ್ನು ಆನಂದದಿಂದ ಸ್ವೀಕರಿಸುವಂಥ ಉತ್ಸಾಹವನ್ನು ಉಂಟು ಮಾಡಬೇಕು. ವಿಶೇಷವಾಗಿ, ಅವರ ಮನಸ್ಸಿನಲ್ಲಿ ಧರ್ಮಜಾಗ್ರತೆಯನ್ನುಂಟುಮಾಡಿ ಅವರು ಸಚ್ಚೀಲವುಳ್ಳವರಾಗುವಂತೆ ಮಾಡುವದು ಶಿಕ್ಷಕನ ಅದ್ಯ ಕರ್ತವ್ಯವಾಗಿರುವದು."

ಗಣಿತಶಾಸ್ತ್ರದ ಇತಿಹಾಸದೊಳಗಿನ ಕೆಲವು ಸಂಗತಿಗಳು.

ಇತಿಹಾಸವೆಂದರೇನೆಂಬದನ್ನೂ, ಹಿಂದುಸ್ತಾನ, ಇಂಗ್ಲಂಡ, ಜಪಾನ, ಜರ್ಮನಿ ಮುಂತಾದ ಜಗತ್ತಿನೊಳಗಿನ ಬೇರೆ ಬೇರೆ ದೇಶಗಳ ಇತಿಹಾಸಗಳು ಬೇರೆ ಬೇರೆ ಇರುವವೆಂಬದನ್ನೂ ಸುಶಿಕ್ಷಿತರೆಂದೆನಿಸಿಕೊಳ್ಳುವ ಯಾವತ್ತು ಜನರು ತಿಳಿದೇ ಇರುವರು. ಆದರೆ ಗಣಿತ ಶಾಸ್ತ್ರದ ಇತಿಹಾಸವೆಂಬ ಶಬ್ದವನ್ನು ಅನೇಕರು ಕೇಳರಲಿಕ್ಕಿಲ್ಲ. ಇದರಲ್ಲಿ ಆಶ್ಚರ್ಯವೇನೂ ಇಲ್ಲ.

"अतिपरिचयाद्वज्ञा" ಎಂಬ ನ್ಯಾಯದಂತೆ ಒಮ್ಮೊಮ್ಮೆ ನಮ್ಮೊಡನೆ ಅತಿ ನಿಕಟವಾದ ಸಂಬಂಧವುಳ್ಳ ವಸ್ತುಗಳ ವಿಷಯದಲ್ಲಿಯೂ ನಾವು ವಿಚಾರ ಮಾಡುವದಿಲ್ಲ. ಉದಾಹರಣಾರ್ಥವಾಗಿ ಬಿಂದಾನೊಂದು ಕಾಲದಲ್ಲಿ ವಾಯು ರೂಪದಲ್ಲಿದ್ದ ಭೂಮಿಯ ಆವರಣದೊಳಗಿನ ಕೆಲವು ಘಟಕಗಳು ಸೃಷ್ಟಿನಿ ಯಮಗಳಿಗನುಗನುರೂಪವಾಗಿ ರೂಪಾಂತರ ಹೊಂದುತ್ತ ಬಂದು, ಈಗಿನ ಮನುಷ್ಯ ಶರೀರ ಉಂಟಾಗಿದೆ ಎಂಬ ಡಾರ್ವಿನ್ ಸಾಹೇಬರ ಉತ್ಕ್ರಾಂತಿ ತತ್ವದ, ಅಂದರೆ ಮನುಷ್ಯಾವತಾರದ ಇತಿಹಾಸದ ವಿಷಯವಾಗಿ, ಮನು ಷ್ಯರಾದ ನಮ್ಮಲ್ಲಿ ಎಷ್ಟು ಜನರು ಎಷ್ಟು ಸಂಗತಿಗಳನ್ನು ಅರಿತಿರುವರು? ಇದರಂತೆಯೇ ಸದಾಸರ್ವದಾ ನಮ್ಮ ಕಣ್ಣ ಮುಂದೆ ಇರುತ್ತಿರುವ ಅನೇಕ ಸಂಗತಿಗಳ ವಿಷಯದಿಂದ ನಮ್ಮಲ್ಲಿ ಅನೇಕ ತರದ ಅಜ್ಞಾನವು ನಮ್ಮ ತಾತ್ಸಾರದ ಮೂಲಕವಾಗಿ ವಾಸಿಸುತ್ತಿರುವದೆಂಬದನ್ನು ಮರೆಯಲಾಗದು ಗಣಿತಶಾಸ್ತ್ರದ ಸಂಬಂಧದಿಂದಲೂ ಇದೇ ನ್ಯಾಯವು ಸರಿಬೀಳುತ್ತದೆ ಗಣಿತಶಾಸ್ತ್ರದ ಸಂಬಂಧದ ಅನೇಕ ಸಂಗತಿಗಳನ್ನು ನಾವು ಪ್ರತಿದಿನ ಕಲಿಯುತ್ತೇವೆ, ಕಲಿಸುತ್ತೇವೆ, ಅವುಗಳನ್ನು ವ್ಯವಹಾರದಲ್ಲಿ ಉಪ ಯೋಗಿಸುತ್ತೇವೆ. ಆದರೆ ಆ ಶಾಸ್ತ್ರವು ಸಾಂಪ್ರತಕಾಲದ ಅವಸ್ಥೆಯನ್ನು ಒಮ್ಮೆಲೇ ಹೊಂದಿತೋ? ಎಂದು ಹೊಂದಿತು? ಯಾವ ಕ್ರಮದಿಂದ ಹೊಂದಿತು? ಯಾವದೊಂದು ರಾಷ್ಟ್ರದ ಇತಿಹಾಸದಲ್ಲಿ ಬೇರೆ ಬೇರೆ ಮಹಾ ಪುರುಷರ ಚರಿತ್ರೆಗಳು ಚಿತ್ರಿತವಾಗಿರುವಂತೆ ಗಣಿತಶಾಸ್ತ್ರದ ಇತಿಹಾಸದಲ್ಲಿ ಯಾವ ಮಹಾಪುರುಷರು ಯಾವ ರೀತಿಯಿಂದ ಪ್ರಸಿದ್ಧಿಯನ್ನು ಹೊಂದಿ ದರು? ಸದ್ಯಕ್ಕೆ ನಮಗೆ ದೊರೆತಿರುವ ಗಣಿತಶಾಸ್ತ್ರವೆಂಬ ವಿಸ್ತಾರವಾದ ರಾಜ್ಯದ ಯಾವ ಯಾವ ಭಾಗಗಳನ್ನು ಯಾವ ಯಾವ ಶೂರಪುರುಷರು ಎಂದು ಹ್ಯಾಗೆ ಸಂಪಾದಿಸಿದರು? ಇವೇ ಮೊದಲಾದ ಸಂಗತಿಗಳ ಕಡೆಗೆ ನಮ್ಮ ಲಕ್ಷವು ಹೋಗುವದೇ ಇಲ್ಲ. ಪ್ರಕೃತಕ್ಕೆ ಈ ಸಂಗತಿಗಳಲ್ಲಿ ಕೆಲವ ಚಮತ್ಕಾರವಾದ ಹಾಗು ಸುಲಭವಾದ ಸಂಗತಿಗಳನ್ನು ಇಲ್ಲಿ ಹೇಳುವೆವು

ಗಣಿತಶಾಸ್ತ್ರದ ಐತಿಹಾಸಿಕ ಕಾಲದಲ್ಲಿ ಸಾಮಾನ್ಯವಾಗಿ ಮೂರ ಭಾಗಗಳನ್ನು ಮಾಡುವದುಂಟು. ಕ್ರಿ. ಶ. ಪೂ. ಇ. ಸ. ೬೦೦ರಿಂದ ಕ್ರಿ. ಶ ಇ. ಸ. ೬೦೦ರವರೆಗಿನ ೧೨೦೦ ವರುಷಗಳ ಕಾಲವು ಮೊದಲನೆಯ ಭಾಗ ದಲ್ಲಿ ಸೇರುವದು. ಈ ಕಾಲದಲ್ಲಿ ಭೂಮಿತಿಶಾಸ್ತ್ರವು ಒಳ್ಳೇ ಅಭಿವೃದ್ಧಿಯನ

ಹೊಂದಿತು. ಇಲ್ಲಿಂದ ಮುಂದಿನ ಇ. ಸ. ೧೬೦೦ರವರೆಗಿನ ಕಾಲವು ಎರ ತನೆಯ ಭಾಗದಲ್ಲಿ ಎಣಿಸಲ್ಪಡುವದು. ಈ ಅವಧಿಯಲ್ಲಿ ಅಂಕಗಣಿತ, ಬೀಜ ಗಣಿತ, ತ್ರಿಕೋಣಮಿತಿ ಈ ಶಾಸ್ತ್ರಗಳು ಪ್ರೌಢದಶೆಯನ್ನು ಹೊಂದಿದವು. ಅಂಕಗಣಿತವು ಅನಂತಾಂಶ ಗಣನೆಯ ವರೆಗಿನ ಉನ್ನತಾವಸ್ಥೆಯನ್ನು ಹೊಂದಿತು. ಇಲ್ಲಿಂದ ಮುಂದಿನ ಕಾಲದಲ್ಲಿ ಗಣಿತಶಾಸ್ತ್ರದೊಳಗಿನ ಬೇರೆ ಬೇರೆ ವಿಷಯಗಳು ಭೌತಿಕ ಶಾಸ್ತ್ರಗಳಲ್ಲಿ ಉಪಯೋಗಿಸಲ್ಪಡಹತ್ತಿದವು.

ಗಣಿತಶಾಸ್ತ್ರದ ಈ ಅಭಿವೃದ್ಧಿಯು ಸ್ವಾಭಾವಿಕವಾಗಿ ಆಗುತ್ತ ಹೋಯಿತೆಂದು ತೋರುತ್ತದೆ. ಮನುಷ್ಯಪ್ರಾಣಿಯು ಕೇವಲ ವನೆಚರಾವ ಸ್ಥೆಯನ್ನು ದಾಟಿ, ಮನೆಮಾರುಗಳನ್ನು ಮಾಡಿಕೊಂಡು ಒಕ್ಕಲಿಗನಾಗಿ ಇರ ಹತ್ತಿದ ಬಳಿಕ, ತನ್ನ ಹೊಲವನ್ನು ಯಾವ ರೀತಿಯಿಂದಾಗಿ ಅಳೆದು ಪಾಲು ಮಾಡಿಕೊಳ್ಳಬೇಕೆಂಬ ಪ್ರಶ್ನೆಯು ಮೊಟ್ಟಮೊದಲು ಅವನ ಎದುರಿಗೆ ಬಂದಿ ರಲಿಕ್ಕೆ ಬೇಕು. ಆದರೆ ಭೌತಿಕಶಾಸ್ತ್ರಗಳ ಯುಗವಾದ ಈಚೆಗಿನ ಶತಮಾ ನಗಳಲ್ಲಿ ಗಣಿತ ಶಾಸ್ತ್ರವಿಷಯಕವಾದ ಅನೇಕ ಪ್ರಶ್ನೆಗಳ ಏಳಿಗೆಯು ಭೌತಿಕ ಶಾಸ್ತ್ರಗಳೊಳಗಿನ ಅನೇಕ ದುರ್ಗಮ ಸಿದ್ಧಾಂತಗಳನ್ನು ಸ್ಥಾಪಿಸುವದರ ಕಡೆಗೆ ಹೊರಳಿರುವದು.

ಮುಂದೆ ಹೇಳಿದ ಗಣಿತಶಾಸ್ತ್ರದ ಐತಿಹಾಸಿಕ ಕಾಲಕ್ಕಿಂತಲೂ ಪೂರ್ವ ನಲ್ಲಿ ಅಂದರೆ ಕ್ರಿ. ಶ. ಪೂ. ಇ. ಸ. ೬೦೦ಕ್ಕಿಂತಲೂ ಪೂರ್ವವಲ್ಲಿ ಪದಾರ್ಥ ಗಳ ಎಣಿಕೆಯ ಸಂಬಂಧದ ಕಲ್ಪನೆಯು ಗೊತ್ತಾಗಿದ್ದಿಲ್ಲವೆಂಬಂತಿಲ್ಲ. ಆ ಸಮಯದಲ್ಲಿ ಒಳ್ಳೇ ಊರ್ಜಿತಾವಸ್ಥೆಯನ್ನು ಹೊಂದಿರುವ ಅನೇಕ ಸಣ್ಣ ಸಣ್ಣ ರಾಷ್ಟ್ರಗಳು ಗ್ರೀಸದೇಶದ ನೆರೆಯಲ್ಲಿ ಇದ್ದವು. ಆ ರಾಷ್ಟ್ರಗಳಲ್ಲಿ ಪದಾ ರ್ಥಗಳ ಎಣಿಕೆಯ ಅಂದರೆ ಸಂಖ್ಯೆಯ ಕಲ್ಪನೆಯು ಇತ್ತೆಂದು ತರ್ಕಿಸಬ ಹುದಾಗಿದೆ; ಹಾಗು ಭಾರತ, ಭಾಗವತ, ರಾಮಾಯಣ ಮೊದಲಾದ ಸಿಂದೂ ಆರ್ಯರ ಪೌರಾಣಿಕ ಗ್ರಂಥಗಳಲ್ಲಿ ಅತಿ ಪ್ರಾಚೀನಕಾಲದಲ್ಲಿ ಅವರಿಗೆ ಸಂಖ್ಯೆಯ ಕಲ್ಪನೆಯು ಇತ್ತೆಂಬ ಬಗ್ಗೆ ಆಧಾರಗಳು ದೊರೆಯುವವು. ಮಹಾಭಾರತದ ಆದಿಪರ್ವದ ಪ್ರಾರಂಭನಲ್ಲಿ ಅಕ್ಷೌಹಿಣೀ ಸೇನೆಯ ಪರಿ ಮಾಣವು ವರ್ಣಿಸಲ್ಪಟ್ಟಿರುವದು. ಅದರೊಳಗಿನ "**एको रथो गजश्चैव**" ಇತ್ಯಾದಿ ಶ್ಲೋಕಗಳಲ್ಲಿ ತ್ರಿಗುಣ, ದಶಗುಣ, ಏಕವಿಂಶತಿ, ತಿಸ್ರಃ, **पंच षष्टिः सहस्राणि, पंचाशत्सप्ततिः** ಇವೇ ಮೊದಲಾದ ದಶಕಪದ್ಧ

ಯಿಂದ ಎಣಿಕೆ ಮಾಡಿದ ಸಂಖ್ಯಾವಾಚಕ ಶಬ್ದಗಳು ಕಂಡುಬರುವವು. ಇದರಂತೆ ಭಾಗವತದ ಐದನೇ ಸ್ಕಂಧದ ಹದಿನಾರನೇ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟ ಭೂಗೋಲದ ವರ್ಣನೆಯಲ್ಲಿ ದ್ವಾತ್ರಿಂಶತ್ (೩೨), ಷೋಡ ಸಸಹಸ್ರ(೧೬೦೦೦), ಏಕಾದಶ ಶತಂ (೧೧೦೦) ಇವೇ ಮೊದಲಾದ ದಶಕ ಪದ್ಧತಿಯೊಳಗಿನ ಸಂಖ್ಯೆಗಳನ್ನು ಹೇಳುವಂಥ ಪದಗಳು ಕಂಡುಬರುವವು. ಇವುಗಳ ಮೇಲಿಂದ ಪ್ರಾಚೀನ ಅಥವಾ ಪೌರಾಣಿಕ ಕಾಲದಲ್ಲಿ ಆರ್ಯರಿಗೆ ಪದಾರ್ಥಗಳ ಎಣಿಕೆಯ ಹಾಗು ಆ ಕೆಲಸದಲ್ಲಿ ಈಗಿನ ಜನರು ಉಪಯೋ ಗಿಸುತ್ತಿರುವ ಶಂಕುವಿನಂಥ ಸಾದಾ ಯಂತ್ರಗಳನ್ನು ಉಪಯೋಗಿಸುವ ಕ್ರೂಢಿಯು ಇತ್ತೆಂದು ಇತಿಹಾಸದಿಂದ ಗೊತ್ತಾಗುವದು. ಆದರೆ ಇವುಗಳ ಸಂಬಂಧದಿಂದ ಕಲ್ಪಿಸಲ್ಪಟ್ಟ ಬೇರೆ ಬೇರೆ ನಿಯಮಗಳು ಮಾತ್ರ ಸಶಾಸ್ತ್ರ ಬಾದವುಗಳಿರದೆ ಕೇವಲ ಅವಲೋಕನ ಅನುಭವಗಳ ಸಹಾಯದಿಂದ ಕೊತ್ತು ಮಾಡಿಕೊಂಡವುಗಳಿದ್ದವೆಂದು ತಿಳಿದು ಬರುವದು.

ಸಾಂಪ್ರತಕಾಲದಲ್ಲಿಯಾದರೂ ಗಣಿತಶಾಸ್ತ್ರವು ಬಹಳವಾಗಿ ಅಭಿವೃ ದ್ಧಿ ಹೊಂದಿದ್ದರೂ ಅದರ ಬೆಳುವಣಿಗೆ ಕಟ್ಟಾಗಿರುವದೆಂದು ಮಾತ್ರ ತಿಳಿಯು ವಾಗದು. ವಿಶಾಲವಾದ ವಟವೃಕ್ಷವು ದಿನದಿನಕ್ಕೆ ಹೊಸ ಹೊಸ ಜಡಿಗಳನ್ನು ಬಿಡುತ್ತ, ಬೇರೆ ಬೇರೆ ಶಾಖೋಪಶಾಖೆಗಳನ್ನು ಪಸರಿಸುತ್ತ ಹೋಗು ವಂತೆ, ಈ ಶಾಸ್ತ್ರದಲ್ಲಿಯಾದರೂ ಮನುಷ್ಯಪ್ರಾಣಿಯ ಅಸಾಧಾರಣವಾದ ಬುದ್ಧಿಶಕ್ತಿಯನ್ನನುಸರಿಸಿದ ಬೇರೆ ಬೇರೆ ಸಿದ್ಧಾಂತಗಳೂ ಉಪಸಿದ್ಧಾಂತ ಗಳೂ ಹುಟ್ಟುತ್ತ ನಡೆದಿರುವವು. ಆದರೆ ಈ ಸಂಗತಿಯು ಸಾಮಾನ್ಯ ವಿಚಾರಿಗಳ ಜ್ಞಾನಚಕ್ಷುಸ್ಸಿನ ದೃಷ್ಟಿವಮರ್ಯಾದೆಯ ಹೊರಗಿನ ಸಂಗತಿಗ ಳಾಗಿರುವದರಿಂದ ಸಾಮಾನ್ಯವಾಗಿ ನೋಡುವವರಿಗೆ ಅದರ ಬೆಳುವಣಿಗೆಯು ಕಟ್ಟಾದಂತೆ ಭಾಸವಾಗಬಹುದು.

ಪ್ರಾಚೀನ ಕಾಲದಲ್ಲಿ ಈಗಿನಂತೆ ಸ್ಲೇಟು, ಪೆನ್ಸಿಲು, ಕಾಗದ ಮೊದ ಲಾದ ಲೇಖನ ಸಾಧನಗಳು ಇದ್ದಿಲ್ಲ. ಈ ಸಂಗತಿಯು ಆಗಿನ ಕಾಲದ ಗಣಿತಶಾಸ್ತ್ರಜ್ಞರಿಗೆ ಅನಿವಾರ್ಯವಾದ ಮಹತ್ವದ ಅಡಚಣಿಯಾಗಿತ್ತು. ನುರದ ಹಲಿಗೆಗಳ ಮೇಲೆ ಹುಡಿಯನ್ನು ಹರವಿ ಕೈ ಬೆರಳಿನಿಂದ ಬರೆಯುವ ಕ್ರೂಢಿಯು ನಮ್ಮಲ್ಲಿ ಮೊನ್ನೆ ಮೊನ್ನಿನ ತನಕ ಇತ್ತೆಂದು ನಮ್ಮ ಹಿರಿಯರು ಹೇಳುವದನ್ನು ನಾವು ಕೇಳಿರುವೆವು. ಬಹುಕಾಲ ಬಾಳತಕ್ಕ ಲೇಖಗಳನ್ನು

ತಾಡವಾಲೆಗಳ ಮೇಲೆ ಉಕ್ಕಿನ ಕಂಟಿದಿಂದ ಬರೆಯುತ್ತಿದ್ದರು. ಇಂಥ ಲೇಖಗಳನ್ನು ಈಗಲೂ ಅನೇಕ ಕಡೆಗಳಲ್ಲಿ ನೋಡಬಹುದು, ಅರ್ಕಿಮಿಡೀಸನೆಂಬ ಹೆಸರುವಾಸಿಯಾದ ತತ್ವಜ್ಞನ ಮನೆಗೆ ಶತ್ರುಗಳು ಮುತ್ತಿಗೆ ಹಾಕಿದಾಗ, ಅವನು ನೆಲದ ಮೇಲೆ ಉಸುಕನ್ನು ಹರವಿ ಅದರ ಮೇಲೆ ತೆಗೆದ ಭೂಮಿತಿಯ ಆಕೃತಿಯನ್ನು ಮನನೆಮಾಡುತ್ತ ಕುಳಿತುಕೊಂಡಿದ್ದನೆಂದು ಇತಿಹಾಸದಿಂದ ತಿಳಿಯುತ್ತದೆ. ಆಗಿನಕಾಲದ ಇಂಥ ದೊಡ್ಡ ಶಾಸ್ತ್ರಜ್ಞರಿಗೂ ಸಹ ನೆಲದ ಮೇಲೆ ಹರವಿದ ಉಸುಕು, ಕೈಬೆರಳು ಇವೇ ಲೇಖನಸಾಮಗ್ರಿಗಳಾಗಿದ್ದವು! ತೀರ ಸಾಮಾನ್ಯ ಕೆಲಸಗಳಿಗೂ ಸಹ ಕಂಪಾಸು ರೂಲು ಪಟ್ಟಿಗಳನ್ನು ಉಪಯೋಗಿಸುತ್ತಿರುವ ನಮಗೆ ಈ ಸಂಗತಿಗಳನ್ನು ಕೇಳಿ ಆಶ್ಚರ್ಯವುಂಟಾಗುವದು ಸ್ವಾಭಾವಿಕವು.

ನಮಗೆ ಈಗ ತೀರ ಸ್ವಾಭಾವಿಕವಾಗಿ ತೋರುತ್ತಿರುವ ಗಣಿತಶಾಸ್ತ್ರದ ನಿಯಮಗಳನ್ನು ಸಹ ಆರಂಭದಲ್ಲಿ ಕಂಡು ಹಿಡಿಯಲಿಕ್ಕೆ ದೀರ್ಘಕಾಲದ ಅಭ್ಯಾಸವೂ ಹೆಚ್ಚು ಶ್ರಮವೂ ಹತ್ತಿರುವವು. ಇಂಥ ತೀರ ಸಾಮಾನ್ಯಕೃತ್ಯಗಳು ಸಹ ಎಷ್ಟೊಂದು ಶ್ರಮದಿಂದ ಸಾಧಿಸಲ್ಪಡುತ್ತಿದ್ದವೆಂಬದು ಕೆಳಗೆ ಹೇಳಿರುವ ಒಂದು ಆಖ್ಯಾಯಿಕೆಯ ಮೇಲಿಂದ ತಿಳಿದು ಬರುವದು.

ಪಿಥ್ಯಾಗೋರಾಸನೆಂಬ ಹೆಸರಾದ ಗಣಿತಶಾಸ್ತ್ರಜ್ಞನು ಯುಕ್ಲಿಡನ ಭೂಮಿತಿಯ ಎರಡನೇ ಪುಸ್ತಕದೊಳಗಿನ ೧೪ನೇ ಸಿದ್ಧಾಂತದ ಆಕೃತಿಯು ತನಗೆ ಸೂಚಿಸಿದ್ದಕ್ಕಾಗಿ ಉಂಟಾದ ಆನಂದದಿಂದ ಆಗಿನ ಕಾಲದ ಸಾಮಾಜಿಕ ವಿಚಾರಗಳಿಗೆ ಅನುರೂಪವಾಗಿ ತನ್ನ ಕುಲ ದೇವತೆಗೆ ಒಂದು ಎತ್ತನ್ನು ಬಲಿಕೊಟ್ಟನಂತೆ!

ಶಾಲಾಧ್ಯಾಪಕರ ಲೇಖಗಳು.

:o:

ಶ್ರೀಯುತ ರಾ॥ ಗುರುಮೂರ್ತ ಕರ್ನಾಟಕ ಶಾಲಾಪತ್ರಿಕಾಕರ್ತರ ಸನ್ನಿಧಿಗೆ.

ತಮ್ಮ ಶಿಷ್ಯಮಂಡಳಿಯಲ್ಲೋರ್ವನ ಶಿರಸಾ॥ ವಿಜ್ಞಾಪಿಸಿಕೊಳ್ಳುವದೇನಂದರೆ—

ಪೂಜ್ಯರೇ, ಕೆಳಗೆ ಕೊಟ್ಟ ಎರಡು ಉದಾಹರಣೆಗಳನ್ನು ಯುಕ್ತ ಕಂಡಲ್ಲಿ ತಮ್ಮ ಸುಂದರ ಮಾಸಪತ್ರಿಕೆಯಲ್ಲಿ ದಯವಾಡಿ ಇಂಬುನ್ನಿತ್ತು ಮುದ್ರಿಸಬೇಕೆಂದು ಬೇಡುತ್ತೇನೆ.

೧ ನೇ ಉದಾಃ—ಒಬ್ಬ ಹುಡುಗನು ಒಂದು ದುಡ್ಡಿಗೆ $\frac{1}{4}$ ಶೇ. ಬೆಲ್ಲವನ್ನೂ ಒಂದು ದುಡ್ಡು ಕೊಟ್ಟು $\frac{1}{3}$ ಶೇ. ಪೊಬ್ಬರಿಯನ್ನೂ, ಇನ್ನೊಂದು ದುಡ್ಡು ಕೊಟ್ಟು ೪ ಶೇ. ಭೈಮೂಗವನ್ನೂ ಹೀಗೆ ೩೦ ದುಡ್ಡಿನ ಜೀನಸು ತಕ್ಕೊಂಡನು. ಹಾಗು ತಾನು ತಕ್ಕೊಂಡ ಎಲ್ಲ ಜೀನಸನ್ನು ಒಟ್ಟು ತೂಗಿ ೩೦ ಶೇರು ಅದೆ ಎಂಬದನ್ನು ಮನಗಂಡನು. ಆದರೆ ಅವನು ಕೊಂಡ ಜೀನಸಿನ ಪ್ರತಿಯೊಂದರ ತೂಕವೆಷ್ಟು? ಇಲ್ಲವೆ ಪ್ರತಿಯೊಂದು ಜೀನಸು ಎಷ್ಟು ದುಡ್ಡಿನದು ಕೊಂಡಿದ್ದನು?

೨ ನೇ ಉದಾಃ—ಒಬ್ಬ ಬಾಗವಾನನು ೧ ದುಡ್ಡಿಗೆ ೩೦ ಅಂಜೀರುಹಣ್ಣುಗಳನ್ನೂ, ದುಡ್ಡಿಗೆ ೪ ಕಿತ್ತಳಿಹಣ್ಣುಗಳನ್ನೂ, ೪ ದುಡ್ಡಿಗೆ ಒಂದು ದಾಳಿಂಬದ ಹಣ್ಣನ್ನೂ ಕೊಡುತ್ತಾನೆ. ಒಬ್ಬನು ಇದೇ ದರದಿಂದ ೧೦೦ ದುಡ್ಡುಗಳನ್ನು ಕೊಟ್ಟು ೧೦೦ ಹಣ್ಣುಗಳನ್ನು ಕೊಂಡನು. ಆದರೆ ಆ ಬಾಗವಾನನು ಕೊಟ್ಟ ಪ್ರತಿಯೊಂದು ಜಾತಿಯ ಹಣ್ಣುಗಳೆಷ್ಟು!

ಇಂತಿ ಬಿನ್ನಹಂಗಳು.

ತಮ್ಮ ವಿಧೇಯ ಶಿಷ್ಯ
P. I. Yadikeri
ಹೆಡ್‌ಮಾಸ್ತರ.

ನೆಲೆಮಾಂವ ತಾ. ಸಿದ್ದಾಪೂರ
ತಾರೀಖು : ೮-೧೧-೧೯೧೩ ನೇ.

ಶ್ರೀ ರಾಮನು ಸೀತಾದೇವಿಯನ್ನು ಅಗ್ನಿಮುಖಾಂತರ ಪುನಃ ಸ್ವೀಕರಿಸಿದ್ದು.

ಬ್ರಾಹ್ಮಣರು ಸಂಸ್ಕೃತ ಭಾಷೆಯಲ್ಲಿ ರಾಮಾಯಣ ಗ್ರಂಥವನ್ನು ಬರೆದಿರುವಂತೆ ಜೈನರಾದರೂ ಸಂಸ್ಕೃತ ಭಾಷೆಯಲ್ಲಿ ರಚಿಸಿರುವರು. ಆಯಾ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದವರು ಅನೇಕ ಜನರಿರುವಪ್ಪೆ. ಅವರಲ್ಲಿ ಅಭಿನವ ಪಂಪನೆಂಬ ಕವಿಯು ಒಬ್ಬನಾಗಿರುವನು. ಇವನು ಜೈನಧರ್ಮದವನಾದ್ದರಿಂದ ಜೈನರಿಂದ ರಚಿತವಾದ ಸಂಸ್ಕೃತ ರಾಮಾಯಣದ ಭಾಷಾಂತರವನ್ನು ಮಾಡಿರುತ್ತಾನೆ. ಬ್ರಾಹ್ಮಣರ ಗ್ರಂಥದೊಳಗಿನ ಕಥಾಭಾಗಕ್ಕೂ ಜೈನರ ಗ್ರಂಥದೊಳಗಿನ ಕಥಾಭಾಗಕ್ಕೂ ಕೆಲವು ಕಡೆಗೆ ಭೇದವಿರುವದು. ಇಷ್ಟೇ ಅಲ್ಲ. ಹೆಸರುಗಳೂ ಭಿನ್ನವಾಗಿರುವವು. ಅಂಥ ಪ್ರಸಂಗಗಳು ಯಾವವೆಂದರೆಃ—

ಬ್ರಾಹ್ಮಣ ರಾಮಾಯಣದಲ್ಲಿ.	ಪಂಪ ರಾಮಾಯಣದಲ್ಲಿ.
(೧) ದಶರಥನಿಗೆ ಮೂವರು ಹೆಂಡಂದಿರಿದ್ದರು.	(೧) ಈ ಮೂವರಲ್ಲದೆ ಅಪರಾಜಿತೆಯೆಂಬ ನಾಲ್ಕನೆಯ ಹೆಂಡತಿಯಿದ್ದಳು.
(೨) ರಾಮನು ವನವಾಸಕ್ಕೆ ಹೋದನಂತರ ದಶರಥನು ಸ್ವಲ್ಪಕಾಲದಲ್ಲಿಯೇ ತೀರಿದನು.	(೨) ದಶರಥನು ಜೈನದೀಕ್ಷೆಯನ್ನು ತಕ್ಕೊಂಡು ತಪಶ್ಚರ್ಯೆಕ್ಕೆ ಹೋದನು.
(೩) ರಾಮನು ಕೃಷ್ಣನ ಅವತಾರ ತೆಗೆದುಕೊಂಡನು.	(೩) ರಾಮನು ಬಲರಾಮನ ಅವತಾರ ತೆಗೆದುಕೊಂಡನು. ಉದಾಃ-ಭರತಂಗೆ ಹಲಿ ಸಾವ್ರಾಜ್ಯ ಪಟ್ಟಮುಂ ಕಟ್ಟಿದಂ.

ಇವೇ ಮೊದಲಾದ ಕಥಾಭಾಗಗಳಲ್ಲಿ ಭೇದವಿದ್ದಂತೆ ರಾಮನ ಮಕ್ಕಳಾದ ಲವ-ಕುಶರೆಂಬವರಿಗೆ ಅಬಿನವ ಪಂಪನು ಲವ ಅಂಕುಶರೆಂದು ಹೆಸರಿಟ್ಟಿರುವನು. ಉದಾಃ—

೧೬ನೆಯ ಆಶ್ವಾಸದಲ್ಲಿ.

(೧) ಅವರ್ಗೆ ಲವನುಮಂಕುಶನೆಂದು ಪೆಸರನಿಟ್ಟು. (೩ನೇ ಪದ್ಯದ ಕೆಳಗಿನ ವಚನ.)

(೨) ಲವಂಗೆ ಮಡುವೆಯುಂ ಮಾಡಿದಿಂ ಬಳಿಯಮುಂ ಕುಶಂಗೆ. (೩ನೇದರ ಕೆಳಗಿನ ವಚನ.)

ಇತ್ಯಾದಿ ಅನೇಕ ಕಡೆಯಲ್ಲಿ ಉಂಟು. ಈ ಪ್ರಕಾರ ಇರುವದರಿಂದ "ಮರವಟ್ಟತ್ತು ಮರುದ್ಗಣಂ" ಎಂಬ ಕವಿತೆಯಲ್ಲಿ 'ಲವಾಂಕುಶರೊಳ್' ಈ ಪದವನ್ನು ಲವ ಅಂಕುಶರೆಂದು ಬಿಡಿಸಬೇಕು. ಇಂತೀ ವಿಜ್ಞಾಪನೆಗಳು.

ತಾ. ೭-೪-೧೯೧೩ ಇ.

ವಮ್ಮ ಶಿಷ್ಯ.
ಮಲ್ಲಯ್ಯಾ ಸಿದ್ಧರಾಮಯ್ಯಾ ಮಠಪತಿ.
ಉಪಶಿಕ್ಷಕ, ಕಾಗವಾಡ.

ಕಾಗವಾಡ.
೬-೪-೧೩.

ಪತ್ರಗಳ ಸಾರಾಂಶ.

ನಿಜಾಪುರ ತಾಲೂಕ ನಿವಣಗಿ ಶಾಲೆಗೆ ವಿಜಾಪುರ ಜಿಲ್ಹೆಯ ಕೋ ಅಪರೇಟಿವ್ಹ ಕ್ರೆಡಿಟ್ ಸೊಸಾಯಿಟಿಯ ಆನರರಿ ಆರ್ಗನಾಯಝರರಾದ ರಾ॥ ಸಾ॥ ಶಿವಲಿಂಗರಾವ ಜಗದೇವರಾವ ದೇಶಮುಖ ಎಂಬವರು ಹೋಗಿ ಸದರಿ ಶಾಲೆಯ ಸ್ಥಿತಿಯ ಬಗ್ಗೆ ಅನೆಂದಬಟ್ಟು ಹುಡುಗರಿಗೆ ೨ ರೂಪಾಯಿಗಳ ಮಿಠಾಯಿಯನ್ನು ಹಂಚಿದರೆಂತಲೂ, ಆಟದ ಉಪಕರಣಕ್ಕೋಸ್ಕರ ೨ ರೂಪಾಯಿಗಳನ್ನು ಕೊಟ್ಟರೆಂತಲೂ ಸದರೀ ಶಾಲೆಯ ಹೆಡಮಾಸ್ತರರು ಬರೆಯುತ್ತಾರೆ.

ರೋಣ ತಾಲೂಕ ಸೂಡಿ ಶಾಲೆಗೆ ತಾಲೀಮು ಸಾವಾನುಗಳಿಗೋಸ್ಕರ ಅಲ್ಲಿಯ ಪ್ರಸಿದ್ಧ ಸಾವುಕಾರರಾದ ರಾ॥ ಸಾ॥ ಅಡಿವೆಪ್ಪಾ ಅಣ್ಣಾಸೆಟ್ಟಿ ಇವರು ೫೦ ರೂಪಾಯಿಗಳನ್ನು ಕೊಟ್ಟ ಬಗ್ಗೆ ಸದರೀ ಶಾಲೆಯ ವಾರ್ಷಿಕ ಬಕ್ಷೀಸಸಮಾರಂಭದಕಾಲದಲ್ಲಿ ಸಭೆಯ ಅಧ್ಯಕ್ಷರಿಂದ ಶ್ಲಾಘಿಸಲ್ಪಟ್ಟರೆಂದು ಆ ಶಾಲೆಯ ಒಬ್ಬ ವಿದ್ಯಾರ್ಥಿಯು ಬರೆಯುತ್ತಾನೆ.

ನರಗುಂದ ಕನ್ನಡ ೧ನೆಯ ನಂಬರ ಶಾಲೆಗೆ ಡಿಸ್ತ್ರಿಕ್ಟ ಡಿಪುಟಿ ಕಲೆಕ್ಟರರಾದ ರಾ॥ ಬಾ॥ ನಾಮಜೋಶಿ ಸಾಹೇಬರವರು ಹೋಗಿ ಹುಡುಗರ ಡ್ರಿಲ್, ತಾಲೀಮು, ವಸ್ತುಪಾಠ, ಕೈಗಾರಿಕೆ, ಕೈಮಗ್ಗ, ಸಂಭಾಷಣೆ ಮುಂತಾದವುಗಳನ್ನು ನೋಡಿ ಪರಮಹರ್ಷಿತರಾಗಿ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚುವದಕ್ಕೋಸ್ಕರ ಸ್ವಹಸ್ತದಿಂದ ೧೦ ರೂಪಾಯಿಗಳನ್ನು ಕೊಟ್ಟರೆಂತಲೂ, ಸದರೀ ಶಾಲೆಗೆ ಈಗಿದ್ದ ಮಿ॥ ಶಂಕರಪ್ಪಾ ಫಕೀರಪ್ಪಾ ಲಾಳಸಂಗಿ ಇವರು ಬಂದಂದಿನಿಂದ ಶಾಲೆಯ ಸ್ಥಿತಿಯು ಬಹಳೇ ಸುಧಾರಿಸಿರುವದೆಂತಲೂ ಒಬ್ಬ ಗೃಹಸ್ಥರು ಬರೆಯುತ್ತಾರೆ. ಇದೇ ಶಾಲೆಯನ್ನು ರಾವ ಸಾಹೇಬ ಎಫ್. ಎಸ್. ಪಾಟೀಲ ಸರ್ಕಲ ಮಾಮಲೇದಾರವರು ನೋಡಿ ಸಂತೋಷಬಟ್ಟು ಉತ್ತಮ ಶರಾ ಬರೆದು ಹುಡುಗರಿಗೆ ಮಿಠಾಯಿಯ ಬಗ್ಗೆ ೪ ರೂಪಾಯಿಗಳನ್ನು ಕೊಟ್ಟರೆಂತಲೂ, ಈಚೆಗೆ ದಿಶಂಬರ ತಿಂಗಳಲ್ಲಿಯಾದ ರಾಜ್ಯಾರೋಹಣದ ವಾರ್ಷಿಕೋತ್ಸವದ ಕಾಲದಲ್ಲಿ ಅಲ್ಲಿಯ ಆನರರಿ ಮಾಜಿಸ್ಟ್ರೇಟರಾದ ರಾ॥ ಸಾ॥ ವೆಂಕಪ್ಪಾ ಆನೆಗುಂದಿ ಇವರು ಸ್ವಂತಖರ್ಚಿನಿಂದ

ಎಲ್ಲ ಹುಡುಗರಿಗೆ ಮಿಠಾಯಿಯನ್ನು ಹಂಚಿದರೆಂತಲೂ ತಿಳಿಯುತ್ತದೆ. ಇವೆಲ್ಲ ಸಂಗತಿಗಳು ಮಿ|| ಲಾಳಸಂಗಿಯವರ ಲೋಕಪ್ರಿಯತೆಯನ್ನು ಚನ್ನಾಗಿ ವ್ಯಕ್ತಪಡಿಸುತ್ತವೆ.

ರೋಣ ತಾಲೂಕ ಸವಡಿ ಶಾಲೆಯಲ್ಲಿ ಕಳೆದ ದಿಶಂಬರ ತಿಂಗಳ ೧೨ ನೆಯ ತಾರೀಖಿನ ದಿವಸ ದಿಲ್ಲಿಯ ದರಬಾರದ ಸಂಸ್ಮರಣಾರ್ಥವಾಗಿ ನಡೆದ ಆನಂದಪ್ರದರ್ಶನಸಮಾರಂಭದ ಕಾಲದಲ್ಲಿ ಸದರೀ ಶಾಲೆಯಲ್ಲಿ ಹಾರಿದ ಮತ್ತು ಓಡಿದ ಹುಡುಗರಲ್ಲಿ ಮುಂದಾದ ಐದು ಹುಡುಗರಿಗೆ ಬಕ್ಷೀಸಾಗಿ ಸ್ಕೂಲ ಕಮಿಟಿಯ ಮೆಂಬರರಾದ ರಾ|| ರಾ|| ಪರಪ್ಪಾ ಅಣ್ಣಾಗದಗ ಇವರು ತಮ್ಮ ಸ್ವಂತ ಖರ್ಚಿನಿಂದ ಎರಡೂವರೆ ರೂಪಾಯಿಗಳನ್ನು ಕೊಟ್ಟರೆಂದು ಸದರೀ ಶಾಲೆಯ ಅಸಿಸ್ಟಂಟ ಮಾಸ್ತರರೊಬ್ಬರು ಬರೆಯುತ್ತಾರೆ.

ರೋಣ ತಾಲೂಕ ಗಜೇಂದ್ರಗಡದ ಕನ್ನಡ ಗಂಡು ಹುಡುಗರ ಶಾಲೆಯಲ್ಲಿ ಕಳೆದ ದಿಶಂಬರ ತಿಂಗಳಲ್ಲಿ "ಶಾಲಾ ಸುಧಾರಣೆಯ" ಬಗ್ಗೆ ಕೂಡಿದ ಸಭೆಗೆ ಶ್ರೀಮಂತ ಜಾಹಗೀರದಾರ ಅಪ್ಪಾಸಾಹೇಬವರು ಅಧ್ಯಕ್ಷರಾಗಿದ್ದರು. ಸದರೀ ಸಭೆಯಲ್ಲಿ ಸಮಯೋಚಿತವಾದ ಭಾಷಣಗಳಾದ ತರುವಾಯ ಅಧ್ಯಕ್ಷರವರು ತಮ್ಮ ಸ್ವಂತ ಖರ್ಚಿನಿಂದ ೫ ರೂಪಾಯಿಯ ಮಿಠಾಯಿಯನ್ನು ಹಂಚಿದ್ದಲ್ಲದೆ, ಸದರೀ ಶಾಲೆಗೆ ರಾಗದ ಪೆಟ್ಟಿಗೆಯನ್ನೂ ಶಾಸ್ತ್ರೀಯ ವಿಷಯಗಳನ್ನು ಕಲಿಸುವದಕ್ಕೆ ಬೇಕಾಗುವ ಸಾಮಾನುಗಳನ್ನೂ ಪೂರೈಸುವಬಗ್ಗೆ ಸಂಭಾಷಣ ಮಾಡಿದರು. ಅದರಿಂದ ನೆರೆದ ಸಭಿಕರಿಗೆ ಉತ್ತೇಜನ ಬಂದು ಅವರು ಕೆಳಗೆ ಬರೆದ ಪ್ರಕಾರ ೫೦ ರೂಪಾಯಿಗಳನ್ನು ಕೂಡಿಸಿ ಕೊಟ್ಟದ್ದಲ್ಲದೆ, ಶಾಸ್ತ್ರೀಯ ಉಪಕರಣಗಳನ್ನು ಒದಗಿಸಿಕೊಡುವೆವೆಂದು ಅಭಿವಚನ ಕೊಟ್ಟರು. ರಾಗದ ಪೆಟ್ಟಿಗೆಯ ಬಗ್ಗೆ ಕೊಟ್ಟ ವರ್ಗಣಿಯ ವಿವರ:—

೧. ಶ್ರೀ. ಜಹಾಗೀರದಾರ ಅಪ್ಪಾಸಾಹೇಬ. ಲೋಕಲಬೋರ್ಡ ಮೆಂಬರ	೫ ರೂಪಾಯಿ.
೨. ರಾ. ರಾಮಧನಶೇಟ ಮಾರವಾಡಿ.	೨ ರೂಪಾಯಿ.
೩. ರಾ. ಶಂಕರಪ್ಪಾ ರಂಗರೇಜ.	೨ ರೂಪಾಯಿ.
೪. ರಾ. ಅಚ್ಯುತರಾವ ಮಸ್ಕಿ.	೨ ರೂಪಾಯಿ.

೫. ರಾ. ಷಣ್ಮುಖಪ್ಪ ಮುಸೂರಿ.	೨ ರೂಪಾಯಿ.
೬. ರಾ. ಬಾಳಪ್ಪ ಕುಲಕರ್ಣಿ.	೨ ರೂಪಾಯಿ.
೭. ರಾ. ರಾಮಾಸಾ ಮಿಸ್ಕಿನ್.	೨ ರೂಪಾಯಿ.
೮. ರಾ. ಬಾಳಪ್ಪ ರಾಯಬಾಗಿ.	೨ ರೂಪಾಯಿ.
೯. ರಾ. ಕರಿಸಿದ್ದಪ್ಪ ಇಂಡಿ.	೨ ರೂಪಾಯಿ.
೧೦. ರಾ. ಸಂಗಪ್ಪ ಡೊಳ್ಳಿನ.	೧॥ ರೂಪಾಯಿ.
೧೧. ರಾ. ಪಾಂಡುರಂಗರಾವ ಕೊಟನೀಸ.	೧ ರೂಪಾಯಿ.
೧೨. ರಾ. ರಾಘವೇಂದ್ರರಾಡ ಖಾಸನೀಸ.	೧ ರೂಪಾಯಿ.
೧೩. ರಾ. ತಾಮಣಕರ ಪೋಷ್ಟಮಾಸ್ತರ.	೧ ರೂಪಾಯಿ.
೧೪. ರಾ. ಲಿಂಗನಗೌಡಾ ಗಂಜಿಗೌಡರವರ.	೧ ರೂಪಾಯಿ.
೧೫. ರಾ. ಸಂಗನಬಸಪ್ಪಾ ನಂದಿಹಾಳ.	೧ ರೂಪಾಯಿ.
೧೬. ರಾ. ಭಾವೂರಾವ ಕಾಗಲಕರ.	೧ ರೂಪಾಯಿ.
೧೭. ರಾ. ಗೋಪಾಳರಾವ ಕುಲಕರ್ಣಿ.	೧ ರೂಪಾಯಿ.
೧೮. ರಾ. ತಿರುಮಲರಾವ ಕುಲಕರ್ಣಿ.	೧ ರೂಪಾಯಿ.
೧೯. ಉಳಿದ ಸಭ್ಯಗೃಹಸ್ಥರು ೧೯ ರೂ. ಅಂತೂ	೫೦ ರೂಪಾಯಿ.

ಸ್ತುತ್ಯವಾದ ಔದಾರ್ಯ—ಪರಸಗಡ ತಾಲೂಕ ಮುತ್ತವಾಡ ಸಾಲೆಯಲ್ಲಿ ಕಳೆದ ದಿಶಂಬರ ತಿಂಗಳಲ್ಲಿ ಆ ಊರ ಇನಾಮದಾರರಾದ ಶ್ರೀ. ಅಪ್ಪಾಸಾಹೇಬ ವೀರಬಸವಪ್ಪ ನಾಯಿಕದೇಸಾಯಿ ಇವರ ಅಧ್ಯಕ್ಷತೆಯ ಕೆಳಗೆ ಸಭೆಕೂಡಿತ್ತು. ಸಾಲೆಯ ಹೆಡ್ಡ ಮಾಸ್ತರರಾದ ಮಿ. ಶಿ. ಶಿ. ಸಾವಳಗಿ ಇವರು ಸಾಲೆಯಲ್ಲಿ ನೆಲೆಗೊಳಿಸಿದ ವ್ಯವಸ್ಥೆಯನ್ನು ನೋಡಿ ಅಧ್ಯಕ್ಷರಾದ ಶ್ರೀ. ದೇಸಾಯಿಯವರು ಆನಂದಭರಿತರಾಗಿ "ಇನ್ನು ಮುಂದೆ ಈ ಊರ ಸಾಲೆಯಲ್ಲಿ ಕಲಿಯುವ ಯಾವತ್ತು ವಿದ್ಯಾರ್ಥಿಗಳ ಫೀಹಣವನ್ನು ನಮ್ಮ ಜೀವವಾನವಿರುವ ವರೆಗೆ ನಾವೇ ಭರಣಾವಾಡುವೆವು. ನೀವು ನಿಮ್ಮ ಮಕ್ಕಳನ್ನು ತಪ್ಪದೆ ಸಾಲೆಗೆ ಕಳಿಸಬೇಕು" ಎಂದು ನೆರೆದ ಜನರಿಗೆ ಅಭಿವಚನವನ್ನು ಇತ್ತರೆಂದು ರಾ॥ ರಾ॥ ಸುಬ್ಬಾಜಿ ಕೃಷ್ಣ ಮುತಾಲಿಕ ದೇಸಾಯಿ ಮುತವಾಡ ಎಂಬವರು ಬರೆಯುತ್ತಾರೆ.

ಸಾಂಗಲೀ ಸಂಸ್ಥಾನದ ದೊಡ್ಡವಾಡ ಶಾಲೆಯಲ್ಲಿ ಕಳೆದ ದಿಶಂಬರ ೫ಂಗಳಲ್ಲಿ ಸಾರ್ವಭೌಮ ಪಂಚಮ ಜಾರ್ಜ ಚಕ್ರವರ್ತಿಗಳವರು ದಿಲ್ಲೀಪ ಟ್ಟಣದಲ್ಲಿ ಸಿಂಹಾಸನಾರೂಢರಾದ ಆನಂದದ ವಾರ್ಷಿಕೋತ್ಸವವನ್ನು ನೆರ ನೇರಿಸಲು ಕೂಡಿದ ಸಭೆಗೆ ಮ. ರಾ. ರಾ. ವಿರುಪಾಕ್ಷಪ್ಪಾ ಅಣ್ಣಾ ಮೆಣಸಿನ ಕಾಯಿ ಇವರು ಅಧ್ಯಕ್ಷರಾಗಿದ್ದರಿಂತಲೂ ಸಭೆಯ ಕಾರ್ಯವು ಬಹಳ ನಿಜೃಂಭಣೆಯಿಂದ ನಡೆದ ಬಳಿಕ ಅಧ್ಯಕ್ಷರವರು ನೆರೆದ ವಿದ್ಯಾರ್ಥಿಗಳಿಗೆ ನಿಠಾಯಿಯನ್ನು ಹಂಚುವದಕ್ಕಾಗಿ ೨ ರೂಪಾಯಿಗಳನ್ನೂ ಒಬ್ಬ ಬಡ ವಿದ್ಯಾರ್ಥಿಗೆ ಅಂಗಿಯನ್ನು ಹೊಲಿಸಿಕೊಳ್ಳುವದಕ್ಕೆ ೧ ರೂಪಾಯಿಯನ್ನೂ ಕೊಟ್ಟದ್ದಲ್ಲದೆ, ಮುಂದಾದರೂ ಪ್ರತಿಯೊಬ್ಬ ಬಡ ವಿದ್ಯಾರ್ಥಿಗೆ ಶಕ್ತ್ಯಾನು ಸಾರ ಸಹಾಯ ಮಾಡುವೆವೆಂದು ಅಭಿವಚನಕೊಟ್ಟರೆಂದು ಆ ಶಾಲೆಯ ಅಸಿಸ್ಟಂಟ ಮಾಸ್ತರರೊಬ್ಬರು ಬರೆಯುತ್ತಾರೆ.

ಮುಳಗುಂದ ಶಾಲೆಗೆ ಶಿವಯೋಗಿಗಳಾದ ಶಿರಹಟ್ಟಿ ಶ್ರೀ ಫಕೀರ ಮರಿ ದೇವರು ಹೊಸೂರ ಇವರು ದಯಮಾಡಿಸಿ ಆ ಶಾಲೆಗೆ ೧೫ ರೂಪಾಯಿದ ನಿಡಿಯಾರವನ್ನು ಬಕ್ಷೀಸಾಗಿ ಕೊಟ್ಟರೆಂತಲೂ, ಅದಕ್ಕೆ ಅನುಕೂಲವಾಗಿ ಸದರೀ ಶಾಲೆಯ ಕಮಿಟಿಯ ಮೆಂಬರರಾದ ರಾ. ರಾ. ನೀಲಪ್ಪಾ ಮಲ್ಲಪ್ಪಾ ಅಣ್ಣಾ ಬಳ್ಳಾರಿ ಇವರು ೪ ರೂಪಾಯಿ ಬೆಲೆಯ ಒಂದು ಝಾಗುಟೆಯನ್ನು ಉಚಿತವಾಗಿ ಕೊಟ್ಟರೆಂತಲೂ ಆ ಶಾಲೆಯ ಹೆಡ್‌ಮಾಸ್ತರರು ಬರೆಯುತ್ತಾರೆ.

ಬೆಳಗಾವ ಜಿಲ್ಹೆಯ ಬೈಲಹೊಂಗಲ ತಾಲೂಕಿನೊಳಗಿನ ಹುಣಶೀಕಟ್ಟಿ (ಪೋಸ್ಟ ಕಿತ್ತೂರ) ಶಾಲೆಯ ಹೆಡ್ ಮಾಸ್ತರರಾದ ಮಿ. ಶ. ಅ. ಎಲಿಗಾರ ಎಂಬವರು ಚಂದ್ರನ ಕಲೆಗಳನ್ನು ತೋರಿಸುವಂಥ " ಚಂದ್ರಕಲೋಪಕರಣ " ಎಂಬ ಉಪಕರಣವನ್ನು ಸಿದ್ಧಗೊಳಿಸಿರುವರು. ಅದರ ವರ್ಣನೆಯನ್ನು ಅವರು ಈ ಪ್ರಕಾರ ಬರೆಯುತ್ತಾರೆ:—

ವರ್ಣನೆ:—(ಅ) ಅಂದವಾಗಿ ಗಾಡದ ಮೇಲೆ ತರಿದು ಮಾಡಿದ ಸಮಯಾಕಾರದ ಕಂಬದ ಮೇಲೆ ಸೂರ್ಯನು ಇರಿಸಿರುವನು.

(ಇ)ಮೇಲಿನಂತೆ ಮನೋಹರವಾಗಿ ಮಾಡಿದ ಗದ್ದುಗೆಕಂಬದ ಮೇಲೆ ಪೃಥ್ವಿಯೂ, ಆ ಕಂಬಕ್ಕೆ ಸೇರಿದ ಕಬ್ಬಿಣ ಸಳಿಗಳ ಮೇಲೆ ಕೂಡ್ರಿಸಿದ ೮ ಚಂದ್ರಗೋಲಗಳೂ ಇದ್ದು ಅದು ಒಂದು ಪುಷ್ಪಿತ ವೃಕ್ಷದಂತೆ ಕಂಗೊಳಿಸುವದು.

(ಉ)ಸಾಹಿತ್ಯಗಳೆಲ್ಲ ಸಾಗವಾನಿಯ (ತೇಗಿನ) ಕಟ್ಟಿಗೆಯವು. ಸೂರ್ಯನಿಗೂ ಚಂದ್ರಗೋಲ (ಅರ್ಧ ಮ್ಯೆ ಮಾತ್ರ)ಗಳಿಗೂ ಬಿಳಿಯ ಬಣ್ಣವು ಕೊಡಲ್ಪಟ್ಟಿದೆ. ಪೃಥ್ವಿಗೂ ಉಳಿದ ಚಂದ್ರಾರ್ಧಭಾಗಗಳಿಗೂ ಭೂಮಿಯ ಬಣ್ಣವು ಹಚ್ಚಿಯಿದೆ. ಕಲೆಗಳು ಸ್ಪಷ್ಟವಾಗಿ ತಿಳಿಯುವಂತೆ ಬೇರೆ ವ್ಯವಸ್ಥೆಯು ಮಾಡಲ್ಪಟ್ಟಿದೆ. ಗದ್ದುಗೆ ಮೊದಲಾದ ಎಲ್ಲವಕ್ಕೂ ಹೊಳಪಿನೆಣ್ಣೆಯು (ವಾರ್ನಿಸ) ಎಳೆಯಲ್ಪಟ್ಟಿದೆ. ಉಪಕರಣವನ್ನು ಪರಸ್ಥಳಕ್ಕೆ ಕಳಿಸಲಿಕ್ಕೆ ದೇವದಾರದ ಪೆಟ್ಟಿಗೆಯು ಉಪಯೋಗಿಸಲ್ಪಡುವದು.

ಕಿಮ್ಮತ್ತು:—ದ್ರವ್ಯಲಾಭದ ಕಡೆಗೆ ಮನಸು ಹಾಕದೆ ಸರಿಯಾಗಿ ಕಿಮ್ಮತ್ತು ಆಕಾರವಾಗಿಯಿದೆ. ಮೇಲಿನ ಯಾವತ್ತು ಸಾಹಿತ್ಯ ಕೂಡಿ ಉಪಕರಣದ ಕಿಮ್ಮತ್ತು ೨ ರುಪಾಯಿ ೮ ಆಣೆ. ಪೋಷ್ಟಖರ್ಚು ಬೇರೆ ಬೀಳುವದು.

ಹೊಸರಿತ್ತೀ ಶಾಲೆಯ ಅ॥ ಮಾಸ್ತರ ಗೋಪಾಳ ಅನಂತಾಚಾರ್ಯ ಕುಡೇಕರ ಎಂಬವರು ಹೊಸ ಭೂಮಿತಿಯಲ್ಲಿ ಕೊಟ್ಟ ಬಿಂದುವಿನ ವ್ಯಾಖ್ಯೆ, ರೇಖೆಯ ವಾಖ್ಯೆ ಇವುಗಳ ಮೇಲಿನ ಆಕ್ಷೇಪಗಳನ್ನು ಬರೆದು ಕಳುಹಿಸಿದ್ದಾರೆ. ಈ ಆಕ್ಷೇಪಗಳು ಭೂಮಿತಿಶಾಸ್ತ್ರವು ಹುಟ್ಟಿದಂದಿನಿಂದಲೇ ಸಾಮಾನ್ಯವಾಗಿ ಪ್ರಸಿದ್ಧವಾದವುಗಳಿರುತ್ತವೆ. ಈ ವಿಷಯದಲ್ಲಿ ಹೊಸ ಭೂಮಿತಿಯ ೩ನೆ ೪ನೆ ವ್ಯಾಖ್ಯೆಗಳ ಕೆಳಗೆ ಕೊಟ್ಟ ವಿವರಣೆಯನ್ನು ಲಕ್ಷ ಕೊಟ್ಟು ಓದಬಹುದು.

ಕಾರವಾರ ತಾಲೂಕ ಮಾಜಾಳಿ ಗಲ್ಸ ಶಾಲೆಗೆ ಉತ್ತೇಜನಾರ್ಥವಾಗಿ ವಾರ್ಷಿಕ ಬಕ್ಷೀಸುಗಳನ್ನು ಕೊಡುವದಕ್ಕಾಗಿ ರಾ॥ ರಾ॥ ಬಾಜೀರಾವ ನಾರಾಯಣ ಸೊಹನಿ ಎಂಬ ಪೆನ್‌ಶನರ್ ಮಾಸ್ತರರು "ಬಾಜೀರಾವ ನಾರಾಯಣ ಸೊಹನಿ ಪಂಡ" ಎಂಬ ಹೆಸರಿನಿಂದ ಇಡುವದಕ್ಕೋಸ್ಕರ ೩೦೦ ರೂಪಾಯಿಗಳನ್ನು ಶಾಲಾಖಾತೆಯ ವರಿಷ್ಠಾಧಿಕಾರಿಗಳ ಸ್ವಾಮಿತ್ವದಿಂದ ಸರಕಾರೀ ಬ್ಯಾಂಕಿನಲ್ಲಿ ಇಟ್ಟಿರುವರೆಂತಲೂ, ಮಿ॥ ಸೊಹನಿಯವರ ಸದರೀ ಶಾಲೆಯ ಅಭಿವೃದ್ಧಿಗಾಗಿ ತನು-ಮನ-ಧನಗಳಿಂದ ಸತತ ಸಹಾಯವನ್ನು ಮಾಡುತ್ತಿರುವರೆಂತಲೂ ಮಿ॥ ಕೃಷ್ಣಾಜಿ ಶಿವರಾಮಪ್ಪ ವಾಗಳೆ ಎಂಬ ಗೃಹಸ್ಥರು ಬರೆಯುತ್ತಾರೆ. ಮಿ॥ ಸೊಹನಿಯವರ ಔದಾರ್ಯವು ಸ್ತುತ್ಯವಾದದ್ದೆಂತಲೂ, ಅವರ ಉದಾರಹಣೆಯು ಅನುಕರಣೀಯವಾಗಿರುವದೆಂತಲೂ ಯಾರು ತಾನೇ ಒಪ್ಪಿಕೊಳ್ಳಲಿಕ್ಕಿಲ್ಲ!

ಶಾಲಾಪತ್ರಕ.

ಪುಸ್ತಕ ೪೯. | ಎಪ್ರಿಲ–ಮೇ ೧೯೧೩. | ಸಂಚಿಕೆಗಳು ೪-೫.

ಸ್ಫುಟ ವಿಷಯಗಳು.

೧. ಇತ್ತಲಾಗಿ ಸರಕಾರದವರು ವಿದ್ಯಾಖಾತೆಗಳಲ್ಲಿ ಆದ ಪ್ರಗತಿಯನ್ನು ತೋರಿಸುವದಕ್ಕಾಗಿ ಐದೈದು ವರ್ಷಕ್ಕೊಮ್ಮೆ ಐದು ವರ್ಷದ ಪ್ರಗತಿಯನ್ನು ತೋರಿಸುವ ರಿಪೋರ್ಟನ್ನು ಪ್ರಸಿದ್ಧಪಡಿಸುತ್ತಿರುವರು. ಆ ಪ್ರಕಾರ ಕಳೆದ ಐದು ವರ್ಷಗಳಲ್ಲಿ ಆದ ಪ್ರಗತಿಯನ್ನು ತೋರಿಸುವಂಥ ರಿಪೋರ್ಟನೊಳಗಿನ ಕೆಲವು ಅಂಕೆಗಳನ್ನು ಕಳೆದ ತಿಂಗಳ ೧೩ನೇ ತಾರೀಖಿನ ಸರಕಾರೀ ಗ್ಯಾಝಿಟಿನಲ್ಲಿ ಸರಕಾರದವರು ಪ್ರಸಿದ್ಧಮಾಡಿರುವರು. ಅವುಗಳಲ್ಲಿ, ಶಾಲಾಪತ್ರಕದ ವಾಚಕರಿಗೆ ತಿಳಿಯುವದಕ್ಕೋಸ್ಕರ ಇಡೀ ಹಿಂದುಸ್ತಾನಕ್ಕೂ ಮುಂಬಯಿ ಇಲಾಖೆಗೂ ಸಂಬಂಧಿಸಿದ ಅಂಕೆಗಳನ್ನು ಇಲ್ಲಿ ಕೊಡುತ್ತೇವೆ:—

ಕಳೆದ ಐದು ವರ್ಷಗಳಲ್ಲಿ ಆದ ವಿದ್ಯಾಸಂಬಂಧದ ಪ್ರಗತಿಯು.

ಹಿಂದುಸ್ತಾನದಲ್ಲಾದ ಪ್ರಗತಿಯನ್ನು ತೋರಿಸುವ ಅಂಕೆಗಳು.

		೧೯೦೬-೦೭ ರ ಕೊನೆಗೆ.	೧೯೧೧-೧೨ ರ ಕೊನೆಗೆ.
ಚೌರಸ ಮೈಲು ಕ್ಷೇತ್ರ.		೧೧,೧೮,೫೬೬	೧೧,೩೫,೫೧೩
ಜನಸಂಖ್ಯೆ	ಗಂಡಸರು	೧೨,೪೭೦೧೧೦	೧೩೦೪೦೮೫೫೧
	ಹೆಂಗಸರು	೧೧೯೭೯೯೫೮	೧೨೪೯೬೦೦೨
	ಒಟ್ಟು ಜನಸಂಖ್ಯೆ. ...	೨೪೧೨೬೪೯೬೬೮	೨೫೨೫೩೬೦೮೫೫೩
ಗಂಡಸರ ಸಾರ್ವಜನಿಕ ವಿದ್ಯಾಲಯಗಳು.			
ಆರ್ಟ್ಸ್ ಕಾಲೇಜಗಳ ಸಂಖ್ಯೆ.		೧೨೮	೧೩೦
ಹೈಸ್ಕೂಲಗಳ ಸಂಖ್ಯೆ.*		೧೧೬೫೫	೧೨೧೯೯
ಪ್ರಾಥಮಿಕ ಶಾಲೆಗಳ ಸಂಖ್ಯೆ		೧,೦೨,೯೪೭	೧,೧೦,೬೯೨

* ಕೆಲವು ಪ್ರಾಂತಗಳಲ್ಲಿ ದೇಶಭಾಷೆಯ ಹೈಸ್ಕೂಲಗಳು ಸಹ ಹೈಸ್ಕೂಲಗಳೆಲ್ಲ ಎಣಿಸಲ್ಪಟ್ಟಿವೆ.

ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣಹೊಂದುವ ಗಂಡು ಹುಡುಗರು		
ಆರ್ಟ್ಸ್‌ಕಾಲೇಜಗಳಲ್ಲಿ	೧೮೨,೭೫೮	೨೯,೩೬೯
ಹೈಸ್ಕೂಲಗಳಲ್ಲಿ*	೨,೮೬,೩೯೧	೩,೯೦,೮೮೧
ಪ್ರಾಥಮಿಕ ಶಾಲೆಗಳಲ್ಲಿ	೩೪,೨೪,೬೧೮	೪೨,೦೨,೬೩೧
ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣಹೊಂದುವ ಹುಡುಗರ ಸಂಖ್ಯೆಗೂ ಸಾಲೆಗೆ ಹೋಗಬಹುದಾದ ವಯಸ್ಸಿನ ಹುಡುಗರ ಸಂಖ್ಯೆಗೂ ಇರುವ ಶೇಕಡಾ ಪ್ರಮಾಣ.	೨೨.೭	೨೬.೮
ಹೆಂಗಸರ ಸಾರ್ವಜನಿಕ ವಿದ್ಯಾಲಯಗಳು.		
ಆರ್ಟ್ಸ್‌ಕಾಲೇಜಗಳ ಸಂಖ್ಯೆ	೮	೧೦
ಹೈಸ್ಕೂಲಗಳ ಸಂಖ್ಯೆ*	೧೧೨	೧೩೫
ಪ್ರಾಥಮಿಕ ಶಾಲೆಗಳೆ ಸಂಖ್ಯೆ.	೯,೯೮೩	೧೨,೮೮೬
ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣ ಹೊಂದುವ ಹುಡಿಗೆಯರು.		
ಆರ್ಟ್ಸ್‌ಕಾಲೇಜಗಳಲ್ಲಿ	೧೬೦	೨೭೯
ಹೈಸ್ಕೂಲಗಳಲ್ಲಿ *	೧೧,೮೮೫	೧೬೮೮೪
ಪ್ರಾಥಮಿಕ ಶಾಲೆಗಳಲ್ಲಿ	೫,೧೩,೨೫೮	೭೮೫೫೧೧
ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣಹೊಂದುವ ಹುಡಿಗೆಯರ ಸಂಖ್ಯೆಗೂ ಸಾಲೆಗೆ ಹೋಗಬಹುದಾದ ವಯಸ್ಸಿನ ಹುಡಿಗೆಯರ ಸಂಖ್ಯೆಗೂ ಇರುವ ಶೇಕಡಾಪ್ರಮಾಣ	೩.೨	೪.೨
ಸಾರ್ವಜನಿಕ ವಿದ್ಯಾಲಯಗಳಲ್ಲಿ ಇರುವ ಹುಡುಗರು ಹುಡುಗೆಯರ ಒಟ್ಟು ಸಂಖ್ಯೆ — ಹುಡುಗರು	೪೧,೮೩,೦೪೧	೫೨,೫೩,೦೬೫
— ಹುಡಿಗೆಯರು	೫,೬೧,೪೭೯	೮,೩೫,೬೬೦
ಒಟ್ಟು.	೪೭,೪೪,೪೮೦	೬೧,೭೮,೭೫೫
ಎಲ್ಲ ವಿದ್ಯಾಲಯಗಳಲ್ಲಿರುವ (ಗಂಡು ಹಾಗು ಹೆಂಣು) ಹುಡುಗರ ಒಟ್ಟು ಸಂಖ್ಯೆ ...	೫೩,೮೮,೬೩೨	೬೭,೦೦,೩೨೧
ಖರ್ಚು (ಸಾವಿರ ರೂಪಾಯಿಯಲ್ಲಿ)		
ಪ್ರಾಂತಿಕ ಉತ್ಪನ್ನದಿಂದ	೧,೮೪,೯೮ ಸಾ.	೨,೬೯,೫೯ ಸಾ.

* ಕೆಲವು ಪ್ರಾಂತಗಳಲ್ಲಿ ದೇಶಭಾಷೆಯ ಹೈಸ್ಕೂಲಗಳು ಸಹ ಹೈಸ್ಕೂಲಗಳಲ್ಲಿ ಎಣಿಸಲ್ಪಟ್ಟವೆ.

ಲೋಕಲ್‌ಫಂಡದಿಂದ	೯೧೧೬ ಸಾ.	೧೦,೫೮೦ ಸಾ.
ಮ್ಯುನಿಸಿಪಲ್ ಫಂಡದಿಂದ	೨೦೨೧ ಸಾ.	೩೯,೮೪೪ ಸಾ.
ಸಾರ್ವಜನಿಕ ಹಣದಿಂದ ಮಾಡಿದ ಒಟ್ಟು ಖರ್ಚು	೨,೯೬,೩೫	೪,೦೫,೨೩
ಫೀ ಹಣದಿಂದ	೧,೪೮,೨೧	೨,೧೯,೦೯
ಇತರ ಬಾಬುಗಳಿಂದ ಬಂದ ಹಣದಿಂದ ...	೧,೧೪,೪೮	೧,೬೧,೬೧
ಖರ್ಚಿನ ಒಟ್ಟು ರಕಮು	೫೫,೫೯,೦೪	೭,೮೫,೯೩

ಮುಂಬಯಿ ಇಲಾಖೆಯಲ್ಲಾದ ಪ್ರಗತಿಯನ್ನು ತೋರಿಸುವ ಅಂಕೆಗಳು.

		೧೯೦೬-೦೭ ರ ಕೊನೆಗೆ.	೧೯೧೧-೧೨ ರ ಕೊನೆಗೆ
ಚೌರಸಮೈಲು ಕ್ಷೇತ್ರ		೧,೮೮,೮೭೬	೧,೮೮,೮೭೬
ಜನಸಂಖ್ಯೆ	ಗಂಡಸರು	೧,೩೦,೯೮,೬೫೪	೧,೪೦,೧೩,೫೨೨
	ಹೆಂಗಸರು	೧,೨೩,೭೩,೦೧೪	೧,೩೦,೭೪,೨೨೩
	ಒಟ್ಟು ಸಂಖ್ಯೆ	೨,೫೪,೭೧,೬೭೮	೨,೭೦,೮೩,೯೫೫
ಗಂಡಸರ ಸಾರ್ವಜನಿಕ ವಿದ್ಯಾಲಯಗಳು.			
ಆರ್ಟ್ಸ್‌ಕಾಲೇಜಗಳ ಸಂಖ್ಯೆ		೧೦	೧೧
ಹೈಸ್ಕೂಲಗಳ ಸಂಖ್ಯೆ		೧೧೪	೧೨೯
ಪ್ರಾಥಮಿಕ ಶಾಲೆಗಳ ಸಂಖ್ಯೆ		೯,೪೮೫	೧೧,೬೦೯
ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣ ಹೊಂದುವ ಹುಡುಗರು.			
ಆರ್ಟ್ಸ್‌ಕಾಲೇಜಗಳಲ್ಲಿ		೨,೬೯೦	೩,೬೪೩
ಹೈಸ್ಕೂಲಗಳಲ್ಲಿ		೩೧,೪೬೦	೪೧,೩೨೫
ಪ್ರಾಥಮಿಕ ಶಾಲೆಗಳಲ್ಲಿ		೪,೯೦,೫೪೫	೬,೩೦,೪೨೩
ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣಹೊಂದುವ ಹುಡುಗರ ಸಂಖ್ಯೆಗೂ ಸಾಲೆಗೆ ಹೋಗಬಹುದಾದ ವಯಸ್ಸಿನ ಹುಡುಗರ ಸಂಖ್ಯೆಗೂ ಇರುವ ಶೇಕಡಾ ಪ್ರಮಾಣ		೨೮.೧	೩೩.೬
ಹೆಂಗಸರ ಸಾರ್ವಜನಿಕ ವಿದ್ಯಾಲಯಗಳು.			
ಆರ್ಟ್ಸ್‌ಕಾಲೇಜಗಳ ಸಂಖ್ಯೆ		... ...	... ...
ಹೈಸ್ಕೂಲಗಳ ಸಂಖ್ಯೆ		೨೨	೨೭
ಪ್ರಾಥಮಿಕ ಶಾಲೆಗಳ ಸಂಖ್ಯೆ.		೯೯೭	೧,೧೫೪

ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣ ಹೊಂದುವ ಹುಡಿಗೆಯರು.		
ಆರ್ಟ್ಸ್‌ಕಾಲೇಜಗಳಲ್ಲಿ	೫೭	೭೭
ಹೈಸ್ಕೂಲಗಳಲ್ಲಿ	೨,೫೧೭	೩,೬೬,೨
ಪ್ರಾಥಮಿಕ ಶಾಲೆಗಳಲ್ಲಿ	೮೯,೦೪೪	೧,೨೬,೭೦೩
ಸಾರ್ವಜನಿಕ ವಿದ್ಯಾಲಯಗಳಲ್ಲಿ ಶಿಕ್ಷಣ ಹೊಂದುವ ಹುಡಿಗೆಯರ ಸಂಖ್ಯೆಗೂ ಸಾಲೆಗೆ ಹೋಗಬಹುದಾದ ವಯಸ್ಸಿನ ಹುಡಿಗೆಯರ ಸಂಖ್ಯೆಗೂ ಇರುವ ಶೇಕಡಾ ಪ್ರಮಾಣ.	೫.೧	೬.೯
ಸಾರ್ವಜನಿಕ ವಿದ್ಯಾಲಯಗಳಲ್ಲಿ ಇರುವ ಹುಡುಗ ಹುಡಿಗೆಯರ ಒಟ್ಟು ಸಂಖ್ಯೆ. ಹುಡುಗರು	೫,೫೧,೩೪೫	೭,೦೭,೩೩೮
ಹುಡಿಗೆಯರು	೯೫,೪೩೨	೧,೩೪,೯೮೧
ಒಟ್ಟು	೬,೪೬೩೭೭	೮,೪೨,೩೦೯
ಎಲ್ಲ ವಿದ್ಯಾಲಯಗಳಲ್ಲಿ ಇರುವ (ಗಂಡು ಹಾಗು ಹೆಣ್ಣು) ಹುಡುಗರ ಒಟ್ಟು ಸಂಖ್ಯೆ... ...	೭,೨೦,೫೪೭	೯,೨೨,೮೭೭
ಖರ್ಚು (ಸಾವಿರ ರೂಪಾಯಿಯಲ್ಲಿ)		
ಪ್ರಾಂತಿಕ ಉತ್ಪನ್ನದಿಂದ...	೪೩,೦೮ ಸಾ.	೫೩,೯೮ ಸಾ.
ಲೋಕಲ್‌ಫಂಡದಿಂದ	೭,೮೨ ಸಾ.	೧೦,೭೬ ಸಾ.
ಮ್ಯುನಿಸಿಪಲ್ ಫಂಡದಿಂದ	೫,೮೮ ಸಾ.	೧೦,೧೪ ಸಾ.
ಸಾರ್ವಜನಿಕ ಹಣದಿಂದ ಮಾಡಿದ ಒಟ್ಟು ಖರ್ಚು	೫೬,೭೮ ಸಾ.	೭೪,೮೮ ಸಾ.
ಫೀ ಹಣದಿಂದ	೨೦,೧೨ ಸಾ.	೨೬,೨೭ ಸಾ.
ಇತರ ಬಾಬುಗಳಿಂದ ಬಂದ ಹಣದಿಂದ ...	೨೯,೫೩ ಸಾ.	೩೫,೦೨ ಸಾ.
ಖರ್ಚಿನ ಒಟ್ಟು ರಕಮು	೧೦೬೪೩ ಸಾ.	೧೩೬೧೭ ಸಾ.

೨. ಆಕಾಶಕ್ಕೆ ನೀಲವರ್ಣವು ಯಾಕೆ? ಈ ಪ್ರಶ್ನೆವು ಸಣ್ಣದದೆ; ಕೇಳಲಿಕ್ಕೆ ಸುಲಭವೂ ಅದೆ. ಆದರೆ ಅದರ ಉತ್ತರವನ್ನು ಕೊಡುವದೂ, ಅದನ್ನು ತಿಳಕೊಳ್ಳುವದೂ ಬಹಳ ಕಠಿಣವಿರುತ್ತದೆ. ಸದ್ಯಕ್ಕೆ ಈ ಪ್ರಶ್ನದ ನಿಷ್ಕರ್ಷವು ಇನ್ನೂ ಆಗಿಲ್ಲ. ಆದರೂ ಶಾಸ್ತ್ರಜ್ಞರು ಈ ಬಗ್ಗೆ ಏನು ಆಲೋಚನೆಗಳನ್ನು ಮಾಡಿರುವರೆಂಬದನ್ನು ಇಲ್ಲಿ ಹೇಳುವೆವು.

ಆಕಾಶಕ್ಕೆ ನೀಲವರ್ಣವು ಯಾಕೆ?

ಭೂಗೋಲದ ಸುತ್ತು ಮುತ್ತು ಇರುವ ವಾತಾವರಣವನ್ನು ದೂರ ಮಾಡಿದರೆ ಆಕಾಶದ ನೋಟವು ಈಗಿದ್ದದ್ದಕ್ಕೆ ಭಿನ್ನವಾಗಿ ಕಾಣುವದೆಂದು ಖಂಡಿತವಾಗಿ ಹೇಳಬಹುದು. ನಮ್ಮ ತಲೆಯಮೇಲೆ ವಿಶಾಲವಾಗಿ ಹಬ್ಬಿದ ಕಣಗುಟ್ಟುವ ಬಿಸಿಲಿನಲ್ಲಿಯೂ, ನಿಬಿಡವಾದ ಅಂಧಕಾರವುಳ್ಳ ರಾತ್ರಿಯಲ್ಲಿಯೂ, ಯಾವಾಗ್ಗೆ ನೋಡಿದರೂ ಆಕಾಶವು ಹೆಚ್ಚು ಕಡಿಮೆ ಪ್ರಮಾಣದಿಂದ ನೀಲಬಣ್ಣದ್ದಾಗಿ ಕಾಣುವದು. ಆದರೆ ವಾತಾವರಣವು ಭೂಗೋಲದಿಂದ ದೂರಾಗಿದೆಯೆಂತಲೂ ವಾಯುವಿನ ಹೊರತು ನಾವು ಜೀವಿಸಬಹುದೆಂತಲೂ ಗ್ರಹಿಸಿದರೆ, ಚಂದ್ರ-ಸೂರ್ಯ-ಗ್ರಹ-ನಕ್ಷತ್ರಾದಿಗಳೆಲ್ಲ ತೀರ ಕಪ್ಪುವರ್ಣದ ಪಡದೆಯಲ್ಲಿ ಹರಳುಗಳನ್ನು ಕೂಡ್ರಿಸಿದಂತೆ ತೋರಬಹುದು. ಯಾಕಂದರೆ ಮೇರೆಯಿಲ್ಲದ ಅನಂತವಾದ ಆಕಾಶವೆಂಬ ಪೊಳ್ಳು ಪ್ರದೇಶಕ್ಕೆ ನಿಜವಾಗಿ ಯಾವ ಬಣ್ಣವೂ ಇಲ್ಲ. ವಾತಾವರಣವು ಇಲ್ಲೆಂದು ಭಾವಿಸಿದರೆ ಇನ್ನೊಂದು ಅಭ್ಯಂತರವು ಕಾಣಬಹುದು. ಅದು ಯಾವದೆಂದರೆ ಸದ್ಯಕ್ಕೆ ಸೂರ್ಯಕಿರಣಗಳು ವಾತಾವರಣದೊಳಗಿಂದ ನೇರಾಗಿ ಬರುವಾಗ ಎಲ್ಲ ಬದಿಗೂ ಪರಾವರ್ತನೆ ಹೊಂದಿ ನಾಲ್ಕೂಕಡೆಗೆ ಹಬ್ಬುತ್ತವೆ. ಪರಾವರ್ತನೆ ಹೊಂದಿದ ಕಿರಣಗಳ ಮೂಲಕವಾಗಿ ಸಾಯಂಕಾಲದ ಸುಮಾರಕ್ಕೆ ಸೂರ್ಯಬಿಂಬವೂ, ಚಂದ್ರನ ನಿಸ್ತೇಜವಾದ ವಲಯವೂ, ಮೊದಲನೇ ಎರಡನೇ ವರ್ಗದ ಗ್ರಹನಕ್ಷತ್ರಗಳೂ ಹೊರತಾಗಿ ಬೇರೆ ಯಾವ ಖಸ್ಥ ಪದಾರ್ಥಗಳೂ ಕಾಣಿಸುವದಿಲ್ಲ. ಆದರೆ ವಾತಾವರಣವು ಇಲ್ಲದಂತಾದರೆ ಅವು ಈಗಿನ ನೂರುಪಟ್ಟು ಪ್ರಖರವಾಗಿ ಕಾಣಬಹುದು. ಅದರಿಂದ ನಮ್ಮ ಕಣ್ಣುಗಳು ಕುಕ್ಕುವವು. ಮತ್ತು ಸೂರ್ಯಕಿರಣಗಳ ಅಚೆಯಲ್ಲಿ ಈಗ ಹಗಲು ಕಾಣಿಸದಂಥ, ರಾತ್ರಿಯಲ್ಲಿ ಮಾತ್ರ ಮಿಣಿಮಿಣಿಯಾಗಿ ಕಾಣುವಂಥ ನಕ್ಷತ್ರಗಳು ಹಗಲುಹೊತ್ತು ಸಹ ದೃಷ್ಟಿಗೋಚರವಾಗುವವು.

ಸೂರ್ಯನು ಉದಯ ಹೊಂದುವದಕ್ಕಿಂತ ಮುಂಚಿತವಾಗಿಯೂ, ಅಸ್ತವಾದ ಮೇಲೆಯೂ ಕೆಲಹೊತ್ತು ಬಂದು ಪ್ರಕಾರದ ಬೆಳಕು ಬಿದ್ದಿರುತ್ತದೆ. ಅದು ವಾತಾವರಣದೊಳಗಿನ ಕಣಗಳ ಮೇಲೆ, ಸೂರ್ಯಪ್ರಕಾಶವು ಬಿದ್ದು ಪರಾವರ್ತನೆ ಹೊಂದಿ ಭೂಗೋಲವನ್ನು ವ್ಯಾಪಿಸಿದ ಪ್ರಕಾಶವಾಗಿರುತ್ತದೆ. ಇದಕ್ಕೆ ಸಂಧಿಪ್ರಕಾಶವೆಂಬ ಹೆಸರು. ವಾತಾವರಣವು ಇಲ್ಲದಂತಾ

ದರೆ ಈ ಸಂಧಿಪ್ರಕಾಶವೂ ಇಲ್ಲದಂತಾಗುವದು. ಸೂರ್ಯಾಸ್ತವಾದಕೂಡಲೆ ಬೆಳಕು ಒಮ್ಮೆಲೆ ಇಲ್ಲದಂತಾಗಿ ರಾತ್ರಿಯ ನಿಬಿಡ ಅಂಧಕಾರವು ಒಮ್ಮೆಲೇ ವ್ಯಾಪಿಸಬಹುದು.

ಮೇಲಿನ ವರ್ಣನೆಯಿಂದ ಆಕಾಶಕ್ಕೆ ನೀಲವರ್ಣವು ವಾತಾವರಣದಿಂದಲೇ ಬಂದಿರಬಹುದೆಂಬ ಸಂಗತಿಯು ವಾಚಕರ ಮನಸಿನಲ್ಲಿ ಬಂದಿರಬಹುದು. ಆದರೆ ಶಾಸ್ತ್ರೀಯ ದೃಷ್ಟಿಯಿಂದ ಅದು ಹ್ಯಾಗೆಂಬದನ್ನು ಆಲೋಚಿಸುವಾ.

ಸೂರ್ಯ-ಚಂದ್ರಾದಿ ಬಿಂಬಗಳೂ ಗ್ರಹನಕ್ಷತ್ರಾದಿಗಳೂ ವಾತಾವರಣದ ಅಚೆಗೆ ಬಹು ದೂರದಲ್ಲಿರುವವು. ವಾತಾವರಣವು ಭೂಪೃಷ್ಠದಿಂದ ನೂರು ಮೈಲು ಎತ್ತರದವರೆಗೆ ಹಬ್ಬಿರುವದು. ಸೂರ್ಯ-ಚಂದ್ರ ಮೊದಲಾದ ಖಸ್ಥ ವದಾರ್ಥಗಳ ಕಿರಣಗಳು ವಾತಾವರಣದೊಳಗಿಂದ ಪಾರಾಗಿ ನಮ್ಮ ಕಡೆಗೆ ಬರುತ್ತವೆ. ೧೭೬೫ನೇ ಇಸವಿಯಲ್ಲಿ ಸರ್ ಐಝಾಕ ನ್ಯೂಟನನು ಈ ಬಗ್ಗೆ ಶೋಧವಮಾಡಿ ಆಕಾಶಕ್ಕೆ ನೀಲವರ್ಣವು ಯಾಕೆ ಬಂದಿರುವದೆಂಬ ಸಂಗತಿಯು ತನಗೆ ಗೊತ್ತಾಯಿತೆಂದು ಭಾವಿಸಿದನು. ಮೊದಲು. ಸಾಬೂಣದ ಗುಳ್ಳೆಗಳ ಮೇಲಿರುವ ಚಿತ್ರವಿಚಿತ್ರವಾದ ಬಣ್ಣಗಳ ಕಾರಣವನ್ನು ಅವನು ಅನುಮಾನದಿಂದ ಹುಡುಕಿ ತೆಗೆದನು. ಅದೇ ಪ್ರಕಾರ, ಆಕಾಶದೊಳಗಿನ ಅತ್ಯುಚ್ಚ ಭಾಗದಲ್ಲಿರುವ ನೀರನ ಉಗಿಯ ಸೂಕ್ಷ್ಮ ಕಣಗಳ ಮೇಲಿಂದ ಸೂರ್ಯಕಿರಣಗಳೊಳಗಿನ ನೀಲವರ್ಣದ ಕಿರಣಗಳು ಪರಾವರ್ತನ ಹೊಂದಿ ನಮ್ಮಕಡೆಗೆ ಬರುತ್ತವೆ. ಅದರಿಂದಲೇ ಆಕಾಶವು ನೀಲವರ್ಣದ್ದಾಗಿ ಕಾಣುತ್ತದೆ, ಎಂದು ಅವನು ನಿರ್ಣಯಿಸಿದನು. ಸರ್ ಜಾನ್ ಹರ್ಶೆಲ್ ನೆಂಬವನಿಗೂ ಈ ಮಾತು ಸಯುಕ್ತಿಕವಾಗಿ ತೋರಿತು. ಆದರೆ ಇತ್ತೀಚ್ಚಲಾಗಿ ಈ ಉಪಪತ್ತಿಯು ಅಂಶತಃ ನಿಜವಿದ್ದಾಗ್ಯೂ ಬಹುಶಃ ಭ್ರಾಂತಿಮೂಲಕವಾಗಿರುವದೆಂದು ತಿಳಿಯಲ್ಪಡುತ್ತದೆ. ಪ್ರೊಫೇಸರ ಜಾನ್ ಟಿಂಡಾಲ್ ನೆಂಬವನು ಈ ಸಂಗತಿಯ ನಿಷ್ಕರ್ಷವನ್ನು ಮಾಡುವನಕ್ಕಾಗಿ ಹಲವು ಪ್ರಯೋಗಗಳನ್ನು ಮಾಡಿ ನೋಡಿದನು. ೧೮೬೯ನೇ ಇಸವಿಯಲ್ಲಿ ಅವನ ತನ್ನ ಪ್ರಯೋಗಶಾಲೆಯಲ್ಲಿ ಒಂದು ನೀಲವರ್ಣದ ಕೃತ್ರಿಮ ಆಕಾಶವನ್ನು ಸಿದ್ಧಮಾಡಿದನು. ಮೂರು ಇಂಚು ವ್ಯಾಸವುಳ್ಳ ಮೂರು ಫೂಟು ಉದ್ದವಾದ ಒಂದು ಕಾಚಿನ ಕೊಳವೆಯನ್ನು ತಕ್ಕೊಂಡು ಶ್ವಾಸೋಚ್ಛ್ವಾಸಕ

ಯೋಗ್ಯವಾದ ವಾಯುವಿನ $\frac{೧}{೧೦}$ದಷ್ಟು ಸಾಂದ್ರತೆಯಾಗುವರೆಗೆ ಅದರೊಳಗಿನ ನಾಯುವನ್ನು ತೆಗೆದು, ಬಳಿಕ ಅದರಲ್ಲಿ ಬ್ಯೂಟಿಲ್ ನಾಯಟ್ರೈಟ್ (Butyl Nitrite) ಎಂಬ ಎಣ್ಣೆಯ ಉಗಿಯನ್ನು ಬಿಟ್ಟನು. ಕತ್ತಲೆಯ ಕೋಣೆಯಲ್ಲಿ ಈ ಕೊಳಿವೆಯನ್ನು ಇಟ್ಟು, ತೀಕ್ಷ್ಣವಾದ ಪ್ರಕಾಶ ಕಿರಣವು ಅದರೊಳಗಿಂದ ಹಾಯ್ದು ಹೋಗುವಂತೆ ಮಾಡಿದನು. ಆಗ ಆ ಕೊಳಿವೆಯಲ್ಲಿ ಸಾಂದ್ರ ನೀಲ ಆಕಾಶದ ನೀಲವರ್ಣವು ಹೊಳೆಯಹತ್ತಿತು.

ಟಿಂಡಾಲ ಸಾಹೇಬರ ಮತದಿಂದ ಪ್ರಕಾಶಕ್ಕೆ ನೀರಿನ ಕಣಗಳ ಮೂಲಕವಾಗಿ ನೀಲವರ್ಣವು ಬಂದಿರುವದಿಲ್ಲ. ಆದರೆ ಅದು ಆಕಾಶದ ಅತ್ಯುಚ್ಚವಾದ ಪ್ರದೇಶದಲ್ಲಿ ಇರುವ ಅತಿ ಸೂಕ್ಷ್ಮವಾದ ರಜಃಕಣಗಳಿಂದ ಎಂದಿರುವದು. ಈ ರಜಃಕಣಗಳು ನಾವು ಕಲ್ಪನೆ ಮಾಡಕೂಡದಷ್ಟು ಸೂಕ್ಷ್ಮವಾಗಿರುತ್ತವೆ. ಯಾಕಂದರೆ ಟಿಂಡಾಲನ ಮತದಂತೆ ಈ ಬಗೆಯ ಒಂದು ಕಣದ ವ್ಯಾಸವು ಒಂದುಲಕ್ಷಾಂಶ ಇಂಚಿಗಿಂತಲೂ ಕಡಿಮೆ ಇರುತ್ತದೆ. ಬೆಳಕಿಂಡಿಯಲ್ಲಿ ಬಂದ ಸೂರ್ಯಕಿರಣಗಳಲ್ಲಿ ಅತಿ ನಿಬಿಡವಾಗಿ ತಿರಾಡುವ ಅಣುರೇಣುಗಳಿಗಿಂತಲೂ ಸಣ್ಣವಾದ ಈ ರಜಃಕಣಗಳು ಆಕಾಶದ ಅತ್ಯುಚ್ಚವಾದ ಪ್ರದೇಶದಲ್ಲಿ ಲಕ್ಷಾವಧಿ ಅಥವಾ ಕೋಟ್ಯಾವಧಿ ತರಲಿಕ್ಕೆ ಬೇಕು. ಅವುಗಳಲ್ಲಿ ಎಷ್ಟೋ ಕಣಗಳು ಬಾಷ್ಪಮಯವಾಗಿ ತರಬಹುದು; ಮತ್ತು ಧೂಳಿನ ಕಣಗಳೂ ಇರಬಹುದು. ಅದರೆ ಆ ಕಣಗಳಲ್ಲಿ ಶ್ವಾಸೋಚ್ಛ್ವಾಸಕ್ಕೆ ಅತ್ಯವಶ್ಯವಾದಂಥ ಆಕ್ಸಿಜನ್ ನೈಟ್ರೋಜನ ಎಂಬ ವಾಯುಗಳ ಅತ್ಯಂತ ಸೂಕ್ಷ್ಮವಾದ ಪರಿಮಾಣುಗಳೇ ವಿಶೇಷವಾಗಿ ತರಲಿಕ್ಕೆ ಬೇಕು. ಇದಲ್ಲದೆ ಪ್ರತಿಯೊಂದು ಸೂರ್ಯಕಿರಣವು ಬೇರೆ ಬೇರೆ ತರದ ಬಣ್ಣದ ಕಿರಣಗಳ ವಿಕೀಕರಣದಿಂದ ಆಗಿದ್ದು ಅದು ನಮ್ಮ ಕಣ್ಣಿಗೆ ಪ್ರಿಯವಾದ ಬಿಳೀ ಬಣ್ಣವುಳ್ಳದ್ದಾಗಿ ಕಾಣುವದೆಂಬ ಸಂಗತಿಯನ್ನು ವಾಚಕರು ಬಲ್ಲರು.

ಕೆರೆಯ ನೀರಿನಲ್ಲಿ ತೆರೆಗಳು ಹುಟ್ಟಿ ದಂಡೆಗೆ ಬರುವಂತೆ ಪ್ರಕಾಶದ ಕಿರಣಗಳು ತೆರೆಗಳ ರೂಪದಿಂದ ನಮ್ಮ ಕಣ್ಣಿನ ಕಡೆಗೆ ಬರುತ್ತಿರುತ್ತವೆ. ಯಾವ ಕಿರಣಗಳ ತೆರೆಗಳಲ್ಲಿ ತೀರಕಡಿಮೆ ಅಂತರವಿರುವದರಿಂದ, ವೇಗವು ಇತರ ಎಲ್ಲ ಕಿರಣಗಳಿಗಿಂತ ಹೆಚ್ಚಿರುವದೋ ಆ ಕಿರಣಗಳು ನೀಲವರ್ಣ

ದವಾಗ ಕಾಣುವವು. ಮತ್ತು ಯಾವ ಕಿರಣಗಳ ತೆರೆಗಳಲ್ಲಿ ಅಂತರವು ಹೆಚ್ಚಿದ್ದು, ಗತಿಯು ಮಂದವಾಗಿರುವದೋ ಆ ಕಿರಣಗಳು ಕೆಂಪು ಇಲ್ಲವೆ ಕಿತ್ತಳೆ ಬಣ್ಣದಿಂದ ಕಾಣುವವು. ಉಳಿದ ಐದು ಬಣ್ಣದ ಕಿರಣಗಳ ತೆರೆಗಳ ನಡುವಿನ ಅಂತರಗಳೂ, ಮೇಲಿನ ಎರಡು ಬಣ್ಣದ ಕಿರಣಗಳ ನಡುವೆ ಎಲ್ಲಾದರೂ ಇರುವವು. ತ್ರಿಕೋನಾಕೃತಿಯಾದ ಲೋಲಕದೊಳಗಿಂದ ನೋಡಿದರೆ ಕಾಣುವ ಬಣ್ಣದ ಸಾಲುಗಳು, ಆಯಾ ಕಿರಣಗಳ ತೆರೆಗಳು ಕ್ರಮಿಸುವ ಅಂತರವನ್ನೂ ಗತಿಯನ್ನೂ ಅವಲಂಬಿಸಿರುವವು. ಆಕಾಶದೊಳಗಿನ ಸೂಕ್ಷ್ಮವಾದ ರಜಃಕಣಗಳ ಮೇಲಿಂದ ನೀಲವರ್ಣದ ಕಿರಣಗಳು ಮಾತ್ರ ಪರಾವರ್ತನೆ ಹೊಂದಿ ನಮ್ಮ ಕಡೆಗೆ ಬರುತ್ತಿರುವದರಿಂದಲೇ ಆಕಾಶವು ನೀಲವರ್ಣದ್ದಾಗಿ ಕಾಣುತ್ತದೆ ಎಂದು ಪ್ರೊಫೆಸರ ಟಿಂಟಾಲ ಸಾಹೇಬರ ಅಭಿಪ್ರಾಯವಿತ್ತು. ಕೆಳಗೆ ಕೊಟ್ಟ ದೃಷ್ಟಾಂತದಿಂದ ಈ ಸಂಗತಿಯು ಹೆಚ್ಚು ಚೆನ್ನಾಗಿ ತಿಳಿಯುವದು. ಕೆರೆಯ ನೀರು ಶಾಂತವಾಗಿದ್ದಾಗ ಅದರ ಮೇಲೆ ಮಳೆಯ ಹನಿಗಳು ಬೀಳಹತ್ತಿದವೆಂದರೆ ಆ ನೀರಿನಲ್ಲಿ ತೆರೆಗಳು ಉತ್ಪನ್ನವಾಗುವವು. ಅವುಗಳಲ್ಲಿ ದಂಡೆಯ ಕಡೆಯ ತೆರೆಗಳ ವೇಗವು ತೀರ ಕಡಿಮೆ ಇರುತ್ತದೆ. ಆ ತೆರೆಗೆ ದಂಡೆಯ ಮೇಲಿನ ಒಂದು ಹರಳು ತಗಲಿದರೂ ಕೂಡ ಅದು ತಿರಗುತ್ತದೆ; ಅಂದರೆ, ಪರಾವರ್ತನೆ ಹೊಂದುತ್ತದೆ. ಆದರೆ ಮಳೆಯ ಹನಿಗಳಿಗೆ ಬದಲಾಗಿ ಆ ಕೆರೆಯಲ್ಲಿ ಒಂದು ಕಲ್ಲು ಬಿಗೆದರೆ ಅದರಿಂದ ಹುಟ್ಟಿದ ತೆರೆಗಳಲ್ಲಿ ದಂಡೆಯ ಕಡೆಗೆ ಬರುತ್ತಿದ್ದ ಕಟ್ಟಕಡೆಯ ತೆರೆಯು ಆ ಹರಳನ್ನು ಲೆಕ್ಕಿಸದೆ ಅದನ್ನು ದಾಟಿ ಮುಂದಕ್ಕೆ ಹೋಗಿ ಬಿಡುತ್ತದೆ. ಈ ಉದಾಹರಣೆಯೊಳಗಿನ ಹರಳೇ ಆಕಾಶದೊಳಗಿನ ರಜಃಕಣಗಳು.

ಪ್ರಕಾಶಕಿರಣದೊಳಗಿನ ನೀಲವರ್ಣದ ಕಿರಣಗಳು ರಜಃಕಣಗಳಿಂದ ಪರಾವರ್ತನೆ ಹೊಂದಿ, ಬೇರೆ ಕಣಗಳ ಕಡೆಗೆ ಹೋಗುತ್ತವೆ. ಆದರೆ ಕೆಂಪು ಹಾಗು ಬೇರೆ ಬಣ್ಣದ ಕಿರಣಗಳು ಹಾಗೆ ಪರಾವರ್ತನೆವನ್ನು ಹೊಂದುವದಿಲ್ಲ. ಅವು ವಾತಾವರಣವನ್ನು ಸೇರಿಕೊಂಡು ನೆಟ್ಟಗೆ ನಮ್ಮ ಕಣ್ಣುಗಳ ಕಡೆಗೆ ಬರುತ್ತವೆ. ವಾತಾವರಣದ ಬೇರೆ ಬೇರೆ ತರಗಳಿಂದ ಪರಾವರ್ತನೆವನ್ನು ಹೊಂದಿಬರುವ ನೀಲವರ್ಣದ ಕಿರಣಗಳಿಂದ ಆಕಾಶವು ನೀಲವರ್ಣದ್ದಾಗಿ ಕಾಣುವದೆಂದು ಟಿಂಡಾಲಸಾಹೇಬರು ಸಿದ್ಧಾಂತವನ್ನು ಮಾಡಿದರು.

ಈ ಅಭಿಪ್ರಾಯವನ್ನೇ ಸುಮಾರು ೫೦ ವರ್ಷಗಳವರೆಗೆ ಜನರು ನಂಬಿದರು. ಎಷ್ಟೋ ಶೋಧಕರಾದ ವಿದ್ವಾಂಸರು ಹಲವು ಪ್ರಯೋಗಗಳನ್ನು ಮಾಡಿ ಈ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಪ್ರಖ್ಯಾತನಾದ ಮತ್ತೊಬ್ಬ ಅಮೇರಿಕನ್ ಶಾಸ್ತ್ರಜ್ಞನು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಋತುಗಳ ಬೇರೆ ಬೇರೆ ಹೊತ್ತಿನಲ್ಲಿ ಆಕಾಶವು ಹ್ಯಾಗೆ ಕಾಣುವದೆಂಬದನ್ನು ಸೂಕ್ಷ್ಮವಾಗಿ ಅವಲೋಕನವನ್ನು ಮಾಡಿದನು. ಅಲ್ಪ್ಸ್‌ದಂಥ ಎತ್ತರವಾದ ಪರ್ವತಗಳ ಮೇಲಿಂದಲೂ, ಇಜಿಪ್ತ ಗ್ರೀಸಗಳಂಥ ರುಕ್ಷ ಪ್ರದೇಶಗಳಲ್ಲಿಯೂ, ಅಮೇರಿಕದೊಳಗಿನ ಕೆಲವು ಆರ್ದ್ರ ಪ್ರದೇಶಗಳಲ್ಲಿಯೂ, ಆಕಾಶವು ಹ್ಯಾಗೆ ಕಾಣುತ್ತದೆ ಎಂಬದನ್ನು ನೀರೀಕ್ಷಿಸಿ ನ್ಯೂಟನ್ನನ ಮತದಂತೆ ವಾತಾವರಣದ ಅತ್ಯುಚ್ಚ ಪ್ರದೇಶದಲ್ಲಿ ನೀರಿನ ಉಗಿಯ ಕಣಗಳು ಇರುವದಿಲ್ಲೆಂದು ಮನಗಂಡನು. ಬೈಲು ಪ್ರದೇಶದಲ್ಲಿ ಸೂರ್ಯನ ಉದಯಾಸ್ತ ಸಮಯಕ್ಕೆ ಆಕಾಶವು ಕೆಂಪುಬಣ್ಣದಿಂದ ಹೊಳೆಯುತ್ತಿರುವದು. ಈ ಕೆಂಪು ಬಣ್ಣವು ಭೂಮಿಯ ಪೃಷ್ಠಭಾಗದಿಂದ ಐದು ಮೈಲುಗಳೊಳಗಿನ ವಾತಾವರಣದಲ್ಲಿ ಇರುವ ನೀರಿನ ಉಗಿಯ ಕಣಗಳಿಂದ ಉಂಟಾಗುತ್ತದೆ. ಆ ಕಣಗಳು ಸೂರ್ಯಕಿರಣಗಳೊಳಗಿನ ನೀಲೀ ಬಣ್ಣವನ್ನು ಶೋಷಿಸಿಕೊಳ್ಳುತ್ತವೆ. ಕೆಂಪು ಕಿರಣಗಳಷ್ಟೇ ವಾತಾವರಣದೊಳಗಿಂದ ನಮ್ಮಕಡೆಗೆ ಬರುತ್ತವೆ. ಅದರಿಂದ ಆಕಾಶಕ್ಕೆ ಕೆಂಪುಬಣ್ಣವು ಬರುವದು. ಆದರೆ ಸೂರ್ಯನು ಅಸ್ತವಾದಬಳಿಕ ಸಂಧಿಪ್ರಕಾಶದಲ್ಲಿ ಕಾಣುವ ನೀಲವರ್ಣವು ಬಹಳ ಹೊತ್ತಿನವರೆಗೆ ಇರುವದು. ಇದಕ್ಕೆ ವಾತಾವರಣದ ಅತ್ಯುಚ್ಚ ಪ್ರದೇಶದಲ್ಲಿ ಹಾರಾಡುವ ಅತಿ ಸೂಕ್ಷ್ಮವಾದ ರಜಃಕಣಗಳಿಂದ ಪರಾವರ್ತನೆ ಹೊಂದಿದ ಕಿರಣಗಳೇ ಕಾರಣವೆಂದು ಮೇಲೆ ಹೇಳಿದ ಅಮೇರಿಕದ ಶಾಸ್ತ್ರಜ್ಞನ ಅಭಿಪ್ರಾಯವಾಯಿತು.

ಈ ಮೇರೆಗೆ ಹಲವು ಜನ ವಿದ್ವಾಂಸರು ಒಪ್ಪಿಕೊಂಡು ಸಿದ್ಧಮಾಡಿದ ಈ ಸಂಗತಿಯು ಇತ್ತಿತ್ತಲಾಗಿ ೪-೫ ವರ್ಷಗಳಿಂದ ಪುನ: ಹೊಯ್ದಾಡಹತ್ತಿರುವದು. ಈ ಅಭಿಪ್ರಾಯಕ್ಕೆ ಬಾಧಕವಾದ ಸಂಗತಿಗಳನ್ನು ಹೇಳಿ ಈ ವಿಷಯವನ್ನು ಮುಗಿಸುವಾ.

ವಾತಾವರಣದ ಅತ್ಯುಚ್ಚವಾದ ಪ್ರದೇಶದಲ್ಲಿರುವ ರಜ:ಕಣಗಳಿಂದ ಸೂರ್ಯಕಿರಣಗಳು ಪರಾವರ್ತನೆ ಹೊಂದುವದರಿಂದ ಆಕಾಶಕ್ಕೆ ನೀಲವ

ರ್ಣವು ಬಂದಿರುವದೆಂದು ಶಾಸ್ತ್ರಜ್ಞರ ಅಭಿಪ್ರಾಯವು. ಆದರೆ ವಾತಾವರಣದ ಆ ಪ್ರದೇಶದಲ್ಲಿ ಅಂಥ ರಜಃಕಣಗಳು ಅವೆಯೋ ಇಲ್ಲವೋ ಎಂಬದನ್ನು ಸಿದ್ಧಮಾಡುವದಕ್ಕಾಗಿ ಮೊದಲು ಆ ಪ್ರದೇಶದವರೆಗೆ ಹೋಗುವದಂತೂ ಅಶಕ್ಯವು. ಮತ್ತು ಭೂಮಿಯ ಪೃಷ್ಠಭಾಗದಿಂದ ನೂರು ಮೈಲಿನ ಮೇಲೆ ಇರುವ ವಾತಾವರಣದ ಸ್ಥಿತಿ, ಅದರ ಒತ್ತುವಿಕೆ, ಇವೇ ಮುಂತಾದ ಸಂಗತಿಗಳನ್ನು ಕುರಿತು ಆಲೋಚನೆ ಮಾಡಲು, ಭೌನಸ್ಥಿತಿಯಲ್ಲಿರುವ ಜಡದ್ರವ್ಯಗಳ ರಜಃಕಣಗಳು ಅಲ್ಲಿ ಇರುವ ಸಂಭವ ಇಲ್ಲೆಂಬಂತೆ ತೋರುತ್ತದೆ.

ಉಲ್ಕಾಪಾತದೊಡನೆ ಬಾಹ್ಯಸೃಷ್ಟಿಯೊಳಗಿಂದ ಭೂಮಿಯ ವಾತಾವರಣದಲ್ಲಿ ಸೇರುವ ದ್ರವ್ಯಮಯವಾದ ಕಣಗಳ ವಿಷಯದಲ್ಲಿ ವಿಚಾರ ಮಾಡಿದರೆ ಅವುಗಳು ತೀರ ಸ್ವಲ್ಪ ಪ್ರಮಾಣದಿಂದ ಇರುವದರಿಂದ ಅವುಗಳನ್ನು ಎಣಿಕೆಯಲ್ಲಿ ಸಿಡಿಯುವ ಕಾರಣ ತೋರುವದಿಲ್ಲ.

ಝಂಝೂವಾತದಂಥ ಬಿರುಗಾಳಿಯಿಂದ ಹಾರುವ ಧೂಳಿಯ ಕಣಗಳೂ, ಜ್ವಾಲಾಮುಖಿಯ ನಡುಗಡ್ಡೆಯಲ್ಲಿದ್ದ ಕ್ರೈಕೇಟೋ ಎಂಬ ಜ್ವಾಲಾಮುಖಿಯ ಸ್ಫೋಟನಂಥ ಸ್ಫೋಟದಿಂದ ಆಕಾಶಕ್ಕೆ ಹಾರುವ ಜಡದ್ರವ್ಯಗಳ ಕಣಗಳೂ ಅಲ್ಲಿ ಬಹಳ ಹೊತ್ತು ಉಳಿಯಲಾರವೆಂದು ತೋರುತ್ತದೆ. ಕ್ರೈಕೇಟೋ ಜ್ವಾಲಾಮುಖಿಯ ಭಯಂಕರವಾದ ಸ್ಫೋಟವು ೧೮೮೩ ಇಸವಿಯ ಅಗಷ್ಟ ತಿಂಗಳಲ್ಲಿ ಆಯಿತು. ಅದರ ಮೇಘಗರ್ಜನೆಯಂಥ ಸಪ್ಪಳವು ೯೯೦ ಮೈಲು ದೂರ ಇದ್ದ ಸೆಲಿಬಸ್ ನಡುಗಡ್ಡೆಯಲ್ಲಿಯೂ, ೧೫೦೦ ಮೈಲು ದೂರ ಇದ್ದ ಪಶ್ಚಿಮ ಆಸ್ತ್ರೇಲಿಯದಲ್ಲಿಯೂ ಕೇಳಿಸಿತು. ಹಾಗೂ ಅದರಿಂದ ಆಕಾಶದಲ್ಲಿ ೧೫ ಮೈಲು ಎತ್ತರದವರೆಗೆ ಧೂಳಿಯು ಹಾರಿದ್ದು ಯಂತ್ರಸಹಾಯದಿಂದ ಗೊತ್ತಾಯಿತು. ಈ ಧೂಳಿಯು ಆಕಾಶದಲ್ಲಿ ಹಲವು ದಿವಸಗಳವರೆಗೆ ಇದ್ದದ್ದರಿಂದ ಆಗ ದಿನಾಲು ಮುಂಜಾನೆ ಸಾಯಂಕಾಲಗಳಲ್ಲಿ ಆಕಾಶವು ಕೆಂಪು ಬಣ್ಣವುಳ್ಳದ್ದಾಗಿ ಕಾಣಿಸುತ್ತಿತ್ತು. ಆದರೆ ಅದರಿಂದ ಆಕಾಶದ ನೀಲವರ್ಣವು ಹೆಚ್ಚಾದಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ.

ಒಟ್ಟಿಗೆ ಹೇಳತಕ್ಕದ್ದೇನಂದರೆ ಆಕಾಶದ ನೀಲತ್ವದ ಸಂಬಂಧದಿಂದ ಇದುವರೆಗೆ ಮಾನ್ಯವಾಗಿದ್ದ ಉಪಪತ್ತಿಯು ಈಗ ಹೊಯ್ದಾಡಲಾರಂಭಿಸಿರುವದು. ಹಾಗೂ ಕೆಲವರು ಆಕಾಶದ ನೀಲತ್ವಕ್ಕೆ ಬೇರೊಂದು ರಾಸಾಯನಿಕ ಕಾರಣವನ್ನು ಮುಂದೆ ಮಾಡುತ್ತಿರುವರು. ಕೆಲವರು ವಾತಾವರಣದ

ಲ್ಲಿರುವ ಓಝೋನೆ ವಾಯುವಿನಿಂದ ಈ ನೀಲವರ್ಣವು ಉಂಟಾಗಿರುವ ದೆಂದು ಹೇಳುವರು. ಬೇರೆ ಕೆಲವರು ಆಕಾಶವು ಸ್ವಭಾವತಃ ನೀಲವರ್ಣ ವುಳ್ಳದ್ದಿರುವದೆಂದು ಪ್ರತಿಪಾದಿಸುವರು. ಆದಕಾರಣ ಸದ್ಯಕ್ಕೆ ಯಾರಾದರೂ ಆಕಾಶದ ಬಣ್ಣವು ನೀಲಿ ಯಾಕೆ? ಎಂದು ನಮಗೆ ಕೇಳಿದರೆ ಅದಕ್ಕೆ ಅದರ ಕಾರಣ ನಮಗೆ ಗೊತ್ತಿಲ್ಲವೆಂದು ಹೇಳುವದೇ ಪ್ರಶಸ್ತವಾಗಿ ತೋರುತ್ತದೆ.

ಹುಚ್ಚನಾಯಿಯು ಕಚ್ಚಿದ್ದಕ್ಕೆ ಔಷಧೋಪಚಾರದ ಅನುಕೂಲತೆ.

೩. ಮನುಷ್ಯನಿಗೆ ಅಕಸ್ಮಾತ್ತಾಗಿ ಘಟಿಸುವಂಥ ಆಪತ್ತುಗಳಲ್ಲಿ ಹುಚ್ಚನಾಯಿಯು ಕಚ್ಚುವದು ಒಂದಾಗಿರುತ್ತದೆ. ಬಹುತರ ಹುಚ್ಚನಾಯಿಯ ನಂಜಿಗೆ ಔಷಧವಿಲ್ಲವೆಂದು ತಿಳಿಯುವದುಂಟು. ಆದರೆ ಈ ವಿಷಕ್ಕೆ ಪ್ರಸಿದ್ಧ ಫ್ರೆಂಚ ರಸಾಯನಶಾಸ್ತ್ರಜ್ಞನೂ ಜಂತುಶಾಸ್ತ್ರಜ್ಞನೂ ಆದ ಪಾಸ್ಚ್ಯೂರ ಎಂಬವನು ಹಲವು ಪ್ರಯೋಗಗಳನ್ನು ಮಾಡಿ ಉಪಾಯವನ್ನು ಹುಡುಕಿ ತೆಗೆದನು. ಈ ಉಪಾಯವು ಉತ್ತಮವಾದ ಉಪಾಯವೆಂದು ಕಂಡುಬಂದದ್ದರಿಂದ ಅದರ ಉಪಯೋಗವು ಬೇರೆ ಬೇರೆ ದೇಶದ ಜನರಿಗೆ ಆಗಬೇಕೆಂದು ಬೇರೆ ಬೇರೆ ದೇಶಗಳಲ್ಲಿ ಹುಚ್ಚನಾಯಿಯ ವಿಷಕ್ಕೆ ಪಾಸ್ಚ್ಯೂರನ ಉಪಾಯವನ್ನು ಮಾಡುವಂಥ ಸಂಸ್ಥೆಗಳು ಸ್ಥಾಪಿಸಲ್ಪಟ್ಟವೆ. ಅಂಥ ಎರಡು ಸಂಸ್ಥೆಗಳು ಹಿಂದುಸ್ತಾನದಲ್ಲಿ ಸ್ಥಾಪಿಸಲ್ಪಟ್ಟಿರುವವು. ಮೊದಲನೆಯ ಸಂಸ್ಥೆಯು ಸಿಮ್ಲಾದ ಹತ್ತರ ಕಸೌಲಿ ಎಂಬಲ್ಲಿ ೧೯೦೦ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು. ಹಾಗೂ ಇತ್ತಲಾಗಿ ಮದ್ರಾಸ ಇಲಾಖೆಯಲ್ಲಿ ನೀಲಗಿರಿ ಪರ್ವತದ ಹತ್ತರ ಕುನೂರ ಎಂಬಲ್ಲಿ ಈ ತರದ ಎರಡನೆಯದೊಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವದು. ಕಸೌಲಿಗಿಂತಲೂ ಕುನೂರು ನಮ್ಮ ಪ್ರಾಂತಕ್ಕೆ ಸಮೀಪವಾಗಿರುವದರಿಂದ ಈ ಪ್ರಾಂತದಲ್ಲಿ ಹುಚ್ಚನಾಯಿ ಕಚ್ಚಿದವರು ಔಷಧೋಪಚಾರಕ್ಕಾಗಿ ಬಹುಶಃ ಕುನೂರಿಗೆ ಹೋಗುವರು. ಇವೆರಡೂ ಸಂಸ್ಥೆಗಳಿಗೆ ಸರಕಾರದ ಆಶ್ರಯವು ಚನ್ನಾಗಿರುವದು. ಹಾಗೂ ಔಷಧೋಪಚಾರಕ್ಕಾಗಿ ಈ ಸಂಸ್ಥೆಗಳಿಗೆ ಹೋಗುವವರಿಗೆ ಸರಕಾರದವರು ಒಳ್ಳೇ ಅನುಕೂಲವನ್ನು ಮಾಡಿಕೊಡುವರು. ಈ ಸಂಬಂಧದ ನಿಯಮಗಳು ಸರಕಾರದ ಗ್ಯಾಝೆಟಿನಲ್ಲಿ ಆಗಾಗ್ಗೆ ಪ್ರಸಿದ್ಧಿಸಲ್ಪಡುತ್ತವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಶಾಲಾಪತ್ರಕದ ವಾಚಕರಿಗೋಸ್ಕರ ಇಲ್ಲಿ ಕೊಡುತ್ತೇವೆಃ—

೧. ಹುಚ್ಚುಹಿಡಿದ ನಾಯಿಯು ಕಚ್ಚಿದ ಸರಕಾರೀ ನೌಕರನಿಗೆ ಒಂದು ತಿಂಗಳ ಕಿರಕೋಳ ರಜೆಯು ದೊರೆಯುವದು.

೨. ಆಗಿಂದಾಗ್ಗೆ ಕುನೂರಿಗೆ ಹೋಗಲಿಕ್ಕೆ ಹಣದ ಅಡಚಣೆಯು ಮೂಲಕ ಅನುಕೂಲವಿಲ್ಲದ ಬಡವನಾದ ನೌಕರನಿಗೆ ಒಂದು ತಿಂಗಳ ಪಗಾರವು ಮುಂಗಡವಾಗಿ ದೊರೆಯಬಹುದು. ಹೋಗಿಬರುವ ರೇಲ್ವೆಯ ಹಾಸಲವು ಸರಕಾರದಿಂದ ದೊರೆಯುವದು.

೩. ಸರಕಾರೀ ನೌಕರನ ಆಪ್ತೇಷ್ಟರಲ್ಲಿ ಯಾರಿಗಾದರೂ ಹುಚ್ಚನಾಯಿಯು ಕಚ್ಚಿದ್ದು, ಅವರನ್ನು ಕುನೂರಿಗೆ ಕಳುಹಿಸಿಕೊಡುವವರ ಸಲುವಾಗಿ ಹಣದ ಅಡಚಣೆಯಾಗಿದ್ದರೆ, ಅಂಥ ನೌಕರನಿಗೆ ಒಂದು ತಿಂಗಳ ಪಗಾರವು ಮುಂಗಡವಾಗಿ ದೊರೆಯುವದು.

೪. ಸರಕಾರೀ ನೌಕರಿಯಲ್ಲಿಲ್ಲದ ಬಡವನಿಗೆ ಹುಚ್ಚುನಾಯಿಯು ಕಚ್ಚಿದ್ದು, ಅವನು ಸಿವ್ಹಿಲ್‌ಸರ್ಜನನ, ಅಥವಾ ಅಂಥಾ ಎರಡನೇ ಅಧಿಕಾರಿಯ ಸರಟೀಫಿಕೇಟನ್ನು ಹಾಜರ ಮಾಡಿದರೆ, ಅವನಿಗೆ ಕುನೂರಿಗೆ ಹೋಗಿಬರುವ ರೇಲ್ವೆ ಬಾಡಿಗೆಯ ಖರ್ಚು ಸರಕಾರದಿಂದ ದೊರೆಯುವದು; ಹಾಗು ದಾರಿಯೊಳಗಿನ ಹೊಟ್ಟೆಯ ಖರ್ಚಿನ ಸಲುವಾಗಿಯೂ ಕೆಲವು ಹಣವು ದೊರೆಯುವದು. ಬಡವನಾದ ಸಿಂದೀವನುಷ್ಯನಿಗೆ ದಾರಿಯಲ್ಲಿ ಪ್ರತಿದಿವಸ ನಾಲ್ಕಾಣೆಯಂತೆಯೂ ಕುನೂರಲ್ಲಿರುವಾಗ ದಿನಕ್ಕೆ ಆರಾಣೆಯಂತೆಯೂ ಭತ್ತೆಯು ದೊರೆಯುವದು; ಹಾಗು ಬಡ ಯುರೋಪಿಯನ್ ಇಲ್ಲವೆ ಯುರೇಶಿಯನ್ನನಿಗೆ ದಾರಿಯಲ್ಲಿ ದಿನಕ್ಕೆ ೧ ರೂಪಾಯಿಯಂತೆಯೂ ಕುನೂರಿನಲ್ಲಿ ಪ್ರತಿದಿನ ೨½ ರೂಪಾಯಿಯಂತೆಯೂ ಭತ್ತೆಯು ದೊರೆಯುವದು.

೫. ಔಷಧದ ಸಲುವಾಗಿ ಬಡಜನರ ಕಡೆಯಿಂದ ಹಣವು ತೆಗೆದು ಕೊಳ್ಳಲ್ಪಡುವದಿಲ್ಲ. ಆದರೆ ಉಳಿದವರು ತಮ್ಮ ಅನುಕೂಲತೆಯಂತೆ ಔಷಧದ ಖರ್ಚಿನ ಹಣವನ್ನು ಕೊಡಬೇಕೆಂದು ಸಂಸ್ಥೆಯವರು ಅಪೇಕ್ಷಿಸುವರು.

ಔಷಧೋಪಚಾರಗಳನ್ನು ೧೫ ದಿವಸಗಳವರೆಗೆ ಒಂದೇ ಸವನೆ ಮಾಡಬೇಕಾಗುವದು. ಈ ಅವಧಿಯಲ್ಲಿ ರೋಗಿಯು ನೆಟ್ಟಗಾಗುವನೆಂದು ಅನುಭವದಿಂದ ಗೊತ್ತಾಗಿದೆ. ಔಷಧೋಪಚಾರವು ನಡೆದಿರುವಾಗ ತಿರುಗಾಡಲಿಕ್ಕೆ ಅಡ್ಡಿಯಿಲ್ಲ. ತೀರ ಬಡಜನರ ಸಲುವಾಗಿ ಇಳಕೊಳ್ಳುವ ವ್ಯವಸ್ಥೆ

ಯನ್ನು ಸಹ ಈ ಸಂಸ್ಥೆಯ ಚಾಲಕರೇ ಮಾಡಿಕೊಡುವರು. ಉಳಿದ ಜನರು ತಮ್ಮ ತಮ್ಮ ಅನುಕೂಲತೆಯ ಪ್ರಕಾರ ಊರೊಳಗೆ ತಮ್ಮ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುವದು. ಊರೊಳಗೆ ಖಾನಾವಳಿಗಳೂ ಹೊಟೇಲಗಳೂ ಇರುವದರಿಂದ ಬೇರೆ ಬೇರೆ ತರಗತಿಯ ಹಾಗೂ ಜಾತಿಯ ಜನರಿಗೆ ಇಳಕೊಳ್ಳಲಿಕ್ಕೆ ವಿಶೇಷ ಅಡಚಣಿಯ ಪ್ರಸಂಗವು ಒದಗುವದಿಲ್ಲ.

ನಾಯಿಯು ಕಚ್ಚಿದ ಮನುಷ್ಯನು ಬಡವನಾಗಿದ್ದು ಹೆಚ್ಚು ಬೇನೆಯವನಾಗಿದ್ದರೆ ಅವನ ಸಂಗಡ ಹೋಗುವ ಜನರ ಬಾಡಿಗೆಯು ಸಹ ಸರಕಾರದಿಂದ ದೊರೆಯುವದು.

ಸಾಧ್ಯವಿದ್ದರೆ ಕಚ್ಚಿದ ನಾಯಿಯ ಮಿದುಳನ್ನು ಸಂಗಡ ಒಯ್ಯಬೇಕು; ಇಲ್ಲವೆ ಕಳುಹಿಸಿಕೊಡಬೇಕು. ಅರ್ಧ ಮಿದುಳನ್ನು ಶುದ್ಧ ಗ್ಲಿಸರೀನದಲ್ಲಿ ಹಾಕಬೇಕು. ಹಾಗು ಎರಡನೇ ಅರ್ಧವನ್ನು ೬೦ ಭಾಗ ಬಾಯ್ ಕ್ರೊಮೇಟ ಆಫ್ ಪೋಟಾಶ್ Bichromate of potash ಮತ್ತು ೬೦ ಭಾಗ ಗ್ಲೇಸಿಅಲ್ ಅಸೇಟಿಕ್ ಆಸಿಡ್ (Glacial acetic acid) ಉಳ್ಳ ನೀರಿನ ಮಿಶ್ರಣದಲ್ಲಿ ಹಾಕಿಕೊಂಡು ಒಯ್ಯಬೇಕು.

ಕುನೂರ ಎಂಬ ಊರು ನೀಲಗಿರಿ ರೇಲ್ವೆಯ ಮೇಲಿನ "ಮೇಟು ಪಲೆಯಮ್" ಎಂಬ ಸ್ಟೇಶನದಿಂದ ಮೂರುತಾಸಿನ ಹಾದಿಯ ಮೇಲೆ ಇರುವದು. ಪಾಸ್ಟ್ಯೂರ ಸಂಸ್ಥೆಯು ಕುನೂರ ಸ್ಟೇಶನದಿಂದ ಒಂದು ಮೈಲಿನಮೇಲೆ ಇರುವದು. "ಮೇಟು ಪಲೆಯಮ್" ಸ್ಟೇಶನವು ಸೌಥ್ ಇಂಡಿಯನ್ ರೇಲ್ವೆಯ ನೈಋತ್ಯ ಶಾಖೆಯಲ್ಲಿಯು ಒಂದು ಸ್ಟೇಶನವಾಗಿರುವದು. ಕುನೂರಿಗೆ ಹೋಗುವಾಗ ಕೆಲವು ಉಣ್ಣೆಯ ಅರಿವೆಗಳನ್ನು ಒಯ್ದರೆ ಒಳ್ಳೆಯದು. ಯಾಕಂದರೆ ಅಲ್ಲಿ ಚಳಿಯು ವಿಶೇಷವಾಗಿರುವದು.

ಏಳು ಪ್ರಾಚೀನ ಅದ್ಭುತಗಳೂ ಏಳು ಆರ್ವಾಚೀನ ಅದ್ಭುತಗಳೂ.

೪. ಬಹು ಪ್ರಾಚೀನ ಕಾಲದಿಂದ ಪಾಶ್ಚಿಮಾತ್ಯ ದೇಶಗಳಲ್ಲಿ ಜಗತ್ತಿನ ೭ ಅದ್ಭುತಗಳು ಎಂಬ ಹೆಸರಿನಿಂದ ೭ ಸಂಗತಿಗಳು ಪ್ರಸಿದ್ಧವಾಗಿರುವವು. ಆ ಏಳು ಅದ್ಭುತಗಳು ಯಾವವೆಂದರೆ:—

೧. ಈಜಿಪ್ತ ದೇಶದೊಳಗಿನ (ಪಿರಾಮಿಡ್) ಎಂಬ ನೆಲಗೋಪುರಗಳು.

೩. ಅಲೆಗ್ಝಾಂಡ್ರಿಯಾ ಬಂದರವನ್ನು ಪ್ರವೇಶಿಸುವಾಗ ಹತ್ತುವ "ಫೇರೋಜ" ಎಂಬ ದೀಪಸ್ತಂಭವು.

೪. ಬಾಬಿಲೋನದಲ್ಲಿ ಸೇಮಿರಾಮಿಸ ರಾಣಿಯು ಅಂತರಿಕ್ಷದಲ್ಲಿ ತೂಗಾಡುವ ತೋಟವು.

೫. ಎಫೀಸಸ್ (ಏಶಿಯಾಮಾಯನಾರದ ಪಶ್ಚಿಮ ದಂಡೆಯಲ್ಲಿ ಪ್ರಾಚೀನಕಾಲದಲ್ಲಿದ್ದ ಬಂದು ಪಟ್ಟಣ) ಎಂಬಲ್ಲಿ ಇರುವ "ಡಾಎನಾ" ದೇವತೆಯ ದೇವಾಲಯವು. ಇದು ಈಗ ನಷ್ಟವಾಗಿದೆ.

೬. ಫಿಡಿಯಾಸ್ ಎಂಬುವನು ಅಥೆನ್ಸದಲ್ಲಿ ಮಾಡಿದ ಜ್ಯುಪಿಟರ ದೇವರ ಪ್ರತಿಮೆಯು.

೭. "ಹ್ಯಾಲಿಕಾರ್ನೇಸಸ್" (ರೋಡ್ಸ ನಡುಗಡ್ಡೆಯಲ್ಲಿ ಬಂದು ಪ್ರಾಚೀನ ಪಟ್ಟಣ) ಎಂಬಲ್ಲಿರುವ ಆರ್ಟೆಮಿಶಿಯಾ ಎಂಬಾಕೆಯು ಕಟ್ಟಿಸಿದ ತನ್ನ ಗಂಡನ ಭವ್ಯವಾದ ಸಮಾಧಿಯು.

೮. ರೋಡ್ಸ (ಏಶಿಯಾ ಮಾಯನಾರದ ದಕ್ಷಿಣಕ್ಕೆ ಗ್ರೀಸಿಯನ್ ಆರ್ಚಿಪೆಲಾಗೋದೊಳಗಿನ ಬಂದು ನಡುಗಡ್ಡೆಯಲ್ಲಿದ್ದ ಪಟ್ಟಣ) ಪಟ್ಟಣದ ಬಂದರದ ಎರಡು ದಂಡೆಗಳಮೇಲೆ ಎರಡು ಕಾಲುಗಳನ್ನು ಇಟ್ಟಂಥ ಪ್ರಚಂಡವಾದ ಸಿಂತ್ಯಾಳಿಯ ಮನುಷ್ಯಾಕೃತಿಯು.

ಮೇಲೆ ಹೇಳಿದವುಗಳು ಪ್ರಾಚೀನಕಾಲದ ಜಗತ್ತಿನ ಅದ್ಭುತಗಳು. ಅವುಗಳಲ್ಲಿ ಈಗ ಕೆಲವುಗಳು ನಾಮಶೇಷವಾಗಿವೆ. ಇದೇ ಪ್ರಕಾರ ಅರ್ವಾಚೀನ ಕಾಲದ ಏಳು ಅದ್ಭುತ ಸಂಗತಿಗಳನ್ನು ಗೊತ್ತುಪಡಿಸಬೇಕೆಂಬ ಅಭಿಲಾಷೆಯಿಂದ ಇಳಗಡೆಯಲ್ಲಿ ಒಬ್ಬ ಜಿಜ್ಞಾಸುವು ೪೫ ಹೊಸ ಶೋಧಗಳ ಪಟ್ಟಿಯನ್ನು ಮಾಡಿ ಅವುಗಳಲ್ಲಿ ೭ ಶೋಧಗಳನ್ನು ಆರಿಸಬೇಕೆಂದು ಆ ಪಟ್ಟಿಯನ್ನು ೭೦೦ ಮಂದಿ ಪ್ರಸಿದ್ಧ ಶಾಸ್ತ್ರಜ್ಞರಕಡೆಗೆ ಕಳುಹಿಂದನು. ಅವರಿಂದ ಕೆಳಗೆ ಬರೆದ ಏಳು ಸಂಗತಿಗಳಿಗೆ ಬಹುಮತಗಳು ದೊರೆದವು. ಆ ಏಳು ಸಂಗತಿಗಳು ಯಾವವೆಂದರೆ:—

ಶೋಧದ ಹೆಸರು.	ದೊರೆತ ಮತಗಳು.
೧. ವಾಯರಲೆಸ್ ಟೆಲಿಗ್ರಾಫಿ, ಅಂದರೆ ವಿದ್ಯುಚ್ಛಕ್ತಿಯಿಂದ ಸುದ್ದಿಯನ್ನು ಕಳುಹುವ ಯಂತ್ರ.	೬೪೦

೨. ಟೆಲಿಫೋನ್ ಅಂದರೆ ಬೇಕಾದಷ್ಟು ಅಂತರದ ಮೇಲಿರುವ ಮನುಷ್ಯನೊಡನೆ ಮಾತಾಡಲಿಕ್ಕೆ ಬರುವ ಯಂತ್ರ. ೧೯೫

೩. ಎಕ್ಸರೇಜ (ಅಪಾರದರ್ಶಕ ಪದಾರ್ಥಗಳೊಳಗಿಂದ ಪ್ರಕಾಶ ಕಿರಣಗಳನ್ನು ಹಾಯಿಸುವದು.). ೧೯೬

೪. ಫೋನಾಮೋ ಸಾಮುದ್ರಧ್ವನಿ ೧೦೦

೫. ಏರೋಪ್ಲೇನ ಅಂದರೆ, ಆಕಾಶಯಾನ ಅಥವಾ ವಿಮಾನ.

೬. ರೇಡಿಯಮ್ ಎಂಬ ಸ್ವಯಂಪ್ರಕಾಶವುಳ್ಳ ಹೊಸ ಧಾತು.

೭. ಆಂಟಿಸೆಪ್ಟಿಕ್ (ಸಂಸರ್ಗದೋಷಹಾರಕ), ಆಂಟಿಟಾಕ್ಸಿನ್ (ರೋಗ ಜಂತುನಾಶಕ) ಸ್ಪೆಕ್ಟ್ರಮ್ ಅನಾಲಿಸಿಸ್ (ಖಸ್ಥ ಪದಾರ್ಥಗಳೊಳಗಿನ ದ್ರವ್ಯಗಳನ್ನು ಪರೀಕ್ಷಿಸುವ ಪೃಥಕ್ಕರಣಯಂತ್ರ)ದ ಶೋಧಗಳು.

ಮೇಲೆ ಹೇಳಿರುವ ಏಳು ಅರ್ವಾಚೀನ ಅದ್ಭುತ ಸಂಗತಿಗಳಲ್ಲಿ ಒಕ್ಕಲತನವನ್ನು ಕೈಕೊಂಡವರು, ವ್ಯಾಪಾರಸ್ಥರು, ಕಾರಖಾನೆಗಳನ್ನು ಮಡೆಯಿಸುವವರು, ಇಲ್ಲವೆ ಬೇರೆ ಬೇರೆ ಪ್ರೊಫೇಸರರು ಮುಂತಾದವರು ತಮ್ಮ ತಮ್ಮ ಇಚ್ಛಾನುರೂಪವಾಗಿಯಾಗಲಿ ಅನುಭವದಿಂದಾಗಲಿ ಎಷ್ಟೋ ರೆಜಟ್ಟು ಕಡಿಮೆಗಳನ್ನು ಮಾಡಬಹುದು. ಆದರೆ ಪ್ರಾಚೀನ ಅದ್ಭುತ ಸಂಗತಿಗಳನ್ನೂ ಅರ್ವಾಚೀನಕಾಲದ ಅದ್ಭುತ ಸಂಗತಿಗಳನ್ನೂ ಪರೀಕ್ಷಿಸಿ ನೋಡಿದರೆ, ಒಂದು ಸಂಗತಿಯು ಮನಸ್ಸಿಗೆ ಹೊಳೆಯದೆ ಇರದು. ಅದು ಯಾವದೆಂದರೆ, ಪ್ರಾಚೀನಕಾಲದ ಏಳು ಅದ್ಭುತ ಕೃತ್ಯಗಳೆಲ್ಲ ನೋಟದಲ್ಲಿ ಅದ್ಭುತವಾಗಿರುವವು. ಅರ್ವಾಚೀನ ಜಗತ್ತಿನಲ್ಲಿ ಬಹುಮತವನ್ನು ಹೊಂದಿರುವ ಅದ್ಭುತ ಸಂಗತಿಗಳು ಜಗತ್ತಿನ ಅನುಕೂಲತೆಗಳನ್ನು ಬಹಳವಾಗಿ ಬೆಳೆಸಿರುವವು; ಜಗತ್ತಿನೊಳಗಿನ ಅಶೋಧಿತ ಸಂಪತ್ತಿಯನ್ನು ಬಯಲಿಗೆ ತಂದುಕೊಟ್ಟಿರುವವು; ಮನುಷ್ಯನು ತನ್ನ ಜ್ಞಾನವನ್ನು ಮಾನವಪ್ರಾಣಿಗಳ ದುಃಖವನ್ನು ಪರಿಹರಿಸುವದಕ್ಕೂ, ರೋಗನಿವಾರಣ ಮಾಡುವದಕ್ಕೂ ಆಯು ರ್ವೃದ್ಧಿಯನ್ನು ಮಾಡುವದಕ್ಕೂ ಉಪಯೋಗಿಸುತ್ತಿರುವನು. ಒಟ್ಟಿಗೆ ಅರ್ವಾಚೀನ ಅದ್ಭುತ ಸಂಗತಿಗಳು ಮಾನವ ಪ್ರಾಣಿಯು ಪ್ರಗಲ್ಭಾವಸ್ಥೆಯನ್ನು ಹೊಂದುತ್ತಾ ಇರುವನೆಂಬದಕ್ಕೆ ಸಾಕ್ಷಿಯಾಗಿರುತ್ತವೆಂದು ಹೇಳಬಹುದು; ಹಾಗೂ ಮಾನವೀ ಶಕ್ತಿಯನ್ನು ಮೀರಿರುವ ಕೆಲವೊಂದು ಗೂಢ ಶಕ್ತಿಯು ಈ ಜಗತ್ತಿನಲ್ಲಿ ಇಲ್ಲವೆಂದು ತಿಳಿಯುವಂಥ, ಭೂಲೋಕದಲ್ಲಿ

ವಾಸಿಸುವ ಮನುಷ್ಯನಿಗೆ ಈಶ್ವರನ ಸಾನ್ನಿಧ್ಯವನ್ನೂ ಸಾಹಚರ್ಯವನ್ನೂ ದೊರಕಿಸುವದು ಅಸಾಧ್ಯವೆಂದು ತಿಳಿಯುವಂಥ ನಾಸ್ತಿಕ ಪ್ರವೃತ್ತಿಯುಳ್ಳ ಸ್ತ್ರೀಪುರುಷರ ಹೃದಯದಲ್ಲಿ ಕೂಡ ವಾಯರಲೆಸ್ ಟೆಲಿಗ್ರಾಫಿ, ಟೆಲಿಫೋನ, ಫೋನೋಗ್ರಾಫ, ಚಲಿತ ಚಿತ್ರಗಳು (ಸಿನೋಮೋಟೋಗ್ರಾಫ) ಇವೇ ಮೊದಲಾದ ಅರ್ವಾಚೀನ ಶೋಧಗಳು ಅಸ್ತಿಕಭಾವನೆಯನ್ನು ಹುಟ್ಟಿಸದೆ ಇರವೆಂದು ಎಣಿಸುತ್ತೇವೆ.

ಮಾನಸ ಶಾಸ್ತ್ರದ ಒಂದು ಪ್ರಕರಣ.

ಅವಧಾನ.

ಮನುಷ್ಯನು ತಾನು ಕೈಕೊಂಡ ಕಾರ್ಯವನ್ನು ಮನಮುಟ್ಟಿ ಮಾಡಿ ಅದನ್ನು ಕೊನೆಗಾಣಿಸಬೇಕು. ಹೀಗೆ ಮಾಡದೆ ಬಿಡಿಬೇಸರವನ್ನಾಗಲಿ, ಮೈಗಳ್ಳತನವನ್ನಾಗಲಿ ಮಾಡಿ ಅದನ್ನು ಕೊನೆಗೆ ಮುಟ್ಟಿಸದಿದ್ದರೆ ಅವನ ಸಚ್ಛೀಲಕ್ಕೆ ಕುಂದುಬರುವದು. ಶಿಕ್ಷಕನು ವಿದ್ಯಾರ್ಥಿಗಳನ್ನು ಜ್ಞಾನರಾಶಿ ಸದ್ಗೃಹಸ್ಥರನ್ನು ಮಾಡಿ, ಉತ್ಕೃಷ್ಟ ಸಮಾಜವನ್ನುಂಟುಮಾಡುವಂಥ ಪವಿತ್ರಕಾರ್ಯವನ್ನು ಕೈಕೊಂಡಿರುತ್ತಾನಷ್ಟೇ? ಅಂದಮೇಲೆ ಇವನು ತನ್ನ ಕರ್ತವ್ಯವನ್ನು ತಾತ್ಸಾರಮಾಡಿದರೆ ಘೋರ ಅಪರಾಧವನ್ನು ಮಾಡಿದಂತೆ ಆಗುವದು. ಶಿಕ್ಷಕನೇ ತ್ರಿಕರಣಪೂರ್ವಕವಾಗಿ ಶಿಕ್ಷಣವನ್ನು ಸಾಗಿಸದಿರಲು, ವಿದ್ಯಾರ್ಥಿಗಳು ಪಾಠದಲ್ಲಿ ಲಕ್ಷವಿಡದಿರುವದು ಆಶ್ಚರ್ಯವೇನು? ವಿದ್ಯಾರ್ಥಿಗಳು ಪಾಠವನ್ನು ದುರ್ಲಕ್ಷಿಸಲು, ಅವರ ಮನಸ್ಸು ಸಂಸ್ಕಾರಹೊಂದುವ ಬಗೆ ಹ್ಯಾಗೆ? ಹೀಗಾಗಿ ಶಿಕ್ಷಣದ ಕಾರ್ಯವು ಹೊಳೆಯಲ್ಲಿ ಹುಣಸೀಹಣ್ಣು ತೊಳೆದಂತಾಗುವದು. ಆದ್ದರಿಂದ ವಿದ್ಯಾರ್ಥಿಗಳು ವರ್ಗದಲ್ಲಿ ನಡೆದ ಪಾಠದಲ್ಲಿ ತುಂಬಾ ಲಕ್ಷ್ಯವುಳ್ಳವರಾಗಿರುವದು ಅವಶ್ಯವೆಂಬದು ಇದರಿಂದ ಸಿದ್ಧವಾಗುವದು. ಈ ಲಕ್ಷವನ್ನು ಪಾಠದಲ್ಲಿ ಹ್ಯಾಗೆ ಸ್ಥಿರಗೊಳಿಸಬೇಕೆಂಬದೇ ಪ್ರಸ್ತುತ ಲೇಖದ ಉದ್ದೇಶವು.

ಮೊದಲು ಅವಧಾನವೆಂದರೇನೆಂಬದನ್ನು ಆಲೋಚಿಸುವಾ. ಜ್ಞಾನೇಂದ್ರಿಯಗಳಿಗೂ ಯಾವದೊಂದು ವಿಷಯಕ್ಕೂ ಸಂಬಂಧವುಂಟಾಗುವದರಿಂದಲೇ

ಮನುಷ್ಯನಿಗೆ ವಿಷಯಜ್ಞಾನವಾಗುತ್ತದೆ. ಅಂದರೆ, ಜ್ಞೇಯವಸ್ತುವೇ ವಿಷಯವು, ಆ ವಸ್ತುವಿನ ಸಂಬಂಧದಿಂದಾಗುವ ತಿಳುವಳಿಕೆಯು ಜ್ಞಾನವೆನಿಸುವದು. ಈ ಜ್ಞಾನವನ್ನು ಮಾಡಿಕೊಳ್ಳುವವನು ಜ್ಞಾತೃವು. ಈ ಜ್ಞಾತೃವು ಜ್ಞೇಯವಸ್ತುವಿನ ಜ್ಞಾನವನ್ನು ಇಂದ್ರಿಯಗಳ ದ್ವಾರದಿಂದ ಮಾಡಿಕೊಳ್ಳುವನು. ಸೃಷ್ಟಿಯೊಳಗಿನ ವಸ್ತುಗಳಿಗೂ ಸಂಗತಿಗಳಿಗೂ ನಮ್ಮ ಜ್ಞಾನೇಂದ್ರಿಯಗಳಿಗೂ ಸಂಬಂಧವಾದ ಕೂಡಲೆ ನಮ್ಮ ಮನಸಿನಲ್ಲಿ ಒಂದು ಪ್ರಕಾರದ ಬೋಧೆ ಅಥವಾ ಭಾವನೆಯುಂಟಾಗುವದು. ಈ ಭಾವನೆಯಿಂದ ನಮಗೆ ಆ ವಸ್ತುವಿನ ಅಥವಾ ಸಂಗತಿಯ ಇರವು ಮನವರಿಕೆಯಾಗುವದು. ಉದಾಹರಣೆಃ— ಹಾದಿಯಲ್ಲಿ ನಾವು ಅನೇಕ ಜನರನ್ನು ನೋಡುತ್ತೇವೆ. ಆದರೆ ಆ ಎಲ್ಲರಲ್ಲಿ ನಮ್ಮ ಲಕ್ಷವು ಸಮನಾಗಿರುವದಿಲ್ಲ. ನಮ್ಮ ಕಣ್ಣೆದುರಿಗಿರುವ ಎಲ್ಲ ವಸ್ತುಗಳನ್ನು ಒಂದೇಸವನೆ ಲಕ್ಷಿಸುವದು ಸುಲಭವೂ ಅಲ್ಲ. ದೆವ್ವಿನಂಥ ಗಾಡಿಯು ಕೆಳಗೆ ಬೀಳುವ ವರೆಗೆ ಆ ಗಾಡಿಯ ಕಡೆಗೆ ಲಕ್ಷಕೊಡುವದೊತ್ತಟ್ಟಿಗಿರಲಿ, ಅದರ ಕಲ್ಪನೆಯು ಕೂಡ ಮನಸ್ಸಿನಲ್ಲಿ ಹುಟ್ಟದಿದ್ದಂಥ ಉದಾಹರಣೆಗಳನ್ನು ಒಮ್ಮೊಮ್ಮೆ ನೋಡಬಹುದು. ಆದರೆ ಒಮ್ಮೊಮ್ಮೆ ದೊಡ್ಡದೊಂದು ಸಪ್ಪಳವಾದಕೂಡಲೆ ನಮ್ಮ ಲಕ್ಷವು ಅತ್ತ ಹೊರಳುತ್ತದೆ. ಗುಂಪುಗೂಡಿದ ಜನರಲ್ಲಿ ನಾವು ಪ್ರತಿ ಒಬ್ಬರನ್ನು ನೋಡುತ್ತಿರುವದಿಲ್ಲ. ಅವರೊಳಗೆ ನಮ್ಮ ಗೆಳೆಯನೊಬ್ಬನಿದ್ದರೆ ಅವನ ಕಡೆಗೇ ನಮ್ಮ ಲಕ್ಷವು ಹೋಗಿ, ಪ್ರತಿಬಿಬ್ಬರ ಮೋರೆಯನ್ನು ನೋಡುತ್ತ ಅವನನ್ನು ಹುಡುಕುವದಕ್ಕೆ ಹತ್ತುತ್ತೇವೆ. ಒಟ್ಟಿಗೆ ಈ ವಿವೇಚನೆಯಿಂದ ಮನುಷ್ಯನ ಲಕ್ಷವು ಕೆಲವೊಂದು ವಸ್ತುವಿನಲ್ಲಿ ಸೇರಬೇಕಾದರೆ ಏನಾದರೊಂದು ವಿಶಿಷ್ಟ ಕಾರಣವಿರಬೇಕೆಂಬದು ಧ್ವನಿತವಾಗುತ್ತದೆ. ಆ ವಸ್ತುವು ಭಯ, ಆನಂದ, ದುಃಖ ಮುಂತಾದವುಗಳಲ್ಲಿ ಯಾವದೊಂದು ವಿಕಾರವನ್ನುಂಟುಮಾಡುವಂಥಾದ್ದಿರಬೇಕು; ಇಲ್ಲವೆ, ಆ ವಸ್ತುವಿನ ಅವಶ್ಯಕತೆಯಾದರೂ ನಮಗಿರಬೇಕು. ಈ ಕಾರಣಗಳಿಲ್ಲದೆ ನಮ್ಮ ಲಕ್ಷವು ಅದರಲ್ಲಿ ಸೇರುವದು ಅಸಂಭವವು.

ಪ್ರತಿಬಿಂದು ವಸ್ತುವಿನಲ್ಲಿ ಚಿತ್ತವನ್ನು ಎಳಕೊಳ್ಳುವ ಶಕ್ತಿಯು ಜಾಗೃತವಾಗಿರುವದೆಂದು ಹೇಳಲಾಗದು. ನಮಗೆ ಕುತೂಹಲವಿಲ್ಲದ ವಿಷಯದಲ್ಲಿ ಲಕ್ಷವು ಸೇರುವದಿಲ್ಲ. ಇದೇ ಮೇರೆಗೆ ಒಂದು ವಿಷಯದಲ್ಲಿ

ನಮ್ಮ ಜಿಜ್ಞಾಸೆಯು ಪ್ರಬಲವಾಗಿದ್ದರೆ, ಅನ್ಯವಸ್ತುಗಳನ್ನು ನಾವು ತೀರ ದುರ್ಲಕ್ಷಿಸುವೆವು. ಇದರಿಂದ ಯಾವದೊಂದು ವಸ್ತುವಿನ ಜ್ಞಾನವಾಗ ಬೇಕಾದರೆ, ಆ ವಸ್ತುವಿನ ಭಾವನೆಯು ನಮ್ಮ ಮನೋವ್ಯಾಪಾರಗಳಲ್ಲಿ ಪ್ರಾಧಾನ್ಯವನ್ನು ಪಡೆಯಲಿಕ್ಕೆ ಬೇಕೆಂಬದು ಸ್ಪಷ್ಟವಾಗುತ್ತದೆ. ಈ ಪ್ರಾಧಾನ್ಯವು ಮನಸ್ಸಿನ ಪರಿಸ್ಥಿತಿಯನ್ನೆವಲಂಬಿಸಿರುವದು. ನೋಡಿರಿ, ನಾವು ಒಂದು ಗಹನ ವಿಚಾರದಲ್ಲಿ ಮಗ್ನರಾಗಿರುವಾಗ ನಮ್ಮೆದುರಿಗೆ ಹಾದು ಹೋದವರ ಅರವು ಕೂಡಾ ನಮಗಿರುವದಿಲ್ಲ.

ಈ ವಿವೇಚನದಿಂದ ಅವಧಾನವೆಂದರೆ ಮಾನಸಿಕ ಶಕ್ತಿಯ ಏಕಾಗ್ರತೆ, ಅಥವಾ ಏಕಧ್ಯೇಯತೆ ಎಂದು ಗೊತ್ತಾಗುವದು. ಈ ಏಕಧ್ಯೇಯತೆಯ ಸ್ವರೂಪವರ್ಣನೆಯು ಮೇಲೆ ಬಂದಿರುವದು. ನಾವಿರಾರು ಒಡವೆಗಳ ಭಾವನೆಯು ಮನದಲ್ಲಿ ಹುಟ್ಟುತ್ತಿದ್ದರೂ, ಕೆಲವೊಂದು ವಿವಕ್ಷಿತ ವಸ್ತುವಿನ ಭಾವನೆಯೇ ಪ್ರಬಲವಾಗಿ ಮನವು ಅದನ್ನೇ ಸ್ವೀಕರಿಸುತ್ತದೆ; ಮತ್ತು ಅದಕ್ಕೆ ಪ್ರಧಾನತೆಯನ್ನು ಕೊಡುತ್ತದೆ. ಹೀಗಾಗಲು, ಆಗ ಮನಸ್ಸಿಗೆ ಏಕಧ್ಯೇಯತೆಯು ಪ್ರಾಪ್ತವಾಗುವದು. ಈ ಏಕಧ್ಯೇಯತೆಯು ಒಮ್ಮೊಮ್ಮೆ ತಾನೇ ಉತ್ಪನ್ನವಾಗುತ್ತದೆ, ಒಮ್ಮೊಮ್ಮೆ ಮನಸ್ಸು ತನ್ನ ವ್ಯಾಪಾರಗಳಿಂದ ಅದನ್ನು ಒತ್ತಾಯದಿಂದ ಉಂಟುಮಾಡುತ್ತದೆ. ಹ್ಯಾಗಂದರೆ, ಕೆಲವೊಂದು ವಸ್ತುವು ಸ್ವತಃ ಚಿತ್ತಾಕರ್ಷಕವಿದ್ದರೆ ಸಹಜವಾಗಿ ನಮ್ಮ ಲಕ್ಷವು ಅತ್ತಕಡೆ ಎಳೆಯುತ್ತದೆ. ಇದೇ ತನಗೆ ತಾನೇ ಉಂಟಾಗುವ ಏಕಧ್ಯೇಯತೆಯು. ಆದರೆ ವಸ್ತುವು ಸ್ವತಃ ಚಿತ್ತಾಕರ್ಷಕವಿರದೆ ನಾವೇ ಅದರ ಜ್ಞಾನವನ್ನು ಮಾಡಿಕೊಳ್ಳಬೇಕೆಂಬ ಕುತೂಹಲದಿಂದ ನಮ್ಮ ಮಾನಸಿಕ ವ್ಯಾಪಾರಗಳನ್ನೆಲ್ಲ ಒಟ್ಟುಗೂಡಿಸಿ ಅದರಲ್ಲಿ ನಮ್ಮ ಚಿತ್ತವನ್ನು ಸೇರಿಸುತ್ತೇವೆ. ಇದು ನಮ್ಮ ಮಾನಸಿಕ ಶಕ್ತಿಗಳ ಬಲದಿಂದ ಉಂಟುಮಾಡಿದ ಏಕಧ್ಯೇಯತೆಯೆನಿಸುವದು. ಮಾನಸಿಕ ಶಕ್ತಿಗಳು ಬಲವಾಗಿದ್ದರೆ ಮಾತ್ರ ಈ ಬಗೆಯ ಏಕಧ್ಯೇಯತೆಯುಂಟಾಗುತ್ತದೆಂಬದು ನಿರ್ವಿವಾದವಾದದ್ದು.

ಏಕಧ್ಯೇಯತೆಯನ್ನುಂಟುಮಾಡುವ ಮೇಲಿನೆರಡು ಪ್ರಕಾರಗಳಲ್ಲಿ ಹುಡುಗರಲ್ಲಿ ಮೊದಲನೆಯ ಪ್ರಕಾರದ ಏಕಧ್ಯೇಯತೆಯೇ ಸ್ವಾಭಾವಿಕವಾಗಿರುವದು. ಚಿಕ್ಕಂದಿನಲ್ಲಿ ಹುಡುಗರ ಮನಸ್ಸನ್ನು ವ್ಯಗ್ರಗೊಳಿಸುವಂಥ ತೊಂದರೆಗಳೇನೂ ಅವರಿಗಿರುವದಿಲ್ಲಾದ್ದರಿಂದಲೂ ಸುತ್ತುಮುತ್ತಿನ ಎಲ್ಲ

ಸಂಗತಿಗಳು ಅವರಿಗೆ ಹೊಸವಿರುವದರಿಂದಲೂ, ಅವೆಲ್ಲ ಸಂಗತಿಗಳೂ ವಸ್ತುಗಳೂ ಅವರಿಗೆ ಸುಖಕರವಾಗಿಯೇ ತೋರುತ್ತವೆ. ಆದ್ದರಿಂದ ಅವರ ಮಾನಸಿಕಶಕ್ತಿಗೆ ಏಕಧ್ಯೇಯತೆಯು ಸಹಜವಾಗಿ ಪ್ರಾಪ್ತವಾಗುತ್ತದೆ. ಚಿಕ್ಕ ಮಕ್ಕಳ ಈ ಬಗೆಯ ಬಲವನ್ನು ಅನುಕೂಲ ಮಾಡಿಕೊಂಡು ಶಿಕ್ಷಕನು, ಅವರಿಗೆ ಚಿತ್ತಾಕರ್ಷಕವಾಗುವ ಸಂಗತಿಗಳ ಜ್ಞಾನವನ್ನೇ ಮೊದಲು ಮಾಡಿ ಕೊಡಬೇಕು. ಆದರೆ ಅವರ ಮನಸ್ಸು ಬಹಳ ಹೊತ್ತಿನ ವರೆಗೆ ಸ್ಥಿರವಾಗಿ ನಿಲ್ಲದೆಂಬದನ್ನು ಮರೆಯಲಾಗದು. ಅವರು ದೊಡ್ಡವರಾದಂತೆ ಅವರಿಗೆ ತೊಂದರೆಗಳ ಸಂಸರ್ಗವು ಹೆಚ್ಚಾಗಿ, ಅವರ ಮನಸ್ಸು ವ್ಯಗ್ರಗೊಂಡು, ಜ್ಞಾನಪ್ರಾಪ್ತಿಯ ಇಚ್ಛೆಯು ದಿನದಿನಕ್ಕೆ ಸ್ವಾಭಾವಿಕವಾಗಿ ಕುಂದುತ್ತ ಹೋಗುವದು. ಇಂಥ ಸ್ಥಿತಿಯಲ್ಲಿ ಅವರ ಮನಸ್ಸು ವಿಶಿಷ್ಟಸಂಗತಿಯಲ್ಲಿ ಪ್ರವರ್ತಿಸುವದಕ್ಕಾಗಿ ಮಾನಸಿಕ ಶಕ್ತಿಗಳ ಬಲದಿಂದ ಏಕಧ್ಯೇಯತೆಯನ್ನುಂಟು ಮಾಡಬೇಕಾಗುತ್ತದೆ. ಶಿಕ್ಷಕನು ಈ ಬಗೆಯಿಂದ ಏಕಧ್ಯೇಯತೆಯನ್ನು ಹ್ಯಾಗೆ ಹುಟ್ಟಿಸಬೇಕೆಂಬದನ್ನು ಅವರಿಗೆ ಕಲಿಸಬೇಕು. ಇಲ್ಲದಿದ್ದರೆ ಅವರಿಗೆ ವಿದ್ಯಾಪರ್ವತವನ್ನು ಏರುವದು ದುಸ್ತರವಾಗುವದು.

ಅವಧಾನಶಕ್ತಿಯಲ್ಲಿ ಐಚ್ಛಿಕ ಅಥವಾ ಸ್ವತಂತ್ರವೆಂದೂ, ಅನೈಚ್ಛಿಕ ಅಥವಾ ಪರತಂತ್ರವೆಂದೂ ಎರಡು ಭೇದಗಳುಂಟು. ಹುಡುಗರಲ್ಲಿ ಮೊದಲಿಗೆ ಅವಧಾನಶಕ್ತಿಯು ಪರತಂತ್ರರೂಪದಿಂದಿರುತ್ತದೆ. ಇದು ಹೀಗೇ ಕಡೆತನಕ ಇದ್ದರೆ ಜ್ಞಾನಾಭಿವೃದ್ಧಿಯು ಕಟ್ಟಾಗುವದು. ಆದರೆ ಬಹುದಿವಸದ ಪರಿಶ್ರಮದಿಂದ ಇದಕ್ಕೆ ಸ್ವತಂತ್ರಾವಸ್ಥೆಯನ್ನುಂಟು ಮಾಡಲಿಕ್ಕೆ ಬರುವದು. ಇದು ಪಾರತಂತ್ರ್ಯ ಸ್ಥಿತಿಯಲ್ಲಿ ಇದ್ದಾಗ ಕೂಡ ಇದನ್ನು ಜ್ಞಾನಸಂಪಾದನೆಗೆ ಹಚ್ಚಬೇಕು. ಅಂದರೆ ಕ್ರಮೇಣ ಸ್ವಾತಂತ್ರ್ಯವನ್ನು ಪಡೆಯುವದು. ಇನ್ನು ಯಾವ ಬಗೆಯಿಂದ ಈ ಸ್ವಾತಂತ್ರ್ಯವನ್ನು ಹುಟ್ಟಿಸಬೇಕೆಂಬದನ್ನು ವಿಚಾರಿಸುವಾ:—

(೧). ಶಿಕ್ಷಕನು ಆರಂಭಕ್ಕೆ ಚಿಕ್ಕಮಕ್ಕಳ ಚಿತ್ತವನ್ನು ಎಳಕೊಳ್ಳುವಂಥ ವಸ್ತುಗಳನ್ನೇ ಶಿಕ್ಷಣದಲ್ಲಿ ಉಪಯೋಗಿಸಬೇಕು. ಇವುಗಳನ್ನು ಬಿಟ್ಟು ಬೇರೆ ವಸ್ತುಗಳನ್ನು ಹುಡುಗರ ಮುಂದಿಟ್ಟು ಅವರ ಜ್ಞಾನವನ್ನು ಬೆಳಿಸಲಿಕ್ಕೆ ಯತ್ನಿಸುವದು ಕೇವಲ ನಿರರ್ಥಕವಾದದ್ದು. ಇದೇ ಮೇರೆಗೆ ಒಂದೇ ವಸ್ತುವನ್ನೇ ಬಹಳ ಹೊತ್ತಿನ ವರೆಗೆ ಅವರ ಮುಂದಿಡುವದೂ ಸರಿಯಲ್ಲ. ಯಾಕಂದರೆ, ಅವರ ಸ್ವಭಾವವೇ ಚಂಚಲವಾಗಿರುವದರಿಂದ

ಅವರು ಒಂದೇ ವಿಷಯಕ್ಕೆ ಬಹಳ ಹೊತ್ತಿನವರೆಗೆ ಲಕ್ಷವನ್ನು ಕೊಡಲಾರರು. ಇದೊಂದು ಅವಧಾನಶಕ್ತಿಯ ಪರತಂತ್ರತೆಯ ಕಾರಣವು. ಉದಾಹರಣೆ:—ಕೂಸುಗಳು ಅಳುತ್ತಿರುತ್ತವೆ. ಆಗ್ಗೆ ಏನಾದರೊಂದು ಪಾತ್ರೆಯನ್ನು ಬಾರಿಸಿದರೆ ಅವು ಸುಮ್ಮನಾಗುತ್ತವೆ. ಆದರೆ ನಾವು ಹಾಗೇ ಬಹಳ ಹೊತ್ತಿನವರೆಗೆ ಬಾರಿಸತೊಡಗಿದರೆ ಅವು ಮತ್ತಿಷ್ಟು ಅಳಹತ್ತುವವು.

(೨). ಹುಡುಗರ ಮುಂದೆ ಏಕಕಾಲಕ್ಕೆ ಅನೇಕ ವಸ್ತುಗಳನ್ನು ಇಡಬಾರದು. ಇಷ್ಟೇ ಅಲ್ಲ. ಒಂದರ ಹೊರ್ತು ಬೇರೆ ಚಿತ್ತಾಕರ್ಷಕ ವಸ್ತುಗಳನ್ನು ಅವರ ಕಣ್ಣಿಗೆ ಸಹ ಬೀಳಗೊಡಬಾರದು. ಯಾಕಂದರೆ, ಅನೇಕ ವಸ್ತುಗಳು ಮುಂದೆ ಇರಲು ಒಂದೇ ವಿವಕ್ಷಿತ ವಸ್ತುವಿನ ಕಡೆಗೆ ಲಕ್ಷವನ್ನು ಕೊಡುವದಕ್ಕೆ ಬೇಕಾಗುವಷ್ಟು ಅವಧಾನಶಕ್ತಿಯ ಸ್ವತಂತ್ರತೆಯು ಅವರಲ್ಲಿರುವದಿಲ್ಲ.

(೩). ಇದರಂತೆಯೇ ಕೇವಲ ಅಪರಿಚಿತ ವಸ್ತುಗಳನ್ನೂ ಬಿಗಿಯಾದ ರಚನೆಯುಳ್ಳ ವಸ್ತುಗಳನ್ನೂ ಹುಡುಗರ ಮುಂದೆ ಇಡಲಾಗದು. ಯಾಕಂದರೆ, ಹುಡುಗರ ಜ್ಞಾನಗ್ರಹಣಶಕ್ತಿಯು ಕಡಿಮೆ ಇರುವದರಿಂದ, ಅವರ ದೃಷ್ಟಿಯು ಆ ವಸ್ತುಗಳಲ್ಲಿದ್ದಂತೆ ಕಂಡರೂ, ಅವರ ಅವಧಾನವು ನಷ್ಟವಾಗಿ ಅವರು ಭ್ರಾಂತರಾಗುವರು. ಇಂಥ ಸ್ಥಿತಿಯಲ್ಲಿ ಅವರು ಜ್ಞಾನವನ್ನು ಸಂಪಾದಿಸಲಾರರು. ಆದ್ದರಿಂದ ಅವರಿಗೆ ಗೊತ್ತಿದ್ದ ಸಂಗತಿಯಿಂದ ಹೊಸ ವಸ್ತುವಿನ ಜ್ಞಾನವನ್ನು ಮಾಡಿಕೊಡಬೇಕು. ಹುಡುಗರು ದೊಡ್ಡವಾದಂತೆ, ಅವಧಾನಶಕ್ತಿಯು ಸ್ವತಂತ್ರವಾಗಬೇಕೆಂಬದು ನಿಜವು. ಆದರೆ ಇದು ಹೇಳಲಿಕ್ಕೆ ಮಾತ್ರ. ಅವಧಾನಶಕ್ತಿಯು ವಸ್ತುವಿನ ಭಾವನೆಯಿಂದ ಬಲಪಡುವದಕ್ಕಿಂತ ಮಾನಸಿಕ ವ್ಯಾಪಾರಗಳ ಪ್ರಾಬಲ್ಯದಿಂದ ಬಲಗೊಳ್ಳುವದು ಒಳ್ಳೇದು; ಅಂದರೆ ಅದು ನಿಜವಾಗಿ ಸ್ವಾತಂತ್ರ್ಯವನ್ನು ಪಡೆದಂತಾಗುವದು. ಇದೇ ಅವಧಾನಶಕ್ತಿಯ ನಿಜವಾದ ಸ್ವತಂತ್ರತೆಯು. ಇಂಥ ಸ್ವತಂತ್ರತೆಯನ್ನು ಸಂಪಾದಿಸಲಿಕ್ಕೆ ಏನು ಮಾಡಬೇಕು? ಇದರಲ್ಲಿ ಬಿದಗಬಹುದಾದ ವಿಘ್ನಗಳ್ಯಾವವು? ಇದಕ್ಕೆ ಪರಿಸ್ಥಿತಿಯು ಎಂಥದಿರಬೇಕು? ಇದನ್ನುಂಟು ಮಾಡಿಕೊಡುವವನು ಯಾವ ಸಂಗತಿಗಳನ್ನು ವಿಚಾರಮಾಡಬೇಕು? ಅದನ್ನು ಯಾವ ಮಾರ್ಗದಿಂದ ಉಂಟುಮಾಡಿಕೊಡಬೇಕು? ಮುಂತಾದವುಗಳ ಬಗ್ಗೆ ಇನ್ನು ಆಲೋಚಿಸುವಾಃ—

ಅವಧಾನಶಕ್ತಿಗೆ ಸ್ವತಂತ್ರತೆಯನ್ನು ಒದಗಿಸಿಕೊಡುವಾಗ ಉಂಟಾಗುವ ತೊಂದರೆಗಳುಃ—

೧. **ಮನಸ್ಸಿನ ದುರ್ಬಲತೆಯು:**—ಹುಡುಗರು ತಮ್ಮ ಮನದಲ್ಲುಂಟಾಗುವ ಮಿಕ್ಕ ವಿಚಾರಗಳನ್ನು ಹತ್ತೊತ್ತಿಡಲಾರರು. ಈ ಮನಸ್ಸಿನ ದುರ್ಬಲತೆಯು ಅವಧಾನಶಕ್ತಿಯ ಸ್ವಾತಂತ್ರ್ಯಕ್ಕೆ ಅಡ್ಡಿಮಾಡುವದಲ್ಲದೆ, ಬೇರೆ ಅನೇಕ ಅನರ್ಥಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಶಿಕ್ಷಕರೂ ಪಾಲಕರೂ ಹುಡುಗರ ಮನಸ್ಸು ಆದಷ್ಟು ಬಲಿಷ್ಠವಾಗುವಂತೆ ಯತ್ನಿಸಬೇಕು. ಶಿಕ್ಷಣಕಾರ್ಯದಲ್ಲಂತೂ, ಮನಸ್ಸಿನ ಬಲವು ಅತ್ಯಗತ್ಯವಾಗಿರುತ್ತದೆ. ಇದರ ಬಲದಿಂದ ಹುಡುಗನ ಅವಧಾನಶಕ್ತಿಯು ಬಲಪಟ್ಟು, ಅವನು ಶಿಕ್ಷಕನು ಹೇಳಿದ್ದನ್ನು ಗ್ರಹಿಸಲಿಕ್ಕೆ ಸಮರ್ಥನಾಗುತ್ತಾನೆ.

೨. **ಹುಡುಗರ ಹಟವಾರಿತನವುಃ**— ಒಮ್ಮೊಮ್ಮೆ ಹುಡುಗರು ಬೇಕೆಂದು ಪಾಠಕ್ಕೆ ದುರ್ಲಕ್ಷ್ಯಮಾಡುತ್ತಾರೆ. ಹೀಗಾಗಲಿಕ್ಕೆ ತಾವು ಬುದ್ಧಿವಂತರೆಂಬ ಹುಡುಗರ ದುರಹಂಕಾರವು, ಅಥವಾ ಶಿಕ್ಷಕನ ಶಿಕ್ಷಣದ ನಿಷ್ಪ್ರಯೋಜಕತ್ವವು ಮುಖ್ಯ ಕಾರಣವಾಗಿರುವದು. ಇವಲ್ಲದೆ ಮನೆಯೊಳಗಿನ ಯಾವ ದೊಂದು ಕಾರಣದಿಂದ ಉಂಟಾದ ಮನಸಿನ ವ್ಯಗ್ರತೆಯೂ ಒಂದು ಕಾರಣವಾಗಿರುವದು.

೩. ಒಮ್ಮೊಮ್ಮೆ ಹುಡುಗರು ಪಾಠಕ್ಕೆ ಲಕ್ಷ್ಯಕೊಟ್ಟಂತೆ ತೋರಿಸುತ್ತಾರೆ. ಆದರೆ ಮನಸ್ಸಿನಲ್ಲಿಯೇ ಬೇರೆ ಒಂದು ವಿಚಾರವನ್ನು ನಡಿಸಿರುತ್ತಾರೆ. ಈ ಪ್ರವೃತ್ತಿಯು ದೊಡ್ಡ ಹುಡುಗರಲ್ಲಿ ಬಹಳ. ಆದರೆ ಸಣ್ಣ ಹುಡುಗರಲ್ಲಿರುವದಿಲ್ಲಂತಲ್ಲ. ಹೀಗಾಗಲಿಕ್ಕೆ ಶಿಕ್ಷೆಯ ಅಂಜಿಕೆಯೇ ಕಾರಣವಾಗಿರುವದು.

೪. ಶಿಕ್ಷಕರ ತಪ್ಪಿನಿಂದ ಹುಡುಗರ ಲಕ್ಷ್ಯವು ಪಾಠದ ಕಡೆಗೆ ಹತ್ತುವದಿಲ್ಲ. ಆ ತಪ್ಪುಗಳು ಯಾವವೆಂದರೆಃ—

(ಅ) "ಹುಡುಗರು ಪ್ರತಿಬಿಂದು ವಿಷಯಕ್ಕೆ ಸ್ವಾಭಾವಿಕವಾಗಿ ಲಕ್ಷಕೊಡಲಿಕ್ಕೇ ಬೇಕು; ನಾವೇನೂ ಪ್ರಯತ್ನಮಾಡುವ ಕಾರಣವಿಲ್ಲ. ಲಕ್ಷಕೊಡದಿರುವದು ಹುಡುಗರ ದೋಷವು." ಎಂದು ಕೆಲ ಶಿಕ್ಷಕರು ತಿಳುಕೊಳ್ಳುತ್ತಾರೆ, ಹಾಗೂ ಲಕ್ಷಕೊಡದವರನ್ನು ಶಿಕ್ಷಿಸುತ್ತಾರೆ; ಇದು ತಪ್ಪು. ಹುಡುಗರ ಮನಸ್ಸು ಯಾವಾಗಲೂ ಚಂಚಲವಿರುವದು. ಮನಸ್ಸಿನ ಚಾಂಚಲ್ಯ

ಲ್ಯವು ಶರೀರವನ್ನು ಸುಮ್ಮನಿರಗೊಡಿಸದು. ಆದ್ದರಿಂದ ಅವರ ಮನಸ್ಸೂ, ಶರೀರವೂ ಸ್ಥಿರವಿರುವಂತೆ ಯತ್ನಿಸುವದು ಶಿಕ್ಷಕನ ಕೆಲಸವು.

(ಬ) ಶಿಕ್ಷಕನ ನಡೆನುಡಿಗಳು ವ್ಯವಸ್ಥಿತವಾದವುಗಳಿರಬೇಕು. ಸಣ್ಣಪುಟ್ಟ ಸಂಗತಿಗಳಲ್ಲಿ ಸಹ ಶಿಕ್ಷಕನು ವ್ಯವಸ್ಥೆಯನ್ನೂ ಔರಣವನ್ನೂ ಕಾಯ್ದುಕೊಳ್ಳಬೇಕು. ಎಷ್ಟೋ ಜನ ಶಿಕ್ಷಕರಿಗೆ ಈ ಮಾತು ಲಕ್ಷದಲ್ಲಿ ಬರುವದಿಲ್ಲ. ಇದರಿಂದ ಬಹಳ ಹಾನಿಯುಂಟಾಗುತ್ತದೆ. ಇಂಥ ಸ್ಥಿತಿಯಲ್ಲಿ ಹುಡುಗರು ಪಾಠಕ್ಕಿಂತ ಶಿಕ್ಷಕರ ವಿಲಕ್ಷಣವಾದ ನಡೆನುಡಿಗಳನ್ನು ಲಕ್ಷ ವಿಟ್ಟು ನೋಡುತ್ತಿರುತ್ತಾರೆ. ಇದಲ್ಲದೆ ಹುಡುಗರಲ್ಲಿ ಅನುಕರಣಶಕ್ತಿಯು ಪ್ರಬಲವಾಗಿರುವದರಿಂದ ಅಸಭ್ಯವಾದ ಅಥವಾ ವಿಲಕ್ಷಣವಾದ ನಡೆನುಡಿ ಗಳನ್ನು ಅವರಿಗೆ ಕಾಣಗೊಡುವದು ಸರಿಯಲ್ಲ.

(ಕ) "ಮೂಲೇಕುಠಾರಃ" ಈ ನ್ಯಾಯದ ಮಹತ್ವವು ವರ್ಗದ ವ್ಯವಸ್ಥೆಯನ್ನು ಕಾಯ್ದುಕೊಳ್ಳುವ ಕಾರ್ಯದಲ್ಲಿ ಎಷ್ಟಿರುವದೆಂಬದು ಎಷ್ಟೋ ಶಿಕ್ಷಕರಿಗೆ ಲಕ್ಷದಲ್ಲಿ ಬರುವದಿಲ್ಲ. ವಿಷವೃಕ್ಷದ ಬೀಜದ ಮೊಳೆ ಕೆಯನ್ನೇ ಕಿತ್ತಿ ಬಿಗೆಯುವದು ಮಹತ್ವದ್ದು. ಆದ್ದರಿಂದ ಶಿಕ್ಷಕರು, ಕೆಟ್ಟ ಕೆಲಸಕ್ಕೆ ಹರಿಯುತ್ತಿದ್ದ ವಿದ್ಯಾರ್ಥಿಗಳ ಪ್ರವೃತ್ತಿಗಳನ್ನು ಉಪದೇಶದಿಂದ ಇಲ್ಲವೆ, ಉದಾಹರಣೆಗಳ ದ್ವಾರದಿಂದ ಸತ್ಕಾರ್ಯಕ್ಕೆ ತಿರುಗಿಸಬೇಕು. ಹೀಗೆ ಮಾಡದೆ ಬರೆ ಇಂಥ ತಪ್ಪಿಗೆ ಇಂಥ ಶಿಕ್ಷೆಯೆಂದು ನಿಯಮಮಾಡಿ ಅದರಂತೆ ವರ್ತಿಸುವದರಿಂದ ಇಷ್ಟಪರಿಣಾಮವಾಗದು.

(ಡ) ಕಲಿಸುವಾಗ ಎಷ್ಟೋ ಶಿಕ್ಷಕರು ತಮ್ಮ ಪುಸ್ತಕದ ಕಡೆಗೇ ನೋಡುತ್ತಿರುತ್ತಾರೆ; ಇಲ್ಲವೆ, ಒಬ್ಬ ಹುಡುಗನನ್ನು ಎಬ್ಬಿಸಿ ಅವನೊಡನೆ ಮಾತಾಡುತ್ತ ನಿಲ್ಲುತ್ತಾರೆ. ಕೆಲವರು ನೆಲ ನೋಡುತ್ತ ನಿಂತುಕೊಂಡು ಕಲಿಸುತ್ತಿರುತ್ತಾರೆ. ಇಂಥ ದುಷ್ಟ ಚಟಗಳಿಂದ ಹುಡುಗರು ಪಾಠಕ್ಕೆ ದುರ್ಲಕ್ಷ ಮಾಡುತ್ತಾರೆ. ಪಾಠದ ಸಿದ್ಧತೆ ನೆಟ್ಟಗಿಲ್ಲದಿದ್ದರೆ, ಶಿಕ್ಷಕನು ಕೈಯೊಳಗಿನ ಪುಸ್ತಕವನ್ನು ನೋಡಬೇಕಾಗುತ್ತದೆ. ಮಾಸ್ತರನ ಲಕ್ಷವು ತಮ್ಮಕಡೆಗಿಲ್ಲವೆಂದು ತಿಳಿದ ಕೂಡಲೆ, ಹುಡುಗರು ತಮ್ಮ ಕಾಯಿಕವನ್ನು ನಡೆಸುತ್ತಾರೆ.

(ಇ) ಎಲ್ಲ ಹುಡುಗರು ತಮ್ಮ ದೃಷ್ಟಿಮರ್ಯಾದೆಯಲ್ಲಿ ಬರು ವಂತೆ ವರ್ಗದ ರಚನೆಯನ್ನು ವಿಚಾರಪೂರ್ವಕವಾಗಿ ಮಾಡಬೇಕು. ಕಪ್ಪ

ಹಲಿಗೆಯ ಮೇಲೆ ಬರೆದದ್ದು ಸರ್ವರಿಗೂ ಕಾಣುವಂತಿರಬೇಕು. ಇಲ್ಲದಿದ್ದರೆ ಹುಡುಗರು ಗೊಂದಲವೆಬ್ಬಿಸುವರು. ಆದ್ದರಿಂದ ಶಿಕ್ಷಕನು ತಾನು ನಿಲ್ಲುವ ಸ್ಥಳ, ಕರೇ ಹಲಿಗೆಯ ಸ್ಥಳ, ಹುಡುಗರು ನಿಲ್ಲುವ ಅಥವಾ ಕೂಡ್ರುವ ಬಗೆ ಮುಂತಾದವುಗಳನ್ನು ಮೊದಲೇ ವಿಚಾರದಿಂದ ಗೊತ್ತುಮಾಡಿರಬೇಕು. ಇದಲ್ಲದೆ, ಕೆಲವು ಹುಡುಗರ ದೃಷ್ಟಿಯು ಮಂದವಿರುವದು. ಕೆಲವರ ಕಿವಿಗಳು ಮಂದವಿರುವವು. ಇಂಥವರನ್ನೆಲ್ಲಿ ಕೂಡ್ರಿಸಬೇಕೆಂಬದನ್ನು ಮೊದಲೇ ಗೊತ್ತುಮಾಡಿರಬೇಕು.

(ಫ) ವೇಳಾಪತ್ರಕವನ್ನು ಬಹು ವಿಚಾರಪೂರ್ವಕವಾಗಿ ರಚಿಸಿರಬೇಕು. ಮಾನಸಿಕ ಶ್ರಮದ ವಿಷಯವಾದ ಬಳಿಕ ಶಾರೀರಶ್ರಮದ ವಿಷಯವಿರಬೇಕು. ಹೀಗಾಗದೆ ಒಂದೇಸವನೆ ಮಾನಸಿಕ ಶ್ರಮದ ವಿಷಯಗಳೇ ನಡೆದರೆ ಹುಡುಗರ ಮನಸ್ಸು ದಣಿಯುವದರಿಂದ ಅವರ ಅವಧಾನವು ಸ್ಥಿರವಾಗದು.

ಹುಡುಗರ ಅವಧಾನವು ಪಾಠದಕಡೆಗೆ ಹತ್ತಬೇಕಾದರೆ ಶಿಕ್ಷಕನು ಕೆಳಗಿನ ನಿಯಮಗಳನ್ನೂ ಸೂಚನೆಗಳನ್ನೂ ಆದಷ್ಟುಮಟ್ಟಿಗೆ ಅನುಸರಿಸಬೇಕು.

(೧) ತಾನು ಕಲಿಸುವ ಪಾಠದಿಂದ ಹುಡುಗನ ಬುದ್ಧಿಶಕ್ತಿಯು ಜಾಗ್ರತವಾಗಲಿಕ್ಕೆ ಬೇಕು. ಇಲ್ಲದಿದ್ದರೆ ಪಾಠಕ್ಕೆ ಹುಡುಗರ ಲಕ್ಷ ಹತ್ತುವದಿಲ್ಲ.

(೨) ಹುಡುಗರ ಶೋಧಕತೆಯ ಉಪಯೋಗವನ್ನು ಮಾಡಿಕೊಳ್ಳಬೇಕು. ಪಾಠದ ಪ್ರಯೋಜನವು ಹುಡುಗರಿಗೆ ಗೊತ್ತಾಗಬೇಕು. ವಿಷಯ ಮಂಡನದಲ್ಲಿ ವೈಚಿತ್ರ್ಯವಿರಬೇಕು.

(೩) ಹುಡುಗರನ್ನು ಯಾವಾಗಲೂ ಕೆಲಸದಲ್ಲಿ ತೊಡಗಿಸಿರಬೇಕು. ಇಲ್ಲದಿದ್ದರೆ, ವರ್ಗದಲ್ಲಿ ಗೊಂದಲವೆದ್ದು ಪಾಠಕ್ಕೆ ದುರ್ಲಕ್ಷವಾಗುವದು. ಇದರಷ್ಟು ಗೌರವದ ನೇಮವು ಮತ್ತೊಂದಿಲ್ಲ.

(೪) ತಾವು ಕಲಿಸಿದ ಪಾಠಗಳಿಂದ ಪ್ರೌಢಾವಸ್ಥೆಯಲ್ಲಿ ಹ್ಯಾಗೆ ಉಪಯೋಗವಾಗುವದೆಂಬದನ್ನು ಹುಡುಗರಿಗೆ ಆಗಾಗ್ಗೆ ತಿಳಿಸಿ ಹೇಳುತ್ತಿರಬೇಕು. ಅಂದರೆ, ಅವರು ಪಾಠಕ್ಕೆ ಲಕ್ಷ ಕೊಡುವರು.

(೫) ಹುಡುಗರಿಗೆ ಯಾವಾಗಲೂ ಉತ್ತೇಜನ ಕೊಡುತ್ತಿರಬೇಕು. ಅವರ ಬುದ್ಧಿಮಾಂದ್ಯವನ್ನು ಕಂಡು "ಮಡ್ಡ, ನಿನಗೇನು ತಿಳಿಯುವದು?"

ಎಂದು ಉತ್ಸಾಹಭಂಗವಾಡಬಾರದು. ಯಾವದೊಂದು ವಿಷಯವು ಸುಸಾ
ಧ್ಯವೆಂದು ಹುಡುಗರಿಗೆ ತಿಳಿಸುವದು ಹ್ಯಾಗೆ ಸರಿಯಲ್ಲವೋ, ಅದರಂತೆಯೇ
ಅದು ದುಃಸಾಧ್ಯವೆಂತಲೂ ಹೇಳಬಾರದು.

(೬) ಬಹಳಹೊತ್ತು ಒಂದೇಸವನೆ ಒಂದೇ ವಿಷಯಕ್ಕೆ ಲಕ್ಷ
ಕೊಡಲಿಕ್ಕೆ ಹಚ್ಚಬಾರದು. ಅವಧಾನಕ್ಕೆ ಅಡ್ಡಬರುವ ಸಂಗತಿಗಳನ್ನೆಲ್ಲ
ನೂರವಾಡಿದ ಬಳಿಕ ಪಾಠವನ್ನಾರಂಭಿಸಬೇಕು.

(೭) ಮೇಲಿಂದ ಮೇಲೆ ಪ್ರಶ್ನವಾಡುತ್ತ ವಿದ್ಯಾರ್ಥಿಗಳನ್ನು
ಜಾಗ್ರತೆಗೊಳಿಸುತ್ತಿರಬೇಕು. ಪ್ರತಿಬಂದು ಪಾಠದ ನಂತರ (ವಿದ್ಯಾರ್ಥಿ
ಗಳು ಚಿಕ್ಕವರಿದ್ದರೆ) ಸ್ಥಳಾಂತರವನ್ನು ಮಾಡಿಸುತ್ತಿರಬೇಕು.

(೮) ಮೇಲೆಹೇಳಿದ ನೇಮಗಳನ್ನು ಕೇವಲ ದಿಗ್ದರ್ಶನಕ್ಕೋಸ್ಕರ
ಹೇಳಿರುತ್ತದೆ. ಶಿಕ್ಷಕರು ಪರಿಸ್ಥಿತಿಯಂತೆಯೂ ಅನುಭವದಂತೆಯೂ ಅವ
ಧಾನವು ಸ್ಥಿರವಾಗುವದಕ್ಕೆ ಬೇಕಾದ ಉಪಾಯಗಳನ್ನು ಯೋಜಿಸಿಕೊಳ್ಳ
ಬೇಕು. ಮೇಲೆ ಹೇಳಿದ ಎಲ್ಲ ನಿಯಮಗಳಿಗೆ "ಶಿಕ್ಷಕನು ತನ್ನ ತನು-ಮನ
ಗಳನ್ನು ಸಂಪೂರ್ಣವಾಗಿ ಶಿಕ್ಷಣದ ಕೆಲಸಕ್ಕೆ ಅರ್ಪಿಸಬೇಕೆಂ"ಬ ನಿಯ
ಮವು ಸೂತ್ರರೂಪವಾಗಿರುವದೆಂದು ಹೇಳಬಹುದು. ಕೇವಲ ಶಿಕ್ಷಣದ ಕೆ
ಸಕ್ಕೇ ತನ್ನನ್ನು ಅರ್ಪಿಸಿದಂಥ ಶಿಕ್ಷಕನು ಮೇಲಿನ ನಿಯಮಗಳನ್ನು ಸ್ವಾಭಾ
ವಿಕವಾಗಿಯೇ ಅನುಸರಿಸುವನು.

ಟಾಟಾ ಇವರ ಕಬ್ಬಿಣದ ಕಾರಖಾನೆಯು.

ಮುಂಬಯಿಯ ಉದಾರರೂ, ಲೋಕೋಪಕಾರಿಗಳೂ, ಉದ್ಯೋಗ
ಸಾಹಸಿಗಳೂ ಆದಂಥ ಪರಲೋಕವಾಸಿಗಳಾದ ಜೆಮ್‌ಸೇಟಜಿ ನಸರವಾ
ನಜಿ ಟಾಟಾ ಎಂಬ ಪಾರಸೀ ಸದ್ಗೃಹಸ್ಥರ ಹೆಸರನ್ನು ನಮ್ಮ ವಾಚಕರಲ್ಲಿ
ಬಹುಜನರು ಕೇಳಿರಬಹುದು. ಮುಂಬಯಿಯಲ್ಲಿ ಈಗ ಊರ್ಜಿತಾವ
ಯಲ್ಲಿದ್ದ ನೂಲುವ ನೇಯುವ ಗಿರಣಿಗಳನ್ನು ಸ್ಥಾಪಿಸುವವರಲ್ಲಿ ಇವರು
ಅಗ್ರೇಸರರಾಗಿದ್ದರು. ಇವರು ಈ ದೇಶದಲ್ಲಿಯೂ ಪರದೇಶಗಳಲ್ಲಿಯೂ ವಿದ್ಯಾ
ರ್ಥಿಗಳಿಗೆ ವಿದ್ಯಾಸಂಪಾದನೆಯ ಅನುಕೂಲತೆಗೋಸ್ಕರ ಅನೇಕ ವಿದ್ಯಾರ್ಥಿ
ವೇತನಗಳನ್ನು (ಸ್ಕಾಲರಶಿಪ್ಪುಗಳನ್ನು) ಇಟ್ಟಿರುವರು. ಬಳಗಡೆಯ
ಬೆಂಗಳೂರಲ್ಲಿ ಶಾಸ್ತ್ರೀಯ ಶೋಧಗಳ ವಿದ್ಯಾಪೀಠವನ್ನು ಸ್ಥಾಪಿಸುವದ

ಇವರು ೩ ಲಕ್ಷ ರೂಪಾಯಿಗಳನ್ನು ಸರಕಾರಕ್ಕೆ ಕೊಟ್ಟರು. ಈ ದೇಶದಲ್ಲಿ ಅನೇಕ ಕಡೆಯಲ್ಲಿ ಕಬ್ಬಿಣದ ಕಣಿಗಳೂ, ಉಕ್ಕಿಗೆ ಬೇಕಾದ ಮ್ಯಾಂಗ ನೀಜದ ಕಣಿಗಳೂ ಇದ್ದಾಗ್ಯೂ ಕಬ್ಬಿಣದ ಹಾಗೂ ಉಕ್ಕಿನ ದೊಡ್ಡ ಕಾರ ಖಾನೆಯು ಇಂದೂ ಇಲ್ಲದಿರುವದು ದೇಶಭಕ್ತರಾದ ಟಾಟಾ ಇವರಿಗೆ ಬಹ ಶೋಚನೀಯವಾದದ್ದೆಂದೆನಿಸಿ ಅವರು ಈ ವಿಷಯದಲ್ಲಿ ೧೯೦೩ನೆಯ ಇಸವಿ ಯಲ್ಲಿ ವಿಚಾರ ಮಾಡತೊಡಗಿದರು; ಹಾಗೂ ಅವರು ೧೯೦೪ನೇ ಇಸವಿ ಯಲ್ಲಿ ಪರಲೋಕವಾಸಿಗಳಾಗುವದಕ್ಕೆ ಮುಂಚಿತವಾಗಿ ಮಧ್ಯಪ್ರಾಂತದಲ್ಲಿ ಇಂಥದೊಂದು ದೊಡ್ಡ ಕಾರಖಾನೆಯನ್ನು ಸ್ಥಾಪಿಸುವ ಎತ್ತುಗಡೆಯನ್ನು ಮಾಡಿದರು. ಆ ಕಾರಖಾನೆಯು ಈಗ ಒಳ್ಳೇ ರೂಪಕ್ಕೆ ಬರಲಾರಂಭಿಸಿರ ವದು. ಅದರ ಸಂಕ್ಷಿಪ್ತ ಇತಿಹಾಸವನ್ನು ಶಾಲಾಪತ್ರಕದ ವಾಚಕರಿಗೊ ಸ್ಕರ ಇದರಡಿಯಲ್ಲಿ ಕೊಡುತ್ತೇವೆಃ—

ಮೇಲೆ ಹೇಳಿದಮೇರೆಗೆ ಮಧ್ಯಸ್ಥಾನದಲ್ಲಿ ಕಬ್ಬಿಣದ ಹಾಗು ಉಕ್ಕಿನ ದೊಡ್ಡ ಕಾರಖಾನೆಯನ್ನು ಸ್ಥಾಪಿಸಬೇಕೆಂಬ ವಿಚಾರವು ಟಾಟಾರವರ ಮನಸ್ಸಿನಲ್ಲಿ ೧೯೦೩ನೇ ಇಸವಿಯಲ್ಲಿ ಮೊಟ್ಟಮೊದಲು ಬಂದ ಕೂಡಲ ಅವರು ಈ ವಿಷಯದ ಅಭಿಪ್ರಾಯಗಳನ್ನು ದೊರಕಿಸುವದಕ್ಕಾಗಿ ಯು ರೋಪ, ಅಮೇರಿಕಾ ಮುಂತಾದ ಸ್ಥಳಗಳಲ್ಲಿ ಪ್ರವಾಸಮಾಡಿ ಅಲ್ಲಿ ತಜ್ಞ ರಾದ ಮಿ. ಜೂಲಿಯನ್ ಕೆನೆಡಿ ಎಂಬವರಿಗೆ ಭೆಟ್ಟಿಯಾದರು. ಅವರು ಮೊದಲು ಬಂಗಾಲ ಪ್ರಾಂತದಲ್ಲಿ ಜೇರಿಯಾದ ಸುತ್ತಲಿದ್ದ ಕಲ್ಲಿದ್ದಲಿಯ ಕಣಿಯ ನೆರೆಯ ಕೆಲವು ಪ್ರದೇಶಗಳನ್ನು ಪರೀಕ್ಷಿಸಬೇಕೆಂದು ಅಭಿಪ್ರಾಯ ಕೊಟ್ಟರು. ಮಿ. ಟಾಟಾರವರು ಈ ಕೆಲಸವನ್ನು ನ್ಯೂಯಾರ್ಕದೊಳಗಿನ ಪ್ರಸಿದ್ಧ ಎಂಜಿನಿಯರರಾದ ಮಿ. ಪೆರಿನ್ ಮತ್ತು ಮಿ. ವೆಲ್ಡ ಇವರ ಹಾಗು ಸರಫಾಮಸ ಹಾಲಮ್, ಮತ್ತು ಇಂಡಿಯಾ ಸರಕಾರದ ಕೆಲವು ಭೂಗರ್ಭ ಶಾಸ್ತ್ರಜ್ಞರು ಇವರ ಸಹಾದಿಂದ ಕೊನೆಗಾಣಿಸಿದರು. ಅವರು ಬಿಹಾರ, ಒಡಿಸಾ, ಮುಹೂರಬಂಜ ಈ ಸ್ಥಳಗಳ ಭೂಗರ್ಭದೊಳಗಿನ ಥರಗಳನ್ನು ಪರೀಕ್ಷಿಸಿದರು. ಇಲ್ಲಿ ಅವರಿಗೆ ಹೇಮಿಟಾಯಿಟ ಎಂಬ ಹೆಸರಿನ ಅಶುದ್ಧ ನಾತು ಹಾಗು ಕಬ್ಬಿಣ ಇವುಗಳಿಂದ ಕೂಡಿದ ಕಲ್ಲುಗಳ ನಾಲ್ಕು ಮೊರಡಿ ಗಳು ದೊರೆತವು. ಆ ದಿನ್ನೆಗಳಲ್ಲಿ ಕಬ್ಬಿಣವು ಲಕ್ಷಾವಧಿ ಟನ್ನ ಇದ್ದು ಅದನ್ನು ರೇಲ್ವೆಯ ಮಾರ್ಗವಾಗಿ ಒಯ್ಯಲಿಕ್ಕೂ ತಕ್ಕ ಅನುಕೂಲವಿತ್ತು.

ಅವರು ಅಲ್ಲಿಯ ಎರಡನೇ ಜನರ ಕಣಿಗಳನ್ನೂ ತಪಾಸಿಸಿದರು, ಹಾಗು ಅಲ್ಲಿಯ ಕಲ್ಲಿದ್ದಲಿಯನ್ನು ಪರೀಕ್ಷಿಸುವದಕ್ಕಾಗಿ ಅದರ ಕೆಲವು ಮಾದರಿಗಳನ್ನು ಯುರೋಪ, ಅಮೇರಿಕಾ ಮುಂತಾದ ದೇಶಗಳಿಗೆ ಕಳುಹಿಸಿ ಕೊಟ್ಟರು.

ಮಿ. ಟಾಟಾ ಇವರಿಗೆ ಸರಕಾರದವರೂ ಬೆಂಬಲವನ್ನಿತ್ತು ಕಚ್ಚಾ ಸರಕುಗಳು, ಯಂತ್ರ ಮುಂತಾದವುಗಳನ್ನು ಒಯ್ಯುವ ಹಾಗು ತಿರುಗಿ ಕಳುಹಿಸುವ ಸಂಬಂಧದಿಂದ ರೇಲ್ವೆ ಕಂಪನಿಯವರ ಮುಖಾಂತರವಾಗಿ ಬಹುಮಟ್ಟಿಗೆ ಸಹಾಯ ಮಾಡಿದರು, ಮತ್ತು ಸರಕಾರದವರು ೨,೦೦,೦೦೦ ಟನ್ನ ಕಬ್ಬಿಣದ ಹಳಿಗಳನ್ನು ಕೊಂಡು ಅವಶ್ಯವಿರುವ ಕೆಲವು ಭೂಮಿಗಳನ್ನಾದರೂ ಕೊಡಿಸಿ ತಕ್ಕ ಸಹಾಯವನ್ನು ಮಾಡಿದರು.

ಈ ಕಾರಖಾನೆಗೆ ಬೇಕಾಗುವ ಕಚ್ಚಾ ಸರಕುಗಳ ಸಂಚಯವು ಮುಖ್ಯವಾಗಿ ಸಂಯುಕ್ತ ಪ್ರಾಂತದಲ್ಲಿ ಇರುವದು; ಹಾಗೂ ಮದ್ರಾಸ, ಹೈದರಾಬಾದ, ಮೈಸೂರ, ನೇಪಾಳ ಮುಂತಾದ ಕಣಿಗಳಲ್ಲಿಯೂ ದೊಡ್ಡ ಪ್ರಮಾಣದಿಂದ ದೊರೆಯುವದು. ಒಡಿಸಾ ಬಿಹಾರ ಪ್ರಾಂತಗಳಲ್ಲಿ ಕಲ್ಲಿದ್ದಲಿಯ ಕಣಿಗಳು ದೊರೆತಿರುವವು. ಅವುಗಳೊಳಗಿನ ಕಲ್ಲಿದ್ದಲಿಯು ತುಸು ಕಡಿಮೆ ತರದ್ದಾದರೂ ದೊಡ್ಡ ಪ್ರಮಾಣದಿಂದ ಇರುವದು. ಹಾಗೂ ಜಿ. ಆಯ್ ಪಿ. ರೇಲ್ವೆಗೆ ಅದು ತೀರ ಸವಿೂಪವಾದ ಸ್ಥಳಗಳಲ್ಲಿ ದೊರೆಯುವದು. ಸಂಯುಕ್ತ ಪ್ರಾಂತದಲ್ಲಿ ದೊರೆಯದೆ ಇದ್ದ ಅಶುದ್ಧ ಧಾತುಗಳು ಪಾಯವ್ಯ ಪ್ರಾಂತದಲ್ಲಿ ದೊರೆಯಹತ್ತಿರುವವು; ಮತ್ತು ಮದ್ರಾಸ, ಮೈಸೂರುಗಳಲ್ಲಿ ಮ್ಯಾಂಗೇನೀಜ ಧಾತುವಿನ ಕಣಿಗಳೂ ದೊರೆತಿರುವವು. ಒಟ್ಟಿನ ಮೇಲೆ ಹಿಂದುಸ್ತಾನದಲ್ಲಿ ಕಬ್ಬಿಣದ ಕಾರಖಾನೆಗಳಿಗೆ ಬೇಕಾಗುವ ಕಚ್ಚಾ ಸರಕುಗಳು ಚೀನ, ಜ್ರಾಜಿಲ್ ದೇಶಗಳಲ್ಲಿ ದೊರೆಯುವಷ್ಟು ದೊಡ್ಡ ಪ್ರಮಾಣದಿಂದ ದೊರೆಯದೆ ಇದ್ದರೂ, ಇನ್ನೂ ಇಲ್ಲಿ ಎಷ್ಟೋ ಕಾರಖಾನೆಗಳು ಹೊರಟರೂ ಅವುಗಳಿಗೆ ಪೂರೈಸುವಷ್ಟು ದೊರೆಯಬಹುದೆಂದು ನಿಶ್ಚಯವಾಗಿ ಹೇಳಬಹುದು.

ಈ ಕಾರಖಾನೆಯ ಸಂಬಂಧದ ವಿಚಾರವು ಮೊಟ್ಟಮೊದಲು ಹೊರಟಾಗ ಆ ಸಂಬಂಧದ ಪ್ರಸಿದ್ಧಿಪತ್ರಿಕೆಗಳು ಲಂಡನ್, ಪಾರೀಸ ಪಟ್ಟಣಗಳ ಧನವಂತರಲ್ಲಿ ಹಂಚಿಕ್ಕಲ್ಪಟ್ಟವು; ಹಾಗು ಅಲ್ಪ ಸ್ವಲ್ಪ ಬಂಡವಲವಾದರೂ

ಕೂಡಿಸಲ್ಪಟ್ಟಿತು. ಆದರೆ ಆ ಕಾಲಕ್ಕೆ ಜನರಿಗೆ ಈ ವಿಷಯದಲ್ಲಿ ಅಷ್ಟು ಪ್ರೀತಿಯಿದ್ದಿಲ್ಲವಾದದ್ದರಿಂದ ಅದು ಅಲ್ಲಿಗೇ ನಿಂತುಹೋಯಿತು. ಆಮೇಲೆ ಮಿ. ಟಾಟಾರವರು ಈ ವಿಚಾರವನ್ನು ಹಿಂದೀ ಜನರ ಮುಂದಿರಿಸಿದರು. ಕೂಡಲೆ ಮೂರೇ ವಾರಗಳಲ್ಲಿ ೮೦೦೦ ಹಿಂದೀ ಜನರು ಕೂಡಿ ೧೬,೪೦,೦೦೦ ಪೌಂಡು ಬಂಡವಲವನ್ನು ಕೂಡಿಸಿದರು. ಈ ಬಂಡವಲದಲ್ಲಿ ಒಂದು ಪೈಯು ಸಹ ಬ್ರಿಟಿಶ್ ಜನರದಿರುವದಿಲ್ಲ. ಈ ಹಣದ ಸಹಾಯದಿಂದ ಕಾರಖಾನೆಯು ಆರಂಭವಾಯಿತು. ಆದರೆ ಮುಂದೆ ಹಣದ ಕೊರತೆಯುಂಟಾಯಿತು. ಆಗ ಸೀದೆ ಸರಕಾರದವರು ೪,೦೦,೦೦೦ ಪೌಂಡು ಬಂಡವಲ ಕೊಟ್ಟು ಈ ಕಂಪನಿಗೆ ಸಹಾಯಮಾಡಿದರು. ಈ ಕಂಪನಿಯ ಸರಕುಗಳಿಗೆ ಗಿರಾಕಿಗಳು ಬಹಳ ಇದ್ದು, ಅವು ತೀವ್ರವಾಗಿಯೂ ಯೋಗ್ಯ ಬೆಲೆಯಿಂದಲೂ ಮಾರಲ್ಪಡುವವು. ಕಾರಖಾನೆಯು ಆರಂಭವಾದಂದಿನಿಂದ ಇಂದಿನವರೆಗೆ ಕಾರಖಾನೆಯ ಕೆಲಸವು ಒಮ್ಮೆಯಾದರೂ ಮುಂದವಾಗಿಲ್ಲ. ಹಿಂದೀ ಜನರಾದರೂ ಈ ಕೆಲಸದಲ್ಲಿ ಈಗ ಚನ್ನಾಗಿ ಸುಧಾರಣೆಹೊಂದಿದ್ದು, ಸ್ವಲ್ಪ ಜನ ಯುರೋಪಿಯನ್ನರೂ, ಅಮೇರಿಕನ್ನರೂ ಹೊರತಾಗಿ ಉಳಿದ ಯಾವತ್ತು ಜನರು ಹಿಂದೀ ಜನರೇ ಇರುವರು. ಈ ಕಾರಖಾನೆಯಲ್ಲಿ ಸದ್ಯಕ್ಕೆ ಆರೇಳು ಸಾವಿರ ಜನರು ದುಡಿಯುತ್ತಿದ್ದು, ಅದರಲ್ಲಿ ೧೮೦ ಜನರು ಮಾತ್ರ ಯುರೋಪಿಯನ್ನರಿರುವರು. ಈ ಕಾರಖಾನೆಯ ಕಟ್ಟಣದ ಕೆಲಸವು ನಡೆದಾಗ ೧೧–೧೨ ಸಾವಿರ ಜನರು ದುಡಿಯುತ್ತಿದ್ದರು. ಕೆಲಸದಲ್ಲಿ ಬೇರೆ ಬೇರೆ ಶಾಖೆಗಳನ್ನು ಮಾಡಿ ಪ್ರತಿಯೊಂದು ಶಾಖೆಯಮೇಲೆ ಬೇರೆ ಬೇರೆ ದೇಶದ ಜನರನ್ನು ನೇಮಿಸಿರುವರು. ಬಟ್ಟಿಯ ಕೆಲಸವನ್ನು ಅಮೇರಿಕನ್ನರ ಕಡೆಗೂ, ಉಕ್ಕಿನ ಕೆಲಸವನ್ನು ಜರ್ಮನ್ನರ ಕಡೆಗೂ, ತಗಡುಗಳನ್ನು ಮಾಡುವ ಕೆಲಸವನ್ನು ಇಂಗ್ಲೀಷ ಜನರ ಕಡೆಗೂ, ಬೇರೆ ಬೇರೆ ಸಮೂನೆಗಳನ್ನು ಮಾಡುವ ಕೆಲಸವನ್ನು ಚೀನೀ ಜನರ ಕಡೆಗೂ ಒಪ್ಪಿಸಿರುವರು. ಈ ದೇಶದಲ್ಲಿ ಕೂಲಿಕಾರರ ಕೂಲಿಯು ಅಮೇರಿಕ ಯುರೋಪಗಳಿಗಿಂತಲೂ ಕಡಿಮೆ ಇರುವದರಿಂದಲೂ ಕಚ್ಚಾ ಮಾಲು ಅಗ್ಗವಾಗಿ ಸಿಗುತ್ತಿರುವದರಿಂದಲೂ ಈ ಕಾರಖಾನೆಯು ಒಳ್ಳೇ ಅಭಿವೃದ್ಧಿಯನ್ನು ಹೊಂದಬಹುದೆಂಬದಕ್ಕೆ ಏನೂ ಸಂದೇಹವಿಲ್ಲ. ಪರದೇಶೀಯ ನೌಕರರಿಗೆ ಹೆಚ್ಚಿಗೆ ಪಗಾರನ್ನು ಕೊಡಬೇಕಾಗುವದೆಂಬದು ನಿಜ. ಆದರೆ ಸದ್ಯಕ್ಕೆ ಇದಕ್ಕೆ ಎರ

ಡನೇ ಉಪಾಯವಿಲ್ಲದಾಗಿದೆ. ಕಾರಖಾನೆಯ ಸರಕುಗಳಿಗೆ ಗಿರಾಕಿಗಳು ವಿಶೇಷವಾಗಿರುವರು. ಹಿಂದುಸ್ತಾನದಲ್ಲಿ ರೇಲ್ವೆಯ ಪ್ರಸಾರವು ಬಹು ಮಟ್ಟಿಗೆ ಆಗಿದ್ದು ಇನ್ನೂ ಎಷ್ಟೋ ಚಿಕ್ಕ ಪುಟ್ಟ ಶಾಖೆಗಳು ಆಗುತ್ತಲೇ ಇರುವವು. ಮತ್ತು ಕೆಲವು ಹೊಸ ರೇಲ್ವೆಗಳನ್ನೂ ಮಾಡುವ ವಿಚಾರವು ನಡೆದದೆ. ಇವುಗಳಿಗೆ ಬೇಕಾಗುವ ಹಳಿಗಳು, ಮಾಗೆನದ ಡಬ್ಬಿಗಳು, ಸ್ಟೇಶನಗಳನ್ನು ಕಟ್ಟಲಿಕ್ಕೆ ಬೇಕಾಗುವ ಕಬ್ಬಿಣದ ಸಾಮಾನುಗಳು ಮುಂತಾದ ಸರಕುಗಳ ಬೇಡಿಕೆಯು ಹೆಚಿಗೆ ಇರುವದು. ಹಾಗು ಟೆಲಿಫೋನ, ಟೆಲಿಗ್ರಾಫ, ಗ್ಯಾಸಲಾಯಿಟದ ಯಂತ್ರಗಳು, ನೀರಿನ ನಳಗಳು ಮುಂತಾದ ಸಾಮಾನುಗಳ ಬೇಡಿಕೆಯಾದರೂ ವಿಶೇಷವಾಗಿರುವದು. ಕಳೆದ ಆರು ವರ್ಷಗಳಿಂದ ಈ ದೇಶಕ್ಕೆ ಪರದೇಶಗಳಿಂದ ಪ್ರತಿವರ್ಷಕ್ಕೆ ೭೦೦೦ ಟನ್ನುಗಳಂತೆ ಉಕ್ಕಿನ ಸಾಮಾನುಗಳು ಬಂದಿರುತ್ತವೆ. ಇದರಮೇಲಿಂದ ಈ ತರದ ಸಾಮಾನುಗಳ ಕೊರತೆಯು ಈ ದೇಶಕ್ಕೆ ಎಷ್ಟು ಇರುವದೆಂ ಬದು ಕಂಡುಬರುವದು.

ನೈತಿಕಶಿಕ್ಷಣ.

(ವಿ. ತ. ನಾ. ಅವಿೀನಭಾವಿಯವರು ಬರೆದದ್ದು.)

ಇಂಗ್ಲಂಡದ ಶಾಲೆಗಳಲ್ಲಿ ನೀತಿಶಿಕ್ಷಣವನ್ನು ಪ್ರತ್ಯಕ್ಷ ಪಾಠಗಳಿಂದ ಕೊಡುವ ಉದ್ದೇಶದಿಂದಲೂ, ಇತರ ದೇಶಗಳಲ್ಲಿ ನೀತಿಶಿಕ್ಷಣಕ್ಕೆ ಪ್ರೋತ್ಸಾಹನವನ್ನುಂಟುಮಾಡುವ ಉದ್ದೇಶದಿಂದಲೂ ಲಂಡನದಲ್ಲಿ "ಮೊರಲ್ ಎಜ್ಯುಕೇಶನ್ ಲೀಗ" (ನೀತಿಶಿಕ್ಷಣಸಂಘ)ವೆಂಬದೊಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿದ್ದು, ಆ ಸಂಸ್ಥೆಯವರು ನೀತಿಯ ಪಾಠಗಳನ್ನು ಕಲಿಸಿ ತೋರಿಸುವದಕ್ಕೆ ಕೆಲ ಗೃಹಸ್ಥರನ್ನು ನೇಮಿಸಿರುವರು. ಅಂಥವರಲ್ಲಿ ಒಬ್ಬ ಪ್ರಸಿದ್ಧ ಗೃಹಸ್ಥರಾದ ಮಿ. ಎಫ್. ಜೆ. ಗೂಲ್ಡ ಎಂಬವರನ್ನು ಮುಂಬಯಿ ಸರಕಾರದವರು ಕಳೆದ ಜನವರಿಯಲ್ಲಿ ಈ ದೇಶಕ್ಕೆ ಕರೆಯಿಸಿ, ಅವರಿಂದ ಈ ಇಲಾಖೆಯಲ್ಲಿ ಮುಂಬಯಿ, ಪುಣೆ, ಬೆಳಗಾವ, ಧಾರವಾಡ, ಕರಾಚಿ, ಹೈದರಾಬಾದ (ಸಿಂಧ)ಎಂಬ ಆರು ಸ್ಥಳಗಳಲ್ಲಿ ಸಪ್ರಯೋಗವಾದ ವ್ಯಾಖ್ಯಾನಗಳನ್ನು ಕೊಡಿಸಿದರು. ಮಿ. ಗೂಲ್ಡ ಇವರು ಮೊದಲು, ಚಿಕ್ಕ ವಿದ್ಯಾರ್ಥಿಗ

ಳಿಗೆ ಕಥೆಗಳನ್ನು ಹೇಳಿ ಅವರ ಮನಸ್ಸು ಎಳಕೊಂಡು ಆ ಕಥೆಗಳ ದ್ವಾರ ದಿಂದ ಅವರಲ್ಲಿ ನೀತಿಯ ಭಾವನೆಯನ್ನು ಸ್ಥಿರಪಡಿಸುವ ಕ್ರಮವನ್ನು ತಾವು ಪ್ರತ್ಯಕ್ಷ ವಾತವನ್ನು ಕಲಿಸಿ ತೋರಿಸಿ, ತರುವಾಯ ಶಿಕ್ಷಕರಿಗೋಸ್ಕರ ಕೆಲವು ಸೂಚನೆಗಳನ್ನು ಹೇಳಿದರು. ಅವರು ಈ ಪ್ರಕಾರ ಧಾರವಾಡ ಪಾಯ ಸ್ಕೂಲಿನಲ್ಲಿ ಕಲಿಸಿ ತೋರಿಸಿದ ನೀತಿಯ ವಾತದಲ್ಲಿ ಕಂಡುಬಂದ ವಿಶೇಷಗಳನ್ನೂ ಅವರು ಹೇಳಿದ ಸೂಚನೆಗಳನ್ನೂ ಬಳಕೊಂಡಂಥ ಕೆಳಗಣ ಲೇಖವನ್ನು ಶಾಲಾಪತ್ರಕದ ವಾಚಕರಿಗೋಸ್ಕರ ಕೊಟ್ಟಿರುತ್ತೇವೆ:—

ನೈತಿಕ ಶಿಕ್ಷಣವೂ ಅದನ್ನು ಕೊಡುವ ಬಗ್ಗೆ ಶಿಕ್ಷಕರಿಗೆ ಕೆಲವು ಸೂಚನೆಗಳೂ.

ಭಾವೀರಾಷ್ಟ್ರದ ಜನರು ಶರೀರದಿಂದ ಸಶಕ್ತರೂ, ನಿರೋಗಿಗಳೂ ಆಗುವಂತೆಯೂ, ಮನಸ್ಸಿನಿಂದ ಬುದ್ಧಿವಂತರೂ ನಿಷ್ಟಲರೂ ಆಗುವಂತೆಯೂ ಮಾಡುವದೇ ಶಿಕ್ಷಣವೆಂದು ಶಿಕ್ಷಣದ ವ್ಯಾಖ್ಯೆಯು ಹೇಳಲ್ಪಡುತ್ತದೆ. ಶಿಕ್ಷಕರು ಈ ವ್ಯಾಖ್ಯೆಯನ್ನು ಮನಸ್ಸಿನಲ್ಲಿಟ್ಟುಕೊಂಡು ವಿದ್ಯಾರ್ಥಿಗಳ ಶಾರೀರಿಕ ಮಾನಸಿಕ ಶಕ್ತಿಗಳಿಗೆ ಹಲವು ವಿಧದ ಕೆಲಸಗಳನ್ನು ಕೊಟ್ಟು ಅಭ್ಯಾಸ ಮಾಡಿಸಲಿಕ್ಕೆ ಬೇಕು. ಅವರು ಸಶಕ್ತರೂ, ಆರೋಗ್ಯವುಳ್ಳವರೂ ಆಗುವದಕ್ಕಾಗಿ ಬೇರೆ ಬೇರೆ ತರದ ಆಟ, ಕವಾಯತು ಮೊದಲಾದವುಗಳ ಯೋಜನೆಯನ್ನು ಮಾಡಬೇಕು. ಅವರ ಬುದ್ಧಿಯು ವಿಕಾಸವಾಗುವಂತೆ ಹಲವು ವಿಷಯಗಳನ್ನು ಅವರಿಗೆ ಕಲಿಸತಕ್ಕದ್ದು. ಸ್ವಭಾವದ ಘಟನೆಯು ತಕ್ಕ ರೀತಿಯಿಂದ ಆಗಿ ಅವರು ಸುಶೀಲರಾಗುವಂತೆ ಯತ್ನಮಾಡಲಿಕ್ಕೆ ಬೇಕು. ಅಂದರೆ ಮಾತ್ರ ಶಿಕ್ಷಕನು ತನ್ನ ಕರ್ತವ್ಯವನ್ನು ಪೂರ್ಣವಾಗಿ ಮಾಡಿದಂತಾಗುವದು. ಶಿಕ್ಷಣದ ಈ ಮೂರೂ ಅಂಗಗಳಿಗೆ ಸರಿಯಾದ ಮಹತ್ವವನ್ನು ಕೊಡಬಹುದು. ಆದರೆ ಎಲ್ಲ ಪ್ರಕಾರದ ಶಿಕ್ಷಣವು ನೈತಿಕಶಿಕ್ಷಣದಲ್ಲಿ ಪರ್ಯವಸಾನವನ್ನು ಹೊಂದಲಿಕ್ಕೆ ಬೇಕು. ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ನಿತ್ಯದಲ್ಲಿಯೂ, ಸ್ವಂತದ ನಡಾವಳಿಯ ಸಂಬಂಧದಿಂದಲೂ, ಕುಟುಂಬದ ಸಂಗಡಲೂ ಸಮಾಜದ ಸಂಗಡಲೂ ಹ್ಯಾಗೆ ನಡಕೊಳ್ಳಬೇಕೆಂಬ ಸಂಬಂಧದಿಂದಲೂ, ಅನೇಕ ಪ್ರಶ್ನಗಳು ಆಗಾಗ್ಗೆ ಉದ್ಭವಿಸುವವು. ಈ ಪ್ರಶ್ನಗಳನ್ನು ವಿವೇಕದಿಂದ ಬಿಡಿಸುವ ಚಾಪಲ್ಯವನ್ನೂ ಚಾತು

ರ್ಯವನ್ನೂ ಹುಡುಗರಲ್ಲಿ ಉಂಟುಮಾಡುವದೂ, ಸಭ್ಯತನದ ಸಂಬಂಧದಿಂದ ಹಲವು ಬಗೆಯ ಭಾವನೆಗಳನ್ನು ಅವರ ಮನಸಿನಲ್ಲಿ ಜಾಗ್ರತಗೊಳಿಸಿ ಅವುಗಳನ್ನು ವಿಕಾಸಪಡಿಸುವದೂ, ವ್ಯವಹಾರಜ್ಞಾನ, ಧೈರ್ಯ, ತಾಳ್ಮೆ ಇವೇ ಮೊದಲಾದ ಹಲವು ಸದ್ಗುಣಗಳಿಂದ ಯುಕ್ತವಾದ ಶೀಲವನ್ನುಂಟುಮಾಡುವದೂ ನೈತಿಕ ಶಿಕ್ಷಣದ ಮುಖ್ಯೋದ್ದೇಶಗಳಾಗಿರುತ್ತವೆ.

ಪ್ರಾಥಮಿಕ ಶಿಕ್ಷಣದ ಅಭ್ಯಾಸಕ್ರಮದಲ್ಲಿ ನೀತಿಶಿಕ್ಷಣವು ಬಹು ಮಹತ್ವದ ಭಾಗವಾಗಿರತಕ್ಕದ್ದು. ನೈತಿಕ ಶಿಕ್ಷಣವನ್ನು ಶಾಲೆಯಲ್ಲಿ ಎರಡು ಬಗೆಯಿಂದ ಕೊಡಬಹುದು:—

೧. ಅಪ್ರತ್ಯಕ್ಷವಾಗಿ ನೀತಿಶಿಕ್ಷಣವನ್ನು ಕೊಡುವದು. ಅಂದರೆ ಆಕಸ್ಮಿಕವಾಗಿ ಯಾವದೊಂದು ಪ್ರಸಂಗವು ಬಂದಾಗ ಅದರಿಂದ ಹೊರಡುವ ಬೋಧಪ್ರದವಾದ ಸಂಗತಿಗಳನ್ನು ತಿಳಿಸಿಕೊಡುವದು; ಅಥವಾ ವಾಚನ, ಕವಿತೆ, ಇತಿಹಾಸ, ಭೂಗೋಲ ಮೊದಲಾದ ವಿಷಯಗಳನ್ನು ಕಲಿಸುವಾಗ ಹೊತ್ತು ಸಾಧಿಸಿ ನೀತಿಶಿಕ್ಷಣವನ್ನು ಕೊಡುವದು.

೨. ಬೇರೆ ವಿಷಯಗಳಂತೆ ವಿದ್ಯಾರ್ಥಿಗಳ ಯೋಗ್ಯತೆ, ವಯಸ್ಸು, ಪರಿಸ್ಥಿತಿ ಇವುಗಳನ್ನು ಅವಲಂಬಿಸಿ ಏರಿಕೆಯ ಕ್ರಮದಿಂದ ನೀತಿಯ ಪಾಠಗಳನ್ನು ಗೊತ್ತುಮಾಡಿಕೊಂಡು ಪದ್ಧತಿಗೆ ಸರಿಯಾಗಿ ಪ್ರತ್ಯಕ್ಷ ನೈತಿಕ ಶಿಕ್ಷಣವನ್ನು ಕೊಡುವದು.

ಈ ಎರಡು ಪ್ರಕಾರಗಳಲ್ಲಿ ತಕ್ಕ ಅನುಕೂಲತೆಗಳಿದ್ದರೆ ಎರಡನೇ ಪ್ರಕಾರವೇ ಹೆಚ್ಚು ಯುಕ್ತವಾದದ್ದು. ತಕ್ಕ ಅನುಕೂಲತೆಗಳೆಂದರೆ, ನುಡಿದಂತೆ ನಡೆಯುವವನೂ, ದೀಘೋದ್ಯೋಗಿಯೂ, ಸಚ್ಚೀಲನೂ ಆದ ಶಿಕ್ಷಕ, ವಿದ್ಯಾರ್ಥಿಗಳ ವಯಸ್ಸು, ಯೋಗ್ಯತೆ, ಪರಿಸ್ಥಿತಿ ಇವುಗಳಿಗೆ ಅನುಸಾರವಾದ ಅಭ್ಯಾಸಕ್ರಮ, ಅದಕ್ಕೆ ತಕ್ಕಂತೆ ಪಾಠಗಳನ್ನು ಸಿದ್ಧಪಡಿಸಲಿಕ್ಕೆ ಅವಶ್ಯಕವಾದ ಪೌರಾಣಿಕ, ಐತಿಹಾಸಿಕ, ಕಾಲ್ಪನಿಕ ಕಥಾಪ್ರಸಂಗಗಳ ಸಂಗ್ರಹ, ಇವೇ ಮೊದಲಾದವುಗಳು.

ನೀತಿಪಾಠಗಳ ಅಭ್ಯಾಸಕ್ರಮದಲ್ಲಿ ಮುಖ್ಯವಾಗಿ ಕೆಳಗೆ ಕೊಟ್ಟ ನೀತಿಪಾಠಗಳು ಇರಬೇಕು:—

ಧೈರ್ಯ, ಸತ್ಯ, ಶಾರೀರಿಕ-ಮಾನಸಿಕ-ವಾಚಿಕ ಶುದ್ಧತೆ, ನ್ಯಾಯ, ಪ್ರೀತಿ, ಅಶಕ್ತರ ವಿಷಯವಾಗಿ ಸಭ್ಯವರ್ತನೆ, ಪ್ರಾಣಿಮಾತ್ರಗಳಲ್ಲಿ ದಯೆ

ನಿಯಮಿತತನ, ಆತ್ಮಸಂಯಮನ, ಸ್ವದೇಶಪ್ರೀತಿ, ಸೃಷ್ಟಿಯಲ್ಲಿಯೂ ಕಲೆಗಳಲ್ಲಿಯೂ ಕಾಣುವ ಸೌಂದರ್ಯಕ್ಕೆ ಮಾನಕೊಡುವದು ಇತ್ಯಾದಿ.

ಈ ವಿಷಯಗಳನ್ನು ಹುಡುಗರು ವಾಸಿಸುವ ಪಟ್ಟಣದೊಳಗಿನ ಅಥವಾ ದೇಶದೊಳಗಿನ ಅವರ ಪರಿಸ್ಥಿತಿಗೆ ಸಂಬಂಧಿಸಿದ ಉದಾಹರಣೆಗಳಿಂದಲೂ, ಶಕ್ಯವಿದ್ದಷ್ಟುಮಟ್ಟಿಗೆ ಚಿತ್ರಗಳನ್ನು ತೋರಿಸುವದರಿಂದಲೂ, ಅವರಿಗೆ ಗೊತ್ತಿದ್ದ ಇತಿಹಾಸಗಳು, ಮಹಾಪುರುಷರ ಚರಿತ್ರೆಗಳು, ಪುರಾಣಗಳು ಇವುಗಳಿಂದ ಆರಿಸಿಕೊಂಡ ಉದಾಹರಣೆಗಳಿಂದಲೂ, ಅವತರಣಗಳಿಂದಲೂ, ಕಥೆಗಳಿಂದಲೂ ಕಲಿಸತಕ್ಕದ್ದು. ಈ ಬಗೆಯ ನೈತಿಕ ಶಿಕ್ಷಣದಿಂದ ಚಿಕ್ಕಮಕ್ಕಳ ಮನಸಿನಲ್ಲಿ ಸುಸ್ವಭಾವ, ಒಳ್ಳೇ ಚಟ್ಟೆಗಳು ಇವುಗಳ ಅಸ್ತಿವಾರವನ್ನು ಹಾಕಿದಂತಾಗುತ್ತದೆ. ಅದರಿಂದ ಅವರಲ್ಲಿ ಒಳ್ಳೇ ಜೀವನಕ್ರಮವೂ ಸರಳವಿಚಾರಗಳೂ ನೆಲೆಗೊಳ್ಳುವವು. ನೀತಿಪಾತಗಳನ್ನು ಹೇಳುವಾಗ ಶಿಕ್ಷಕರು ತಮ್ಮ ವಾಕ್ಚಾತುರ್ಯದಿಂದ ಹುಡುಗರ ಮನಸಿಗೆ ಹರ್ಷ, ಶೋಕ, ತಾಳ್ಮೆ, ಸುಖ, ದುಃಖ ಇವೇ ಮೊದಲಾದವುಗಳ ಪ್ರತ್ಯಕ್ಷ ಅನುಭವವಾಗುವಂತೆ ಮಾಡತಕ್ಕದ್ದು. ಹುಡುಗರಲ್ಲಿ ಸ್ವಾಭಾವಿಕವಾಗಿ ನೀತಿಸಂಬಂಧವಾದ ಜವಾಬದಾರಿಯು, ಅಂದರೆ ನೀತಿಯಿಂದ ನಡೆಯಬೇಕು, ನಡೆಯದಿದ್ದರೆ ದೊಡ್ಡ ತಪ್ಪುಮಾಡಿದಂತಾಗುವದು ಎಂಬ ಜವಾಬದಾರಿಯು ಇರದಿದ್ದರೆ, ನೈತಿಕ ಶಿಕ್ಷಣವನ್ನು ಕೊಡುವದರಿಂದ ಏನೂ ಪ್ರಯೋಜನವಾಗುವದಿಲ್ಲ. ಅದು ಒಂದು ತರದ ಫಾರ್ಸ ಅಥವಾ ಪ್ರಹಸನವಾಗುವದೆಂದು ಸ್ಪಷ್ಟವಾಗಿ ಹೇಳಬಹುದು:—

ನೈತಿಕ ಶಿಕ್ಷಣವನ್ನು ಕೊಡಲಪೇಕ್ಷಿಸುವ ಶಿಕ್ಷಕರಿಗೆ ಉಪಯುಕ್ತವಾದ ಕೆಲವು ಸೂಚನೆಗಳನ್ನು ಇಲ್ಲಿ ಕೊಡುವೆವು.

ಹುಡುಗರ ಲಕ್ಷವು ಪಾತದಕಡೆಗೆ ಹತ್ತುವಂತೆ ಶಿಕ್ಷಣವನ್ನು ಸಾಗಿಸತಕ್ಕದ್ದು. ವಿದ್ಯಾರ್ಥಿಗಳ ಲಕ್ಷವನ್ನು ಎಳಕೊಳ್ಳಲಿಕ್ಕೆ ಅನೇಕ ಸಾಧನಗಳುಂಟು. ಅವುಗಳಲ್ಲಿ ಎಲ್ಲಕ್ಕೂ ಮಹತ್ವವುಳ್ಳದ್ದು ಯಾವದೆಂದರೆ, ಶಕ್ಯವಿದ್ದಷ್ಟುಮಟ್ಟಿಗೆ ವಿಷಯಕ್ಕೆ ಸುಲಭರೂಪವನ್ನು ಕೊಟ್ಟು, ಹುಡುಗರಿಗೆ ತಿಳಿಯುವಂಥ ಭಾಷೆಯಿಂದ ಕಲಿಸುವದು. ಅವರಿಗೆ ಗೊತ್ತಿರುವ ಸಂಗತಿಗಳನ್ನೂ ಕೂಡ ತಾವಾಗಿಯೇ ಹೇಳಿಕೊಡದೆ, ಪ್ರಶ್ನೆಗಳ ದ್ವಾರದಿಂದ ಆ ಸಂಗತಿಗಳನ್ನು ಹೊರಡಿಸಿ, ಕುತೂಹಲವನ್ನು ಜಾಗ್ರತೆಗೊಳಿಸುತ್ತಾ ಹೊಸ

ಸಂಗತಿಗಳನ್ನು ಹೇಳುತ್ತಾ ಹೋದರೆ, ಅವರ ಮನಸು ಪಾಠದ ಕಡೆಗೇ ಹತ್ತುವದು. ಪಾಠವನ್ನು ಹೇಳುವಾಗ ಶಿಕ್ಷಕನು ಪ್ರಸಂಗಕ್ಕೆ ತಕ್ಕಂಥ ನಾನಾ ಪ್ರಕಾರದ ಹಾವಭಾವಗಳನ್ನು ಮಾಡಬಹುದು. ಮುಖಮುದ್ರೆಯಿಂದ ಎಲ್ಲ ತರದ ರಸಗಳ ಆವಿರ್ಭಾವವನ್ನು ಮಾಡಿ ತೋರಿಸಬಹುದು. ಪ್ರಸಂಗಾನುಸಾರವಾಗಿ ಧ್ವನಿಯ ಏರಿಳತಗಳಿಂದಲೂ, ತಕ್ಕ ಶಬ್ದಗಳ ಯೋಜನೆಯಿಂದಲೂ, ಸಾವಕಾಶವಾಗಿಯೂ ತೀವ್ರವಾಗಿಯೂ ಮಾತಾಡುವದರಿಂದಲೂ, ಹುಡುಗರ ಮನಸ್ಸು ಪಾಠವನ್ನು ಬಿಟ್ಟು ಅನ್ಯತ್ರ ಕದಲದಂತೆ ಮಾಡಬಹುದು. ಇನ್ನೊಂದು ಮಹತ್ವದ ಸೂಚನೆಯು ಯಾವದೆಂದರೆ, ಪಾಠವು ನಡೆದಾಗ ಪ್ರಸಂಗಕ್ಕೆ ಉಚಿತವಾದ ಚಿತ್ರ (ಸ್ಕೆಚ್ ಡ್ರಾಯಿಂಗ) ಗಳನ್ನು ಕರೇ ಹಲಿಗೆಯಮೇಲೆ ಚಟಕ್ಕನೆ ತೆಗೆಯುವದರಿಂದ ಅವು ಶಿಕ್ಷಕನ ಅಂಕೆಯಿಂದ ಮೀರಿ ಹೋಗುವ ಮುಂದ ವಿದ್ಯಾರ್ಥಿಗಳ ಮನಸ್ಸನ್ನೂ ಕೂಡ ಹಿಡಿದೆಳೆದು ಪಾಠದಕಡೆಗೆ ಹಚ್ಚುವವು. ಶಿಕ್ಷಕರು ಇಂಥ ಸುಲಭ ಚಿತ್ರಗಳನ್ನು ತೆಗೆಯಲಿಕ್ಕೆ ಕೆಲವು ದಿವಸ ಅಭ್ಯಾಸವನ್ನು ಮಾಡಲಿಕ್ಕೆ ಬೇಕು. ಆ ಚಿತ್ರಗಳು ಚಿತ್ರಕಲಾಶಾಸ್ತ್ರವನ್ನು ಅನುಸರಿಸದಿದ್ದರೂ ಸಾಗುವದು. ನಮ್ಮ ಮನಸಿನೊಳಗಿನ ವಸ್ತುವಿನ ಕಲ್ಪನೆಯು ಹುಡುಗರ ಮನಸಿನಲ್ಲಿ ಬಂದರೆ ಸಾಕು. ಶಿಕ್ಷಣದ ಪಾಠದಲ್ಲಿ ಕಲಿಸತಕ್ಕ ಪಾಠದ ಮುಖ್ಯ ಉದ್ದೇಶವನ್ನು ಹುಡುಗರ ಮನಸಿನಲ್ಲಿ ಬಿಂಬಿಸುವದಕ್ಕೇ ಮಹತ್ವ ಕೊಡಬೇಕಲ್ಲದೆ, ಹಾವಭಾವ, ಚಿತ್ರ, ಶಬ್ದಾಡಂಬರವುಳ್ಳ ಮಾತು, ಈ ಮುಂತಾದವುಗಳಿಗೆ ಮಹತ್ವವಿಲ್ಲೆಂಬದನ್ನು ಮರೆಯಬಾರದು.

ಯಾವದೊಂದು ಪಾಠದಲ್ಲಿ ನೀತಿವಿಷಯಕವಾಗಿ ಹೇಳತಕ್ಕ ಸಂಗತಿಗಳನ್ನು ಖಂಡಿತವಾಗಿಯೂ, ನಿಃಸಂದೇಹವಾಗಿಯೂ ಹೇಳಬೇಕು. ಕಲಿಸಿದ ಮಾತಿನ ಸಂಬಂಧದಿಂದ ಇತಿಮಿತಿ ಜ್ಞಾನವಾಗದಂತೆಯೂ, ಅವರ ಮನಸು ಗೊಂದಲದಲ್ಲಿ ಬೀಳದಂತೆಯೂ ಎಚ್ಚರಪಡಬೇಕು. ಸಂಪೂರ್ಣವಾ ಕಥೆಯಾಗಲಿ ಕಥೆಯ ಒಂದು ಭಾಗವಾಗಲಿ ಮುಗಿಯುವತನಕ ನಡುಃ ಪ್ರಶ್ನೆಗಳನ್ನು ಕೇಳಬಾರದು. ಕಥೆಯು ಮುಗಿದಮೇಲೆ ಸಾರಾಂಶವನ. ಒಂದೆರಡು ಮಾತಿನಲ್ಲಿ ಹುಡುಗರ ಬಾಯಿಂದ ಹೊರಡಿಸಿಕೊಳ್ಳಬೇಕು. ಕಥಾಭಾಗವಿದ್ದರೆ ಅದರಿಂದ ಹೊರಡುವ ಬೋಧಪರವಾದ ಸಂಗತಿಯನ. ಪ್ರಶ್ನೆಮಾಡಿ ಹೊರಡಿಸಿಕೊಳ್ಳಬೇಕು, ಹಾಗಾಗಿ ಹೇಳಿಕೊಡಬಾರದು. ತೀ

ಚಿಕ್ಕವರಿಂದ ಈ ಪ್ರಕಾರ ಸಾರಾಂಶವನ್ನೂ ಹೊರಡಿಸುವ ಕಾರಣವಿಲ್ಲ. ಶಿಕ್ಷಕರ ಅಂಗವಿಕ್ಷೇಪ, ಭಾಷಣದ ಶೈಲಿ ಮುಂತಾದವುಗಳಿಂದ ಅವರ ಮನಸ್ಸಿನಮೇಲೆ ಆಗುವ ಪರಿಣಾಮವಷ್ಟೇ ಸಾಕು. ವಿದ್ಯಾರ್ಥಿಗಳು ವೃದ್ಧರಿದ್ದರೆ ಹೇಳಿದ ಕಥೆಯೊಳಗಿನ ಬೇರೆ ಬೇರೆ ಪಾತ್ರಗಳ ಗುಣಾವಗುಣಗಳ ಸಂಬಂಧದಿಂದಲೂ, ಆ ಪಾತ್ರಗಳು ಮಾಡಿದ ಕೆಲಸಗಳ ಗುಣದೋಷಗಳ ಸಂಬಂಧದಿಂದಲೂ, ತಮ್ಮ ಪಾಠದ ಉದ್ದೇಶವು ಸಫಲವಾಗುವ ರೀತಿಯಿಂದ ವರ್ಗದಲ್ಲಿ ಚರ್ಚೆಯನ್ನು ಮಾಡಿಸಬೇಕು. ಸಾರಾಂಶ, ಶಿಕ್ಷಕರು ವಿದ್ಯಾರ್ಥಿಗಳ ವಯೋನುಗುಣವಾಗಿ ನಿಶ್ಚಿತವಾದ ಒಂದು ಉದ್ದೇಶವನ್ನು ಮನಸಿನಲ್ಲಿಟ್ಟುಕೊಂಡು, ನೀತಿಪಾಠಗಳನ್ನು ಕಲಿಸತಕ್ಕದ್ದು. ವಯಸ್ಸು ಹೆಚ್ಚಾದಂತೆ ಅವರು ನೈತಿಕ ವಿಷಯಗಳಲ್ಲಿ ಕ್ರಮಕ್ರಮವಾಗಿ ಹೆಚ್ಚು ವ್ಯಾಪಕ ವಿಚಾರವುಳ್ಳವರಾಗುವಂತೆ ಯತ್ನಿಸಬೇಕು.

ಭಾಷಾವಿಷಯ, ಗಣಿತ, ಶಾಸ್ತ್ರೀಯ ವಿಷಯ ಈ ವಿಷಯಗಳನ್ನು ಕಲಿಸುವಾಗ ಮೆಟ್ಟಿಗಳನ್ನು ಮಾಡಿಕೊಳ್ಳುವಂತೆ ನೈತಿಕ ವಿಷಯಗಳನ್ನು ಕಲಿಸುವಾಗಲೂ ಮಾಡಿಕೊಳ್ಳಬೇಕು. ಈ ತರದ ಮೆಟ್ಟಿಗಳಿಂದ ಒಂದೊಂದು ವಿಷಯದ ಸಂಪೂರ್ಣ ವಿವೇಚನವನ್ನು ಮಾಡಿದಂತೆ ಆಗುವದಲ್ಲದೆ ಒಂದು ಮೆಟ್ಟಿನಲ್ಲಿ ಆಗುವ ತಪ್ಪು ತಿಳುವಳಿಕೆಯನ್ನು ಎರಡನೇ ಮೆಟ್ಟಿನಲ್ಲಿ ತಿದ್ದಲಿಕ್ಕೆ ಅನುಕೂಲವಾಗುವದು. ಉದಾಹರಣಾರ್ಥವಾಗಿ ದಯೆಯ ಬಗ್ಗೆ ಪಾಠವನ್ನು ಕಲಿಸಬೇಕಾಗಿದೆಯೆಂದು ತಿಳಿಯುವಾ. ಎಲ್ಲಕ್ಕೂ ಮೊದಲು ಮನುಷ್ಯನ ಸುಖದ ಬಾಳುವೆಗೆ ಬುದ್ಧಿಗ್ರಾಹ್ಯವಾದ ಅನೇಕ ವಿಷಯಗಳ ಜ್ಞಾನವು ಅವಶ್ಯವೆಂತಲೂ, ಅದು ಇಲ್ಲದಿದ್ದರೆ ಅಡಿಗಡಿಗೆ ತೊಂದರೆಯು ಸಂಭವಿಸುವದೆಂತಲೂ, ದಯೆಯಲ್ಲಿ ತಿಳುವಳಿಕೆಯುಳ್ಳ ದಯೆಯೆಂತಲೂ ಮೂರ್ಖತನದ ದಯೆಯೆಂತಲೂ ಭೇದಗಳುಂಟೆಂತಲೂ ಉದಾಹರಣಗಳಿಂದ ತಿಳಿಸಿ ಹೇಳುವದು. ತರುವಾಯ ೨ನೇ ಮೆಟ್ಟಿನಲ್ಲಿ ಮನುಷ್ಯನು ಒಳ್ಳೇ ಬುದ್ಧಿವಂತನಾದಾಗ್ಯೂ ದಯಾಶೂನ್ಯನಾಗಿದ್ದರೆ ಆ ಜ್ಞಾನದಿಂದ ತನಗೂ ಪರರಿಗೂ ಹಿತವಾಗುವದಿಲ್ಲೆಂತಲೂ, ಲೋಕಕ್ಕೆ ಅವನು ಅಪ್ರಿಯನಾಗುವನೆಂತಲೂ ತಿಳಿಸುವದು. ಅದರಿಂದ ಹುಡುಗರ ಮನಸಿನಲ್ಲಿ ಮನುಷ್ಯನು ದಯೆಯುಳ್ಳವನಾದರೆ ಸಾಕು, ಅನೇಕ ವಿಷಯಗಳನ್ನು ಕಲಿಯುವದರಿಂದ ಪ್ರಯೋಜನವಿಲ್ಲೆಂಬ ಭಾವನೆಯಾಗ

ಬಹುದು. ಈ ತಪ್ಪು ಭಾವನೆಯನ್ನು ತಾನೇ ಮೆಟ್ಟಿನಿಂದ ತಿದ್ದಬಹುದು. ಈ ಮೆಟ್ಟಿನಲ್ಲಿ ಬುದ್ಧಿಯಿಲ್ಲದ ದಯಾಭರಿತನಾದ ಮನುಷ್ಯನಿಗಿಂತ ಬುದ್ಧಿವಂತನೂ ದಯೆಯುಳ್ಳವನೂ ಆದವನಿಂದ ಲೋಕದಲ್ಲಿ ಹೆಚ್ಚು ಉತ್ತಮವಾದ, ಹೆಚ್ಚು ಉಪಯುಕ್ತವಾದ ಕಾರ್ಯಗಳು ಜರಗುತ್ತವೆ, ಎಂಬ ಸಂಗತಿಯನ್ನು ಒಂದೆರಡು ಕಥೆಗಳಿಂದ ತಿಳಿಸಿ ಹೇಳಿದರೆ ದಯೆಯ ಬಗ್ಗೆ ಸಂಪೂರ್ಣವಾಗಿ ವಿವೇಚನವನ್ನು ಮಾಡಿದಂತಾಗುವದು. ಇದೇ ಪ್ರಕಾರ ಪ್ರತಿಯೊಂದು ಪಾಠದಲ್ಲಿಯೂ ಮೆಟ್ಟುಗಳನ್ನು ಮಾಡಿಕೊಂಡು ಆಯಾ ಮೆಟ್ಟುಗಳಿಗೆ ತಕ್ಕಂತೆ ಉದಾಹರಣೆಗಳನ್ನು ಕಥೆಗಳನ್ನೂ ಸಂಗ್ರಹಿಸಿ ಹೊಂದಿಕೆ ಮಾಡಿಟ್ಟುಕೊಳ್ಳತಕ್ಕದ್ದು.

ಪ್ರತಿಯೊಂದು ನೀತಿಪಾಠವನ್ನು ಪ್ರೇಮಪೂರ್ವಕವಾಗಿ ಕಲಿಸತಕ್ಕದ್ದು. ವರ್ಗದೊಳಗಿನ ಯಾವದೊಂದು ವ್ಯಕ್ತಿಯ ದೋಷಗಳನ್ನು ಮುಂದೆ ಮಾಡಿ ನೀತಿಪಾಠವನ್ನು ಕಲಿಸಬಾರದು. ಪ್ರಸಂಗದಲ್ಲಿ ಯಾವ ನೊಬ್ಬ ವಿದ್ಯಾರ್ಥಿಯ ಒಳ್ಳೇ ಗುಣಗಳನ್ನು ಉದಾಹರಣೆಗಾಗಿ ತಕ್ಕೊಳ್ಳ ಬಹುದು. ಅದರೆ ಮಿತಿಮೀರಿ ಹೊಗಳಿದರೆ ಕೆಟ್ಟ ಪರಿಣಾಮವಾಗುವದೆಂಬ ದನ್ನು ಲಕ್ಷದಲ್ಲಿಡತಕ್ಕದ್ದು.

ನೀತಿಪಾಠಗಳನ್ನು ಕಲಿಸುವಾಗ ಹೇಳಿದ ನೀತಿಯ ಮಾತುಗಳನ್ನು, ಬೇರೆ ವಿಷಯಗಳನ್ನು ಕಲಿಸುವಾಗ ಹೊತ್ತುಸಾಧಿಸಿ ಆಗಾಗ್ಗೆ ನೆನಪಿಗೆ ತಂದುಕೊಡಬೇಕು. ಇಂಥ ಪ್ರಸಂಗಗಳು ಇತಿಹಾಸ, ಭಾಷಾ ಮುಂತಾದ ವಿಷಯಗಳನ್ನು ಕಲಿಸುವಾಗ ದೊರಕುವವು. ಸಾಲೆಯ ಕೆಲಸವನ್ನು ಲಕ್ಷ ಪೂರ್ವಕವಾಗಿಯೂ, ಹೊತ್ತಿಗೆ ಸರಿಯಾಗಿಯೂ, ನಿಯಮದಿಂದಲೂ ಮಾಡುವ ಶಿಕ್ಷಕನಿಗೆ ಕಲಿಸಿದ ನೀತಿಯ ಮಾತುಗಳಂತೆ ಹುಡುಗರನ್ನು ನಡೆಯ ಹಚ್ಚಲು ಅನುಕೂಲವಾಗುವದು. ಹಾಗು ಅವು ಅವರ ಆಚರಣೆಯಲ್ಲಿ ಎಷ್ಟರಮಟ್ಟಿಗೆ ಪರಿಣಮಿಸಿರುವವೆಂಬದನ್ನು ನೋಡಲಿಕ್ಕೆ ಅನುಕೂಲವಾಗುವದು. ಆಟದ ಬೈಲಿನಲ್ಲಿಯೂ ನೀತಿಯನ್ನು ಬೋಧಿಸುವ ಪ್ರಸಂಗಗಳು ವಿಶೇಷವಾಗಿ ದೊರೆಯುವವು.

ವರ್ಗದ ಹುಡುಗರಿಗೆ ಸಾಲೆಯ ಸಮೀಪದಲ್ಲಿರುವ ಬೇರೆ ಬೇರೆ ತರದ ಕಾರಖಾನೆಗಳನ್ನೂ ವಸ್ತುಸಂಗ್ರಹಾಲಯಗಳನ್ನೂ ಸಾರ್ವಜನಿಕ ತೋಟ, ಸಂಸ್ಥೆ ಮುಂತಾದವುಗಳನ್ನೂ ತೋರಿಸಿ ಅಲ್ಲಿ ಯಾವ ರೀತಿಯಿಂದ

ಕೆಲಸಗಳು ನಡೆಯುತ್ತಿರುವವೆಂಬದನ್ನೂ ಅವುಗಳಿಂದ ಸಾರ್ವಜನಿಕ ಹಿತವು ಎಷ್ಟಿರುವದೆಂಬದನ್ನೂ ಗೊತ್ತುಮಾಡಿಕೊಡಬೇಕು. ಅದರಿಂದ ಹುಡುಗರ ಮನಸಿನೊಳಗಿನ ಸಂಕುಚಿತ ವಿಚಾರಗಳು ನಷ್ಟವಾಗಿ, ಸಾರ್ವಜನಿಕ ಹಿತ, ನ್ಯಾಯ, ಸಾರ್ವಜನಿಕ ಸಂಪತ್ತು ಇವುಗಳ ಬಗ್ಗೆ ಪ್ರತಿಯೊಬ್ಬ ಮನುಷ್ಯನು ಎಷ್ಟು ಜವಾಬುದಾರನಾಗಿರುವನೆಂಬದೂ ಅವುಗಳ ಸಂಬಂಧದಿಂದ ತಾವು ಎಷ್ಟರಮಟ್ಟಿಗೆ ಎಚ್ಚರಪಡತಕ್ಕದ್ದೆಂಬದೂ ಅವರಿಗೆ ಗೊತ್ತಾಗುವದು.

ಅಲಂಕಾರದರ್ಪಣ—ಪ್ರಸ್ತುತಾಂಕುರಾಲಂಕಾರವು.

(ಕಳೆದ ದಶಂಬರ ತಿಂಗಳಲ್ಲಿ ಮುದ್ರಿಸಿದ ೧೦ನೇ ಪುಟದಿಂದ ಮುಂದೆ ಸಾಗಿದ್ದು.)

ವಾರ್ಧಿಕ॥ ನೀನಾರು? ಪೇಳುವೆನು; ಕೆಟ್ಟ ತಾಳೆಯ ಗಿಡವ।
ನನ್ನನ್ನು ತಿಳಿಯೆಲವೊ; ವೈರಾಗ್ಯದವನಂತೆ।
ನೀನೇಕೆ ಪೇಳುವಿಯೊ? ಚನ್ನಾಗಿ ತಿಳಿದೆ ನೀ; ಹೀಗೇಕೆ
ಪೇಳಿದೆಯೆಲ್ಲೈ॥

ಜನರೆಲ್ಲ ಸೇವಿಪರು ವಾಮ ವಟವೃಕ್ಷವನು।
ಮನುಜನೀ ಕೇಳಯ್ಯ ಮಾರ್ಗದಲ್ಲಿರುತಿರುವೆ।
ನೀ ನೆರಳು ಬಾರದೈ ಯಾರಿಗಾದರು ಕೂಡಲಿಕ್ಕೆ ನೆರೆಬೇಸಿಗೆ
ಯೊಳುಂ॥

ಇದು ತಾಳೆಯ ಗಿಡ ಹಾಗೂ ಹಾದಿಕಾರ ಇವರ ಸಂವಾದವು. ಇಲ್ಲಿ "ಎಡಭಾಗದಲ್ಲಿರುವ ಆಲದ ಗಿಡವನ್ನು ಎಲ್ಲ ಜನರು ಕಟ್ಟೆಗೆ, ಎಲೆ ಮೊದಲಾಗಿ ಉಪಯೋಗಿಸುವರು. ನಾನು ಹಾದಿಯಲ್ಲೇ ಇದ್ದರೂ ನೆರಳಿಗೆ ಸಹ ಕೂಡಲಿಕ್ಕೆ ಬಾರದು," ಎಂಬದು ಪ್ರಸ್ತುತವಾಗಿದ್ದರೂ "ಭೂತಾಧಾರತ್ವದಿಂದ ಛಾಯವೂ ಕೂಡ ಉಪಯೋಗಕ್ಕೆ ಬರುವದಿಲ್ಲ" ಎಂಬ ಮನದೊಳಗಿನ ಬೇರೊಂದು ಪ್ರಸ್ತುತವೂ ಹೇಳಿದಂತಾಗಿದೆ.

(ವಾಮ=ಎಡಭಾಗದ; ಕೆಟ್ಟ ನಡತೆಯ; ಮಾರ್ಗದಲ್ಲಿರು=ಹಾದಿಯೊಳಿರು; ಸರಳ ರೀತಿಯಿಂದ ನಡೆ.) ಮತ್ತೆ ಉದಾ:—

ಭಾವಿನಿ॥ ಬೇರೆ ಸುಮನೋಲತೆಗಳಲ್ಲಿ ವಿ ।
ಹಾರ ಮಾಡೆಲೊ ಲೋಲಭೃಂಗವೆ ।
ಘೋರತರದುಪಮರ್ದ ಸಹಿಸಲು ಶಕ್ಯವಾಗಿರುವ ॥
ಆರಜೋಯುತವಾಗುವನೆಕವು ।
ವೀರ! ಬಿಡು ಮಲ್ಲಿಗೆಯ ಕುಸುಮವ ।
ಸಾರದಿರು ಪೀಡಿಸಲಕಾಲದೆ ಬಾಲಭಾವದಲಿ ॥

ಇಲ್ಲಿ ಭೃಂಗನಿಂದೆಯು ಪ್ರಸ್ತುತವಾಗಿದ್ದರೂ "ಪ್ರೌಢಾಂಗನೆಯೊಡನಾನಿರಲ್ಕೆ ಬಾಲಕಿಯರನ್ನು ಕ್ಲೇಶಪಡಿಸುವದು ನಿನಗೆ ತರವಲ್ಲವು" ಎಂಬ ಬೇರೊಂದು ಮನದೊಳಗಿನ ಪ್ರಸ್ತುತಾರ್ಥವೂ ಗಮ್ಯವಾಗುವದು.

(ಸುಮನೋಲತೆ=ಹೂಬಳ್ಳಿ; ಉಪಮರ್ದ=ಪೀಡೆ; ರಜೋಯುತ=ಪರಾಗವುಳ್ಳ; ಋತುಮತಿ) ಮತ್ತೆ ಉದಾಃ—

ವಾರ್ತಿಕ॥ ಕೋಶವೆರಡನು ಧರಿಪ್ರದೀನಲಿನಿ ಹಂಸಗಳ ।
ಭಾಸುರದ ಚಕಂಚುವಿನ ನಖವನುರೆ ತಳೆದಿರ್ಪ ।
ಮಾಸಿರುವ ಚಿಗುರೆಲೆಯನೀ ಚೂತ ತಳೆದಿಹುದು
ಗಂಡುಗೋಗಿಲೆಗಳಿಂದ ॥

ಆ ಸಖೀಜನರು ತವ್ಮೊಳು ಹೀಗೆ ನುಡಿವುದಂ ।
ತಾ ಸುದತಿ ಕೇಳುತಲೆ ಕರಗಳಿಂದಧರಗಳ ।
ನಾ ಶರಗಿಂದೆರಡು ಕುಚಕಳಂ ಮುಚ್ಚಿದಳು
ಬಾವಿಯಲಿ ವೇಗದಿಂದ ॥

ಇಲ್ಲಿ 'ಈ ನಲಿನಿ' ಎಂದು ವ್ಯಕ್ತಿನಿರ್ದೇಶದಿಂದ ಯಾವಳೋ ಒಬ್ಬಳನ್ನು ಕುರಿತು ನುಡಿಯುವದು ವಕ್ತೃವಿನ ಪ್ರಸ್ತುತವಾಗಿದ್ದರೂ "ಅವಳು ತನ್ನ ಅಧರಗಳನ್ನು ಮುಚ್ಚಿಕೊಳ್ಳಲಿ" ಎಂಬ ಬೇರೊಂದು ಮನದೊಳಗಿನ ಪ್ರಸ್ತುತವು ಕವಿಯಿಂದಲೇ ಹೊರಡಿಸಲ್ಪಟ್ಟಿದೆ.

ಮೇಲಿನ ಮೂರು ಉದಾಹರಣಗಳಲ್ಲಿ ಮೊದಲಿನವೆರಡು ಧ್ವನಿಗಳೆಂತಲೂ ಅಲಂಕಾರಗಳೆಂತಲೂ ಮತಭೇದಗಳುಂಟು. ಮೂರನೇದು ಅಲಂಕಾರವೆನ್ನುವದಕ್ಕೆ ಮತಭೇದವಿಲ್ಲ. ಹಾಗೆಂದರೆಃ—

ಕಂದ ॥ ಧ್ವನಿಯದು ಶಬ್ದಾರ್ಥಳಿಂ ।
ಮಿನುಮಿನುಗುತ ತೋರೆ ಕವಿಯ ವ್ಯಂಗ್ಯಾರ್ಥವದು ॥

ಧ್ವನಿಯಲ್ಲವು ಕವಿನುಡಿಯಿಂ ।
ಜನಯಿಸೆ ವ್ಯಂಗ್ಯಾರ್ಥವಾಗಲಂಕೃತಿಯೆನಿಕುಂ ॥

ಅರ್ಥ—ಶಬ್ದಾರ್ಥಶಕ್ತಿಗಳಿಂದ ವ್ಯಂಗ್ಯಾರ್ಥವು ಅಕ್ಷಿಪ್ತವಾಗಿರಲು ಧ್ವನಿಯೆನಿಸುವದು. ವ್ಯಂಗ್ಯಾರ್ಥವು ಕವಿಗಳಿಂದಲೇ ಉಕ್ತವಾಗಿದ್ದರೆ ಅದು ಧ್ವನಿಯೆನಿಸದೆ ಅಲಂಕಾರವೆನಿಸುವದು.

ಇಲ್ಲಿಯಾದರೂ ಅಪ್ರಸ್ತುತಾಲಂಕಾರದಂತೆ ಸಾರೂಪ್ಯಾದಿ ನಿಬಂಧನಗಳನ್ನೂ ಬೇರೆ ಸಂಬಂಧಗಳನ್ನೂ ಉದಾಹರಣಗಳಿಂದ ತಿಳುಕೊಳ್ಳತಕ್ಕದ್ದು ಹ್ಯಾಗಂದರೆ:—

ಕಂದ ॥ ಬೇರೊಂದು ರಾತ್ರಿಬಪ್ಪುದು ।
ನೀರೇಜೇಕ್ಷಣವೆ? ನೀನು ಬಹು ಜಾಗ್ರತೆಯಿಂ ॥
ಸಾರುತಲೆ ರಜನಿಯಂ ನೆರೆ ।
ಬೇರೊಬ್ಬನು ಸಖನು ನಿನಗೆ ಬರುವನು ನಿಜದಿಂ ॥

ಇದು ಶಿವರಾತ್ರಿಯ ಮಹಾತ್ಮೆಯ ವರ್ಣನೆಯು. ಇಲ್ಲಿ 'ನೀರೇಜೇಕ್ಷಣವೆ ಬೇರೊಬ್ಬನು ಸಖನು ನಿನಗೆ ಬರುವನು' ಎಂದರೆ ಮೂರು ಕಣ್ಣುಗಳು ಆಗುವವೆಂಬರ್ಥವು. ಕಾರಣ ಇಲ್ಲಿ ಶಿವಸಾರೂಪ್ಯವು ವರ್ಣಿತವಾದಂತಾಯಿತು. ಅದರಿಂದ ಇದು ಸಾರೂಪ್ಯನಿಬಂಧನಾರೂಪವು. ಮತ್ತೆ ಉ:—

ವಾರ್ಧಿಕ ॥ ಶೀಲೆ ನಿನ್ನಯ ಕೇಶ ತಿಮಿರದಲಿ ಮುಚ್ಚಿರ್ಪ ।
ಬಾಲಾಕರನಂತೆ ಸಿಂಧೂರವನು ಧರಿಸಿರುವ ।
ಕೂಲದಪ್ಪಿದ ನಿನ್ನ ವದನಸೌಂದರ್ಯವಾಹಿನಿಯಂತೆ
ಸಂಪದವನು ॥
ಲೀಲೆಯಲಿ ಕೊಡಲೆನಗೆ ಸೀಮಂತಸರಣಿಯದು ।
ಲೋಲೆ ನಿನ್ನಯ ತಲೆಯ ಮೇಲೆ ಶೋಭಿಸುತಿರುವ ।
ಮಾಲೆಯಿಂ ಪೂಗಳಿಂ ಶ್ರೀಗಂಧ ಕಸ್ತೂರಿ ಲೇಪ
ದಿಂಬೊಪ್ಪುತಿರುವ ॥

ಇಲ್ಲಿ ಪ್ರಸ್ತುತವಾದ ಸೀಮಂತಸರಣಿಯ ವರ್ಣನವು 'ವಾಹಿನಿಯಂತೆ' ಯೆಂದು ಉತ್ಪ್ರೇಕ್ಷಿತವಾದ್ದರಿಂದ, 'ಹೆಚ್ಚಾಗಿ ಸುತ್ತಲು ಹರಿಯುತ್ತಿರುವ ಪರಿಪೂರ್ಣ ತಟಾಕದಂತೆ' ಹೆಚ್ಚಿನ ವದನಸೌಂದರ್ಯವು ವ್ಯಕ್ತವಾಗುವದು. ಇದರ ವರ್ಣನವಾಣಿಯರೂ ಪ್ರಸ್ತುತವೇ. ಮತ್ತೆ ಉದಾ:—

ವಾರ್ಧಿಕ ॥ ಮೈಗೆ ಸೋಂಕಿದ ಕಮಲದೇಂಟು ಭೃಂಗದ ತೆರದೆ ।
ಹೇಗೆ ತೋರುವದಿಂದ್ರನೀಲವನು ಪೋಲುವದು ।
ಮೊಗಿನೊಳು ಧರಿಸಿರುವ ಮೌಕ್ತಿಕವದವಳ
ಕೈಗಳ ನೀನು ನೋಡು! ನೋಡ! ॥
ಹೇಗೆ ಕುಡಿವದು ನೀರ! ಕಾದ ಹಂಬಿನ ತೆರದೆ ।
ವೇಗದಿಂದುರಿಯುವದು ನಿನ್ನ ಕುಚವೆರಡುಗಳ ।
ಮೇಗಿಟ್ಟ ಕಪ್ಪುರವು; ಬೇರೆ ಬಗೆಯೇನಿಲ್ಲ;
ವೇಳೆನಗೆ ಹೃದ್ಗತವನು ।

ಇಲ್ಲಿ ನಾಯಿಕೆಯ ವಿರಹದ ಅಸಹ್ಯತ್ವವು 'ಕಮಲದ ದೇಂಟು ಕಪ್ಪಾಗಿದೆ, ಮುತ್ತು ನೀಲವಾಗಿದೆ' ಎಂದು ಕಾರ್ಯಮುಖದಿಂದ ವರ್ಣಿತವಾಗಿದೆ ಇದರಿಂದ ಸಂತಾಪದ ಅತಿಶಯತ್ವವು ತಿಳಿಯಲ್ಪಡುವದು. ಇವೆರಡೂ ಉದಾಹರಣಗಳಲ್ಲಿ ಕಾರ್ಯನಿಬಂಧನಾರೂಪವು ವ್ಯಕ್ತವೇ ಅದೆ.

ಯಾವಕಡೆಯಲ್ಲಿ ಕಾರ್ಯಮುಖದಿಂದ ತಿಳಿಯುವ ಕಾರಣವೂ ಕೂಡ ಕವಿತೆಯಲ್ಲಿ ನಿಬದ್ಧವಾಗಿರುವದೋ ಅಲ್ಲಿ ಈ ಅಲಂಕಾರವಾಗುವದಿಲ್ಲ ಅದು ಅನುಮಾನವೇ ಸರಿ. ಉದಾಃ—

ಭಾಮಿನಿ ॥ ಅಸುಜಘನದೆ ಕುಚಗಳಿಂದಲೆ ।
ಮಾಸಿರುವದುರೆಯೆಲ್ಲ ಕಡೆಯಲಿ ।
ಕೋಷಿಸದೆ ತೋರುವದು ನಡುವಿನ ಸ್ಪರ್ಶವಿಲ್ಲದಲಿ ॥
ಈ ಸುನೇತ್ರೆಯ ಪಾದಕರಗಳ ।
ಘಾಸಿಯಿಂದಲೆ ವ್ಯಸ್ತವಾಗಿಹ ।
ಹಾಸಿಗೆಯು ಪೇಳುವದು ಒಡಗುರೆಲೆಯವಳ ತಾಪವನು ॥

ಇಲ್ಲಿ ಮಾಸು, ಕೋಷಿಸು, ಅಸ್ತವ್ಯಸ್ತವಾಗು ಮೊದಲಾದ ಕಾಯ್ಗಳಿಗೆ ಅವಳ ಸಂತಾಪವೇ ಕಾರಣವು. ಅದು ಕವಿತೆಯಲ್ಲಿಯೇ ನಿಬದ್ಧವಾಗಿದೆ. ಕಾರಣ ಇದು ಪ್ರಸ್ತುತಾಂಕುರವಲ್ಲ.

೨೯. ಪರ್ಯಾಯೋಕ್ತಾಲಂಕಾರವು. ಲಕ್ಷಣಃ— ೧. ಸರಳವಾ ಹೇಳತಕ್ಕದ್ದನ್ನು ಬೇರೆ ರೀತಿಯಿಂದ ಊಹಿಸಿಕೊಳ್ಳುವಂತೆ ಹೇಳಿದರೆ ಈ ಅಲಂಕಾರವಾಗುವದು. ಉದಾಃ—

ಕಂದ ॥ ವಂದಿಪೆನವನಂ ರಾಹುವಿ ।

ನೆಂದದ ಸ್ತ್ರೀಕುಚವ ವಿಫಲ ಮಾಡಿದನಾವಂ ॥

ಇಲ್ಲಿ 'ಶ್ರೀವಿಷ್ಣುವಿಗೆ ನಮಿಸುವೆನೆಂಬರ್ಥವು' 'ರಾಹುವಿನ ಅಂದದ ಸ್ತ್ರೀಕುಚವ ವಿಫಲವಾಡಿದವನಂ ವಂದಿಪೆನು' ಎಂದು ಭಂಗ್ಯಂತರದಿಂದ ಹೇಳಲ್ಪಟ್ಟಿದೆ. ಮತ್ತೆ ಉದಾಃ—

ಕಂದ ॥ ಯಾವನ ಪದಗಳು ಜಗವನು ।
ಭೂವರ ನೋಡುವಪ್ಪೊ, ಅವನು ಯಾವನ ಪದವಂ ॥
ದೇವನೆ ನೋಡನೊ, ಇವರಿಂ ।
ನೀವಧಿಕರು ವಿದ್ಯದಲ್ಲಿ ಸರ್ವರ ಗುರುವೇ? ॥

ಅರ್ಥ—ಯಾವನ ಪದಗಳು ಜಗವನು ನೋಡುವವು ಎಂದರೆ, ಕಾಲ್ಗಳ ಕಣ್ಣುಳ್ಳವನು (ಅಕ್ಷಪಾದ) ಗೌತಮನು; ಅವನು ಯಾವನ ಪದವಂ ನೋಡನೊ, ಎಂದರೆ ಶೇಷಾವತಾರಿಯಾದ ಪತಂಜಲಿಯು. ಇವರಿಗಿಂತ ನೀವು ವಿದ್ಯದಲ್ಲಿ ಹೆಚ್ಚಿನವರು. ಇಲ್ಲಿ ಗೌತಮ-ಪತಂಜಲಿಗಳು ಭಂಗ್ಯಂತರಗಳಿಂದ ಹೇಳಲ್ಪಟ್ಟಿದ್ದಾರೆ. ಮತ್ತೆ ಉದಾಃ—

ಭಾಮಿನಿ ॥ ಶಿರಸಲದ ಕುಸುಮವನು ನಾಚಿಪ ।
ಸರಸವಾಗಿಹ ಪಾದವೆಲ್ಲಿಯ ।
ವರೆಗೆ ನಿನ್ನಯ ಚರಿಣವನವಿದು ಸಾರಲೆಳಸುವೆಯೈ ॥

ಇದು ದಮಯಂತಿಯು ನಲನಿಗೆ ಅಂದ ವಾಕ್ಯವು. ಇಲ್ಲಿ 'ನೀನು ಎಲ್ಲಿಯವರೆಗೆ ಹೋಗುವಿ?' ಎಂಬ ಅರ್ಥವು 'ನಿನ್ನ ಮನವು ಈ ಕೋಮಲ ಪಾದಗಳನ್ನು ಎಲ್ಲಿಯವರೆಗೆ ಖಯ್ಯಲಿಚ್ಛಿಸುವದು?' ಎಂದು ಭಂಗ್ಯಂತರದಿಂದ ಹೇಳಲ್ಪಟ್ಟಿದೆ. ಮತ್ತೆ ಉದಾಃ—

ಭಾಮಿನಿ ॥ ವಂದಿಪೆನು ದೇವನನು ಜಲಧಿಯ ।
ಸಂದ ತೂಣೀರವನು ಮಾಡಿದ ।
ಚಂದದಿಂ ದೇವರಿಗೆ ದೇವನ ಭುವನ ವಿಖ್ಯಾತ ॥
ವಂದ್ಯ ವ್ಯಾಸಾದಿಗಳು ಯಾವಗೆ ।
ಬಂಧುರದೊಳುಪವಾಹವಾದರೊ ।
ಚಂದನನ್ನುಮವಾದನಾವಗೆ ಕುಸುಮಶರನ್ಮೈದೆ ॥

ಅರ್ಥ—ಜಲಧಿಯನು ತೂಣೀರವನು ಮಾಡಿದ ದೇವನನು, ವ್ಯಾಸಾದಿಗಳೇ ಉಪವಾಹನರಾದವನನ್ನು, ಕಾಮನೇ ಚಂದನವಾದವನನ್ನು, ವಂದಿ

ಪೆನು, ಎಂದು ಭಂಗ್ಯಂತರಗಳಿಂದ 'ಶಿವನಿಗೆ ನಮಿಸುತ್ತೇನೆ' ಎಂಬ ಅರ್ಥವು ಹೇಳಲ್ಪಟ್ಟಿದೆ. ಸಮುದ್ರವು ವಿಶ್ರಾಂತಿಸ್ಥಾನವಾಗಿದ್ದ ವಿಷ್ಣುವು ತ್ರಿಪುರಸಂಹಾರಕಾಲದಲ್ಲಿ ಶರವಾಗಿ ಮಾಡಲ್ಪಟ್ಟನು. ಕಾರಣ ಆಶ್ರಯ ಸ್ಥಾನವಾದ ಜಲಧಿಯು ಬಾಣದ ಫಿಲವಾಗುವದು ಸಹಜವೇ? ವೇದಗಳು ಈಶ್ವರನಿಗೆ ವಾಹನಗಳು; ವೇದಗಳಿಗೆ ವ್ಯಾಸಾದಿಗಳು ವಾಹನರು; ಕಾರಣ ಈಶ್ವರನಿಗೆ ವ್ಯಾಸಾದಿಗಳು ಉಪವಾಹನರು. ಮೈಗೆ ಚಂದನವನ್ನು ಹಚ್ಚಿಕೊಳ್ಳಲಿಕ್ಕೆ ಬದಲಾಗಿ ಮನ್ಮಥನ ಬೂದಿಯನ್ನು ಹಚ್ಚಿಕೊಂಡದ್ದರಿಂದ ಕಾಮನೇ ಚಂದನದ ಗಿಡವಾದಂತಾಯಿತು. ಮತ್ತೆ ಉದಾಃ—

ಕಂದ ॥ ಯಾವನು ರಾಹುವಭೂಜನೆ ।
ಜೀವದ ಸುರತವನು ಸನ್ನಿಗೂಹನವಂಧ್ಯಂ ॥
ಜಾವದೆ ಚಕ್ರದೆ ಮೊನೆಯಿಂ ।
ಭಾವಿಸೆ ಚುಂಬನವೆ ಮಾತ್ರ ಶೇಷವಗೈದಂ ॥

ಇಲ್ಲಿ 'ಸನ್ನಿಗೂಹನ ವಂಧ್ಯಂ' 'ಚುಂಬನವೆ ಮಾತ್ರ ಶೇಷಂ' ಎಂಬ ಪದಗಳಿಂದ ರಾಹುವಿನ ಶಿರಚ್ಛೇದವು ಗಮ್ಯವಾಗುವದು. ಇದು ಪ್ರಸ್ತುತಾಂಕುರವು. ಆದರೆ ಇಡೀ ಪದ್ಯದಲ್ಲಿ ವಿಷ್ಣುವಿನ ರೂಪವು ಭಂಗ್ಯಂತರದಿಂದ ಗಮ್ಯವಾಗುವದು; (ಸಮ್ಯಕ್ + ನಿಗೂಹನ = ಚನ್ನಾಗಿ ಅಲಿಂಗಿಸಿಕೊಳ್ಳುವದು; ಜೀವದ ಪ್ರೀತಿಯ; ಜನ್ಮವಿರುವತನಕ)

೨. ರಮಣೀಯವಾದ ಕಾರಣಗಳಿಂದ ಸ್ವಪರೇಷ್ಟಸಾಧನಗಳಾಗಲು ಪರ್ಯಾಯೋಕ್ತಾಲಂಕಾರವಾಗುವದು. ಉದಾಃ—

ಕಂದ ॥ ಪೋಗುವೆನು ಚಕೂತನೋಡಲು ।
ಸಾಗಲಿ ನಿಮ್ಮಿಬ್ಬರಾಟ ವೇಗಲೆ ಬರುವೆಂ ॥

ಇಲ್ಲಿ ನಾಯಿಕೆಯನ್ನು ನಾಯಕನೊಡನೆ ಕೂಡಿಸಿ ಚಕೂತನೋಡುವ ನೆವದಿ ಹೋಗುವ ಸಖಿಯಿಂದ ಅವರ ಸ್ವಾಚ್ಛಂದ್ಯಸಂಪಾದನರೂಪವಾದ ಇಷ್ಟಸಾಧವು ಉಕ್ತವಾಗಿದೆ. ಮತ್ತೆ ಉದಾಃ—

ಕಂದ ॥ ಕೊಡು ಬೇಗ ರಾಧೆ ಶೀರೆಯ ।
ಬುಡದಲಿ ಮುಚ್ಚಿರುವ ನನ್ನ ಕಂದುಕವೀಗಳ್ ॥
ಬಿಡೆನೆನ್ನುತವಳ ಶೀರೆಯ ।
ಗಡ ಸೆಳೆಯುವ ಕೃಷ್ಣನೀಗೆ ಮುದವನು ಜವದಿಂ ॥

ಮೇಲಿನ ಉದಾಹರಣೆಯಲ್ಲಿ ಪರೇಷ್ಟ ಸಾಧನವು ಹೇಳಲ್ಪಟ್ಟಿತು. ಆದರೆ ಇಲ್ಲಿ ಕಂದುಕ ಶೋಧನಾರ್ಥವಾಗಿ ಶೀರೆಯನ್ನು ಜಗ್ಗುವ ನೆವದಿಂದ ಸ್ವೇಷ್ಟಸಾಧನವು ಉಕ್ತವಾಗಿದೆ. (ಕಂದುಕ = ಚಂಡು)

೩೦. ವ್ಯಾಜಸ್ತುತ್ಯಲಂಕಾರವು. (ಲಕ್ಷಣ):— ನಿಂದೆಯಿಂದ ಸ್ತುತಿ ಸ್ತುತಿಯೂ, ಸ್ತುತಿಯಿಂದ ನಿಂದೆಯೂ ವ್ಯಕ್ತವಾಗಲು ಈ ಅಲಂಕಾರವಾಗುವದು. ಉದಾ:—

ಕಂದ ॥ ಸುರಗಂಗೆಗಿದು ವಿವೇಕವೆ? ।
ನೆರೆ ಪಾಪಿಯನೊಯ್ದು ದಿವದೊಳಿಡುವುದು ನಿರುತಂ ॥

ಇಲ್ಲಿ ' ವಿವೇಕವು ಇಲ್ಲ ' ಎಂಬ ನಿಂದಾವ್ಯಾಜದಿಂದ ' ಗಂಗೆಯು ಸುಕೃತಿಗಳಂತೆ ಮಹಾ ಪಾಪಿಷ್ಠರನ್ನೂ ಕೂಡ ಉದ್ಧರಿಸುವಳು ' ಎಂಬ ಸ್ತುತಿಯು ವ್ಯಕ್ತವಾಗುವದು. (ದಿವ = ಸ್ವರ್ಗ). ಮತ್ತೆ ಉದಾ:—

ಕಂದ ॥ ಸಾಧು? ಬಹುಸಾಧು? ದೂತಿಯೆ ।
ಸಾಧಕಳೈ ಸ್ವಾಮಿಕಾರ್ಯದಕ್ಷತೆಯಿನ್ನೇಂ? ॥
ಮೋದದೆನಗಾಗಿ ಸಹಿಸಿದಿ ।
ಬಾಧೆಯನುರೆದಂತ ನಖದ ಕ್ಷತಿಗಳ ನೀನು ॥

ಇಲ್ಲಿ ' ನನಗಾಗಿ ನೀನು ಬಹಳ ಕ್ಲೇಶಪಟ್ಟೆ ' ಎಂಬ ವ್ಯಾಜರೂಪವಾದ ಸ್ತುತಿಯಿಂದ ' ನನ್ನ ಸಲುವಾಗಿ ಹೋಗದೆ ನೀನು ರಮಿಸಲಿಕ್ಕೆ ಮಾತ್ರ ಹೋದಿ. ನಿನ್ನ ಸ್ವಾಮಿಭಕ್ತಿಗೆ ಬೆಂಕೇ ಹಚ್ಚಲಿ ' ಎಂಬ ನಿಂದೆಯು ವ್ಯಕ್ತವಾಗುವದು. ಮತ್ತೆ ಉದಾ:—

ಕಂದ ॥ ಏನಿದು? ನಿನ್ನೆಯ ಶೌರ್ಯವು ।
ನೀನೊಂದನೆ! ಕುದುರೆಯೇರೆ ಶತ್ರುಗಳಿಲ್ಲರ್ ॥
ಭಾನುವಿನ ತೆರದೆ ತೋರುತ ।
ಆ ನವಸಪ್ತಾಶ್ವರೂಢರಾಗುತಲಿಹರೈ ॥

ಅರ್ಥ—೧. ಏನು ನಿನ್ನೆಯ ಶೌರ್ಯವು? ನೀನು ಒಂದು ಕುದುರೆಯನ್ನು ಏರಿಹೋಗಲು ಶತ್ರುಗಳು ಸಂತಪ್ತರಾಗಿ ನೂತನವಾದ ಏಳೇಳು ಕುದುರೆಗಳನ್ನು ಏರಿ ಬರುವರು. ೨. ಸಪ್ತಾಶ್ವರೂಢರಾಗುವರೆಂದರೆ ಯುದ್ಧದಲ್ಲಿ ಮೃತರಾಗಿ ಸೂರ್ಯನೊಳಗೆ ಐಕ್ಯಹೊಂದುವರೆಂಬರ್ಥವು. ರಣದಲ್ಲಿ ಮೃತರಾದವರು ಸೂರ್ಯಮಂಡಲವನ್ನು ಪ್ರವೇಶಿಸುವರೆಂಬದು ಶ್ರುತಿಪ್ರಸಿದ್ಧವು.

ಇಲ್ಲಿ ಶ್ಲೇಷಮೂಲಕ ನಿಂದಾವ್ಯಾಜದಿಂದ ಸ್ತುತಿಯು ಉಕ್ತವಾಗಿದೆ. (ಸಪ್ತ ಅಶ್ವಾಃ ಯಸ್ಯ=ಏಳು ಕುದುರೆಗಳು ಯಾವನ ರಥಕ್ಕೋ ಅವನು=ಸೂರ್ಯ; ಸಪ್ತಚ ತೇ ಅಶ್ವಾಶ್ಚ (ದ್ವಿಗು); ಏಳು ಕುದುರೆಗಳು). ಮತ್ತೆ ಉದಾಃ—

ವಾರ್ಧಿಕ ॥ ಶಿವನರ್ಧವೈದೆ ಮುರಹರ ಧರಿಸಲುಳಿದುದನು ।
ಶಿವನ ರಾಣಿಯು ಧರಿಸೆ; ಜಗದೊಳಗೆ ಮನ್ಮಥನೆ ।
ಹರನಿಲ್ಲದಿರೆ; ಗಂಗೆ ಸಾಗರಕೆ; ಶಶಿಕಲೆಯೆದಂಬರಕೆ;
ನಾಗಾಧಿಪಂ ॥

ಸಾರೆ ಪಾತಾಳವನು; ಸರ್ವಜ್ಞತನವೈದೆ ।
ವೀರ ನಿನ್ನೊಳಗೆ ಸರ್ವೇಶ್ವರತ್ವವು ಸೇರೆ ।
ಬೇರುಳಿದ ಭಿಕ್ಷುಕತ್ವವು ನನಗೆ ಬಂದುದ್ಯೈ
ವೇಗದಿಂದೆತ್ತಬಿಡದು ॥

ಇಲ್ಲಿ 'ನೀನು ಸರ್ವಜ್ಞನೂ ಎಲ್ಲಕ್ಕೂ ಒಡೆಯನೂ ಇರುವಿ' ಎಂಬ ರಾಜನ ಸ್ತುತಿಯ ವ್ಯಾಜದಿಂದ "ನನ್ನ ವಿದ್ವತ್ತೆಯನ್ನೂ ದಾರಿದ್ರ್ಯವನ್ನೂ ತಿಳಿದು ಬಹು ಸಂಪತ್ತಿಯನ್ನು ಕೊಟ್ಟು ರಕ್ಷಿಸಲು ಸಮರ್ಥನಿದ್ದರೂ ನನಗೆ ಏನೂ ಕೊಡಲೊಲ್ಲಿ" ಎಂಬ ನಿಂದೆಯು ವ್ಯಕ್ತವಾಗುವದು. (ಹರಿಹರರ ಏಕವಿಗ್ರಹತ್ವವು ಪ್ರಸಿದ್ಧವಾಗಿದೆ. ಕಾರಣ ಶಿವನ ಅರ್ಧವು ವಿಷ್ಣುವಿನದಾಗಿರುವದು.)

ಇವೆಲ್ಲವು ಏಕವಿಷಯತ್ವದ ನಿಂದಾಸ್ತುತಿಯ ಉದಾಹರಣಗಳು. ಭಿನ್ನ ವಿಷಯತ್ವದ ನಿಂದೆಯಿಂದ ಸ್ತುತಿಯ ಅಭಿವ್ಯಕ್ತಿಯು ಹ್ಯಾಗಂದರೆಃ—

ಭಾಮಿನಿ ॥ ಆರು ನೀಂ? ವಾಸರನೆ! ರಾವನು ।
ಬರೆದ ಲೇಖವನೊಯ್ಯುವವನೈ ।
ಸಾರಲಂಕಾಪುರವ ದಹಿಸಿದ ಹನುಮನೆಲ್ಲಿಹನೈ? ॥
ಚೋರರಕ್ಕಸರಿಂದೆ ಕೋತಿಯು ।
ಘೋರಬಂಧವ ಪಟ್ಟತೆನ್ನುತ ।
ವಿೂರಿ ಹಳಿಯುತ ಪೊಡೆಯಲೆತ್ತಲೊ ಅಡಗಿಕೊಂಡಿಹುದ್ಯೈ॥

ಇದು ರಾಕ್ಷಸ ಹಾಗು ಅಂಗದ ಇವರ ಸಂವಾದವು. ಇಲ್ಲಿ ಹನುಮಂತನ ನಿಂದೆಯಿಂದ ಇತರ ವಾನರರ ಸ್ತುತಿಯು ಅಭಿವ್ಯಕ್ತವಾಗಿದೆ ಭಿನ್ನವಿಷಯತ್ವದ ಸ್ತುತಿಯಿಂದ ನಿಂದೆಯ ಅಭಿವ್ಯಕ್ತಿಯು ಹ್ಯಾಗಂದರೆ:—

ಭಾಮಿನಿ॥ ತಿರುತಿರುಗಿ ನೋಡದಲೆ ಮುಖವನು ।
ಬೆರಬೆರಗು ಮಾತುಗಳನಾಡದೆ ।
ಗರುವದುಕ್ತಿಯನವರುಗಳ ನೆರೆ ಕೇಳದಲೆ ನೀನು ॥
ವಿೂರದಲೆ ಕಾಲದಲಿ ಭಕ್ಷಿಪೆ ।
ನೀರತೃಣಗಳ ಶ್ರಮವದಾಗಲು ।
ಸಾರುವಿಯೊ? ನಿದ್ರಿಸಲಿದೆಲ್ಲಿಯ ತಪವು ಪೇಳೆನಗೆ ॥

ಇಲ್ಲಿ ಚಿಗರೆಯ ಸ್ತುತಿಯಿಂದ ರಾಜಸೇವೆಯಿಂದ ನಿರ್ವಿಣ್ಣನಾದ ವನ ಆತ್ಮನಿಂದೆಯು ವ್ಯಕ್ತವಾಗುವದು. ಮತ್ತೆ ಉದಾಃ—

ಭಾಮಿನಿ ॥ ಆ ವನದ ಕಮಲಗಳು ಧನ್ಯಗ ।
ಳಾವನದ ಸುಳಿಗಾಳಿ ಧನ್ಯವು ।
ದೇವರಾಮನ ಸೋಂಕುತಿರುವವು ಯಾವವು ನಿರುತಂ ॥

ಇಲ್ಲಿ 'ಕಮಲಗಳು ಧನ್ಯಗಳು' 'ಸುಳಿಗಾಳಿ ಧನ್ಯವು' ಎಂಬ ಸ್ತುತಿಯಿಂದ ನಾವು ಅಧನ್ಯರೆಂಬ ನಿಂದೆಯು ವೈಧರ್ಮ್ಯದಿಂದ ಗಮ್ಯವಾಗುವದು. ಮೇಲಿನವೆರಡು ಉದಾಹರಣಗಳು ಅಪ್ರಸ್ತುತ ಪ್ರಶಂಸೆಗಳೆಂದು ಕೆಲವರ ಮತವುಂಟು.

೨. ಬೇರೊಂದರ ಸ್ತುತಿಯಿಂದ ಇನ್ನೊಂದರ ಸ್ತುತಿಯು ವ್ಯಕ್ತವಾಗುವಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಭಾಮಿನಿ ॥ ಯಾವಶಿಖಿಪದಲಾವಕಡೆಯಲಿ ।
ಯಾವನಾಮದ ತಪವ ಮಾಡಿತು ।
ಯಾವದಿನದಿಂದೆಲ್ಲಿವರೆಗಿದು ಪೂರ್ವಜನ್ಮದಲಿ ॥
ಆವಸುಕೃತದೆ ಬಿಂಬಫಲವನು ।
ದೇವಿಯೇ ನಿನ್ನಧರದಂತಿರೆ ।
ಸೇವಿಸುವದೀ ಶುಕದ ಖಾವಕವೀಗ ಪೇಳೆನಗೆ ॥

ಅರ್ಥಃ—'ಅಧರದಂತಿರುವ ಬಿಂಬ ಫಲವನ್ನು ಈ ಗಿಳಿಯು ಮರಿಯು ಕಚ್ಚುವದು. ಇದು ಎಂಥ ಸುಕೃತ ಮಾಡಿದೆ?' ಎಂದು ವರ್ಣಿಸಲ್ಪಟ್ಟಿದೆ. ಕಾರಣ ಇಲ್ಲಿ ಗಿಳಿಯ ಮರಿಯ ಸ್ತುತಿಯಿಂದ ನಾಯಿಕೆಯ ಅಧರದ ಸೌಂದರ್ಯಾತಿಶಯದ ಸ್ತುತಿಯು ವ್ಯಕ್ತವಾಗುವದು.

೩೧. ವ್ಯಾಜನಿಂದಾಲಂಕಾರವು. (ಲಕ್ಷಣ)ಃ—ಬೇರೊಂದರ ನಿಂದೆಯಿಂದ

ಇನ್ನೊಂದರ ನಿಂದೆಯು ವ್ಯಕ್ತವಾಗುತ್ತಿದ್ದರೆ ಈ ಅಲಂಕಾರವಾಗುವದು. ಉದಾಃ—

ಕಂದ ॥ ವಿಧಿಯೆ ? ಬಹುಗರ್ಹ್ಯನಾತಂ ।
ವೊದಲೊಂದನೆ ನಿನ್ನ ಶಿರವ ಕೊಯ್ದಿಹನಾವಂ ॥

ಇಲ್ಲಿ ಹರನ ನಿಂದೆಯಿಂದ ಭಯಂಕರವಾದ ಸಂಸಾರಕ್ಕೆ ಪ್ರವರ್ತಕನಾದ ಬ್ರಹ್ಮನ ನಿಂದೆಯು ವ್ಯಕ್ತವಾಗುತ್ತದೆ. ಮತ್ತು ಉದಾ:—

ಭಾಮಿನಿ॥ ಸರಲ ಕೋಕಿಲದೊಡನೆ ಕಾಕವ ।
ನಿರಿಸಿದನೊ ಮಾವಿನಲಿ ಯಾವನು ।
ನೆರೆವಿರಂಚಿಯೆ ಬಹುಗರ್ಹ್ಯನ್ಯೆ ನೀಂ ರಟಿಸು ವೇಗದಲಿ ॥

ಇಲ್ಲಿ 'ಬ್ರಹ್ಮನ ನಿಂದೆಯಿಂದ' ಕಾಗೆಯ ನಿಂದೆಯು ವ್ಯಕ್ತವಾಗುತ್ತದೆ. ಮೇಲಿನ ಉದಾಹರಣಗಳಲ್ಲಿ ವ್ಯಾಜರೂಪವಾದ ನಿಂದೆಯಿಂದ ಅಪ್ರಸ್ತುತ ಪ್ರಶಂಸೆಯು ವ್ಯಕ್ತವಾಗುವದು. ಇದರಂತೆ ವ್ಯಾಜಸ್ತುತಿ ಮೂಲಕವಾದ ಅಪ್ರಸ್ತುತ ಪ್ರಶಂಸೆಯಾದರೂ ಇದೇ ಅಲಂಕಾರದಲ್ಲಿ ಬರುವದು. ಉದಾಃ—

ಭಾಮಿನಿ॥ ಎಣಿಸದಲೆ ಲಾವಣ್ಯದ್ರವ್ಯವ ।
ಗಣಿಸದಲೆ ಕಷ್ಟಗಳ ಜನರಲಿ ।
ರಣರಣಕವನು ನಿರ್ಮಿಸುತ ಸ್ವಚ್ಛಂದಚರರಲ್ಲಿ ॥
ಕಾಣದಲೆ ಸರಿಯಾದ ರಮಣನ ।
ಜಾಣೆ ಖೊಟ್ಟವರಾಕೆಯಾದಳು ।
ಮೇಣದಾವರ್ಥವನು ಮನದೊಳಗಿಟ್ಟು ಸೃಜಿಸಿದನು ॥

ಇಲ್ಲಿ "ಅಪ್ರಸ್ತುತವಾದ, ತರುಣಿಯನ್ನು ಮಾಡಿದವನ ನಿಂದೆಯಿಂದಲೂ, ಅವಳ ನಿಂದೆಯಿಂದಲೂ, ಅವಳ ಸೌಂದರ್ಯಾತಿಶಯವು ಪ್ರಕಟವಾಗುವದು" ಇದರಿಂದ "ಕವಿತೆಯನ್ನು ಮಾಡಿದವನ ನಿಂದೆಯಿಂದಲೂ ಆ ಕವಿತೆಯ ನಿಂದೆಯಿಂದಲೂ ಕವಿತೆಯ ಶಬ್ದಾರ್ಥಗಳ ಚಮತ್ಕಾರಾತಿಶಯವು ವ್ಯಕ್ತವಾಗುವದು. ಇದು ಕವಿಯ ವಿವಕ್ಷಿತವಾದ ಅರ್ಥವು.

೩೨. ಆಕ್ಷೇಪಾಲಂಕಾರವು. (ಲಕ್ಷಣ):— ೧. ತಾನು ಆಡಿದ್ದನ್ನು ಏನಾದರೊಂದು ನಿಮಿತ್ತದಿಂದ ನಿಷೇಧಿಸುವದರಿಂದ ಈ ಅಲಂಕಾರವಾಗುವದು. ಉದಾ:—

ಕಂದ ॥ ಇಂದುವೆ! ತೋರ್ಕೈ ರೂಪವ।
ನಿಂದೆಮಗಥವಾ ಸುತನ್ವಿವದನವದಿಲ್ಲೀಂ ॥

ಇಲ್ಲಿ ಮೊದಲು 'ಚಂದ್ರದರ್ಶನವನ್ನು ಪ್ರಾರ್ಥಿಸಿ' ಆ ಮೇಲೆ 'ಅಥವಾ' ಮೊದಲಾದ ಪದಗಳಿಂದ 'ಪ್ರಿಯೆಳ ಮುಖವು ಇಲ್ಲೀನು?' ಎಂದು ನಿಷೇಧಿಸಿದ್ದು ಆಕ್ಷೇಪವು. ಮತ್ತೆ ಉದಾಃ—

ಭಾಮಿನಿ ॥ ಸಾಹಿತ್ಯದಂಬುವಿನ ನಿಕರವ ।
ನಾಹತ್ಯ ತೆಗೆದಿರುವ ಕರ್ಣಕೆ।
ಮೋಹದವ್ಯತವನ್ನು ರಕ್ಷಿಸಿರಯ್ಯ ತೀವ್ರದಲಿ ॥
ಆಹವದಲಾ ದೈತ್ಯರಂತಿರೆ।
ದೇಹದೆಚ್ಚರವಿಲ್ಲದೊಯ್ಯಲು।
ಸಾಹಸದೆ ಕಾವ್ಯಾರ್ಥಚೋರರು ಬರದಲ್ಕೈದುವರೈ ॥
ಇಲ್ಲವಥವಾ ಕಡಿಮೆತನವದು।
ಎಲ್ಲಿಯುಂ ಕವಿಗಳಿಗೆ ಜಗದಲಿ।
ಎಲ್ಲರೊಯ್ಯಲದೆಲ್ಲವನು ಮನದಂತೆ ತಮತಮಗೆ ॥
ಸಲ್ಲಲಿತ ರತ್ನಗಳ ರಾಶಿಯ।
ಪೊಲ್ಲಮಾನಿಸರೆಷ್ಟು ವೈದರ।
ದಿಲ್ಲಿವರೆಗದು ರತ್ನದಾಕರವೆನಿಪುದರ್ಣವವು ॥

ಇಲ್ಲಿ ಮೊದಲಿನ ಪದ್ಯದಲ್ಲಿ 'ಕಾವ್ಯಾರ್ಥ ಚೋರರಿಂದ ಅಮೃತವನ್ನು ರಕ್ಷಿಸಿರಿ' ಎಂದು ಹೇಳಿ ಎರಡನೇ ಪದ್ಯದಲ್ಲಿ 'ಸಮುದ್ರದಲ್ಲಿರುವ ರತ್ನಗಳಂತೆ ಅದರ ಅಕ್ಷಯತ್ವವನ್ನು ಚಿಂತಿಸಿ' ನಿಷೇಧಿಸಿದ್ದು ಆಕ್ಷೇಪವು.

೨. ಯಾವ ನಿಷೇಧವು ಬಾಧಿತವಾಗಿ ಯಾವದಾದರೊಂದು ವಿಶೇಷಾರ್ಥವನ್ನು ಆಕ್ಷೇಪಿಸುವದೋ ಅಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ನಾನಲ್ಲ ದೂತಿಯಾಕಾ ।
ಲಾನಲಸಮತಾಪವಯ್ಯ! ಅವಳತನುವಿನ ॥

ಅರ್ಥಃ—'ನಾನು ದೂತಿಯಲ್ಲ. ಅವಳ ಶರೀರದ ತಾಪವೇ ಪ್ರತ್ಯಕ್ಷವಾಗಿ ಬಂದಿರುವೆನು' ಎಂದು ಹೇಳಿದೆ. ಇಲ್ಲಿ 'ದೂತಿಯಲ್ಲ' ಎಂಬ ನಿಷೇಧವಾಕ್ಯವು ನಾಯಕನ ಸಂಘಟನಕ್ಕೆ ಯೋಗ್ಯವಾದ ದೂತಿಯ ಕಪಟ

ವಚನವು. ಇದು 'ಈಗಲೇ ನೀನು ಬಂದು ನಾಯಿಕೆಯನ್ನು ಬದುಕಿಸತಕ್ಕದ್ದು' ಎಂಬ ವಿಶೇಷಾರ್ಥವನ್ನು ಆಕ್ಷೇಪಿಸುವದು. ಮತ್ತೆ ಉದಾಃ—

ಭಾ.॥ ಭೂವರರ ಸಂದೇಶಗಳನುರೆ ।
ನಾವಲ್ಲವೊಯ್ಯುವರು ರಾಜರ ।
ದೇವಕಾಣರು ಜಗದಬಾಂಧವ ನಿನಗೆ ಶತ್ರುಗಳು ॥

ಇಲ್ಲಿ 'ಸಂದೇಶಗಳನು ನಾವಲ್ಲವೊಯ್ಯುವರು' ಎಂಬ ನಿಷೇಧವಾಕ್ಯವು ಸಂಧಿಕಾಲದಲ್ಲಿ ಯೋಗ್ಯವಾದ ದೂತರ ಕಪಟವಚನವು. ಇದು "ಸರ್ವ ಜಗತ್ತಿನ ಬಾಂಧವನಾದ ನಿನಗೆ ಶತ್ರುಗಳಾರು? ಕಾರಣ ಎಲ್ಲರನ್ನು ನೀನು ಭೃತ್ಯಭಾವದಿಂದ ರಕ್ಷಿಸತಕ್ಕದ್ದು." ಎಂಬ ವಿಶೇಷಾರ್ಥವನ್ನು ಆಕ್ಷೇಪಿಸುವದು.

೩. ನಿಷೇಧದಿಂದ ಬಾಧಿತವಾದ ವಿಧಿಯು ವ್ಯಕ್ತವಾದಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಕಂದ॥ ಪೋಗು ಸಖ ಪೋಗುತಿದ್ದರೆ ।
ಹ್ಯಾಗಾದರು ನಾನು ಬರುವೆನಾಯೋನಿಯಲಿ ॥

ಇಲ್ಲಿ 'ಹೋಗು' ಎಂಬ ವಿಧಿಯು "ಪ್ರಿಯನು ಜನ್ಮಿಸಿದಲ್ಲಿ ಆತ್ಮಜನ್ಮ ಪ್ರಾರ್ಥನೆಯಿಂದ ಮರಣವನ್ನು ಸೂಚಿಸುವ" ನಿಷೇಧದಿಂದ ಬಾಧಿತವಾಗಿದೆ. ಮತ್ತೆ ಉದಾಃ—

ಭಾ.॥ ಎನಗೆ ನಿನ್ನಯ ಗಮನವದು ಬಹು ।
ದಿನದ ತಾಪವ ಮಾಡದೈ ಸಖ ।
ನಿನಗೆ ಶಂಕೆಯದೇನು? ಜವದಿಂ ಪೋಗುತಿರೆ ಪೋಗೈ ॥

ಇಲ್ಲಿ "ನಿನ್ನ ಗಮನವು ಎನಗೆ ಬಹುದಿನದ ತಾಪವ ಮಾಡದು" ಎಂಬ ವಾಕ್ಯದಿಂದ ಸೂಚಿತವಾಗುವ ಆತ್ಮಮರಣವು 'ಪೋಗು' ಎಂಬ ವಿಧಿಯನ್ನು ನಿಷೇಧಿಸುವದು.

೩೩. ವಿರೋಧಾಭಾಸಾಲಂಕಾರವು. (ಲಕ್ಷಣ)ಃ—ವಿರೋಧದ ಆಭಾಸವಾಗಲು ಈ ಅಲಂಕಾರವಾಗುವದು. ಉದಾಃ—

ಕಂದ॥ ಹಾರಗಳಿಲ್ಲದೆ ತನ್ವಿಯೆ ।
ಹಾರಿಗಳಾಗಿರುವವೈದೆ ವಕ್ಷೋಜಗಳು ॥

ಅರ್ಥಃ—ತರುಣಿಯೇ, ನಿನ್ನ ಕುಚಗಳು ಹಾರಗಳಿಲ್ಲದೆ ಹಾರವುಳ

ವುಗಳಾಗಿವೆ. ೨. ಹಾರಗಳು ಇಲ್ಲದೆ ಇದ್ದರೂ ಮನೋಹರವಾಗಿ ಕಾಣುವವು. ಇದು ಶ್ಲೇಷಮೂಲಕವಾದ ವಿರೋಧಾಭಾಸವು. ಮತ್ತೆ ಉದಾಃ—

ಭಾ.॥ ವೈರಿರಾಜರ ತೆರದೆ ಭಯದಿಂ ।
ವೈರಧರ್ಮಿಗಳ್ಮೈದೆ ತಮ್ಮಯ ।
ವೈರಧರ್ಮವ ಮರೆತು ಬಿಟ್ಟುದರಿಂದ ನೈಷಧನೇ ॥
ವೀರಮಿತ್ರಾಮಿತ್ರರನು ನೀ ।
ಘೋರತರದೋಜಸದೆ ಗೆಲ್ಲುವಿ ।
ಚಾರರಕ್ಷನು ನೀನು ಬಹಳ ವಿಚಾರರಕ್ಷನೆಲೈ ॥

ಇಲ್ಲಿ 'ವೈರಿರಾಜರತೆರದೆ' ಎಂದು ಉತ್ಪ್ರೇಕ್ಷಿತವಾದ ವಿರೋಧಾಭಾಸವು ವರ್ಣಿತವಾಗಿದೆ. ಇಲ್ಲಿ 'ಪರಾಕ್ರಮದಿಂದ ಮಿತ್ರರನ್ನೂ ಶತ್ರುಗಳನ್ನೂ ಗೆಲ್ಲುವಿ' ಎಂಬದು ವಿರೋಧವು. 'ತೇಜಸ್ಸಿನಿಂದ ಸೂರ್ಯನನ್ನೂ ಪರಾಕ್ರಮದಿಂದ ಶತ್ರುಗಳನ್ನೂ ಗೆಲ್ಲುವಿ' ಎಂದು ಯೋಚಿಸುವದರಿಂದ ವಿರೋಧ ಪರಿಹಾರವು. 'ಚಾರ + ರಕ್ಷನು' ಎಂಬದಕ್ಕೆ 'ವಿಚಾರ + ರಕ್ಷನು' ಎಂಬದು ವಿರೋಧವು. ಇಲ್ಲಿ 'ವಿಚಾರ' ಶಬ್ದಕ್ಕೆ ವಿವೇಕವೆಂಬ ಅರ್ಥವನ್ನು ಯೋಚಿಸಿದರೆ ವಿರೋಧಪರಿಹಾರವಾಗುವದು. (ಚಾರಾಃ ಏವ ರಕ್ಷಾಃ ಯಸ್ಯ = ಸೇವಕರೇ ರಕ್ಷಕರಾಗಿದ್ದವನು. ವಿಗತಾಃ ಚಾರಾಃ ಏವ ರಕ್ಷಾಃ ಯಸ್ಯ = ಗಮಿಸಿದ ಸೇವಕರೇ ರಕ್ಷಕರಾಗಿವುಳ್ಳವನು. ಇದು ಲೋಕವಿರುದ್ಧವಾದದ್ದು. ವಿಚಾರ ಏವ ರಕ್ಷಾಯಸ್ಯ = ವಿವೇಕವೆ ಸಂರಕ್ಷಕವಾಗಿದ್ದವನು.)

೩೪. ವಿಭಾವನಾಲಂಕಾರವು. (ಲಕ್ಷಣ):— ೧. ಪ್ರಸಿದ್ಧವಾದ ಕಾರಣವು ಇಲ್ಲದೆ ಇದ್ದರೂ ಕಾರ್ಯವು ಆಯಿತು, ಎಂದು ಹೇಳುವದರಿಂದ ಈ ಅಲಂಕಾರವಾಗುವದು. ಉದಾಃ—

ಕಂದ॥ ಲಾಕ್ಷಾರಸವನು ಲೇಪಿಸ ।
ದಕ್ಷಿಗೆ ತೋರುವವು ಪದಗಳತಿರಕ್ತತೆಯಿಂ ॥

ಇಲ್ಲಿ 'ಕೆಂಪಾಗಿ ತೋರುವದಕ್ಕೆ ಅರಗಿನರಸವನ್ನು ಹಚ್ಚಿಕೊಳ್ಳುವದೇಕಾರಣವು' ಅದು ಇಲ್ಲದೆ ಕೆಂಪಾಗಿವೆ ಎಂದು ಹೇಳಿದೆ. (ಸ್ವಾಭಾವಿಕತ್ವದಿಂದ ವಿರೋಧ ಪರಿಹಾರವು) ಮತ್ತೆ ಉದಾಃ—

ಭಾ.॥ ಕುಡಿಯೆನುತ್ಕಟವಾದ ಹಂಸದೆ ।
ಹಿಡಿದು ಕೋಧಿಸದ ಜಡನೀರಿಂ ।

ಹೊಡೆಯದಲೆ* ವಿಮಲಾಂಬರದೆ ತೋರುವದು ಜಗವೀಗ ॥

ಪಾನಾದಿಗಳನ್ನು ಮಾಡದೆ ಮತ್ತವಾಗಿದ್ದ ಹಂಸಗಳಿಂದಲೂ ಮನೆಗೆ ತಂದು ವಸ್ತ್ರಗಾಲನಾದಿಗಳಿಂದ ಶೋಧಿಸದಲೆ ಹಗುರಾಗಿದ್ದ ನೀರಿನಿಂದಲೂ ಕಸವೊದಲಾದವುಗಳನ್ನು ಝಾಡಿಸದಲೆ ನಿರ್ಮಲವಾಗಿದ್ದ ಆಕಾಶದಿಂದಲೂ ಜಗವು ಒಪ್ಪುತ್ತಿರುವದು. ಇಲ್ಲಿ ಪಾನಾದಿ ಪ್ರಸಿದ್ಧ ಹೇತುಗಳಿಲ್ಲದಲೆ ಮತ್ತತ್ವಾದಿ ಕಾರ್ಯಗಳು ಸಂಭವಿಸಿದವೆಂದು ಹೇಳಿದೆ. ವೈಧರ್ಮ್ಯವಾನವಾದ ಶರತ್ಕಾಲದಿಂದ ವಿರೋಧಪರಿಹಾರವು. ಮತ್ತು ಉದಾಃ—

ಭಾ.॥ ವರತನುವಿ ನೀ ವಿಪುಲಕಬರೀ ।
ಭರಕೆ ಬಹು ತೋಷದಲಿ ವಿಧವಿಧ ।
ಸರಸಪೂದೊಡವೆಗಳ ಮಾಡಲು ಬಕುಲ†ಲತೆಯಿಂದ ॥
ನೆರೆಕುಸುಮಗಳನೆಲ್ಲ ತೆಗೆದಿರೆ ।
ವರಭೃಮರವ್ಯಾಪ್ತಿಯಲಿ ತೋರ್ಪುದು ।
ಅರಸ! ನಿನ್ನಯ ಸುರಭಿನಖಗಳ ವರಕರಗಳಿಂದ ॥

ಅರ್ಥ—' ಲತೆಯು ಕುಸುಮಗಳಲ್ಲದೆ ಭೃಮರವ್ಯಾಪ್ತಿಯಿಂದ ತೋರುವದು ' ಎಂದು ಹೇಳಿದೆ. ಇಲ್ಲಿ ' ಸುರಭಿನಖಗಳ ಕರಗಳ ಸಂಸರ್ಗರೂಪವಾದ ಹೇತುವೇ '—ಭೃಮರವ್ಯಾಪ್ತಿಗೆ ಕಾರಣವೆಂದು ತಿಳಿದು ವಿರೋಧಪರಿಹಾರವನ್ನು ಊಹಿಸತಕ್ಕದ್ದು.

೨. ಅಸಮಗ್ರವಾದ ಹೇತುಗಳಿದ್ದರೂ ಕಾರ್ಯವು ಆಯಿತು, ಎಂದ ಹೇಳುವದರಿಂದಲೂ ಈ ಅಲಂಕಾರವಾಗುವದು. ಉದಾ:—

ಕಂದ ॥ ಗತಿಗೆಡಿಸುವ ನೀ ಜಗವನು ।
ಅತಿತೀಕ್ಷ್ಣವು ಕಠಿಣವಿಲ್ಲದಸ್ತ್ರದೆ ಮದನಂ ॥

ಇಲ್ಲಿ ಜಗವನ್ನು ಗತಿಗೆಡಿಸುವದಕ್ಕೆ ಬೇಕಾಗುವ ಬಹಳೇ ತೀಕ್ಷ್ಣ ಹಾಗು ಕಠಿಣಗಳಾದ ಆಯುಧಗಳು ಇಲ್ಲದೆ ಇರುವದೇ ಹೇತುವಿನ ಅಸಮಗ್ರತ್ವವು. ಮತ್ತೆ ಉದಾ:—

---

* ಪಾಠಾಂತರ—ಝಾಡಿಸದೆ.

† ಪಾಠಾಂತರ—ಕುಟಜ.

ಭಾ ॥ ಉದ್ಯಾನವೊರುತದೆ ಭರದಿಂ।
ಚಂಪಕ ಚೂತಲತೆಗಳ।
ಮುದ್ದು ರೇಣುಗಳೈದೆ ಪಾಂಥರ ಲೋಚನೆಂಗಳನು ॥
ಮುದ್ದಿಸದೆ ವರತನುವನುಂ ಬಹ।
ಳುದ್ಧತಾಶ್ರುಗಳನ್ನು ಮಾಳ್ಪವು।
ಬುದ್ಧಿವಂತನೆ? ನೋಡಿದ್ಯೆ ಕೌತುಕವನಕ್ಷಿಯಲಿ ॥

ಅರ್ಥ—' ಪಾಂಥರ ಲೋಚನಂಗಳನು ವರತನುವನುಂ ಮುದ್ದಿಸದೆ ರೇಣುಗಳು ಉದ್ಧತಾಶ್ರುಗಳನ್ನು ಮಾಳ್ಪವು'; ಇಲ್ಲಿ ' ಅಶ್ರುಗಳು ಬರುವ ದಕ್ಕೆ ಸ್ಪರ್ಶನಕ್ರಿಯಾವೈಕಲ್ಯವೇ ಹೇತುವಿನ ಅಸಮಗ್ರತ್ವವು. ಇದು ವಿಶೇ ಷೋಕ್ತಿಯೆಂದು ಕೆಲವರ ಮತವುಂಟು.

೩. ಪ್ರತಿಬಂಧಕವಿದ್ದರೂ ಕಾರ್ಯೋತ್ಪತ್ತಿಯಾಯಿತೆಂದು ಹೇಳಿದ ಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಕಂದ॥ ದಶಿಸುವದು ನರೇಂದ್ರರನುರೆ।
ಅಸಿಭುಜಗವು ನೃಪನೆ ನಿನ್ನ ಬಲಭುಜದೆಡೆಯ ॥

ಅರ್ಥ—' ಅರಸನೇ ನಿನ್ನ ಕತ್ತಿಯೆಂಬ ಸರ್ಪವು ವಿಷವೈದ್ಯರನ್ನೇ ಕಡಿಯುವದು ' ಇಲ್ಲಿ ನರೇಂದ್ರರು (ಸರ್ಪದಂಶಗಳನ್ನು ಪ್ರತಿಬಂಧಿಸುವ ಮಂತ್ರೌಷಧಿಶಾಲಿಗಳಾದ ವೈದ್ಯರು) ಎಂಬ ಶ್ಲೇಷಪದದಿಂದ ಕಾರ್ಯೋತ್ಪ ತ್ತಿಗೆ ಬಲವಾದ ಪ್ರತಿಬಂಧಕವಾಗಿದೆ. ಮತ್ತೆ ಉದಾಃ—

ಭಾ॥ ಮಿತ್ರನಿನ್ನ ಪ್ರತಾಪಸೂರ್ಯನು।
ಚಿತ್ರದಲಿ ಬೆಳಗುವನು ಜಗದಲಿ।
ಛತ್ರಿಗಳ ಪೀಡಿಸುತ ಸಲೆ ನಿಶ್ಛತ್ರಿಗಳ ಬಿಟ್ಟು ॥

ಸೂರ್ಯನ ಬಿಸಿಲಿನ ಪೀಡೆಗೆ ಛತ್ರವು ಬಲವಾದ ಪ್ರತಿಬಂಧಕವಾಗಿ ರಲು ಇಲ್ಲಿ ' ಛತ್ರಿಗಳ ಪೀಡಿಸುತ ' ಎಂದು ಕಾರ್ಯೋತ್ಪತ್ತಿಯು ಹೇಳ ಲ್ಪಟ್ಟದೆ.

೪. ಕಾರಣವಿಲ್ಲದೆ ಕಾರ್ಯವು ಆಯಿತು, ಎಂದು ಹೇಳುವಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಕಂದ॥ ಶಂಖದೆ ವೀಣಾಧ್ವನಿ ನಿಃ।
ಶಂಕದೆ ಪುಟ್ಟುವದಿದೇನು? ಪಿರಿದದ್ಭುತವೋ? ॥

ಇಲ್ಲಿ ' ಶಂಖದಿಂದ ವೀಣಾಧ್ವನಿಯು ಹೊರಡುವದು ' ಎಂದು ಹೇಳುವದರಿಂದ ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾದಂತಾಯಿತು. (ಶಂಖಶಬ್ದದಿಂದ ತಂಬೂರಿಯ ನಾದದಂತೆ ಸ್ವರವುಳ್ಳ ಮನೋಹರವಾದ ಸ್ತ್ರೀಯ ಕುತ್ತಿಗೆಯೆಂಬ ಅರ್ಥವು ಗೃಹೀತವಾಗುವದು). ಮತ್ತೆ ಉದಾಃ—

ಭಾ॥ ಹೊರಡುತಿರುವದು ತಿಲಕಪ್ರಸ್ಪದೆ ।
ಪರಮಸೌರಭವಾಯುವಿಂದೀ ।
ವರಯುಗದೆ ಬರುತಿರುವವ್ಯೆದೆ ಶಿಲೀಮುಖಗಳೀಗ ॥

ತಿಲಪುಷ್ಪಕ್ಕೆ ವಾಸನೆಯಿಲ್ಲದಿರುವದೂ ನೈದಿಲೆಗಳಿಗೂ ಭ್ರಮರಗಳಿಗೂ ವೈರತ್ವವಿರುವದೂ ಲೋಕಪ್ರಸಿದ್ಧವು. ಆದರೆ ಇಲ್ಲಿ ' ತಿಲಪುಷ್ಪದಿಂದ ಸುಗಂಧವಾದ ವಾಯುವೂ ನೀಲೋತ್ಪಲಗಳಿಂದ ಭ್ರಮರಗಳೂ ಹೊರಡುತ್ತಿರುವವು, ಎಂದು ಹೇಳಿದ್ದರಿಂದ ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾಯಿತು. (ತಿಲಪುಷ್ಪ ಇಂದೀವರ ಶಬ್ದಗಳಿಂದ ಮನೋಹರಳಾದ ಸ್ತ್ರೀಯ ಮೂಗು-ಕಣ್ಣುಗಳೆಂಬ ಅರ್ಥವು ಗೃಹೀತವಾಗುವದು. ಶಿಲೀಮುಖ = ಭ್ರಮರ, ಕಟಾಕ್ಷಬಾಣ).

೫. ಯಾವದೊಂದರಿಂದ ಆಗತಕ್ಕ ಕಾರ್ಯಕ್ಕೆ ವಿರುದ್ಧವಾದ ಕಾರ್ಯವು ಆಯಿತು, ಎಂದು ಹೇಳಿದಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಕಂದ ॥ ಶೀತಾಂಶುಕರಗಳಿವಳಿಗೆ ।
ಈ ತಾಪವ ಕೊಡುವವಕಟ? ಬಹು ಕಷ್ಟವಿದ್ಯೆ ॥

ಇಲ್ಲಿ ' ತಾಪವನ್ನು ಕಳೆಯುವ ಚಂದ್ರನ ಕಿರಣಗಳಿಂದ ಅದಕ್ಕೆ ವಿರುದ್ಧವಾಗಿ ತಾಪಕೊಡುವ ಕಾರ್ಯವು ಉಕ್ತವಾಗಿದೆ. (ವಿರಹಿಣಿಗೆ ಚಂದ್ರನ ಕಿರಣಗಳು ತಾಪಕೊಡುವದು ಸ್ವಾಭಾವಿಕವು). ಮತ್ತೆ ಉದಾಃ—

ಭಾ. ॥ ಉದಯವೆದೋರೆ ಕುಮಾರಹಂಸನು ।
ಮುದವದಪ್ಪುದು ಕುವಲಯಕೆ ಕ್ಕೈ ।
ಪದುಮಗಳು ಮುಚ್ಚುವವು ವೈರಿಗಳಾದ ಭೂಪರವು ॥

ಅರ್ಥ—' ಕುಮಾರ ಸೂರ್ಯನು ಉದಯವಾಗಲು ನೈದಿಲೆಗಳು ಅರಳುವವು. ಕಮಲಗಳು ಮುಚ್ಚುವವು ' ಎಂದು ಹೇಳಿದೆ. ಇಲ್ಲಿ ಸೂರ್ಯನು ಉದಯವಾಗಲು ಆಗತಕ್ಕ ಕಾರ್ಯದ ವಿರುದ್ಧ ಕಾರ್ಯವು ಉಕ್ತವಾ

ಗಿದೆ. (ಇದು ಯಾವನೋ ಒಬ್ಬ ರಾಜಕುಮಾರನ ಪ್ರತಾಪದ ವರ್ಣನೆಯು. ಇಲ್ಲಿ ' ಕುಮಾರರೂಪದ ಸೂರ್ಯನು ಉದಯಿಸಲು ಭೂಮಂಡಲಕ್ಕೆ ಆನಂದವಾಗುವದು. ವೈರಿರಾಜರು ಕೈಜೋಡಿಸುವರು ' ಎಂಬರ್ಥವಿದೆ. ಕು + ವಲಯ = ಭೂಮಂಡಲ; ಹಂಸ = ಸೂರ್ಯ). ಮತ್ತೆ ಉದಾಃ—

ಭಾ. ॥ ಶ್ರುತಿಗಳಿಗೆ ಪ್ರಿಯವಾದ ನೇತ್ರವೆ ।
ಮತವಿದಲ್ಲವು ನಿನಗೆ ಜನರನು ।
ಹತಿಪುದೈ ಕುಚಯುಗವನುಚಿತವು ಜನರು ಲೋಕದಲಿ ॥

ಅರ್ಥ—' ವೇದಗಳನ್ನು ತಿಳಿದಿರುವ ನೇತ್ರವೆ? ನೀನು ಜನರನ್ನು ಬಾಧೆಪಡಿಸುವದು ಯೋಗ್ಯವಲ್ಲ ' ಎಂದು ಹೇಳಿದೆ. ಇಲ್ಲಿ ವೇದಗಳನ್ನು ತಿಳಿದವನಿಂದ ಅಗತಕ್ಕಕಾರ್ಯದ ವಿರುದ್ಧಕಾರ್ಯವು ಆಗುವದು, ಎಂದು ಹೇಳಲ್ಪಟ್ಟದೆ. ಮೊದಲಿನವೆರಡು ಉದಾಹರಣಗಳಲ್ಲಿ ಸ್ವಾಭಾವಿಕವಾಗಿ ಕಾರಣದ ವಿರುದ್ಧಕಾರ್ಯವು ಹೇಳಲ್ಪಟ್ಟದೆ. ಆದರೆ ಇದು ' ಶ್ರುತಿಗಳಿಗೆ ಪ್ರಿಯವಾದ ' ಎಂಬ ಆಗಂತುಕ ವಿಶೇಷಣದಿಂದ ಬೇರೆ ತರದ್ದಾಗಿದೆ. (ಶ್ರುತಿಗಳಿಗೆ ಪ್ರಿಯವಾದ = ಕವಿಯವರೆಗೂ ಉದ್ದವಾಗಿ ಇರುವ ಕಣ್ಣುಗಳು, ಅಂದರೆ ಸ್ತ್ರೀಯದೀರ್ಘವಾದ ನೇತ್ರಗಳು ತಮ್ಮ ಚಲ್ವಿಕೆಯಿಂದ ಜನರನ್ನು ಬಾಧಿಸುವದು ಸ್ವಾಭಾವಿಕವಾಗಿದೆ. ಶ್ರುತಿ = ವೇದ, ಕಿವಿ.)

೬. ಕಾರ್ಯದಿಂದ ಕಾರಣೋತ್ಪತ್ತಿಯು ಆಯಿತು, ಎಂದು ಹೇಳಿದಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಕಂದ॥ ನಿನ್ನ ಕರಕಲ್ಪತರುವಿನ ।
ಸನ್ನುತ ಯಶವೀಗ ಪಯೋದರಾಶಿಯೆದಾಯ್ತೈ॥

ಅರ್ಥ— ' ಕರಕಲ್ಪತರುವಿನ ಯಶವು ಪಯೋದರಾಶಿಯಾಯಿತು ' ಅಂದರೆ ಸಮುದ್ರವಾಯಿತೆಂಬರ್ಥವು. ಕಲ್ಪವೃಕ್ಷೋತ್ಪತ್ತಿಕಾರ್ಯಕ್ಕೆ ಸಮುದ್ರವೇಕಾರಣವು. ಆದರೆ ಇಲ್ಲಿ ' ಕಲ್ಪತರುವಿನಿಂದ ಸಮುದ್ರೋತ್ಪತ್ತಿಯು ' ಹೇಳಲ್ಪಟ್ಟದೆ. ಆದ್ದರಿಂದ ಕಾರ್ಯದಿಂದ ಕಾರಣೋತ್ಪತ್ತಿಯಾದಂತಾಯಿತು. (ಕರವೇ ದಾತೃತ್ವಗುಣದಿಂದ ಕಲ್ಪತರುವಿಗೆ ಸಮಾನವಾಗಿದೆ. ಇವರ ಕೀರ್ತಿಯು ಕ್ಷೀರಸಾಗರವಾಗಿದೆ, ಎಂಬದು ಸ್ವಾಭಾವಿಕವು. ಕವಿಮತದಲ್ಲಿ ಕೀರ್ತಿಯು ಬಿಳುಪಾಗಿರುವದು. ಪಯ = ನೀರು; ಹಾಲು). ಮತ್ತೆ ಉದಾ:—

ಭಾ. ॥ ಲತೆಯು ಗಿರಿಯಲಿ ಜನಿಪುದುಚಿತವು ।
ಪಿತನೆ? ಗಿರಿಯೆದು ಲತೆಯಲಾಗದು ।
ಸುತನೆ? ವಿಪರೀತವನು ನೋಡೈ ಮನವು ಬಂದಂತೆ ॥
ಕ್ಷಿತಿಯೊಳಗಿನೀ ಸಕಲರಿಂ ಮಿಗೆ ।
ನುತಿಪ ಗಿರಿಗಳವೆರಡು ಕನಕದ ।
ಲತೆಯೊಳಗೆ ಪುಟ್ಟಿಹವು ನೆಮಿಸದಲದದ ಭಾಗವನು ॥

ಇಲ್ಲಿ 'ಕನಕದ ಲತೆಯೊಳಗೆ ಅದನ್ನು ಬೊಗ್ಗಿಸದೆ ಎರಡು ಗಿರಿಗಳು ಹುಟ್ಟಿವೆ' ಎಂದು ಹೇಳಿದೆ. ಲತೆಯ ಉತ್ಪತ್ತಿಕಾರ್ಯಕ್ಕೆ ಗಿರಿಯು ಕಾರಣವು. ಆದರೆ ಇಲ್ಲಿ 'ಲತೆಯಲ್ಲಿ ಗಿರಿಯ ಉತ್ಪತ್ತಿಯು' ಹೇಳಲ್ಪಟ್ಟಿದೆ. ಆದ್ದರಿಂದ ಕಾರ್ಯದಿಂದ ಕಾರಣೋತ್ಪತ್ತಿಯಾದಂತಾಯಿತು. ಕನಕ ಲತಾ ಶಬ್ದದಿಂದ ಭಂಗಾರದ ಬಳ್ಳಿಯಂತೆ ಮನೋಹರಳಾದ ಸ್ತ್ರೀ ಎಂಬ ಅರ್ಥವು ಗೃಹೀತವಾಗುವದು.

೩೫. ವಿಶೇಷೋಕ್ತ್ಯಲಂಕಾರವು. (ಲಕ್ಷಣ):— ಅನೇಕ ಕಾರಣಗಳಿದ್ದರೂ ಕಾರ್ಯವು ಆಗಲಿಲ್ಲವೆಂದು ಹೇಳಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ಜ್ವಲಿಸುತ್ತಿರೆ ಸ್ಮರದೀಪವು ।
ಸಲೆ ಕ್ಷಯಿಸದೆ ಸ್ನೇಹವಿರುವದೆನ್ನಯ ಮನದೊಳ್ ॥

ಇಲ್ಲಿ 'ಸ್ನೇಹವು ಕ್ಷಯಿಸಲಿಕ್ಕೆ ಕಾರಣವಾದ ದೀಪವು ಉರಿಯುತ್ತಿದ್ದರೂ 'ಸ್ನೇಹವು ಕ್ಷಯಿಸದೆ ಇರುವದು' ಎಂದು ಹೇಳಿದ್ದರಿಂದ ಕಾರಣವಿದ್ದರೂ ಕಾರ್ಯವು ಆಗಲಿಲ್ಲವೆಂದು ಹೇಳಿದಂತಾಯಿತು. (ಕಾಮನು ಚಿತ್ತದಲ್ಲಿರಲು ಪ್ರೀತಿಯು ಕಡಿಮೆಯಾಗದೆ ಇರುವದು ಸ್ವಾಭಾವಿಕವು. ಸ್ನೇಹ=ಎಣ್ಣೆ, ಪ್ರೀತಿ; ಸ್ಮರದೀಪ=ಮನ್ಮಥರೂಪವಾದ ದೀಪ). ಮತ್ತು ಉದಾ:—

ಭಾ.॥ ರಾಗಿಯಾಗಿರೆ ದಿನವು ಸಂಧ್ಯೆಯು ।
ಸಾಗಿ ತಾನುರೆ ಮುಂದೆ ಬರುತಿರೆ ।
ಲಾಗದಲೆ ಸಂಗವವು ಪೋದುದು ದೈವಗತಿಯಿಂದ ॥

ಅರ್ಥ:—'ಸಂಧ್ಯೆಯೆಂಬ ಸ್ತ್ರೀಯಳು ಅನುರಾಗವುಳ್ಳವಳಾಗಿರಲು ದಿವಸವು ಚಾಕರನಂತೆ ಮುಂದೆ ಹೋಗುತ್ತಿರಲು ದೈವಗತಿಯಿಂದ ಸಂಗ

ವುವು ಆಗದಲೆ ಹೋಯಿತು, ಎಂದು ಹೇಳಿದೆ. ಇಲ್ಲಿ ‘ಅನುರಾಗ ಮೊದಲಾದ ಕಾರಣಗಳಿದ್ದರೂ ಕಾರ್ಯೋತ್ಪತ್ತಿಯಾಗಲಿಲ್ಲ. ಮೊದಲಿನ ಉದಾಹರಣೆಯಲ್ಲಿ ಕಾರಣವು ಹೇಳಲ್ಪಡಲಿಲ್ಲ. ಆದರೆ ಇಲ್ಲಿ ‘ದೈವಗತಿಯಿಂದ’ ಎಂಬ ಕಾರಣವು ಹೇಳಲ್ಪಟ್ಟಿದೆ. ಕಾರಣ ಅದಕ್ಕಿಂತ ಇದು ಬೇರೆ ತರದ್ದಾಗಿದೆ.

೩೬. ಅಸಂಭವಾಲಂಕಾರವು. (ಲಕ್ಷಣ):—‘ಯಾವದೊಂದು ಪದಾರ್ಥವು ಹುಟ್ಟುವದು ಅಸಂಭವವು’ ಎಂದು ಹೇಳಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ಯಾರರಿದರ್ಗೋಪನ ಮಗ।
ಮೊರಿದ ಶೈಲವನು ಕಿತ್ತಿ ಪಿಡಿಯುವನೆಂದು॥

ಇಲ್ಲಿ ‘ಗೋಪನ ಮಗನು ಪರ್ವತವನ್ನು ಕಿತ್ತಿ ಹಿಡಿಯುವನೆಂದು ಆರು ತಿಳಿದರು?’ ಎಂದು ಹೇಳಿದೆ. ಇದರಿಂದ ‘ಶೈಲವನ್ನು ಕಿತ್ತುವಂಥವನು (ಕೃಷ್ಣ) ಹುಟ್ಟುವ’ ಅಸಂಭವತ್ವವು ವ್ಯಕ್ತವಾಗುವದು. ಮತ್ತೆ ಉದಾಃ—

ಭಾ॥ ಕೆಲರಿದನು ನೀರುಗಳ ನಿಲಯವ।
ಕೆಲರಿದನು ರತ್ನಗಳ ಖನಿಯೆನು।
ಸಲೆ ತಿಳಿದು ಶರಧಿಯೊಳಗಿದ್ದರು ಲೋಲತೃಷ್ಣೆಯಲಿ॥
ಚಲಚಲಿಪ ತಿಮಿಮಕರಸಂಘದ।
ಜಲಧಿಯನು ಮುನಿಯೊಂದೆ ಚುಲಕದೆ।
ಎಲೆ, ಕುಡಿವನೆಂದಾರು ತಿಳಿದರು? ಹೇಳು ವೇಗದಲಿ॥

ಇಲ್ಲಿ ‘ಸಮುದ್ರವನ್ನು ಕುಡಿಯುವಂಥವನು (ಅಗಸ್ತ್ಯ) ಹುಟ್ಟುವ ಅಸಂಭಾವ್ಯತ್ವವು ವರ್ಣಿತವಾಗಿದೆ.

೩೭. ಅಸಂಗತ್ಯಲಂಕಾರವು. (ಲಕ್ಷಣ):—ಹೇತುವು ಒತ್ತಟ್ಟಿಗಿರಲು ಬೇರೊತ್ತಟ್ಟಿಗೆ ಕಾರ್ಯವಾಯಿತೆಂದು ಹೇಳಿದರೆ ಈ ಅಲಂಕಾರವಾಗುವದು. ಉದಾ:—

ಕಂದ॥ ಜಲಧರನು ವಿಷವ ಕುಡಿಯಲು।
ನೆಲಕೊರಗಿತು ಭರದೆ ಪಥಿಕಕಾಮಿನಿ ಜನವು॥

ಇಲ್ಲಿ ಹೇತು-ಕಾರ್ಯ್ಯಗಳಾದ ‘ವಿಷಪಾನ-ಮೂರ್ಚ್ಛೆಗಳಿಗೆ’ ಭಿನ್ನಾಧಿಕರಣತ್ವವು ಬಂದದೆ. (ನೀರನ್ನು ತುಂಬಿಕೊಂಡು ಬಂದು ಪೋಡವು ಪಥಿಕರ ಕಾಮಿನಿಯರನ್ನು ವಿರಹದಿಂದ ಮೂರ್ಚ್ಛಿತರನ್ನಾಗಿ ಮಾಡುವದು ಸ್ವಾಭಾವಿಕವು. ವಿಷ=ನೀರು, ಹಾಲಾಹಲ). ಮತ್ತೆ ಉದಾಃ—

ಕಂದ॥ ಓರ್ವನ ಕಿವಿ ಕಡಿಯಲು ಮ ।
ತ್ತೋರ್ವನ ಪ್ರಾಣಗಳು ತಾವೆ ಗಮಿಸುತಲಿಹವು ॥
ಉರ್ವರೆಯಲ್ಲದೆ ಚಿತ್ರವು ।
ಸರ್ವವಧಕ್ರಮದೆ ಖಲಭುಜಂಗಮನೆದಿದು ॥

ಇಲ್ಲಿ ‘ಹೇತು-ಕಾರ್ಯ್ಯಗಳಾದ’ ‘ಸರ್ಪದಂಶ-ಪ್ರಾಣಗಮನೆಗಳಿಗೆ, ಭಿನ್ನಾಧಿಕರಣತ್ವವು ಬಂದಿದೆ. (ಚಾಡಿಕಾರನು ಒಬ್ಬನಿಗೆ ಏನಾದರೊಂದು ಹೇಳಲು ಅದರಿಂದ ಇನ್ನೊಬ್ಬನಿಗೆ ಕೇಡು ಆಗುವದು ಲೋಕಪ್ರಸಿದ್ಧವಾದದ್ದು. ಖಲಭುಜಂಗಮ—ನೀಚನೆಂಬ ಸರ್ಪ).

ಕೆಲವು ಕಡೆಯಲ್ಲಿ ಅಸಂಗತಿಗೆ ಸಮಾಧಾನವನ್ನು ಹೇಳುವದರಿಂದ ಇದಕ್ಕಿಂತಲೂ ಹೆಚ್ಚಿನ ಮನೋಹರತವು ಬರುವದು. ಹ್ಯಾಗೆಂದರೆಃ—

ಭಾ.॥ ಅವನ ಮನಸಂಕಲ್ಪಸೋಪಾ ।
ನವನು ನೀನತಿಜವದಲೀರುವಿ ।
ತವರೂಪದೊಳಗೈಕ್ಯಹೊಂದುತ ಧ್ಯಾನಭಾವದಲಿ ॥
ಅವನ ದೇಹದೆ ಹೊರಡುತಿರುವವು ।
ಬೆವರುಗಳ ನೀರುಗಳು ಹೃದಯವು ।
ಡವಡವಿಸಿ ಬರುತಿಹುದು ಬಹುಶ್ವಾಸವದು ಮುಖದಿಂದ ॥

ಅರ್ಥ:—ಇದು ಹಂಸವು ದಮಯಂತಿಗೆ ಆಡಿದ ವಾಕ್ಯವು. “ನಳನ ಸಂಬಂಧದ ಮನಸಿನೊಳಗಿನ ಸಂಕಲ್ಪರೂಪ ಸೋಪಾನವನ್ನು ನೀನು ಏರುವಿ. ಅದರಿಂದ ಅವನು ಬೆವಿತು ಶ್ವಾಸಬಿಡುವನು,” ಎಂದು ಹೇಳಿದ್ದರಿಂದ ಹೇತು-ಕಾರ್ಯ್ಯಗಳಿಗೆ ಭಿನ್ನಾಧಿಕರಣತ್ವವು ಬಂದದೆ. ಕಾರಣ ಇದು ಅಸಂಗತಿಯು. ಆದರೆ ಇಲ್ಲಿ ‘ಐಕ್ಯಹೊಂದುತ’ ಎಂಬ ಪದದಿಂದ ‘ಏಕರೂಪವಾದವನಿಗೆ ಇಂಥ ಕಾರ್ಯ್ಯಗಳಾಗುವದು ಅಸಂಗತವಲ್ಲವು’ ಎಂದು ಸಮಾಧಾನವು ಹೇಳಲ್ಪಟ್ಟದೆ. ಕಾರಣ ಇದು ಮೇಲಿನದಕ್ಕಿಂತ ಮನೋಹರವಾಗಿದೆ.

ಯಾವ ಕಡೆಯಲ್ಲಿ ಹೇತುಕಾರ್ಯಗಳಿಗೆ ಭಿನ್ನಾಧಿಕರಣತ್ವವು ಬರುವದಿಲ್ಲವೋ ಅಲ್ಲಿ ಈ ಅಲಂಕಾರವಾಗುವದಿಲ್ಲ. ಪ್ಯಾಗಂದರೆ:—

ಭಾ.॥ ರಾಗದಲಿ ಭ್ರೂಚಾಪವಲ್ಲಿಯ ।
ಬಾಗಿಸಲು ವನಿತೆಯರು ತಮ್ಮನು ।
ವೇಗದಲಿ ಜನರೆದೆಗಳೊಡೆವವು ನೇತ್ರಬಾಣದಲಿ ॥

ಇಲ್ಲಿ ಕಾರ್ಯ-ಕಾರಣಗಳಾದ ಹೃದಭೇದ-ಧನುರಾಕರ್ಷಣಗಳಿಗೆ ಮಾತ್ರ ಬಿನ್ನಾಧಿಕರಣತ್ವವು ಬಂದಿದೆ. ಹೇತುವಿಗೆ ಬಂದಿಲ್ಲ. ಕಾರಣ ಇದು ಅಸಂಗತಿಯಲ್ಲ.

೨. ಒತ್ತಟ್ಟಿಗೆ ಮಾಡತಕ್ಕದ್ದನ್ನು ಬೇರೊತ್ತಟ್ಟಿಗೂ ಮಾಡಿದನೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ವಸುಧೆಯನವಾರಿಜಾತವ ।
ನೆಸಗಲ್ದಿವದೊಳಗುಮಂತೆ ಗೈದೆಯೊ ನೀನೈ ॥

ಇದು ಇಂದ್ರನು ಕೃಷ್ಣನಿಗೆ ಆಡಿದ ವಾಕ್ಯವು. ಇಲ್ಲಿ 'ಭೂಮಿಯನ್ನು ಅವಾರಿಜಾತವಾಗಿ ಮಾಡತಕ್ಕದ್ದಕ್ಕೆ ಬದಲಾಗಿ ಸ್ವರ್ಗದಲ್ಲಿಯೂ ಹಾಗೆ ಮಾಡಿದಿ, ಎಂದು ಹೇಳಿದ್ದರಿಂದ ಒತ್ತಟ್ಟಿಗೆ ಮಾಡತಕ್ಕದ್ದನ್ನು ಬೇರೊತ್ತಟ್ಟಿಗೂ ಮಾಡಿದನೆಂಬರ್ಥವಾಯಿತು. (ಅಪಗತಃ ಅರಿಜಾತಃ ಯಸ್ಮಾತ್ ಸ:—ಶತ್ರು ಸಮೂಹವು ಇಲ್ಲದ್ದು; ನವಾರಿಜಾತಃ (ನಞತತ್ಪುರುಷ) ವಾರಿಜಾತವಿಲ್ಲದ್ದು). ಮತ್ತೆ ಉದಾಃ—

ಭಾ.॥ ಚಿತ್ರವಿದು? ಜಗದೊಳಗೆ ರಾಜನ ।
ಪುತ್ರನೇ ತವಖಡ್ಗಖಂಡಿತ ।
ಶತ್ರುಸ್ತ್ರೀಯರ ಭೂಷಣಂಗಳ ಪರಿಯ ನೋಡಿದನು ॥
ನೇತ್ರದಲಿ ಕಂಕಣವು ತೊಡೆಯಲಿ ।
ಪತ್ರವಲ್ಲಿಯು ತೋರುವದು ಕರ ।
ಪತ್ರದಲಿ ತಿಲಕವಮದು ಸಲೆ ಶೋಭಿಸುತಲಿರುತಿಹುದು ॥

ಇಲ್ಲಿ ಕಂಕಣ-ಪತ್ರವಲ್ಲಿ-ತಿಲಕ ಮೊದಲಾದವುಗಳು ಕ್ರಮವಾಗಿ ಕರ-ಕಪೋಲ-ಫಣಿಗಳಲ್ಲಿ ಇರತಕ್ಕವು ಅದಕ್ಕೆ ಬದಲಾಗಿ ನೇತ್ರ ಮೊದಲಾದ ಬೇರೆ ಬೇರೆ ಕಡೆಗಳಲ್ಲಿ ಶೋಭಿಸುವವೆಂದು ವರ್ಣಿತವಾಗಿದೆ.

(ಕಂಕಣ = ಬಳೆ; ಕಂ + ಕಣ = ನೀರಹನಿ; ಪತ್ರಯುಕ್ತಾವಲ್ಲೀ = ಎಲೆಯುಳ್ಳ ಬಳ್ಳಿ; ಬಾಣಗಳ ಸಮೂಹ; ಪತ್ರೀರೋಪ ಇಷುರ್ವ್ಯಯೋಃ ಎಂದು ಅಮರಕೋಶಗತ ಶಬ್ದಗಳಲ್ಲಿ 'ಪತ್ರಿ' ಶಬ್ದಕ್ಕೆ ಉಪಲಕ್ಷಿತವಾಗಿ ಹೇಳಲ್ಪಟ್ಟಿದೆ. ಕರಪತ್ರ = ಕರಪಲ್ಲವ; ತಿಲಕಂ = ಲಲಾಟಭೂಷಣ; ತಿಲಯುಕ್ತಂ + ಕಂ ಎಳ್ಳಿನಿಂದ ಕೂಡಿದ ನೀರು.)

೩. ಒಂದನ್ನು ಮಾಡಲಿಕ್ಕೆ ಪ್ರವೃತ್ತನಾದವನು ಅದಕ್ಕೆ ವಿರುದ್ಧವಾಗಿ ಬೇರೊಂದನ್ನೂ ಮಾಡಿದನೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾಃ—

ಕಂದ ॥ ಗೋತ್ರೋದ್ಧಾರವ ಮಾಡುತ ।
ಗೋತ್ರೋದ್ಭೇದವನದೀಗ ಮಾಡಿದೆಯಲ್ಲೈ ॥

ಇಲ್ಲಿ 'ಮೊದಲು ವರಾಹರೂಪದಿಂದ ಗೋತ್ರೋದ್ಧಾರಕೃತ್ಯವನ್ನು ಮಾಡಿ ಈಗ ಅದಕ್ಕೆ ವಿರುದ್ಧವಾಗಿ ಕಲ್ಕ್ಯವತಾರದಲ್ಲಿ ಖುರಪುಟಗಳಿಂದ 'ಗೋತ್ರೋದ್ಭೇದವನ್ನು ಮಾಡಿದಿ' ಎಂಬ ಅರ್ಥವು ಗಮ್ಯವಾಗುವದು. (ಗೋತ್ರ + ಉದ್ಧಾರ = ಭೂಮಿಯನ್ನು ತಂದು ಸ್ಥಾಪಿಸುವದು; ಗೋತ್ರ + ಉದ್ಭೇದ = ಪರ್ವತಗಳನ್ನು ಪುಡಿಮಾಡುವದು). ಮತ್ತೆ ಉದಾಃ—

ವಾರ್ಧಿಕ ॥ ಮೂರುಲೋಕದಲಿರುವ ಜನರ ಮೋಹವನೆಲ್ಲ ।
ಸಾರಲೀರೂಪವನು ತಂದು ಕಾಂತಿಯರೂಪ ।
ದೀರಸದನೀರನಿಧಿಯಿಂದಲೇ ವರ್ಧಿಸುವೆ ಮೋಹವನು
ಮುಗ್ಧೆಯರಿಗೆ ॥

ಅರ್ಥಃ—ಎಲೈ ಕೃಷ್ಣನೇ ಮೂರುಲೋಕದ ಜನರ ಮೋಹವನ್ನೆಲ್ಲ ಕಳೆಯಲಿಕ್ಕೆ ನೀನು ಈ ರೂಪದಿಂದ ಅವತರಿಸಿರುವಿ. ಆದರೆ ಇದೇ ರೂಪದಿಂದಲೇ ಸುಂದರ ಸ್ತ್ರೀಯರಿಗೆ ಮೋಹವನ್ನುಂಟು ಮಾಡುವಿ, ಎಂದು ಹೇಳಿದ್ದರಿಂದ ಒಂದು ಕೃತ್ಯಕ್ಕೆ ಪ್ರವೃತ್ತನಾದವನು ಅದಕ್ಕೆ ವಿರುದ್ಧವಾದ ಬೇರೊಂದು ಕೃತ್ಯವನ್ನೂ ಮಾಡಿದಂತಾಯಿತು.

ಉಪೇಂದ್ರಶರ್ಮಾ ತೋಳವಟ್ಟಿ.

ದಕ್ಷಿಣಧ್ರುವ ಸಂಶೋಧಕನಾದ ಕ್ಯಾಪ್ಟನ್ ಸ್ಕಾಟ್ ಈತನ ಮರಣವು.

ಪೃಥ್ವಿಯ ಎರಡು ಸ್ಥಿರಬಿಂದುಗಳನ್ನು, ಅಂದರೆ ಉತ್ತರ ದಕ್ಷಿಣ ಧ್ರುವ ಬಿಂದುಗಳನ್ನು ಶೋಧಿಸುವ ಮಹತ್ವಾಕಾಂಕ್ಷೆಯು ಯುರೋಪದ ಜನರಲ್ಲಿ ಎಷ್ಟೋ ಶತಮಾನಗಳಿಂದ ಜಾಗೃತವಾಗಿದ್ದು, ಕಟ್ಟಕಡೆಗೆ ಈ ಇಪ್ಪತ್ತನೇ ಶತಮಾನಕ್ಕೇ ಆ ಶೋಧಗಳ ಬಹುಮಾನವು ದೊರಕಿತು. ಇ. ಸ. ೧೯೦೯ ನೇ ಇಸವಿಯ ಏಪ್ರೀಲ ತಿಂಗಳಲ್ಲಿ ಅಮೇರಿಕನ್ ಕಾಪ್ಟನ್ನನಾದ ಪೆರಿ ಎಂಬವನು ಉತ್ತರಧ್ರುವ ಬಿಂದುವಿನ ಮೇಲೆ ಅಮೇರಿಕದ ಧ್ವಜವನ್ನು ಊರಿದನು. ದಕ್ಷಿಣ ಧ್ರುವವನ್ನು ಶೋಧಿಸಿದ ಬಹುಮಾನವನ್ನೂ ಕ್ಯಾಪ್ಟನ್ ಅಮುಂಡಸೇನನೆಂಬವನು ಅಮೇರಿಕಕ್ಕೇ ದೊರಕಿಸಿಕೊಟ್ಟನು. ಇ. ಸ. ೧೯೧೧ನೇ ಇಸವಿಯಲ್ಲಿ ಕ್ಯಾಪ್ಟನ್ನ ಅಮುಂಡಸೇನನು ದಕ್ಷಿಣಧ್ರುವವನ್ನು ಶೋಧಿಸಲಿಕ್ಕೆ ಹೊರಟ ಸುಮಾರಿಗೇ ಇಂಗ್ಲಂಡದಿಂದ ಕ್ಯಾಪ್ಟನ್ನ ಸ್ಕಾಟನೂ ಪ್ರಯಾಣಮಾಡಿದನು. ಆದ್ದರಿಂದ ಅಮೇರಿಕನ್ ಹಾಗು ಇಂಗ್ಲಿಶ್ ಸಂಶೋಧಕರಲ್ಲಿ ಇದೊಂದು ಶರ್ಯತ್ತೇ ಆರಂಭವಾಗಿತ್ತೆಂದು ಹೇಳಬಹುದು. ಈ ಶರ್ಯತ್ತಿನಲ್ಲಿ ಕ್ಯಾಪ್ಟನ್ನ ಅಮುಂಡಸೇನನು ತಾರೀಖು ೧೬ನೇ ದಿಜಂಬರ ೧೯೧೧ನೇ ಇಸವಿಯ ದಿವಸ ದಕ್ಷಿಣಧ್ರುವದ ಮೇಲೆ ತನ್ನ ನಿಶಾನಿಯನ್ನು ನೆಟ್ಟು ಗೆಲವನ್ನು ಸಂಪಾದಿಸಿದನು. ತರುವಾಯ ಸ್ವಲ್ಪ ದಿವಸಗಳಾದ ಮೇಲೆ, ಅಂದರೆ ತಾರೀಖು ೧೭ನೇ ಜಾನೇವಾರಿ ೧೯೧೨ ನೇ ಇಸವಿಯ ದಿವಸ ಕ್ಯಾಪ್ಟನ್ನ ಸ್ಕಾಟನು ದಕ್ಷಿಣಧ್ರುವಕ್ಕೆ ಹೋಗಿ ಮುಟ್ಟಿದನು. ಈ ಕೆಲಸದಲ್ಲಿ ಕ್ಯಾಪ್ಟನ್ನ ಸ್ಕಾಟನಿಗೆ ಅಗ್ರೇಸರತ್ವದ ಬಹುಮಾನವು ದೊರಕದೆ ಇದ್ದಾಗ್ಯೂ ಆ ಸ್ಥಾನಕ್ಕೆ ಹೋಗಿ ಮುಟ್ಟಿದ್ದರಿಂದಲೇ ಅವನು ಸ್ತುತಿಗೆ ಪಾತ್ರನು. ಮತ್ತು ಅವನಿಗಿಂತ ಮೊದಲು ಅನೇಕರು ಆ ಪ್ರವಾಸವನ್ನು ಮಾಡಿ ಬಂದಾಗ್ಯೂ ಅದರಿಂದ ಅವನ ಕೀರ್ತಿಯು ಕಡಿಮೆ ಪ್ರತಿಯದೆಂದು ತಿಳಿಯಲಾಗದು. ಯಾಕಂದರೆ, ಈ ಪ್ರವಾಸವೇ ಅಷ್ಟು ಕಷ್ಟಮಯವಾದದ್ದಿರುವದು.

ಕ್ಯಾಪ್ಟನ್ನ ಸ್ಕಾಟನು ಇ. ಸ. ೧೮೬೮ರಲ್ಲಿ ಹುಟ್ಟಿದನು. ಅವನು ಇಂಗ್ಲಂಡದ ಹಡಗುಪಡೆಯಮೇಲೆ ಕ್ಯಾಪ್ಟನ್ನನ ಅಧಿಕಾರದ ಮೇಲೆ ಇದ್ದ

ನು. ಇ. ಸ. ೧೯೦೦ನೇ ಇಸವಿಯಲ್ಲಿ ಬ್ರಿಟಿಶ್ ಸರಕಾರದವರು ದಕ್ಷಿಣ
ಧ್ರುವದ ಶೋಧದ ಸಲುವಾಗಿ ಕೆಲವು ಸಂಶೋಧಕರದೊಂದು ಗುಂಪನ್ನು
ಕಳಿಸಿದರು. ಆ ಗುಂಪಿನಲ್ಲಿ ಕ್ಯಾಪ್ಟನ್ನ ಸ್ಕಾಟನು ಪ್ರಮುಖನಾಗಿ ನೇಮಿಸ
ಲ್ಪಟ್ಟಿದ್ದನು. ಈ ಪ್ರಯಾಣದಲ್ಲಿ ಕ್ಯಾಪ್ಟನ್ನಸ್ಕಾಟನು ೧೯೦೨ ನೇ ವರ್ಷ
ದಕ್ಷಿಣ ಅಕ್ಷಾಂಶ ೮೨.೧೭ದವರೆಗೆ ಹೋಗಿ ಮುಟ್ಟಿದನು. ಆದರೆ ಅನೇಕ
ಅಡಚಣಿಗಳ ಮೂಲಕವಾಗಿ ಅಲ್ಲಿಂದಲೇ ಅವನು ತಿರುಗಬೇಕಾಯಿತು.
ಆ ಬಳಿಕ ಸರ್ ಅರ್ನೆಸ್ಟ್ ಶಾಕಲಟನ್‌ನೆಂಬ ಅಮೇರಿಕನ್ ಗೃಹಸ್ಥನು
೧೯೦೯ನೇ ಇಸವಿಯಲ್ಲಿ ದಕ್ಷಿಣಧ್ರುವದ ಕಡೆಗೆ ೮೮.೨೩ ಅಕ್ಷಾಂಶಗಳ
ವರೆಗೆ ಹೋಗಿ ಮುಟ್ಟಿದನು. ಮುಂದೆ ತುಸು ದಿವಸಗಳಲ್ಲಿಯೇ ಕ್ಯಾಪ್ಟನ್
ಪೆರಿ ಎಂಬವನು ಉತ್ತರಧ್ರುವವನ್ನು ಶೋಧಿಸಿದ ವರ್ತಮಾನವು ಪ್ರಸಿದ್ಧವಾ
ಯಿತು. ಆಗ ಕ್ಯಾಪ್ಟನ್ನ ಸ್ಕಾಟನು ತನ್ನ ಸ್ವಂತ ಜಬಾಬುದಾರಿಯ ಮೇಲೆ
ಪುನಃ ಒಂದು ಸಾರೆ ದಕ್ಷಿಣಧ್ರುವದ ಮೇಲೆ ಸವಾರಿ ಮಾಡುವದನ್ನು ನಿಶ್ಚ
ಯಿಸಿದನು. ಈ ಪ್ರವಾಸದ ಸಿದ್ಧತೆಯನ್ನು ಅವನು ಬಹು ವಿಚಾರಪೂರ್ವ
ಕವಾಗಿಯೂ, ದೂರದೃಷ್ಟಿಯಿಂದಲೂ ಮಾಡಿದನು. ಈ ಕಾಲಕ್ಕೆ ಅವನ
ಐದುವರ್ಷದ ಅನ್ನ ಸಾಮಗ್ರಿಯನ್ನೂ ಬರ್ಫದಮೇಲೆ ಜರಿದು ಹೋಗುವ
ಬಂಡಿಗಳನ್ನೂ ಅವುಗಳನ್ನು ಎಳೆಯುವದಕ್ಕೆ ನಾಯಿಗಳನ್ನೂ ಕುದುರೆ
ಳನ್ನೂ ಸಂಗಡ ತಕ್ಕೊಂಡಿದ್ದನು. ಈ ಪ್ರವಾಸದಲ್ಲಿ ಡಾಕ್ಟರ ಉಯಿಲ್ಸನ್ನ
ಕ್ಯಾಪ್ಟನ್ನ ಓಟ್ಸ್, ಲೆ. ಬಾವರ್ಸ ಮೊದಲಾದವರು ಸ್ಕಾಟನ ಸಹಾಯಕ್ಕಾ
ಗಿ ಸ್ವಯಂಸ್ಫೂರ್ತಿಯಿಂದ ಅವನ ಸಂಗಡ ಹೊರಟಿದ್ದರು. ಈ ಎಲ್ಲ ಜನ
ರು ಟೆರಾನೋವಾ ಎಂಬ ಹೆಸರಿನ ಹಡಗದಲ್ಲಿ ಕುಳಿತು ತಾ. ೩೧ನೆ
ನವೆಂಬರ ೧೯೧೦ನೇ ಇಸವಿಯ ದಿವಸ ಹೊರಟರು; ಮತ್ತು ದಕ್ಷಿಣ ಶೀತ
ಕಟಿಬಂಧದ ಕಕ್ಷೆಯನ್ನು ಸೇರಿ ದಕ್ಷಿಣ ಅಕ್ಷಾಂಶ ೭೮ರ ಸುಮಾರಿಗೆ
ತಳವೂರಿದರು. ಈ ಸ್ಥಳವೇ ತಮ್ಮ ಮುಂದಿನ ಪ್ರವಾಸದ ತಳವೆಂದು
ಕಲ್ಪಿಸಿ, ಅಲ್ಲಿ ಅವರು ತಮ್ಮ ಎಲ್ಲ ಸಾಮಗ್ರಿಯನ್ನು ಇಟ್ಟರು. ಮತ್ತು ಮುಂ
ದಿನ ಪ್ರವಾಸಕ್ಕೆ ಅವಶ್ಯಕವಾಗಿದ್ದಷ್ಟು ಸಾಮಗ್ರಿಯನ್ನು ಸಂಗಡ ತಕ್ಕೊಂಡು
ಗಿನೇ ನವೆಂಬರ ೧೯೧೧ನೇ ಇಸವಿಯ ದಿವಸ ಆ ಸ್ಥಳದಿಂದ ಹೊರ
ಟರು. ಅಲ್ಲಿಂದ ಧ್ರುವಸ್ಥಾನವು ೯೦೦ ಮೈಲು ದೂರ ಇತ್ತು. ಪ್ರತಿದಿವಸ
ಈ ಸಂಶೋಧಕರು ೧೫ ಮೈಲುಗಳಂತೆ ಪ್ರವಾಸ ಮಾಡುತ್ತ ಮಾಡುತ್ತ

ತಾ. ೪ನೇ ಜಾನೇವಾರಿ ೧೯೧೩ನೇ ಇಸವಿಯಲ್ಲಿ ದಕ್ಷಿಣ ಅಕ್ಷಾಂಶ ೮೭.೩೬ ಕ್ಕೆ ಬಂದು ಮುಟ್ಟಿದರು. ಅಲ್ಲಿಂದ ಧ್ರುವಸ್ಥಾನವು ಬಂದುವರೆನೂರು ಮೈಲು ಮಾತ್ರ ಉಳಿದಿತ್ತು. ಈ ಸ್ಥಳದಿಂದ ಮುಂದೆ ಕ್ಯಾಪ್ಟನ್ನ ಸ್ಕಾಟ್, ಕ್ಯಾಪ್ಟನ್ನ ಓಟ್ಸ್, ಡಾ. ಉಯಿಲ್ಸನ ಇಷ್ಟೇ ಜನರು ಮುಂದಕ್ಕೆ ಪ್ರಯಾಣ ಮಾಡಿದರು. ಮುಂದೆ ತಾ. ೧೭ನೇ ಜಾನೇವರಿ ೧೯೧೩ನೇ ಇಸವಿಯ ದಿವಸ ಅವರು ದಕ್ಷಿಣಧ್ರುವದ ಮೇಲೆ ತಮ್ಮ ನಿಶಾನಿಯನ್ನು ನಿಲ್ಲಿಸಿದರು.

ಇಲ್ಲಿಯ ವರೆಗೆ ಕ್ಯಾಪ್ಟನ್ ಸ್ಕಾಟನ ಕೆಲಸವು ಬಹಳ ಚನ್ನಾಗಿ ಆಯಿತು. ಆದರೆ ಇಲ್ಲಿಂದ ಮುಂದೆ ಅವನಿಗೆ ಸಂಕಟಗಳು ಪ್ರಾರಂಭವಾದವು. ಇಲ್ಲಿಯ ವರೆಗೆ ಅವನು ಅನೇಕ ಕಷ್ಟಗಳನ್ನು ಸಹಿಸಿ ತನ್ನ ಧ್ಯೇಯವನ್ನು ಕಂಡುಕೊಂಡಾಗ್ಯೂ ಅವನಿಗಿಂತ ಪೂರ್ವದಲ್ಲಿ ಮತ್ತೊಬ್ಬನು ಈ ಕೆಲಸದ ಅಗ್ರೇಸರತ್ವದ ಬಹುಮಾನವನ್ನು ಪಡೆದನೆಂಬ ಸುದ್ದಿಯು ಅವನಿಗೆ ಗೊತ್ತಾಗಲು ಅವನ ಉಲ್ಲಾಸವೃತ್ತಿಯಲ್ಲಿ ಔದಾಸೀನ್ಯದ ಕಳೆಯು ತೋರಹತ್ತಿತು. ಧ್ರುವಸ್ಥಾನದಿಂದ ಅವರು ತಿರುಗಿ ಹೊರಡಲು, ಕೂಡಲೆ ಬರ್ಫದ ಬಿರುಗಾಳಿಗಳು ಆರಂಭವಾದವು. ಈ ಬರ್ಫದ ಹೊಡತಗಳಿಂದ ಪಾರಾಗಿ ಹೋಗುವದು ಬಹು ದುಷ್ಕರವಾಗಿತ್ತು. ಡಾ. ಉಯಿಲ್ಸನನ ತಲೆಗೆ ಬರ್ಫದ ಬಂದು ತುಣುಕು ತಗಲಿ ಅವನು ಶಕ್ತಿಹೀನನಾಗಿ ಕುಳಿತುಕೊಂಡನು. ಆಗ ಅವನನ್ನು ಬರ್ಫದ ಮೇಲೆ ಜಾರುವ ಬಂಡಿಯೊಳಗಿಂದ ಕರಕೊಂಡು ಹೋಗಬೇಕಾಯಿತು. ಅದರಿಂದ ಪ್ರವಾಸಕ್ಕೆ ಹೆಚ್ಚು ದಿವಸಗಳು ಹತ್ತಿದ್ದರಿಂದ ಹತ್ತರಿದ್ದ ಅನ್ನಸಾಮಗ್ರಿಯು ತೀರಿಹೋಯಿತು. ಕಟ್ಟಕಡೆಗೆ ಬಂದು ಡಬ್ಬಿ ಚಹಾ, ಎರಡು ಚಮಚೆ ಸಕ್ಕರೆ ಇವುಗಳ ಹೊರತು ತಿಂಬುಂಬುವ ಪದಾರ್ಥಗಳಿಲ್ಲ ತೀರಿಹೋದದ್ದರಿಂದ ಎಲ್ಲರೂ ಹಸಿವೆಯಿಂದ ಬಳಲಿ ಬಾಯಬಿಡಹತ್ತಿರಬಹುದೆಂದು ತೋರುತ್ತದೆ. ಕ್ಯಾಪ್ಟನ್ ಸ್ಕಾಟ್‌ನು ತನ್ನ ಹೆಂಡತಿಗೆ ಬರೆದ ಕಡೆಯ ಪತ್ರವು ಕಳೆದ ವರ್ಷದ ಮಾರ್ಚ ತಿಂಗಳಲ್ಲಿ ಅವಳ ಕೈಗೆ ಬಂತು. ಆದರೆ ಅದೇ ಸುಮಾರಿಗೆ ಕ್ಯಾಪ್ಟನ್ ಸ್ಕಾಟನು ಅತ್ತ ಮರಣದ ಬಾಯಿಗೆ ತುತ್ತಾಗಿರಬಹುದು. ಯಾಕಂದರೆ ಅವನ ಹೆಣದ ಹತ್ತರ ಸಿಕ್ಕ ಅವನ ದಿನವಹಿಯಲ್ಲಿ ತಾರೀಖು ೫ನೇ ಮಾರ್ಚ ೧೯೧೩ನೇ ಇಸವಿಯದೇ ಅವನ ಕಟ್ಟಕಡೆಯ ಲೇಖವಾಗಿತ್ತು. ತನ್ನ ಹತ್ತರಿದ್ದ ಎಲ್ಲ ಸಾಮಗ್ರಿಯು ತೀರಿತು; ಬರ್ಫದ ಮಳೆಯ ಭರವು ಕಡಿಮೆಯಾಗಲೊಲ್ಲದು;

ನು. ಇ. ಸ. ೧೯೦೦ನೇ ಇಸವಿಯಲ್ಲಿ ಬ್ರಿಟಿಶ್ ಸರಕಾರದವರು ದಕ್ಷಿಣ ಧ್ರುವದ ಶೋಧದ ಸಲುವಾಗಿ ಕೆಲವು ಸಂಶೋಧಕರದೊಂದು ಗುಂಪನ್ನು ಕಳಿಸಿದರು. ಆ ಗುಂಪಿನಲ್ಲಿ ಕ್ಯಾಪ್ಟನ್ನ ಸ್ಕಾಟನು ಪ್ರಮುಖನಾಗಿ ನೇಮಿಸಲ್ಪಟ್ಟಿದ್ದನು. ಈ ಪ್ರಯಾಣದಲ್ಲಿ ಕ್ಯಾಪ್ಟನ್ನಸ್ಕಾಟನು ೧೯೦೩ ನೇ ವರ್ಷ ದಕ್ಷಿಣ ಅಕ್ಷಾಂಶ ೮೩.೧೭ದವರೆಗೆ ಹೋಗಿ ಮುಟ್ಟಿದನು. ಆದರೆ ಅನೇಕ ಅಡಚಣಿಗಳ ಮೂಲಕವಾಗಿ ಅಲ್ಲಿಂದಲೇ ಅವನು ತಿರುಗಬೇಕಾಯಿತು. ಆ ಬಳಿಕ ಸರ್ ಅರ್ನೆಸ್ಟ್ ಶಾಕಲಟನ್‌ನೆಂಬ ಅಮೇರಿಕನ್ ಗೃಹಸ್ಥನು ೧೯೦೮ನೇ ಇಸವಿಯಲ್ಲಿ ದಕ್ಷಿಣಧ್ರುವದ ಕಡೆಗೆ ೮೮.೨೩ ಅಕ್ಷಾಂಶಗಳವರೆಗೆ ಹೋಗಿ ಮುಟ್ಟಿದನು. ಮುಂದೆ ತುಸು ದಿವಸಗಳಲ್ಲಿಯೇ ಕ್ಯಾಪ್ಟನ್ನ ಪೆರಿ ಎಂಬವನು ಉತ್ತರಧ್ರುವವನ್ನು ಶೋಧಿಸಿದ ವರ್ತಮಾನವು ಪ್ರಸಿದ್ಧವಾಯಿತು. ಆಗ ಕ್ಯಾಪ್ಟನ್ನ ಸ್ಕಾಟನು ತನ್ನ ಸ್ವಂತ ಜಬಾಬದಾರಿಯ ಮೇಲೆ ಪುನ: ಒಂದು ಸಾರೆ ದಕ್ಷಿಣಧ್ರುವದ ಮೇಲೆ ಸವಾರಿ ಮಾಡುವದನ್ನು ನಿಶ್ಚಯಿಸಿದನು. ಈ ಪ್ರವಾಸದ ಸಿದ್ಧತೆಯನ್ನು ಅವನು ಬಹು ವಿಚಾರಪೂರ್ವಕವಾಗಿಯೂ, ದೂರದೃಷ್ಟಿಯಿಂದಲೂ ಮಾಡಿದನು. ಈ ಕಾಲಕ್ಕೆ ಅವನು ಐದುವರ್ಷದ ಅನ್ನ ಸಾಮಗ್ರಿಯನ್ನೂ ಬರ್ಫದಮೇಲೆ ಜರಿದು ಹೋಗುವ ಬಂಡಿಗಳನ್ನೂ ಅವುಗಳನ್ನು ಎಳೆಯುವದಕ್ಕೆ ನಾಯಿಗಳನ್ನೂ ಕುದುರೆಗಳನ್ನೂ ಸಂಗಡ ತಕ್ಕೊಂಡಿದ್ದನು. ಈ ಪ್ರವಾಸದಲ್ಲಿ ಡಾಕ್ಟರ ಉಯಿಲ್ಸನ್ನ, ಕ್ಯಾಪ್ಟನ್ನ ಓಟ್ಸ್, ಲೆ. ಬಾವರ್ಸ ಮೊದಲಾದವರು ಸ್ಕಾಟನ ಸಹಾಯಕ್ಕಾಗಿ ಸ್ವಯಂಸ್ಫೂರ್ತಿಯಿಂದ ಅವನ ಸಂಗಡ ಹೊರಟಿದ್ದರು. ಈ ಎಲ್ಲ ಜನರು ಟೆರಾನೋವಾ ಎಂಬ ಹೆಸರಿನ ಹಡಗದಲ್ಲಿ ಕುಳಿತು ತಾ. ೧೫ನೇ ನವೆಂಬರ ೧೯೧೦ನೇ ಇಸವಿಯ ದಿವಸ ಹೊರಟರು; ಮತ್ತು ದಕ್ಷಿಣ ಶೀತ ಕಟಿಬಂಧದ ಕಕ್ಷೆಯನ್ನು ಸೇರಿ ದಕ್ಷಿಣ ಅಕ್ಷಾಂಶ ೭೮ರ ಸುಮಾರಿಗೆ ತಳವೂರಿದರು. ಈ ಸ್ಥಳವೇ ತಮ್ಮ ಮುಂದಿನ ಪ್ರವಾಸದ ತಳವೆಂದು ಕಲ್ಪಿಸಿ, ಅಲ್ಲಿ ಅವರು ತಮ್ಮ ಎಲ್ಲ ಸಾಮಗ್ರಿಯನ್ನು ಇಟ್ಟರು. ಮತ್ತು ಮುಂದಿನ ಪ್ರವಾಸಕ್ಕೆ ಅವಶ್ಯಕವಾಗಿದ್ದಷ್ಟು ಸಾಮಗ್ರಿಯನ್ನು ಸಂಗಡ ತಕ್ಕೊಂಡು ೧೦ನೇ ನವೆಂಬರ ೧೯೧೧ನೇ ಇಸವಿಯ ದಿವಸ ಆ ಸ್ಥಳದಿಂದ ಹೊರಟರು. ಅಲ್ಲಿಂದ ಧ್ರುವಸ್ಥಾನವು ೯೦೦ ಮೈಲು ದೂರ ಇತ್ತು. ಪ್ರತಿದಿವಸ ಈ ಸಂಶೋಧಕರು ೧೫ ಮೈಲುಗಳಂತೆ ಪ್ರವಾಸ ಮಾಡುತ್ತ ಮಾಡುತ್ತ

ಶಾ. ೪ನೇ ಜಾನೇವಾರಿ ೧೯೧೩ನೇ ಇಸವಿಯಲ್ಲಿ ದಕ್ಷಿಣ ಅಕ್ಷಾಂಶ ೮೨.೩೬ ಕ್ಕೆ ಬಂದು ಮುಟ್ಟಿದರು. ಅಲ್ಲಿಂದ ಧ್ರುವಸ್ಥಾನವು ಒಂದುವರೆನೂರು ಮೈಲು ಮಾತ್ರ ಉಳಿದಿತ್ತು. ಈ ಸ್ಥಳದಿಂದ ಮುಂದೆ ಕ್ಯಾಪ್ಟನ್ನ ಸ್ಕಾಟ, ಕ್ಯಾಪ್ಟನ್ನ ಓಟ್ಸ್, ಡಾ. ಉಯಿಲ್ಸನ ಇಷ್ಟೇ ಜನರು ಮುಂದಕ್ಕೆ ಪ್ರಯಾಣ ಮಾಡಿದರು. ಮುಂದೆ ಶಾ. ೧೭ನೇ ಜಾನೇವರಿ ೧೯೧೩ನೇ ಇಸವಿಯ ದಿವಸ ಅವರು ದಕ್ಷಿಣಧ್ರುವದ ಮೇಲೆ ತಮ್ಮ ನಿಶಾನಿಯನ್ನು ನಿಲ್ಲಿಸಿದರು.

ಇಲ್ಲಿಯ ವರೆಗೆ ಕ್ಯಾಪ್ಟನ್ ಸ್ಕಾಟನ ಕೆಲಸವು ಬಹಳ ಚನ್ನಾಗಿ ಆಯಿತು. ಆದರೆ ಇಲ್ಲಿಂದ ಮುಂದೆ ಅವನಿಗೆ ಸಂಕಟಗಳು ಪ್ರಾರಂಭವಾದವು. ಇಲ್ಲಿಯ ವರೆಗೆ ಅವನು ಅನೇಕ ಕಷ್ಟ ಗಳನ್ನು ಸಹಿಸಿ ತನ್ನ ಧ್ಯೇಯವನ್ನು ಕಂಡುಕೊಂಡಾಗ್ಯೂ ಅವನಿಗಿಂತ ಪೂರ್ವದಲ್ಲಿ ಮತ್ತೊಬ್ಬನು ಈ ಕೆಲಸದ ಅಗ್ರೇಸರತ್ವದ ಬಹುಮಾನವನ್ನು ಪಡೆದನೆಂಬ ಸುದ್ದಿಯು ಅವನಿಗೆ ಗೊತ್ತಾಗಲು ಅವನ ಉಲ್ಲಾಸವೃತ್ತಿಯಲ್ಲಿ ಔದಾಸೀನ್ಯದ ಕಳೆಯು ತೋರಹತ್ತಿತು. ಧ್ರುವಸ್ಥಾನದಿಂದ ಅವರು ತಿರುಗಿ ಹೊರಡಲು, ಕೂಡಲೆ ಬರ್ಫದ ಬಿರುಗಾಳಿಗಳು ಆರಂಭವಾದವು. ಈ ಬರ್ಫದ ಹೊಡತಗಳಿಂದ ಪಾರಾಗಿ ಹೋಗುವದು ಬಹು ದುಷ್ಕರವಾಗಿತ್ತು. ಡಾ. ಉಯಿಲ್ಸನನ ತಲೆಗೆ ಬರ್ಫದ ಬಂದು ತುಣುಕು ತಗಲಿ ಅವನು ಶಕ್ತಿಹೀನನಾಗಿ ಕುಳಿತುಕೊಂಡನು. ಆಗ ಅವನನ್ನು ಬರ್ಫದ ಮೇಲೆ ಜಾರುವ ಬಂಡಿಯೊಳಗಿಂದ ಕರಕೊಂಡು ಹೋಗಬೇಕಾಯಿತು. ಅದರಿಂದ ಪ್ರವಾಸಕ್ಕೆ ಹೆಚ್ಚು ದಿವಸಗಳು ಹತ್ತಿದ್ದರಿಂದ ಹತ್ತರಿದ್ದ ಅನ್ನಸಾಮಗ್ರಿಯು ತೀರಿಹೋಯಿತು. ಕಟ್ಟಕಡೆಗೆ ಒಂದು ಡಬ್ಬಿ ಚಹಾ, ಎರಡು ಚಮಚೆ ಸಕ್ಕರೆ ಇವುಗಳ ಹೊರತು ತಿಂಬುಂಬುವ ಪದಾರ್ಥಗಳೆಲ್ಲ ತೀರಿಹೋದದ್ದರಿಂದ ಎಲ್ಲರೂ ಹಸಿವೆಯಿಂದ ಬಳಲಿ ಬಾಯಬಿಡಹತ್ತಿರಬಹುದೆಂದು ತೋರುತ್ತದೆ. ಕ್ಯಾಪ್ಟನ್ ಸ್ಕಾಟ್‌ನು ತನ್ನ ಹೆಂಡತಿಗೆ ಬರೆದ ಕಡೆಯ ಪತ್ರವು ಕಳೆದ ವರ್ಷದ ಮಾರ್ಚ ತಿಂಗಳಲ್ಲಿ ಅವಳ ಕೈಗೆ ಬಂತು. ಆದರೆ ಅದೇ ಸುಮಾರಿಗೆ ಕ್ಯಾಪ್ಟನ್ ಸ್ಕಾಟನು ಅತ್ತ ಮರಣದ ಬಾಯಿಗೆ ತುತ್ತಾಗಿರಬಹುದು. ಯಾಕಂದರೆ ಅವನ ಹೆಣದ ಹತ್ತರ ಸಿಕ್ಕ ಅವನ ದಿನವಹಿಯಲ್ಲಿ ತಾರೀಖು ೫ ನೇ ಮಾರ್ಚ ೧೯೧೩ ನೇ ಇಸವಿಯದೇ ಅವನ ಕಟ್ಟಕಡೆಯ ಲೇಖವಾಗಿತ್ತು. ತನ್ನ ಹತ್ತರಿದ್ದ ಎಲ್ಲ ಸಾಮಗ್ರಿಯು ತೀರಿತು; ಬರ್ಫದ ಮಳೆಯ ಭರವು ಕಡಿಮೆಯಾಗಲೊಲ್ಲದು;

ಬರ್ಫದ ಮಳೆಗಾಳಿಗಳಿಂದ ತಾವು ಮುಂಚೆ ತಳವೂರಿದ ಸ್ಥಳದ ಹಾದಿಯೂ ತಪ್ಪಿಹೋಯಿತು. ಇಂಥ ಸ್ಥಿತಿಯಲ್ಲಿ ತಮ್ಮೆಲ್ಲರ ನಾಶವು ನಿಶ್ಚಯವಾಗಿ ಸಂಭವಿಸುವದೆಂದು ಕ್ಯಾಪ್ಟನ್ ಸ್ಕಾಟನಿಗೆ ತಿಳಿದದ್ದರಿಂದ ಅವನು ತನ್ನ ರಾಷ್ಟ್ರಕ್ಕೆ ಕಟ್ಟಕಡೆಯ ಒಂದು ಪತ್ರವನ್ನು ಬರೆದಿಟ್ಟನು. ಆ ಪತ್ರದಲ್ಲಿ ಅವನು—ತಮ್ಮ ದೇಶದ ಕೀರ್ತಿಯ ಸಲುವಾಗಿ ತಮ್ಮ ಪ್ರಾಣಗಳ ಆಹುತಿಯನ್ನು ಕೊಟ್ಟಂಥವರ ಹೆಂಡಿರುಮಕ್ಕಳ ಯೋಗಕ್ಷೇಮವನ್ನು ದೇಶಾಭಿಮಾನಿಗಳಾದ ಇಂಗ್ಲಂಡದ ಜನರು ನೋಡುವರೆಂಬ ಭರವಸವನ್ನು ಪ್ರಕಟಿಸಿದ್ದನು. ಈ ಪತ್ರವು ಪ್ರಸಿದ್ಧವಾದಂದಿನಿಂದ ಕ್ಯಾಪ್ಟನ್ ಸ್ಕಾಟ್ ಹಾಗು ಅವನ ಸಂಗಡಿಗರ ಸ್ಮಾರಕವನ್ನು ಮಾಡುವ ವಿಷಯವಾಗಿಯೂ, ಅವರ ಕುಟುಂಬಗಳಿಗೆ ಸಹಾಯ ಮಾಡುವದಕ್ಕಾಗಿಯೂ ನಾಲ್ಕೂ ಕಡೆಗೆ ವಿಚಾರಗಳು ನಡೆಯಹತ್ತಿದವು. ಈ ಕೆಲಸಗಳಿಗಾಗಿ ಬಾದಶಹರವರೂ ಮಹಾರಾಣಿಯವರೂ ಅನುಕ್ರಮವಾಗಿ ಇನ್ನೂರು ಹಾಗು ನೂರು ಪೌಂಡುಗಳನ್ನು ಕೊಟ್ಟಿರುವರು; ಎಲ್ಲ ದೇಶಗಳಿಂದ ಸಹಾನುಭೂತಿಪರವಾದ ತಂತೀ ವರ್ತಮಾನಗಳೂ ಹಣದರೂಪವಾದ ಸಹಾಯವೂ ಬರುತ್ತಿರುವವು. ಶ್ರೀ. ಸಯಾಜಿರಾವ ಗಾಯಕವಾಡ ಇವರು ಈ ಫಂಡಿಗೆ ಇನ್ನೂರು ಪೌಂಡುಗಳನ್ನು ಕಳಿಸಿಕೊಟ್ಟಿರುವರು. ಈ ಪ್ರವಾಸದ ಸಿದ್ಧತೆಯ ಸಲುವಾಗಿ ಕ್ಯಾಪ್ಟನ್ ಸ್ಕಾಟನಿಗೆ ಮೂವತ್ತು ಸಾವಿರ (ಕೆಲವರ ಮತದಿಂದ ಹನ್ನೆರಡು ಸಾವಿರ) ಪೌಂಡು ಸಾಲವಾಗಿದ್ದು ಅದನ್ನೆಲ್ಲ ಈ ಫಂಡಿನೊಳಗಿನ ಹಣದಿಂದಲೇ ತೀರಿಸತಕ್ಕವರಿರುವರು. ಈಗಿನ ಮುಖ್ಯ ಪ್ರಧಾನರಾದ ಅಸ್ಕ್ವಿತ್ ಇವರು ಪಾರ್ಲಿಮೆಂಟ ಸಭೆಯಲ್ಲ ಕ್ಯಾಪ್ಟನ್ ಸ್ಕಾಟನ ಕಟ್ಟಕಡೆಯ ಉದ್ಗಾರಗಳನ್ನು ಓದಿ ಹೇಳುವಾಗ ಅವರ ಕುತ್ತಿಗೆಯ ಶಿರಗಳು ಉಬ್ಬಿ ಬಾಯಿಂದ ಶಬ್ದಗಳು ಹೊರಡದಂತಾಯಿತು. ಸಾಲೆಗಳಲ್ಲಿ ಕ್ಯಾಪ್ಟನ್ ಸ್ಕಾಟನ ವೃತ್ತಾಂತವನ್ನು ಶಿಕ್ಷಕರು ಹುಡುಗರಿಗೆ ಹೇಳುತ್ತಿರುವಾಗಲೂ ಉಭಯತರ ಸ್ಥಿತಿಯು ಹಾಗೇ ಆಯಿತು. ಸದ್ಯಕ್ಕೆ ತೀರ ಬಡವಿದ್ಯಾರ್ಥಿಯು ಕೊಟ್ಟ ಒಂದು ಆಣೆಯಿಂದ ಹಿಡಿದು ಕೋಟ್ಯಾಧೀಶರು ಕೊಟ್ಟ ದೊಡ್ಡ ದೊಡ್ಡ ರಕಮುಗಳ ವರೆಗೆ ಇಡೀ ದೇಶದ ತುಂಬ ಹಣವು ಕೂಡಹತ್ತಿರುವದು. ಈ ಹಣದಿಂದ ಲಂಡನ ಪಟ್ಟಣದಲ್ಲಿ ಕಾಪ್ಟನ್ ಸ್ಕಾಟನ ಹೆಸರಿನಿಂದ ಶಾಸ್ತ್ರೀಯ ಶೋಧಗಳ ಚರ್ಚೆಯ ಸಲುವಾಗಿ ಒಂದು ದೊಡ್ಡ ಇಮಾರತಿಯನ್ನು ಕಟ್ಟಿಸುವದು ನಿರ್ಣಯ

ವಾಗಿರುತ್ತದೆ. ಆ ಇವಾರತಿಯ ಬಾಗಿಲ ಮೇಲೆ ಸ್ಕಾಟನ ಕಟ್ಟಕಡೆಯ ಉದ್ಗಾರಗಳಾದ "ಪ್ರಯತ್ನ ಮಾಡಿರಿ, ಶೋಧಿಸಿರಿ, ಹುಡುಕಿ ತೆಗೆಯಿರಿ, ಸಂಕಟಗಳಿಗೆ ಹಿಂಜರಿಯಬೇಡಿರಿ" (To Strive to Seek, to find and not to yield) ಎಂಬ ಶಬ್ದಗಳನ್ನು ಕೊರೆದಿಡತಕ್ಕವರಿರುವರು.

ಕ್ಯಾಪ್ಟನ್ ಸ್ಕಾಟನ ಮರಣದ ಸಂಗತಿಯು ತಿಳಿದಕೂಡಲೆ ಎಲ್ಲ ಪಾಶ್ಚಾತ್ಯ ದೇಶಗಳಲ್ಲಿ ವಿಶೇಷವಾಗಿ ಇಂಗ್ಲಂಡ ಹಾಗು ಸಂಯುಕ್ತ ಸಂಸ್ಥಾನಗಳಲ್ಲಿ ನಾಲ್ಕೂ ಕಡೆಗೆ ಸಹಾನುಭೂತಿಯು ಪ್ರಕಟವಾಯಿತು. ಮತ್ತು ಜ್ಞಾನಾಭಿಲಾಷೆಯ ಸಲುವಾಗಿಯೂ, ಶಾಸ್ತ್ರೀಯ ಶೋಧದ ಸಲುವಾಗಿಯೂ ತಮ್ಮ ಪ್ರಾಣಗಳನ್ನು ಸಹ ಆಹುತಿಕೊಟ್ಟಂಥವರಿಗೆ ಗೌರವವನ್ನು ಕೊಡ ಹತ್ತಿದರು. ಅವರ ಹೆಸರಿನಿಂದ ಜಯಜಯಕಾರವು ಆಗಹತ್ತಿತು. ಈ ಎಲ್ಲ ಸಂಗತಿಗಳನ್ನು ಆಲೋಚಿಸಲು, ಪಾಶ್ಚಿಮಾತ್ಯ ದೇಶಗಳ ಜನರು ಜೀವಕ್ಕೆ ಸಹ ಎರವಾಗಬೇಕಾಗುವಂಥ ಸಾಹಸದ ಕೆಲಸಗಳನ್ನು ಮಾಡಲಿಕ್ಕೆ ಯಾಕೆ ಸಿದ್ಧರಾಗುತ್ತಾರೆಂಬುದರ ಮರ್ಮವು ಚನ್ನಾಗಿ ಗೊತ್ತಾಗುವದು. ಕೃತಜ್ಞರಾದಂಥ, ಗುಣವನ್ನು ಗೌರವಿಸುವಂಥ, ಸಹಾನುಭೂತಿಯುಳ್ಳಂಥ ತನ್ನ ದೇಶ ಬಾಂಧವರ ಬೆನ್ನಾಸರವು ತಮಗುಂಟೆಂಬ ನಂಬಿಗೆಯಿಂದ ಉತ್ತೇಜಿತರಾದ ಸಾಹಸಿಗರಿಗೆ ಅಶಕ್ಯವಾದದ್ದು ಯಾವದೂ ಇಲ್ಲ. ತಾವು ತಮ್ಮ ದೇಶದ ಕೀರ್ತಿಯನ್ನು ವೃದ್ಧಿಗೊಳಿಸುವ ಯತ್ನವನ್ನು ಮಾಡುತ್ತಿರಲು ಅಕಸ್ಮಾತ್ತಾಗಿ ಮರಣದ ಬಾಯಿಗೆ ತುತ್ತಾದರೆ, ತಮ್ಮ ಹಿಂದೆ ಕೃತಜ್ಞರೂ, ಗುಣಗ್ರಾಹಕರೂ ಆದ ತಮ್ಮ ದೇಶಬಾಂಧವರು ತಮ್ಮ ಹೆಸರಿನಿಂದ ಒಳ್ಳೇ ಅಭಿಮಾನದಿಂದ ಜಯಜಯಕಾರವನ್ನು ಮಾಡಿಯಾರೆಂತಲೂ, ತಮ್ಮ ಪಶ್ಚಾತ್ ತಮ್ಮ ಕುಟುಂಬದವರಿಗೆ ಪರಿಪರಿಯ ಕಷ್ಟಗಳನ್ನು ಪಡಗೊಡಲಿಕ್ಕಿಲ್ಲೆಂತಲೂ ಅವರ ಮನಸಿನಲ್ಲಿ ಸರ್ವಕಾಲವೂ ನಂಬಿಗೆ ಇರುವ ಕಾರಣ ಅವರು ಉತ್ತರ ಅಥವಾ ದಕ್ಷಿಣಧ್ರುವನನ್ನು ಶೋಧಿಸಲಿಕ್ಕಿಷ್ಟೇ ಯಾಕೆ? ಪ್ರತ್ಯಕ್ಷ ಯಮನ ದವಡೆಗಳಂಥ ಭಯಂಕರ ಸ್ಥಳಕ್ಕೆ ಹೋಗಲಿಕ್ಕಾದರೂ ಸಿದ್ಧರಾಗುತ್ತಾರೆ. ಆದರೆ ನಮ್ಮ ಈ ದೇಶದಲ್ಲಿ ಇಂಥ ಉತ್ತೇಜನವಂತೂ ಒತ್ತಟ್ಟಿಗಿರಲಿ, ತಿರುಗಿ ಯಾರಾದರೂ ಸಾಹಸವನ್ನು ಮಾಡಲಿಕ್ಕೆ ಹೋಗಿ ನಷ್ಟಹೊಂದಿದರೆ, ಒಳ್ಳೇದಾಯಿತು, ಇಂಥ ಇಲ್ಲದ ಉಸಾಬರಿಯನ್ನು ಇವನಿಗೆ ಯಾರು ಮಾಡಲಿಕ್ಕೆ ಹೇಳಿದ್ದರು? ಎಂದು ಉಪಹಾಸಾ

ಸ್ಪದವಾದ ಟೀಕೆಗಳ ರೂಪದಿಂದ ಸಾಹಸಿಗರಿಗೆ ಸಂಭಾವನೆಯು ದೊರೆಯುವದು. ಇಂಥ ಸ್ಥಿತಿಯಲ್ಲಿ ಒಳ್ಳೇ ಸಾಹಸದ ಕೆಲಸಗಳ ಜವಾಬದಾರಿಯನ್ನು ಮೈಮೇಲೆ ಹೊತ್ತು ಮಾಡುವ ಜನರು ಹ್ಯಾಗೆ ಮುಂದೆ ಬಂದಾರು? ಆಕಾಶದಲ್ಲಿ ವಿಮಾನಗಳನ್ನು ನಡಿಸುವದು ಶಕ್ಯವುಂಟೆಂಬದು ಸಿದ್ಧವಾದಂದಿನಿಂದ ಆ ಕಲೆಯಲ್ಲಿ ಪ್ರಾವೀಣ್ಯವನ್ನು ಪಡೆಯುವದಕ್ಕಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಮೂರು ನಾಲ್ಕು ವರ್ಷಗಳಲ್ಲಿ ಏನಿಲ್ಲೆಂದರೂ ನೂರಿನ್ನೂರು ಜನರು ಜೀವಕ್ಕೆ ಎರವಾಗಿರಬಹುದು. ಆದರೆ ಒತ್ತಟ್ಟಿಗೆ ಒಬ್ಬ ಸಾಹಸಿಗನು ಅವ ಘಾತವನ್ನು ಹೊಂದಿ ಮರಣಹೊಂದಲು, ಬೇರೊಂದು ಕಡೆಗೆ ಅವನಿಗೆ ಬದಲಾಗಿ ಹತ್ತು ಜನ ಸಾಹಸಿಗರು ಆ ಕೆಲಸವನ್ನು ಮಾಡಲಿಕ್ಕೆ ಮುಂದೆ ಬರುವರು; ಈ ಪ್ರಕಾರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇಂಥ ಸಾಹಸಿಗರ ಸಂಖ್ಯೆಯು ಪರಂಪರೆಯಿಂದ ಹೆಚ್ಚಾಗುತ್ತ ಹೋಗುವದು. ಆದರೆ ನಮ್ಮ ದೇಶದಲ್ಲಿ ಇದಕ್ಕೆ ವಿಪರೀತವಾದ ಸ್ಥಿತಿಯು ಇರುವದು. ಒಬ್ಬ ಮನುಷ್ಯನಿಗೆ ಬಂದು ಕೆಲಸದಲ್ಲಿ ಸ್ವಲ್ಪ ಪೆಟ್ಟು ತಗಲಿದರೆ ಸಾಕು. ಅದನ್ನು ಕಂಡು ಅವನ ವ್ಯವಸಾಯ ಬಂಧುಗಳಲ್ಲಿ ಹತ್ತು ಜನರು ಕೈಕಾಲುಗೆಟ್ಟು ಔದಾಸೀನ್ಯದಿಂದ ಕೂತುಕೊಳ್ಳುವರು. ಹೀಗಾದಮೇಲೆ ಸಾಹಸದ ಕೆಲಸವನ್ನು ಮಾಡಲಿಕ್ಕೆ ಜನರು ಮುಂದಾಗುವ ಬಗೆ ಹ್ಯಾಗೆ?

विघ्नैः पुनः पुनरपि प्रतिहन्यमानाः
प्रारब्धमुत्तमजना न परित्यजंति ।

ಈ ಪ್ರಕಾರದ ವೃತ್ತಿಯು ಉತ್ಪನ್ನವಾಗಬೇಕಾದರೆ ಮನುಷ್ಯನಲ್ಲಿ ಸ್ವಾಭಾವಿಕವಾದ ಧೈರ್ಯವಂತೂ ಬೇಕೇ ಬೇಕು. ಆದರೆ ಅದರ ಸಂಗಡ ಜನರಲ್ಲಿ ಗುಣಗ್ರಾಹಕ ಸ್ವಭಾವವೂ ಬೇಕು.

ಪಾಶ್ಚಿಮಾತ್ಯ ಜನಾಂಗಗಳಲ್ಲಿ ಈ ಗುಣಗ್ರಾಹಕ ಸ್ವಭಾವವು ಎಷ್ಟಿರುವದೆಂಬದು ಕ್ಯಾಪ್ಟನ್ ಸ್ಕಾಟನ ಸ್ಮಾರಕದ ವಿಷಯವಾಗಿ ಸದ್ಯಕ್ಕೆ ಆ ದೇಶಗಳಲ್ಲಿ ನಡೆದ ನಾನಾವಿಧದ ಪ್ರಯತ್ನಗಳಿಂದ ಸ್ಪಷ್ಟವಾಗುತ್ತದೆ ಇಂಥ ಗುಣಗ್ರಾಹಕ ಸ್ವಭಾವವು ಇದ್ದ ಹೊರತು, ಯಾವ ರಾಷ್ಟ್ರವೂ ಊರ್ಜಿತಸ್ಥಿತಿಯನ್ನು ಹೊಂದಲಾರದು. ಪಾಶ್ಚಾತ್ಯ ಜನರ ಗುಣಗ್ರಾಹಕ ಸ್ವಭಾವದ ಮೂಲಕವಾಗಿ ಸಾಹಸಿಗರಾದ ಜನರು ಹ್ಯಾಗೆ ಮುಂದೆ ಬರುತ್ತಾರೆಂಬದನ್ನು ತೋರಿಸುವದಕ್ಕಾಗಿ ಇಂದಿನವರೆಗೆ ಧ್ರುವಪ್ರದೇಶವನ್ನು

ಶೋಧಿಸುವದಕ್ಕಾಗಿ ಎಷ್ಟು ಜನರು ಪ್ರಯತ್ನಮಾಡಿದರು? ಎಷ್ಟು ಮಂದಿ ಸಂಕಟಕ್ಕೆ ಗುರಿಯಾದರು? ಎಂಬದರದೊಂದು ಯಾದಿಯನ್ನು ಕೆಳಗೆ ಕೊಟ್ಟಿದ್ದೇವೆ. ಇಂಥ ಸಾಹಸಿಗರಾದ ಶೋಧಕರಿಗೆ ಇಂಗ್ಲಂಡದ ಅರಸನಿಂದ ದೊರೆತ ಉತ್ತೇಜನವು ಕೇವಲ ಶಾಬ್ದಿಕವಾಗಿರದೆ ಬಹು ಬೆಲೆಯುಳ್ಳದ್ದಿರುತ್ತದೆ. ಇ. ಸ. ೧೬೧೬ನೇ ಇಸವಿಯಲ್ಲಿ ಮೂರನೇ ಜಾರ್ಜನ ಆಳಿಕೆಯಲ್ಲಿ ಯುರೋಪದ ಈಶಾನ್ಯದಿಕ್ಕಿನಿಂದ ಚೀನ ದೇಶಕ್ಕೆ ಹೋಗುವ ಮಾರ್ಗವನ್ನು ಹುಡುಕಿ ತೆಗೆದವರಿಗೆ ಇಪ್ಪತ್ತು ಸಾವಿರ ಪೌಂಡುಗಳನ್ನೂ, ಉತ್ತರ ಧ್ರುವದ ಬಳಿಗೆ ೮೮° ಅಕ್ಷಾಂಶದವರೆಗೆ ಪ್ರವಾಸ ಮಾಡಿದವರಿಗೆ ಐದು ಸಾವಿರ ಪೌಂಡುಗಳನ್ನೂ ಇನಾಮಾಗಿ ಕೊಡತಕ್ಕದ್ದೆಂದು ಕಾಯದೆಯು ಮಾಡಲ್ಪಟ್ಟಿತು. ಸದ್ಯದ ಬಾದಶಹರು ಕ್ಯಾಪ್ಟನ್ ಸ್ಕಾಟನ ವಿಧವೆಯಾದ ಹೆಂಡತಿಗೆ 'ಸರದಾರನ ಹೆಂಡತಿ' ಎಂಬ ಬಹುಮಾನದ ಪದವಿಯನ್ನು ಕೊಡಬೇಕೆಂದು ಅಪ್ಪಣೆಯನ್ನು ಮಾಡಿರುವರು.

ಉತ್ತರಧ್ರುವಸಂಶೋಧಕರು.

ಅ. ನಂ	ಪ್ರವಾಸದ ಕಾಲ.	ಸಂಶೋಧಕನ ಹೆಸರು.	ಎಲ್ಲಿಯವರೆಗೆ ಪ್ರವಾಸಮಾಡಿದನು?	ಶರಾ.
೧	೧೫೦೦	ಸೆಬಾಸ್ಟಿಅನ್ ಕ್ಯಾಬಟ	ಯುರೋಪದ ಈಶಾನ್ಯದಿಂದ ಚೀನ ದೇಶಕ್ಕೆ ಹೋಗುವ ಮಾರ್ಗವನ್ನು ಹುಡುಕುವ ಪ್ರಯತ್ನವನ್ನು ಮಾಡಿದನು.	
೨	ಗೊತ್ತು ಇಲ್ಲ.	ಉಯಿಲ್ಯಮಬಾಫಿನ್	ಬಾಫಿನ್‌ಲ್ಯಾಂಡ ಉ. ಅ. ೭೦°	
೩	೧೫೮೫-೮೭	ಜಾನಡೇವ್ಹಿಸ್	ಉ. ಅ. ೭೨°.೪೧	
೪	೧೬೦೬	ಉಯಿಲ್ಯಮಸ್ಕಾರ್ಸ್	ಉ. ಅ. ೮೦°	
೫	೧೬೭೪	ಬಿಪೆರಿ	ಉ.ಅ.೮೨°.೪೫	ಬರ್ಫದ ಮೇಲೆ ಜರೆಯುವ ಬಂಡಿಗಳನ್ನು ಇವನೇ ಮೊದಲು ಉಪಯೋಗಿಸಿದನು.
೬	೧೮೨೭	ಸರಜಾನ್ ಫ್ರಾಂಕ್ಲಿನ	ಲಿಂಟಾಕ್ ಚಾಸಲದವರೆಗೆ ಹೋಗಿರಬಹುದು.	ಮರಣಹೊಂದಿದ ಸುದ್ದಿಯು ೧೮೪೬ ರಲ್ಲಿ ಹತ್ತಿತು.

೬	೧೮೩೫	ಕ್ಯಾಪ್ಟನ್ ನೇಅರ್ಸ್	ಉ. ಅ. ೮೩°.೨೦	
೮	೧೮೮೧	ಲಾಕ್‌ವುಡ್	ಉ.ಅ.೮೩°.೩೫	
೯	ಗೊತ್ತು ಇಲ್ಲ.	ಡಿ. ಲಾಂಗ್	ಬರ್ಫದಲ್ಲಿ ಸಿಕ್ಕು ಅದರಸಂಗಡ ಧ್ರುವದ ಆಚೆಗೆ ಹೋದನು.	ಹಡಗವು ಬರ್ಫದ ಸಿಕ್ಕು ಏಲ್ಲರೂ ಪ್ರಾಣಹೊಂದಿದರು.
೧೦	೧೮೮೩	ನಾನ್ಸನ್	ಉ. ಅ. ೮೬°.೧೭	ಒಬ್ಬ ಮನುಷ್ಯನ ನಾಯುದೆ ಸುಖರೂಪವಾಗಿ ತಿರುಗಿ ಬಂದರು.
೧೧	೧೯೦೦	ಶಾಷ್ಟನ್ ಕೇಗ್ನಿ	ಉ. ಅ. ೮೬°.೩೪	
೧೨	೧೯೦೯	ಕ್ಯಾಪ್ಟನ್ ಪೆರಿ (ಅಮೇರಿಕಾ)	ಉತ್ತರಧ್ರುವದಮೇಲೆ ನಿಶಾನೆಯನ್ನು ನೆಟ್ಟನು.	

ದಕ್ಷಿಣಧ್ರುವಸಂಶೋಧಕರು.

ಸಂ.	ಪ್ರವಾಸದ ಕಾಲ.	ಸಂಶೋಧಕನ ಹೆಸರು.	ಎಲ್ಲಿಯವರೆಗೆ ಪ್ರವಾಸಮಾಡಿದರು?	ಶರಾ.
೧	೧೭೭೩	ಕ್ಯಾಪ್ಟನ್ ಕುಕ್.	ದ. ಅ. ೭೧°.೧೦	
೨	೧೮೨೯	ಜೋಸ್ ಮೇಪೇಲ್	ದ. ಅ. ೭೪°.೧೫	
೩	೧೮೪೨	ಕ್ಯಾಪ್ಟನ್ ರಾಸ್.	ದ. ಅ. ೭೮°. ೯	ವಿಕ್ಟೋರಿಆ ಲ್ಯಾಂಡ್ ಐಬಸ್ ಪರ್ವತ ಮುಂತಾದವುಗಳನ್ನ ಗೊತ್ತು ಹಚ್ಚಿದನು
೪	೧೯೦೪	ಕ್ಯಾಪ್ಟನ್ ಸ್ಕಾಟ್.	ದ. ಅ. ೮೨°.೧೭	ಸರಕಾರದವರ ಸಹಾಯದಿಂದ ಮಾಡಿದ ಮೊದಲನೇ ಸ್ವಾರಿ.
೫	೧೯೧೧	ಕ್ಯಾಪ್ಟನ್ ಅಮಂಡ್ಸೇನ (ನಾರ್ವೆಜಿಅನ್).	ದಕ್ಷಿಣಧ್ರುವದಮೇಲೆ ನಿಶಾನೆಯನ್ನು ಊರಿದನು. ತಾ೧೬-೧೨-೧೧.	
೬	೧೯೧೨	ಕ್ಯಾಪ್ಟನ್ ಸ್ಕಾಟ್.	ದಕ್ಷಿಣಧ್ರುವಕ್ಕೆ ತಾ॥ ೧೭ನೇ ಜಾನೇವಾರಿ ೧೯೧೨ನೇ ಇಸವಿಯ ದಿವಸ ಮುಟ್ಟಿದನು.	ತಾ॥೬ನೇ ಮಾರ್ಚ್ ತರುವಾಯ ದಾರಿಯಲ್ಲಿ ಬರ್ಫದ ಬಿರುಗಾಳಿಯಲ್ಲಿ ಸಿಕ್ಕು ಮರಹೊಂದಿದನು.

ಸಿದ್ಧನಾಥ ಪಾಚಣ ಮಂಬರ.
ಪೂರಬ್ಬ ಪಿ ಧಾರವಂಡ.

ಶಾಲಾಪತ್ರ

ಪುಸ್ತಕ ೪೯. | ಜೂನ ೧೯೧೩. | ಸಂಚಿಕೆ ೬.

ಸ್ಫುಟ ವಿಷಯಗಳು.

೧. ಆಕ್ಸಿಜನವು ಪ್ರಾಣವಾಯುವೆಂದು ಎಲ್ಲರೂ ಬಲ್ಲರು. ಹವೆಯು ಭೂಮಿಯಿಂದ ಮೇಲಕ್ಕೆ ಹೋದ ಹೋದಂತೆ ವಿರಲವಾಗುತ್ತದೆಂಬದೂ ಸರ್ವಶ್ರುತವು. ಹವೆಯ ವಿರಲತ್ವದಂತೆ ಅದರೊಳಗಿನ ಆಕ್ಸಿಜನವು ಕಡಿಮೆಯಾಗುತ್ತದೆಂಬದು ಸ್ಪಷ್ಟವದೆ. ಈ ಕಾರಣದಿಂದ ಹಿಮಾಲಯದ ಶಿಖರಗಳಂಥ ಎತ್ತರ ಪ್ರದೇಶಗಳಲ್ಲಿ ಸಂಚರಿಸುವವರಿಗೂ, ವಿಮಾನದಲ್ಲಿ ಕುಳಿತು ಬಾಂದಳದಲ್ಲಿ ಅಡ್ಡಾಡುವವರಿಗೂ ಶ್ವಾಸೋಚ್ಛ್ವಾಸಕ್ಕೆ ತೊಂದರೆಯಾಗುವದು. ಈ ತೊಂದರೆಯ ನಿವಾರಣೆಗಾಗಿ ಇದುವರೆಗೆ ಆಕ್ಸಿಜನವಾಯುವನ್ನು ತುಂಬಿದ ತಿತ್ತಿಗಳನ್ನು ಸಂಗಡ ಒಯ್ದು ಆಗಾಗ್ಗೆ ಅದರೊಳಗಿನ ವಾಯುವನ್ನು ತಕ್ಕ ತಕ್ಕಷ್ಟು ತಕ್ಕೊಳ್ಳುತ್ತಿರುವರು. ಆದರೆ ಇತ್ತಲಾಗಿನ ಶೋಧಕರು, ಈ ಮೇರೆಗೆ ಸಂಚಾರ ಮಾಡುವವರ ಶರೀರದಲ್ಲಿಯೇ ಆಕ್ಸಿಜನವಾಯುವನ್ನು ತಕ್ಕ ಪ್ರಮಾಣದಿಂದ ಜೀಕಳೆಯಿಂದ ತುಂಬಿದರೆ ಪ್ರಯೋಜನವಾಗುವದೆಂದು ಪ್ರಯೋಗದಿಂದ ಸಿದ್ಧ ಮಾಡಿದ್ದಾರೆ. ಇದನ್ನು ಅಲ್ಪ ಪ್ರಮಾಣದಿಂದ ಶರೀರದಲ್ಲಿ ಸೇರಿಸಿದರೆ ಸಾಕು, ಎಷ್ಟೋ ದಿವಸಗಳವರೆಗೆ ಉನ್ನತ ಪ್ರದೇಶದಲ್ಲಿ ಸಂಚರಿಸುವವರ ಶ್ವಾಸೋಚ್ಛ್ವಾಸಕ್ಕೆ ಅನುಕೂಲವಾಗುವದೆಂದು ಅವರು ನಿರ್ಣಯಿಸಿರುವರು.

ಔತವ ಶೋಧಗಳು: ಆಕ್ಸಿಜವ ವಾಯು.

---

೨. ಈ ದುರ್ಮಿಲ ಧಾತುವಿನ ಪರಿಚಯವು ವಾಚಕರಿಗೆ ಕೇಳಿಯಾದರೂ ಇರಬಹುದು. ಇದರ ಬಹು ದಿವಸದ ಸಾನ್ನಿಧ್ಯದಿಂದ ಅನೇಕ ರೋಗಗಳು ವಾಸಿಯಾಗುವವು; ಕೆಲವು ಹೊಸ ಬೇನೆಗಳೂ ಗಂಟುಬೀಳುವವು. ಬಳಗಡೆಯಲ್ಲಿ ಒಬ್ಬ ಜರ್ಮನ್ ಶೋಧಕನು ಒಬ್ಬ ರತ್ನವ್ಯವಹಾರದವನಿಂದ ಕೆಲವು ಇಂದ್ರನೀಲಗಳನ್ನು ಕೊಂಡು ಒಂದು ಪೆಟ್ಟಿಗೆಯಲ್ಲಿಟ್ಟು ಕಾಜಿನದೊಂ

ರೇಡಿಯಮ್ ಧಾತು.

ದು ಕೊಳವೆಯೊಳಗೆ ರೇಡಿಯಮ್ ಬ್ರೋಮೈಡ ಎಂಬ ಪದಾರ್ಥವನ್ನು ಹಾಕಿ ಆ ಕೊಳವೆಯನ್ನು ಅದೇ ಪೆಟ್ಟಿಗೆಯಲ್ಲಿಟ್ಟನು. ಮುಂದೆ ಒಂದು ತಿಂಗಳಾದ ಬಳಿಕ ನೋಡಲು, ಅವುಗಳ ಮೂಲ ವರ್ಣವೆಲ್ಲ ಹೋಗಿ ಬೇರೊಂದು ಲಕ ಲಕ ಹೊಳೆಯುವ ಬಣ್ಣದಿಂದ ಅವು ಮಿನುಗುತ್ತಿದ್ದವು. ಬಳಿಕ ಅವನ್ನೆಲ್ಲ ಅದೇ ವರ್ತಕನಿಗೆ ಮಾರಲು, ಇಪ್ಪತ್ತಿ ಹಣವು ಬಂತು. ವರ್ತಕನಿಗೆ ಅವುಗಳ ಗೊತ್ತು ಹತ್ತಲಿಲ್ಲ. ಈ ಮೇರೆಗೆ ರೇಡಿಯಮ್ಮಿನ ಅನನುಭೂತಶಕ್ತಿಯ ಅಗರವೇ ಇರುವದು. ಈ ಶಕ್ತಿಯನ್ನು ಕಂಡು ಹಿಡಿಯುವದೊಂದು ಸಂಸ್ಥೆಯು ಲಂಡನದಲ್ಲಿ ನಿರ್ಮಾಣವಾಗಿರುವದು. ಆದರೂ ಇದು ಅತಿ ದುರ್ಮಿಲವಾದ್ದರಿಂದ ಸಾಕಷ್ಟು ದೊರೆಯುವದಿಲ್ಲ.

---

೩. ಉಷ್ಣಕಟಿಬಂಧದಲ್ಲಿ, ವಿಶೇಷವಾಗಿ ಭೂಮಧ್ಯ ರೇಷೆಯ ಸಮೀಪದ ದೇಶದಲ್ಲಿ ಸೂರ್ಯಕಿರಣಗಳು ಪ್ರಖರವಾಗಿರುವವು. ಸೂರ್ಯ

ಸೂರ್ಯಪ್ರಕಾಶ.

ಕಿರಣಗಳಲ್ಲಿ ಉಷ್ಣತೆ, ಪ್ರಕಾಶ ಎಂಬ ಎರಡು ಶಕ್ತಿಗಳಿರುವವು. ಉಷ್ಣತೆಯ ಕಿರಣಗಳನ್ನು ಯಂತ್ರವನ್ನು ನಡಿಸುವದಕ್ಕೆ ಉಪಯೋಗ ಮಾಡಿಕೊಳ್ಳುವಷ್ಟು ಬುದ್ಧಿವಂತಿಕೆಯು ಈ ಬೆಳವಲನಾಡಿನವರ ಸ್ವಪ್ನದಲ್ಲಿ ಕೂಡಾ ಬರಲಿಲ್ಲ. ಆದರೆ ಅಮೇರಿಕೆಯ ಶೋಧಕರು ನೈಲ ನದಿಯ ದಂಡೆಯ ಪ್ರದೇಶದಲ್ಲಿ ಈ ಸೂರ್ಯಕಿರಣಗಳ ಉಷ್ಣತೆಯನ್ನು ಉಪಯೋಗಿಸಿಕೊಂಡು ಜಂಗಮ ಯಂತ್ರವನ್ನು ರಚಿಸಿ, ಆ ನದಿಯ ನೀರನ್ನು ಮೂವತ್ತು ಫೂಟು ಮೇಲಕ್ಕೆ ಏರುವಂತೆ ಮಾಡಿರುವರು. ಇದರಿಂದ ಕೃಷಿಗೆ ಅನುಕೂಲವಾಗಿ ಸಂಪತ್ತು ಉತ್ಪನ್ನವಾಗುವದೆಂದು ಹೇಳಲಿಕ್ಕೇ ಬೇಡ. ಈ ಯಂತ್ರದ ರಚನೆಯ ಹ್ಯಾಗೆಂದರೆ:— ೨೦೪ ಫೂಟು ಉದ್ದ, ೧೪ ಫೂಟು ಅಗಲ ಇರುವ ಐದು ಅರ್ಧ ವರ್ತುಲಾಕಾರದ ಕನ್ನಡಿಗಳನ್ನು ಜೋಡಿಸಿರುವರು. ಈ ಇಡೀ ಚಕ್ರದ ಮುಂಭಾಗವು ಯಾವಾಗಲೂ ಸೂರ್ಯನಿಗೆ ಅಭಿಮುಖವಾಗಿರುವಂತೆ ಮಾಡಿರುವರು. ಅಂದರೆ, ಸೂರ್ಯನು ತಿರಿಗಿದಂತೆ ಈ ಚಕ್ರವೂ ಅವನ ಲಂಬ ಕಿರಣಗಳಿಗೆ ಅಭಿಮುಖವಾಗಿರುವಂತೆ ಗಡಿಯಾರದ ಚಕ್ರಗಳಂಥ ಚಕ್ರಗಳಿಂದ ಅನುಕೂಲಮಾಡಿದ್ದಾರೆ. ಈ ಕನ್ನಡಿಯ ಚಕ್ರಗಳ ಮೇಲೆ ಬಿದ್ದ ಕಿರಣಗಳು ಪರಾವರ್ತನೆ ಹೊಂದಿ ಒಂದು

ಗೊಡುತ್ತವೆ. ಆ ಸ್ಥಳದಲ್ಲಿ ಒಂದು ಕೊಳವೆಯಲ್ಲಿ ನೀರು ತುಂಬಿಟ್ಟು ಈ ಕಿರಣಗಳ ಸಂಗ್ರಹದ ಉಷ್ಣತೆಯಿಂದ ಉಗಿಯನ್ನುಂಟು ಮಾಡುವರು. ಉಗಿಯು ಕಾರ್ಯವಂತೂ ಸರ್ವರಿಗೆ ಗೊತ್ತಿರುವದು. ಅದರಿಂದ ಬೇಕಾದ ಕೆಲಸಗಳನ್ನು ಮಾಡಿಕೊಳ್ಳಬಹುದು.

ಒಂದು ಹೊಸ ಉದ್ಯೋಗವು.

೪. ಭೂಮಿಯ ಮೇಲೆ ಎಲ್ಲಕಡೆಯಲ್ಲಿ ಉಷ್ಣತೆಯು ಮಾನವು ಒಂದೇ ತರವಾಗಿಲ್ಲ; ನೆಲವೂ ಒಂದೇ ಪ್ರಕಾರದ್ದಿಲ್ಲ. ಆದ್ದರಿಂದ ಎಲ್ಲ ಬಗೆಯ ಉದ್ಭಿಜ್ಜಗಳು ಪ್ರತಿ ಒಂದು ಪ್ರದೇಶದಲ್ಲಿ ಬೆಳೆಯುವದಿಲ್ಲ. ಇದು ಸರ್ವಶ್ರುತವು. ಇಂಥ ವಿಚಿತ್ರರಚನೆಯನ್ನು ಭಗವಂತನು ಯಾಕೆ ಮಾಡಿರಬಹುದು? ದೂರ ದೂರದ ಮಾನವಪ್ರಾಣಿಗಳಲ್ಲಿ ಬಳಿಕೆಯು ಬೆಳೆದು ಪ್ರೇಮವು ವೃದ್ಧಿಂಗತವಾಗಬೇಕೆಂತಲೂ, ವ್ಯಾಪಾರ, ಉದ್ಯೋಗ, ಯಂತ್ರರಚನೆ ಮುಂತಾದವುಗಳಲ್ಲಿ ಮನುಷ್ಯನ ಬುದ್ಧಿಯ ಕುಶಲತೆಯು ಪ್ರಕಟವಾಗಬೇಕೆಂತಲೂ ಅತನ ಉದ್ದೇಶವಿರಬಹುದೋ! ಪ್ಯಾಗೇ ಇರಲಿ, ಜಗದೀಶನ ಸೃಷ್ಟಿಯ ರಚನೆಯಂತೂ ಹೀಗಿರುವದು. ಮಾನವನು ತನ್ನ ಬುದ್ಧಿಸಾಮರ್ಥ್ಯದಿಂದ ಪೃಥ್ವಿಯ ಯಾವತ್ತು ಭಾಗಗಳಲ್ಲಿ ದೊರೆಯುವ ಸುಖೋಪಭೋಗದ ವಸ್ತುಗಳನ್ನು ಪಡೆಯಲಿಕ್ಕೆ ಶಕ್ತನಾಗಿರುವನು. ಹಡಗು, ಉಗೆಬಂಡಿಗಳಿಂದ ಮಾರ್ಗಕ್ರಮಣಕ್ಕೆ ಅನುಕೂಲ ಮಾಡಿಕೊಂಡಿರುವನು. ಅದರೂ ಬೇಗನೆ ಕೊಳೆಯುವ ಇಲ್ಲವೆ ಇಳಿಯುವ ಹಣ್ಣುಗಳನ್ನು ದೂರದೂರ ದೇಶಗಳಿಗೆ ಕಳಿಸಲಿಕ್ಕೆ ಇನ್ನು ಸಮರ್ಥನಾಗಿದ್ದಿಲ್ಲ. ಪ್ರಸ್ತುತಕ್ಕೆ ಇದೂ ಸಾಧ್ಯವಾಗಿದೆ. ಅಮೇರಿಕೆಯಲ್ಲಿ ಕ್ಯಾಲಿಫೋರ್ನಿಯಾ ಪ್ರಾಂತದಲ್ಲಿ ಪೀಚೀ ಎಂಬದೊಂದು ಜಾತಿಯ ಹಣ್ಣು ಬೆಳೆಯುವದು. ಇದನ್ನು ಕೆಡದಂತೆ ಡಬ್ಬಿಯಲ್ಲಿ ಹಾಕಿ, ಮುಟ್ಟಲಿಕ್ಕೆ ತಿಂಗಳ ಗಟ್ಟಲೆ ದಿವಸಗಳು ಬೇಕಾಗುವಂಥ ದೇಶಗಳಿಗೆ ಕಳಿಸುತ್ತಿರುವರು.

ಡಾಕ್ಟರ್ ಸರಕಾರ ಎಂಬವರೊಬ್ಬ ಬಂಗಾಲದ ಸದ್ಗೃಹಸ್ಥರು ವೈದ್ಯ ವಿದ್ಯವನ್ನು ಕಲಿಯಲಿಕ್ಕೆ ಅಮೇರಿಕೆಗೆ ಹೋಗಿದ್ದರು. ಅವರ ಕಿವಿಗೆ ಈ ಪೀಚೀ ಹಣ್ಣಿನ ಸುದ್ದಿಯು ಬಿತ್ತು. ಕೂಡಲೆ ಅವರು ಅಲ್ಲಿಗೆ ಹೋಗಿ ಕೆಲವು ದಿವಸ ನಿಂತು, ಆ ಕಲೆಯನ್ನು ಸಂಪೂರ್ಣವಾಗಿ ಕಲಿತುಕೊಂಡು ಬಂದು, ಕಲಕತ್ತೆಯಿಂದ ೩೫೦ ಮೈಲು ದೂರವಿರುವ ಮುಝಫರನಗರ

ದಲ್ಲಿ ಅಂಥಾದ್ದೇ ಒಂದು ಕಾರಖಾನೆಯನ್ನು ತೆಗೆದಿರುವರು. ಆದರೆ ಈ ಕಾರಖಾನೆಯಿಂದ ಪೀಚಿಹಣ್ಣಿಗೆ ಬದಲಾಗಿ ಮಾವಿನ ಹಣ್ಣುಗಳನ್ನು ಕಳಿಸುತ್ತಿರುವರು. ಯುರೋಪ, ಅಮೇರಿಕಾ ಮುಂತಾದ ದೇಶಗಳಲ್ಲಿ ಮಾವು ಅಪರೂಪ, ಕಿಂಬಹುನಾ ದುರ್ಲಭ. ಭರತಖಂಡದಲ್ಲಂತೂ ಅನ್ಯವೃಕ್ಷಗಳು ಸಮೃದ್ಧಿಯಾಗಿರುವವು. ಮಿಕ್ಕ ಹಣ್ಣುಗಳಿಗಿಂತ ಈ ಹಣ್ಣುಗಳಲ್ಲಿ ಮಾಧುರ್ಯವು ಹೆಚ್ಚು; ಮೇಲಾಗಿ ಇವು ವರ್ಷಕ್ಕೊಮ್ಮೆ ದೊರೆಯುವವು. ಅದ್ದರಿಂದ ಈ ಹಣ್ಣುಗಳು ಪರದೇಶದವರಿಗೆ ಬಳ್ಳೇ ರುಚಿಕರವಾಗಿರುವವು. ಇವುಗಳನ್ನು ಕಳಿಸುವ ರೀತಿ ಹ್ಯಾಗಂದರೆ:—

ಮೊದಲು ಉತ್ತಮವಾದ ಫಲಗಳನ್ನು ಆರಿಸುತ್ತಾರೆ. ಅದರ ಮೇಲಿನ ತೊಗಟೆಯನ್ನೂ ಒಳಗಿನ ಬೀಜವನ್ನೂ ಜಾಣತನದಿಂದ ತೆಗೆಯುತ್ತಾರೆ. ಬಳಿಕ ಉಳಿದ ಪಿಂಡವನ್ನು ಕೊಯ್ದು ಹೋಳಿಕೆಗಳನ್ನು ಮಾಡುತ್ತಾರೆ. ಈ ಹೋಳುಗಳನ್ನು ಸತುವಿನ ಡಬ್ಬಿಯಲ್ಲಿ ತುಂಬಿ ಅದರೊಳಗೆ ಸಕ್ಕರಿಯ ಪಾಕವನ್ನು ಹಾಕುವರು. ಬಳಿಕ ಆ ಡಬ್ಬಿಗೆ ಮುಚ್ಚಳವನ್ನು ಮುಚ್ಚಿ ಬೆಸೆಯುವರು. ಆ ಮುಚ್ಚಳಕ್ಕೆ ಒಂದು ಸಣ್ಣ ತೂತನ್ನಿಟ್ಟಿರುವರು. ಬಳಿಕ ಈ ಡಬ್ಬಿಯನ್ನು ಮರಳುವ ನೀರಲ್ಲಿಡುವರು. ಅದರಿಂದ ಒಳಗಿನ ಹವೆಯು ಕಾಯ್ದು ಹಗುರಾಗಿ ಮುಚ್ಚಳದೊಳಗಿನ ತೂತಿನೊಳಗಿಂದ ಹೊರಬಿದ್ದು ಹೋಗುವದು. ಹೀಗೆ ಡಬ್ಬಿಯು ನಿರ್ವಾತವಾದ ಬಳಿಕ ಆ ತೂತನ್ನು ಬೆಸೆದುಬಿಡುವರು. ತರುವಾಯ ಮತ್ತೆ ಕೆಲಹೊತ್ತು ಎಸರಿನಲ್ಲಿ ಆ ಡಬ್ಬಿಯನ್ನು ಮುಳುಗಿಸಿಡುವರು. ಆ ಮೇಲೆ ಹೊರಗೆ ತೆಗೆದು ಆರಿಸುವರು. ಇಷ್ಟಾದಬಳಿಕ ಕೆಲವೊಂದು ಡಬ್ಬಿಯನ್ನು ಒಡೆದು ಒಳಗಿನ ವದಾರ್ಥದಲ್ಲೇನಾದರೂ ರೋಗಜಂತುಗಳು ಉಳಿದಿರುವವೋ ಎಂದು ಪರೀಕ್ಷಿಸುವರು. ಅಂಥ ಜಂತುಗಳಿಲ್ಲೆಂದು ಮನಗಂಡ ಬಳಿಕ ಅವುಗಳನ್ನು ವ್ಯಾಪಾರಕ್ಕೆ ಕಳಿಸುವರು. ಹೀಗೆ ಕಳಿಸಿದ ಹಣ್ಣುಗಳು ತಾಜಾಹಣ್ಣುಗಳಂತೆ ರುಚಿಕರವಾಗಿರುವವು.

ಈ ಕಾರಖಾನೆಗೆ ೭೫,೦೦೦ ರೂಪಾಯಿ ಹತ್ತಿರುವವು. ಸನ ೧೯೧೦ ರಲ್ಲಿ ೨೦,೦೦೦ ಸಾವಿರ ಡಬ್ಬಿಗಳೂ ಮರುವರುಷ ೩೦,೦೦೦ ಡಬ್ಬಿಗಳೂ ಪರದೇಶಕ್ಕೆ ಕಳಿಸಲ್ಪಟ್ಟವು. ಈ ಕಾರಖಾನೆಯಲ್ಲಿ ನೂರುಮಂದಿಯುವರು. ಡಾ, ಸರಕಾರ ಇವರು ಜಂತುಶಾಸ್ತ್ರದಲ್ಲಿ ಪ್ರವೀಣರಿರುವರು

ಪನಾವೂ ಕಾಲುವೆಯು.

ಉದ್ಗ್ರಂಥಗಳು ಗ್ರಂಥಕರ್ತೃವಿನ ಸ್ಮಾರಕಗಳಾಗಿರುವಂತೆ ಅಪ್ಪು ತವಾದಂಥ ಕಟ್ಟಡಗಳು ಶಿಲ್ಪಕಲಾವಿದರ ಸ್ಮಾರಕಗಳಾಗಿರುವವು. ಇಂಥ ಅದ್ಭುತ ಶಿಲ್ಪಕಾರ್ಯಗಳು ಭೂಮಂಡಲದಲ್ಲಿ ಕ್ವಚಿತ್ತಾಗಿ ದೃಷ್ಟಿಗೆ ಬೀಳು ವವು. ಸುಮಾರು ನಾಲ್ವತ್ತುವರ್ಷಗಳ ಪೂರ್ವದಲ್ಲಿ ಏಸಿಯಾ-ಆಫ್ರಿಕೆಗ ಳನ್ನು ಕೂಡಿಸುತ್ತಿದ್ದ ಸುಯೇಜದ ಸಂಯೋಗಭೂಮಿಯನ್ನು ಕಡಿದು ಭೂಮಧ್ಯ ಸಮುದ್ರವನ್ನು ಕೆಂಪು ಸಮುದ್ರಕ್ಕೆ ಕೂಡಿಸಿದ ಸಂಗತಿಯು ಸರ್ವರಿಗೂ ಗೊತ್ತಿರುವದಪ್ಪೇ? ಈ ಕಾಲುವೆಯಂಥ ಮತ್ತೊಂದು ಕಾಲುವೆಯು ಈಗ ಉತ್ತರ-ದಕ್ಷಿಣ ಅಮೇರಿಕೆಗಳನ್ನು ಬೇರೆಮಾಡಿ ಅಟ್ಲಾಂಟಿಕ್-ಫಾಸಿಫಿಕ್ ಮಹಾಸಾಗರಗಳನ್ನು ಕೂಡಿಸುತ್ತದೆ. ಇದಕ್ಕೆ ಪನಾಮಾಕಾಲುವೆಯೆಂಬ ಹೆಸರು. ಈ ಕಾಲುವೆಯು ಅರ್ವಾಚೀನ ಕಾಲದಲ್ಲಿ ಶಿಲ್ಪಕಲೆಯಲ್ಲಾದ ಅದ್ಭುತ ಪ್ರಗತಿಯನ್ನು ತೋರಿಸುವಂಥ ಉತ್ಕೃಷ್ಟವಾದ ಮಾದರಿಯಾಗಿದೆ.

ಪನಾಮಾ ಎಂಬ ಹೆಸರಿನ ಸಂಯೋಗಭೂಮಿಯು ಉತ್ತರ-ದಕ್ಷಿಣ ಅಮೇರಿಕೆಗಳನ್ನು ಕೂಡಿಸುತ್ತಿತ್ತೆಂಬುದನ್ನು ವಾಚಕರು ಬಲ್ಲರು. ಇದು ೪೫೦ ಮೈಲು ಉದ್ದವಾಗಿದೆ. ತೀರ ಹತ್ತಿರವಾದ ಭಾಗದಲ್ಲಿ ೪೦ ಮೈಲು ಅಗಲವಾಗಿದೆ. ಇದರಿಂದ ವ್ಯಾಪಾರಕ್ಕೂ ಪ್ರವಾಸಿಕರಿಗೂ ಅಡ್ಡಿಯಾಗು ತ್ತದೆಂಬ ಸಂಗತಿಯು ಬಹು ದಿವಸದಿಂದ ಅನೇಕ ದೇಶದವರ ಮನಸಿನಲ್ಲಿ ಕಟಯುತ್ತಿತ್ತು.

ಸನ್ ೧೮೭೦ನೇ ಇಸವಿಯಲ್ಲಿ, ಮೌ. ಲೆಸೆಪ್ಸ ಎಂಬ ಪ್ರಖ್ಯಾತ ನಾದ ಫ್ರೆಂಚ ಇಂಜಿನೀಯರನು ಸುಯೇಜದ ಕಾಲುವೆಯನ್ನು ನಿರ್ಮಾ ಣಮಾಡಿದನು. ಇವನೇ ಈ ಕಾಲುವೆಯ ಕಾರ್ಯವನ್ನೂ ಕೈಕೊಂಡು ಒಂದು ಕಂಪನಿಯನ್ನು ಮಾಡಿ, ಪಾಲುಗಳನ್ನು ಕೂಡಿಸತೊಡಗಿದನು. ಈ ಮೊದಲೇ ಇವನ ಕೀರ್ತಿಯು ಜಗದತುಂಬಾ ಪಸರಿಸಿದ್ದರಿಂದ ಅಲ್ಪ ಕಾಲದಲ್ಲಿಯೇ ಸಾಕಷ್ಟು ಪಾಲುಗಳು ಕೂಡಿದವು. ಕಾಲುವೆಯನ್ನು ಮಾಡು ವ ಪ್ರದೇಶವೂ ತೀವ್ರವೇ ಈ ಕಂಪನಿಯವರ ವಶದಲ್ಲಿ ಬಂತು. ಕೂಡಲೆ ಕೆಲಸಕ್ಕೂ ಆರಂಭವಾಯಿತು. ಲೆಸೆಪ್ಸನು ಸುಯೇಜದ ಕಾಲುವೆಯಂತೆ

ಸಾಕಷ್ಟು ಅಗಲವಾದ ಕಂದಕವನ್ನು ಹರಿಗಡಿದು ಎರಡೂ ಮಹಾಸಾಗರ ಗಳನ್ನು ಕೂಡಿಸಬೇಕೆಂದು ಮೊದಲು ಯೋಚಿಸಿದ್ದನು. ಆದರೆ ಆ ಪ್ರದೇ ಶದಲ್ಲಿ ಚಾಗ್ರೀಜವೆಂಬದೊಂದು ನದಿಯು ಹರಿಯುತ್ತದೆ. ಇದಕ್ಕೆ ಬೇಸಿಗೆ ಯಲ್ಲಿ ಮಹಾಪೂರವು ಬರುವದು. ಇದರಿಂದ ಕೆಲಸಕ್ಕೆ ಅಡ್ಡಿಯಾದೀ ತೆಂಬ ಕಲ್ಪನೆಯು ಲೆಸೆಪ್ಸನಿಗೆ ಮೊದಲು ಹೊಳೆದಿದ್ದಿಲ್ಲ. ಈ ಮಹಾಪೂ ರದ ಆತಂಕದಿಂದಲೂ, ಕಂಪನಿಯವರ ಅಳತೆಗಟ್ಟಿ ವೆಚ್ಚದಿಂದಲೂ, ಅವ್ಯವಸ್ಥೆಯಿಂದಲೂ ದುಡ್ಡಿಲ್ಲ ತೀರಲು, ಕೆಲಸವು ಕಟ್ಟಾಯಿತು. ಕಂಪ ನಿಯ ಪಾಲುಗಾರರಾದ ಫ್ರಾನ್ಸದೊಳಗಿನ ಬಡಜನರಂತೂ ಹಾಳಾಗಿ ಹೋದರು.

ಈ ಮೇರೆಗೆ ಲೆಸೆಪ್ಸನ ಪ್ರಥಮಯತ್ನವು ನಿಷ್ಫಲವಾಗಲು, ಅವನು ಎದೆಗುಂದದೆ, ಮತ್ತೊಂದು ಕಂಪನಿಯನ್ನು ಉಂಟುಮಾಡಿದನು. ಹಾಗೂ ಮೊದಲಿನ ಸಪಾಟಿಯು ಕಾಲುವೆಯ ಹಾದಿಯನ್ನು ಬಿಟ್ಟು ಕಾಲುವೆಯ ಮಧ್ಯದಲ್ಲಿ ಕೆಲವು ಕಡೆ ಲಂರಿಂದ ೧೦೦ ಫೂಟುಗಳ ವರೆಗೆ ಎತ್ತರವಾಗಿ ನೀರು ಏರಿ ನಿಲ್ಲುವಂತೆ ಮಾಡಿ ಕಟ್ಟುಕಾಲುವೆಯನ್ನು ಮಾಡಬೇಕೆಂದು ನಿಶ್ಚಯಿಸಿ ಕೆಲಸಕ್ಕೆ ಆರಂಭ ಮಾಡಿದನು. ಆದರೆ ಆ ಪ್ರಾಂತದ ಹವೆ ಯಿಂದ ಉರಿ, ಚಳಿ, ಸೀತಜ್ವರ ಮುಂತಾದ ಬೇನೆಗಳು ಹುಟ್ಟಿ ಸಾವಿ ರಾರು ಜನ ಕೂಲಿಕಾರರು ಮರಣಹೊಂದಿದರು. ಮರಣಭೀತಿಯಿಂದ ಹೊಸ ಆಳುಗಳು ಬಾರದಂತಾದರು. ಹೀಗಾಗಿ ಕಂಪನಿಯು ದುಡ್ಡಿಲ್ಲ ತೀರಿಹೋಯಿತು; ಮಾಡಿದ ಕೆಲಸವೂ ಮಣ್ಣುಪಾಲಾಯಿತು; ಸಾವಿರಾರು ರೂಪಾಯಿ ಬೆಲೆ ಬಾಳುವ ಯಂತ್ರಗಳೂ ಜಂಗುತಿಂದು ನಾಶವಾಗುವ ಹೊತ್ತು ಬಂತು. ಇಷ್ಟರೊಳಗೆ ಯುನೈಟೆಡ್ ಸ್ಟೇಟ್ಸದ ಸರಕಾರದ ಮನ ಸಿನಲ್ಲಿ, ತಾವೇ ಈ ಕೆಲಸವನ್ನು ಕೈಕೊಳ್ಳಬೇಕೆಂಬ ಇಚ್ಛೆಯು ಉಂ ಟಾಯಿತು. ಕೂಡಲೆ ಅವರು ಹನ್ನೆರಡುಕೋಟಿ ರೂಪಾಯಿಗಳನ್ನು ಕೊಟ್ಟು ಆ ಕಂಪನಿಯವರಿಂದ ಆ ಕಾಲುವೆಯ ಸಂಬಂಧದ ಎಲ್ಲ ಹಕ್ಕುಗಳನ್ನು ಕೊಂಡು ಕೊಂಡು ಕಾಲುವೆಯ ಕೆಲಸವನ್ನು ಪ್ರಾರಂಭಿಸಿ ದರು.

ಇವರು ಮೊದಲು ಆ ಪ್ರದೇಶದಲ್ಲಿ ಉದ್ಭವಿಸುತ್ತಿದ್ದ ಭಯಂಕರ ರೋಗಗಳ ಮೂಲೋತ್ಪಾಟನದ ಕಾರ್ಯಕ್ಕೆ ಕೈಹಾಕಿ, ಸಾವಿರಾರು ಜನ

ರನ್ನು ಯಮಸದನಕ್ಕಟ್ಟುವ ಆ ರೋಗಗಳ ಉತ್ಪತ್ತಿಯ ಕಾರಣಗಳ್ಯಾವ ವು? ಅವುಗಳ ನಿವಾರಣೆಗೆ ಉಪಾಯಗಳ್ಯಾವವು? ಎಂಬ ಬಗ್ಗೆ ವಿಚಾರಮಾ ಡುವದಕ್ಕೊಂದು ಕಮೀಟಿಯನ್ನು ಸ್ಥಾಪಿಸಿದರು. ಕಮೀಟಿಯವರು ಯೋಗ್ಯ ವಿಚಾರವನ್ನು ಮಾಡಿ ಆರೋಗ್ಯ ರಕ್ಷಣೆಯ ಬಗ್ಗೆ ಅನೇಕ ಉಪಾಯ ಗಳನ್ನು ಸೂಚಿಸಿದರು. ಸರಕಾರದವರು ಕೂಡಲೆ ಈ ಉಪಾಯಗ ಳನ್ನು ಮಾಡಲು, ಆ ಪ್ರದೇಶವು ಆರೋಗ್ಯಕರವಾಯಿತು. ಅದರಿಂದ ಕೂಲಿಯವರ ಹೆದರಿಕೆಯು ಬೈಲಾಯಿತು. ಸುತ್ತುಕಡೆಯಿಂದ ನಾಕಪ್ಪು ಆಳುಗಳು ಬಂದವು. ಕೆಲಸವು ಬಲದಿಂದ ನಡೆಯತೊಡಗಿತು.

ಆ ಬಳಿಕ ಸರಕಾರದವರು, ಒಂದೇ ಸನನೆ ಸಪಾಟಾಗಿರುವ ಕಾ ಲುವೆಯನ್ನು ಮಾಡಬೇಕೋ? ತಡೆಕಟ್ಟಿ ಏರಿಳುವಿನ ಕಾಲುವೆಯನ್ನು ಮಾಡಬೇಕೋ? ಎಂಬ ಬಗ್ಗೆ ವಿಚಾರ ನಡಿಸಿದರು. ಬಹು ದಿವಸ ವಿಚಾ ರಮಾಡಿ ಸಪಾಟಾಗಿರುವ ಕಾಲುವೆಯನ್ನು ಮಾಡಿದರೆ ನಡುವಿರುವ ಅನೇಕ ದೊಡ್ಡ ದೊಡ್ಡ ಗುಡ್ಡಗಳನ್ನು ಕಡೆಯಬೇಕಾಗುವದು. ಇದಕ್ಕೆ ಖರ್ಚೂ ಶ್ರಮವೂ ಹೆಚ್ಚಾಗುವದು. ಆದ್ದರಿಂದ ಹೀಗೆ ಮಾಡದೆ ತಕ್ಕ ಸ್ಥಳಗಳಲ್ಲಿ ತಡೆಕಟ್ಟಿ ಏರಿಳುವಿನ ಕಾಲುವೆಯನ್ನು ಮಾಡಬೇಕೆಂದು ನಿರ್ಣಯಿಸಿದರು.

ಈ ತಡೆಕಟ್ಟುವ ಪದ್ಧತಿಗೆ ಇಂಗ್ಲೀಷಿನಲ್ಲಿ "ಲಾಕ್ಸ್" ಎನ್ನುವರು. ಈ ಪದ್ಧತಿಯಿಂದ ಕೆಳಮಗ್ಗಲಿರುವ (ತಗ್ಗಿನಲ್ಲಿರುವ) ಹಡಗುಗಳನ್ನು ಎತ್ತ ರದ ಸ್ಥಳಕ್ಕೆ ತಂದು ಬಿಡಲಿಕ್ಕೆ ಬರುವದು. ಈ ಸ್ಥಳದ ಎರಡೂ ಬದಿಗೆ ಬಾಗಿಲಗಳನ್ನು ಮಾಡಿರುತ್ತಾರೆ. ಈ ಭೂಗದ ನಡುವಿನ ಪ್ರದೇಶದಲ್ಲಿ ನೀರು ತುಂಬಿದ ಕೂಡಲೆ, ಅಲ್ಲಿಯ ಹಡಗಗಳು ತಮ್ಮಷ್ಟಕ್ಕೆ ತಾವೇ ಎತ್ತಲ್ಪಡುತ್ತವೆ. ಮತ್ತು ಕೂಡಲೆ ಎತ್ತರ ಸಪಾಟಿಯ ಬಾಗಿಲವು ತೆರೆದು ಹಡಗನನ್ನು ಮುಂದಕ್ಕೆ ಕಳಿಸುತ್ತದೆ.

ಪನಾಮಾ ಕಾಲುವೆಯಲ್ಲಿ ಇದೇ ಮಾದರಿಯ ಹಂಚಿಕೆಯು ಮಾಡಿ ರುತ್ತದೆ. ತಡೆಕಟ್ಟಿ ೮೫ ಫೂಟು ನೀರು ಏರಿಸಿ, ಅದರಿಂದ ಹಡಗಗಳು ಸಂಯೋಗಭೂಮಿಯನ್ನು ದಾಟಿ ಹೋಗುವಂತೆ ಮಾಡಿರುತ್ತಾರೆ. ಕಾಲು ವೆಯು ೫೦ ಮೈಲು ಉದ್ದವಿದೆ. ಉತ್ತರಕ್ಕೆ ಅಟ್ಲಾಂಟಿಕ ಮಹಾಸಾಗ ರದ ಮಗ್ಗಲಿಗೆ ಕ್ರಿಸ್ಟೋಬಲವೆಂಬಲ್ಲಿ ಕಾಲುವೆಯ ಉತ್ತರ ಮುಖವುಂಟು. ಅಲ್ಲಿಂದ ಹಡಗಗಳು ಕಾಲುವೆಯಲ್ಲಿ ಸೇರಿ ೫೦೦ ಫೂಟು ಅಗಲವಾದಂಥ

ಸಾಕಷ್ಟು ಅಗಲವಾದ ಕಂದಕವನ್ನು ಹರಿಗಡಿದು ಎರಡೂ ಮಹಾಸಾಗರ ಗಳನ್ನು ಕೂಡಿಸಬೇಕೆಂದು ಮೊದಲು ಯೋಚಿಸಿದ್ದನು. ಆದರೆ ಆ ಪ್ರದೇ ಶದಲ್ಲಿ ಚಾಗ್ರೀಜವೆಂಬದೊಂದು ನದಿಯು ಹರಿಯುತ್ತದೆ. ಇದಕ್ಕೆ ಬೇಸಿಗೆ ಯಲ್ಲಿ ಮಹಾಪೂರವು ಬರುವದು. ಇದರಿಂದ ಕೆಲಸಕ್ಕೆ ಅಡ್ಡಿಯಾದೀ ತೆಂಬ ಕಲ್ಪನೆಯು ಲೆಸೆಪ್ಸನಿಗೆ ಮೊದಲು ಹೊಳೆದಿದ್ದಿಲ್ಲ. ಈ ಮಹಾಪೂ ರದ ಆತಂಕದಿಂದಲೂ, ಕಂಪನಿಯವರ ಅಳತೆಗಟ್ಟ ವೆಚ್ಚದಿಂದಲೂ, ಅವ್ಯವಸ್ಥೆಯಿಂದಲೂ ದುಡ್ಡಿಲ್ಲ ತೀರಲು, ಕೆಲಸವು ಕಟ್ಟಾಯಿತು. ಕಂಪ ನಿಯು ಪಾಲುಗಾರರಾದ ಫ್ರಾನ್ಸದೊಳಗಿನ ಬಡಜನರಂತೂ ಹಾಳಾಗಿ ಹೋದರು.

ಈ ಮೇರೆಗೆ ಲೆಸೆಪ್ಸನ ಪ್ರಥಮಯತ್ನವು ನಿಷ್ಫಲವಾಗಲು, ಅವನು ಎದೆಗುಂದದೆ, ಮತ್ತೊಂದು ಕಂಪನಿಯನ್ನು ಉಂಟುಮಾಡಿದನು. ಹಾಗೂ ಮೊದಲಿನ ಸಪಾಟಿಯು ಕಾಲುವೆಯ ಹಾದಿಯನ್ನು ಬಿಟ್ಟು ಕಾಲುವೆಯ ಮಧ್ಯದಲ್ಲಿ ಕೆಲವು ಕಡೆ ೮೦ ರಿಂದ ೧೦೦ ಫೂಟುಗಳ ವರೆಗೆ ಎತ್ತರವಾಗಿ ನೀರು ಏರಿ ನಿಲ್ಲುವಂತೆ ಮಾಡಿ ಕಟ್ಟುಕಾಲುವೆಯನ್ನು ಮಾಡಬೇಕೆಂದು ನಿಶ್ಚಯಿಸಿ ಕೆಲಸಕ್ಕೆ ಆರಂಭ ಮಾಡಿದನು. ಆದರೆ ಆ ಪ್ರಾಂತದ ಹವೆ ಯಿಂದ ಉರಿ, ಚಳಿ, ಸೀತಜ್ವರ ಮುಂತಾದ ಬೇನೆಗಳು ಹುಟ್ಟಿ ಸಾವಿ ರಾರು ಜನ ಕೂಲಿಕಾರರು ಮರಣಹೊಂದಿದರು. ಮರಣಭೀತಿಯಿಂದ ಹೊಸ ಆಳುಗಳು ಬಾರದಂತಾದರು. ಹೀಗಾಗಿ ಕಂಪನಿಯು ದುಡ್ಡಿಲ್ಲ ತೀರಿಹೋಯಿತು; ಮಾಡಿದ ಕೆಲಸವೂ ಮಣ್ಣುಪಾಲಾಯಿತು; ಸಾವಿರಾರು ರೂಪಾಯಿ ಬೆಲೆ ಬಾಳುವ ಯಂತ್ರಗಳೂ ಜಂಗುತಿಂದು ನಾಶವಾಗುವ ಹೊತ್ತು ಬಂತು. ಇಷ್ಟರೊಳಗೆ ಯುನೈಟೆಡ್ ಸ್ಟೇಟ್ಸದ ಸರಕಾರದ ಮನ ಸಿನಲ್ಲಿ, ತಾವೇ ಈ ಕೆಲಸವನ್ನು ಕೈಕೊಳ್ಳಬೇಕೆಂಬ ಇಚ್ಛೆಯು ಉಂ ಟಾಯಿತು. ಕೂಡಲೆ ಅವರು ಹನ್ನೆರಡುಕೋಟಿ ರೂಪಾಯಿಗಳನ್ನು ಕೊಟ್ಟು ಆ ಕಂಪನಿಯವರಿಂದ ಆ ಕಾಲುವೆಯ ಸಂಬಂಧದ ಎಲ್ಲ ಹಕ್ಕುಗಳನ್ನು ಕೊಂಡು ಕೊಂಡು ಕಾಲುವೆಯ ಕೆಲಸವನ್ನು ಪ್ರಾರಂಭಿಸಿ ದರು.

ಇವರು ಮೊದಲು ಆ ಪ್ರದೇಶದಲ್ಲಿ ಉದ್ಭವಿಸುತ್ತಿದ್ದ ಭಯಂಕರ ರೋಗಗಳ ಮೂಲೋತ್ಪಾಟನದ ಕಾರ್ಯಕ್ಕೆ ಕೈಹಾಕಿ, ಸಾವಿರಾರು ಜನ

ರನ್ನು ಯಮಸದನಕ್ಕಟ್ಟುವ ಆ ರೋಗಗಳ ಉತ್ಪತ್ತಿಯ ಕಾರಣಗಳ್ಯಾವ ವು? ಅವುಗಳ ನಿವಾರಣೆಗೆ ಉಪಾಯಗಳ್ಯಾವವು? ಎಂಬ ಬಗ್ಗೆ ವಿಚಾರಮಾ ಡುವಡಕ್ಕೊಂದು ಕಮೀಟಿಯನ್ನು ಸ್ಥಾಪಿಸಿದರು. ಕಮೀಟಿಯವರು ಯೋಗ್ಯ ವಿಚಾರವನ್ನು ಮಾಡಿ ಆರೋಗ್ಯ ರಕ್ಷಣೆಯ ಬಗ್ಗೆ ಅನೇಕ ಉಪಾಯ ಗಳನ್ನು ಸೂಚಿಸಿದರು. ಸರಕಾರದವರು ಕೂಡಲೆ ಈ ಉಪಾಯಗ ಳನ್ನು ಮಾಡಲು, ಆ ಪ್ರದೇಶವು ಆರೋಗ್ಯಕರವಾಯಿತು. ಅದರಿಂದ ಕೂಲಿಯವರ ಹೆದರಿಕೆಯು ಬೈಲಾಯಿತು. ಸುತ್ತುಕಡೆಯಿಂದ ಸಾಕಷ್ಟು ಆಳುಗಳು ಬಂದವು. ಕೆಲಸವು ಬಲದಿಂದ ನಡೆಯತೊಡಗಿತು.

ಆ ಬಳಿಕ ಸರಕಾರದವರು, ಒಂದೇ ಸನನೆ ಸಪಾಟಾಗಿರುವ ಕಾ ಲುವೆಯನ್ನು ಮಾಡಬೇಕೋ? ತಡೆಕಟ್ಟಿ ಏರಿಳುವಿನ ಕಾಲುವೆಯನ್ನು ಮಾಡಬೇಕೋ? ಎಂಬ ಬಗ್ಗೆ ವಿಚಾರ ನಡಿಸಿದರು. ಬಹು ದಿವಸ ವಿಚಾ ರಮಾಡಿ ಸಪಾಟಾಗಿರುವ ಕಾಲುವೆಯನ್ನು ಮಾಡಿದರೆ ನಡುವಿರುವ ಅನೇಕ ದೊಡ್ಡ ದೊಡ್ಡ ಗುಡ್ಡಗಳನ್ನು ಕಡೆಯಬೇಕಾಗುವದು. ಇದಕ್ಕೆ ಖರ್ಚೂ ಶ್ರಮವೂ ಹೆಚ್ಚಾಗುವದು. ಆದ್ದರಿಂದ ಹೀಗೆ ಮಾಡದೆ ತಕ್ಕ ಸ್ಥಳಗಳಲ್ಲಿ ತಡೆಕಟ್ಟಿ ಏರಿಳುವಿನ ಕಾಲುವೆಯನ್ನು ಮಾಡಬೇಕೆಂದು ನಿರ್ಣಯಿಸಿದರು.

ಈ ತಡೆಕಟ್ಟುವ ಪದ್ಧತಿಗೆ ಇಂಗ್ಲೀಷದಲ್ಲಿ "ಲಾಕ್ಸ್" ಎನ್ನುವರು. ಈ ಪದ್ಧತಿಯಿಂದ ಕೆಳಮಗ್ಗಲಿರುವ (ತಗ್ಗಿನಲ್ಲಿರುವ) ಹಡಗುಗಳನ್ನು ಎತ್ತ ರದ ಸ್ಥಳಕ್ಕೆ ತಂದು ಬಿಡಲಿಕ್ಕೆ ಬರುವದು. ಈ ಸ್ಥಳದ ಎರಡೂ ಬದಿಗೆ ಬಾಗಿಲಗಳನ್ನು ಮಾಡಿರುತ್ತಾರೆ. ಈ ಭಾಗದ ನಡುವಿನ ಪ್ರದೇಶದಲ್ಲಿ ನೀರು ತುಂಬಿದ ಕೂಡಲೆ, ಅಲ್ಲಿಯ ಹಡಗಗಳು ತಮ್ಮಷ್ಟಕ್ಕೆ ತಾವೇ ಎತ್ತಲ್ಪಡುತ್ತವೆ. ಮತ್ತು ಕೂಡಲೆ ಎತ್ತರ ಸಪಾಟಿಯ ಬಾಗಿಲವು ತೆರೆದು ಹಡಗವನ್ನು ಮುಂದಕ್ಕೆ ಕಳಿಸುತ್ತದೆ.

ಪನಾಮಾ ಕಾಲುವೆಯಲ್ಲಿ ಇದೇ ಮಾದರಿಯ ಹಂಚಿಕೆಯು ಮಾಡಿ ರುತ್ತದೆ. ತಡೆಕಟ್ಟಿ ೮೫ ಫೂಟು ನೀರು ಏರಿಸಿ, ಅದರಿಂದ ಹಡಗಗಳು ಸಂಯೋಗಭೂಮಿಯನ್ನು ದಾಟಿ ಹೋಗುವಂತೆ ಮಾಡಿರುತ್ತಾರೆ. ಕಾಲು ವೆಯು ೫೦ ಮೈಲು ಉದ್ದವಿದೆ. ಉತ್ತರಕ್ಕೆ ಅಟ್ಲಾಂಟಿಕ ಮಹಾಸಾಗ ರದ ಮಗ್ಗಲಿಗೆ ಕ್ರಿಸ್ಟೋಬಲವೆಂಬಲ್ಲಿ ಕಾಲುವೆಯ ಉತ್ತರ ಮುಖವುಂಟು. ಅಲ್ಲಿಂದ ಹಡಗಗಳು ಕಾಲುವೆಯಲ್ಲಿ ಸೇರಿ ೫೦೦ ಫೂಟು ಅಗಲವಾದಂಥ

೭ ಮೈಲು ಉದ್ದವಾದಂಥ ಪ್ರದೇಶದಲ್ಲಿ ಹಾಯ್ದು ಗಾಟನ್ ಎಂಬ ಸರೋವರದ ವರೆಗೆ ಬರುವವು. ಈ ಸರೋವರವನ್ನು ಗ್ರಿಜ ಮತ್ತು ಬೇರೆ ಕೆಲವು ಹೊಳೆಗಳ ಪ್ರವಾಹಗಳಿಗೆ ತಡೆಕಟ್ಟಿ, ಅಂದರೆ ಒಡ್ಡು ಹಾಕಿ ಮಾಡಿರುವರು. ಇದರೊಳಗಿನ ನೀರು ಕಾಲುವೆಯ ಮೇಲೆ ಹೇಳಿದ ಭಾಗದ ನೀರಿಗಿಂತ ೮೫ ಫೂಟು ಎತ್ತರವಾಗಿರುವದು. ಈ ಸರೋವರದ ಹತ್ತರ ಬಂದೇ ಸಾಲಿನಲ್ಲಿ ಮೂರು ತಡೆಗಳನ್ನು ಮಾಡಿರುವರು. ಅಲ್ಲಿಗೆ ಹಡಗುಗಳು ಬಂದ ಕೂಡಲೆ ಅವು ಸರೋವರದ ನೀರಿನ ಸಪಾಟಿಯಷ್ಟು ಎಬ್ಬಿಸಲ್ಪಟ್ಟು ಸರೋವರದಲ್ಲಿ ಸೇರುವವು. ಹಡಗಗಳು ಈ ಸರೋವರದೊಳಗಿಂದ ೫೪ ಮೈಲು ದೂರ ನಡೆದ ಬಳಿಕ ೩೦೦ ಫೂಟು ಅಗಲವೂ ೯ ಮೈಲು ಉದ್ದವೂ ಆಗಿರುವಂಥ ಗುಡ್ಡವನ್ನು ಕೊರೆದು ಮಾಡಿದ "ಕ್ಯೂತಿಬ್ರಾಕೇಟ" ಎಂಬ ಕಾಲುವೆಯ ಭಾಗಕ್ಕೆ ಬರುವವು. ಅಲ್ಲಿಯೂ ಮೂರು ತಡೆಗಳನ್ನು ಮಾಡಿರುವರು. ಈ ತಡೆಗಳಿಂದ ಹಡಗುಗಳು ೩೦ ಫೂಟು ಇಳಿಕೆಯ ನೀರಿಗೆ ಬಂದು ೮ ಮೈಲು ಉದ್ದವಾದ ಕಾಲುವೆಯೊಳಗಿಂದ ಹಾಯ್ದು ಫಾಸಿಫಿಕ್ ಮಹಾಸಾಗರದ ದಂಡೆಯ ಪನಾಮಾ ಬಂದರಕ್ಕೆ ಬರುವವು. ಪನಾಮಾ ಬಂದರದಿಂದ ಅಟ್ಲಾಂಟಿಕಕ್ಕೆ ಹೋಗುವ ಹಡಗುಗಳಿಗೆ ೩೦ ಫೂಟು ಏರಿನ ಹಾದಿಯೂ ಬಳಿಕ ಬರುವಾಗಿನಪ್ಪೇ ಸಪಾಟಿಯ ಹಾದಿಯೂ, ೮೫ ಫೂಟು ಇಳಿಕಲವೂ ಹತ್ತುವವೆಂಬದು ಮೇಲೇ ಕಾಣುತ್ತದೆ.

ಈ ಪ್ರಚಂಡವಾದ ತಡೆಯ ಕದಗಳು ಉಕ್ಕಿನವು. ಆರು ನೆಲೆಯ ಮನೆಯಷ್ಟು ಎತ್ತರವಿರುವವು. ಇವುಗಳನ್ನು ತೆರೆಯುವ ಹಾಗೂ ಮುಚ್ಚುವ ಕೆಲಸವನ್ನು ವಿದ್ಯುದ್ಯಂತ್ರಗಳು ಮಾಡುತ್ತವೆ. ಹಾಗೂ ತಡೆಯಲ್ಲಿ ನೀರು ತುಂಬಲಿಕ್ಕೆ ಅದ್ಭುತಾಕಾರದ ಹರಿಗಳನ್ನು ಕಟ್ಟಿರುವರು.

ಈ ಕಾರ್ಯಕ್ಕೆ ೪೦ ಸಾವಿರ ಜನರು ಎಷ್ಟೋ ವರ್ಷ ದುಡಿದರು. ಐದುನೂರಾ ಇಪ್ಪತ್ತೈದು ಕೋಟಿ ರೂಪಾಯಿಗಳು ವೆಚ್ಚವಾಗಿರುವವು. ಕಾಲುವೆಯು ಯುನೈಟೆಡ್ ಸರಕಾರದವರ ಸ್ವತ್ತಾಗಿರುವದು. ಅವರು ಬರಹೋಗುವ ಹಡಗುಗಳಿಂದ ಕರವನ್ನೆತ್ತುವರು. ಹಾಗೂ ಈ ಕಾಲುವೆಗೆ ಯಾವ ಬಗೆಯ ಕೇಡೂ ತಟ್ಟಬಾರದೆಂದು ಅಲ್ಲಲ್ಲಿ ಭದ್ರವಾದ ಕೋಟೆಯನ್ನು ಕಟ್ಟಿರುವರು. ಕಳೆದ ನವಂಬರದಿಂದ ಇದರೊಳಗಿಂದ ಹಡ

ಗುಗಳು ಹೋಗಬರಲಾರಂಭಿಸಿರುವವು. ಇದರಿಂದ ಅಮೇರಿಕಾ-ಏಸಿಯ ಗಳು ಒಂದಕ್ಕೊಂದು ಸವಿಾಪಕ್ಕೆ ಬಂದಂತಾಗಿ ಉಭಯ ಖಂಡಗಳ ಜನರ ಬಳಿಕೆಯು ಮೊದಲಿಗಿಂತ ಒತ್ತಕದಿಂದ ಆಗುವದೆಂದು ಊಹಿಸಲಿಕ್ಕೆ ಅಡ್ಡಿಯಿಲ್ಲ.

ತಾಜಿಮಹಾಲ.

(ಕರಮಣೂಕ ಎಂಬ ಮಹಾರಾಷ್ಟ್ರ ಪತ್ರದಿಂದ ಕನ್ನಡಿಸಿದ್ದು.)

ದಿಲ್ಲಿಯ ಪಟ್ಟವನ್ನೇರಿದ ಹೆಸರುವಾಸಿಗಳಾದ ಮೊಗಲ ಬಾದಶಹರಲ್ಲಿ ಜಹಾಂಗೀರನೊಬ್ಬನು. ಅವನು ೧೬೦೨ನೇ ವರ್ಷ ತನ್ನ ಮಗನಾದ ಶಹಾಜಾದಾ ಖುರವ್ (ಇವನೇ ಮುಂದೆ ಶಹಾಜಹಾನ ಬಾದಶಹನಾದನು) ಈತನ ಮದುವೆಯ ವಾಚ್ಛ್ಯತ್ಯವನ್ನು ಮಾಡಿದನು. ಅರ್ಜಮುಂದ ಬಾಬುಬೇಗಮ ಎಂಬದು ಮದುಮಗಳ ಹೆಸರು, ಮುಂದೆ ಈಕೆಗೆ ಮುಮತಾಜಮಹಾಲ ಎಂಬ ಹೆಸರು ಇಡಲ್ಪಟ್ಟಿತು. ಈಕೆಯು ಜಹಾಂಗೀರನ ಹೆಂಡತಿಯಾದ ನೂರಜಹಾನಳ ತಮ್ಮನಾದ ಅಸಫಖಾನನೆಂಬವನ ಮಗಳು. ವಾಚ್ಛ್ಯತ್ಯವಾದಾಗ ಶಹಾಜಹಾನನು ೧೫ ವರ್ಷದವನಿದ್ದನು. ಮುಂದೆ ಐದು ವರ್ಷಗಳ ಮೇಲೆ, ಅಂದರೆ ೧೬೧೭ನೇ ವರ್ಷ ಅವರ ವಿವಾಹವು ಒಳ್ಳೇ ವಿಜೃಂಭಣೆಯಿಂದ ಯಥಾವಿಧಿಯಾಗಿ ಆಯಿತು. ಮದುವೆಯ ಕಾಲಕ್ಕೆ ಮುಮತಾಜಳು ೧೯ ವರ್ಷದವಳಿದ್ದಳು. ತರುವಾಯ ಆ ಉಭಯ ತರು ೧೯ ವರ್ಷ ದಾಂಪತ್ಯಸುಖವನ್ನು ಅನುಭವಿಸಿದರು. ಅವರಿಗೆ ಒಟ್ಟಿಗೆ ೧೪ ಮಂದಿ ಮಕ್ಕಳಾದರು. ಕಟ್ಟಕಡೆಯ, ಅಂದರೆ ೧೪ನೇ ಪ್ರಸೂತಿಯ ವೇದನೆಯಿಂದ ಬೇಗಮ ಮುಮತಾಜಳು ಮರಣಹೊಂದಿದಳು. ಈ ಸಂಗತಿಯು ಬರ್ಹಾಣಪುರ ಮುಕ್ಕಾಮಿನಲ್ಲಿ ಇ. ಸ. ೧೬೩೧ನೇ ಇಸವಿಯ ಜೂನ ತಿಂಗಳ ೭ನೇ ತಾರೀಖು ಮಂಗಳವಾರ ದಿವಸ ವರ್ತಿಸಿತು.

ಶಹಾಜಹಾನ ಬಾದಶಹನಿಗ ಪತ್ನಿವಿಯೋಗದುಃಖವು ದುಃಸಹವಾಯಿತು. ಅವನು ಒಂದು ವಾರದ ವರೆಗೆ ಏಕಾಂತದಲ್ಲಿದ್ದು ಯಾರಿಗೂ ದರ್ಶನವನ್ನು ಸಹ ಕೊಡಲಿಲ್ಲ; ರಾಜ್ಯಕಾರಭಾರದಲ್ಲಿಯೂ ಮನಸುಹಾಕಲಿಲ್ಲ. ಇದಲ್ಲದೆ ಅವನು ಆ ಕಾಲಕ್ಕೆ ಅಂದದ್ದೇನಂದರೆ:—"ನನ್ನ ಮೇಲೆ ಇರುವ ರಾಜ್ಯಕಾರಭಾರದ ಜವಾಬದಾರಿಯು ಅತಿಪವಿತ್ರವಾ

ದದ್ದು; ನೆಮ್ಮ ಮನಸಿಗೆ ಬೇಡಾದಾಗ ಅದನ್ನು ದೂರ ಸರಿಸುವದು ನೆಮ್ಮ ಕೈಯೊಳಗಿನ ಮಾತಲ್ಲ; ಇಲ್ಲದಿದ್ದರೆ ನಾನು ಈ ಕಾಲಕ್ಕೆ ಫಕೀರನಾಗಿ ಬಿಡುತ್ತಿದ್ದೆನು." ಅಂದಿನಿಂದ ಅವನು ಸುಂದರವಾದ ಬಣ್ಣದ ವಸ್ತ್ರಗಳ ಉಪಯೋಗವನ್ನು ಬಿಟ್ಟುಬಿಟ್ಟನು; ಅತ್ತರ ಮೊದಲಾದ ಸುವಾಸಿಕ ದ್ರವ್ಯ ಗಳಿಗೆ ಎಂದೂ ಕೈಹಚ್ಚಲಿಲ್ಲ; ಬೆಲೆಯುಳ್ಳ ಅಲಂಕಾರಗಳನ್ನು ಎಂದೂ ಧರಿಸಲಿಲ್ಲ. ಮತ್ತು ಪ್ರಿಯಪತ್ನಿಯ ಮರಣಕ್ಕಿಂತ ಪೂರ್ವದಲ್ಲಿ ವರ್ಧಂತಿ ಉತ್ಸವದಲ್ಲಿಯೂ ಸಾಂವತ್ಸರಿಕ ರಾಜ್ಯಾಭಿಷೇಕ ಮಹೋತ್ಸವದಲ್ಲಿಯೂ ಜರುಗುತ್ತಿದ್ದ ನಾನಾಪ್ರಕಾರದ ವಿಲಾಸೋತ್ಸವಗಳನ್ನು ನಿಲ್ಲಿಸಿಬಿಟ್ಟನು. ಮಂಗಲವಾದ್ಯಗಳ ಧ್ವನಿಯು ಅಂದಿನಿಂದ ಅವನ ಕಿವಿಗೆ ಕರ್ಕಶವಾಗಿ ಕೇಳ ಬರಹತ್ತಿತು. ಅಂದಿನ ವರೆಗೆ ಅವನ ಗಡ್ಡದಲ್ಲಿ ಇಪ್ಪತ್ತು ಸಹ ನರೆಗೂದ ಲುಗಳು ಇದ್ದಿಲ್ಲ. ಆದರೆ ಮುಂದೆ ಸ್ವಲ್ಪ ಕಾಲದಲ್ಲಿಯೇ ಎಲ್ಲ ಕೂದಲು ಗಳು ಹಣ್ಣಾಗಿ ಬೆಳ್ಳಗಾದವು. ಮುಮತಾಜಳ ಗೋರಿಯ ದರ್ಶನಕ್ಕೆ ಹೋದ ಸರತಿಗೊಮ್ಮೆ ಅವನ ಕಣ್ಣೀರು ಧಾರೆಗೊಂಡು ಸುರಿಯುತ್ತಿದ್ದವು. ಅವನು ಇನ್ನು ಈ ರಾಜ್ಯದಲ್ಲಿ ತನಗೆ ಸುಖವಿಲ್ಲೆಂತಲೂ, ಆಯುಷ್ಯವು ದುಃ ಖಮಯವೆನಿಸುವದೆಂತಲೂ ಆಗಾಗ್ಗೆ ಉದ್ಗಾರಗಳನ್ನು ತೆಗೆಯುತ್ತಿದ್ದನು. ಬಹಳ ಹೇಳುವದರಿಂದೇನು? ಮುಮತಾಜಳ ಮರಣದಿಂದ ಶಹಾಜಹಾನನಿ ಗೆ ಈ ಜಗತ್ತೇ ಶೂನ್ಯವಾಯಿತು. ಮುಮತಾಜಳ ಹೊರತು ಬಾದಶಹನಿಗೆ ಇನ್ನು ಇಬ್ಬರು ಹೆಂಡಂದಿರು ಇದ್ದರು. ಅವರಲ್ಲಿ ಒಬ್ಬಳನ್ನು ಮುಮತಾ ಜಳ ಮದುವೆಗಿಂತ ಎರಡು ವರ್ಷ ಮುಂಚಿತವಾಗಿಯೂ, ಇನ್ನೊಬ್ಬಳನ್ನು ಮುಮತಾಜಳ ತರುವಾಯ ಐದು ವರ್ಷಗಳ ಮೇಲೆಯೂ ಮದುವೆಯಾಗಿ ದ್ದನು. ಇವೆರಡೂ ವಿವಾಹಗಳು ರಾಜಕಾರಣಗಳ ಮೂಲಕವಾಗಿ ಆಗಿದ್ದ ವು; ಅವುಗಳ ಮೂಲದಲ್ಲಿ ಪ್ರೇಮವಿದ್ದಿಲ್ಲ. ಶಹಾಜಹಾನನ ಅತ್ಯಂತ ಪ್ರೀತಿಗೆ ಪಾತ್ರಳಾದವಳು ಮುಮತಾಜಮಹಾಲಳೊಬ್ಬಳೇ. ಅವಳು ಬಾದಶಹನ ಅಂತಃಕರಣವನ್ನೆಲ್ಲ ವ್ಯಾಪಿಸಿ ಬಿಟ್ಟಿದ್ದಳು. ಎರಡನೆಯವರಿಗೆ ಅಲ್ಲಿ ಎಳ್ಳ ಷ್ಟು ಅವಕಾಶವು ಉಳಿದಿದ್ದಿಲ್ಲ. ಬಾದಶಹನು ಅವಳನ್ನು ಸುಖದಲ್ಲಿಯೂ, ದುಃಖದಲ್ಲಿಯೂ, ಪ್ರವಾಸದಲ್ಲಿಯೂ, ದಂಡಯಾತ್ರೆಯಲ್ಲಿಯೂ, ಒಂದು ಕ್ಷಣ ಸಹ ಅಗಲಿಇರುತ್ತಿದ್ದಿಲ್ಲ. ಮುಮತಾಜಮಹಾಲಳ ಮರಣವೃತ್ತಾಂತವು ಒಂದು ಕೈಬರಹದ ಹಳೇ ಪುಸ್ತಕದಲ್ಲಿ ಕೆಳಗೆ ಕೊಟ್ಟಂತೆ ಇರುವದು:—

"ಶಹಾಜಹಾನನಿಗೆ ನಾಲ್ಕು ಮಂದಿ ಹೆಣ್ಣು ಮಕ್ಕಳೂ, ನಾಲ್ಕು ಮಂದ ಗಂಡುಮಕ್ಕಳೂ ಇದ್ದರು. ಅಂಜುಮಾನ ಆರಾ, ಗೈಲೆ ಆರಾ, ಜಹಾನ ಆರಾ, ದಹಾರ ಆರಾ ಉರ್ಫ ಗೌಹರ ಆರಾ ಎಂಬವರು ಹೆಣ್ಣು ಮಕ್ಕಳು. ಇವರಲ್ಲಿ ಕಡೆಯವಳನ್ನು ಬಸುರಿದ್ದಾಗ ಒಂದಾನೊಂದು ದಿವಸ ಮುಮತಾಜ ಮಹಾಲಳಿಗೆ ತನ್ನ ಹೊಟ್ಟೆಯೊಳಗಿಂದ ಅಳುವ ಸ್ವರವು ಕೇಳ ಬಂತು. ಅದನ್ನು ಕೇಳಿ ಬೇಗಮಳು ತಾನು ಇನ್ನು ಬದುಕುವದಿಲ್ಲೆಂದು ನಿಶ್ಚಯಿಸಿ ಬಾದಶಹನನ್ನು ಕರೆಯಿಸಿ ಬಹು ದೀನ ಸ್ವರದಿಂದ— "ಒಡೆಯರೆ, ಕೂಸು ಹೊಟ್ಟೆಯಲ್ಲಿ ಅತ್ತರೆ, ಅದು ಹುಟ್ಟಿದ ಬಳಿಕ ತಾಯಿಯು ಬದುಕುವದಿಲ್ಲೆಂಬ ಮಾತು ಪ್ರಸಿದ್ಧವಿರುತ್ತದೆ. ದುರ್ದೈವದಿಂದ ಇಂದು ನನಗೆ ಈ ಪ್ರಸಂಗವು ಒದಗಿರುವದು. ಇನ್ನು ಮೇಲೆ ನಾನು ಈ ಮರ್ತ್ಯಲೋಕವನ್ನು ತ್ಯಜಿಸಿ ಶಾಶ್ವತಲೋಕಕ್ಕೆ ಹೋಗುವೆನು. ಆದಕಾರಣ ಹುಜೂರ, ನಾನು ಎಂದಾದರೂ ಹೆಚ್ಚು ಕಡಿಮೆ ಮಾತಾಡಿದ್ದರೆ ಕ್ಷಮಿಸಿರಿ. ತಾವು ಸೆರೆಯಲ್ಲಿರುವಾಗಲೂ, ಬೇರೆ ಪ್ರತಿಯೊಂದು ದುಃಖದ ಪ್ರಸಂಗದಲ್ಲಿಯೂ, ನಾನು ನಿಮಗೆ ಪಾಲುಗಾರ್ತಿಯಾಗಿದ್ದೆನು. ಈಗ ಅಲ್ಲಾನು ಈ ರಾಜ್ಯಕಾರಭಾರವನ್ನು ನಿಮ್ಮ ವಶಕ್ಕೆ ಕೊಟ್ಟಿರುವದರಿಂದ ನಾನು ದುಃಖದಿಂದ ನಿಮ್ಮನ್ನು ಅಗಲಿ ಒಬ್ಬಳೇ ಹೋಗುವ ಪ್ರಸಂಗವು ಒದಗಿತು. ನನ್ನ ದುರ್ದೈವಕ್ಕೆ ಯಾರು ಏನು ಮಾಡುವರು? ಈಗ ತಮ್ಮ ಬಳಿಯಲ್ಲಿ ಕಟ್ಟಿ ಕಡೆಯ ಎರಡು ಮಾತುಗಳನ್ನು ಬೇಡಿಕೊಳ್ಳುತ್ತೇನೆ. ಅವುಗಳ ಬಗ್ಗೆ ನನಗೆ ವಚನ ಕೊಡುವದಾಗಬೇಕು," ಎಂದು ಕೇಳಿಕೊಂಡಳು. ಬಾದಶಹನು ತನ್ನ ಜೀವವ ಅಣೆ ಮಾಡಿ, ವಚನ ಕೊಟ್ಟು ಮುಮತಾಜಳಿಗೆ ಏನು ಬೇಡುತ್ತೀ ಬೇಡೆಂದು ಹೇಳಿದನು. ಅದಕ್ಕೆ ಅವಳು— "ದೇವರ ದಯದಿಂದ ತಮಗೆ ಈಗ ನಾಲ್ಕು ಮಂದಿ ಗಂಡು ಮಕ್ಕಳೂ, ನಾಲ್ಕು ಮಂದಿ ಹೆಣ್ಣು ಮಕ್ಕಳೂ ಇರುವರು. ತಮ್ಮ ಪೈಸರನ್ನು ಮುಂದೆ ನಡಿಸಲಿಕ್ಕೂ ತಮ್ಮ ಕೀರ್ತಿಯನ್ನು ದಿಗಂತರದಲ್ಲಿ ಹಬ್ಬಿಸಲಿಕ್ಕೂ ಇಷ್ಟು ಮಂದಿ ಮಕ್ಕಳು ಸಾಕು. ಬೇರೊಬ್ಬ ಸ್ತ್ರೀಯಳಲ್ಲಿ ಸಂತತ್ಯುತ್ಪಾದನವನ್ನು ಮಾಡಬೇಡಿರಿ. ಯಾಕಂದರೆ ನನ್ನ ಮಕ್ಕಳಿಗೂ ಅವಳ ಮಕ್ಕಳಿಗೂ ಸಿಂಹಾಸನದ ಸಲುವಾಗಿ ಬಡದಾಟಗಳು ಹುಟ್ಟಬಹುದು. ಇನ್ನು ಎರಡನೇ ಮಾತು ಯಾವದೆಂದರೆ, ನಾನು ಸತ್ತ ಮೇಲೆ ನನ್ನನ್ನು

ಹುಗಿದ ಸ್ಥಳದಲ್ಲಿ ಒಂದು ಸುಂದರವಾದ ಗೋರಿಯನ್ನು ಕಟ್ಟಿಸಿರಿ. ಅದರಂಥ ಎರಡನೆಯ ಇಮಾರತು ಈ ಭೂಮಿಯ ಮೇಲೆ ಎಲ್ಲಿಯೂ ದೃಷ್ಟಿಗೆ ಬೀಳಬಾರದು. ತರುವಾಯ ಪ್ರಸೂತಿಯಾಗಿ ಮುಮತಾಜಳ ಪ್ರಾಣೋತ್ಕ್ರಮಣವಾಯಿತು. ಮೊದಲು ಅವಳ ಪ್ರೇತವು ಕೆಲವು ದಿವಸ ಬರ್ಹಾಣಪುರದ ಹತ್ತರ ತಾಪೀ ನದಿಯ ದಂಡೆಯ ಮೇಲೆ ಇರುವ ಕೋಟದೊಳಗಿನ ಇಮಾರತಿಯ ನೆಲದೊಳಗೆ ಇಡಲ್ಪಟ್ಟಿತ್ತು. ಮುಂದೆ ಅದು ಕಹಾ ಜಾದಾ ಸುಜಾ ಈತನ ಸಂಗಡ ಆಗ್ರಾಕ್ಕೆ ಕಳಿಸಲ್ಪಟ್ಟಿತು.

ಬೇಗನು ಮುಮತಾಜಮಹಾಳ ಗೋರಿಯನ್ನು ಕಟ್ಟುವದಕ್ಕಾಗಿ ಆಗ್ರಾ ಪಟ್ಟಣದ ದಕ್ಷಿಣದಿಕ್ಕಿಗಿರುವ ಒಂದು ವಿಸ್ತೀರ್ಣವಾದ ಪ್ರದೇಶವನ್ನು ಶಹಾಜಹಾನ ಬಾದಶಹನು ಆರಿಸಿ ತೆಗೆದನು. ಈ ಪ್ರದೇಶವು ಮಾನಸಿಂಗನ ಮೊಮ್ಮಗನಾದ ರಾಜಾ ಜಯಸಿಂಗನದಾಗಿತ್ತು. ಬಾದಶಹನು ಅದನ್ನು ಅವನಿಂದ ಮಾರಲಿಕ್ಕೆ ತೆಗೆದುಕೊಂಡನು. ಆ ಬಳಿಕ ರಾಜ್ಯದೊಳಗಿನ ಎಲ್ಲ ಕಲಾಕೋವಿದರಿಗೆ ಹೊಸದಾಗಿ ಕಟ್ಟಲ್ಪಡತಕ್ಕ ಇಮಾರತಿನ ನಕಾಶವನ್ನು ಸಿದ್ಧ ಮಾಡಲಿಕ್ಕೆ ರಾಜಾಜ್ಞೆಯಾಯಿತು. ಬಾದಶಹನು ಎಲ್ಲ ನಕಾಶಗಳನ್ನು ನೋಡಿ ಒಂದನ್ನು ಮಂಜೂರ ಮಾಡಿದನು. ಆ ನಕಾಶದ ಪ್ರಕಾರ ಮೊದಲು ಒಂದು ಕಟ್ಟಿಗೆಯ ನಮೂನೆಯು ಸಿದ್ಧ ಮಾಡಲ್ಪಟ್ಟಿತು.

ಇ. ಸ. ೧೬೩೨ನೇ ವರ್ಷ ತಾಜಮಹಾಲನ್ನು ಕಟ್ಟುವದು ಪ್ರಾರಂಭವಾಗಿ ಇ. ಸ. ೧೬೪೩ನೇ ಇಸವಿಯ ಜಾನೇವಾರಿ ತಿಂಗಳಲ್ಲಿ ಅದು ಪೂರ್ಣವಾಯಿತು. ಮುಕಾರಮತಖಾನ ಹಾಗು ಮೀರ ಅಬದುಲ್ ಕರೀಮ ಇವರ ಮೇಲ್ವಿಚಾರಣೆಯ ಕೆಳಗೆ ಎಲ್ಲ ಕೆಲಸಗಳು ಮಾಡಲ್ಪಟ್ಟವು. ಒಟ್ಟಿಗೆ ೫೦ ಲಕ್ಷ ರೂಪಾಯಿಗಳು ವೆಚ್ಚವಾದವು.

ಈ ಇಮಾರತನ್ನು ಕಟ್ಟುವ ಕೆಲಸದ ಮೇಲೆ ಕೆಳಗೆ ಕೊಟ್ಟ ಕಾರಾಗಿರರು ಇದ್ದರೆಂದು ಒಂದು ಗ್ರಂಥದಲ್ಲಿ ಬರೆದದೆ:—

(೧) ಕಂದಹಾರದ ಅಮಾನತಖಾನ ಶಿರಾಝೀ— ಈತನು ಕುರಾಣದೊಳಗಿನ ವಾಕ್ಯಗಳನ್ನು ಬರೆಯುವವನು.

(೨) ಆಗ್ರಾದ ಉಸ್ತಾದ ಇಸಾ— ಈತನು ಗವಂಡಿಯು.

(೩) ದಿಲ್ಲಿಯ ಉಸ್ತಾದ ಹಿರಾ— ಈತನು ಬಡಿಗನು.

(೪-೫) ದಿಲ್ಲಿಯ ಬನುಹಾರ, ಜಾಟವೆಲ ಹಾಗು ಝೂಕರಾವರ ಇವರು ಕೆತ್ತಿಗೆಯ ಕೆಲಸಗಳನ್ನು ಮಾಡುವವರು.

(೬) ಇಸ್ಮಾಯಲಬಾನ ರುಫಿ— ಈತನು ಗುಮುಟಗಳನ್ನು ಕಟ್ಟುವವನು.

(೭) ರಾಮವಲ್ ಕಾಶ್ಮೀರಿ— ಈತನು ತೋಟಿಗನು.

ಈ ಇವಾರತಿಯ ಸಲುವಾಗಿ ಕೆಳಗೆ ಕೊಟ್ಟ ಇಪ್ಪತ್ತು ಪ್ರಕಾರದ ಬೆಲೆಯುಳ್ಳ ಕಲ್ಲುಗಳು ಉಪಯೋಗಿಸಲ್ಪಟ್ಟಿರುತ್ತವೆ:—

(೧) ಕಂದಹಾರದೊಳಗಿನ ಅಬೀಕವು.

(೨) ಲಂಕೆಯೊಳಗಿನ ವೈಡೂರ್ಯವು.

(೩) ಉತ್ತರ ಪ್ರದೇಶದೊಳಗಿನ ಗೋವೇದವು.

(೪) ನೈಲ ನದಿಯೊಳಗಿನ ಪತುಂಜವು.

(೫) ಬಸೋರಾ ಹಾಗು ಹುರಮುಜ್ಗಳಲ್ಲಿಯ ಸುವರ್ಣ.

(೬) ಜೋಧಪುರದ ಗುಡ್ಡದೊಳಗಿನ ಖಡು.

(೭) ಕುವಾನನ ಗುಡ್ಡದೊಳಗಿನ ನದಿಯಲ್ಲಿ ದೊರೆಯುವ ಅಜೂಬ

(೮) ಮಕರಾನದ ಸಂಗಮರವರೀಕಲ್ಲು.

(೯) ಬಸೋರಾ ಪಟ್ಟಣದೊಳಗಿನ ಮರ್ಯಾವವು.

(೧೦) ಬನಸ (?) ನದಿಯೊಳಗಿನ ಬದಲವು.

(೧೧) ಎಮೇನ ಪಟ್ಟಣದೊಳಗಿನ ಯಾಮಿನೀ.

(೧೨) ಅಟಲಾಂಟಿಕ ಮಹಾಸಾಗರದೊಳಗಿನ ಮುಂಗಾ.

(೧೩) ಫೋರಬಂದ ಎಂಬಲ್ಲಿಯ ಫೋರಿ.

(೧೪) ಗಂಡಕೀ ನದಿಯೊಳಗಿನ ತಾಮ್ರ.

(೧೫) ಬಾಬಾ ಬುಧನ ಗಿರಿಯೊಳಗಿನ ಬಿರೋಜಾ.

(೧೬) ಸಿನಾಯಿ ಪರ್ವತದೊಳಗಿನ ಮುಸಾಯಿ.

(೧೭) ಗ್ವಾಲ್ಹೇರದ ನದಿಯೊಳಗಿನ ಗ್ವಾಲ್ಹೇರಿ.

(೧೮) ಕೆಂಪು ಕಲ್ಲು.

(೧೯) ಇರಾಣದೊಳಗಿನ ಸೂರ್ಯಕಾಂತವು.

(೨೦) ಅಸನ ನದಿಯೊಳಗಿನ ದಲಚನ.

ಮುಮ್ತಾಜ ಮಹಾಲಳ ಹನ್ನೆರಡನೇ ವಾರ್ಷಿಕದ ದಿವಸ ಶಹಾಜ

ಹಾನೆ ಬಾದಶಹನು ಈ ಇವಾರತಿಯ ದರ್ಶನಕ್ಕೆ ಹೋದನು. ಆ ಕಾ
ಕ್ಕೆ ಅವನು ಆಗ್ರಾ ಹಾಗು ನಗರಬೆನ ಪ್ರಾಂತಗಳಿಂಒಳಗಿನ ಎರಡು ಲಕ್ಷ
ಉತ್ಪನ್ನವನ್ನು ಈ ಇವಾರತಿಯ ಖರ್ಚಿನ ಸಲುವಾಗಿಯೂ ದುರಸ್ತಿಯ
ಸಲುವಾಗಿಯೂ ನೇಮಿಸಿಕೊಟ್ಟನು.

ಗೋದಿಗಳು ಅಥವಾ ಹಡಗುಕಟ್ಟುವ ಸ್ಥಳಗಳು.

ಹಡಗುಗಳು ನೂರಾರು ಯಾರ್ಡು ಉದ್ದವಿರುತ್ತವೆ. ಯುದ್ಧದ
ಹಡಗುಗಳಂತೂ ಬಹಳ ದೊಡ್ಡವಿರುವವು. ಇವುಗಳಿಗೆ ಫುಟು ಫುಟು
ದಪ್ಪಾದ ಉಕ್ಕಿನ ಕವಚವಿರುವದು. ಮೇಲೆ ದೊಡ್ಡದೊಡ್ಡ ತೋಪುಗಳ
ರುವವು. ಇಷ್ಟು ವಿಸ್ತಾರವೂ ಜಡವೂ ಆದ ಹಡಗುಗಳನ್ನು ಎಲ್ಲಿ ಕಟ್ಟ
ಬೇಕು? ನೆಲದ ಮೇಲೆ ಕಟ್ಟಿದರೆ ಇವುಗಳನ್ನೆತ್ತಿ ನೀರಲ್ಲಿ ಪ್ಯಾಗೆ ಇಳಿ
ಸಬೇಕು? ದಂಡೆಯವರೆಗೆ ತಂದು ಇವುಗಳಲ್ಲಿ ಸರಕುಗಳನ್ನು ಪ್ಯಾಗೆ
ತುಂಬಬೇಕು? ಅಥವಾ ಇಳಿಸಬೇಕು? ಇವೆಲ್ಲ ಅಘಟಿತವಾದ ಸೋಜಿ
ಗದ ಸಂಗತಿಗಳೆಂದು ಗೋದಿಗಳನ್ನು ನೋಡಿದ ಮನುಷ್ಯನಿಗೆ ತೋ
ರದಿರದು. ಆದರೆ ಸಮುದ್ರದ ದಂಡೆಯಲ್ಲಿ, ಅಥವಾ ಬಂಕರವುಳ್ಳ ನಗ
ರದಲ್ಲಿ ವಾಸಿಸುವವರಿಗೆ ಇವೆಲ್ಲ ಸಾಧಾರಣ ಸಂಗತಿಗಳಾಗಿರುತ್ತವೆ.
ಆದರೂ ಇಂಥ ಅನುಕೂಲತೆಗಳನ್ನು ಮಾಡಿಕೊಂಡ ಮಾನವ ಪ್ರಾಣಿ
ಯ ಸಾಹಸವೂ ಕುಶಲತೆಯೂ ಹೊಗಳತಕ್ಕವುಗಳಾಗಿರುತ್ತವೆ. ನಮ್ಮ
ವಾಚಕರಲ್ಲಿ ಎಷ್ಟೋ ಜನರಿಗೆ ಈ ವಿಷಯವು ಅಪರಿಚಿತವಾದದ್ದೆಂದು
ಭಾವಿಸಿ ಇಂಥ ಸ್ಥಳಗಳ ವರ್ಣನೆಯನ್ನು ಇದರಡಿಯಲ್ಲಿ ಬರೆದಿರುವೆವು.

ಗೋದಿಗಳಲ್ಲಿ ಮೂರು ಪ್ರಕಾರಗಳುಂಟು. ೧. ಏರಿಳಿತದ ಗೋ
ದಿಗಳು, ೨. ನೀರಿನ (ತೇಲುವ) ಗೋದಿಗಳು ೩. ಋಣಗೋದಿಗಳು. ಇವು
ಗಳಲ್ಲಿ ಮೊದಲನೇ ಪ್ರಕಾರದ ಗೋದಿಯನ್ನು, ಸಮುದ್ರದ ಏರಿಳಿತಗ
ಳಿಂದ ನೀರಿನ ಎತ್ತರದಲ್ಲಿ ವಿಶೇಷ ಹೆಚ್ಚುಕಡಿಮೆಯಾಗದಂಥ ಬಂದರ
ದಲ್ಲಿ ಆಳವಾದ ನೀರಿನ ಪ್ರದೇಶದ ಹತ್ತರ ತಡೆ (ಧಕ್ಕೆ) ಕಟ್ಟವಮಾಡುವ
ರು. ಇದರಿಂದ ಹಡಗುಗಳು ಆ ತಡೆಯವರೆಗೆ ಬರುವದಕ್ಕೆ ಅನುಕೂ
ಲವಾಗಿ ಸರಕುಗಳನ್ನು ತುಂಬಲಿಕ್ಕೂ ಇಳಿಸಲಿಕ್ಕೂ ಅನುಕೂಲವಾಗು

ವದು. ಹಾಗೂ ಅವುಗಳಿಗೆ ಬಂದರದಲ್ಲಿ ಬೇಕಾದಾಗ ಬರಲಿಕ್ಕೂ ಹೋಗಲಿಕ್ಕೂ ಅಡ್ಡಿಯಾಗುವದಿಲ್ಲ.

ಆದರೆ ಏರಿಳಿತಗಳಲ್ಲಿ ಇಷ್ಟು ಕಡಿಮೆ ಅಂತರವುಳ್ಳ ಬಂದರಗಳು ಅಪರೂಪ. ಆದ್ದರಿಂದ ಇಂಥೆ ಬಂದರಗಳಲ್ಲಿ ನೀರೊಳಗಿನ ಗೋದಿಗಳನ್ನು ಕಟ್ಟಬೇಕಾಗುವದು. ಇಂಥ ಗೋದಿಗಳ ಬಾಯಿಗೆ ಬಾಗಿಲುಗಳನ್ನು ಹಚ್ಚಿ, ಭರತಿಯ ಕಾಲದಲ್ಲಿ ನೀರನ್ನು ಹಿಡಿದಿಡುವರು. ಅದರಿಂದ ಬಂದರದ ಹೊರಬದಿಯಲ್ಲಿ ಇಳಿತದ ನೀರು ಇಳಿದರೂ ಇದರೊಳಗಿನ ನೀರು ಹಾಗೇ ಇರುವದು. ಸೀಗಾಗಲು, ಸರಕು ಹೇರಲಿಕ್ಕೂ, ಇಳಿಸಲಿಕ್ಕೂ ಸುಲಭವಾಗುವದು. ಆದರೆ ಇಂಥ ಗೋದಿಗಳಲ್ಲಿ ಬಂದ ಹಡಗುಗಳನ್ನು ಭರತಿಯ ಕಾಲದಲ್ಲಿ ಮಾತ್ರ ಬಾಗಿಲ ತೆರೆದು ಸಾಗಮಾಡಲಿಕ್ಕೆ ಬರುವದು. ಉಳಿದ ಕಾಲದಲ್ಲಿ ಹಡಗುಗಳು ಗೋದಿಯಲ್ಲಿ ಬರಲಾರವು; ಹಾಗೂ ಗೋದಿಯಿಂದ ಹೊರಗೂ ಹೋಗಲಾರವು.

ಈ ಬಗೆಯ ಗೋದಿಗಳನ್ನು ಕಟ್ಟುವಾಗ ಅನೇಕ ಸಂಗತಿಗಳ ವಿಚಾರವನ್ನು ಮಾಡಬೇಕಾಗುವದು. ಮೊದಲು ತಡೆ(ಧಕ್ಕೆ)ಯನ್ನು ವಿಚಾರ ಮಾಡಿ ಕಟ್ಟಬೇಕು. ಅನೇಕ ಹಡಗುಗಳು ನಿಲ್ಲುವಷ್ಟು ಸ್ಥಳವನ್ನು ಒಳಗೆ ಮಾಡಿಕೊಳ್ಳಬೇಕು. ಇದಲ್ಲದೆ, ಬರಹೋಗುವ ಹಡಗುಗಳನ್ನು ತಿರಿಗಿಸಿಕೊಳ್ಳಲಿಕ್ಕೆ ಅನುವು ಬೇಕು. ಹಡಗುಗಳನ್ನು ಒಳಗೆ ತಕ್ಕೊಳ್ಳಲಿಕ್ಕೆ ಬೇಕಾದ ಬಾಗಿಲವನ್ನು ನೋಡಿ ಹಚ್ಚಬೇಕು. ಯಾಕಂದರೆ ಸಮುದ್ರದಲ್ಲಿ ಕೆಲವು ವಿವಕ್ಷಿತ ದಿಕ್ಕಿಗೇ ಹರಿಯುವ ಪ್ರವಾಹಗಳಿರುತ್ತವೆ. ಗೋದಿಯ ಬಾಗಿಲಗಳು ಪ್ರವಾಹಕ್ಕೆ ಅನುಕೂಲವಾಗಿರದಿದ್ದರೆ ಒಮ್ಮೊಮ್ಮೆ ಒಳಸೇರುವ ಹಡಗಗಳು ದಿಕ್ಕುಬಿಟ್ಟು ಬೇರೊಂದು ಕಡೆಯ ಹಾದಿಯನ್ನು ಹಿಡಿಯಬಹುದು. ಗೋದಿಯಬಾಗಿಲಗಳು ಗೋದಿಯ ವಿಸ್ತಾರಕ್ಕೆ ಅನುಸರಿಸಿ ಇರಬೇಕು. ಯಾಕಂದರೆ ಬಾಗಿಲವು ಹತ್ತಿಯಾದರೆ ಪ್ರವಾಹದ ಸೆಳವು ಹೆಚ್ಚಾಗಿ ಬಾಗಿಲಕ್ಕೆ ಅಪಾಯ ಸಂಭವಿಸುವದು. ಬಾಗಿಲಗಳು ಕಬ್ಬಿಣ, ಕಟ್ಟಿಗೆ, ಅಥವಾ ಉಕ್ಕು ಇವುಗಳಿಂದ ಮಾಡಿರುವವು. ಹಾಗೂ ಇವುಗಳನ್ನು ಇಕ್ಕುವ ತೆರೆಯುವ ಕೆಲಸವು ಯಂತ್ರದಿಂದ ನಡೆಯುವದು.

ಕೆಲವು ಕಡೆಯಲ್ಲಿ ಗೋದಿಯೊಳಗಿನ ನೀರು ಯಾವಾಗಲೂ ತುಂಬೇ

ಇರಬೇಕೆಂದು, ಬಂಬುಗಳಿಂದ ಅದರಲ್ಲಿ ನೀರನ್ನು ತುಂಬುವ ವ್ಯವಸ್ಥೆ ಮಾಡಿರುವರು. ಮತ್ತು ಗೋದಿಯಲ್ಲಿ ಅಗಾಗ್ಗೆ ಕೂಡುವ ಹುಲ್ಲನ್ನು ಹೊರಗೆ ಹಾಕುವದಕ್ಕಾಗಿ, ಹೊಲಸು ತೆಗೆಯುವ ಉಗಿಯಂತ್ರವನ್ನು ಉಪಯೋಗಿಸಬೇಕಾಗುವದು.

ಬಣಗೋದಿಗಳು ಹೊಸ ಹಡಗುಗಳನ್ನು ಕಟ್ಟಲಿಕ್ಕೂ, ಕೆಟ್ಟ ಹಡಗುಗಳನ್ನು ನೆಟ್ಟಗೆ ಮಾಡಲಿಕ್ಕೂ ಉಪಯೋಗವಾಗುತ್ತವೆ. ದಂಡೆಯಲ್ಲಿ ಹಡಗುಗಳ ಆಕಾರದಂತೆ ಬಹಳ ಆಳವಾದ ತಗ್ಗನ್ನು ಅಗಿಯುವರು. ಈ ತಗ್ಗಿನ ಮೂರು ಬದಿಗಳನ್ನು ಕಲ್ಲು-ಗಚ್ಚುಗಳಿಂದ ಕಟ್ಟುವರು. ನಾಲ್ಕನೇ ಬದಿಯಿಂದ ಹಡಗುಗಳು ಒಳಸೇರುವವು. ಈ ಬದಿಗೆ ಬಾಗಿಲಿರುವದು. ಹಡಗವನ್ನು ಒಳಗೆ ತಕ್ಕೊಳ್ಳುವಾಗ ಈ ತಗ್ಗಿನಲ್ಲಿ ನೀರು ಹರಿಬಿಟ್ಟು ಇದನ್ನು ತುಂಬುವರು. ಒಳಿಕ ಬಾಗಿಲವನ್ನು ತೆರೆದು ಹಡಗವನ್ನು ಒಳಗೆ ತಕ್ಕೊಳ್ಳುವರು. ಒಳಗೆ ಬಂದ ಹಡಗವು, ತಗ್ಗಿನಲ್ಲಿ ಭದ್ರವಾಗಿ ಕೂಡ್ರಿಸಿದ ಗದ್ದಿಗೆ ಕಲ್ಲುಗಳ ಮೇಲೆ ಅಥವಾ ಕಟ್ಟಿಗೆಯ ತುಂಡುಗಳ ಮೇಲೆ ಕೂಡ್ರುವದು. ಅದು ಸರಿಯಾಗಿ ಕೂತಬಳಿಕ ಬಾಗಿಲವನ್ನು ಇಕ್ಕಿ ಒಳಗಿನ ನೀರನ್ನು ಬಂಬಿನಿಂದ ಹೊರಗೆ ಹಾಕುವರು. ಇದರಿಂದ ಹಡಗದ ಬುಡವು ಕೂಡ ಬೈಲಿಗೆಬೀಳುವದು. ಮಾಡತಕ್ಕ ದುರಸ್ತಿಗಳನ್ನು ಮಾಡಿದಬಳಿಕ ಪುನಃ ಗೋದಿಯಲ್ಲಿ ನೀರು ಹರಿಬಿಟ್ಟು ಹಡಗವನ್ನು ಸಮುದ್ರದಲ್ಲಿ ಕಳಿಸುವರು.

ಈ ಮಾದರಿಯ ಗೋದಿಗಳು ಬಹು ವಿಸ್ತಾರವಾದವುಗಳಿರುವವು. ಲಿವ್ಹರಪೂಲದಲ್ಲಿ ಇಂಥವು ಮೂವತ್ತು ಇರುವವು. ಇವುಗಳಲ್ಲಿ ಎಲ್ಲಕ್ಕೂ ದೊಡ್ಡದು ೯೫೫ ಫೂಟು ಉದ್ದವೂ, ೩೪ ಫೂಟು ಆಳವೂ ಇರುವದು. ಇದರ ಬಾಗಿಲವು ೯೪ ಫೂಟು ಅಗಲಿರುವದು. ವ್ಯಾಪಾರವು ಭರದಿಂದ ಸಾಗುವ ಬಂದರಗಳಲ್ಲಿ ಇಂಥ ಅನೇಕ ಗೋದಿಗಳು ಇರುತ್ತವೆ.

ಮೂರು ಪ್ರಕಾರದ ಗೋದಿಗಳಲ್ಲಿ ಮೇಲೆ ವಿವರಿಸಿದ ಗೋದಿಗಳು ಬಹು ಪ್ರಯೋಜನಕರವಾದವುಗಳೆಂಬದು ಸ್ಪಷ್ಟವು. ಆದರೆ ಎಲ್ಲ ಕಡೆಯಲ್ಲಿ ಇಂಥವುಗಳನ್ನು ಕಟ್ಟುವದು ಅಸಂಭವವು. ಆದ್ದರಿಂದ ತೇಲುವ ಗೋದಿಗಳನ್ನು (ನೀರಗೋದಿಗಳನ್ನು) ಕಟ್ಟುವರು. ಇವುಗಳಿಗೆ ಇಂಗ್ಲಿಷದಲ್ಲಿ "ಫ್ಲೋಟಿಂಗ ಡಾಕ್ಸ" ಎಂಬ ಹೆಸರು. ಇವು ಸಮುದ್ರದಲ್ಲಿ ಸಂಚರಿಸು

ತ್ತಿರುವೆದರಿಂದ ಬೇಕುಬೇಕಾದಲ್ಲಿ ಬಯ್ಯಲಿಕ್ಕೆ ಬರುತ್ತವೆ. ಬಣಗೋದಿಗ
ಳಲ್ಲಿಯೂ ಇದರಲ್ಲಿಯೂ ಒಂದು ಭೇದವುಂಟು. ಬಣಗೋದಿಯೊಳಗಿಂದ
ಹಡಗವನ್ನು ನೆಟ್ಟಗೆ ಮಾಡುವಾಗ ಬಳಗಿನ ನೀರನ್ನು ಬಂಬಿನಿಂದ ಹೊರ
ಗೆ ಹಾಕಬೇಕಾಗುವದು. ಆದರೆ ತೇಲುವ ಗೋದಿಗಳಲ್ಲಿ ಯಂತ್ರಸಹಾ
ಯದಿಂದ ಇಡೀ ಹಡಗವನ್ನು ಎತ್ತಿ ನೀರಬಿಟ್ಟು ಮೇಲೆ ತರುವ ಅನುಕೂ
ಲತೆ ಇರುವದು. ಈ ಮಾದರಿಯ ಗೋದಿಯ ರಚನೆಯು ಹ್ಯಾಗಂದರೆ:—
ಮೊದಲು ಕಬ್ಬಿಣದ ತಗಡಿನ ಎರಡು ಪೊಳ್ಳುಗೋಡೆಗಳನ್ನು ಒಂದರ ಎದು
ರಿಗೊಂದು ತಯಾರಮಾಡುವರು. ಇವುಗಳ ಮಧ್ಯದಲ್ಲಿ ದುರಸ್ತಮಾಡತಕ್ಕ
ಹಡಗವನ್ನು ತಂದು ಈ ಗೋಡೆಗಳಿಗೆ ಗಟ್ಟಿಯಾಗಿ ಕಟ್ಟುವರು. ಆಮೇಲೆ
ಎರಡೂ ಗೋಡೆಗಳ ನಡುವೆ ಕೆಳಗೆ ಇರುವ ಕಬ್ಬಿಣದ್ದೊಂದು ತಳಕು
ಸೀಲಕ್ಕೆಳುತ್ತ ಹಡಗವನ್ನು ನೀರಮೇಲೆ ತರುವದು. ಆಗ ದುರಸ್ತು ಮಾ
ಡತಕ್ಕದ್ದನ್ನೆಲ್ಲ ಮಾಡಿದ ಬಳಿಕ ಆ ತಳಕು ಮೆಲ್ಲನೆ ಇಳಿಯುತ್ತ ಹಡಗ
ವನ್ನು ನೀರಲ್ಲಿ ಇಳಿಸುವದು. ಈ ಎತ್ತಿಳಿಸುವ ಉಗಿಯ ಯಂತ್ರಗಳೂ,
ಬಲಾಶೀ ಜನರೂ ಈ ಗೋಡೆಗಳ ಪೊಳ್ಳಿನಲ್ಲಿಯೇ ಇರುತ್ತಾರೆ. ಅಂದ
ಬಳಿಕ ಈ ಪೊಳ್ಳಿನ ವಿಸ್ತಾರವೆಷ್ಟಿರಬೇಕೆಂಬದನ್ನು ವಾಚಕರು ಸಹಜ
ವಾಗಿ ತರ್ಕಿಸಿಕೊಳ್ಳಬಹುದು.

ಈ ತರದ ಗೋದಿಗಳನ್ನು ಬೇಕಾದತ್ತ ಬಯ್ಯಲಿಕ್ಕೆ ಬರುವದು.
ಇದೊಂದು ದೊಡ್ಡ ಲಾಭವು. ಇದಲ್ಲದೆ ಉಳಿದವುಗಳಿಗಿಂತ ಇವುಗಳಿಗೆ
ನೀಟ್ಟವೂ ಕಡಿಮೆಯೆಂದು ತಜ್ಞರು ಹೇಳುವರು. ಆದರೆ ಇವುಗಳ ತಾಳಿ
ಕೆಯು ಬಹಳಾದರೆ ಐವತ್ತು ವರ್ಷದ ವರೆಗೆ; ಹೆಚ್ಚಿಲ್ಲ. ಬಣಗೋದಿಗಳು
ನೂರಾರು ವರ್ಷದ ವರೆಗೆ ತಾಳುವವು. ಬಿಮ್ಮೊಮ್ಮೆ ಈ ತೇಲುವ ಗೋದಿ
ಗಳು ಸಮುದ್ರದೊಳಗೆ ಮುಳಗಿಹೋಗುತ್ತವೆ.

ಇಂಗ್ಲಂಡದಲ್ಲಿ ಬ್ರಾಯಿಲ್ ದೇಶದವರಿಗೆಂದು ಒಂದು ತೇಲುವ
ಗೋದಿಯನ್ನು ಕಟ್ಟಿರುವರು. ಇದು ೫೫೦ ಫುಟು ಉದ್ದವೂ ೧೩೦ ಫೂ
ಟು ಅಗಲವೂ ಇರುವದು, ಮತ್ತು ೩೦,೦೦೦ ಟನ್ ಭಾರವುಳ್ಳ ಹಡಗವ
ನ್ನು ಎತ್ತುವದು. ಇದರ ಬೆಲೆ ಎರಡುಲಕ್ಷ ಪೌಂಡು. ಇಂಥಾದ್ದೇ ಒಂದು
ಗೋದಿಯನ್ನು ಯುನೈಟೆಡ್ ಸ್ಟೇಟ್ಸಿನವರು ಕಟ್ಟಿ ಫಿಲಿಪೈನ್‌ದ್ವೀಪಕ್ಕೆ ಕಳಸಿ
ದರು. ಇದನ್ನು ಎಳೆಯಲಿಕ್ಕೆ ಮೂರು ಉಗಿಹಡಗಗಳು ಬೇಕಾದವು.

ಮುಂಬಯಿಗೆ ಹೋಗುವವರು ಅಲ್ಲಿರುವ ಗೋದಿಗಳನ್ನು ಅವಶ್ಯ
ವಾಗಿ ನೋಡತಕ್ಕದ್ದು.

ಸಮುದ್ರಸಪಾಟಿಯಿಂದ ಎತ್ತರಗಳು.

ಕಳೆದ ನವೆಂಬರ ತಿಂಗಳ ಸಂಚಿಕೆಯಲ್ಲಿ ಭೂಗೋಲಶಿಕ್ಷಣಕ್ಕೆ ಅವಶ್ಯವಾದ ಮಾಡೆಲ (ಮಣ್ಣಿನ ಪ್ರತಿಮೆ) ಗಳನ್ನು ಮಾಡುವ ಕ್ರಮವನ್ನು ವಿವರಿಸಿದ್ದೇವಷ್ಟೆ. ಅಂಥ ಮಾಡೆಲಗಳನ್ನು ಮಾಡುವದಕ್ಕೆ ಸಮುದ್ರದ ಸಪಾಟಿಯಿಂದ, ಮಾಡೆಲವನ್ನು ಮಾಡತಕ್ಕ ಭೂಭಾಗದಲ್ಲಿರುವ ಬೇರೆ ಬೇರೆ ಸ್ಥಳಗಳ ಎತ್ತರಗಳು ಗೊತ್ತಾಗುವದು ಅವಶ್ಯವಿರುವದು. ಆದ ಕಾರಣ, ಧಾರವಾಡಜಿಲ್ಲೆಯ ಹಾಗು ಅದರೊಳಗಿನ ಬೇರೆ ಬೇರೆ ತಾಲೂಕುಗಳ ಮಾಡೆಲಗಳನ್ನು ಮಾಡುವದಕ್ಕೆ ಅವಶ್ಯವಾದ ಬೇರೆ ಬೇರೆ ಸ್ಥಳಗಳ ಎತ್ತರಗಳನ್ನು ಇದರಡಿಯಲ್ಲಿ ಕೊಟ್ಟಿರುತ್ತೇವೆ. ಎತ್ತರವು ಫೂಟುಗಳಲ್ಲಿ ಕೊಟ್ಟಿರುತ್ತದೆ. ಪ್ರತಿಯೊಂದು ಸ್ಥಳವು ಸಮುದ್ರದ ಸಪಾಟಿಯಿಂದ ಅದರ ಎದುರಿಗೆ ಕೊಟ್ಟಿರುವಷ್ಟು ಫೂಟು ಎತ್ತರವಿರುವದೆಂದು ತಿಳಿಯತಕ್ಕದ್ದು:—

ಧಾರವಾಡ ಜಿಲ್ಲೆ.

(೦)

ಧಾರವಾಡ ತಾಲೂಕ.

೧.	ಧಾರವಾಡ	೨೩೮೫ ಫೂ.	೧೩.	ಕೊಟಬಾಗಿ	೨೧೫೦ ಫೂ
೨.	ಅಳ್ಳಾವರ	೧೮೨೪ ,,	೧೪.	ಕೋಟೂರ	೨೪೭೨ ,,
೩.	ಅಮ್ಮಿನಭಾವಿ	೨೨೫೭ ,,	೧೪.	ಲೋಕೂರ	೨೦೫೬ ,,
೪.	ಉಪ್ಪಿನಬೆಟಗೇರಿ	೨೨೧೬ ,,	೧೫.	ಮಾದನಭಾವಿ	೪೪೨೧ ,,
೫.	ದೇವರಹುಬ್ಬಳ್ಳಿ	೨೪೮೬ ,,	೧೬.	ಮುಮ್ಮಿಗಟ್ಟಿ	೨೩೦೨ ,,
೬.	ಗರಗ	೨೨೫೦ ,,	೧೭.	ಮುಗದ	೨೨೭೨ ,,
೭.	ಹಾರೋಬೆಳವಡಿ	೧೯೬೦ ,,	೧೮.	ನರೇಂದ್ರ	೨೩೮೫ ,,
೮.	ಹೆಬ್ಬಳ್ಳಿ	೨೨೫೬ ,,	೧೯.	ನವಲೂರ	೨೩೭೯ ,,
೯.	ಕಬ್ಬೇನೂರ	೨೦೬೫ ,,	೨೦.	ನಿಗದಿ	೨೨೬೫ ,,
೧೦.	ಕಲ್ಲೂರ	೨೦೫೪ ,,	೨೧.	ಪುಡಕಲಕಟ್ಟಿ	೨೨೦೫ ,,
೧೧.	ಕರಡೀಗುಡ್ಡ	೨೩೦೬ ,,	೨೨.	ಸಿವಳ್ಳಿ	೨೩೦೨ ,,

೧೩.	ತಡಕೋಡ	೨೩೬೦ ಫೂ.	೨೮.	ಮನೆಗುಂಡಿ	೨೩೨೧ ಫೂ.
೧೪.	ತೇಗೂರ	೨೩೬೭ ,,	೨೯.	ಕಂಬಾರಗಣವಿ	೨೨೩೬ ,,
೧೫.	ಯಾದವಾಡ	೨೨೫೦ ,,	೩೦.	ಕ್ಯಾರಕೊಪ್ಪಗುಡ್ಡ	೨೫೦೩ ,,
೧೬.	ಕಲಕೇರಿ	೨೫೭೨ ,,	೩೧.	ಮಂಗಲಗಟ್ಟಿ	೨೪೧೪ ,,
೧೭.	ಹೊಲತಿಕೋಟಿ	೨೪೨೩ ,,			

ಹುಬ್ಬಳ್ಳಿ ತಾಲೂಕ.

೧.	ಹುಬ್ಬಳ್ಳಿ	೨೦೩೯ ಫೂ.	೧೩.	ಕುರಡಿಕೇರಿ	೧೮೭೨ ಫೂ.
೨.	ಅದರಗುಂಚಿ	೨೦೪೫ ,,	೧೪.	ಕುಸುಗಲ್ಲ	೨೧೧೯ ,,
೩.	ಅಮರಗೋಳ	೨೧೯೯ ,,	೧೯.	ಮಂಟೂರ	೨೦೧೪ ,,
೪.	ಅಗಡಿ	೨೧೪೪ ,,	೨೦.	ನೂಲವಿ	೨೦೫೬ ,,
೫.	ಅರಳೀಕಟ್ಟಿ	೨೦೭೬ ,,	೨೧.	ರೊಟ್ಟಿಗವಾಡ	೨೦೦೯ ,,
೬.	ಭಂಡಿವಾಡ	೨೧೭೦ ,,	೨೨.	ಕರೆವಾಡ	೨೦೭೬ ,,
೭.	ಭ್ಯಾಹಟ್ಟಿ	೨೦೦೫ ,,	೨೩.	ಶಿರಗುಪ್ಪಿ	೧೯೬೦ ,,
೮.	ಚ್ಯಾಕಲಬ್ಬಿ	೨೦೭೬ ,,	೨೪.	ಸುಳ್ಳ	೨೧೯೬ ,,
೯.	ಛಬ್ಬಿ	೨೦೪೪ ,,	೨೫.	ಉಣಕಲ್ಲ	೨೧೯೯ ,,
೧೦.	ಗೋಪನಕೊಪ್ಪ	೨೧೯೮ ,,		(ಗುಡ್ಡ)	(೨೪೦೯) ,,
೧೧.	ಹಳ್ಳಿಯಾಳ	೨೦೫೦ ,,	೨೬.	ವರೂರ	೨೦೦೦ ,,
೧೨.	ಹೆಬಸೂರ	೧೯೫೦ ,,	೨೭.	ಯರಗುಪ್ಪಿ	೧೯೯೪ ,,
೧೩.	ಹಿರೇನರ್ತಿ	೨೦೧೫ ,,	೨೮.	ಕಟನೂರ	೧೮೫೦ ,,
೧೪.	ಇಂಗಳಹಳ್ಳಿ	೧೯೪೦ ,,	೨೯.	ಗಾವನೆಗಟ್ಟಿ	೨೩೭೦ ,,
೧೫.	ಕಿರೇಸೂರ	೧೯೫೦ ,,	೩೦.	ಅಂಚಟಗೇರಿ	೨೦೪೪ ,,
೧೬.	ಕೋಳಿವಾಡ	೨೦೬೦ ,,			

ನವಲಗುಂದ ತಾಲೂಕ.

೧.	ನವಲಗುಂದ	೨೧೪೩ ಫೂ.	೩.	ಅಳಗವಾಡಿ	೧೯೬೫ ಫೂ.
೨.	ಅಡನೂರ	೧೯೭೦ ,,	೪.	ಅಮರಗೋಳ	೧೮೪೪ ,,

೫.	ಅಣ್ಣಿಗೇರಿ	೨೦೬೬ ಫ್ಲೂ.	೨೪.	ಬನ್ನೂರ	೧೬೫೦ ಫ್ಲೂ
೬.	ಆರೇಕುರಹಟ್ಟಿ	೨೦೦೬ ,,	೨೯.	ಕೊಂಡಿಕೊಪ್ಪ	೨೦೨೭ ,,
೭.	ಆಯಟ್ಟಿ	೨೦೩೧ ,,	೩೦.	ಕೊಂಗವಾಡ	೧೬೬೫ ,,
೮.	ಬನಹಟ್ಟಿ	೧೬೬೧ ,,	೩೧.	ಕೊಣ್ಣೂರ	೧೬೫೩ ,,
೯.	ಬಸಾಪೂರ	೧೯೪೦ ,,	೩೨.	ಮಣಕವಾಡ	೧೯೫೬ ,,
೧೦.	ಬೆಳವಟಗಿ	೧೯೫೭ ,,	೩೩.	ಮೊರಬ	೨೦೩೦ ,,
೧೧.	ಭದ್ರಾಪೂರ	೨೦೨೫ ,,	೩೪.	ಯಾಗನೂರ	೧೬೩೦ ,,
೧೨.	ಬೋಗಾನೂರ	೧೯೨೦ ,,	೩೫.	ನಲವಡಿ	೧೯೫೬ ,,
೧೩.	ನರಗುಂದ	೨೫೪೫ ,,	೩೬.	ನಾವಳ್ಳಿ	೧೬೫೪. ,,
೧೪.	ಚಿಲಕವಾಡ	೨೦೪೦ ,,	೩೭.	ಪಡೇಸೂರ	೧೯೨೦ ,,
೧೫.	ಪಾಟನಾಳ	೧೯೭೧ ,,	೩೮.	ಸಾಸವಿಹಳ್ಳಿ	೧೯೩೬ ,,
೧೬.	ಗುಡಿಸಾಗರ	೧೯೭೬ ,,	೩೯.	ಶಾನವಾಡ	೧೯೩೦ ,,
೧೭.	ಗುಮ್ಮಗೋಳ	೧೯೫೦ ,,	೪೦.	ಶಲವಡಿ	೧೯೫೫ ,,
೧೮.	ಹಾಳಕುಸೂಗಲ್ಲ	೧೯೭೭ ,,	೪೧.	ಶಿರಕೋಳ	೨೦೧೦ ,,
೧೯.	ಹಳ್ಳೀಕೇರಿ	೧೯೬೦ ,,	೪೨.	ಶಿರೋಳ	೧೬೫೩ ,,
೨೦.	ಹಂಪಿಹೊಳಿ	೧೬೧೪ ,,	೪೩.	ಶಿರೂರ	೨೦೩೧ ,,
೨೧.	ಹನಸಿ	೧೯೫೦ ,,	೪೪.	ಶಿಸುವಿನಹಳ್ಳಿ	೧೯೬೧ ,,
೨೨.	ಹಿರೇಕೊಪ್ಪ	೧೬೫೬ ,,	೪೫.	ತಡಹಾಳ	೧೬೯೧ ,,
೨೩.	ಹುಣಸೀಕಟ್ಟಿ	೧೯೭೦ ,,	೪೬.	ತಲೆಮೊರಬ	೧೯೫೦ ,,
೨೪.	ಇಬ್ರಾಹಿಮಪೂರ	೧೯೪೫ ,,	೪೭.	ತಿರ್ಲಾಪೂರ	೧೯೩೫ ,,
೨೫.	ಕಾಲವಾಡ	೧೯೧೦ ,,	೪೮.	ಚಿಕ್ಕನರಗುಂದ	೨೪೦೪ ,,
೨೬.	ಕಣಕಿಕೊಪ್ಪ	೧೯೭೫ ,,	೪೯.	ಯಮನೂರ	೧೯೧೦ ,,
೨೭.	ಕಲಮವಾಡ	೧೯೭೫ ,,			

ರೋಣ ತಾಲೂಕ.

೧.	ರೋಣ	೧೬೩೯ ಫ್ಲೂ.	೪.	ಅರಹುಣಸಿ	೧೬೩೨ ಫ್ಲೂ
೨.	ಅಬ್ಬಿಗೇರಿ	೨೦೯೭ ,,	೫.	ಬೆಳವಣಿಕಿ	೧೯೭೦ ,,
೩.	ಹೊಳೆಆಲೂರ	೧೬೪೦ ,,	೬.	ಹಡಗಲಿ	೨೦೭೨ ,,

೭.	ಗಜೇಂದ್ರಗಡ	೨೬೨೮ ಫೂ.	೨೧.	ಕೂರಹಟ್ಟಿ	೧೮೯೪ ಫೂ.
೮.	ಹಾಳಕೇರಿ	೧೯೮೫ ,,	೨೨.	ಮೂಡಲಗೇರಿ	೧೮೬೫ ,,
೯.	ಹನಮನಹಾಳ	೧೭೮೯ ,,	೨೩.	ಮಲ್ಲಾಪೂರ	೧೯೪೨ ,,
೧೦.	ಹಿರೇಹಾಳ	೧೮೬೦ ,,	೨೪.	ಮಾಳಪಾಡ	೧೮೫೨ ,,
೧೧.	ಹಿರೇಮಣ್ಣೂರ	೧೮೨೦ ,,	೨೫.	ಮಾರನಬಸರಿ	೨೦೩೨ ,,
೧೨.	ಹೊಳೆಮಣ್ಣೂರ	೧೮೩೫ ,,	೨೬.	ಮುದೇನಗುಡಿ	೧೮೫೬ ,,
೧೩.	ಹೆಲ್ಲೂರ	೧೮೫೦ ,,	೨೭.	ನರೇಗಲ್ಲ	೨೦೯೨ ,,
೧೪.	ಹುನಗುಂಡಿ	೧೮೪೦ ,,	೨೮.	ನಿಡಗುಂದಿ	೧೯೪೫ ,,
೧೫.	ಜಕ್ಕಲಿ	೨೦೧೫ ,,	೨೯.	ದಾಸೂರ	೨೦೨೬ ,,
೧೬.	ಜಿಗಳೂರ	೧೯೩೬ ,,	೩೦.	ಸವಡಿ	೧೯೫೬ ,,
೧೭.	ತರಮಡಿ	೧೮೫೩ ,,	೩೧.	ಸೂಡಿ	೧೯೬೫ ,,
೧೮.	ತೊತಬಾಳ	೧೮೯೦ ,,	೩೨.	ಪಡಗಲಿ (ಯಾವಗಲ್ಲ ಸಮ್ಮತ)	೧೮೩೬ ,,
೧೯.	ತಾಜಗೇರಿ	೧೯೦೬ ,,	೩೩.	ಯಾವಗಲ್ಲ	೧೮೩೮ ,,
೨೦.	ತುರಡಿಗೆ	೧೮೫೨ ,,			

ಕಲಘಟಗಿ ತಾಲೂಕ.

೧.	ಕಲಘಟಗಿ	೧೩೯೧ ಫೂ.	೧೨.	ಮಿಶ್ರಿಕೋಟಿ	೧೮೧೫ ಫೂ.
೨.	ಬಮ್ಮಿಗಟ್ಟಿ	೧೮೨೦ ,,	೧೩.	ಮುಕ್ಕಲ್ಲು	೧೯೦೦ ,,
೩.	ಬಾನಗಿತ್ತಿಗುಡಿ ಹಾಳ	೧೮೩೫ ,,	೧೪.	ಮುತ್ತಿಗಿ	೧೮೦೫ ,,
			೧೫.	ಹೊನ್ನಿಹಳ್ಳಿ	೨೦೧೧ ,,
೪.	ಬಸವನಕೊಪ್ಪ	೧೮೨೬ ,,	೧೬.	ಕಂದ್ಲಿ	೧೫೧೯ ,,
೫.	ಬೆಲವಂತರ	೧೩೦೪ ,,	೧೭.	ಅರಳೀಹೊಂಡ	೧೩೨೦ ,,
೬.	ಬೀರವಳ್ಳಿ	೧೮೩೦ ,,	೧೮.	ಸಿದ್ದನಬಾವಿ	೧೯೩೫ ,,
೭.	ದುಮ್ಮವಾಡ	೧೮೪೦ ,,	೧೯.	ಹುಲಕೊಪ್ಪ	೨೨೫೬ ,,
೮.	ಗಳಿಗಿ	೨೨೪೮ ,,	೨೦.	ನಾಗನೂರ	೨೦೯೫ ,,
೯.	ಗಂಜೀಗಟ್ಟಿ	೧೯೧೬ ,,	೨೧.	ಕಾಮಧೇನು	೧೮೧೫ ,,
೧೦.	ಹಿರೇಹೊನ್ನಿಹಳ್ಳಿ	೨೦೧೭ ,,	೨೨.	ತಾರೀಹಾಳ	೨೩೬೦ ,,
೧೧.	ಕೂಡಲಗಿ	೧೮೭೦ ,,			

ಬಂಕಾಪೂರ ತಾಲೂಕ.

೧.	ಬಂಕಾಪೂರ	೨೦೦೩	ಪೂ.	೧೮. ಕಾರಡಗಿ	೨೧೪೭ ಪೂ.
೨.	ಅಂದಲಗಿ	೨೧೭೨	,,	೧೯. ಕುಂದೂರ	೧೮೪೨ ,,
೩.	ಅತ್ತಿಗೇರಿ	೨೧೯೭	,,	(ಗುಡ್ಡ)	(೨೧೨೬) ,,
೪.	ಬನ್ನೂರ	೧೯೫೦	,,	೨೦. ಕ್ಯಾಲಕೊಂಡ	೨೨೨೦ ,,
೫.	ಧುಂಡಸಿ	೨೧೮೯	,,	೨೧. ಕುನ್ನೂರ	೨೧೩೪ ,,
೬.	ಹಿರೇಬೆಂಡಿಗೇರಿ	೨೨೧೪	,,	೨೨. ಮಣಿಕಟ್ಟಿ	೨೦೮೧ ,,
೭.	ಹಿರೇಬೂದೀಹಾಳ	೨೧೭೧	,,	೨೩. ಮತ್ತಿಕಟ್ಟಿ	೨೨೧೨ ,,
೮.	ಹಿರೇಹರಕುಣಿ	೨೨೨೬	,,	೨೪. ನಾರಾಯಣಪೂರ	೨೦೦೬ ,,
೯.	ಹಿರೇಮಲ್ಲೂರ	೧೮೩೭	,,	೨೫. ನೀರಲಗಿ	೨೩೪೨ ,,
೧೦.	ಹೊಸೂರ	೨೨೧೦	,,	೨೬. ಸಿಗ್ಲಾಂವೆ	೨೦೦೬ ,,
೧೧.	ಹುಲಗೂರ	೨೨೦೬	,,	೨೭. ಸಂಕ್ಲಿಪೂರ	೨೦೫೫ ,,
೧೨.	ಹುಲಸೋಗಿ	೨೧೯೯	,,	೨೮. ತಡಸ	೨೦೮೩ ,,
೧೩.	,, (ಗುಡ್ಡ)	(೨೩೪೧)	,,	೨೯. ತಲ್ಲಫಟ್ಟಿ	೨೧೯೩ ,,
೧೪.	ಹುರಳಿಕೊಪ್ಪಿ	೧೯೧೯	,,	೩೦. ಎಲವಿಗಿ	೨೦೨೨ ,,
೧೫.	ಹೊವಿನಶಿಗ್ಲಿ	೧೯೩೮	,,	೩೧. ಬನ್ನಿಕೊಪ್ಪ	೧೯೩೩ ,,
೧೬.	ಇಂಗಳಗಿ	೨೧೪೬	,,	೩೨. ಬಾಡ	೨೯೪೧ ,,
೧೭.	ಕಳಸ	೨೨೦೫	,,		

ಹಾನಗಲ್ಲತಾಲೂಕ.

೧.	ಹಾನಗಲ್	೧೮೯೨	ಪೂ.	೭. ಬಮ್ಮನಹಳ್ಳಿ	೧೯೩೦ ಪೂ.
೨.	ಆಡೂರ	೧೯೩೫	,,	೮. ಚಿಕ್ಕಾನೆಹೊಸೂರ	೧೮೦೯ ,,
೩.	ಆಲದಕಟ್ಟಿ	೧೯೩೪	,,	೯. ಗೊಂದಿ	೧೩೫೨ ,,
೪.	ಆಲೂರ	೧೯೦೦	,,	೧೦. ಹಾವಣಗಿ	೧೩೪೧ ,,
೫.	ಅರಳೇಶ್ವರ	೧೮೨೮	,,	೧೧. ಹೀರೂರ	೧೮೦೦ ,,
೬.	ಬಾಳಂಬೀಡ	೧೮೧೩	,,	೧೨. ಕಂಚೀನೆಗಳೂರ	೧೮೧೦ ,,

೧೩. ಕಪ್ಪೆರಗಿಕೊಪ್ಪ	೧೯೫೧ ಫೂ.	೨೧. ವರದಿ	೧೮೨೫ ಫೂ.
೧೪. ಕೂಸನೂರ	೨೦೬೧ ,,	೨೨. ಕೆರವಡಿ	೧೮೨೪ ,,
೧೫. ಮಹಾರಾಜಪೇಟೆ	೨೦೦೯ ,,	೨೩. ಹೊಂಕಣ	೧೬೫೨ ,,
೧೬. ಮಾಸನಕಟ್ಟೆ	೨೦೪೭ ,,	೨೪. ನಿಡಸಂಗಿ	೧೯೪೫ ,,
೧೭. ನರೇಗಲ್ಲ	೨೧೨೪ ,,	೨೫. ಶ್ರಿಂಗೇರಿ	೧೮೬೦ ,,
೧೮. ಸಮ್ಮಸಗಿ	೧೯೬೫ ,,	೨೬. ಎಲಿವಾಳ	೨೦೧೦ ,,
೧೯. ಶೇಷಗಿರಿ	೧೯೫೬ ,,	೨೭. ಎಳವತಿ	೨೧೧೬ ,,
೨೦. ತಿಳವಳ್ಳಿ	೧೬೯೨ ,,	೨೮. ಹಲಗಿನಕೊಪ್ಪ	೧೯೬೨

ಗದಗ ತಾಲೂಕ:

೧. ಗದಗ	೨೪೦೦ ಫೂ.	೧೬. ಹಿರೇಹಂದಿಗೋಳ	೨೨೬೪ ಫೂ.
೨. ಅಲೂರ	೧೯೫೦ ,,	೧೭. ಹೊಂಬಳ	೨೦೬೩ ,,
೩. ಅಂತೂರಬೆಂತೂರ	೨೧೫೨ ,,	೧೮. ಹೊಸಹಳ್ಳಿ	೨೧೦೨ ,,
೪. ಅಸುಂಡಿ	೨೨೩೦ ,,	೧೯. ಹುಯಿಲಗೋಳ	೨೦೪೦ ,,
೫. ಬಳಗಾನೂರ	೨೦೧೦ ,,	೨೦. ಹುಲಕೋಟಿ	೨೧೧೯ ,,
೬. ಬೆಳಧಡಿ	೨೦೧೫ ,,	೨೧. ಜಂತಲಿಶಿರೂರ	೨೦೩೦ ,,
೭. ಚಿಕ್ಕಹಂದಿಗೋಳ	೨೨೬೪ ,,	೨೨. ಕರಡಿ	೨೧೦೬ ,,
೮. ಚಿಂಚಲಿ	೨೨೦೦ ,,	೨೩. ಕಲಕೇರಿ	೧೮೧೬ ,,
(ಗುಡ್ಡ)	(೨೪೦೯) ,,	೨೪. ಕಳಸಾಪೂರ	೨೦೩೬ ,,
೯. ಡಂಬಳ	೨೦೫೦ ,,	೨೫. ಕಣವಿ	೨೨೦೦ ,,
೧೦. ಹಳ್ಳೀಗುಡಿ	೨೦೩೦ ,,	೨೬. ಕಣಗಿನಹಾಳ	೨೧೨೩ ,,
೧೧. ಹಳ್ಳೀಕೇರಿ	೨೦೪೦ ,,	೨೭. ಕೊರ್ಲಹಳ್ಳಿ	೧೬೩೦ ,,
೧೨. ಹಮ್ಮಿಗಿ	೧೩೦೨ ,,	೨೮. ಕೊಟಮಚಿಗಿ	೨೧೩೫ ,,
೧೩. ಹಲಕರ್ಣಪೂರ	೨೧೧೯ ,,	೨೯. ಕುರ್ತಕೋಟಿ	೨೧೫೩ ,,
೧೪. ಹರ್ತಿ	೨೨೦೦ ,,	೩೦. ಲಕ್ಕುಂಡಿ	೨೧೦೦ ,,
(ಗುಡ್ಡ)	(೨೫೦೭) ,,	೩೧. ಲಿಂಗಧಾಳ	೨೦೧೦ ,,
೧೫. ಹೆಸರೂರ	೧೬೪೦ ,,	೩೨. ಮೇವುಂಡಿ	೧೮೯೦ ,,

೩೩. ಮುಳಗುಂದ	೨೩೭೬ ಫೂ.	೩೯. ಎಲೆಶಿರೂರ	೨೧೩೦ ಫೂ
೩೪. ಮುಂಡರಗಿ	೧೮೦೧ ,,	೪೦. ಲಕ್ಕುಂಡಿ	೨೦೭೯ ,,
೩೫. ನಾಗಾವಿ	೨೧೦೨ ,,	೪೧. ಸೊರಟೂರ	೨೨೬೧ ,,
೩೬. ನೀಲಗುಂದ	೨೩೦೦ ,,	೪೨. ಈವಟೇಶ್ವರ	೨೮೬೫ ,,
(ಗುಡ್ಡ)	(೨೪೫೧) ,,	(ಗುಡ್ಡ)	೩೦೭೪ ,,
೩೭. ಸಿಂಗಟಾಲೂರ	೧೬೮೯ ,,	೪೩. ಕಪ್ಪತಗುಡ್ಡದ	೨೩೦೦ ಯಿಂ
೩೮. ತಿಮ್ಮಾಪೂರ	೨೧೦೦ ,,	ಪರಮಾವಧಿ	೩೦೭೪ ,,

ಕರ್ಜಿಗಿ ತಾಲೂಕ.

೧. ಕರ್ಜಿಗಿ	೧೭೬೩ ಫೂ.	೧೮. ಕಳ್ಳೀಹಾಳ	೧೮೬೮ ಫೂ
೨. ಅಗಡಿ	೧೭೪೮ ,,	೧೯. ಕನವಳ್ಳಿ	೧೯೦೮ ,,
೩. ಅಲದಕಟ್ಟಿ	೧೮೪೮ ,,	೨೦. ಕಾತೇನಹಳ್ಳಿ	೧೯೪೪ ,,
೪. ಬೆಳವಿಗಿ	೧೭೩೬ ,,	೨೧. ಕೊಡಬಾಳ	೧೭೬೩ ,,
೫. ದೇವೀಹೊಸೂರ	೧೮೬೪ ,,	೨೨. ಕೋಳೂರ	೧೭೫೫ ,,
೬. ದೇವಗಿರಿ	೧೮೧೬ ,,	೨೩. ಕೋಣನತಂಬಿಗಿ	೧೭೫೧ ,,
(ಗುಡ್ಡ)	೨೦೫೫ ,,	೨೪. ಕೊಂಬಿಗೇರಿ	೧೮೫೯ ,,
೭. ಗುತ್ತಲ	೧೭೭೩ ,,	೨೫. ಮಲ್ಲೂರ	೧೮೯೯ ,,
೮. ಹಂದಿಗನೂರ	೧೭೨೫ ,,	೨೬. ನಾಗನೂರ	೧೭೪೨ ,,
೯. ಹತ್ತಿಮತ್ತೂರ	೧೮೫೪ ,,	೨೭. ನೆಗಳೂರ	೧೭೯೩ ,,
೧೦. ಹಾವನೂರ	೧೬೮೬ ,,	೨೮. ಸೊರಣಗಿ	೧೯೪೪ ,,
೧೧. ಕಳಸೂರ	೧೭೪೮ ,,	೨೯. ವಡವಿ	೨೦೫೮ ,,
೧೨. ಜೊಮ್ಮರಡಿ	೧೮೯೯ ,,	೩೦. ಎಲಗಚ್ಚು	೧೭೫೬ ,,
೧೩. ಹೊಸರಿತ್ತಿ	೧೬೭೩ ,,	೩೧. ಹಾವೇರಿ	೧೯೦೪ ,,
೧೪. ಅಚ್ಚೆಂಗಿ	೧೭೯೯ ,,	೩೨. ನೀರಲಗಿ	೧೭೦೧ ,,
೧೫. ಕಬ್ಬೂರ	೧೮೭೦ ,,	೩೩. ಗಳಗನಾಥ	೧೭೫೧ ,,
೧೬. ಕಡಕೋಳ	೧೯೯೨ ,,	೩೪. ಬಾರತಿ	೧೮೭೩ ,,
೧೭. ಹಲ್ಲೀದೇವತ	೧೯೪೪ ,,	(ಗುಡ್ಡ)	೨೩೧೫ ,,

ರಾಣೇಬಿನ್ನೂರ ತಾಲೂಕ.

೧. ರಾಣೆಬಿನ್ನೂರ	೧೯೭೪ ಫೂ.	೧೮. ಜೋಯಿಸರಹರಳೀಹಳ್ಳಿ	೨೦೫೦ ಫೂ.
೨. ಐರಣಿ	೧೭೭೯ ,,	೧೯. ಕದರಮಂಡಲಗಿ ಗುಡ್ಡ	೨೦೦೨ ,,
(ಗುಡ್ಡ)	೨೫೦೩ ,,	೨೦. ಕಜ್ಜರಿ	೧೮೭೫ ,,
೪. ಅಂತರವಳ್ಳಿ	೧೮೩೦ ,,	೨೧. ಕಾಕೋಳ	೧೮೩೨ ,,
೫. ಆರೇಮಲ್ಲಾಪೂರ	೧೮೯೫ ,,	೨೨. ಕರೂರ	೧೮೫೩ ,,
೬. ಅಸುಂಡಿ	೨೦೨೦ ,,	೨೩. ಕುಪ್ಪೇಲೂರ	೧೮೫೨ ,,
೭. ಬೆನಕನಕೊಂಡ	೧೯೦೧ ,,	೨೪. ಕೂಸನೂರ	೧೯೦೦ ,,
೮. ಬಿಳಹಳ್ಳಿ	೧೯೧೧ ,,	೨೫. ಮೆಡ್ಲೇರಿ	೧೭೪೪ ,,
೯. ಬಿಸಲಹಳ್ಳಿ	೨೧೦೭ ,,	೨೬. ಮೋಟೆಬಿನ್ನೂರ	೧೯೭೩ ,,
೧೦. ಚಳ್ಳಗೇರಿ	೧೮೭೨ ,,	೨೭. ಮುದೇನೂರ	೧೮೦೦ ,,
೧೧. ಗುಡ್ಡಗುಡ್ಡಾಪೂರ.	೨೦೧೮ ,,	೨೮. ಸುಣಕಲ್ಲಬಿದರಿ	೨೦೧೭ ,,
,, (ಗುಡ್ಡ)	೨೨೦೫ ,,	೨೯. ತುಮ್ಮಿನಕಟ್ಟಿ	೧೮೨೩ ,,
೧೩. ಹಾದರಗೇರಿ	೧೭೫೩ ,,	೩೦. ಉದಗಟ್ಟಿ	೧೭೭೬ ,,
೧೪. ಹಲಗೇರಿ	೧೯೩೮ ,,	೩೧. ಉಕ್ಕುಂದ	೨೧೮೦ ,,
೧೫. ಹೆಡಿಹಾಳ	೧೯೫೧ ,,	೩೨. ಬ್ಯಾಡಗಿ	೨೮೦೩ ,,
೧೬. ಹಿರೇಬಿದರಿ	೧೮೦೦ ,,	೩೩. ಹೊಳಿ ಆನವೇರಿ	೧೭೫೨ ,,
೧೭. ಹೊನ್ನತ್ತಿ	೧೮೪೪ ,,	೩೪. ಹಾರಗೊಪ್ಪ	೧೯೦೦ ,,
೧೮. ಹೂಲಿಹಳ್ಳಿ	೨೦೧೬ ,,		
೧೯. ಇಟಗಿ	೧೮೧೭ ,,		

ಕೋಡ ತಾಲೂಕ.

೧. ಕೋಡ	೨೧೦೦ ಫೂ.	೫. ಬೆಟ್ಟಕೇರೂರು	೨೧೦೦ ಫೂ.
೨. ಅಲದಗೇರಿ	೨೧೧೨ ,,	೬. ಚಿಕ್ಕಬಾಸೂರ	೨೦೦೧ ,,
(ಗುಡ್ಡ)	೨೫೧೭ ,,	೭. ಚಿಕ್ಕೇರೂರ	೨೦೬೪ ,,
೩. ಅಣಜಿ	೨೦೧೫ ,,	೮. ಚಿನ್ನೆಮುಳಗುಂದ	೨೧೫೨ ,,
೪. ಆಣೂರು	೨೨೨೦ ,,	(ಗುಡ್ಡ)	೨೪೪೦-೨೪೪೩ ,,

೯. ಹಳ್ಳೂರು (ಗುಡ್ಡ)	೧೭೮೮ ಫೂ. (೨೩೦೪) ,,	೧೯. ಮೇದೂರ	೨೯೯೪
೧೦. ಹಾವಸಭೂವಿ	೨೦೫೬ ,,	೨೦. ನಾಗವರದ (ಗುಡ್ಡ)	೨೧೪೦ ೨೬೪೦
೧೧. ಪಡಿಗೊಂಡ	೨೦೩೦ ,,	೨೧. ರಟ್ಟೀಹಳ್ಳಿ	೧೮೬೦
೧೨. ಹಿರೇಕೇರೂರ	೨೦೪೮ ,,	೨೨. ಸಾತೇನಹಳ್ಳಿ	೧೯೧೫
೧೩. ಕಚವಿ	೧೯೧೫ ,,	೨೩. ಸಿಡೇನೂರ	೨೦೮೬
೧೪. ಕಾಗಿನೆಲ್ಲಿ	೧೮೮೩ ,,	೨೪. ಸೋಡಂಬಿ	೨೦೪೮
೧೫. ಕುಡುಪಲಿ	೧೮೮೫ ,,	೨೫. ಚಿಕ್ಕಸೆಂದೀಹಳ್ಳಿ	೨೨೩೮
೧೬. ಮಡ್ಲೂರ	೧೯೬೯ ,,	೨೬. ರಾಮತೀರ್ಥ	೨೦೩೧
೧೭. ಮಸೇನಿಗಿ	೨೦೪೯ ,,	೨೭. ಕಡೂರ	೧೯೦೩
೧೮. ಮಾಸೂರ	೧೯೦೬ ,,		

ಕುಂದಗೋಳ ತಾಲೂಕ.

೧. ಕುಂದಗೋಳ	೨೧೫೨ ಫೂ.	೬. ಕುಬ್ಯಾಳ	೨೦೫೧
೨. ಕಡಪಟ್ಟಿ	೨೧೦೩ ,,	೭. ಕಮಡೋಳ	೨೦೯೦
೩. ಬೆಟದೂರ	೨೧೫೩ ,,	೮. ಶಿರೂರ	೨೦೭೫
೪. ಎಲಿವಾಳ	೨೦೫೧ ,,	೯. ಸಾಂಸಿ	೨೧೯೮
೫. ಎತ್ನಾಪೂರ	೨೦೫೬ ,,	೧೦. ವಾಸಹಳ್ಳಿ	೨೦೩೨

ಲಕ್ಷ್ಮೇಶ್ವರ ತಾಲೂಕ.

೧. ಲಕ್ಷ್ಮೇಶ್ವರ	೨೧೧೯ ಫೂ.	೫. ಬಸಾಪೂರ	೨೧೯೧
೨. ಗೋಡಗೇರಿ	೨೩೬೫ ,,	೬. ರಾಮಗಿರಿ	೨೩೨೬
೩. ಗುಡಗೇರಿ	೨೩೪೧ ,,	೭. ಗೋಪನಾಳ	೨೦೫೬
೪. ಹಶುಪತಿಹಾಳ	೨೧೮೮ ,,	೮. ಶೀಗಳಿ	೨೦೦೦

ಶಿರಹಟ್ಟಿ ತಾಲೂಕ.

೧. ಶಿರಹಟ್ಟಿ	೧೮೦೬ ಫೂ.	೧೩. ಬೆಳ್ಳಟ್ಟಿ	೨೦೦೫ ಫೂ.
೨. ಎರಿಬೂದಿಹಾಳ	೨೧೪೯ ,,	೧೪. ಕಾಕೋಳಪುರ	೧೮೯೩ ,,
೩. ಹಿರೇಗೊಂಜಿಹಾಳ	೨೨೯೫ ,,	ಗುಡ್ಡ	೨೪೦೧ ,,
೪. ಚಿಕ್ಕಗೊಂಜಿಹಾಳ	೨೨೨೫ ,,	೧೫. ಮಜಲನಳ್ಳಿ	೧೮೮೦ ,,
೫. ಮಾಡಳ್ಳಿ	೨೦೭೦ ,,	(ಗುಡ್ಡ)	೨೫೨೪ ,,
೬. ಕಡಲವಾಡ	೨೦೩೮ ,,	೧೬. ಚಿಕ್ಕಎಡವಟ್ಟಿ	೧೯೩೬ ,,
೭. ಬರದ್ವಾಡ	೨೦೪೬ ,,	೧೭. ಹಿರೇಎಡವಟ್ಟಿ	೨೦೦೦ ,,
೮. ಎಲಫಟ್ಟಿ	೨೧೩೦ ,,	೧೮. ಕೆಲೂರ	೧೯೧೩ ,,
೯. ಮಾಗಡಿ	೨೧೪೬ ,,	೧೯. ಮುಂಡಪಾಡ	೧೭೧೬ ,,
೧೦. ಗೋನೂರ	೨೦೨೩ ,,	೨೦. ಇಟಗಿ	೧೬೬೭ ,,
(ಗುಡ್ಡ)	೨೪೫೨ ,,	೨೧. ಬಿದರಹಳ್ಳಿ	೧೭೫೮ ,,
೧೧. ಅರೆಗೊಂಡ	೨೪೩೬ ,,	೨೨. ಬೆಲಗಟ್ಟಿ	೧೮೨೦ ,,
೧೨. ಸತ್ತಿಗೇರಿ	೨೩೧೬ ,,	೨೩. ಹೆಬ್ಬಾಳ	೧೭೦೭ ,,

ಸವಣೂರ ತಾಲೂಕ

೧. ಸವಣೂರ	೧೮೬೫ ಫೂ.	೪. ಬಾಳಿಹೊಸೂರ	೧೭೭೧ ಫೂ.
೨. ಕಲಿವಾಳ	೧೮೪೬ ,,	೫. ಎಲ್ಲಾಪೂರ	೧೮೩೧ ,,
೩. ಸಿದ್ದಾಪೂರ	೧೮೭೪ ,,		

ಜಪಾನದ ಗಂಡಸರೂ ಹೆಂಗಸರೂ ಬೇಸಿಗೆಯಲ್ಲಿ ಹುಲ್ಲಿನಿಂದ ಮಾಡಿ
ಮಚ್ಚಿಗಳನ್ನು ಉಪಯೋಗಿಸುವರು. ಆದರೆ ಮಳೆಗಾಲದಲ್ಲಿ ಮಾತ್ರ
ಎರಡು ಮೂರು ಇಂಚು ಎತ್ತರವಿದ್ದ ಕಟ್ಟಿಗೆಯ ಕಡಾವಿಗೆಗಳನ್ನು
ಹಾಕಿಕೊಂಡು ಓಡಾಡುವರು. ಊರಲ್ಲಿ ಚಪ್ಪದ ಅಂಗಡಿಗಳು ಬೇಕ
ಷ್ಟಿರುವವು. ಇವುಗಳಲ್ಲಿ ಸಣ್ಣಪುಟ್ಟ ತೋಟಗಳನ್ನು ಮಾಡಿರುವರು
ಇಲ್ಲಿ ಜನರು ಸಾಕೇ ಎಂಬ ಪಾನವನ್ನು ಸವಿಯುತ್ತ ಕಾಳಿತಾಗ ಹೊರ
ಗಾಯನ ನೃತ್ಯಗಳು ನಡೆಯುವವು.

ಜಪಾನದ ಜನರಲ್ಲಿ ಎರಡು ತರದ ಧರ್ಮಗಳಿರುವವು. ಇವು
ಳಲ್ಲಿ ಹಳೇದಾದ ಶಿಂಟೋ ಧರ್ಮವೆಂದರೆ ಜಪಾನದ ಪುರಾತನ ಕ
ಗಳ ಪೂಜೆಯು. ಈ ಧರ್ಮದ ಮೇರೆಗೆ ಜಪಾನದ ಅರಸನಾದ ಮಿಕಾ
ಡೋನು ದೇವರ ವಂಶಜನೆಂದೂ ಜಪಾನದ ಜನರು ಇವನ ಆಜ್ಞೆಯನ್ನು
ಅನುಮಾನಿಸದೆ ಅನುಸರಿಸಬೇಕೆಂದೂ ಇರುವದು. ಬೌದ್ಧಧರ್ಮವ
ಕಾಲಾಂತರದಲ್ಲಿ ಜಪಾನದಲ್ಲೆಲ್ಲ ಹಬ್ಬಿತ್ತು. ಜಪಾನದಲ್ಲಿರುವ ಕೆಲವ
ಬೌದ್ಧವಸತಿಗಳು ಬಹಳ ದೊಡ್ಡವಿರುತ್ತವೆ. ಇವುಗಳಲ್ಲಿ ಮೇಲ್ತರದ
ಕೆತ್ತಿನೆಯ ಕೆಲಸವನ್ನು ನೋಡಬಹುದು. ಯೇಕೋಹಾಮಾದ ನೆರ
ಯಲ್ಲಿರುವ ಒಂದು ಹಳ್ಳಿಯಲ್ಲಿ ಬುದ್ಧನ ಒಂದು ಪ್ರತಿಮೆಯಿರುವದು.
ಇದರ ಎತ್ತರವು ಸುಮಾರು ನಾಲ್ಕಂತಸ್ತಿನ ಮನೆಯಷ್ಟಾಗಬಹುದು.
ಸದ್ಯಕ್ಕೆ ಜಪಾನದಲ್ಲಿ ಕ್ರಿಸ್ತಿಧರ್ಮವನ್ನು ಸ್ವೀಕರಿಸಿದ ಜನರ ಸಂಖ್ಯೆಯು
ತಕ್ಕಮಟ್ಟಿಗೆ ಇರುವದು. ಬಹುತರವಾಗಿ ಸುಶಿಕ್ಷಿತರು ಮಾತ್ರ ಈ
ಹೊಸಧರ್ಮಕ್ಕೆ ಮರುಳಾಗಿರುವರು. ಬಹುತರವಾಗಿ ಸಾಮಾನ್ಯಜನ
ರೆಲ್ಲ ಬೌದ್ಧಧರ್ಮಾನುಯಾಯಿಗಳೇ ಇರುವರು.

೧೯ನೆಯ ಶತಮಾನದ ಮಧ್ಯದ ವರೆಗೆ ಡಚ್ಚರ ಹೊರ್ತು ಮಿಕ್ಕ
ವಿದೇಶೀಯರಿಗೆ ಜಪಾನದ ಸಾಮ್ರಾಜ್ಯದೊಡನೆ ವ್ಯಾಪಾರಮಾಡಲಿಕ್ಕೆ ಅಧಿ
ಕಾರವಿರಲಿಲ್ಲ. ೧೮೫೩ರಲ್ಲಿ ಸಂಯುಕ್ತ ಸಂಸ್ಥಾನದ ಸರಕಾರದವರು
ಜಪಾನದ ಅರಸನೊಡನೆ ವ್ಯಾಪಾರದ ಬಗ್ಗೆ ಒಪ್ಪಂದವನ್ನು ಮಾಡಿ
ಕೊಂಡರು. ಈ ಮೂಲಕ ಸ್ವಲ್ಪದಿವಸಗಳಲ್ಲಿ ರಾಜ್ಯದಲ್ಲಿ ಯಾದವೀ
ಯುದ್ಧಗಳು ಆರಂಭವಾದವು. ಇದರಿಂದ ಆ ದೇಶದಲ್ಲಿ ನಡೆದು ಬಂದಿದ್ದ
ಹಳೇ ರಾಜ್ಯದಾಡಳಿತದ ಕ್ರಮದಲ್ಲಿ ಬಿಳ್ಳೇ ಬದಲಾವಣೆಯಾಯಿತು. ಅದಿ

ನಿಂದ ಜಪಾನವು ಒಳ್ಳೇ ಭರದಿಂದ ಊರ್ಜಿತಸ್ಥಿತಿಯನ್ನು ಹೊಂದಲಾ ರಂಭಿಸಿರುವದು. ಈಗ .ಬೇಕಾದ ರಾಷ್ಟ್ರದವರು ಜಪಾನದೊಡನೆ ವ್ಯಾಪಾರ ಮಾಡಬಹುದಾಗಿದೆ.

ಯೋಕೋಹಾಮವು ಜಪಾನದ ಮುಖ್ಯ ಬಂದರವಿರುವದು. ಇದು ಟೋಕೀಯೋ ಎಂಬ ವಿಶಾಲವೂ ಆಳವೂ ಆದ ಉಪಸಾಗರದ ದಂಡೆಯ ಮೇಲಿರುವದು. ಈ ಪಟ್ಟಣವು ವ್ಯಾಪಾರದ ಬಗ್ಗೆ ಹೆಸರಾಗಿರುವದು. ಇಲ್ಲಿ ಹಲವು ವಖಾರಗೆಗಳನ್ನೂ ಬ್ಯಾಂಕುಗಳನ್ನೂ ಕಾಣಬಹುದು, ಇಲ್ಲಿಂದ ಮಿಕಾಡೋನ ರಾಜಧಾನಿಯಾದ ಟೋಕಿಯೋ ಪಟ್ಟಣಕ್ಕೆ ರೇಲ್ವೆ ಮಾರ್ಗವಿರುವದು. ದೂರದಿಂದ ನೋಡಿದರೆ ಟೋಕಿಯೋವು ಮನೋಹರವಾಗಿಲ್ಲ. ಅಸಂಖ್ಯ ಸಣ್ಣ ಪುಟ್ಟ ಕಟ್ಟಿಗೆಯ ಮನೆಗಳೂ, ಅಲ್ಲೊಂದು ಇಲ್ಲೊಂದು ಗಿಡಗಳ ಗುಂಪೂ, ಗುಡಿಗಳ ಗೋಪುರಗಳೂ ಹೊಗೆಯನ್ನು ಕಾರುತ್ತಿರುವ ಕಾರಖಾನೆಗಳ ಹೊಗೆಗಂಬಗಳೂ ಮಾತ್ರ ದೃಷ್ಟಿಗೆ ಬೀಳುತ್ತವೆ; ಅದಾಗ್ಯೂ ಟೋಕಿಯೋವು ಭೂಮಂಡಲದಲ್ಲಿ ಪ್ರಸಿದ್ಧವಿರುವ ರಾಜಧಾನಿಗಳಲ್ಲಿ ಒಂದಾಗಿರುವದು ಇದು ಸುಮಾರು ೭೦ ಚ. ಮೈಲು ವಿಸ್ತಾರವುಳ್ಳದ್ದಿದ್ದು, ಸುಮಾರು ೧೫ ಲಕ್ಷ ಜನರ ವಸತಿ ಸ್ಥಾನವಾಗಿರುವದು. ಊರ ನಡುವೆ ರಮಣೀಯವಾದ ಒಂದು ಉದ್ಯಾನವೂ, ಒಂದು ಹಳೇ ಕೋಟೆಯೂ ಜಪಾನದ ಜನರ ಕಲಾಕೌಶಲ್ಯಕ್ಕೆ ಸಾಕ್ಷಿಯಾಗಿರುವ ಕೆಲವು ಗುಡಿಗಳೂ ಇರುವವು. ಮಿಕಾಡೋನು ವಾಸಿಸುವ ಅರಮನೆಯಾದರೂ ನೋಡತಕ್ಕ ಇಮಾರತುಗಳಲ್ಲಿ ಒಂದಾಗಿದೆ. ಇದನ್ನು ನೋಡಲಿಕ್ಕೆ ಸಾರ್ವಜನಿಕ ಪರವಾನಿಗೆಯಿಲ್ಲ. ಕಯೋಟೋ ಪಟ್ಟಣವು ಈ ದೇಶದ ಹಳೇರಾಜಧಾನಿಯು. ಇದು ಹೊನಶು ನಡುಗಡ್ಡೆಯ ದಕ್ಷಿಣದಲ್ಲಿ ಹಬ್ಬಿರುವ ಚಹದ ಪೈರಾಗುವ ಬೈಲಿನ ಮಧ್ಯದಲ್ಲಿರುವದು. ಈ ಪಟ್ಟಣವನ್ನು ೩೬ ಗುಡ್ಡಗಳ ಮೇಲೆ ಕಟ್ಟಿರುವರು. ಪ್ರತಿಯೊಂದು ಗುಡ್ಡದ ಬದಿಯಮೇಲೆ ಒಂದು ಗುಡಿಯಿರುವದು. ಮಿಕಾಡೋನ ಅರಮನೆ ಗಳೂ, ನಿಗೋ ಎಂಬ ಭದ್ರವಾಗಿ ಕಟ್ಟಿದ ಕೋಟೆಯೂ, ಬಂಗಾರದ ಗೋಪುರ, ಬೆಳ್ಳಿಯ ಗೋಪುರ ಎಂಬ ಇಮಾರತುಗಳೂ, ಇವಲ್ಲದೆ ಇತಿಹಾಸದ ದೃಷ್ಟಿಯಿಂದ ಹೆಸರಾದ ಇನ್ನೂ ನಾಲ್ಕಾರು ಇಮಾರತುಗಳೂ ಈ ಪಟ್ಟಣದ ಮಹತ್ವವನ್ನು ಸಧ್ಯಕ್ಕೆ ಸಹ ಕಾಯ್ದಿ

ರುವವು. ಇಲ್ಲಿ ತಯಾರಾಗುವ ಹಿತ್ತಾಳೆಯ ಹಾಗು ಇನಾಮೆಲದ ಸರ
ಕುಗಳೂ ಚಿನಯಿ ಮಣ್ಣಿನ ಸಾಮಾನುಗಳೂ, ಕಸೂತಿಯ ಕೆಲಸಗಳೂ
ಜಪಾನದಲ್ಲಿ ಮೇಲಾದವೆನಿಸುತ್ತವೆ.

ಇಲ್ಲಿಂದ ೨೬ಮೈಲು ಅಂತರದಲ್ಲಿ ಓಸಾಕಾ ಪಟ್ಟಣವಿರುವದು.
ವಿಸ್ತಾರದ ಮಾನದಿಂದ ಇದು ಜಪಾನದಲ್ಲಿ ಎರಡನೆಯ ಪಟ್ಟಣವಿರುವದು;
ಕಾಗು ವ್ಯಾಪಾರದಿಂದ ಮೊದಲನೆಯದೆನಿಸುವದು. ಇಲ್ಲಿ ಅಸಂಖ್ಯ ಕಾಲ
ವೆಗಳೂ ಪೂಲುಗಳೂ ಇರುವದರಿಂದ ಇದನ್ನು ಜಪಾನದ ವೆನಿಸವೆಂದು
ಕರೆಯುವದುಂಟು. ಆದರೆ ಇದನ್ನು ಜಪಾನದ ಮಾಂಚೆಸ್ಟರವೆಂದು ಕರೆ
ವರೆ ಹೆಚ್ಚು ಒಪ್ಪುವದು. ಇಲ್ಲಿ ಎದ್ದು ಕಾಣುವ ಗಿರಣಿಗಳ ಅಸಂಖ್ಯ
ಹೊಗೆ ಗಂಬಗಳಿಂದ ಇದು ಹತ್ತಿಯ ಬಟ್ಟೆಗಳ ಕೈಗಾರಿಕೆಯ ಮುಖ್ಯ
ಸ್ಥಳವೆಂದು ತರ್ಕಿಸಬಹುದಾಗಿದೆ. ಓಸಾಕಾವು ಇದರ ಪಶ್ಚಿಮದಲ್ಲಿ ೧೫
ಮೈಲು ಅಂತರದಲ್ಲಿರುವ ಕೋಬ ಎಂಬ ಬಂದರದ ಮುಖಾಂತರವಾಗಿ
ವರದೇಶಗಳೊಡನೆ ವ್ಯಾಪಾರ ಮಾಡುವದು. ಕೋಬದಿಂದ ವಾರಕ್ಕೊಮ್ಮೆ
ನಾಗಸಾಕಿ ಎಂಬಲ್ಲಿಗೆ ಒಂದು ಉಗೆ ಹಡಗವು ಹೋಗುವದು. ಈ ಬಂದರ
ವಾದರೂ ವಿಶಾಲವಾದದ್ದೂ ಆಳವಾದದ್ದೂ ಇರುವದು. ಇದರ ನೆರೆಯ
ಲ್ಲಿರುವ ಕಲ್ಲಿದ್ದಲಿಯ ಖಣಿಗಳಿಂದಲೂ ಬಂದರದಲ್ಲಿರುವ ಗೋದಿಗಳಿಂ
ದಲೂ ನಾಗಸಾಕಿಯು ಹೆಸರಾಗಿರುವದು.

ಚೀನದ ದಂಡೆಯಿಂದ ಸುಮಾರು ೧೦೦ ಮೈಲುಗಳ ಅಂತರದಲ್ಲಿ
ರುವ ಫೋರ್ಮೊಸಾ ಎಂಬ ದೊಡ್ಡ ನಡುಗಡೆಯು ಸಹ ಜಪಾನದ ಸಾಮ್ರಾ
ಜ್ಯದ ಭಾಗವಾಗಿರುವದು. ೧೮೯೪-೯೫ರಲ್ಲಿ ಚೀನದವರೊಡನೆ ನಡೆದ
ಯುದ್ಧದಲ್ಲಿ ಜಪಾನದವರಿಗೆ ಈ ನಡುಗಡ್ಡೆಯು ದೊರೆತಿರುವದು. ಇದು
ಸುಮಾರು ಸಿಂಹಲದ್ವೀಪದ ಅರ್ಧದಷ್ಟು ಇರುವದು. ಇಲ್ಲಿ ಸುಮಾರು ೩೦
ಲಕ್ಷ ಜನರು ವಾಸಿಸುವರು. ನಡುಗಡ್ಡೆಯ ಪಶ್ಚಿಮಭಾಗದಲ್ಲಿ ಬೆಳೆಯುಳ್ಳ
ಭೂಮಿಯು ಹಬ್ಬಿರುವದು. ಇಲ್ಲಿ ಬೇಕಾದಷ್ಟು ಅಕ್ಕಿ, ಕಬ್ಬು,
ತಂಬಾಕು ಮುಂತಾದವು ಇವು ಬೈರಾಗುತ್ತವೆ. ಮಧ್ಯಭಾಗದಲ್ಲಿಯೂ, ಪೂರ್ವ
ಪಶ್ಚಿಮಕಡೆಗೂ ಪರ್ವತಗಳು ಹಬ್ಬಿರುವವು. ಇವುಗಳ ಬದಿಯಲ್ಲಿ ಕರ್ಪೂರ
ಮೊದಲಾದ ವೃಕ್ಷಗಳ ದಟ್ಟವಾದ ಅಡವಿಗಳು ಬೆಳೆದಿರುವವು. ಕಲ್ಲಿದ್ದಲಿ
ಮಂಧಕ ಮೊದಲಾದ ಖನಿಜಗಳು ವಿಪುಲವಾಗಿದ್ದಾಗ್ಯೂ ಸಣ್ಣ ಪ್ರಮಾಣ

ದಿಂದ ತೆಗೆಯಲ್ಪಡುತ್ತವೆ. ಮೂಲನಿವಾಸಿಗಳು ಮಲಯು ಕುಲದವರಿರುವರು. ಇವರಲ್ಲಿ ಕೆಲವರು ಇನ್ನೂ ಕಾಡುಸ್ಥಿತಿಯಲ್ಲಿದ್ದಾರೆ. ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಎರಡು ಬಂದರಗಳಿರುವವು. ಅಲ್ಲಿಗೆ ಹೋಗುವ ಹಡಗುಗಳು ಬಹುತರವಾಗಿ ಬ್ರಿಟಿಕರವೇ ಇರುತ್ತವೆ.

೧೭. ಮಲಯದ ನಡುಗಡ್ಡೆಗಳು.

ಇನ್ನು ಆಸ್ಟ್ರೇಲಿಯಕ್ಕೂ ಫ್ರೋರ್ಸಾ ನಡುಗಡ್ಡೆಗೂ ನಡುವೆ ಗುಂಪುಗುಂಪಾಗಿ ಹಬ್ಬಿರುವ ನಡುಗಡ್ಡೆಗಳಲ್ಲಿ ವಿಹರಿಸಿದರೆ ಏಶಿಯ ಖಂಡವನ್ನೆಲ್ಲ ಅಭ್ಯಾಸಿಸಿದಂತಾಗುವದು. ಇವುಗಳಿಗೆಲ್ಲ ಕೂಡಿ ಮಲಯದ ನಡುಗಡ್ಡೆಗಳ ಗುಂಪು ಎಂಬ ಹೆಸರಿರುವದು. ಜಪಾನ ನಡುಗಡ್ಡೆಯ ಪೂರ್ವಭಾಗದಿಂದ ಬೋರ್ನಿಯೋ ಹಾಗು ಫಿಲಿಪ್ಪೈನ ನಡುಗಡ್ಡೆಗಳ ಪೂರ್ವದ ದಂಡೆಗಳಗುಂಟ ಫ್ರೋರ್ಸಾ ನಡುಗಡ್ಡೆಯ ಮೇಲಿಂದ ಏಶಿಯ ಖಂಡದ ವರೆಗೆ ಉತ್ತರಾಭಿಮುಖವಾಗಿ ಒಂದು ರೇಷೆಯನ್ನು ತೆಗೆದರೆ, ಈ ನಡುಗಡ್ಡೆಗಳನ್ನು ಎರಡಾಗಿ ವಿಭಾಗಿಸುವ. ಈ ರೇಷೆಯಿಂದ ಪ್ರಾಚೀನ ಕಾಲದಲ್ಲಿ ಏಶಿಯಕ್ಕೂ ಆಸ್ಟ್ರೇಲಿಯಕ್ಕೂ ಹತ್ತಿದ್ದ ನಡುಗಡ್ಡೆಗಳು ಬೇರೆ ಬೇರೆಯಾಗುವವು. ವಾಲೇಸನೆಂಬ ಸೃಷ್ಟಿಶಾಸ್ತ್ರಜ್ಞನು ಇಂಥದೊಂದು ಕಲ್ಪಿತ ರೇಷೆಯು ಇರುವದೆಂದು ಬಗೆದು ಅದನ್ನು ಗೊತ್ತು ಹಚ್ಚಿದ್ದರಿಂದ ಈ ರೇಷೆಗೆ ವಾಲೇಸನ ರೇಷೆಯೆಂಬ ಹೆಸರು ಬಿದ್ದಿರುವದು. ಇದರಿಂದ ಸುಮಾತ್ರಾ, ಜಾವಾ, ಬೋರ್ನಿಯೋ, ಫಿಲಿಪ್ಪೈನ ಈ ನಡುಗಡ್ಡೆಗಳು ಏಶಿಯಕ್ಕೆ ಹತ್ತಿದ ಭಾಗವಾಗಿದ್ದವೆಂದೂ ಸೆಲಿಬೀಜ, ಮೊಲಕ್ಕಾ, ನ್ಯೂಗ್ವೆಯನಾ, ಬಾಲಿಯಿಂದ ತಿಮೂರದವರೆಗೆ ಪೂರ್ವಕ್ಕೆ ಹಬ್ಬಿರುವ ಸಣ್ಣಿಸುಂಡಾ ನಡುಗಡ್ಡೆಗಳು ಇವು ಆಸ್ಟ್ರೇಲಿಯದ ಭಾಗವಾಗಿದ್ದವೆಂದೂ ಗೊತ್ತಾಗುವದು. ಈ ಮಲಯ ನಡುಗಡ್ಡೆಗಳೆಲ್ಲ ಯುರೋಪೀಯ ರಾಷ್ಟ್ರಗಳ ಜನರ ವಶದಲ್ಲಿರುತ್ತವೆ. ಹಲವು ನಡುಗಡ್ಡೆಗಳು ಡಚ್ಚರ ವಶದಲ್ಲಿರುತ್ತವೆ.

ದೊಡ್ಡ ದೊಡ್ಡ ನಡುಗಡ್ಡೆಗಳನ್ನು ಮಾತ್ರ ನಾವು ಒಂದೊಂದಾಗಿ ನೋಡುವ. ಖದಾವುದ ಬೀಜದಾಕಾರದ ಸುಮಾತ್ರಾ ಎಂಬ ದ್ವೀಪವು ಮಲಯದ ದ್ವೀಪಕಲ್ಪದ ಎದುರಿಗೆ ಇರುವದು. ಕ್ಷೇತ್ರಮಾನದಿಂದ ಇದು ಈ ನಡುಗಡ್ಡೆಗಳ ಸಮೂಹದಲ್ಲಿ ಎರಡನೆಯದಿರುವದು, ಹಾಗು ವಾಯವ್ಯದಿಂದ ಆಗ್ನೇಯದ ಕಡೆಗೆ ಸುಮಾರು ಒಂದು ಸಾವಿರ ಮೈಲು ದೂರ

ಕಬ್ಬಿರುವದು. ಎಲ್ಲಕ್ಕೂ ಹೆಚ್ಚು ಅಗಲವಿರುವ ಭಾಗದಲ್ಲಿ ಇದು ಸುಮಾರು ೬೦೦ ಮೈಲು ಇರುವದು. ಇದರ ಪಶ್ಚಿಮದಲ್ಲಿ ಜ್ವಾಲಾಮುಖಿಗಳಿಂದ ಕೂಡಿದ ಒಂದು ಪರ್ವತಾವಳಿಯೂ ಪೂರ್ವದಲ್ಲಿ ದೊಡ್ಡದಾದ ರೇವೆಯು ಜವಳು ಬೈಲೂ ಹಬ್ಬಿರುವವು. ಮಳೆಯು ಬೇಕಾದಷ್ಟು ಸುರಿಯುವದು. ಉಷ್ಣಮಾನವೂ ಬೇಕಾದಷ್ಟಿರುವದು. ಈ ಮೂಲಕ ಇಲ್ಲಿಯ ವನಸ್ಪತಿಗಳು ಸೊಕ್ಕಿನಿಂದ ಬೆಳೆಯುವವು. ಇಡೀ ನಡುಗಡ್ಡೆಯು ಅನೇಕ ಜಾತಿಯ ವೃಕ್ಷಗಳ ಅರಣ್ಯಗಳಿಂದ ತುಂಬಿರುವದು. ಸದ್ಯಕ್ಕೆ ಇವುಗಳಲ್ಲಿ ಗಟ್ಟಾಪರ್ಚಾ ಎಂಬ ಅಂಟಿನಿಗಡವೂ ಕಪ್ಪುರದ ಗಿಡವೂ ಬಹಳ ಮಹತ್ವವುಳ್ಳವಿರುತ್ತವೆ. ಅಡವಿಗಳಲ್ಲಿ ಒರಾಂಗುಟಾಂಗ ಎಂಬ ಮನುಷ್ಯ ಸದೃಶವಾದ ದೊಡ್ಡ ಮಂಗವನ್ನು ಕಾಣಬಹುದು. ಮೆಣಸು, ಗೊಂಜೋಳ, ಅಕ್ಕಿ, ಕಪ್ಪುರ, ಗಟ್ಟಾಪರ್ಚಾ, ತಂಬ್ಯಾಕ ಇವು ಹೇರಳವಾಗಿ ರಫ್ತಾಗುತ್ತವೆ. ಪಡಾಂಗ ಎಂಬ ಬಂದರದ ಪೂರ್ವದ ಕಡೆಗೆ ಒಂದು ಕಲ್ಲಿದ್ದಲಿಯ ಖಣಿಯುಂಟು. ಸಮುದ್ರದಿಂದ ೪೦ ಮೈಲು ಅಂತರದ ಮೇಲೆ ಒಳಭಾಗದಲ್ಲಿರುವ ಪಾಲೆಂಬಂಗ ಎಂಬ ಪಟ್ಟಣವು ರಾಜಧಾನಿಯಿರುವದು.

ಶಿರಿದಾಗಿಯೂ ಉದ್ದವಾಗಿಯೂ ಹಬ್ಬಿರುವ ಜಾವಾ ನಡುಗಡ್ಡೆಯು ಡಚ್ಚರ ವಶದಲ್ಲಿರುವ ಈಷ್ಟ ಇಂಡೀಜ ನಡುಗಡ್ಡೆಗಳಲ್ಲಿ ಎಲ್ಲಕ್ಕೂ ಹೆಚ್ಚು ಮಹತ್ವದ್ದಿರುವದು. ಇಲ್ಲಿಯ ಕೃಷಿಯು ಮೇಲ್ತರದ್ದಿರುವದು. ಹಾಗು ಜನವಸತಿಯು ಈ ನಡುಗಡ್ಡೆಯಲ್ಲಿಯೇ ಬಹಳ ದಟ್ಟವಾಗಿರುವದು. ನಡುಗಡ್ಡೆಯೆಲ್ಲ ಪರ್ವತಮಯವಿದ್ದು ಬಹುಶಃ ಪ್ರತಿಯೊಂದು ಶಿಖರವು ಧೂಳಿಯನ್ನು ಹೊರಚೆಲ್ಲುವ ಜ್ವಾಲಾಮುಖಿಯಿರುವದು. ಬೇಕಾದಷ್ಟು ನದಿಗಳಿದ್ದಾಗ್ಯೂ ಒಂದರಲ್ಲಿಯೂ ಡೋಣಿಗಳು ಓಡಾಡುವಂತಿಲ್ಲ. ಸುಮಾತ್ರಾದಲ್ಲಿಯಂತೆಯೇ ವನಸ್ಪತಿಗಳು ಬಹು ಸೊಕ್ಕಿನಿಂದ ಬೆಳೆದಿರುವವು. ಕಾಫಿಬೀಜ, ಸಿಂಕೋನಾ, ಚಹ, ಹಾಗು ಕಬ್ಬು ಇವು ಮುಖ್ಯ ಬೆಳೆಗಳು. ಇದರ ರಾಜಧಾನಿಯಾದ ಬಟಾವಿಯಾ ಪಟ್ಟಣವು ಡಚ್ಚರ ವಶದಲ್ಲಿರುವ ಈಷ್ಟ ಇಂಡೀಜ ನಡುಗಡ್ಡೆಗಳ ಸಮೂಹದ ರಾಜಧಾನಿಯಿರುವದು. ಇದು ನಡುಗಡ್ಡೆಯ ಉತ್ತರದಂಡೆಯಮೇಲೆ ಪಶ್ಚಿಮಭಾಗ ತುದಿಯಲ್ಲಿರುವದು. ಪಟ್ಟಣವು ನೋಡಲಿಕ್ಕೆ ಚಂದವಾಗಿರುವದರಿಂದ ಇದಕ್ಕೆ "ಪೂರ್ವದ ರಾಣಿ" ಎಂಬ ಹೆಸರು ಬಿದ್ದಿದೆ.

(ಕವಾನ ತಿನೇ ಪುಟದಿಂದ ಮುಂದೆ ಸಾಗಿದೆ)

ಶಾಲಾಪತ್ರಿಕೆ

ಪುಸ್ತಕ ೪೯. | ಜುಲೈ ೧೯೧೩. | ಸಂಚಿಕೆ ೭.

ಸ್ಫುಟ ವಿಷಯಗಳು.

ಶಿಕ್ಷಣಶಾಸ್ತ್ರದೊಳಗಿನ ಒಂದು ಹೊಸಪ್ರಯೋಗವು.

೧. ಪ್ರಸಿದ್ಧ ವಿದ್ಯುಚ್ಛಾಸ್ತ್ರಜ್ಞನಾದ ಎಡಿಸನ್ನನ ಒಬ್ಬ ಮಗನು ಸಾಲೆಗೆ ಹೋಗುತ್ತಿದ್ದನು; ಆ ಸಾಲೆಯ ಶಿಕ್ಷಕನು ಎಡಿಸನ್ನನ ಮಗನು ಸೋಮಾರಿಯೂ, ಉಡಾಳನೂ, ದಡ್ಡನೂ ಇರುವನೆಂದು ನಿರ್ಣಯಿಸಿ ಎಡಿಸನ್ನನಿಗೆ ತಿಳಿಸಿದನು. ಪ್ರತಿಯೊಬ್ಬ ಹುಡುಗನಲ್ಲಿ ಬುದ್ಧಿ, ವಿವೇಕ, ಮೊದಲಾದವುಗಳು ಸುಪ್ತಾವಸ್ಥೆಯಲ್ಲಿರುತ್ತವೆ. ಬಲ್ಲವನಾದ ಮಾರ್ಗದರ್ಶಕನು ಸಿಕ್ಕರೆ ಅವು ಜಾಗೃತವಾಗಿ ಪರಿಪಕ್ವ ಸ್ಥಿತಿಯನ್ನು ಹೊಂದಲಿಕ್ಕೆ ತಡವಾಗುವದಿಲ್ಲ, ಎಂದು ಎಡಿಸನ್ನನ ತಿಳುವಳಿಕೆ ಇತ್ತು. ಅದರಿಂದ ಅವನು ತನ್ನ ಮಗನು ಅಯೋಗ್ಯನಿರುವನೋ ಶಿಕ್ಷಕನೇ ಅಯೋಗ್ಯನಾಗಿರುವನೋ ಎಂಬ ಬಗ್ಗೆ ತನ್ನ ಮನಸಿನಲ್ಲಿ ವಿಚಾರ ಮಾಡಹತ್ತಿದನು. ಶಿಕ್ಷಣದಲ್ಲಿ ಸಿನೆಮ್ಯಾಟೊಗ್ರಾಫ್, ಅಂದರೆ ಚಲನ ಹೊಂದುವ ಚಿತ್ರಗಳ ಉಪಯೋಗವು ಚನ್ನಾಗಿ ಆಗುವದೆಂದು ಅವನ ಅಭಿಪ್ರಾಯವಿತ್ತು. ಆದಕಾರಣ ಅವನು ತನ್ನ ಮಗನಿಗೆ ಈ ಚಿತ್ರಗಳ ದ್ವಾರಾ ಕಲಿಸಲಾಗಿ, ಅವನ ಲಕ್ಷವು ವಿಷಯದ ಕಡೆಗೆ ಬೇಗನೆ ಹತ್ತುವದೆಂತಲೂ, ವಿಷಯಗ್ರಹಣವನ್ನೂ ಅವನು ಚನ್ನಾಗಿ ಮಾಡಿಕೊಳ್ಳುವನೆಂತಲೂ ಅವನಿಗೆ ಕಂಡುಬಂತು. ಇಂಥ ಚಿತ್ರಗಳ ಸಹಾಯದಿಂದ ಆಫ್ರಿಕಾಖಂಡದ ಭೂಗೋಲವನ್ನು ಕಲಿಸಲಿಕ್ಕೆ ಬರಬೇಕೆಂದು ಎಡಿಸನ್ನನು ಕೇಪಟೌನದಿಂದ ನೈಲನದಿಯ ವರೆಗಿನ ಎಷ್ಟೋ ಮನೋರಂಜಕವೂ ಬೋಧಪ್ರದವೂ ಆದ ಸೃಷ್ಟಿಯ ನೋಟಗಳ ಚಿತ್ರಗಳನ್ನು ತೆಗೆದುಕೊಂಡು ಬರುವದಕ್ಕಾಗಿ ಅನೇಕಜನ ಚಿತ್ರಗಾರರನ್ನು ಆಫ್ರಿಕಾಖಂಡಕ್ಕೆ ಕಳಿಸಿರುವನು. ಆ ಚಿತ್ರಗಳ ಸಹಾಯದಿಂದ ಚಲಿಸುವ ಚಿತ್ರಗಳನ್ನು ಸಿದ್ಧಮಾಡಿ ಆಫ್ರಿಕಾಖಂಡದ ಚಿತ್ರನುಯ ಭೂಗೋಲವನ್ನು ಕಲಿಸುವ

ಸಾಮಗ್ರಿಯನ್ನು ಅಮೇರಿಕಾಖಂಡದೊಳಗಿನ ಎಲ್ಲ ದೊಡ್ಡ ದೊಡ್ಡ ಸಾಲೆಗಳಿಗೆ ಪ್ರಯೋಗದ ಸಲುವಾಗಿ ಕೊಡಬೇಕೆಂದು ಅವನ ವಿಚಾರವುಂಟು. ಪ್ರಾಥಮಿಕ ಶಾಲೆಗಳೊಳಗಿನ ಬಹುತರ ಎಲ್ಲ ಪುಸ್ತಕಗಳ ಬಡಲಾಗಿ ಚಲನ ಹೊಂದುವ ಚಿತ್ರಗಳ ಉಪಯೋಗವನ್ನು ಮಾಡಬಹುದೆಂದು ಎಡಿಸನ್ನನ ಅಭಿಪ್ರಾಯವುಂಟು. ಅದರಂತೆ ಅವನು ಪ್ರಯತ್ನವನ್ನೂ ಮಾಡತಕ್ಕವನಿರುವನು. ಇತಿಹಾಸ, ಭೂಗೋಲ ಈ ಎರಡು ವಿಷಯಗಳನ್ನು ಮೇಲೆ ಹೇಳಿದಂತೆ ಚಲನಹೊಂದುವ ಚಿತ್ರಗಳ ಸಹಾಯದಿಂದ ಎಷ್ಟು ಮನೋರಂಜಕವಾಗಿಯೂ, ಉಪಯುಕ್ತವಾಗುವಂತೆಯೂ ಕಲಿಸ ಬಹುದೋ, ಅಷ್ಟು ಬೇರೆ ಯಾವ ಸಾಧನಗಳಿಂದಲೂ ಕಲಿಸಲಿಕ್ಕೆ ಬರಲಾರದು. ಈ ಬಗೆಯ ಶಿಕ್ಷಣದಿಂದ ಆ ಆ ವಿಷಯಗಳ ಅಭ್ಯಾಸದೊಳಗಿನ ಕಾಠಿಣ್ಯವು ನಷ್ಟವಾಗಿ, ಸೌಲಭ್ಯವು ಹೆಚ್ಚಾಗಿ, ಅದರ ಪರಿಣಾಮವು ಚಿಕ್ಕ ಮಕ್ಕಳ ಕೋಮಲ ಮನಸ್ಸಿನ ಮೇಲೆ ಬಹಳ ಚನ್ನಾಗಿ ಆಗುತ್ತದೆ. ಈಗ ನಮ್ಮ ದೇಶದಲ್ಲಿಯೂ ಸಿನೆಮ್ಯಾಟೋಗ್ರಾಫ್, ಅಂದರೆ ಚಲನ ಹೊಂದುವ ಚಿತ್ರಗಳನ್ನು ತೋರಿಸುವ ಕಂಪನಿಗಳು ಪ್ರಚಾರದಲ್ಲಿ ಬರ ಹತ್ತಿರುವವು. ಆದರೆ ಅವುಗಳಲ್ಲಿ ನಾಟಕಗಳೂ ಹಾಸ್ಯರಸಯುಕ್ತವಾದ ಕಥೆಗಳೂ ಅದ್ಭುತವಾದ ನೋಟಗಳೂ ಮಾತ್ರ ತೋರಿಸಲ್ಪಡುವವು. ಇವುಗಳ ಸಲುವಾಗಿಯೇ ಆ ಕಂಪನಿಯವರ ಉತ್ಸಾಹವೂ ಹಣವೂ ವೆಚ್ಚವಾಗುವವು. ಆದರೆ ಅವರು ಲೋಕಶಿಕ್ಷಣದ ದೃಷ್ಟಿಯಿಂದ ಚಲನ ಹೊಂದುವ ಚಿತ್ರಗಳ ಉಪಯೋಗವನ್ನು ಮಾಡಿದರೆ ಬಹಳ ಲಾಭವಾಗ ಬಹುದೆಂಬಂತೆ ತೋರುತ್ತದೆ. ಮತ್ತು ಶಿಕ್ಷಣವಿಷಯಕವಾದ ಈ ಹೊಸ ಪ್ರಯೋಗವನ್ನು ಮೊದಲು ಈ ದೇಶದಲ್ಲಿ ಪ್ರಾರಂಭಿಸಿದ ಶ್ರೇಯಸ್ಸೂ ಅವರಿಗೆ ದೊರೆಯುವದು.

---

೨. ಸ್ಮರಣಶಕ್ತಿಯ ವ್ಯಾಪಾರವು ನಡೆಯುವ ಬಗೆಯನ್ನು ಸ್ವಲ್ಪದರಲ್ಲಿ ಈ ಪ್ರಕಾರ ಹೇಳಬಹುದು:—ಜ್ಞಾನೇಂದ್ರಿಯಗಳು ಯಾವತ್ತು ಬಾಹ್ಯವ್ಯಾಪಾರಗಳ ಹೊಯ್ದಾಡುವ ಚಿತ್ರಗಳನ್ನು ಮಿದುಳಿನೊಳಗಿನ ಪರಮಾಣುಜೀವ (Brain cells)ಗಳ ಮೇಲೆ ಮೂಡಿಸುತ್ತವೆ. ತರುವಾಯ ಈ ಚಿತ್ರಗಳ ಪ್ರತಿಬಿಂಬವು ಸ್ಮೃತಿಪಟಲದ ಮೇಲೆ ಬೀಳಲು, ಆ ಸಂಗತಿಗಳ

ಸ್ಮರಣಶಕ್ತಿ.

ವಿಷಯವಾಗಿ ಸಾಧಾರಣ ಜ್ಞಾನವು ನಮಗಾಗುತ್ತದೆ. ಸ್ಮೃತಿ ಪಟಲದ ಮೇಲಿನ ಈ ಪ್ರತಿಬಿಂಬಗಳು ಒಂದು ವೇಳೆ ನಾಶವಾಗಿ ಹೋದಾಗ್ಯೂ ಜ್ಞಾನೇಂದ್ರಿಯಗಳಿಂದ ಮಿದುಳಿನೊಳಗಿನ ಪರಮಾಣುಜೀವಕಗಳ ಮೇಲೆ ಮೂಡಿದ ಚಿತ್ರಗಳು ಎಂದೂ ನಾಶವಾಗುವದಿಲ್ಲ. ನಮಗೆ ನೆನಪು ಹಾರಿದ ಎಲ್ಲ ಸಂಗತಿಗಳು ಈ ಚಿತ್ರಗಳ ರೂಪದಿಂದ ನಮ್ಮ ಮಿದುಳಿನಲ್ಲಿ ಸಂಗ್ರಹಿಸಿಡಲ್ಪಟ್ಟಿರುತ್ತವೆ. ಇದೇ ಕಾರಣದಿಂದ ಕೆಲವೊಂದು ವಿಶೇಷ ಪ್ರಸಂಗವು ಬದಗಿದಾಗ ಆ ಎಲ್ಲ ಸಂಗತಿಗಳು ನಮಗೆ ನೆನಪಾಗುತ್ತವೆ. ಯಾವದೊಂದು ಸಂಗತಿಯನ್ನು ನೆನಪಿನಲ್ಲಿಡುವ ನಮ್ಮ ನಿಶ್ಚಯವು ಹೆಚ್ಚು ಕಡಿಮೆ ಪ್ರಮಾಣದಿಂದ ಇದ್ದಂತೆ, ಆ ಸಂಗತಿಯ ಚಿತ್ರವು ಹೆಚ್ಚು ಕಡಿಮೆ ಸ್ಪಷ್ಟವಾಗಿ ನಮ್ಮ ನೆನಪಿನಲ್ಲಿ ನಟ್ಟು ಯಾವಾಗಲೂ ಉಳಿಯುತ್ತದೆ; ಆ ನಮ್ಮ ನಿಶ್ಚಯವು ತೀರ ಕಡಿಮೆ ಇದ್ದರೆ ಆ ಸಂಗತಿಯ ಚಿತ್ರವು ಅಸ್ಪಷ್ಟವಾಗಿ ಮೂಡಿ ಅದನ್ನು ನಾವು ಬೇಗನೆ ಮರೆತು ಬಿಡುತ್ತೇವೆ. ನಮ್ಮ ನಿಶ್ಚಯವು ದೃಢವಾಗಿದ್ದರೆ ಅದರಿಂದ ಮೂಡಿದ ಚಿತ್ರವು ಬಲವಾಗಿ ನಟ್ಟು ಅದನ್ನು ನಾವು ಎಂದೂ ಮರೆಯುವದಿಲ್ಲ. ಸ್ಮರಣ ಶಕ್ತಿಯ ಸಂಬಂಧದಿಂದ ಇದೊಂದು ಸರ್ವಸಾಧಾರಣ ನಿಯಮವೆಂದು ಹೇಳಬಹುದು. ಸ್ಮರಣಶಕ್ತಿಯು ಮನಸ್ಸಿನ ಒಂದು ವ್ಯಾಪಾರವಾಗಿರುವಕಾರಣ ಮನಸ್ಸನ್ನು ಅಧೀನದಲ್ಲಿಟ್ಟುಕೊಳ್ಳುವದರಿಂದ ಆ ಶಕ್ತಿಯನ್ನು ನಾವು ಬೆಳಿಸ ಬಹುದು. ಹಿಂದೆ ಆದ ಸಂಗತಿಗಳನ್ನೂ, ಮಿತ್ರರ, ಆಪ್ತರ, ಇಷ್ಟರ ಹೆಸರುಗಳನ್ನೂ, ಓದಿದ ಪುಸ್ತಕದೊಳಗಿನ ಅವತರಣಗಳನ್ನೂ ಮೇಲಿಂದ ಮೇಲೆ ನೆನಪಿಗೆ ತರುವ ಅಭ್ಯಾಸವನ್ನು ಮಾಡುತ್ತ ಹೋದರೆ ದಿನ ದಿನಕ್ಕೆ ನಮ್ಮ ಸ್ಮರಣ ಶಕ್ತಿಯು ಹೆಚ್ಚುತ್ತ ಹೋಗುವದು. ಈ ಪ್ರಕಾರ ಮನೋನಿಶ್ಚಯದಿಂದ ತಮ್ಮ ಸ್ಮರಣಶಕ್ತಿಯನ್ನು ಬೆಳಿಸಿದವರ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡುತ್ತೇವೆ:—

ಸ್ಯಾಮ್ಯುಅಲ್ ಪೆಲಸ್ಸಿ ಎಂಬ ಹೆಸರಿನ ಒಬ್ಬ ಮನುಷ್ಯನು ೫೫ ವರ್ಷಗಳ ಪ್ರಾಪ್ತದಲ್ಲಿ ತಾನೇ ಬರೆದಿಟ್ಟ ಮುನ್ನೂರು ಪುಟಗಳ ವಿಷಯವನ್ನು ಕೇವಲ ಸ್ಮರಣ ಶಕ್ತಿಯ ಸಹಾಯದಿಂದ ಒಂದೂ ತಪ್ಪಾಗದಂತೆ ಪುನಃ ಬರೆದು ತೋರಿಸಿದನು. ಮಿಲ್ಟನ್ನನೆಂಬ ಹೆಸರಾದ ಕವಿಯು ಗ್ರೀಕ ಭಾಷೆಯೊಳಗಿನ ಹೋಮರನ ಕಾವ್ಯವನ್ನು ಪುಸ್ತಕದ ಸಹಾಯವಿಲ್ಲದೆ

ಬಾಯಿಪಾಠ ಅನ್ನುತ್ತಿದ್ದನು. ಪ್ರಸಿದ್ಧ ಲೇಖಕನಾದ ಮೆಕಾಲೆ ಇವನು ಚಿಕ್ಕವನಿರುವಾಗ ಒಂದು ದೊಡ್ಡ ಕಾವ್ಯವನ್ನು ಮೂರೇ ತಾಸುಗಳಲ್ಲಿ ಬಾಯಿಪಾಠ ಮಾಡಿದನು. ಇದೇ ಮೆಕಾಲೆಯು–"ನನ್ನ ಸೇರಿಕೆಯ ಕಾವ್ಯಗಳನ್ನೂ ಪುಸ್ತಕಗಳನ್ನೂ ಜಗತ್ತಿನೊಳಗಿಂದ ಒಮ್ಮೇಲೆ ಇಲ್ಲದಂತೆ ಮಾಡಿದರೆ ಅವುಗಳನ್ನು ನಾನು ಪುನಃ ಇದ್ದಕ್ಕಿದ್ದಂತೆ ಬರೆಯುವೆನು," ಎಂದು ಆಗಾಗ್ಗೆ ಅನ್ನುತ್ತಿದ್ದನು.

ಭೂಚರಮತ್ಸ್ಯಗಳು.

೩. ಅಮೇರಿಕದೊಳಗಿನ ರಾಷ್ಟ್ರೀಯಪ್ರಾಣಿಸಂಗ್ರಹಾಲಯದಲ್ಲಿ ಕೆಲವು ವಿಾನಗಳನ್ನು ಇಟ್ಟಿರುವರು. ಅವು ತಿಂಗಳುಗಟ್ಟಲೆ ನೀರು ಬಿಟ್ಟು ನೆಲದಮೇಲೆ ಬದುಕುವವು. ಅವು ಆಫ್ರಿಕಾ ಖಂಡದಲ್ಲಿ ದೊರೆತಿದ್ದು, ಅವುಗಳಿಗೆ ಫುಪ್ಫುಸದ ಮೀನುಗಳೆನ್ನುವರು. ಯಾಕಂದರೆ ಇವು ನೆಲದ ಮೇಲಿರುವಾಗ ಇತರ ಭೂಚರ ಪ್ರಾಣಿಗಳಂತೆ ಫುಪ್ಫುಸಗಳ ಸಹಾಯದಿಂದ ಉಸುರಾಡಿಸುವವು. ಆದರೆ ನೀರೊಳಗೆ ಬಿಟ್ಟ ಕೂಡಲೆ ಉಳಿದ ಮೀನುಗಳಂತೆ "ಗಿಲ್" ಎಂಬ ಶರೀರಾವಯವಗಳೊಳಗಿಂದ ಉಸುರಾಡಿಸುವವು. ಈ ರೀತಿಯಾಗಿ ಅವುಗಳ ಶರೀರಗಳಲ್ಲಿ ಎರಡೂ ತೆರದ ವ್ಯವಸ್ಥೆಯಿರುವದರಿಂದ ಅವು ಅರಲಿನೊಳಗೆ ಹುಗಿದು ಹೋದರೂ ಸಾಯುವದಿಲ್ಲ. ಬೇಸಿಗೆ ಕಾಲದಲ್ಲಿ ನೀರು ಒತ್ತಿಹೋಗಿ, ಪಾತ್ರದೊಳಗಿನ ಅರಲು ಒಣಗಿ ಹೋಗುವಂಥ ನದಿಗಳ ಪಾತ್ರದಲ್ಲಿ ಇವು ನಿದ್ರಿತಾವಸ್ಥೆಯಲ್ಲಿ ದೊರೆಯುವವು.

ಮೇಲೆ ಹೇಳಿದ ಅಮೇರಿಕದೊಳಗಿನ ಪ್ರಾಣಿಸಂಗ್ರಹಾಲಯದಲ್ಲಿ ಒಯಿದಿಟ್ಟ ವಿಾನಗಳು ಆಫ್ರಿಕದೊಳಗಿನ ತೀರ ಬತ್ತಿಹೋದ ಒಂದು ನದಿಯ ಒಡಲೊಳಗಿಂದ ತಂದಪ್ಪ ಒಣಗಿದ ಅರಲಿನ ಒಂದು ಹೆಂಟೆಯಲ್ಲಿ ಸುಪ್ತಾವಸ್ಥೆಯಲ್ಲಿ ದೊರೆತವು. ಅಮೇರಿಕಕ್ಕೆ ಒಯಿದ ತರುವಾಯ ಅವುಗಳನ್ನು ನೀರಿನಲ್ಲಿ ಇಟ್ಟಿರುವರು. ಆದರೆ ಅವುಗಳನ್ನು ಭೂಗರ್ಭದಲ್ಲಿ ನ್ಯಸ್ತಾವಶೇಷಗಳ (Fossils) ರೂಪದಿಂದ ದೊರೆಯುವ ವಿಾನಗಳ ವರ್ಗದಲ್ಲಿ ಸೇರಿಸಿರುವರು.

ನ್ಯಸ್ತಾವಶೇಷಗಳ ರೂಪದಿಂದ ದೊರೆಯುವ ವಿಾನಗಳ ಜಾತಿಯ ಸಜೀವ ವಿಾನಗಳು ಈಗ ದೊರೆಯುವದಿಲ್ಲ. ಪೃಥ್ವಿಯ ಒಡಲಿನೊಳಗಿದ್ದ ಬಂಡೆಗಲ್ಲುಗಳಲ್ಲಿ ಅವುಗಳ ಮೃತದೇಹಗಳು ಮಾತ್ರ ಸಿಗುವವು. ಈಗ ದೊರೆತಿರುವ ಸಜೀವ ವಿಾನಗಳನ್ನು ನ್ಯಸ್ತಾವಶೇಷ ರೂಪದಿಂದ ದೊರೆಯುವ ವಿಾನಗಳ ಜೊತೆಯಲ್ಲಿ ಇಡುವದಕ್ಕೆ ಕಾರಣವೇನೆಂದರೆ, ಈಗ ದೊರೆತ ವಿಾನಗಳು ತೀರ ಅಪರೂಪವಾಗಿ ದೊರೆಯುವಂಥವಾಗಿದ್ದು ಅವು ಪ್ರಾಚೀನ ಕಾಲದಲ್ಲಿ ಇದ್ದ ವಿಾನಗಳ ಜಾತಿಯ ವಿಾನಗಳಾಗಿರುತ್ತವೆ. ಈ ವಿಾನಗಳು "ಸಾಲಾಮಾಂಡರ" ಎಂಬ ಜಾತಿಯ ವಿಾನಗಳನ್ನು ಬಹಳ ಮಟ್ಟಿಗೆ ಹೋಲುತ್ತವೆ.

---

೪. ಜಗತ್ತಿನಲ್ಲಿ ಮನುಷ್ಯರನ್ನು ಬಿಟ್ಟು ಉಳಿದ ಜೀವಸೃಷ್ಟಿಯಲ್ಲಿ ಕೆಲವುಗಳ ಆಯುರ್ಮಾನವನ್ನು ಕೆಳಗೆ ಕೊಡುತ್ತೇವೆ:—

ಕೆಲವು ಪ್ರಾಣಿ ವೃಕ್ಷಾದಿಗಳ ಆಯುರ್ಮಾನಗಳು.

ಹೆಸರು.	ಬದುಕುವಕಾಲ.
ನುಸಿ	೨೪ ತಾಸು.
ನೊಣ (Mayfly)	೬ ವಾರ.
ಪಾತರಗಿತ್ತಿ (Butterfly)	೨ ತಿಂಗಳು.
ಇರವು, ಜೀರಿ, (Cricket), ಜೇನುನೊಣ	೧ ವರ್ಷ.
ಮೊಲ, ಕುರಿ	೬ ರಿಂದ ೧೦ ವರ್ಷ.
ತೋಳ	೧೦ ರಿಂದ ೧೫ ವರ್ಷ.
ಹಾಡುವ ಹಕ್ಕಿ (Canary)	೧೫ರಿಂದ ೨೦ ವರ್ಷ.
ಬುಲ್‌ಬುಲ್ ಪಕ್ಷಿ (Nightingale)	೧೨ ವರ್ಷ.
ನಾಯಿ	೧೫ರಿಂದ ೨೫ ವರ್ಷ.
ಕುದುರೆ	೨೫ರಿಂದ ೩೦ ವರ್ಷ
ಗರುಡಪಕ್ಷಿ	೩೦ ವರ್ಷ.
ಚಿಗರಿ	೩೫ರಿಂದ ೪೦ ವರ್ಷ.
ಬೆಳ್ಳಕ್ಕಿ, ಸಿಂಹ, ಕರಡಿ	೫೦ ವರ್ಷ.

ಸಂಬಾರಗಾಗೆ (ಕೆಂಬೂತ)	೮೦ ವರ್ಷ.
ಆನೆ, ಆವೆ, ಪಾಮಿಕ ಎಂಬ ನದಿಯೊಳಗಿನ ಒಂದು ಪ್ರಕಾರದ ಮೀನ	೧೦೦ ವರ್ಷ.
ಆಯುವ್ಹೀ (Ivy) ಎಂಬ ಒಂದು ಪ್ರಕಾರದ ಬಳ್ಳಿ	೨೦೦ ವರ್ಷಗಳಿಗಿಂತ ಹೆಚ್ಚು ಕಾಲ.
ಎಲ್ಮವೃಕ್ಷ (Elm)	೩೦೦ರಿಂದ ೩೫೦ ವರ್ಷ.
ಲಿಂಡನ್‌ವೃಕ್ಷ (Linden)	೫೦೦ರಿಂದ ೧೦೦೦ ವರ್ಷ.
ಲೋಕಸ್ಟವೃಕ್ಷ (Locust tree) ಮತ್ತು ಓಕವೃಕ್ಷ	೪೦೦ ವರ್ಷ.
ದೇವದಾರು (Fur)	೬೦೦ರಿಂದ ೧೨೦೦ ವರ್ಷ.

ಪ್ಲೇಗದ ಮೈಲಿಯ ಒಳ್ಳೇ ಪರಿಣಾಮವು.

೫. ಧಾರವಾಡದ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದ ಆನರರಿ ಸೇಕ್ರೆಟರಿಯವರು ಪ್ಲೇಗದ ಮೈಲಿಯಿಂದ ಆಗುವ ಒಳ್ಳೇ ಪರಿಣಾಮದ ಬಗ್ಗೆ ಅನುಭವದಿಂದ ಕಂಡು ಬಂದ ಕೆಳಗೆ ಬರೆದ ಸಂಗತಿಗಳನ್ನು ಜನರ ತಿಳುವಳಿಕೆಯ ಬಗ್ಗೆ ಪ್ರಸಿದ್ಧ ಪಡಿಸುವದಕ್ಕೆ ಕಳುಹಿದ್ದಾರೆ:-

"ಗದಗ-ಬೆಟಗೇರಿಯ ಊರಸಂಖ್ಯೆ ೩೦೪೭೧ ಇದ್ದು ಅವರಲ್ಲಿ ತಾರೀಖು ೧೫-೬-೧೯೧೭ ರಿಂದ ತಾ॥ ೩೧-೧೦-೧೭ ರವರೆಗೆ ೬೪೭೯ ಜನರು ಪ್ಲೇಗದ ಮೈಲಿಯನ್ನು ಚುಚ್ಚಿಸಿಕೊಂಡರು. ಇವರಲ್ಲಿ ೩೯ ಜನರಿಗೆ ಮಾತ ಪ್ಲೇಗ ಬಂದು ೬ ಜನರು ಮೃತಪಟ್ಟರು. ಪ್ಲೇಗದ ಮೈಲಿಯನ್ನು ಚುಚ್ಚಿಸಿಕೊಳ್ಳದೆ ಇದ್ದ ೨೩೯೪೨ ಜನರಲ್ಲಿ ೫೯೯ ಜನರಿಗೆ ಪ್ಲೇಗ ಬಂದು ಅವರಲ್ಲಿ ೩೬ ಜನರು ಮೃತಪಟ್ಟರು. ಅಂದರೆ, ಮೈಲಿಯನ್ನು ಚುಚ್ಚಿಸಿಕೊಂಡವರಲ್ಲಿಯೂ ಚುಚ್ಚಿಸಿಕೊಳ್ಳದವರಲ್ಲಿಯೂ ಮರಣದ ಶೇಕಡಾ ಪ್ರಮಾಣವು ಕೆಳಗೆ ಬಂದಂತೆ ಕಂಡು ಬಂತು:—

	ಪ್ಲೇಗ ಬಂದವರಲ್ಲಿ ಸತ್ತವರು.
ಮೈಲಿಯನ್ನು ಚುಚ್ಚಿಸಿದವರಲ್ಲಿ— ಶೇಕಡಾ ಪ್ರಮಾಣ	೧೫.೪
ಮೈಲಿಯನ್ನು ಚುಚ್ಚಿಸದವರಲ್ಲಿ— ,,	೬೧.೨

---

೬. ಈಗ ಕೆಲ ದಿವಸಗಳಿಂದ ಇಂಗ್ಲಂಡದಲ್ಲಿ ನಿರಾತಂಕವ್ಯಾಪಾರವಾದಿಗಳಿಗೂ ಸಂರಕ್ಷಣವಾದಿಗಳಿಗೂ ವಾಗ್ವಾದವು ನಡೆದಿರುವದಷ್ಟೆ.

ಸೆರೆಯು ಬೆಲೆಯನ್ನು ಯಾರು ಕೊಟ್ಟರು?

ಇಂಗ್ಲಂಡಕ್ಕೆ ಬರುವ ಮತ್ತು ಇಂಗ್ಲಂಡದಿಂದ ಪರದೇಶಗಳಿಗೆ ಹೋಗುವ ಸರಕುಗಳ ಮೇಲಿನ ಸುಂಕಗಳ ನಿಯಮಗಳಲ್ಲಿ ಮಾಡತಕ್ಕ ಸುಧಾರಣೆಗಳ ವಿಷಯವಾಗಿ ಬಳಗಡೆಯಲ್ಲಿ ಇಂಗ್ಲಂಡದಲ್ಲಿ ಎಂಜಿನೀಯರರ ಸಮಾಜದ ಊಟದ ಸಮಾರಂಭದಲ್ಲಿ ಮಾತು ನಡೆದಿದಲಾಗಿ, ಜಡ್ಜ ಕಂಟೂಲರೆಂಬವರು ಒಂದು ಮನೋರಂಜಕವಾದ ಕಥೆಯನ್ನು ಹೇಳಿದರು. ಅದು ಏನಂದರೆ:—ಹಿಂದಕ್ಕೆ ಒಂದು ಸಮಯದಲ್ಲಿ ಮೆಕ್ಸಿಕೋ ದೇಶದ ಡಾಲರಗಳ ಬೆಲೆಯು ಆ ದೇಶದಲ್ಲಿ ೩ ರೂಪಾಯಿ ಇರಲು, ಮೆಕ್ಸಿಕೋದ ಗಡಿಗೆ ಹೊಂದಿದ್ದ ಯುನಾಯಿಟೆಡ್ ಸ್ಟೇಟ್ಸಗಳಲ್ಲಿ ಮೆಕ್ಸಿಕೋದ ಡಾಲರಗಳ ಬೆಲೆ ೨ ರೂ. ೧೪ ಆಣೆ ಇತ್ತು. ಇದಕ್ಕೆ ವಿರುದ್ಧವಾಗಿ ಯುನಾಯಿಟೆಡ್ ಸ್ಟೇಟ್ಸಗಳಲ್ಲಿ ೩ ರೂ. ಬೆಲೆ ಬಾಳುವ ಆ ದೇಶದ ಡಾಲರಕ್ಕೆ ಮೆಕ್ಸಿಕೋ ದೇಶದಲ್ಲಿ ೨ ರೂ. ೧೪ ಆಣೆಗಳನ್ನು ಕೊಡುತ್ತಿದ್ದರು. ಒಂದು ದಿವಸ ಒಬ್ಬವನು ಮೆಕ್ಸಿಕೋದ ಡಾಲರವನ್ನು ತೆಗೆದುಕೊಂಡು ಆ ದೇಶದ ವೆರೆಯ ಸವಿಾಪದಲ್ಲಿದ್ದ ಒಂದು ಸೆರೆಯ ಅಂಗಡಿಗೆ ಹೋಗಿ ೨ ಆಣೆಯ ಸೆರೆಯನ್ನು ಕುಡಿದು ತನ್ನಲ್ಲಿದ್ದ ಮೆಕ್ಸಿಕೋದ ಡಾಲರವನ್ನು ಕೊಡಲು ಅಂಗಡಿಕಾರನು ಅವನಿಗೆ ತಿರುಗಿ ಒಂದು ಯುನಾಯಿಟೆಡ್ ಸ್ಟೇಟ್ಸನ ಡಾಲರವನ್ನು ಕೊಟ್ಟನು. ಕೂಡಲೆ ಅವನು ಅವೆರಡು ದೇಶಗಳ ನಡುವೆ ಇದ್ದ ಪೂಲನ್ನು ಏರಿ ಹೋಗಿ ಯುನಾಯಿಟೆಡ್ ಸ್ಟೇಟ್ಸವನ್ನು ಸೇರಿ ಅಲ್ಲಿಯೇ ಸವಿಾಪದಲ್ಲಿರುವ ಸೆರೆಯ ಅಂಗಡಿಗೆ ಹೋಗಿ ೨ ಆಣೆಯ ಸೆರೆಯನ್ನು ಕುಡಿದು ತನಗೆ ಬಂದಿದ್ದ ಯುನಾಯಿಟೆಡ್ ಸ್ಟೇಟ್ಸನ ಡಾಲರವನ್ನು ಕೊಟ್ಟನು. ಅಂಗಡಿಕಾರನು ತನ್ನ ಎರಡಾಣೆಯನ್ನು ಮುರಕೊಂಡು ಅವನಿಗೆ ಬಂದ ಮೆಕ್ಸಿಕೋದ ಡಾಲರವನ್ನು ತಿರುಗಿ ಕೊಟ್ಟನು. ಕೂಡಲೆ ಅವನು ತಿರುಗಿ ಪೂಲಿನ ಮೇಲಿಂದ ಹಾಯ್ದು ಬಂದು ಮೆಕ್ಸಿಕೋದ ಸೆರೆಯಂಗಡಿಯಲ್ಲಿ ಮೊದಲಿನಂತೆ ಮತ್ತೆ ೨ ಆಣೆಯ ಸೆರೆ ಕುಡಿದು ಯುನಾಯಿಟೆಡ್ ಸ್ಟೇಟ್ಸನ ಡಾಲರವನ್ನು ದೊರಕಿಸಿದನು; ಮತ್ತು ಆಗಲೇ ಯುನಾಯಿಟೆಡ್ ಸ್ಟೇಟ್ಸಕ್ಕೆ ಹೋಗಿ ಮೊದಲಿನಂತೆ ೨ ಆಣೆಯ ಸೆರೆ ಕುಡಿದು ಮೆಕ್ಸಿಕೋದ ಡಾಲರವನ್ನು ದೊರ

ಕಿನ್ನು, ಮತ್ತೆ ತಿರುಗಿ ಬಂದು ೨ ಅಣೆಯ ಸೆರೆ ಕುಡಿದನು. ಇದೇ ರೀತಿಯಿಂದ ಅವನು ರಾತ್ರಿಯಾಗುವ ತನಕ ಅಜೆ ಈಜೆ ಓಡಾಡಿ ಸೆರೆ ಕುಡಿದನು; ಹಾಗು ಮಾರನೆಯ ದಿನ ಬೆಳಗಾಗುವದರೊಳಗಾಗಿ ಮೆಕ್ಸಿಕೋ ದೇಶದ ಮೇರೆಯ ಮೇಲೆ ಅವನ ಕವಚು ಬಿದ್ದಿತ್ತು; ಮತ್ತು ಮೊಟ್ಟಮೊದಲು ಅವನ ಹತ್ತರಿದ್ದ ಮೆಕ್ಸಿಕೋದ ಡಾಲರವು ಆಗಲಾದರು ಅವನ ಕಸೆಯೊಳಗೆ ಇದ್ದೇ ಇತ್ತು. ಹಾಗಾದರೆ ಅವನು ಕುಡಿದ ಅಷ್ಟೊಂದು ಸೆರೆಯ ಬೆಲೆಯನ್ನು ಯಾರು ಕೊಟ್ಟರು?

ಶಾರೀರಿಕ ಸ್ಥಿತಿಯ ಮೇಲೆ ಮಾನಸಿಕ ಸುಸ್ಥಿತಿಯಿಂದಾಗುವ ಪರಿಣಾಮವು.

ಮಿದುಳಿನಲ್ಲಿ ನಡೆಯುವ ಮಾನಸಿಕ ವ್ಯಾಪಾರಗಳಿಂದ [illegible] ವ್ಯಾಪಾರಗಳ ಮೇಲೆ ಹೆಚ್ಚುಕಡಿಮೆ ಪರಿಣಾಮವಾಗುತ್ತಿರುತ್ತದೆಂಬ ಸಂಗತಿಯನ್ನು ಶಾರೀರ ಶಾಸ್ತ್ರಜ್ಞರು ಬಹುಕಾಲದಿಂದ ಅರಿತಿರುವರು. ಮಿದುಳು ಜ್ಞಾನತಂತುಗಳ ಕೇಂದ್ರಸ್ಥಾನವಾಗಿರುವದು. ಅಲ್ಲಿಂದ ಅಸಂಖ್ಯ ಜ್ಞಾನತಂತುಗಳು ಹೊರಟು ಬೆನ್ನಹುರಿಯೊಳಗಿಂದ ಹಾಯ್ದು ಶರೀರದ ಎಲ್ಲ ಭಾಗಗಳಲ್ಲಿಯೂ ಹಬ್ಬಿರುತ್ತವೆ. ಈ ಜ್ಞಾನತಂತುಗಳು ಶರೀರದ ಬೇರೆ ಬೇರೆ ಭಾಗಗಳಿಂದ ಸುದ್ದಿಯನ್ನು ಒಯ್ದು ಮಿದುಳಿಗೆ ತಿಳಿಸುವ ಕೆಲಸವನ್ನೂ ಮಿದುಳಿನಿಂದ ಹೊರಟ ಅಪ್ಪಣೆಗಳನ್ನು ಶರೀರದ ಬೇರೆ ಬೇರೆ ಅವಯವಗಳಿಗೆ ಮುಟ್ಟಿಸುವ ಕೆಲಸವನ್ನೂ ಮಾಡುತ್ತಿರುತ್ತವೆ. ಅನೇಕ ಶಾರೀರಿಕ ವ್ಯಾಪಾರಗಳು ಮಿದುಳಿನಿಂದಲೇ ನಡಿಸಲ್ಪಡುತ್ತಿದ್ದ ಕಾರಣ ಶಾಸ್ತ್ರಜ್ಞರು ಅದಕ್ಕೆ ಶಾರೀರಿಕ ವ್ಯಾಪಾರಗಳ ನಿಯಂತೃ ವೆಂಬ ಹೆಸರನ್ನಿಟ್ಟಿದ್ದಾರೆ. ಆದರೆ ಇತ್ತಿತ್ತಲಾಗಿ ಮಿದುಳು ಮನಸಿನ ವಿಚಾರಗಳ ಉತ್ಪತ್ತಿಗೆ ಸಾಧನವೆಂದು ಅವರು ತಿಳಿಯಹತ್ತಿರುವರು. ನಮ್ಮ ಶರೀರವು ಅಸಂಖ್ಯ ಜೀವಕಣ (cell) ಗಳಿಂದ ಆಗಿರುತ್ತದೆ. ಮತ್ತು ಪ್ರತಿಯೊಂದು ಜೀವಕಣದಲ್ಲಿ ಒಂದು ವಿಶಿಷ್ಟ ಪ್ರಕಾರದ ಚೈತನ್ಯಶಕ್ತಿಯು ಇರುತ್ತದೆಂದು ಶಾಸ್ತ್ರಜ್ಞರು ಅನೇಕ ಪ್ರಯೋಗಗಳಿಂದ ಕಂಡು ಹಿಡಿದಿರುತ್ತಾರೆ. ಅದರಿಂದ ಈಗಿನ ಮಾನಸಶಾಸ್ತ್ರಜ್ಞರು ನಮ್ಮ ಶರೀರದೊಳಗಿನ ಅಸಂಖ್ಯ ಜೀವಕಣಗಳೊಳಗಿನ ಚೈತನ್ಯಶಕ್ತಿಗಳ ಸಮುದಾಯಕ್ಕೇ "ಮನಸ್ಸು" ಎಂ

ಸಂಜ್ಞೆಯನ್ನು ಕೊಟ್ಟಿರುವರು. ಎಲ್ಲ ಶಾರೀರಿಕ ವ್ಯಾಪಾರಗಳನ್ನು ನಡಿಸುವ ಮಿದುಳು ಮನಸ್ಸಿನ ಮುಖ್ಯ ಕಚೇರಿಯಾಗಿರುವದೆಂದು ಹೇಳಬಹುದು. ಮಾನಸಿಕ ಸುಸ್ಥಿತಿಯು ಆರೋಗ್ಯಕ್ಕೂ ಮಾನಸಿಕ ಅಸ್ವಸ್ಥತೆಯು ರೋಗಕ್ಕೂ ಕಾರಣಗಳಾಗಿರುತ್ತವೆಂಬದು ಎಷ್ಟೋ ವೈದ್ಯರಾಜರ ಅನುಭವಕ್ಕೆ ಬಂದ ಸಂಗತಿಯಾಗಿರುತ್ತದೆ. ನಾವು ಯಾವಾಗಲೂ ನಿರೋಗಿಗಳಾಗಿರುವದರ ಮುಖ್ಯ ರಹಸ್ಯವೆ, ನಮ್ಮ ಮಾನಸಿಕ ಸುಸ್ಥಿತಿಯಲ್ಲಿರುವದು; ಮನಸ್ಸಿನ ಸುಸ್ಥಿತಿಯೆಂದರೆ ಮನಸ್ಸು ನಿಶ್ಚಯಾತ್ಮಕವೂ ಆನಂದದಾಯಕವೂ ಸತೇಜವೂ ಉತ್ಸಾಹವುಳ್ಳದ್ದೂ ಆಗಿರೋಣವು.

ಮಾನಸಿಕ ದುಃಸ್ಥಿತಿಯು ಶಾರೀರಿಕ ದುಃಸ್ಥಿತಿಗೆ ಕಾರಣವಾಗಿರುತ್ತದೆ. ಹಲಕೆಲವು ಶಾರೀರಿಕ ರೋಗಗಳು, ಮಾನಸಿಕ ಸ್ಥಿತಿಯು ಆನಂದಮಯವೂ ಆರೋಗ್ಯದಾಯಕವೂ ಆಗುವಂತೆ ಮಾಡಿಕೊಳ್ಳುವದರಿಂದ ವಾಸಿಯಾಗುವವು. ಮನುಷ್ಯನು ಮನೋಮಯಪ್ರಾಣಿಯಾಗಿರುವನು; ಮಾನವೀ ಶರೀರದಲ್ಲಿ ಮನಸ್ಸಿನ ಶಕ್ತಿಯು ಉಳಿದ ಎಲ್ಲ ಶಕ್ತಿಗಳಿಗಿಂತಲೂ ಶ್ರೇಷ್ಠವಾದದ್ದು. ಈ ಮನಸ್ಸು, ಮಿದುಳು ಹಾಗು ಅದಕ್ಕೆ ಜೋಡಿಸಲ್ಪಟ್ಟ ಅಸಂಖ್ಯ ಜ್ಞಾನತಂತುಗಳು ಇವುಗಳ ದ್ವಾರದಿಂದ ಬಹುಶಃ ಎಲ್ಲ ಶಾರೀರಿಕ ವ್ಯಾಪಾರಗಳ ಮೇಲೆ ತನ್ನ ಅಮಲು ನಡಿಸುತ್ತದೆ. ಈ ಮನಸ್ಸು ಮಿದುಳಿನಲ್ಲಿ ಉತ್ಪನ್ನ ಮಾಡಿದ ವಿಚಾರಗಳೂ ಅಲ್ಲಿಂದ ಹೊರಟ ಅಪ್ಪಣೆಗಳೂ ಯಾವ ಪ್ರಮಾಣದಲ್ಲಿ ಆರೋಗ್ಯದಾಯಕವಾಗಿಯೂ, ಸುಖಮಯವಾಗಿಯೂ ಇರುವವೋ, ಆ ಪ್ರಮಾಣದಲ್ಲಿ ಮಾನವೀ ಶರೀರವು ನಿರೋಗಿಯಾಗಿಯೂ ಸುಖಿಯಾಗಿಯೂ ಇರುವದು. ಶರೀರದೊಳಗಿನ ಎಲ್ಲ ಜ್ಞಾನತಂತುಗಳ ಮೇಲೆಯೂ ಅವುಗಳ ಕೇಂದ್ರಗಳ ಮೇಲೆಯೂ ಮನಸ್ಸಿನ ಅನಿಯಂತ್ರಿತ ಅಧಿಕಾರವು ನಡೆಯುತ್ತಿರುವದರಿಂದ ಶಾರೀರಿಕ ಆರೋಗ್ಯ ಅನಾರೋಗ್ಯಗಳ ಸ್ಥಿತಿಯು ಮಾನಸಿಕ ಆರೋಗ್ಯ ಅನಾರೋಗ್ಯಗಳ ಸ್ಥಿತಿಯನ್ನು ಅವಲಂಬಿಸಿರುತ್ತದೆ. ನಮ್ಮ ಶರೀರವು ರೋಗಪೀಡಿತವಾದಾಗ್ಯೂ ನಮ್ಮ ಮಾನಸಿಕ ಸ್ಥಿತಿಯು ಯಾವಾಗಲೂ ಆನಂದಮಯವೂ ಆರೋಗ್ಯದಾಯಕವೂ ಆಗಿರುವಂತೆ ಮಾಡಿಕೊಳ್ಳುವದರಿಂದಲೇ ನಾವು ಆ ರೋಗದಿಂದ ಸಂಪೂರ್ಣವಾಗಿ ಮುಕ್ತರಾಗಬಹುದು. ಈ ನಿಯಮಕ್ಕೆ ಕೆಲವು ಅಪವಾದಗಳು ದೊರೆಯಬಹುದು.

ಆದರೆ ಸಾಮಾನ್ಯವಾಗಿ ಸ್ಪರ್ಶಜನ್ಯರೋಗಗಳ ಹೊರತು ಶಾರೀರಿಕ ವ್ಯಾಪಾರಗಳ ಸಂಬಂಧದ ಸ್ಥೂ ರೋಗಗಳು ಮಾನಸಿಕ ದುಃಸ್ಥಿತಿಯಿಂದಲೇ ಉತ್ಪನ್ನವಾಗುವವು. ಆ ದುಃಸ್ಥಿತಿಯನ್ನು ಸುಧಾರಿಸುವದರಿಂದಲೇ ಆ ರೋಗಗಳನ್ನು ಇಲ್ಲದಂತೆ ಮಾಡಬಹುದು. ಇತ್ತೀಚ್ಚಲಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಎಲ್ಲ ರೋಗಗಳನ್ನು ಕೇವಲ ಮಾನಸಿಕ ಉಪಚಾರಗಳಿಂದಲೇ ನೆಟ್ಟಗೆ ಮಾಡುವ ಹೊಸ ಪದ್ಧತಿಯು ಹೊರಟಿರುವದು. ಈ ಪದ್ಧತಿಯು ಸದ್ಯಕ್ಕೆ ಬಾಲ್ಯಾವಸ್ಥೆಯಲ್ಲಿದ್ದರೂ ಸದ್ಯಕ್ಕೆ ಅದರಿಂದಾಗುತ್ತಿರುವ ಕೆಲಸಗಳನ್ನು ಆಲೋಚಿಸಿದರೆ ಅದು ಮುಂದಿನ ಕಾಲದಲ್ಲಿ ಮಾನವ ಜಾತಿಯ ನಾನಾ ಪ್ರಕಾರದ ದುಃಖುಗಳನ್ನು ಇಲ್ಲದಂತೆ ಮಾಡಲಿಕ್ಕೆ ಕಾರಣವಾಗಬಹುದೆಂದು ಆಶಿಸಲಿಕ್ಕೆ ಏನೂ ಅಡ್ಡಿ ತೋರುವದಿಲ್ಲ.

ಪ್ರಾಚೀನ ಹಿಂದುಸ್ತಾನದೊಳಗಿನ ಅಸ್ಪೃಶ್ಯಜಾತಿಯು.

(ಇಂಡಿಯನ್ ಇಂಟರಪ್ರೆಟರ ಎಂಬ ಪತ್ರದಲ್ಲಿ ಡಾಕ್ಟರ್ ಸರ್ ಭಂಡಾರಕರವರು ಪ್ರಸಿದ್ಧಿಸಿದ ಲೇಖದಿಂದ ಕನ್ನಡಿಸಿದ್ದು.)

"ಪ್ರಾಚೀನ ಕಾಲದಲ್ಲಿ ವೈದಿಕಭಾಷೆಯನ್ನು ಆಡುತ್ತಿದ್ದ ಆರ್ಯರು ಹಿಂದುಸ್ತಾನವನ್ನು ಗೆದ್ದಾಗ ಇಲ್ಲಿ ಬೇರೆ ಬೇರೆ ತರದ ಹಲವು ಜನ ಮೂಲ ನಿವಾಸಿಗಳು ಇದ್ದರು. ಅವರಿಗೂ ಆರ್ಯರಿಗೂ ಹಗೆತನವಿತ್ತೆಂಬದು ಸಹಜವೇ. ಆರ್ಯರು ಅವರನ್ನು ಆಗಾಗ್ಗೆ ಸೋಲಿಸಿ ಅವರ ಪಟ್ಟಣಗಳನ್ನು ಕೈವಶಮಾಡಿಕೊಳ್ಳುತ್ತಿದ್ದರು. ಮತ್ತು ಅವರಿಗೆ ದಸ್ಯುಗಳು, ಅಂದರೆ ದಾಸರು ಅಥವಾ ಗುಲಾಮರು ಎಂದು ಅನ್ನುತ್ತಿದ್ದರು. ಕಾಲಾಂತರದಿಂದ ಆರ್ಯರು ಎಷ್ಟೋ ದಸ್ಯುಗಳನ್ನು ತಮ್ಮ ಜಾತಿಯಲ್ಲಿ ತಕ್ಕೊಂಡರು. ಆದಾಗ್ಯೂ ಅವರದೊಂದು ಪ್ರತ್ಯೇಕವಾದ ಸಮಾಜವೇ ಉತ್ಪನ್ನವಾಯಿತು. ಆರ್ಯರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಎಂಬ ಮೂರು ಜಾತಿಗಳು ಮೊದಲೇ ಇದ್ದವು. ಇತ್ತೀಚ್ಚಲಾಗಿ ತಮ್ಮೊಳಗೆ ಸೇರಿಸಿಕೊಂಡ ದಸ್ಯುಗಳಿಗೆ ಶೂದ್ರರೆಂಬ ಹೆಸರು ಕೊಡಲ್ಪಟ್ಟಿತು. ಶೂದ್ರ ಈ ಹೆಸರು ಹ್ಯಾಗೆ ಬಂತೆಂಬದನ್ನು ಹೇಳುವದು ಸುಲಭವಿಲ್ಲ. ಅದರೂ ಈ ಹೆಸರು, ಆರ್ಯರಲ್ಲಿ ಸೇರಿಕೊಂಡ ದಸ್ಯುಗಳ ಪೂರ್ವದ ಒಂದು ಜಾತಿಯ ಹೆಸರಿರಬಹುದೆಂಬಂತೆ ತೋರುತ್ತದೆ. ಆರ್ಯರು ಮುಂದೆ ಕ್ರಮಕ್ರಮವಾಗಿ ಪೂರ್ವದ ಕಡೆಗೂ ದಕ್ಷಿಣದ ಕಡೆಗೂ ಹಬ್ಬಿದಂತೆ ಹೊಸಹೊಸ ಮೂಲ

ನಿವಾಸಿಗಳ ಸಂಗಡ ಅವರ ಸಂಬಂಧವಾಗುತ್ತಾ ಹೋಯಿತು. ಆರ್ಯರು ಅವರಿಗೂ ಶೂದ್ರರೆಂತಲೇ ಅನ್ನಹತ್ತಿದರು. ಈ ಮೇರೆಗೆ ಶೂದ್ರ ಶಬ್ದದ ಅರ್ಥವು ಬರಬರುತ್ತ ಬಹು ವ್ಯಾಪಕವಾಯಿತು. ಆರ್ಯರಲ್ಲಿ ಮೊದಲಿಗೆ ಸೇರಿಕೊಂಡ ದಸ್ಯುಗಳು ಆರ್ಯಭಾಷೆಯನ್ನೇ ಆಡುತ್ತಿದ್ದರು. ಆದರೆ ಎಲ್ಲ ದಸ್ಯುಗಳಿಗೆ ಆ ಭಾಷೆಯ ಉಚ್ಚಾರವನ್ನು ಸರಿಯಾಗಿ ಮಾಡ ಲಿಕ್ಕಾಗದ್ದರಿಂದ ಸಂಸ್ಕೃತ ಶಬ್ದಗಳು ಅಪಭ್ರಂಶಹೊಂದಿ ಪಾಲಿ ಭಾಷೆಯು ಉತ್ಪನ್ನವಾಯಿತು. ಮುಂದೆ ಇವೇ ಶಬ್ದಗಳು ಬೇರೆ ಪ್ರಾಂತ ಗಳಲ್ಲಿ ಹಬ್ಬಿದ್ದರಿಂದ ಸಂಸ್ಕೃತಶಬ್ದಗಳ ಬೇರೆ ಬೇರೆ ಅಪಭ್ರಂಶಗಳಾಗಿ ಶೌರಸೇನೀ, ಮಾಗಧೀ, ಮರಾಠೀ ಈ ಮೊದಲಾದ ಭಾಷೆಗಳು ಪ್ರಚಾರ ದಲ್ಲಿ ಬಂದವು. ಈ ಬೇರೆ ಬೇರೆ ಪ್ರಾಂತಗಳಲ್ಲಿಯೂ ಕೂಡ ನಿಷಿದ್ಧವಲ್ಲ ದಂಥ ಉದ್ಯೋಗಗಳನ್ನು ಮಾಡುವವರು ಮೇಲೆ ಹೇಳಿದ ಯಾವದೊಂದು ಜಾತಿಯಲ್ಲಿ ಸಮಾವೇಶವಾಗುತ್ತಿದ್ದರು. ಆದರೆ ನಿಷಿದ್ಧವಾದಂಥ ಕೀಳು ಕೆಲಸಗಳನ್ನು ಮಾಡುವವರು ಅತಿಶೂದ್ರಜಾತಿಯವರೆಂದೆಣಿಸಲ್ಪಟ್ಟರು. ಈ ಅತಿಶೂದ್ರಜಾತಿಯಲ್ಲಿ ಚಾಂಡಾಲರು, ನಿಷಾದರು, ವೇಣರು, ಶ್ವಪಾಕರು, ಧಿಗ್ವಣರು ಮೊದಲಾದವರು ಇದ್ದರು. ನಿಷಾದರು ಕೋಳೀ, ಅಂದರೆ ಮೀನ ಹಿಡಿಯುವ ಜಾತಿಯವರಾಗಿದ್ದರು. ಬೇರೆ ಕೆಲವರು ಬೇಟೆಯಿಂದ ಜೀವಿಸು ವವರಾಗಿದ್ದು, ಕಾಡುಪಶುಗಳನ್ನು ಕೊಲ್ಲುತ್ತಿದ್ದರು. ಧಿಗ್ವಣರು ಚರ್ಮವನ್ನು ಹದಗೊಳಿಸುವ ಕೆಲಸವನ್ನು ಮಾಡುತ್ತಿದ್ದರು. ಇವರಲ್ಲಿ ಬೇರೆ ಕೆಲವರಿಗೆ ಅಪರಾಧಿಗಳನ್ನು ಶೂಲಕ್ಕೇರಿಸುವ ಕೆಲಸ ಮಾಡಬೇಕಾಗುತ್ತಿತ್ತು. ಬೇರೆ ಕೆಲವರಿಗೆ ಊರೊಳಗೆ ಸತ್ತಂಥ ಪಶುಗಳನ್ನು ಊರಹೊರಗೆ ಒಯ್ಯಬೇಕಾ ಗುತ್ತಿತ್ತು. ಚಾಂಡಾಲರೂ ಶ್ವಪಾಕರೂ ಅವರಂಥ ಬೇರೆ ಕೆಲವು ಜಾತಿ ಯವರೂ ಊರಹೊರಗೆ ಮನೆಕಟ್ಟಿಕೊಂಡು ಇರುತ್ತಿದ್ದರು. ನಾಯಿಗಳೂ ಕತ್ತೆಗಳೂ ಅವರ ಮುಖ್ಯ ಸಂಪತ್ತಾಗಿದ್ದವು. ಉಚ್ಚ ಜಾತಿಯವರ ಪಾತ್ರೆ ಗಳ ಉಪಯೋಗವನ್ನು ಅವರು ಮಾಡುತ್ತಿದ್ದಿಲ್ಲ. ಹೆಣದ ಮೇಲಿನ ಅರಿವೆ ಗಳನ್ನು ಉಪಯೋಗಿಸುತ್ತಿದ್ದರು. ಕಬ್ಬಿಣದ ಅಭರಣಗಳನ್ನು ಧರಿಸು ತ್ತಿದ್ದರು. ಬೇರೆ ಜಾತಿಯವರು ಅವರ ಕೂಡ ಯಾವ ತರದ ವ್ಯವಹಾರ ವನ್ನು ಮಾಡುತ್ತಿದ್ದಿಲ್ಲ. ಉಚ್ಚ ಜಾತಿಯವರು ಅವರಿಗೆ ಅನ್ನವನ್ನು ನೀಡು ವದಾದರೆ ತಾವು ಸ್ವತಃ ನೀಡದೆ ತಮ್ಮ ಸೇವಕರ ಮುಖಾಂತರವಾಗಿ ಕೊ

ಡುತ್ತಿದ್ದರು. ಊಟದ ಕಾಲಕ್ಕೆ ಬ್ರಾಹ್ಮಣರು ಅವರನ್ನು ನೋಡಿದರೆ ಸಾಗ
ತ್ತಿದ್ದಿಲ್ಲ. ದೀಘ್ರ್ಘಾಯುಷ್ಯವನ್ನು ಹೊಂದಲಿಚ್ಛಿಸುವವರು ಚಾಂಡಾಲರ ಸಹ
ವಾಸದಲ್ಲಿ ಇರಕೂಡದು. ಚಾಂಡಾಲರನ್ನು ಮುಟ್ಟಿದವರು ಸ್ನಾನಮಾಡಬೆ
ಕಾಗುತ್ತಿತ್ತು. ಮಾರ್ಕಂಡೇಯ ಪುರಾಣದಲ್ಲಿ ಮೃತಹಾರ ಅಥವಾ ಮೃತ
ಹಾರಿ ಎಂಬ ಜಾತಿಯ ಉಲ್ಲೇಖವಿರುತ್ತದೆ. ಈ ಮೃತಹಾರ ಶಬ್ದವು
ಕೆಟ್ಟು ಮಹಾಹಾರವೆಂಬ ರೂಪವಾಗಿ ಅದರಿಂದಲೇ ಮರಾಠಿ ಭಾಷೆಯೊ
ಳಗಿನ ಮಹಾರ ಶಬ್ದವು ಹುಟ್ಟಿತು. ಈ ಶಬ್ದದಿಂದ ಪ್ರಾಚೀನಕಾಲಕ್ಕೆ
ಊರಹೊರಗೆ ಹೆಣಗಳನ್ನು ಒಯ್ಯುವ ಕೆಲಸವು ಹೊಲೆಯರ ಕಡೆಗೆ
ಇತ್ತೆಂಬಂತೆ ತೋರುತ್ತದೆ. ಕನಿಷ್ಠ ಜಾತಿಯವರು ಹೆಣವನ್ನು ಕೊಯ್ಯು
ವದು, ಗಲ್ಲಿಗೇರಿಸುವದು ಇವೇ ಮೊದಲಾದ ಕೆಲಸಗಳನ್ನು ಮಾಡುತ್ತಿದ್ದ
ದರಿಂದ ಅವರಿಗೆ ನೀಚಸ್ಥಿತಿಯು ಪ್ರಾಪ್ತವಾಗಿರುವದೆಂಬದು ಮೇಲಿನ
ವಿವೇಚನದಿಂದ ಸಿದ್ಧವಾಗುವದು. ಈ ಜಾತಿಯ ಜನರ ಸಂಖ್ಯೆಯು
ಹೆಚ್ಚಾದಂತೆ ಅವರಿಗೆ ಉದ್ಯೋಗದ ಕೊರತೆಯು ಬೀಳಹತ್ತಿದ್ದರಿಂದ
ಅವರು ಬೇರೆ ಕೆಲಸಗಳನ್ನು ಮಾಡಹತ್ತಿದರು. ಆಗ ಅವರ ನೀಚಸ್ಥಿತಿ
ಯ ಮೂಲಕವಾಗಿ ಅವರಿಗೆ ಅನೇಕ ತೊಂದರೆಗಳನ್ನು ಸಹಿಸಬೇಕಾ
ಯಿತು. ಆದರೆ ಬರಬರುತ್ತ ಅವೆಲ್ಲ ದೂರಾದವು.

ಮಹಾರಾಷ್ಟ್ರ ದೇಶದಲ್ಲಿ ಮೃತಹಾರ ಅಥವಾ ಮಹಾರ ಜಾತಿಯ
ಜನರಿಗೆ ಭೂಮಿಯ ತೆರಿಗೆಯನ್ನು ವಸೂಲುಮಾಡುವ ಕೆಲಸವು ದೊರ
ಕಿತು. ಮತ್ತು ಊರಿಗೆ ಯಾರಾದರೂ ಬಂದರೆ ಅವರಿಗೆ ಎಲ್ಲತರದ ಅನು
ಕೂಲತೆಗಳನ್ನು ಒದಗಿಸಿಕೊಡುವದು ಹೊಲೆಯರ ಕಡೆಗೆ ಇತ್ತು. ಈ
ಸಾಂಪ್ರದಾಯವು ಇನ್ನೂ ಎಷ್ಟೋ ಕಡೆಗೆ ಪ್ರಚಾರದಲ್ಲಿರುತ್ತದೆ. ಈ
ಕೆಲಸಗಳನ್ನು ಮಾಡುವದಕ್ಕಾಗಿ ಹೊಲೆಯರಿಗೆ ಭೂಮಿಗಳು ಕೊಡಲ್ಪ
ಟ್ಟವು. ಇದಲ್ಲದೆ ಅಯದರೂಪದಿಂದ ಒಕ್ಕಲಿಗರ ಉತ್ಪನ್ನದ ಅಲ್ಪಸ್ವಲ್ಪ
ಭಾಗವನ್ನು ಪಡೆಯುವ ಗ್ರಾಮದ ನೌಕರರಲ್ಲಿ ಹೊಲೆಯರು ಪ್ರಮುಖರಾ
ಪರು. ಈ ಮೇರೆಗೆ ಮಹಾರಾಷ್ಟ್ರದಲ್ಲಿಯಾದರೂ ಗ್ರಾಮಸಮಾಜದಲ್ಲಿ
ಹೊಲೆಯರ ಜಾತಿಗೆ ಒಂದು ವ್ಯವಸ್ಥಿತವಾದ ಸ್ಥಳವು ದೊರಕಿತು.

ಇತ್ತೀಚ್ಚಲಾಗಿ ಈ ಜನರು ವಿದ್ಯೆಯಿಂದಲೂ ಧರ್ಮನೀತಿಗಳಿಂದ
ಲೂ, ಅತಿ ಶೋಚನೀಯವಾದ ಸ್ಥಿತಿಯನ್ನು ಹೊಂದಿರುತ್ತಾರೆ. ಅದರಿಂದ

ಅವರು ಅಸ್ಪೃಶ್ಯ ವರ್ಗದವರಲ್ಲಿ ಎಣಿಸಲ್ಪಡುತ್ತಾರೆ. ಸದ್ಯಕ್ಕೆ ಅವರ ಸ್ಥಿತಿಯನ್ನು ಸುಧಾರಿಸುವ ಪ್ರಯತ್ನಗಳು ನಡೆದಿರುತ್ತವೆ. ಈ ಪ್ರಯತ್ನಗಳು ಪ್ರಾಚೀನಕಾಲದಲ್ಲಿ ಮಾಡಲ್ಪಟ್ಟಿದ್ದಿಲ್ಲೆಂದು ಮಾತ್ರ ತಿಳಿಯಕೂಡದು. ಬುದ್ಧನ ಎಷ್ಟೋ ಭಿಕ್ಷುಗಳು ಅಸ್ಪೃಶ್ಯ ವರ್ಗದವರಿದ್ದರು. ಸ್ಥಾವಿರನೆಂಬ ಸಾಧುವು ಪಾಲೀ ಭಾಷೆಯಲ್ಲಿ ಬರೆದಿಟ್ಟ ಕೆಲವು ಲೇಖಗಳಿರುತ್ತವೆ. ಅವುಗಳಲ್ಲೊಂದರಲ್ಲಿ—"ನಾನು ನೀಚ ಜಾತಿಯಲ್ಲಿ ಹುಟ್ಟಿದೆನು; ನನ್ನ ತಾಯಿ ತಂದೆಗಳು ತೀರ ಬಡವರು. ನನಗೆ ಹೊಟ್ಟೆತುಂಬ ಕೂಳು ಸಹ ಸಿಗುತ್ತಿದ್ದಿಲ್ಲ. ನಾನು ತೀರ ಕಡಿಮೆ ಪ್ರತಿಯ ಕೆಲಸವನ್ನು, ಅಂದರೆ ಭಂಗಿಯ ಕೆಲಸವನ್ನು ಮಾಡುತ್ತಿದ್ದೆನು. ಎಲ್ಲರೂ ನನ್ನನ್ನು ಕಂಡು ತಿರಸ್ಕರಿಸುತ್ತಿದ್ದರು. ಎಷ್ಟೋ ಜನರಿಗೆ ನಾನು ಅತಿವಿನಯದಿಂದ ಕೈಮುಗಿಯುತ್ತಿದ್ದೆನು. ಇಂಥ ಸ್ಥಿತಿಯಲ್ಲಿರುತ್ತಿರುವಾಗ ನಾನು ಒಂದು ದಿವಸ ಮಗಧ ದೇಶದ ರಾಜಧಾನಿಯೊಂದ ಪಾಟಲೀ ಪುತ್ರದಲ್ಲಿ ಪವಿತ್ರ ಭಿಕ್ಷುಗಳಿಂದ ಸುತ್ತುಗಟ್ಟಲ್ಪಟ್ಟ ಅತ್ಯಂತ ಜ್ಞಾನಿಯಾದ ಬುದ್ಧ ಮಹಾತ್ಮನನ್ನು ಕಂಡೆನು. ಕೂಡಲೆ ನಾನು ನನ್ನ ತಲೆಯಮೇಲಿನ ಬುಟ್ಟಿಯನ್ನು ಒತ್ತಟ್ಟಿಗೆ ಇಟ್ಟು ಆ ಮಹಾತ್ಮನ ಬಳಿಗೆ ಹೋಗಿ ಸಾಷ್ಟಾಂಗ ಪ್ರಣಾಮವನ್ನು ಮಾಡಿದೆನು. ನನ್ನ ವಿಷಯವಾಗಿ ಆ ಮಹಾತ್ಮನ ಮನಸ್ಸಿನಲ್ಲಿ ದಯಹುಟ್ಟಿ ಅವನು ಅಲ್ಲಿಯೇ ನಿಂತುಕೊಂಡನು. ನಾನು ಗಟ್ಟಿಯಾಗಿ ಅವನ ಕಾಲು ಹಿಡಿದೆನು; ಮತ್ತು ನನಗೆ ಸನ್ಯಾಸಸ್ಥಿತಿಯು ವ್ಯಾಪ್ತವಾಗುವಂತೆ ದಯಮಾಡಿಸಬೇಕೆಂದು ಬೇಡಿಕೊಂಡೆನು. ಆಗ ಆ ದಯಾಳುವಾದ ಮಹಾತ್ಮನು ನಿನ್ನನ್ನು ಭಿಕ್ಷುವಾಗಿ ಮಾಡಿದ್ದೇನೆ, ಏಳು, ಎಂದು ಅಂದನು. ಅಂದಿನಿಂದ ನಾನು ಈ ಭಾಗ್ಯವನ್ನು ಅನುಭವಿಸುತ್ತಲಿರುವೆನು," ಎಂಬ ಲೇಖವಿರುತ್ತದೆ.

ಇನ್ನೊಂದು ಕಥೆಯುಂಟು; ಅದರಲ್ಲಿ ಬುದ್ಧನು ಸೋಪಾಕ ಥೇರೋ ಎಂಬ ಒಬ್ಬ ಚಾಂಡಾಲನನ್ನು ಭಿಕ್ಷುವಾಗಿ ಮಾಡಿದ್ದರ ವರ್ಣನೆ ಇರುತ್ತದೆ. ಈ ವಿಷಯವಾಗಿ ಅಶೋಕನ ಚರಿತ್ರದಲ್ಲಿಯೂ ಒಂದು ಕಥೆಯು ಇರುತ್ತದೆ. ಅಶೋಕನಿಗೆ ಚಾಸನೆಂಬ ಹೆಸರಿನ ಒಬ್ಬ ಪ್ರಧಾನನಿದ್ದನು. ಅವನಿಗೆ, ಅರಸನು ಪ್ರತಿಯೊಬ್ಬ ಬೌದ್ಧ ಭಿಕ್ಷುವನ್ನು ನಮಸ್ಕರಿಸುವದು ಸೇರುತ್ತಿದ್ದಿಲ್ಲ. ಯಾವನೊಬ್ಬ ಭಿಕ್ಷುವು ಅತಿ ನೀಚಜಾತಿಯವನಿರಬಹುದು. ಇಂಥವನಿಗೆ ಅರಸನು ನಮಸ್ಕರಿಸುವದು ಸರಿಯಲ್ಲೆಂದು ಆ ಪ್ರಧಾನನ ಅಭಿಪ್ರಾಯವಿತ್ತು. ಆದರೆ ಅರಸನು ಈ ವಿಷಯದಲ್ಲಿ

ಚಾಸನೆನ್ನು ಸಮಾಧಾನ ಪಡಿಸಿದನು. ಇದೇ ಪ್ರಕಾರ ಆಶ್ವಲಾಯನ ಸೂತ್ರದೊಳಗಿನ ಬಂದು ವಾದವಿವಾದದಲ್ಲಿ ಬುದ್ಧನು ಜಾತಿಯ ಕಲ್ಪನೆಯ ಅಸ್ತಿವಾರವು, ವಿವಕ್ಷಿತ ಕುಲದಲ್ಲಿ ಹುಟ್ಟುವದರ ಮೇಲಾಗಲಿ, ಸ್ವಭಾವದ ಮೇಲಾಗಲಿ ಹಾಕಲ್ಪಟ್ಟಿಲ್ಲಿಂದು ಹೇಳಿದ್ದಾನೆ. ಭಗವಾನ ಬುದ್ಧನು ಆಶ್ವಲಾಯನನನ್ನು ಕುರಿತು— "ದ್ವಿಜವರ್ಣದವರು ಅರಣಿ ವೃಕ್ಷದ ಟೊಂಗೆಗಳನ್ನು ಬಂದಕ್ಕೊಂದು ತಿಕ್ಕುವದರಿಂದ ಅಗ್ನಿಯು ಉತ್ಪನ್ನವಾಗುವಂತೆ, ಚಾಂಡಾಲನು ತಿಕ್ಕುವೆದರಿಂದಲೂ ಅಗ್ನಿಯು ಉತ್ಪನ್ನವಾಗುವದಿಲ್ಲೇನು?" ಎಂದು ಪ್ರಶ್ನ ಮಾಡಿದನು. ಅದಕ್ಕೆ ಆಶ್ವಲಾಯನನು "ಎರಡು ಕಟ್ಟಿಗೆಗಳನ್ನು ಬಂದಕ್ಕೊಂದು ಯಾವನು ತಿಕ್ಕಿದರೂ ಅಗ್ನಿಯು ಉತ್ಪನ್ನವಾಗೇ ಆಗುತ್ತದೆ," ಎಂದು ಅಂಡನು. ಆಗ ಬುದ್ಧನು "ಹಾಗಾದರೆ ಬ್ರಾಹ್ಮಣರು ಅಗ್ನಿಯನ್ನು ಉತ್ಪನ್ನ ಮಾಡಿಕೊಂಡು ಯಜ್ಞ ಯಾಗಾದಿ ಕರ್ಮಗಳನ್ನು ಮಾಡುವಂತೆ ಚಾಂಡಾಲರಾದರೂ ಯಾಕೆ ಮಾಡಬಾರದು? ಮತ್ತು ನಾನು ಚಾಂಡಾಲರಿಗೆ ಭಿಕ್ಷುಗಳ ದೀಕ್ಷೆಯನ್ನು ಕೊಡುವಂತೆ ಬ್ರಾಹ್ಮಣರು ಅವರನ್ನು ತಮ್ಮ ಯಜ್ಞ ಯಾಗಾದಿ ಕಾರ್ಯಗಳಲ್ಲಿ ಯಾಕೆ ಕರಕೊಳ್ಳಬಾರದು?" ಎಂದು ಕೇಳಿದನು.

ಇದೇ ಪ್ರಕಾರ ಅರ್ವಾಚೀನ ಕಾಲದಲ್ಲಿ ಆಗಿ ಹೋದ ಸಾಧು ಸಂತರು ಅಸ್ಪೃಶ್ಯ ಜಾತಿಯವರನ್ನು ಎಂದೂ ತಿರಸ್ಕರಿಸಲಿಲ್ಲ. ನನ್ನನ್ನು ಭಜಿಸುವವನು ಚಾಂಡಾಲನಿರಲಿ, ಶ್ವಪಾಕನಿರಲಿ ಅವನು ಶುದ್ಧನಾಗುತ್ತಾನೆಂತಲೂ ಅವನ ಜನ್ಮದೋಷವು ನಷ್ಟವಾಗುವದೆಂತಲೂ ಭಾಗವತದಲ್ಲಿ ಹೇಳಿರುತ್ತದೆ. ತುಕಾರಾಮನು ಬಂದು ಕಡೆಗೆ— "ನಾನು ಜಾತಿ ಭೇದವನ್ನು ಲೆಕ್ಕಿಸುವದಿಲ್ಲ. ವೈಷ್ಣವನಿದ್ದರೆ ತೀರಿತು. ಅವನು ಬೇಕಾದ ಜಾತಿಯವನಿರಲೊಲ್ಲನೇಕೆ, ನನಗೆ ಪೂಜ್ಯನು," ಎಂದು ಅಂದಿದ್ದಾನೆ. ಮರುದೇಶದಲ್ಲಿ ವಾಲ್ಡೆ ಎಂಬ ಹೆಸರಿನ ಊರಲ್ಲಿ ದೇವಮುರಾರಿ ಎಂಬ ಹರಿಭಕ್ತನಿದ್ದನು. ಅವನ ಬಳಿಯಲ್ಲಿ ರೋಹಿದಾಸನೆಂಬೊಬ್ಬ ಶಿಷ್ಯನು ಸಮಗಾರನಿದ್ದನು. ಅವನು ದಿನಂಪ್ರತಿ ಪ್ರಾತಃಕಾಲಕ್ಕೆ ಪೂಜೆಯ ಸಾಹಿತ್ಯಗಳನ್ನು ತಕ್ಕೊಂಡು, ದೇವರ ಪೂಜೆಗೆ ಹೋಗುತ್ತಿದ್ದನು. ಬಳಿಕ ತೀರ್ಥವನ್ನು ತೆಗೆದುಕೊಳ್ಳುವದಕ್ಕಾಗಿ ಜನರನ್ನು ಕರೆಯುತ್ತಿದ್ದನು. ದೇವಮುರಾರಿಯು ನಾನಾನಾರ್ಥವಾಗಿ ನವಿಗೆ ಹೋಗಿದ್ದನು. ಅಲ್ಲಿ ಆ ಸಮ

ಗಾರನಾದ ಹರಿಭಕ್ತನ ಧ್ವನಿಯು ಕೇಳ ಬಂತು. ಕೂಡಲೆ ಅವನು ರೋಹಿದಾಸನ ಮನೆಗೆ ಹೋಗಿ ತೀರ್ಥವನ್ನು ಬೇಡಿದನು. ರೋಹಿದಾಸನು ಬ್ರಾಹ್ಮಣನಾದ ಇವನಿಗೆ ಈ ನೀರನ್ನು ಹ್ಯಾಗೆ ಕೊಡಲೆಂದು ಮನಸ್ಸಿನಲ್ಲಿ ಸಂಕೋಚ ಪಡಹತ್ತಿದನು. ಅದನ್ನು ಕಂಡು ಮುರಾರಿಯು— "ಸರ್ವ ಸಾಧಾರಣವಾದ ನೀರಿನಿಂದ ಗಂಗಾಜಲವು ಭಿನ್ನವಾಗಿರುವದು. ಸಂತರಿಗೆ ಇವರು ಬ್ರಾಹ್ಮಣರು, ಇವರು ಹೊಲೆಯರು, ಇವರು ಉಚ್ಚರು, ಇವರು ನೀಚರು ಈ ಭೇದವಿಲ್ಲ, ಎಂದು ಹೇಳಿ ತೀರ್ಥ ತಕ್ಕೊಂಡನು. ಏಕ ನಾಥಸ್ವಾಮಿಗಳು ಅತಿಶೂದ್ರನಿಗೆ ಭೋಜನವನ್ನು ಹಾಕಿದ ಕಥೆಯು ಎಲ್ಲರಿಗೂ ಗೊತ್ತುಂಟು.

ಈ ಎಲ್ಲ ಉದಾಹರಣೆಗಳಿಂದ ಪ್ರಾಚೀನ ಕಾಲದಲ್ಲಿ ನಮ್ಮ ದೇಶದೊಳಗೆ ಅಸ್ಪೃಶ್ಯಜಾತಿಯವರ ಉನ್ನತಿಯ ಸಲುವಾಗಿ ಪ್ರಯತ್ನಗಳು ಮಾಡಲ್ಪಟ್ಟಿಲ್ಲಿಂಬ ಮಾತು ಸುಳ್ಳೆಂದು ಸಿದ್ಧವಾಗುತ್ತದೆ. ಬುದ್ಧನೂ ಬೇರೆ ಅನೇಕ ಸಾಧುಸಂತರೂ ಈ ವಿಷಯದಲ್ಲಿ ಬಿಳ್ಳೀ ವಿಚಾರಗಳನ್ನು ಅವಲಂಬಿಸಿದ್ದರು. ಆದರೆ ಆ ವಿಚಾರಗಳಿಗೆ ವ್ಯವಹಾರಿಕ ಸ್ವರೂಪವು ಬಾರದಷ್ಟು ನಮ್ಮ ಜನರ ಮನಸ್ಸಿನಲ್ಲಿ ಜಾತಿಭೇದವು ನೆಲಗೊಂಡಿರುವದು. ಸದ್ಯಕ್ಕೆ ಕಾಲವು ಬದಲಾಗಿರುವದು. ಈ ಜನರನ್ನು ಇನ್ನು ಎಷ್ಟು ದಿವಸಗಳವರೆಗೆ ಅಸ್ಪೃಶ್ಯ ಸ್ಥಿತಿಯಲ್ಲಿಡಬೇಕು? ಇಡೀ ಜಗತ್ತಿನೊಳಗಿನ ನಾನಾ ಪ್ರಕಾರದ ಜನರ ಸಂಗಡ ನಮ್ಮ ಸಂಬಂಧವಾಗಹತ್ತಿರುವದು. ಅವರನ್ನೆಲ್ಲ ನಾವು ಅಸ್ಪೃಶ್ಯರೆಂದು ತಿಳಿಯದೆ, ಮೂರುಸಾವಿರ ವರ್ಷಗಳಿಂದ ನಮ್ಮ ಕೂಡ ಯಾವ ಜನರ ಹಿತಸಂಬಂಧವಿರುವದೋ ಅಂಥವರು ಅಸ್ಪೃಶ್ಯರೆಂದು ತಿರಸ್ಕರಿಸುವದೂ ಅವರನ್ನು ದೂರ ಇರಿಸುವದೂ ನ್ಯಾಯವಾದ ಸಂಗತಿಯೇ? ಆದರೆ ನಾವು ಇವರನ್ನು ಅಸ್ಪೃಶ್ಯರೆಂದು ತಿಳಿಯುವದನ್ನು ಬಿಟ್ಟರೆ ನಮ್ಮ ಕರ್ತವ್ಯವಾಗಲಿಲ್ಲ. ಈ ಅಸ್ಪೃಶ್ಯ ವರ್ಗಗಳಲ್ಲಿ ಜ್ಞಾನಾಭಿಲಾಷೆಯನ್ನು ಉತ್ಪನ್ನಮಾಡತಕ್ಕದ್ದು. ಅವರೊಳಗಿನ ಕೆಲವು ಜನರು ಬಿ. ಏ., ಎಮ್. ಏ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಉಚ್ಚಪ್ರತಿಯ ಸರಕಾರಿ ಉದ್ಯೋಗಗಳನ್ನು ದೊರಕಿಸಿಕೊಳ್ಳುವಂತೆ ತಕ್ಕ ವ್ಯವಸ್ಥೆಯನ್ನು ಮಾಡಲಿಕ್ಕೆ ಬೇಕು. ಅವರಲ್ಲಿ ಸುಶಿಕ್ಷಿತರಾದವರನ್ನು ತಪ್ಪುಗೆ ಸರಿಯಾದವರೆಂದು ತಿಳಕೊಂಡು ನಡಿಸಿಕೊಳ್ಳಲಿಕ್ಕೆ ಬೇಕು.

ಚಾಸನನ್ನು ಸಮಾಧಾನ ಪಡಿಸಿದನು. ಇದೇ ಪ್ರಕಾರ ಆಶ್ವಲಾಯನ ಸೂತ್ರದೊಳಗಿನ ಒಂದು ವಾದವಿವಾದದಲ್ಲಿ ಬುದ್ಧನು ಜಾತಿಯ ಕಲ್ಪನೆಯು ಅಸ್ತಿವಾರವು, ವಿವಕ್ಷಿತ ಕುಲದಲ್ಲಿ ಹುಟ್ಟುವದರ ಮೇಲಾಗಲಿ, ಸ್ವಭಾವದ ಮೇಲಾಗಲಿ ಹಾಕಲ್ಪಟ್ಟಿಲ್ಲೆಂದು ಹೇಳಿದ್ದಾನೆ. ಭಗವಾನ್ ಬುದ್ಧನು ಆಶ್ವಲಾಯನನನ್ನು ಕುರಿತು— "ದ್ವಿಜವರ್ಣದವರು ಅರಣಿ ವೈಹ್ಯದ ಟೊಂಗೆಗಳನ್ನು ಒಂದಕ್ಕೊಂದು ತಿಕ್ಕುವದರಿಂದ ಅಗ್ನಿಯು ಉತ್ಪನ್ನವಾಗುವಂತೆ, ಚಾಂಡಾಲನು ತಿಕ್ಕುವೆದರಿಂದಲೂ ಅಗ್ನಿಯು ಉತ್ಪನ್ನವಾಗುವದಿಲ್ಲೇನು?" ಎಂದು ಪ್ರಶ್ನ ಮಾಡಿದನು. ಅದಕ್ಕೆ ಆಶ್ವಲಾಯನನು "ಎರಡು ಕಟ್ಟಿಗೆಗಳನ್ನು ಒಂದಕ್ಕೊಂದು ಯಾವನು ತಿಕ್ಕಿದರೂ ಅಗ್ನಿಯು ಉತ್ಪನ್ನವಾಗೇ ಆಗುತ್ತದೆ," ಎಂದು ಅಂಡನು. ಆಗ ಬುದ್ಧನು "ಹಾಗಾದರೆ ಬ್ರಾಹ್ಮಣರು ಅಗ್ನಿಯನ್ನು ಉತ್ಪನ್ನ ಮಾಡಿಕೊಂಡು ಯಜ್ಞ ಯಾಗಾದಿ ಕರ್ಮಗಳನ್ನು ಮಾಡುವಂತೆ ಚಾಂಡಾಲರಾದರೂ ಯಾಕೆ ಮಾಡಬಾರದು? ಮತ್ತು ನಾನು ಚಾಂಡಾಲರಿಗೆ ಭಿಕ್ಷುಗಳ ದೀಕ್ಷೆಯನ್ನು ಕೊಡುವಂತೆ ಬ್ರಾಹ್ಮಣರು ಅವರನ್ನು ತಮ್ಮ ಯಜ್ಞಯಾಗಾದಿ ಕಾರ್ಯಗಳಲ್ಲಿ ಯಾಕೆ ಕರಕೊಳ್ಳಬಾರದು?" ಎಂದು ಕೇಳಿದನು.

ಇದೇ ಪ್ರಕಾರ ಅರ್ವಾಚೀನ ಕಾಲದಲ್ಲಿ ಆಗಿ ಹೋದ ಸಾಧು ಸಂತರು ಅಸ್ಪೃಶ್ಯ ಜಾತಿಯವರನ್ನು ಎಂದೂ ತಿರಸ್ಕರಿಸಲಿಲ್ಲ. ನನ್ನನ್ನು ಭಜಿಸುವವನು ಚಾಂಡಾಲನಿರಲಿ, ಶ್ವಪಾಕನಿರಲಿ ಅವನು ಶುದ್ಧನಾಗುತ್ತಾನೆಂತಲೂ ಅವನ ಜನ್ಮದೋಷವು ನಷ್ಟವಾಗುವದೆಂತಲೂ ಭಾಗವತದಲ್ಲಿ ಹೇಳಿರುತ್ತದೆ. ತುಕಾರಾಮನು ಒಂದು ಕಡೆಗೆ— "ನಾನು ಜಾತಿ ಭೇದವನ್ನು ಲೆಕ್ಕಿಸುವದಿಲ್ಲ. ವೈಷ್ಣವನಿದ್ದರೆ ತೀರಿತು. ಅವನು ಬೇಕಾದ ಜಾತಿಯವನಿರಲೊಲ್ಲನೇಕೆ, ನನಗೆ ಪೂಜ್ಯನು," ಎಂದು ಅಂದಿದ್ದಾನೆ. ಮರುದೇಶದಲ್ಲಿ ವಾಲ್ಡಿ ಎಂಬ ಹೆಸರಿನ ಊರಲ್ಲಿ ದೇವಮುರಾರಿ ಎಂಬ ಹರಿಭಕ್ತನಿದ್ದನು. ಅವನ ಬಳಿಯಲ್ಲಿ ರೋಹಿದಾಸನೆಂಬೊಬ್ಬ ಶಿಷ್ಯನು ಸಮಗಾರನಿದ್ದನು. ಅವನು ದಿನಂಪ್ರತಿ ಪ್ರಾತಃಕಾಲಕ್ಕೆ ಪೂಜೆಯ ಸಾಹಿತ್ಯಗಳನ್ನು ತಕ್ಕೊಂಡು, ದೇವರ ಪೂಜೆಗೆ ಹೋಗುತ್ತಿದ್ದನು. ಬಳಿಕ ತೀರ್ಥವನ್ನು ತೆಗೆದುಕೊಳ್ಳುವದಕ್ಕಾಗಿ ಜನರನ್ನು ಕರೆಯುತ್ತಿದ್ದನು. ದೇವಮುರಾರಿಯು ಸ್ನಾನಾರ್ಥವಾಗಿ ನದಿಗೆ ಹೋಗಿದ್ದನು. ಅಲ್ಲಿ ಆ ಸಮ

ಗಾರನಾದ ಹರಿಭಕ್ತನ ಧ್ವನಿಯು ಕೇಳ ಬಂತು. ಕೂಡಲೆ ಅವನು ರೋಹಿದಾಸನ ಮನೆಗೆ ಹೋಗಿ ತೀರ್ಥವನ್ನು ಬೇಡಿದನು. ರೋಹಿದಾಸನು ಬ್ರಾಹ್ಮಣನಾದ ಇವನಿಗೆ ಈ ನೀರನ್ನು ಹ್ಯಾಗೆ ಕೊಡಲಂದು ಮನಸ್ಸಿನಲ್ಲಿ ಸಂಕೋಚ ಪಡಹತ್ತಿದನು. ಅದನ್ನು ಕಂಡು ಮುರಾರಿಯು– "ಸರ್ವ ಸಾಧಾರಣವಾದ ನೀರಿನಿಂದ ಗಂಗಾಜಲವು ಭಿನ್ನವಾಗಿರುವದು. ಸಂತರಿಗೆ ಇವರು ಬ್ರಾಹ್ಮಣರು, ಇವರು ಹೊಲೆಯರು, ಇವರು ಉಚ್ಚರು, ಇವರು ನೀಚರು ಈ ಭೇದವಿಲ್ಲ, ಎಂದು ಹೇಳಿ ತೀರ್ಥ ತಕ್ಕೊಂಡನು. ಏಕ ನಾಥಸ್ವಾಮಿಗಳು ಅತಿಶೂದ್ರನಿಗೆ ಭೋಜನವನ್ನು ಹಾಕಿದ ಕಥೆಯು ಎಲ್ಲರಿಗೂ ಗೊತ್ತುಂಟು.

ಈ ಎಲ್ಲ ಉದಾಹರಣೆಗಳಿಂದ ಪ್ರಾಚೀನ ಕಾಲದಲ್ಲಿ ನಮ್ಮ ದೇಶದೊಳಗೆ ಅಸ್ಪೃಶ್ಯಜಾತಿಯವರ ಉನ್ನತಿಯ ಸಲುವಾಗಿ ಪ್ರಯತ್ನಗಳು ಮಾಡಲ್ಪಟ್ಟಲ್ಲಿಂಬ ಮಾತು ಸುಳ್ಳೆಂದು ಸಿದ್ಧವಾಗುತ್ತದೆ. ಬುದ್ಧನೂ ಬೇರೆ ಅನೇಕ ಸಾಧುಸಂತರೂ ಈ ವಿಷಯದಲ್ಲಿ ಒಳ್ಳೇ ವಿಚಾರಗಳನ್ನು ಅವಲಂಬಿಸಿದ್ದರು. ಆದರೆ ಆ ವಿಚಾರಗಳಿಗೆ ವ್ಯವಹಾರಿಕ ಸ್ವರೂಪವು ಬಾರದಷ್ಟು ನಮ್ಮ ಜನರ ಮನಸ್ಸಿನಲ್ಲಿ ಜಾತಿಭೇದವು ನೆಲಗೊಂಡಿರುವದು. ಸದ್ಯಕ್ಕೆ ಕಾಲವು ಬಡಲಾಗಿರುವದು. ಈ ಜನರನ್ನು ಇನ್ನು ಎಷ್ಟು ದಿವಸಗಳವರೆಗೆ ಅಸ್ಪೃಶ್ಯ ಸ್ಥಿತಿಯಲ್ಲಿಡಬೇಕು? ಇಡೀ ಜಗತ್ತಿನೊಳಗಿನ ನಾನಾ ಪ್ರಕಾರದ ಜನರ ಸಂಗಡ ನಮ್ಮ ಸಂಬಂಧವಾಗಹತ್ತಿರುವದು. ಅವರನ್ನೆಲ್ಲ ನಾವು ಅಸ್ಪೃಶ್ಯರೆಂದು ತಿಳಿಯದೆ, ಮೂರುಸಾವಿರ ವರ್ಷಗಳಿಂದ ನಮ್ಮ ಕೂಡ ಯಾವ ಜನರ ಹಿತಸಂಬಂಧವಿರುವದೋ ಅಂಥವರು ಅಸ್ಪೃಶ್ಯರೆಂದು ತಿರಸ್ಕರಿಸುವದೂ ಅವರನ್ನು ದೂರ ಇರಿಸುವದೂ ನ್ಯಾಯವಾದ ಸಂಗತಿಯೇ? ಆದರೆ ನಾವು ಇವರನ್ನು ಅಸ್ಪೃಶ್ಯರೆಂದು ತಿಳಿಯುವದನ್ನು ಬಿಟ್ಟರೆ ನಮ್ಮ ಕರ್ತವ್ಯವಾಗಲಿಲ್ಲ. ಈ ಅಸ್ಪೃಶ್ಯ ಬಂಧುಗಳಲ್ಲಿ ಜ್ಞಾನಾಭಿಲಾಷೆಯನ್ನು ಉತ್ಪನ್ನಮಾಡತಕ್ಕದ್ದು. ಅವರೊಳಗಿನ ಕೆಲವು ಜನರು ಬಿ. ಏ., ಎಮ್. ಏ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಉಚ್ಚಪ್ರತಿಯ ಸರಕಾರಿ ಉದ್ಯೋಗಗಳನ್ನು ದೊರಕಿಸಿಕೊಳ್ಳುವಂತೆ ತಕ್ಕ ವ್ಯವಸ್ಥೆಯನ್ನು ಮಾಡಲಿಕ್ಕೆ ಬೇಕು. ಅವರಲ್ಲಿ ಸುಶಿಕ್ಷಿತರಾದವರನ್ನು ತಮಗೆ ಸರಿಯಾದವರೆಂದು ತಿಳಕೊಂಡು ನಡಿಸಿಕೊಳ್ಳಲಿಕ್ಕೆ ಬೇಕು.

ಎಮ್. ಎ. ಆಗಿ ಡೆಪ್ಯುಟಿ ಕಲೆಕ್ಟರನಾದಂಥ ಹೊಲೆಯನಿಗೆ ಮುಟ್ಟಿ
ಮೂರ ಸರಿ, ಎಂದು ಯಾರಾದರೂ ಅನ್ನುವ ಸಂಭವ ಉಂಟೆ? ಈ ಅಸ್ಪೃಶ್ಯ
ಜಾತಿಯವರು ವಿದ್ಯೆಯಲ್ಲಿ ಪ್ರಗತಿಯನ್ನು ಹೊಂದಿದರೆ ಅವರ ಜಾತಿ
ದೋಷಗಳು ತನ್ನಿಂದ ತಾನೇ ನಷ್ಟವಾಗುವವು. ಸದ್ಯಕ್ಕೆ ಆ ಸ್ಥಿತಿಯು
ಪ್ರಾಪ್ತವಾಗಹತ್ತಿರುವದು. ಅವರೊಳಗಿನ ಪ್ರತಿಯೊಬ್ಬ ಮನುಷ್ಯನು
ಎಮ್. ಎ. ಆಗಬೇಕೆಂದು ಯಾರೂ ಹೇಳಲಾರರು. ಅವರು ಜೀ
ಉದ್ಯೋಗಗಳನ್ನು ಮಾಡತಕ್ಕದ್ದು. ಹೊಲೆಯನಾಗಲಿ, ಬೇರೆ ಯಾ
ನೊಬ್ಬ ಅಸ್ಪೃಶ್ಯವರ್ಗದ ಮನುಷ್ಯನಾಗಲಿ ತನ್ನ ಇಚ್ಛೆಯ ಪ್ರಕಾರ ಬ
ಗನಾಗಲಿ, ಸಿಂಪಿಗನಾಗಲಿ, ಗವಂಡಿಯಾಗಲಿ ಆಗಿ ಕೆಲಸ ಮಾಡಲಿ
ಸಮರ್ಥನಾಗುವಂತೆ ತಕ್ಕ ಪರಿಸ್ಥಿತಿಯನ್ನು ನಾವು ಉತ್ಪನ್ನ ಮಾಡಲಿ
ಬೇಕು."

ಅಲಂಕಾರಮಣಿ.

(ಕಳೆದ ಏಪ್ರೀಲ-ಮೇ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

೩೬. ವಿಷಮಾಲಂಕಾರವು. (ಲಕ್ಷಣ):— ೧. ಬಿಂಬಕ್ಕೊಂದು ಅ
ರೂಪಗಳಲ್ಲದ ವಸ್ತುಗಳ ಘಟನೆಯು ಯಾವ ಕಡೆಯಲ್ಲಿ ವರ್ಣಿತವಾ
ವದೋ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ಎತ್ತಣ ಮೃದುತನ್ವಂಗವಿ।
ದೆತ್ತಿದು ಮನ್ಮಥನ ಜ್ವರವ ಭಾಮಾನೊಣಗೆ॥

ಇಲ್ಲಿ ಮೃದುತ್ವದಿಂದ ದುಃಸಹವಾಗಿರುವ ಅಂಗಕ್ಕೆ ಮದನಜ್ವರ
ಘಟನೆಯು ಹೇಳಲ್ಪಟ್ಟದೆ. ಮತ್ತೆ ಉದಾ:—

ಭಾ॥ ಸುಂದರೆಯ ಮುಖಕಾಂತಿಯೆನು ಸರಿ।
ಹೊಂದಲ್ಕೆ ಜಲಧಿಯಲಿ ಮಜ್ಜಿಸಿ।
ಕುಂದುಗಳ ಕಳಕೊಂಡ ಮೇಲಾ ಪಾರಿಜಾತಗಳ॥
ಗಂಧದಿಂ ಸರಿಯೆಣಾಗದಿರಲಳಿ।
ವೃಂದಗಳೇ! ನೀವಿನ್ನು ಪೇಳಿರಿ।
ಸುಂದರೆಯ ಮುಖವೆತ್ತಲೀ ಚಂದಿರನ ಮುಖವೆತ್ತ॥

ಮೊದಲಿನ ಉದಾಹರಣೆಯಲ್ಲಿ ವಿದ್ಯಮಾನ ವಸ್ತುಗಳ ಘಟನೆಯು ತೋಳ್ಪಟ್ಟಿದೆ. ಅದರೆ ಇಲ್ಲಿ ಚಂದ್ರನ ಹಾಗು ಸ್ತ್ರೀಯ ಮುಖಕಾಂತಿಗಳ ತೆ ರ್ಪತವಾದ ಘಟನೆಯು ಹೇಳಲ್ಪಟ್ಟಿದೆ.

೨. ಕಾರಣ-ಗುಣಗಳಿಗೆ ವಿರುದ್ಧವಾದ ಕಾರ್ಯೋತ್ಪತ್ತಿಯಾಯಿತು, ಎಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ಕೀರ್ತಿಯನೀವುದು ಧವಳಂ ।
ಆರ್ತರ ರಕ್ಷಿಪುದು ಶಾಮವಾಗಿಹ ಖಡ್ಗಂ ॥

ಇಲ್ಲಿ ಕಾರಣ-ಗುಣಗಳಿಗೆ ವಿರುದ್ಧವಾಗಿ ಶ್ಯಾಮವಾದ ಖಡ್ಗದಿಂದ ಶುಭ್ರಕೀರ್ತಿಯ ಉತ್ಪತ್ತಿಯು ಹೇಳಲ್ಪಟ್ಟಿದೆ.

೩. ಇಷ್ಟಕಾರ್ಯಕ್ಕೆ ಉದ್ಯೋಗಿಸಿದವನಿಗೆ ಇಷ್ಟವು ಪ್ರಾಪ್ತವಾಗದೆ ಕೇವಲ ಅನಿಷ್ಟವು ಪ್ರಾಪ್ತವಾಯಿತು, ಎಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ತುತ್ತಾದುದಿಲಿಯು ಸರ್ಪಕೆ ।
ಒತ್ತರದಿಂ ಭಕ್ಷ್ಯಕಾಗಿ ಪೊಗಲದರ ಬಿಲಂ ॥

ಇಲ್ಲಿ 'ಭಕ್ಷ್ಯದ ಆಶೆಯಿಂದ ಇಲಿಯು ಸರ್ಪದ ಬುಟ್ಟಿಯಲ್ಲಿ ಹೊಗಲು ಸರ್ಪವು ಅದನ್ನು ನುಂಗಿ ಬಿಟ್ಟಿತು, ಎಂದು ವರ್ಣಿಸಿದೆ. ಕಾರಣ ಇಲ್ಲಿ ಇಷ್ಟಕಾರ್ಯಕ್ಕೆ ಉದ್ಯೋಗಿಸಿದವನಿಗೆ ಕೇವಲ ಅನಿಷ್ಟಪ್ರಾಪ್ತಿಯಾದಂತಾಯಿತು. ಮತ್ತೆ ಉದಾ:—

ಕಂದ॥ ಪಾಲನು ಬಹಳುಣ್ಣಲು ಗೋ ।
ಪಾಲನೆ, ನಾವೀಗ ನಿನ್ನನಾಶ್ರಯಿಸಿದೆವೈ ॥
ಶೀಲವಿದಲ್ಲವು ಮಾತೆಯ ।
ಪಾಲುಂ ಸಿಗದಂತೆ ನಮಗೆ ಮಾಳ್ಪುದು ನಿನಗೆ ॥

ಇಲ್ಲಿ 'ಬಹಳ ಹಾಲು ದೊರಕಿಸಲುದ್ಯೋಗಿಸಿದವನಿಗೆ ಅದು ದೊರಕದೇ ಮೊದಲಿದ್ದ ಹಾಲೂ ಹೋಯಿತು, ಎಂದು ಹೇಳಿದೆ. ಕಾರಣ ಇಲ್ಲಿ ಅಥ್ರ್ಯವಾಪ್ತಿರೂಪವಾದ ಇಷ್ಟಾರ್ಥಸಮುದ್ಯಮದಿಂದ ಇಷ್ಟವು ಪ್ರಾಪ್ತವಾಗದೆ ಅನಿಷ್ಟಪ್ರಾಪ್ತಿಯಾದಂತಾಯಿತು. ಮತ್ತೆ ಉದಾ:—

ಕಂದ ॥ ಭೂಮಿಯಲಿ ಸೈಂಹಿಕೇಯನ ।
ಸುಮಹದ್ಭಯದಿಂದೆ ವಿವದೆ ಚಂದ್ರನೊಳಿದ್ದ ॥

ಈ ಪೊಲದ ಭಯವ ನೋಡೈ ।
ಸೋಮನ ಸಹಿತದಲೆ ಕ್ಲೇಶಪಡುವೆದು ನಿರುತಂ ॥

ಇಲ್ಲಿ, ಪೊಲಕ್ಕೆ ತನಗೆ ಬರುವ ಅನರ್ಥವು ಪರಿಹಾರವಾಗಲಿಲ್ಲವೆಂ ತಲ್ಲ. ಆದರೆ ಅದಕ್ಕೆ ಆಶ್ರಯವನ್ನು ಕೊಟ್ಟವನಿಗೂ ಕೇಡು ಒದಗಿತು ಎಂದು ಹೇಳಿದೆ. ಅಂದರೆ ತನಗೆ ಬಂದ ವಿಪತ್ತನ್ನು ಎರಡನೆಯವನ ಮೇಲೆ ಹಾಕಿ ಹೋಗಲು ಅವನಿಗೂ ತನಗೂ ಕೇಡು ಒದಗಿದಂತಾಯಿತು ಮತ್ತೆ ಉದಾ—

ಭಾ॥ ಮಾರುತಿಯ ಬಾಲವನು ದಹಿಸಲು ।
ಊರಜನರೆಲ್ಲರುಗಳರಿವೆಯ ।
ಜೂರು ಬಿಡದಲೆ ತಂದು ಸುತ್ತಿಸುತುರಿಯಹಚ್ಚಿದನು ॥

ವೀರಕಪಿಯದರಿಂದೆ ರಾವಣ ।
ನೂರನೆಲ್ಲವ ನಿರ್ದಹಿಸಿ ಬಹು ।
ದೂರದಲ್ಲಿರುತಿರುವ ರಾಮನ ಬಳಿಗೆ ಸಂದನು ॥

ಅರ್ಥ— 'ರಾವಣನು ಮಾರುತಿಯ ಬಾಲವನ್ನು ಸುಡುವದಕ್ಕಾಗಿ ಅದಕ್ಕೆ ಅರಿವೆಯನ್ನು ಸುತ್ತಿಸಿ ಉರಿಯ ಹಚ್ಚಲು ಅವನು ಅದರಿಂದಲೆ ಲಂಕೆಯನ್ನು ಸುಟ್ಟನು, ಎಂದು ಹೇಳಿದೆ. ಅಂದರೆ ಪರಾನಿಷ್ಟಪ್ರಾಪ್ತಿ ರೂಪವಾದ ಇಷ್ಟಾರ್ಥ— ಸಮುದ್ಭವದಿಂದ ಪರರಿಗೆ ಕೇಡು ಒದಗದೆ ತನಗೆ ಮಾತ್ರ ಕೇಡು ಒದಗಿದಂತಾಯಿತು.

೪. ಕೇವಲ ಅನಿಷ್ಟವು ಬರುವದು, ಇಲ್ಲವೆ ಕೇವಲ ಇಷ್ಟವು ಪ್ರಾಪ್ತವಾಗಲಿಲ್ಲ, ಎಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಹೇಗೆಂದರೆ:—

ಭಾ॥ ನಲಿನದಾಪತ್ರದಲಿ ಪ್ರೀಯಳೆ ।
ನಲಿನಕಂದವ ಬಾವಿಯಲಿ ನೀ ।
ನಲಗೊಳಿಸಲಿಚ್ಛಿಸುವಿ, ತಿಳಿಯದೆ ನಿನಗೆ ಸಾಂಪ್ರತದ ॥
ಕಲಿಕಾಲವಿದರೊಳಗೆ ಕೃತವನು ।
ಸಲೆ ತಿಳಿಯದೀಜಗವಿನೆಲ್ಲವು ।
ಅಲಲ! ಮುಂದಿರೆ ನಿನ್ನ ಮುಖಶೋಭೆಯನಿನ್ನೇಳಿಸದೆ ॥

ಇಲ್ಲಿ, ಕಮಲದ ಆತಪತ್ರದ ಇಚ್ಛೆಯಿಂದ ಕಮಲದ ಗಡ್ಡೆಯನ್ನು ಹಚ್ಚುವವಳಿಗೆ ಅದರ ಲಾಭವು ಇದ್ದೇ ಇರುವದು. ಆದರೆ ಮುಖದ ಶೋಭಾಹರಣರೂಪವಾದ ಅನಿಷ್ಟವು ಪ್ರಾಪ್ತವಾಗುವದು, ಎಂಬ ಅರ್ಥವು ಗಮ್ಯವಾಗುವದು. ಮತ್ತೆ ಉದಾ:—

ಭಾ॥ ಬಿಡು ನೀನು ದಣಿದಿರುವಿ ಶೈಲವ ।
ಹಿಡಿಯುವೆವು ನಾವೆಂದು ನುಡಿಯಲು ।
ಸಡಿಲಿಸಲು ಕೈಗಳನು ಮೇಲಿನ ಗಿರಿಯಭಾರದಲಿ ॥
ಬುಡವನ್ನು ಪಿಡಿದವರ ಕರಗಳು ।
ಮಡಚಿ ನುಗ್ಗಾಗುತ್ತಲಿರುತಿರೆ ।
ಗಡಗಡಸಿ ನಗುತಿರುವ ಕೃಷ್ಣನು ಜಯಿಸಿ ಲೋಕದಲಿ ॥

ಇಲ್ಲಿ ಪರ್ವತಪತನರೂಪವಾಗಿ ಬರತಕ್ಕ ಅನಿಷ್ಟವು ಭಗವಂತನ ಕರಸಂಸರ್ಗದ ಮಹಿಮೆಯಿಂದ ನಿವಾರಿಸಲ್ಪಟ್ಟಿತು. ಕಾರಣ ಶೈಲವನ್ನು ಧರಿಸಬೇಕೆನ್ನುವ ಗೋಪರ ಇಷ್ಟವು ನೆರವೇರಲಿಲ್ಲ. ಮತ್ತೆ ಉದಾ:—

ಭಾ॥ ಆ ಕಲಂಕವ ಕಳೆಯಲೀ ಭೂ ।
ಲೋಕದಲಿ ತವ ಮುಖದ ರೂಪದೆ ।
ನೂಕಿದನು ಜನ್ಮವನು ಚಂದ್ರನು ತರುಣಿಮಣಿ ನೀನು ॥
ಏಕೆ ರಚಿಸುವಿ, ತಿಲಕರೂಪದ ।
ಲಾಕಲಂಕವನಲ್ಲಿ ಸುಮ್ಮನೆ ।
ನಾಕುಬಿಡು, ನಾರಿಯರು ಕೆಡಿಸುವರಾಶ್ರಿತರುಗಳನು ॥

ಅರ್ಥ— ಚಂದ್ರನು ತನ್ನ ಕಲಂಕವನ್ನು ಕಳಕೊಳ್ಳುವದಕ್ಕಾಗಿ ಸುಂದರ ಸ್ತ್ರೀಯರ ಮುಖದ ರೂಪದಿಂದ ಭೂಲೋಕದಲ್ಲಿ ಜನ್ಮಿಸಿದನು. ಆದರೆ ಸ್ತ್ರೀಯರು ತಿಲಕರೂಪದಿಂದ ಇಲ್ಲಿಯಾದರೂ ಅವನಿಗೆ ಕಲಂಕವನ್ನುಂಟು ಮಾಡಿದರು, ಎಂದು ಹೇಳಿದೆ. ಕಾರಣ ಇಲ್ಲಿ "ಅನಿಷ್ಟಪರಿಹಾರರೂಪವಾದ ಇಷ್ಟವು ನೆರವೇರಲಿಲ್ಲವೆಂದು" ಹೇಳಿದಂತಾಯಿತು. ಮತ್ತೆ ಉದಾ:—

ಭಾ॥ ಮಗನೆವೋರೆಯೆ ಕಾಣದಲೆ ಬಲು ।
ಮುಗುಳುನಗೆಯಿಸಗುಂಟು ಮಾಡುವೆ ।
ಮಿಗಿಲುಸಾನುಗ್ರಹವದಾಯಿತು ನಿನ್ನ ಶಾಪವಿದೈ ॥

ಚಿಕಗಳಿನಿಂ ನೆಲವನ್ನು ದಹನವು ।
ಮಿಗಿಲಾಗಿ ದಹಿಸುತ್ತ ಮಾಡದೆ ।
ಜಗದೆ ಬೀಜಾಂಕುರಕೆ ಬಹುಯೋಗ್ಯವೆನು ನಿಜವಾಗಿ ॥

ಅರ್ಥ—ಇದು ಮುನಿಯು ದಶರಥನಿಗೆ "ನೀನಾದರೂ ಪುತ್ರಶೋಕೆದಿಂದ ಮೃತನಾಗು," ಎಂದು ಶಾಪಕೊಟ್ಟ ಮೇಲೆ ದಶರಥನು ಮುನಿಗೆ ಆಡಿದ ವಾಕ್ಯವು. ಪಾಪವು ಸ್ವತಃ ದಶರಥನಿಗೆ ಕೆಡಕಾಗಿದ್ದರೂ "ಪರಮ ಪುರುಷಾರ್ಥವಾದ ಪುತ್ರಲಾಭವಾಗುವದು" ಎಂಬ ಅಭಿಪ್ರಾಯದಿಂದ ಗರ್ಭಿತವಾಗಿ ಇದ್ದದರಿಂದ ಅದನ್ನು ಅವನು ತನಗೆ ಇಷ್ಟರೂಪವೆಂದು ತಿಳಿದನು. ಕಾರಣ ಪರಾನಿಷ್ಟಪ್ರಾಪಣರೂಪವಾದ ಮುನಿಯ ಇಷ್ಟವು ನೆರವೇರಲಿಲ್ಲ.

೫. "ತನ್ನ ಇಷ್ಟವನ್ನು ಸಿದ್ಧಿಸುವದಕ್ಕಾಗಿ ಒಬ್ಬನನ್ನು ನೇಮಿಸಿರಲು ಅವನು ನಿಯೋಜಿಸಿದವನ ಇಷ್ಟವನ್ನು ಉಪೇಕ್ಷಿಸಿ ಸ್ವೇಷ್ಟವನ್ನು ಸಾಧಿಸಿಕೊಂಡನು" ಎಂದು ವರ್ಣಿಸಿದಲ್ಲಿಯೂ ಇದೇ ಅಲಂಕಾರವಾಗುವದು. ಹೇಗಂದರೆ :—

ಭಾ॥ ಯಾವನಿಗೆ ಕಳುಹಿದಳೊ ದೂತಿಯ ।
ನವನೊಳಗೆ ನೆರೆಬೆರೆತು ಕೂತಳು ।
ನೀವು ನೋಡಿರೆ, ವಿಧಿಯ ಮೇಣೆನ್ನಯ ವಿಮೌಢ್ಯವನು॥

ಅರ್ಥ—"ಅವನೊಳಗೆ ನೆರೆ ಬೆರೆತು ಕೂತಳು" ಎಂದು ಹೇಳಿದ್ದರಿಂದ ಸ್ವಾಮಿಕಾರ್ಯವನ್ನು ಉಪೇಕ್ಷಿಸಿ ಸ್ವಕಾರ್ಯವನ್ನು ಸಾಧಿಸಿಕೊಂಡದ್ದು ವ್ಯಕ್ತವಾಗಿ ತೋರುವದು. ಕಾರಣ ನಿಯೋಕ್ತೃವಿನ ಇಷ್ಟವು ನೆರವೇರಲಿಲ್ಲವೆಂಬದು ಸಹಜವೇ.

ಭಾ॥ ಅಲ್ಲಪುಲ್ಲಿಂಗವಿದು ಸಕ್ಕದ ।
ಬಲ್ಲರಿಗೆ ಮನವೆನ್ನತಾಪ್ರಿಯ ।
ಳಲ್ಲಿರಿಸೆ ರಮಿಸುತಲಿದಲ್ಲಿಯೆ ಬಿಡದಲಿರುತಿಹುದೈ ॥

ಅರ್ಥ—"ಜ್ಞಾನಿಗಳಿಗೂ ಕೂಡ ಪುಲ್ಲಿಂಗವೆಂದು ತಿಳಿಯದೆ ಇದ್ದ ಮನವನ್ನು ಪ್ರಿಯಳಲ್ಲಿರಿಸಲು ಇದು ರಮಿಸುತ್ತ ಅಲ್ಲಿಯೇ ಇರುವದು" ಎಂದು ಹೇಳಿದೆ. ಅದರಿಂದ ವಿಶ್ವಾಸಿಕ ಮನುಷ್ಯನು ಒಡೆಯನಿಗೆ ಮೋಸ ಮಾಡಿ ಸ್ವೇಷ್ಟವನ್ನು ಸಾಧಿಸಿಕೊಂಡಂತಾಯಿತು. ಕಾರಣ, ಇಲ್ಲಿ ನಿಯೋಕ್ತೃವಿನ ಇಷ್ಟವು ನೆರವೇರಲಿಲ್ಲವೆಂಬದು ಸಹಜವೇ.

ಇವೆಲ್ಲವೂ ಇಷ್ಟವು ನೆರವೇರಲಿಲ್ಲವೆಂಬದಕ್ಕೆ ಉದಾಹರಣಗಳು. ಇನ್ನು ಕೆಲವು ಕಡೆಯಲ್ಲಿ ಇಷ್ಟಾರ್ಥವು ನೆರವೇರಿದಂತಾಗಿ ಅದು (ಇಷ್ಟವು) ನೆರವೇರದೆ ಇರುವದು. ಹೇಗಂದರೆ:—

ವಾರ್ಧಿಕ॥ ನಿನ್ನ ಪದಕಾಂತಿಗಳ ಶೋಭೆಯನು ಹೊಂದಲ್ಕೆ।
ತನ್ನ ಕಿರಣಂಗಳನು ಬೆಳಗು ಪರಿಯಂತರವು।
ಚನ್ನಾಗಿ ಕಾಸುವನು ಬೆಂಕಿಯೊಳಗಿರುಳೆಲ್ಲವದರಿಂ
ಪ್ರಕಾಶಿಸುತಲಿ॥

ಮುನ್ನ ಪೂರ್ವದಲುಸಿತೋರುವನು ಪಗಲೆಲ್ಲ।
ವನ್ನು ಕಳೆಯಲು ಮತ್ತೆ ನಿಸ್ತೇಜನಾಗುತಿಹ।
ನಿನ್ನು ಹೇಳುವದೇನು? ಪ್ರತಿದಿನವು ಕಾಯುತಿಹನೀಮಂದ
ತಾಪದಿನನು॥

ಅರ್ಥ— ಸೂರ್ಯಕಿರಣಗಳು ರಾತ್ರಿಯಲ್ಲಿ ಅಗ್ನಿಯಲ್ಲಿ ಪ್ರವೇಶಿಸುವದು ಆಗವುಸಿದ್ಧವು. ಇದಕ್ಕೆ ಕವಿಯು 'ಸೂರ್ಯನು ಭಗವಂತನ ಚರಣದ ಅರುಣಕಾಂತಿಯನ್ನು ಹೊಂದುವದಕ್ಕಾಗಿ ಇರುಳೆಲ್ಲವೂ ತನ್ನನ್ನು ಅಗ್ನಿಯಲ್ಲಿ ಕಾಸಿಕೊಳ್ಳುವನು, ಎಂದು ಉತ್ಪ್ರೇಕ್ಷಿಸಿದ್ದಾನೆ. ಮುಂದೆ 'ಪ್ರಕಾಶಿಸುತಲಿ ಮುನ್ನ (ಮೊದಲು ಮಾತ್ರ) ತೋರುವನು, ಎಂದು ಹೇಳಿದೆ. ಕಾರಣ, ಸೂರ್ಯನಿಗೆ ಬಹಳೇ ಪ್ರಯತ್ನದಿಂದ ತಾತ್ಕಾಲಿಕವಾದ ಇಷ್ಟ ಪ್ರಾಪ್ತಿಯು ಮಾತ್ರ ಆಯಿತು. ಸಾರ್ವಕಾಲಿಕವಾದ ಇಷ್ಟಪ್ರಾಪ್ತಿಯು ಆಗಲಿಲ್ಲವೆಂದು ಹೇಳಿದಂತಾಯಿತು. ಮತ್ತೆ ಉದಾ:—

ವಾರ್ಧಿಕ॥ ಚಂದಿರನಿಗೀ ನಿನ್ನ ಮುಖ ಸಾಮ್ಯವದರಿಂದೆ।
ಬಂದುದಂಬುಜಕೋಶ ಮುದ್ರಿಕೆಯ ಭಂಗದಲಿ।
ಬಂಧುರತ್ವದೆ ನಿನಗೆ ಸರಿಯಾದ ಮಿತ್ರಕರಗಳ
ಬಹಳ ಲಾಭದಿಂದ॥

ಕುಂದದಿದು ಪೂರ್ಣಿಮೆಯೊಳೊಂದೆದಿನವಿರುತಿಹುದು।
ಮುಂದೆ ಶೋಭೆಯು ಕಡಿಮೆಯಾಗುತ್ತಲನ್ಯಾಯ।
ದಿಂದೆ ದೊರಕಿದ ಸಿರಿಯು ನಾಶಹೊಂದುವ ತೆರವ
ತೋರ್ಪುದೆಲ್ಲಾ ಜನರಿಗೆ॥

ಅರ್ಥ:—ಚಂದ್ರನಿಗೆ ನಿನ್ನ (ವಿಷ್ಣುವಿನ) ಮುಖದ ಸಾಮ್ಯವು, ಅಂಬು. ಜಕೋಶಮುದ್ರಿಕೆಯ ಭಂಗದಲಿ ಮಿತ್ರಕರಗಳ ಲಾಭದಿಂದ ಬಂದುದು, ಎಂದು ಹೇಳಿದೆ. ಸೂರ್ಯನ ಕಿರಣಗಳು ಚಂದ್ರನಲ್ಲಿ ಪ್ರವೇಶಿಸುತ್ತವೆಂಬದು ಅಗಮಸಿದ್ಧವು. ಇದನ್ನೇ ಇಲ್ಲಿ ಕವಿಯು ಅಂಬುಜಕೋಶ—ಮಿತ್ರ ಶಬ್ದಗಳ ಶ್ಲೇಷದಿಂದ— "ಸೂರ್ಯನು ಭಗವಂತನ ಮುಖಲಕ್ಷ್ಮಿಯು ನಿಧಾನಕೋಶವಾದ ಕಮಲದ ಮುದ್ರೆಯನ್ನು ಬಿಚ್ಚಿ ಅದರೊಳಗಿನ ಶೋಭೆಯನ್ನು ಚಂದ್ರನಿಗೆ ಕೊಟ್ಟನು. ಕಾರಣ ಅವನಿಗೆ ವಿಷ್ಣುವಿನ ಮುಖಸಾಮ್ಯತೆ ಬಂದಿದೆ" ಎಂಬ ಅರ್ಥವು ಸೂಚಿತವಾಗುವಂತೆ ವರ್ಣಿಸಿದ್ದಾನೆ. ಮುಂದೆ 'ಒಂದು ದಿನವಿರುತಿಹುದು,' ಎಂದು ಹೇಳಿದ್ದಾನೆ. ಕಾರಣ ಚಂದ್ರನಿಗೆ ಬಹಳೇ ಪ್ರಯತ್ನದಿಂದ ತಾತ್ಕಾಲಿಕವಾದ ಇಷ್ಟ ಪ್ರಾಪ್ತಿಯು ಮಾತ್ರ ಆಯಿತು. ಸಾರ್ವಕಾಲಿಕವಾದ ಇಷ್ಟಪ್ರಾಪ್ತಿಯ ಆಗಲಿಲ್ಲವೆಂದು ಹೇಳಿದಂತಾಯಿತು.

ಬೇರೆ ಕೆಲವು ಕಡೆಗಳಲ್ಲಿ ಇಷ್ಟವು ನೆರವೇರದಿದ್ದರೂ 'ಅದು ನೆರವೇರಿತು,' ಎಂದು ಭ್ರಮೋಪನ್ಯಾಸದಿಂದ ಹೇಳಲ್ಪಡುವದು. ಹೇಗಂದರೆ:-

ವಾರ್ಧಿಕ॥ ಬಲ್ಲಾಳ ಭೂಪ ಕೇಳ್ ನಿನ್ನ ವೈರಿಗಳ ಪುರ ।
ದಲ್ಲಿ ಸಂಚರಿಸುತಿಹ ಭಿಲ್ಲಿ ವಿಸ್ತೃತವಾಗಿ ।
ಅಲ್ಲಲ್ಲಿ ಬಿದ್ದಿರುವ ರತ್ನಂಗಳೊಳು ಬೆಂಕಿ ಕೆಂಡಗಳ
ಶಂಕೆಯಿಂದ ॥

ಮೆಲ್ಲ ಮೆಲ್ಲನೆ ತಂದ ಶ್ರೀಖಂಡ ಚೂರುಗಳ ।
ನಲ್ಲಿ ಹಾಕುತಲೂದಲಾಶ್ವಾಸ ಪರಿಮಳಕೆ ।
ಅಲ್ಲಿ ನೆರೆದಿಹ ಭ್ರಮರವೃಂದದಿಂ ಮಾಡುತಿಹಳಾ
ಹೊಗೆಯ ಸಂಶಯವನು ॥

ಇಲ್ಲಿ ಬಹಳ ಅಗ್ನಿಯನ್ನು ದೊರಕಿಸಲು ಉದ್ಯೋಗಿಸಿದವಳಿಗೆ ಅದು ದೊರಕದೆ 'ದೊರಕಿತು' ಎಂದು ಭ್ರಮೋಪನ್ಯಾಸದಿಂದ ಹೇಳಲ್ಪಟ್ಟಿದೆ.

೩೯. ಸಮಾಲಂಕಾರವು. (ಲಕ್ಷಣ):— ಒಂದಕ್ಕೊಂದು ಅನುರೂಪಗಳಾದ ವಸ್ತುಗಳ ಘಟನೆಯು ಯಾವ ಕಡೆಯಲ್ಲಿ ವರ್ಣಿತವಾಗುವದೋ ಅಲ್ಲಿ ಈ ಅಲಂಕಾರವಾಗುವದು. ಉದಾ:—

ಉಪೇಂದ್ರಕವರ್ಮ ತೋಳವಟ್ಟ.

ಸಮುದ್ರಸಪಾಟಿಯಿಂದ ಎತ್ತರ ಘೊಟುಗಳು.

ಬೆಳಗಾವ ಜಿಲ್ಲೆ.

ಅಥಣಿ ತಾಲೂಕ

೧. ಅಥಣಿ	೧೯೪೪ ಫೂ.	೨೦. ನಂದೇಶ್ವರ	೧೭೪೪ ಫೂ.
೨. ಐಗಳಿ	೧೯೬೬ ,,	೨೧. ನಂದಗಾವ	೧೮೩೬ ,,
೩. ಐನಾಪೂರ	೧೮೬೦ ,,	ಗುಡ್ಡ	೨೦೧೧ ,,
೪. ಅನಂತಪುರ	೨೦೧೪ ,,	೨೨. ಸಪ್ಪಸಾಗರ	೧೭೪೫ ,,
೫. ಬಾಳೀಗೇರಿ	೨೧೦೪ ,,	೨೩. ಸತ್ತಿ	೧೭೪೧ ,,
೬. ಹಾರೂಗೇರಿ	೧೮೧೫ ,,	೨೪. ಸೇಡಬಾಳ	೧೮೪೨ ,,
೭. ಧಾರೂರ	೧೭೨೬ ,,	೨೫. ಶಿರಹಟ್ಟಿ	೧೭೫೬ ,,
೮. ಹಿರೇಪಡಸಲಗಿ	೧೭೫೨ ,,	೨೬. ಶೂರ್ಪಾಲಿ	೧೭೦೦ ,,
೯. ಜನವಾಡ	೧೭೪೭ ,,	೨೭ ಸೌದಿ	೧೭೬೫ ,,
೧೦ ಜೂಗಳ	೧೭೬೮ ,,	೨೮. ತೆಲಸಂಗ	೨೨೬೩. ,,
೧೧. ಕಾಗವಾಡ	೧೮೮೦ ,,	೨೯. ಊಗಾರ	೧೭೫೫ ,,
೧೨. ಕಕಮರಿ	೧೧೮೨ ,,	೩೦. ಝುಂಜರವಾಡ	೧೭೯೬ ,,
೧೩. ಖೇಮಲಾಪುರ	೧೭೫೧ ,,	೩೧. ಜಂಬಿಗಿ	೧೮೫೬ ,,
೧೪. ಕೋಡಳ್ಳಿ	೧೯೧೮ ,,	೩೨. ಖನಟಕೊಪ್ಪ	೧೭೬೭ ,,
೧೫. ಕೊಕಟನೂರ	೧೭೭೨ ,,	೩೩. ಕಲಮಡಿ	೨೧೧೨ ,,
೧೬. ಕೊಟ್ಟಲಗಿ	೨೧೯೧ ,,	೩೪. ರಾಮತೀರ್ಥ	೧೯೮೫ ,,
೧೭. ಕುಡಚಿ	೧೭೪೪ ,,	೩೫. ಬಾಲವಾಡ	೧೭೫೨ ,,
೧೮. ಮದಬಾವಿ	೧೮೫೫ ,,	೩೬. ಅರಟಾಳ	೧೯೮೬ ,,
೧೯. ಮಹಿಸವಾಡಗಿ	೧೭೪೦ ,,	೩೭. ಮಂಗಸೊಳಿ	೧೮೯೮ ,,

ಬೆಳಗಾವ ತಾಲೂಕ.

೧. ಬೆಳಗಾವಿ	೨೫೧೭ ಫೂ.	೪. ಬಡಸ	೨೧೯೦ ಫೂ
೨. ಅಂಕಲಗಿ	೨೩೫೧ ,,	೫. ಬಾಗೇವಾಡಿ	೨೨೭೬ ,,
೩. ಅರಳಿಕಟ್ಟಿ	೨೨೭೬ ,,	೬. ಬೆಂಡಿಗೇರಿ	೨೧೪೫ ,,

೭. ಚಿಕ್ಕಬಾಗೇವಾಡಿ	೨೩೪೨ ಫ್ಲೂ.	೨೨. ಸೂಳೇಭಾವಿ	೨೪೬೭ ಫ್ಲೂ
೮. ಧಾಮಣಿ	೨೫೨೩ ,,	ಗುಡ್ಡ	೨೭೬೪ ,,
೯. ಹುದಲಿ	೨೫೦೬ ,,	೨೩. ಹೇರೆ	೨೪೬೦ ,,
ಗುಡ್ಡ	೨೬೭೫ ,,	೨೪. ಚಂದಗಡ	೨೩೮೫ ,,
೧೦. ಕಣಬರಗಿ	೨೫೧೭ ,,	ಗುಡ್ಡ	೨೫೨೬ ,,
ಗುಡ್ಡ	೩೦೬೩ ,,	೨೫. ಹುಲೀಕಟ್ಟಿ	೨೩೨೫ ,,
೧೧. ಕಣವಿಕರವಿನಕೊಪ್ಪ	೩೫೫೧ ,,	೨೬. ನಿಡಗಾಳ	೨೨೫೩ ,,
೧೨. ಶಹಾಪುರ	೨೫೩೩ ,,	೨೭. ದೇಸೂರ	೨೫೩೨ ,,
೧೩. ಬೆಳಗುಂದಿ	೨೬೧೭ ,,	೨೮. ಫೋಟಗೆವಾಡಿ	೨೧೪೫ ,,
೧೪ ಎಲ್ಲೂರ	೨೫೪೨ ,,	ಗುಡ್ಡ	(೨೪೦೫)
೧೫ ಮಜಗಾವ	೨೫೪೨ ,,	೨೯. ಪಾರಗಡ	೨೪೧೬ ,,
೧೬ ನಂದೀಗುಡ್ಡ	೨೫೬೩ ,,	೩೦. ಪಾಲಾನಿ	೨೪೬೩ ,,
೧೭ ಬಂಬರಗಿಗುಡ್ಡ	೩೦೫೩ ,,	ಗುಡ್ಡ	(೩೦೦೨)
೧೮ ಕುಡಚಿ	೨೫೭೧ ,,	೩೧. ಜಂಬರಾ	೨೫೦೮ ,,
೧೯ ಮೋದಗಿ	೨೪೬೭ ,,	ಗುಡ್ಡ	(೩೪೦೬)
೨೦ ಮುತನಾಳ	೨೧೪೫ ,,		
೨೧. ನಂದೀಹಳ್ಳಿ	೨೧೪೬ ,,		

ಚಿಕ್ಕೋಡಿ ತಾಲೂಕ.

೧. ಚಿಕ್ಕೋಡಿ	೨೦೯೩ ಫ್ಲೂ.	೧೦. ಗಳತಗಿ	೧೪೪೨ ಫ್ಲೂ
೨. ಅಕ್ಕಿವಾಟ	೨೨೭೪ ,,	೧೧. ಹತ್ತರವಾಟ	೧೯೯೬ ,,
೩. ಅಂಕಲಿ	೧೭೯೦ ,,	೧೨. ಹಿರೇಕೋಡಿ	೧೯೬೨ ,,
೪. ಬಂಬಲವಾಡ	೧೯೫೬ ,,	೧೩. ಕಬ್ಬೂರ	೨೦೩೦ ,,
೫. ಬಿಡಕೀಹಾಳ	೧೪೫೦ ,,	೧೪. ಕಾಡಾಪುರ	೧೪೫೨ ,,
೬. ಬೆಳಕೂಡ	೨೦೯೨ ,,	೧೫. ಕಲ್ಲೋಳ	೧೪೦೨ ,,
೭. ಭೋಜ	೧೪೬೪ ,,	೧೬. ಕರೋಸಿ	೨೨೪೩ ,,
೮. ಬೋರಗಾವ	೧೪೬೪ ,,	೧೭. ಕೆರೂರ	೧೯೪೦ ,,
೯. ಚಿಂಚಣಿ	೨೧೩೬ ,,	೧೪. ಮಾಂಜರಿ	೨೨೦೪ ,,

೧೯.	ನಾಗರಮನೋಳಿ	೨೧೩೬ ಫೂ.	೨೨.	ಶಮನೇವಾಡಿ	೧೮೫೦ ಫೂ.
೨೦.	ನೇಜ	೧೮೬೦ ,,	೨೩.	ಎಕಸಂಬಿ	೧೮೪೬ ,,
	ಗುಡ್ಡ	(೨೧೭೪) ,,	೨೪.	ಕರಗಾವ	೧೮೬೬ ,,
೨೧.	ಸಡಲಗಿ	೧೮೪೫ ,,	೨೫.	ನಿಪ್ಪಾಣಿ	೨೨೮೮ ,,

ಹುಕ್ಕೇರಿ ತಾಲೂಕ.

೧.	ಹುಕ್ಕೇರಿ	೨೨೧೨ ಫೂ.	೧೫.	ನಿಡಸೋಸಿ	೨೪೦೬ ಫೂ.
೨.	ಅಮ್ಮಣಗಿ	೨೩೯೫ ,,	೧೬.	ಪಾಚ್ಛಾಪೂರ	೨೧೯೪ ,,
೩.	ಬಡಕುಂದರಗಿ	೨೦೭೦ ,,		ಗುಡ್ಡ	೨೪೫೫ ,,
೪.	ಬೆಲ್ಲದ ಬಾಗೇವಾಡಿ	೨೦೭೦ ,,	೧೭	ನಿರಗಾವ	೨೦೮೦ ,,
೫.	ಬೆಳವಿ	೨೦೫೬ ,,	೧೮.	ಬಂಟಮುರಿ.	೨೧೪೫ ,,
೬.	ಘೋಡಗೇರಿ	೨೦೩೮ ,,		ಗುಡ್ಡ	೨೪೯೧ ,,
೭.	ಗುಡಸ	೨೦೪೦ ,,	೧೯.	ಯಾದಗುಡ್ಡ	೨೩೭೪ ,,
೮.	ಹೆಬ್ಬಾಳ	೨೦೫೫ ,,	೨೦.	ಎಲಿಮನೋಳಿ	೨೨೩೬ ,,
೯.	ಹುಲ್ಲೋಳಿ	೨೦೧೭ ,,	೨೧	ಕೊಚರಿ	೨೦೯೦ ,,
೧೦.	ಕಮತನೂರ	೨೨೨೪ ,,	೨೨.	ಸಾದಾಪುರ	೨೨೮೭ ,,
೧೧.	ಕಣಗಲಿ	೨೧೫೬ ,,	೨೩.	ನೇರ್ಲಿ	೨೨೫೬ ,,
೧೨.	ಕರಜಗಿ	೨೧೩೮ ,,	೨೪.	ಕರಗುಪ್ಪಿ	೨೧೮೬ ,,
೧೩.	ಕುರಣಿ	೨೧೯೬ ,,	೨೫.	ಎಮಕನಮರಡಿ	೨೨೦೫ ,,
೧೪.	ಮಜಲಿ	೨೧೦೮ ,,	೨೬	ಸಂಕೇಶ್ವರ	೨೧೦೯ ,,

ಗೋಕಾಕ ತಾಲೂಕ.

೧.	ಗೋಕಾಕ	೧೮೦೫ ಫೂ.	೪.	ಅರಭಾವಿ	೧೮೫೩ ಫೂ.
	ಗುಡ್ಡ	೨೪೩೪ ,,	೫.	ಬೆಟಗೇರಿ	೧೯೨೦ ,,
೨.	ಅಕ್ಕತಂಗಿಯರಹಾಳ	೨೨೧೫ ,,	೬.	ಹಳ್ಳೂರ	೧೮೫೫ ,,
೩.	ಅಂಕಲಗಿ	೨೧೯೩ ,,	೭.	ಹಂದಿಗುಂದ	೧೯೫೦ ,,
	ಗುಡ್ಡ	೨೫೩೩ ,,	೮.	ಹೂಸಕೋಟಿ	೧.೪೬೦ ,,
				ಗುಡ್ಡ	೨೧೫೮ ,,

೯. ಹುಣಸಾಳ	೧೭೬೨ ಫ್ರೊ.	೨೧ ಸಿಂದೀಕುರಬೆಟ್ಟ	೨೦೬೦ ಫ್ರೊ
೧೦. ಕಲ್ಲೋಳಿ	೧೯೦೧ ,,	ಗುಡ್ಡ	೨೩೨೦ ,,
೧೧. ಕಾಮನಕಟ್ಟಿ	೧೪೯೭ ,,	೨೨. ತವಗ	೨೧೮೨ ,,
೧೨. ಕೊಣ್ಣೂರ	೨೦೬೩ ,,	೨೩. ಯಾದವಾಡ	೧೮೯೭ ,,
೧೩. ಕೌಜಲಗಿ	೨೦೪೩ ,,	ಗುಡ್ಡ	೧೯೬೫ ,,
೧೪. ಕುಲಿಗೋಡ	೧೮೫೫ ,,	೨೪. ವೆಂಕಟಾಪುರ	೧೯೯೨ ,,
೧೫. ಮಾಲದಿನ್ನಿ	೧೮೬೨ ,,	ಗುಡ್ಡ	೨೦೬೨ ,,
೧೬. ಮುಲ್ಲಾಪುರ	೨೦೫೨ ,,	೨೫. ಸುಣದೋಳಿ	೧೮೬೦ ,,
೧೭. ಮೂಡಲಗಿ	೨೦೫೯ ,,	೨೬. ಹುಲಕುಂದ	೨೦೪೦ ,,
೧೮. ಮೂಡಲಗಿ	೧೮೨೨ ,,	ಗುಡ್ಡ	೨೨೪೮ ,,
೧೯. ಮುಗಳಖೋಡ	೧೯೬೬ ,,	೨೭. ಮಾನಿಕೆರಿ	೨೦೪೩ ,,
೨೦ ನಾಗನೂರ	೧೮೪೦ ,,	ಗುಡ್ಡ	೨೩೭೬ ,,

ಸಂಪಗಾವ ತಾಲೂಕ.

೧. ಸಂಪಗಾವಿ	೨೨೮೩ ಫ್ರೊ.	೧೪. ದೇವಲಾಪುರ	೨೨೦೪ ಫ್ರೊ.
೨. ಅಮಟೂರ	೨೨೦೪ ,,	೧೫. ಗಜಮನಹಾಳ	೨೪೪೪ ,,
೩. ಅಂಬಡಗಟ್ಟಿ	೨೧೭೮ ,,	೧೬. ಹಣಬರಹಟ್ಟಿ	೨೪೫೦ ,,
೪. ಆನಿಗೋಳ	೨೧೯೩ ,,	ಗುಡ್ಡ	೨೭೭೯ ,,
೫. ಅವರಾದಿ	೨೪೧೧ ,,	೧೭. ಹಣ್ಣೀಕೇರಿ	೨೨೮೫ ,,
೬. ಬೈಲಹೊಂಗಲ	೨೨೪೧ ,,	೧೮. ಹಿರೇನಂದೀಹಳ್ಳಿ	೨೨೭೨ ,,
೭. ಬೈಲೂರ	೨೨೫೬ ,,	೧೯. ಹೊಳಿನಾಗಲಾಪುರ	೨೧೧೭ ,,
೮. ಬಸಾಪೂರ	೨೩೪೫ ,,	೨೦. ಹೂಸೂರ	೨೧೫೨ ,,
೯. ಬೆಳವಡಿ	೨೧೬೮ ,,	೨೧. ಹೂಲಿಕಟ್ಟಿ	೨೨೬೯ ,,
೧೦. ಬುಡರಕಟ್ಟಿ	೨೨೮೭ ,,	೨೨. ಹುಣಸಿಕಟ್ಟಿ	೨೦೮೩ ,,
೧೧. ಬೂದಿಹಾಳ	೨೨೦೩ ,,	೨೩. ಕಾದರೊಳ್ಳಿ	೨೦೮೩ ,,
೧೨. ದೇಶನೂರ	೨೫೨೦ ,,	೨೪. ಕಿತ್ತೂರ	೨೩೪೫ ,,
ಗುಡ್ಡ	೨೬೫೮ ,,	೨೫. ಖಾದಾಸಪುರ	೨೧೬೦ ,,
೧೩. ದೇವಗಾವ	೨೩೨೪ ,,	೨೬. ಮರಿಕಟ್ಟಿ	೩೧೬೯ ,,

೭. ನೇಗಿನಹಾಳ	೨೦೮೫ಫೂ.	೩೫. ತೂರಮರಿ	೨೩೦೪ಫೂ.
೮. ನೇಸರಿಗಿ	೨೪೪೭ ,,	೩೬. ಉಡಿಕೇರಿ	೨೧೯೩ ,,
೯. ಸಂಗೊಳ್ಳಿ	೨೦೪೩ ,,	೩೭. ಉಗರಖೋಡ	೨೪೨೨ ,,
೧೦. ಸೀಗಿಹಳ್ಳಿ	೨೪೨೨ ,,	೩೮. ಬಕ್ಕುಂದ	೨೧೫೪ ,,
೧೧. ಸುತಗಟ್ಟಿ	೨೯೦೭ ,,	೩೯. ವಣ್ಣೂರ	೨೪೪೪ ,,
೧೨. ತಿಗಡಿ	೨೨೮೩ ,,	೪೦. ಬೈಲವಾಡ	೨೧೬೩ ,,
೧೩. ತಿಗಡೊಳ್ಳಿ	೨೩೩೬ ,,	೪೧. ಮಾದನಭಾವಿ	೨೫೩೦ ,,
೧೪. ತುರಕರಸೀಗಿಹಳ್ಳಿ	೨೪೫೬ ,,	೪೨. ಮುಗಟಖಾನಹುಬ್ಬಳ್ಳಿ	೨೧೬೪ ,,

ಖಾನಾಪುರ ತಾಲೂಕ.

೧. ಖಾನಾಪುರ	೨೧೫೩ಫೂ.	೧೨. ತೋಲಗಿ	೨೨೦೩ಫೂ.
೨. ಬೀಡಿ	೨೧೯೪ ,,	೧೩. ನಾಗರಗಳ್ಳಿ ಗುಡ್ಡ	೨೯೬೪ ,,
೩. ಚಿಕ್ಕಹಟ್ಟೀಹಳ್ಳಿ	೨೦೮೨ ,,	೧೪. ಡೋಂಗರಗಾವ	೨೫೬೭ ,,
೪. ದೇವಲತ್ತಿ	೨೨೨೯ ,,	ಗುಡ್ಡ	೩೩೬೨ ,,
೫. ಹಲಸಿ	೨೧೮೯ ,,	೧೫. ಕಸಬಾನಿರಸ	೨೨೨೬ ,,
೬. ಹಂದೂರ	೨೨೫೦ ,,	ಗುಡ್ಡ	೨೬೯೩ ,,
೭. ಹಿರೇಮನೋಳಿ	೨೦೮೨ ,,	೧೬. ದೇವಗಾವ ಗುಡ್ಡ	೨೯೬೫ ,,
೮. ಇಟಗಿ	೨೨೬೪ ,,	೧೭. ಹುಲ್ಲಂದ	೨೩೧೩ ,,
೯. ಕಕ್ಕೇರಿ	೨೨೩೫ ,,	೧೮. ಚೋರ್ಲಾ	೨೫೬೧ ,,
೧೦. ನಂದಗಡ	೨೩೪೦ ,,	ಗುಡ್ಡ	೨೩೫೬ ,,
ಗುಡ್ಡ	೩೦೦೧ ,,	೧೯. ಜಾಂಬೋಟಿ	೨೬೯೪ ,,
೧೧. ಪಾರ್ಶವಾಡ	೨೨೫೦ ,,	ಗುಡ್ಡ	೩೩೫೬ ,,

ಪರಸಗಡ ತಾಲೂಕ.

೧. ನವದತ್ತಿ	೨೩೨೪ಫೂ.	೫. ಚಚಡಿ	೨೪೮೦ಫೂ.
೨. ಅಸುಂಡಿ	೨೧೪೬ ,,	೬. ಚುಳಕಿ	೨೨೩೬ ,,
೩. ಬಸಿಡೋಣಿ	೨೩೯೩ ,,	೭. ಚುಂಚನೂರ	೧೯೫೨ ,,
೪. ಬೆಟಸೂರ	೨೨೮೩ ,,	೮. ಗುರ್ಲಹೊಸೂರ	೨೧೧೩ ,,

೯. ಹೆಂಚಿನಾಳ	೨೦೦೩ ಫೂ.	೨೪. ಮುತ್ತವಾಡ	೨೫೩೩ ಫೂ.
೧೦. ಹಾರೊಬಿಡಿ ಹೊಂಗಲ	೨೦೭೬ ,,	೨೫. ಸತ್ತೀಗೇರಿ	೨೨೦೪ ,,
೧೧. ಹಾರೂಗೊಪ್ಪ	೨೫೦೧ ,,	೨೬. ಶಿರಸಂಗಿ	೨೦೧೮ ,,
೧೨. ಹಿರೇಕೊಪ್ಪ	೨೨೨೦ ,,	೨೭. ಶಿವಾಪುರ	೧೯೫೨ ,,
೧೩. ಹಿರೇಕುಂಬಿ	೨೪೯೩ ,,	೨೮. ಸೊಪ್ಪಡ್ಲ	೨೨೫೭ ,,
೧೪. ಹೊಸೂರ	೨೧೦೬ ,,	೨೯. ಸುತಗಟ್ಟಿ	೨೧೧೭ ,,
೧೫. ಹೂಲಿ	೨೩೮೧ ,,	೩೦. ತಲ್ಲೂರ	೨೧೭೯ ,,
೧೬. ಇಂಚಲ	೨೫೩೩ ,,	೩೧. ಉಗರಗೋಳ	೨೩೧೯ ,,
೧೭. ಈಡಬಿ	೨೧೦೫ ,,	೩೨. ಎಡರಾವಿ	೨೦೯೦ ,,
೧೮. ಕರೀಕಟ್ಟಿ	೨೧೦೫ ,,	೩೩. ಎಕ್ಕುಂಡಿ	೨೧೪೨ ,,
೧೯. ಕೆಂಚರಾಮನಾಳ	೨೧೯೭ ,,	೩೪. ಎರಗಟ್ಟಿ	೨೧೯೩ ,,
೨೦. ಮುನವಳ್ಳಿ	೨೧೩೧ ,,	೩೫. ಎರಝುರವಿ	೨೩೪೩ ,,
೨೧. ಮರಕುಂಬಿ	೨೨೫೩ ,,	ಎಲ್ಲಮ್ಮನಗುಡ್ಡದ ಹಚ್ಚು ಎತ್ತರ	೨೬೯೧ ರಿಂದ ೨೭೫೮ ರವರೆ
೨೨. ಮುಗಳೀಹಾಳ	೨೦೦೨ ,,		
೨೩. ಮುರಗೋಡ	೨೩೨೯ ,,		
ಗುಡ್ಡ	೨೫೭೦ ,,		

ಪತ್ರವ್ಯವಹಾರವು.

ಮೆ. ರಾ. ರಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಮಹಾರಾಯರ ಸನ್ನಿಧಿಗೆ.—ಸಾ. ನಮಸ್ಕಾರಗಳು. ಕೆಳಗಿನ ಪತ್ರವನ್ನು ತಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಿಸಬೇಕೆಂದು ವಿನ್ನಯಿಸುತ್ತೇನೆ:—

ಸುಧಾರಿಸಿದ ಹೋಳೀಹುಣ್ಣಿವೆ.

ಹೋಳೀಹುಣ್ಣಿವೆಯ ಧ್ಯೇಯವು (ಅಂದರೆ ಅದರಿಂದ ಹಿಂದೂಸಮಾಜವು ಕಲಿಯುತಕ್ಕ ಬೋಧವು) ಯಾವದು? ಎಂದು ತುಸು ವಿಚಾರಿಸಿದರೆ ಈ ಹಬ್ಬದಲ್ಲಿ ಕಾಮದಹನವೇ ಮುಖ್ಯವಾದ ವಿಧಿಯಿರುವದರಿಂದ, ಜನರು ವಿಷಯಾಂಧರಾಗದೆ, ಮದನನ ಬಲಿಗೆ ಸಿಲುಕದೆ, ಶ್ರೀಮಹಾದೇವರಂತೆ ಆತನನ್ನು (ಕಾಮವಾಸನೆಯನ್ನು) ನಿಗ್ರಹಿಸಿ, ಆತ್ಮಸಂಯಮವ

ಮೂಡಿ ಕೇವಲ ಪತ್ನೀವ್ರತದಿಂದ ನಡೆಯಬೇಕು, ಎಂಬ ಉಜ್ವಲವಾದ ನೀತಿತತ್ವವನ್ನು ಹಬ್ಬದದ್ವಾರದಿಂದ ಸಮಾಜಕ್ಕೆ ತಿಳಿಸಬೇಕೆಂಬದೇ. ಇದರಲ್ಲಿ ಶ್ರೀಶಂಕರನ ಈ ಲೀಲೆಯೇ ವಿಶೇಷ ಕೌತುಕದಿಂದ ಜನರ ಕಣ್ಣಮುಂದೆ ಬರುವದು ಸ್ವಾಭಾವಿಕವೂ ಇಷ್ಟವೂ ಆಗಿರುವದು. ಹೀಗಿದ್ದು, ಈಗ ಹೋಳಿಯ ಹಬ್ಬದಲ್ಲಿ ನಡೆಯುವ ಅಸಹ್ಯವಾದ ನಿಂದ್ಯ ಪ್ರಕಾರವನ್ನೆಲ್ಲ ನೋಡಿದರೆ, ಯಾರಿಗೆ ತಾನೇ ವಿಷಾದವಾಗಲಾರದು!! ಇದರಿಂದ ಸಮಾಜಕ್ಕೆ ತಿಲಮಾತ್ರವಾದರೂ ನೀತಿ-ಸದಾಚಾರಗಳ ಬೋಧವಾಗದೆ, ತಿರುಗಿ ಅನೀತಿ ಅನಾಚಾರಗಳ ದೃಢವಾದ ಪರಿಪಾಮವು ಆಗುತ್ತದೆಂದರೆ ಅದರಲ್ಲೇನು ಅತಿಶಯೋಕ್ತಿಯಾಗಲಿಕ್ಕಿಲ್ಲ. ಅದಕಾರಣ ವಂಟ ಮುರಿಯ ಜನರು ಈ ವರ್ಷ ಹೋಳೀಹುಣ್ಣಿವೆಯ ಸ್ವರೂಪವನ್ನು ತೀರ ಬದಲಿಸಿ ಕೆಳಗೆ ಬರೆದಂತೆ ಹೊಸ ಪದ್ಧತಿಯನ್ನು ಸ್ವೀಕರಿಸಿದರು:—

೧. ಹೊಯ್ಕೊಳ್ಳುವದನ್ನು ತೀರ ವರ್ಜಿಸಿ ಅದರ ಬದಲು "ಶಿವ ಹರ ಹರ ಮಹಾದೇವ" ಎಂದು ಶ್ರೀಶಂಕರನ ಜಯಘೋಷವನ್ನು ಅಡಿಗಡಿಗೆ ಮಾಡಿದರು.

೨. ಧೂಳವಾಡದ ದಿನ ಮುಂಜಾನೆ ಬೂದಿ, ಸಗಣಿ, ರಾಡಿ, ಬಣ್ಣ ಮೊದಲಾದ ಹೊಲಸು ಪದಾರ್ಥಗಳೊಡನೆ ಆಡುವವರ ನೆನಪು ಸಹ ಯಾರೂ ತೆಗೆಯದೆ, ಮಹಾದೇವರ ಯೋಗನಿದ್ರಿಸ್ಥವಾದ ಕಾಮದಹನವಾಡಿದ ಶ್ರೀರುದ್ರಪ್ರತಿಮೆಯನ್ನು ಪಲ್ಲಕ್ಕಿಯಲ್ಲಿರಿಸಿಕೊಂಡು ಸಕಲ ಸಮಾರಂಭದೊಡನೆ ಅತ್ಯುಲ್ಲಾಸದಿಂದ ಮೆರವಣಿಗೆ ತೆಗೆದರು. ಪಲ್ಲಕ್ಕಿಯ ಮುಂದೆ ಶಿವಭಜನೆಯ ನಾಮಘೋಷವು ನಡೆದಿತ್ತು. ಶಾಲಾವಿದ್ಯಾರ್ಥಿಗಳ ಬೋಧಪರವಾದ ಹೊಸಹೋಳಿಯ ಹಾಡು ಚಿಣಿಕೋಲಿನೊಳಗೆ ನಡೆದಿತ್ತು. ಕರಡಿ, ಡೊಳ್ಳು ಮೊದಲಾದವುಗಳ ನಾದವು ದಿಕ್ತಟಗಳನ್ನು ತುಂಬಿತ್ತು. ಪ್ರೇಕ್ಷಕರ ಸಮೂಹದಿಂದ ಜಿಣಿ ತುಂಬಿತುಳುಕುತ್ತಿತ್ತು. ಪಲ್ಲಕ್ಕಿಯ ಹಿಂದೆ ತಾಲಾಗಡುಗಳೂ ಗ್ರಾಮಸ್ಥರೂ ಸೆಟ್ಟಿಸಾವುಕಾರರೇ ಮೊದಲಾದ ನಾಗರಿಕರೂ ನಡೆದಿದ್ದರು. ಪೋಲೀಸರ ಬಂದೋಬಸ್ತು ಚೆನ್ನಾಗಿ ಇಡಲ್ಪಟ್ಟಿತ್ತು. ಈ ವಿಧವಾಗಿ ಹೊರಟ ಪಲ್ಲಕ್ಕಿಯು ಜಿಲ್ಲೆಗೆ ಭಕ್ತಜನರಿಂದ ಪೂಜೆಯನ್ನೂ ಆದರಾತಿಥ್ಯವನ್ನೂ ಹೊಂದುತ್ತ ಬಹುದೂರ ಪ್ರಸಿದ್ಧವಾದ ಬೀದಿಯಲ್ಲೆಲ್ಲ ಮೆರೆಯಿತು. ಆಗ ಜನರು ನೀಗು ನೀಡಿದರು; ಬುಕ್ಕೆಟ್ಟು ಅಷ್ಟಗಂಧ

ಗಳನ್ನು ರುದ್ರಮೂರ್ತಿಗೆ ಸಮರ್ಪಿಸಿ, ಜನರಿಗೆ ವಿನಯದಿಂದಲೂ ಮಿತಿಯಿಂದಲೂ ಧನಿಸಿದರು. ಇದೇ ಧೂಳಿಯಾಟವು. ಜಯಘೋಷವನೆಕಾಕಿನಿಗಳನ್ನು ಗಡಬಿಕ್ಕಿಸಿತ್ತು. ಅವಾಚ್ಯ ಶಬ್ದಕ್ಕೆ ಎಲ್ಲೆಲ್ಲಿಯೂ ಅವಸರವಿರಲಿಲ್ಲ. ಈ ಪ್ರಕಾರ ಸಮಾರಂಭವು ಜರಗುತ್ತ ಜರಗುತ್ತ ೧೧೫ ಘಂಟೆಗೆ ಪರಿಸಮಾಪ್ತವಾಯಿತು.

೩. ರಂಗಪಂಚಮಿಯ ದಿನವಾದರೂ, ಬಣ್ಣವು ಎಲ್ಲೆಲ್ಲಿಯೂ ಕಣಿಗೆ ಬೀಳಲಿಲ್ಲ. ಸಾಯಂಕಾಲದ ೪½ ಘಂಟೆಗೆ ಸಾಲೆಯ ಹುಡುಗರ ಮೆರವಣಿಗೆಯು ಹೊರಟಿತು. ಆಗ ಪ್ರತಿಯೊಬ್ಬ ಹುಡುಗನು ಕೈಯ್ಯಲ್ಲಿ ಪತಾಕೆಯನ್ನು ಧರಿಸಿದ್ದನು. ಪತಾಕೆಗಳು ವಿಧವಿಧ ಬಣ್ಣದವಿದ್ದದ್ದರಿಂದ ನೋಟವು ಪ್ರೇಕ್ಷಕರ ಮನಸ್ಸನ್ನು ಒಳಿತಾಗಿ ರಂಜಿಸುತ್ತಿತ್ತು. ಉಪಯುಕ್ತವಾದ ಶಿವನಾಮಜಯಘೋಷವು ಬಾರಿಬಾರಿಗೆ ನಡದೇ ಇತ್ತು. ಆಗ ಪನ್ನೀರು-ಸುಗಂಧದೆಣ್ಣೆಗಳಿಂದ ಜಿಟ್ಟೆಯಾದ ಜನರನ್ನೆಲ್ಲ ಸತ್ಕರಿಸುತ್ತಿದ್ದರು. ಬಣ್ಣವು ಹುಡುಗರ ಹಸ್ತಧ್ವಜಗಳಲ್ಲಲ್ಲದೆ, ಅನ್ಯತ್ರ ಕಂಡುಬರಲಿಲ್ಲ. ಈ ವಿಧವಾಗಿ ಊರತುಂಬ ಆನಂದದಿಂದ ತಿರುಗಾಡಿದರು.

೪. ಸಾಲೆಯ ಹುಡುಗರು ಈಸಾರೆ ಬಲವಾದ ಮನೋನಿಗ್ರಹವನ್ನು ತೋರಿಸಿದರು. ಕುಳ್ಳು ಕದಿಯುವದು, ಹೊಯ್‌ಕೊಳ್ಳುವದು ಅತ್ಯಾಚಾರದ ಆಟಗಳನ್ನು ಆಡುವದು ಮುಂತಾದದ್ದೇನೂ ಮಾಡಲಿಲ್ಲ.

ಈ ವಿಧವಾಗಿ ವಂಟಮುರಿಯ ಈ ವರ್ಷದ ಹೋಳೀ ಹಬ್ಬವು ಸರ್ವಾಂಗಸುಂದರವಾಯಿತು. ಇದು ಊರ ಜನರಿಗೂ ವಿದ್ಯಾರ್ಥಿಗಳಿಗೂ ಬಹುಭೂಷಣವೂ ಅಭಿಮಾನಾಸ್ಪದವೂ ಆಗಿರುತ್ತದೆ. ಇವರ ಅನುಕರಣವು ಎಲ್ಲಕಡೆಯಲ್ಲಿ ಆಗಿ ಹೋಳೀಹಬ್ಬವು ಸುಧಾರಿಸಿದರೆ, ಹಿಂದು ಸಮಾಜಕ್ಕೆ ಹತ್ತಿರುವ ಒಂದು ದೊಡ್ಡ ಕಲಂಕವು ಅಳಿದು ಹೋಗುವದರಲ್ಲಿ ಹೇಳಿದಂತೆಯೇ ಕೇವಲ ಎಲ್ಲ ಕೃತಿಯ ಅನುಕರಣ ಮಾಡಬೇಕೆಂದಲ್ಲ. ಅದರ ಮರ್ಮವನ್ನು ಮನನಮಾಡಿಕೊಂಡು ತಮ್ಮ ತಮ್ಮ ಬುದ್ಧಿ-ಪರಿಸ್ಥಿತ್ಯನುರೂಪವಾಗಿ ಸಮಾರಂಭದ ಕಾರ್ಯಕ್ರಮವನ್ನು ಗೊತ್ತುಮಾಡಬಹುದು. ಮುಖ್ಯವಾಗಿ ಪತ್ನೀವ್ರತವೇ ಈ ಹಬ್ಬದ ಧ್ಯೇಯವಾಗಿರುತ್ತದೆಂಬದನ್ನು ಪೂರಾ ಲಕ್ಷದಲ್ಲಿಟ್ಟು ತದನುಸಾರವಾಗಿ ವರ್ತಿಸಬೇಕು.

ಮು. ವಂಟಮುರಿ, ಜಿ. ಬೆಳಗಾವ } ಕಲ್ಲಪ್ಪಾ ಸಿದ್ಧಲಿಂಗಪ್ಪಾ ಗೋಟಖಿಂಡಿ
ತಾ. ೧-೪-೧೯೩೩. } ಸ್ಕೂಲ ಕಮಿಟಿದಾರ

☞ ಹೋಳೀಹುಣ್ಣಿವೆಯ ಹಬ್ಬದಲ್ಲಿ ನಡಿಯುವ ಈಗಿನ ಕ್ರಮನಲ್ಲಿ ಸುಧಾರಣೆಯನ್ನು ಮಾಡಲಪೇಕ್ಷಿಸುವವರು ಚಿಕ್ಕಬಾಲಕರ ಸ್ವಾಭಾವಿಕ ಪ್ರವೃತ್ತಿಗನುಸಾರವಾಗಿ ಅವರಿಗೆ ಯೋಗ್ಯವಾದಂಥ ಸುವ್ಯವಸ್ಥಿತವಾದ ಆಟಗಳನ್ನು ಆಡಿಸುವದು ನಮಗೆ ಯುಕ್ತವಾಗಿ ತೋರುತ್ತದೆ.

ಎ. ಶಾ. ಪ.

ಪತ್ರಗಳ ಸಾರಾಂಶ ಮತ್ತು ಪತ್ರಗಳನ್ನು ಕಳುಹಿಸಿದವರಿಗೆ ಸೂಚನೆಗಳು.

ಮಿರಜ ಸಂಸ್ಥಾನದ ಲಕ್ಷ್ಮೇಶ್ವರದಲ್ಲಿ ೧೯೦ ನಂಬರ ಶಾಲೆಯ ಹೆಡ್ ಮಾಸ್ತರರಾದ ಮಿ. ವೀರಪ್ಪಾ ಶಿವಲಿಂಗಪ್ಪಾ ಮುದಗೋಡ ಎಂಬವರು ಒಳಗಡೆಯಲ್ಲಿ ಪೆನ್‌ಶನ್ ತೆಗೆದುಕೊಂಡರು. ಅವರು ೩೪ ವರ್ಷ ಉತ್ತಮ ರೀತಿಯಿಂದ ಕೆಲಸ ಮಾಡಿದ್ದರಿಂದ ಮಿರಜ ಸಂಸ್ಥಾನದ ಅಧಿಪತಿಗಳಾದ ಶ್ರೀಮಂತ ಬಾಳಾಸಾಹೇಬರವರು ತಮ್ಮ ಸಂಸ್ಥಾನವಲ್ಲಿ ಪೆನ್‌ಶನ್ ಕೊಡುವ ನಿಯಮವಿಲ್ಲದಿದ್ದರೂ ಇವರಿಗೆ ಇವರ ಪಗಾರದ ಅರ್ಧ ರಕಮು, ಅಂದರೆ ೧೫ ರೂಪಾಯಿ ತಹಹಯಾತ ಪ್ರೋಟಿಗಿಯೆಂದು ನೇಮಣೂಕ ಮಾಡಿಕೊಟ್ಟಿದ್ದಾರೆ. ಇದಲ್ಲದೆ ಲಕ್ಷ್ಮೇಶ್ವರದ ನಿವಾಸಿಗಳಲ್ಲಿ ಪ್ರಮುಖರಾದವರು ಸದರೀ ವೀರಪ್ಪನವರಿಂದ ತಮಗಾದ ಉಪಕಾರಕ್ಕೆ ಪ್ರತಿಯಾಗಿ ಅವರಿಗೆ ಸ್ವಲ್ಪಾದರೂ ಮಾನವುಯರ್ದಾನೆ ಮಾಡಬೇಕೆಂಬ ಹೇತುವಿನಿಂದ ತಮ್ಮೊಳಗೆ ವರ್ಗಣಿಯಿಂದ ಹಣ ಕೂಡಿಸಿ ತಾ. ೧೭ನೇ ಮಾಹೆ ನವಂಬರ ೧೯೧೭ನೇ ದಿವಸ ಲಕ್ಷ್ಮೇಶ್ವರ ೧೯೦ ನಂಬರ ಶಾಲೆಯಲ್ಲಿ ಶ್ರೀಮಂತ ಬಾಳಾಸಾಹೇಬ ಮಿರಜರವರ ಅಧ್ಯಕ್ಷತೆಯ ಕೆಳಗೆ ದೊಡ್ಡ ಸಭೆ ಕೂಡಿಸಿ ವೀರಪ್ಪನವರಿಗೆ ಮುದ್ರಾಂಕಿತವಾದ ಒಂದು ಚಿನ್ನದುಂಗರವನ್ನೂ, ಒಂದು ಜರದ ರುಮಾಲವನ್ನೂ, ಒಂದು ಜರದ ದೋತರವನ್ನೂ ಮಾನಪತ್ರ ದೊಡನೆ ಬಹುಮಾನವಾಗಿ ಕೊಟ್ಟರೆಂದು ಒಬ್ಬ ಗೃಹಸ್ಥರು ಬರೆಯುತ್ತಾರೆ.

ಮಿ. ರಾಮಾ ಗಣಪ ಹೆಗಡೆ ೧೯೦ ಅ|| ಮಾಸ್ತರ ಶಾಳಾ ಹೊಲನಗದ್ದೆ ತಾ|| ಕುಮಟಾ ಇವರು, ಗುಣಾಕಾರದ ಮೇಲಿಂದ ಅನನ್ನು ಉಂಟು

ಮಾಡಿದ ಗುಣ್ಯ ಗುಣಕಗಳು ಹೆಚ್ಚು ಕಡಿಮೆ ಇದ್ದರೂ ಅವುಗಳಲ್ಲಿರುವ ಅಂತರವಾಗಲಿ ಬೇರೀಜಾಗಲಿ ತಿಳಿದರೆ ಆ ಎರಡೂ ಗುಣ್ಯ ಗುಣಕಗಳನ್ನು ಬೇರೆ ಬೇರೆ ತೆಗೆಯುವ ರೀತಿಯ ಸ್ಪಷ್ಟೀಕರಣವನ್ನು ಕ್ಷೇತ್ರಾಕೃತಿಯಿಂದ ಮಾಡಿಕಳುಹಿಸಿದ್ದಾರೆ. ಈ ರೀತಿಯು ಬಹುಶಃ ೨ನೇ ವರ್ಷದ ಟ್ರೇಂಡ ಶಿಕ್ಷಕರಿಗೆ ಗೊತ್ತಿರುವದರಿಂದ ಅದನ್ನು ಮುದ್ರಿಸುವ ಅವಶ್ಯಕತೆ ತೋರುವದಿಲ್ಲ.

ಶಾಲೆಯ ಹುಡುಗರಿಗೆ ಬುದ್ಧಿವಾದ ಎಂಬ ಸುಮಾರು ೫೦ ಪುಟಗಳ ಲೇಖನವನ್ನು ವಿ. ವೆಂಕಟೇಶ ರಾಮಚಂದ್ರ ಪ್ರಭು ಎಂಬವರು ಶಾಲಾಪತ್ರಿಕೆಯಲ್ಲಿ ಮುದ್ರಿಸುವದಕ್ಕೆ ಕಳುಹಿಸಿದ್ದಾರೆ. ಲೇಖನವು ಸುಲಭ ಶೈಲಿಯಿಂದ ಬರೆದದ್ದೂ ಹುಡುಗರಿಗೆ ಉಪಯುಕ್ತವಾದದ್ದೂ ಆದೆ. ಆದರೆ ಅದನ್ನು ಶಾಲಾಪತ್ರಿಕೆಯಲ್ಲಿ ಮುದ್ರಿಸಲು ಸ್ಥಳವಿಲ್ಲ. ಲೇಖಕರು ಅದನ್ನು ಸ್ವತಂತ್ರ ಪುಸ್ತಕವಾಗಿ ಮುದ್ರಿಸಬಹುದು.

ವಿ. ಚಿದಂಬರ ಅನಂತಭಟ್ಟ ರಾಮದುರ್ಗಕರ ಇವರು "ಸತಿಯೇ ಸರ್ವಕೆ ಸಾಧನಂ" ಎಂಬ ಸ್ತ್ರೀ ಶಿಕ್ಷಣ ಸಂಬಂಧದ ಲೇಖನವನ್ನು ಬರೆದು ಕಳುಹಿಸಿದ್ದಾರೆ. ಶಾಲಾಪತ್ರಿಕೆಯ ವಾಚಕರಲ್ಲಿ ಸ್ತ್ರೀಶಿಕ್ಷಣದ ಮಹತ್ವದ ಬಗ್ಗೆಯೂ ಅವಶ್ಯಕತೆಯ ಬಗ್ಗೆಯೂ ಸಂಶಯವಿದ್ದವರು ಬಹುಶಃ ಇಲ್ಲವೆಂದು ನಾವು ತಿಳಿಯುತ್ತೇವೆ. ಆದಕಾರಣ ಇವುಗಳನ್ನೇ ಪ್ರತಿಪಾದಿಸುವ ಪ್ರಸ್ತುತ ಲೇಖನಕ್ಕೆ ಶಾಲಾಪತ್ರಿಕೆಯಲ್ಲಿ ಸ್ಥಳವನ್ನು ಕೊಡಲಾರವು.

ಪುಸ್ತಕಗಳ ಮೇಲೆ ಅಭಿಪ್ರಾಯ.

ಬಾಲರಾಮಾಯಣ:— ವಿ. ಗುಂಡೋ ಶ್ರೀನಿವಾಸ ನರಗುಂದ ಅ. ಮಾಸ್ತರ, ಧಾರವಾಡ ಹಾಯಸ್ಕೂಲ ಇವರು ಬರೆದದ್ದು. ಈ ಪುಸ್ತಕದಲ್ಲಿ ರಾಮಾಯಣದೊಳಗಿನ ಮನೋರಂಜಕವಾದಂಥ ಬೋಧಪ್ರದವಾದಂಥ ಕಥೆಗಳು ಸಂಗ್ರಹಿಸಲ್ಪಟ್ಟಿವೆ. ನೀತಿ, ಶೌರ್ಯ, ವ್ಯವಹಾರಚಾತುರ್ಯ ಇವೇ ಮೊದಲಾದ ಗುಣಗಳನ್ನು ಒಳಕೊಂಡಂಥ ರಾಮಾಯಣ-ಮಹಾಭಾರತಗಳೊಳಗಿನ ಕಥೆಗಳನ್ನು ನಾವು ನಮ್ಮ ಅಜ್ಜ-ಅಜ್ಜಿಯರ ತೊಡೆಯ ಮೇಲೆ ಕುಳಿತು ಕೇಳುತ್ತಿದ್ದೆವು. ಅವರ ಆಗಿನ ಪರಿಪಾಠವು ಈಗ ಲುಪ್ತ

ಶಾಲಾಪತ್ರಿಕೆ

ಪುಸ್ತಕ ೪೯. | ಅಗಷ್ಟ ೧೯೧೩. | ಸಂಚಿಕೆ ೮.

ಸ್ಫುಟ ವಿಷಯಗಳು.

೧. ಇಂದಿನ ವರೆಗೆ ರಸಾಯನಶಾಸ್ತ್ರಜ್ಞರು ಸುಮಾರು ಎಪ್ಪತ್ತು ಮೂಲತತ್ವಗಳು ಸೃಷ್ಟಿಯಲ್ಲಿರುವವೆಂದು ಶೋಧಿಸಿದ್ದಾರೆ. ಆದರೆ ಈ ಮೂಲತತ್ವಗಳಲ್ಲಿ ಒಂದೊಂದೇ ವಿಶ್ರಪದಾರ್ಥಗಳಿರುತ್ತವೆಂದು ಈಗೀಗ ಗೊತ್ತಾಗಹತ್ತಿದೆ. ನೀರು ಮೂಲ ದ್ರವ್ಯವೆಂದು ಪ್ರಾಚೀನರು ತಿಳಿದಿದ್ದರು. ಈಗ ಅದು ಆಕ್ಸಿಜನ್-ಹೈಡ್ರೋಜನ್ನವಾಯುಗಳ ರಸಾಯನಿಕ ವಿಶ್ರಣದಿಂದುಂಟಾಗಿದೆಯೆಂದು ಗೊತ್ತಾಗಿದೆ. ಮೊನ್ನೆ ಮೊನ್ನೆ ಕೇಂಬ್ರಿಜ ಪಟ್ಟಣದ ಪ್ರಖ್ಯಾತ ಪಂಡಿತರಾದ ಜೆ. ಜೆ. ಟಾಮಸನ್ ಎಂಬವರು ರಾಯಲ್ ಸೊಸಾಯಿಟಿಯವರ ಮುಂದೆ ಒಂದು ನಿಬಂಧವನ್ನೋದಿದರು. ಅದರಲ್ಲಿ ಅವರು ವಿದ್ಯುತ್‌ಕಿರಣಗಳ ಸಾಧನದಿಂದ ತಮಗೆ ಗೊತ್ತಾದ ಬೇರೆ ಎರಡು ಮೂಲತತ್ವಗಳಿರುವವೆಂದು ಹೇಳಿ, ಒಂದಕ್ಕೆ ಎಕ್ಸ ೩ ಎಂಬ ಹೆಸರನ್ನು ಕೊಟ್ಟಿರುವೆವೆಂದೂ, ಮತ್ತೊಂದು ಇಂದಿನವರೆಗೆ ಮೂಲತತ್ವವೆಂದೆಣಿಸಲ್ಪಡುತ್ತಿದ್ದು ನೈಟ್ರಿನ ಎಂಬ ವಾಯುವಿನ ಪೃಥಕ್ಕರಣದಿಂದ ಹೊರಟಿರುವದೆಂದೂ ಉಲ್ಲೇಖಿಸಿದ್ದಾರೆ. ಎಕ್ಸ ೩ ಈ ಮೂಲತತ್ವವು ಈಥೋಡ್ ಎಂಬ ವಿದ್ಯುತ್‌ಕಿರಣಗಳಿಂದ ಎರಡು ಘನವದಾರ್ಥಗಳನ್ನು ಒಂದರಮೇಲೊಂದು ಅಪ್ಪಳಿಸುವದರಿಂದ ಉಂಟಾಗುವದೆಂದು ಹೇಳಿರುವರು.

ಹೊಸವೆರಡು ಮೂಲತತ್ವಗಳು.

---

೨. ಮೈಸೂರ ಮಹಾರಾಜರ ವರ್ಧಂತಿಯ ಉತ್ಸವಕ್ಕೆಂದು ರಾಜಧಾನಿಯಲ್ಲಿ ಅನೇಕಜನ ಯುರೋಪಿಯನ್ನರೂ, ಭಾರತೀಯರೂ ಒಟ್ಟುಗೂಡಿದ ಸಂಧಿಯನ್ನು ಸಾಧಿಸಿ, ಆ ಸಂಸ್ಥಾನದ ಈಗಿನ ದಿವಾಣರಾದ

ಮ. ರಾ. ವಿಶ್ವೇಶ್ವರಯ್ಯನವರು ದೇಶದ ಸಂಪದಭಿವೃದ್ಧಿಯ ವಿಷಯದ್ದೊಂದು ಪರಿಷತ್ತನ್ನು ಕೂಡಿಸಿದ್ದರು. ದಿವಾಣಬಾಹದ್ದೂರವರು ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಮಾಡಿದ ಉಪನ್ಯಾಸವು ಬಹು ಗೌರವದ್ದೆಂದು ಅದರ ಸಾರಾಂಶವನ್ನು ಇದರಡಿಯಲ್ಲಿ ಕೊಟ್ಟಿರುವೆವು:—

ಸಂಪದಭಿವೃದ್ಧಿ ಪರಿಷತ್ತು.

ಹಿಂದುಸ್ತಾನದಲ್ಲಿ ಅಶಿಕ್ಷಿತ ಜನರೇ ಜಾಜ್ತಿಗೆ ಇರುತ್ತಾರೆ. ಬಹುತರವಾಗಿ ಅವರೆಲ್ಲ ಕೃಷಿಯ ಕೆಲಸದಲ್ಲಿ ತೊಡಗಿರುವರು. ಕಲಾಕೌಶಲ್ಯಕ್ಕೂ ಉದ್ಯೋಗವ್ಯಾಪಾರಕ್ಕೂ ಇವರಿಗೂ ಸಂಬಂಧವೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಇಂಥ ಸ್ಥಿತಿಯು ದೇಶವು ಸಂಪನ್ನರಾಷ್ಟ್ರವೆಂದು ಎಂದೂ ಹೇಳಲಿಕ್ಕಾಗದು. ಜಗದ ಎಲ್ಲ ಭಾಗಗಳ ಕೂಡ ಬಳಿಕೆಮಾಡಲಿಕ್ಕೂ ವ್ಯಾಪಾರಮಾಡಲಿಕ್ಕೂ, ಉಗೆಬಂಡಿ, ಉಗೆಹಡಗ, ತಾರಾಯಂತ್ರ ಮುಂತಾದ ಸಾಧನವೈಪುಲ್ಯದಿಂದ ಅನುಕೂಲವಾಗಿರುವದರಿಂದ ಇಡೀ ಭೂಮಂಡಲದಲ್ಲಿ ಎಲ್ಲಿ ನೋಡಿದರೂ ಯಾವತ್ತೂ ಪದಾರ್ಥಗಳ ಬೆಲೆಯು ಒಂದೇ ಸಮನಾಗಲಾರಂಭಿಸಿದೆ. ಇಂಥ ಸ್ಥಿತಿಯಲ್ಲಿ ಉದ್ಯೋಗಕೌಶಲ್ಯ, ವ್ಯವಹಾರಜ್ಞಾನ ಇವುಗಳ ಸಂಪಾದನೆಯನ್ನು ಅವಶ್ಯವಾಗಿ ಮಾಡಿಕೊಳ್ಳತಕ್ಕದ್ದು. ಆದ್ದರಿಂದ ನಮ್ಮ ದೇಶದಲ್ಲಿ ಲೋಕಶಿಕ್ಷಣವು ಬೆಳೆಯಬೇಕೆಂಬದು ಸ್ಪಷ್ಟವಾದಿ. ಮೈಸೂರ ಸಂಸ್ಥಾನದ ಜನಸಂಖ್ಯೆಯು ೫೭ ಲಕ್ಷ ಉಂಟು. ಇವರಲ್ಲಿ ಓದಬರಹ ಬಲ್ಲವರು ೩೪ ಲಕ್ಷ ಜನರಿರುವರು. ಅದೇ, ಸುಧಾರಿಸಿದ ದೇಶಗಳಲ್ಲಿ ಈ ಸಂಖ್ಯೆಯು ನೂಟಕ್ಕೆ ೮೫ ರಿಂದ ೯೫ ರ ವರೆಗೆ ಇರುವದು. ಅಮೇರಿಕೆಯಲ್ಲಿ ಜನಸಂಖ್ಯೆಯ ಮಾನದಿಂದ ಶಿಕ್ಷಣದ ಕೆಲಸಕ್ಕೆ ಪ್ರತಿ ಒಬ್ಬನಿಗೆ ೧೪ ರೂ. ವೆಚ್ಚವಾಗುವದು. ಅದೇ, ಮೈಸೂರಲ್ಲಿ ಪ್ರತಿ ಒಬ್ಬನಿಗೆ ಆರು ಆಣೆ ಖರ್ಚುಬೀಳುವದು. ತಿದುಪಡಿಹೊಂದಿದ ರಾಷ್ಟ್ರಗಳಲ್ಲಿ ಶಾಲೆಗೆ ಹೋಗುವವರ ಸಂಖ್ಯೆಯು ಲೋಕಸಂಖ್ಯೆಯ ೧/೭ ವಿರುವದು. ಅದೇ, ಮೈಸೂರಲ್ಲಿ ಪ್ರಮಾಣವು ೧/೧೫ ವಿರುವದು. ಮೈಸೂರಲ್ಲಿ ಒಂದೂ ವಿದ್ಯಾಪೀಠವು (ಯುನಿವರ್ಸಿಟಿಯು) ಇಲ್ಲ. ಅದೇ, ಮೈಸೂರಪ್ರಾಂತದ ಜನಸಂಖ್ಯೆಯ ಒಂದು ಕಾಲು ಪಾಲು ಇರುವ ಕಾನಡಾ ದೇಶದಲ್ಲಿ ೨೦ ವಿದ್ಯಾಪೀಠಗಳೂ, ೪೫ ಕೋಟಿ ಜನವಸತಿಯುಳ್ಳ ಸಂಯು

ಕ್ತ ರಾಜ್ಯದಲ್ಲಿ ೨೦ ವಿದ್ಯಾಪೀಠಗಳೂ ೨ ಕೋಟಿ ಪ್ರಜಗಳುಳ್ಳ ಜರ್ಮನಿಯಲ್ಲಿ ೨೦ ವಿದ್ಯಾಪೀಠಗಳೂ ಉಂಟು.

ಗ್ರೇಟಬ್ರಿಟನ್-ಆಯರ್ಲಂಡಗಳಲ್ಲಿ ೧೮,೭೯೯ ಜನರಿಗೊಂದರಂತೆ ವರ್ತಮಾನಪತ್ರಗಳಿರುವವು. ಸಂಯುಕ್ತ ಸಂಸ್ಥಾನಗಳಲ್ಲಿ ೪,೦೩೪ ಜನರಿಗೊಂದು ವೃತ್ತಪತ್ರವಿರುವದು. ಮೈಸೂರಲ್ಲಿ ಬರೇ ೩೬ ಪತ್ರಗಳು ಹೊರಡುವವು. ಇದರಿಂದ ಲೋಕಶಿಕ್ಷಣದಲ್ಲಿ ಮೈಸೂರು ಎಷ್ಟು ಹಿಂದಿರುವದೆಂಬದು ಬಿಡಿದು ಕಾಣುವದು. ಉದ್ಯೋಗ, ವ್ಯಾಪಾರ, ಕಲಾಕೌಶಲ್ಯ ಮುಂತಾದವುಗಳಿಗೆ ಶಿಕ್ಷಣಪ್ರಸಾರವು ಅವಶ್ಯವಿರುವದೆಂದು ಜಗತ್ತಿನೊಳಗಿನ ಯಾವತ್ತು ಬುದ್ಧಿವಂತರ ಏಕಮತವದೆ. ಈ ತತ್ವವನ್ನನುಸರಿಸಿದ್ದರಿಂದ ಸುಧಾರಿಸಿದ ದೇಶಗಳು ಧನಕನಕಸಂಪನ್ನವಾಗಿವೆ. ಗ್ರೇಟ ಬ್ರಿಟನ್ನದಲ್ಲಿ ಹುಟ್ಟುವ ಕೈಗಾರಿಕೆಯ ಸರಕುಗಳ ಬೆಲೆಯನ್ನು ನೋಡಿದರೆ ಪ್ರತಿ ಒಬ್ಬನು ೩೨೫ ರೂ. ಬೆಲೆಯ ಸರಕನ್ನು ಹುಟ್ಟಿಸಿದನೆಂದು ಲೆಕ್ಕ ಮಾಡಲಿಕ್ಕೆ ಅಡ್ಡಿ ಇಲ್ಲ. ಅದೇ, ಮೈಸೂರಲ್ಲಿ ಒಬ್ಬನು ೩೦ ರೂ. ಬೆಲೆಯ ಸರಕು ಹುಟ್ಟಿಸಿದನೆಂದು ಲೆಕ್ಕ ಹೊರಡುವದು. ಒಟ್ಟು ಜನಸಂಖ್ಯೆಯಲ್ಲಿ ಬರೆ ಹೊಲದ ಕೆಲಸದಲ್ಲಿ ತೊಡಗಿದವರ ಸಂಖ್ಯೆಯು, ಲೋಕವಸತಿಯ ಪ್ರಮಾಣದಿಂದ ಗ್ರೇಟಬ್ರಿಟನ್ನದಲ್ಲಿ ೪ ವ್ಹೂ, ಜರ್ಮನಿಯಲ್ಲಿ ೩ವ್ಹೂ ಜಪಾನದಲ್ಲಿ ೨½ವ್ಹೂ, ಮೈಸೂರಲ್ಲಿ ೨ ವ್ಹೂ ಇರುವದೆಂದು ಗೊತ್ತಾಗುವದು. ಈ ದೇಶಗಳಲ್ಲಿ ಈ ಉದ್ಯೋಗದಲ್ಲಿ ತೊಡಗಿದ ಪ್ರತಿ ಒಬ್ಬನ ದುಡಿವೆಯು ಗ್ರೇಟಬ್ರಿಟನ್ನದಲ್ಲಿ ೬೦೦ ರಿಂದ ೭೦೦ ರವರೆಗೂ, ಜರ್ಮನಿಯಲ್ಲಿ ೩೦೦ ರವರೆಗೂ, ಮೈಸೂರಲ್ಲಿ ೩೦ ರೂಪಾಯಿಗಳ ವರೆಗೂ ಉಂಟು. ಜಪಾನದ್ದು ಗೊತ್ತಾಗಿಲ್ಲ. ಮೈಸೂರಲ್ಲಿ ಮರಣಪ್ರಮಾಣವು ಸಾವಿರಕ್ಕೆ ೩೦ ರಂತೆ ಉಂಟು. ಸುಧಾರಿಸಿದ ರಾಷ್ಟ್ರಗಳಲ್ಲಿ ಈ ಮಾನವು ೧೫ ರಿಂದ ೧೮ ರ ವರೆಗೆ ಇರುವದು. ಆಯುರ್ದಾಯದ ಸರಾಸರಿ ಪ್ರಮಾಣವು ನಮ್ಮಲ್ಲಿ ೨೫ ವರ್ಷ ಉಂಟು. ಯುರೋಪಿಯನ್ನರಲ್ಲಿ ೪೫ ರಿಂದ ೫೫ ರ ವರೆಗೆ ಇರುವದು.

ಈ ತುಲನಾತ್ಮಕ ವಿವೇಚನದಿಂದ ಉನ್ನತಿಯ ಮಾರ್ಗವಾವದೆಂಬದು ಸಹಜವಾಗಿ ವ್ಯಕ್ತವಾಗುವದು. ಇದಕ್ಕೆ ಜನರ ಅನುಕೂಲವು ಬೇಕು. ಕೇವಲ ಅರಸನ ಸಹಾಯವನ್ನೇ ನಿರೀಕ್ಷಣವಾಡುವದು ಸರಿಯಲ್ಲ. ಉಭ

ಯುತರು ಪರಸ್ಪರರಿಗೆ ನೆರವಾದರೆ ಈ ಉನ್ನತಿಯು ಬೇಗನೆ ಉಂಟಾಗುವದು.

---

೩. ಟಾಮಸ್ ಆಲ್ವಾ ಎಡಿಸನ್ ಇವರು ಈಗಿನ ಕಾಲದ ಶೋಧಕಶಿರೋಮಣಿಗಳಾಗಿರುತ್ತಾರೆ. ಅವರ ಪ್ರಯೋಗ ಶಾಲೆಯ ವರ್ಣನೆಯನ್ನು ಇಲ್ಲಿ ಕೊಡುವೆವು:—

ಎಡಿಸನ್ನನ ಪ್ರಯೋಗ ಶಾಲೆಯು.

ಅಮೇರಿಕಾ ಖಂಡದೊಳಗಿನ ನ್ಯೂಜರ್ಸಿ ಸಂಸ್ಥಾನದ ವೆಸ್ಟ ಆರೇಂಜ ಎಂಬ ಸ್ಥಳದಲ್ಲಿ ಈ ಪ್ರಯೋಗಶಾಲೆಯು ಇರುತ್ತದೆ. ಇದಕ್ಕಾಗಿ ನಾಲ್ಕೈದು ಬೇರೆ ಬೇರೆ ಇಮಾರತುಗಳು ಇರುವವು. ಅವು ಒಂದು ದೊಡ್ಡ ವಿಶಾಲವಾದ ಬೈಲಿನಲ್ಲಿ ಕಟ್ಟಲ್ಪಟ್ಟಿರುತ್ತವೆ. ಅವುಗಳ ಸುತ್ತು ಮತ್ತು ಬಹು ಸುಂದರವಾದದ್ದೊಂದು ತೋಟವು ಇರುತ್ತದೆ. ಮುಖ್ಯ ಇಮಾರತು ನಟ್ಟನಡುವೆ ಇರುತ್ತದೆ. ಅದು ಮೂರು ಅಂತಸ್ತಿನದಿದ್ದು ಸುಮಾರು ಎರಡೂವರೆನೂರು ಫೂಟು ಉದ್ದವಾಗಿರುತ್ತದೆ. ಅದರ ಬಳಿಯಲ್ಲಿಯೇ ನಾಲ್ಕು ಇಮಾರತುಗಳು ಕಟ್ಟಲ್ಪಟ್ಟಿರುತ್ತವೆ. ಅವು ಒಂದೊಂದೇ ಮಜಲಿನವಿದ್ದು ನೂರು ನೂರು ಫೂಟು ಎತ್ತರವಾಗಿರುತ್ತವೆ. ಈ ಎಲ್ಲ ಇಮಾರತುಗಳಲ್ಲಿ ಯಾವಾಗಲೂ ಪ್ರಯೋಗಗಳು ನಡೆದಿರುತ್ತವೆ.

ಈ ಪ್ರಯೋಗ ಶಾಲೆಯ ಒಳಗೆ ಹೊಕ್ಕ ಕೂಡಲೆ ಮೊದಲು ಅಲ್ಲಿಯ ಪುಸ್ತಕಾಲಯವನ್ನು ತೋರಿಸುತ್ತಾರೆ. ಆ ಕೋಣೆಯು ನೂರು ಫೂಟು ಉದ್ದ, ನಾಲ್ವತ್ತು ಫೂಟು ಎತ್ತರ ಇರುತ್ತದೆ. ಅದರಲ್ಲಿ ಎರಡು ದೊಡ್ಡ ಗ್ಯಾಲರಿಗಳು ಇರುತ್ತವೆ. ಒಂದರಲ್ಲಿ ನಾನಾ ಪ್ರಕಾರದ ಖನಿಜ ಪದಾರ್ಥಗಳು ಲಕ್ಷಗಟ್ಟಲೆ ಇಡಲ್ಪಟ್ಟಿರುತ್ತವೆ. ಅವುಗಳಿಗೆ ಪ್ರತಿಯೊಂದಕ್ಕೆ ಹೆಸರಿನ ಚೀಟಿಯನ್ನು ಹಚ್ಚಿ ಅದರ ವರ್ಣನೆಯು ಪುಸ್ತಕವು ಹತ್ತರವೇ ಇಡಲ್ಪಟ್ಟಿರುವದು. ಎರಡನೇ ಗ್ಯಾಲರಿಯಲ್ಲಿ ಗ್ರಂಥಸಂಗ್ರಹವಿರುತ್ತದೆ. ಕಳೆದ ಐವತ್ತು ಅರವತ್ತು ವರ್ಷಗಳಲ್ಲಿ ವಿದ್ಯಾಚಾರಸಂಪನ್ನನಾದ ರಾಷ್ಟ್ರಗಳಲ್ಲಿ ಅಚ್ಚು ಹಾಕಲ್ಪಟ್ಟ ಎಲ್ಲ ಶಾಸ್ತ್ರೀಯ ವಿಷಯಗಳ ಪುಸ್ತಕಗಳು ಈ ಪುಸ್ತಕಾಲಯದಲ್ಲಿ ಇರುತ್ತವೆ. ಅವುಗಳ ಸಂಖ್ಯೆಯು ಸುಮಾರು ಅರವತ್ತು ಸಾವಿರದವರೆಗೆ ಇರುವದು.

ಪುಸ್ತಕಾಲಯದ ಹತ್ತರವೇ ಶಾಸ್ತ್ರೀಯವಸ್ತುಸಂಗ್ರಹಾಲಯವು ಇರುತ್ತದೆ. ಅಲ್ಲಿ ನಾನಾ ಪ್ರಕಾರದ ಪ್ರಯೋಗಗಳನ್ನು ಮಾಡಲಿಕ್ಕೆ ಬೇಕಾಗುವ ಹಲವು ವಿಧದ ದ್ರವ್ಯಗಳು ಎಷ್ಟೋ ವರ್ಷಗಳ ವರೆಗೆ ಸಾಲುವಷ್ಟು ಸಂಗ್ರಹ ಮಾಡಿ ಇಡಲ್ಪಟ್ಟಿರುತ್ತವೆ. ಈ ಕೋಣೆಯು ಅಗಲ ಕಡಿಮೆಯಾಗಿ ಬರೇ ಉದ್ದಕ್ಕೆ ಇರುವದು. ಅದರಲ್ಲಿ ಸಾವಿರಾರು ಪದಾರ್ಥಗಳು ಒಳ್ಳೇ ವ್ಯವಸ್ಥೆಯಿಂದ ಕಪಾಟುಗಳಲ್ಲಿ ಇಡಲ್ಪಟ್ಟಿರುತ್ತವೆ. ಈ ಕಪಾಟುಗಳು ಒಂದರ ಮೇಲೊಂದು ಇಡಲ್ಪಟ್ಟಿರುವದರಿಂದ ಎಲ್ಲಕ್ಕೂ ಮೇಲಿನ ಕಪಾಟು ಛಪ್ಪರಕ್ಕೆ ಹೋಗಿ ಮುಟ್ಟಿರುವದು. ಇಲ್ಲಿರುವ ಎಲ್ಲ ಪದಾರ್ಥಗಳ ಡಬ್ಬಿಗಳ ಮೇಲೆ ಚೀಟಿಗಳು ಹಚ್ಚಲ್ಪಟ್ಟಿರುವವು. ಅವುಗಳಲ್ಲಿ ಸಿಂಪುಗಳು, ಹಲ್ಲಿನ ಎಲುವುಗಳು, ಅಂಟು, ವಾರಜ, ರಾಳ ಇತ್ಯಾದಿ ನಾನಾ ಪ್ರಕಾರದ ಸಾವಿರಾರು ಪದಾರ್ಥಗಳು ಒಳ್ಳೇ ಜತನದಿಂದ ಕಾದಿಟ್ಟಿರುವದನ್ನು ಕಂಡು ಬಹಳ ಆಶ್ಚರ್ಯವಾಗುತ್ತದೆ.

ಈ ಪ್ರಯೋಗಶಾಲೆಯಲ್ಲಿ ಅತಿ ದರ್ಶನೀಯವಾದ ಒಂದು ಕೋಣೆಯು ಇರುತ್ತದೆ. ಅದರಲ್ಲಿ ಎಡಿಸನ್ನನು ಮೊದ-ಮೊದಲು ಮಾಡಿದ ಪ್ರಯೋಗಗಳ ಯಂತ್ರಗಳು ಇದ್ದಕ್ಕಿದ್ದ ಹಾಗೆ ಇಡಲ್ಪಟ್ಟಿರುತ್ತವೆ. ಅವುಗಳಲ್ಲಿ ತನ್ನಿಂದ ತಾನೇ ಬರೆಯುವ ಯಂತ್ರ, ಧ್ವನಿಯನ್ನು ಸಂಗ್ರಹಿಸುವ ಯಂತ್ರ, ಚಿತ್ರ ಸಂಗ್ರಹ ಯಂತ್ರ, ವಿದ್ಯುತ್‌ಸಂಗ್ರಹ ಯಂತ್ರ ಇತ್ಯಾದಿ ನೂರಾರು ಯಂತ್ರಗಳು ಇರುತ್ತವೆ.

ಎಕ್ಸ ಪ್ರಕಾಶಕಿರಣಗಳ ಒಂದು ಕೋಣೆಯು ಬೇರೆಯೇ ಇರುತ್ತದೆ. ಅದರಲ್ಲಿ ಆ ಕಿರಣಗಳ ಸಂಬಂಧದ ಯಂತ್ರಗಳು ಮಾತ್ರ ಇಡಲ್ಪಟ್ಟಿರುತ್ತವೆ. ಈ ಕಿರಣಗಳ ಮೂಲಕವಾಗಿ ಅಪಾರದರ್ಶಕಪದಾರ್ಥಗಳ ಆಚೇ ಮಗ್ಗಲು ಇರುವ ಪದಾರ್ಥಗಳು ಕಾಣುತ್ತವೆ. ಗುಂಡು ಹಾಕಿ ಕೊಲ್ಲಲ್ಪಟ್ಟ ಪ್ರೆಸಿಡೆಂಟರಾದ ಮಿ. ಮೆಕಿನಲೆ ಎಂಬವರ ಮೈಯಲ್ಲಿ ಗುಂಡು ಎಲ್ಲಿ ಸೇರಿಕೊಂಡು ಕುಳಿತಿರುವದೆಂಬದನ್ನು ನೋಡುವದಕ್ಕಾಗಿ ಎಡಿಸನ್ನನು ಕಳಿಸಿದ ಎಕ್ಸ ಪ್ರಕಾಶಕಿರಣಗಳ ಯಂತ್ರವು ಇದೇ ಕೋಣೆಯಲ್ಲಿ ಇರುವದು.

ವಿದ್ಯುದ್ದೀಪ, ಟೆಲಿಫೋನ, ಫೋನೋಗ್ರಾಫ, ಗ್ರಾಮೋಫೋನ, ಇತ್ಯಾದಿ ಎಲ್ಲ ಹೊಸ ಹೊಸ ಯುಕ್ತಿಗಳು ಎಡಿಸನ್ನನ ಪ್ರಯೋಗ ಶಾಲೆಯೊ

ಳಗಿಂದಲೇ ಹೊರಬಿದ್ದಿರುತ್ತವೆ. ವಿದ್ಯುದ್ದೀಪಗಳನ್ನು ಹಚ್ಚುವ ಕಾಚಿನ ಗೋಲಗಳಲ್ಲಿರುವ ಕವಾನಿನ ಆಕಾರದ ತಂತಿಯನ್ನು ಈಗ ಒಂದು ಪ್ರಕಾರದ ಇದ್ದಲಿಯ ಪುಡಿಯಿಂದ ಮಾಡುತ್ತಾರೆ. ಆದರೆ ತತ್ಪೂರ್ವದಲ್ಲಿ ಅದನ್ನು ಗಳಗಳಲ್ಲಿ ಬೊರೆಯುವ ಒಂದು ತರದ ದಾರದಿಂದ ಮಾಡುತ್ತಿದ್ದರು. ಉತ್ತಮ ಪ್ರಕಾರದ ಇಂಥ ದಾರಗಳನ್ನು ಹುಡಿಕಿ ತೆಗೆಯುವದಕ್ಕಾಗಿ ಎಡಿಸನ್ನನು ಇಡೀ ಪೃಥ್ವಿಯೊಳಗಿನ ಹನ್ನೆರಡು ನೂರು ಜಾತಿಯ ಗಳಗಳನ್ನು ತರಿಸಿಕೊಂಡು ಶೋಧಿಸಿದನು. ಅವನು ಉದ್ಯೋಗದ ಪ್ರತ್ಯಕ್ಷ ಅವತಾರವೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಅವನ ಶರೀರ ಪ್ರಕೃತಿಯು ಚನ್ನಾಗಿರಲಿಕ್ಕೆ ಅವನಿಗೆ ಮೂರು ತಾಸು ನಿದ್ದೆಯು ಸಾಕಾಗುತ್ತದೆ. ಯಂತ್ರಗಳು ಸರಿಯಾಗಿ ನಡೆಯುವದಕ್ಕಿಂತ ಅವು ಕೆಟ್ಟ ಕಾಲಕ್ಕೆ ಅವುಗಳಿಂದ ಹೊಸ ಯುಕ್ತಿಗಳೂ ಕಲ್ಪನೆಗಳೂ ತೋಚಿ ಹೊಸ ಹೊಸ ಶೋಧಗಳು ಆಗುತ್ತವೆ, ಎಂಬ ಮಾತು ಅವನ ಬಾಯಿಂದ ಆಗಾಗ್ಗೆ ಹೊರಡುತ್ತದೆ. ಮನುಷ್ಯರು ನಿರೋಗಿಗಳಾಗಿದ್ದಾಗ ಅವರು ವೈದ್ಯ ಶಾಸ್ತ್ರದ ಅಭಿವೃದ್ಧಿಗೆ ಉಪಯೋಗ ಬೀಳುವದಿಲ್ಲ; ಆದರೆ ಅವರ ಶರೀರದ ಪ್ರಕೃತಿಯು ಕೆಟ್ಟಾಗ ಅವರು ಆ ಕೆಲಸಕ್ಕೆ ಉಪಯೋಗ ಬೀಳುತ್ತಾರೆ. ಮೇಲಿನ ಮಾತು ಇದೇ ಅರ್ಥದ್ದಿರುವದು; ಮತ್ತು ನಿಜವೂ ಇರುವದು.

ಬೋರ್ಸ್ಟಲ್ ಮಾದರಿಯ ಸೆರೆಮನೆಯು.

೪. ಅನೇಕ ಸಾರೆ ಅಪರಾಧಗಳನ್ನು ಮಾಡಿ, ಹಲವು ಬಾರಿ ಶಿಕ್ಷೆಯನ್ನು ಅನುಭೋಗಿಸಿ ಮೈಮರಗಟ್ಟಿದಂಥ, ಮನಸಿಗೆ ನಿರ್ಲಜ್ಜತೆಯು ದಡ್ಡಿ ಬಿದ್ದಂಥ ದುಷ್ಟರೊಂದಿಗೆ, ಅರಂಭದ ತಪ್ಪು ಮಾಡಿದ ಕೇವಲ ಎಡೆಗತನದ ಅಪರಾಧಿಯನ್ನು ಸೆರೆಮನೆಯಲ್ಲಿಟ್ಟರೆ, ಈ ತರುಣ ಅಪರಾಧಿಯು ಅವರ ಸಹವಾಸದಿಂದ ಅವರಂತೆ ಆಗಿ, ತನ್ನ ಜನ್ಮವನ್ನು ಹಾಳು ಮಾಡಿಕೊಳ್ಳುವನು, ಮತ್ತು ಸಮಾಜಕ್ಕೆ ಹಿತಕರವಾದ ಘಟಕನಾಗದೆ, ಕಂಟಕನಾಗುವನು; ಉದ್ಯೋಗಶೀಲತೆಯು ಅವನನ್ನು ತೊರೆದು ಹೋಗುವದು; ಸನ್ಮಾರ್ಗವು ಅವನ ಸವಿಾಪಕ್ಕೆ ಬಾರದು. ಈ ಬಗೆಯ ದುಷ್ಪರಿಣಾಮವು ಈ ಪೂರ್ವದ ಸೆರೆಮನೆಗಳ ಸ್ಥಿತಿಯಿಂದುಂಟಾಗುವದೆಂದು ಬಗೆದು ಇಂಗ್ಲಂಡದಲ್ಲಿ ರೊಚೆಸ್ಟರದ ಹತ್ತರ ಬೋರ್ಸ್ಟಲ್ ಎಂಬಲ್ಲಿ

ಬಂದು ವಿಶಿಷ್ಟ ತರದ ಸೆರೆಮನೆಯನ್ನು ಸ್ಥಾಪಿಸಿದ್ದಾರೆ. ಈ ಸೆರೆಮನೆಯಲ್ಲಿ ಕೇವಲ ಮೊದಲನ್ನೇ ತಪ್ಪು ಮಾಡಿ ಶಿಕ್ಷೆ ಹೊಂದಿ ಬಂದ ತರುಣರನ್ನು ದುಷ್ಟ ಅಪರಾಧಿಗಳಿಂದ ಬೇರೆ ಇಟ್ಟು, ಅವರಿಗೆ ಸನ್ಮಾರ್ಗೋಪದೇಶವನ್ನು ಮಾಡಿ, ಅವರ ಮನಸ್ಸು ಮತ್ತೆ ದುರ್ಮಾರ್ಗಕ್ಕೆ ಎಳೆಸದಂತೆಯೂ ಅವರು ಸೆರೆಮನೆಯಿಂದ ಬಿಡುಗಡೆ ಹೊಂದಿದ ಬಳಿಕ ಏನಾದರೊಂದು ಉದ್ಯೋಗವನ್ನು ಮಾಡಿಕೊಂಡು ಸುಖದಿಂದ ಕಾಲಕ್ಷೇಪ ಮಾಡುವಂತೆಯೂ ಉಪಾಯಗಳನ್ನು ಯೋಚಿಸುತ್ತಿರುವರು. ಈ ಪ್ರಯತ್ನವು ಆ ಸೆರೆಮನೆಯಲ್ಲಿ ಅನೇಕ ವಿಧಗಳಿಂದ ಸುಫಲಪ್ರದವಾದದ್ದನ್ನು ಕಂಡು, ಮಿಕ್ಕ ಸುಧಾರಿಸಿದ ರಾಷ್ಟ್ರದವರೂ ಅದರ ಅನುಕರಣವನ್ನು ಮಾಡಿದ್ದಾರೆ. ನಮ್ಮ ದೇಶದಲ್ಲಿ ಬಂಗಾಲ, ಬ್ರಹ್ಮದೇಶ, ಮದ್ರಾಸ ಮುಂತಾದ ಪ್ರಾಂತಗಳಲ್ಲಿ ಈ ಬಗೆಯ ಸೆರೆಮನೆಗಳನ್ನು ಸ್ಥಾಪನೆಮಾಡಿದ್ದಾರೆ. ಇವುಗಳು ಪ್ರಯೋಜನಕರವಾಗಿರುವವೆಂಬದು ಮನವರಿಕೆಯಾಗಿ, ಮುಂಬಯಿ ಸರಕಾರದವರು ಧಾರವಾಡದಲ್ಲಿಪ್ಪ ಸೆರೆಮನೆಯಲ್ಲಿ ಈ ಬಗೆಯ ಸುಧಾರಣೆಯನ್ನುಂಟು ಮಾಡಬೇಕೆಂದು ನಿಶ್ಚಯಿಸಿದ್ದಾರೆ. ಇದು ಅನಂದದ ಸಂಗತಿಯೇ ಸರಿ. ಅಪರಾಧ ಮಾಡುವ ಚಟವು ಮೈಯುಣ್ಣುವದಕ್ಕೆ ಮುಂಚಿತವಾಗಿ ಸನ್ಮಾರ್ಗಕ್ಕೆ ಹಚ್ಚುವ ಉಪಾಯಗಳನ್ನು ಸಕಾಲದಲ್ಲಿಯೇ ಮಾಡಿದರೆ ಅವು ಫಲಪ್ರದವಾಗುವವೆಂದು ಅನೇಕ ರಾಷ್ಟ್ರದ ಮುಂದಾಳುಗಳು ಅಭಿಪ್ರಾಯ ಪಡುತ್ತಾರೆ. ಇಂಗ್ಲಂಡದಲ್ಲಿ ಇಪ್ಪತ್ತು ವರ್ಷಗಳ ಮೊದಲು ಹದಿನಾರರಿಂದ ಇಪ್ಪತ್ತೊಂದು ವರ್ಷದೊಳಗಿನ ಅಪರಾಧಿಗಳ ಸಂಖ್ಯೆಯು ಹದಿನೆಂಟು ಸಾವಿರವಿದ್ದದ್ದು ಈಗ ಎಂಟು ಸಾವಿರಕ್ಕೆ ಬಂದಿರುತ್ತದೆ. ತಪ್ಪುಗಾರರಾದ ಹೆಂಗಸರ ಸಂಖ್ಯೆ ನಾಲ್ಕು ಸಾವಿರದಿಂದ ಬಂದು ಸಾವಿರಕ್ಕೆ ಬಂದಿದೆ.

ಸೆರೆಮನೆಯಲ್ಲಿರುವಾಗ ಅಪರಾಧಿಗಳ ಮನದೊಳಗಿನ ತಪ್ಪುಮಾಡಬೇಕೆಂಬ ಹವಣಿಕೆಯನ್ನು ತೆಗೆದುಹಾಕಲಿಕ್ಕೆ ಯತ್ನಿಸುವದಂತೂ ಅವಶ್ಯವೇ ಸರಿ. ಆದರೆ ಇಷ್ಟಕ್ಕೇ ಇಷ್ಟ ಫಲವು ಕೈಗೂಡುವದೆಂದು ಭಾವಿಸಲಾಗದು. ಕೆಲವರಿಗೆ ಏನೂ ಉದ್ಯೋಗ ಮಾಡಲಿಕ್ಕೆ ಬರುವದಿಲ್ಲ. ಇಂಥವರಿಗೆ ಸೆರೆಮನೆಯಿಂದ ಬಿಡುಗಡೆಯಾಗುವ ಪೂರ್ವದಲ್ಲಿ ಪ್ರಾಮಾಣಿಕತನದಿಂದ ದುಡಿದು ಹೊಟ್ಟೇ ಹೊರಕೊಳ್ಳುವದಕ್ಕೆ ಬರುವಂಥಾ

ದ್ದೊಂದು ಉದ್ಯೋಗವನ್ನು ಕಲಿಸಿ ಬಿಡುವದು ಹೆಚ್ಚು ಅವಶ್ಯವಿರುತ್ತದು. ಯಾಕಂದರೆ ಶಿಕ್ಷೆ ಹೊಂದಿ ಮರಳಿ ಬಂದ ಬಳಿಕ ಅವರಿಗೆ ಉದರನಿರ್ವಾಹದ ಸಾಧನಗಳೇನೂ ದೊರೆಯದ್ದರಿಂದ ಅವರು ಮತ್ತೆ ಅಪರಾಧಗಳನ್ನು ಮಾಡಬೇಕಾಗುವದು. ಇಂಥ ಜನರಿಗೆ ಯೋಗ್ಯ ಉದ್ಯೋಗವನ್ನು ದೊರಕಿಸಿ ಕೊಡುವಂಥ ಸಂಸ್ಥೆಗಳು ಇಂಗ್ಲೆಂಡದಲ್ಲುಂಟು. ಇಂಥ ಸಂಸ್ಥೆಗಳು ತುರಂಗದೊಳಗಿನ ಧಾರ್ಮಿಕ–ನೈತಿಕ–ಶಿಕ್ಷಣಗಳಿಗಿಂತ ಹೆಚ್ಚು ಪರಿಣಾಮಕಾರಕವಾಗಿರುತ್ತವೆಂದು ತುರಂಗಖಾತೆಯ ಇನಸ್ಪೆಕ್ಟರ ಜನರಲ್ ಸಾಹೇಬರು ತಮ್ಮ ೧೯೧೧ನೇ ಇಸವಿಯ ರಿಪೋರ್ಟನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಸೆರೆಮನೆಯಿಂದ ಬಿಡುಗಡೆ ಹೊಂದಿ ಬಂದ ಚಿಕ್ಕ ವಯಸ್ಸಿನವರಿಗೆ ಉದ್ಯೋಗಕ್ಕೆ ಹಚ್ಚುವ ಅಪೇಕ್ಷೆಯು ಸಮಾಜದಲ್ಲುಂಟಾಗಬೇಕು. ಜೀವನಸಾಧನಗಳನ್ನೊದಗಿಸಿಕೊಟ್ಟು ಅವರನ್ನು ಉದ್ಯೋಗಕ್ಕೆ ಹಚ್ಚಿದ ಹೊರ್ತು ತರುಣ ಅಪರಾಧಿಗಳ ಸಂಖ್ಯೆಯು ಕಡಿಮೆಯಾಗದೆಂದೂ, ಕೇವಲ ಬೋರ್ಸ್ಟಲ್ ಪದ್ಧತಿಯು ಸೆರೆಮನೆಯಿಂದ ಇಷ್ಟಾರ್ಥವು ಕೈಗೂಡದೆಂದೂ, ಸಮಾಜದವರು ಈ ಪ್ರಶ್ನೆಯನ್ನು ಕೈಕೊಂಡು ವಿಚಾರಮಾಡಬೇಕೆಂದೂ, ತುರಂಗ ಖಾತೆಯ ರಿಪೋರ್ಟಿನ ಮೇಲೆ ಬರೆದ ಸರಕಾರದ ತರಾವಿನಲ್ಲಿರುವದು. ಈ ಸೂಚನೆಗೆ ಮೂರ್ತಸ್ವರೂಪವನ್ನು ಕೊಡುವದು ಸಮಾಜದ ಕರ್ತವ್ಯವೇ ಸರಿ.

---

೫. ತಾಮ್ರ–ಸತುವುಗಳನ್ನು ತಕ್ಕ ಪ್ರಮಾಣದಿಂದ ಕೂಡಿಸಿದರೆ ಹಿತ್ತಾಳೆಯೆಂಬ ಮಿಶ್ರಧಾತುವಾಗುವದು. ಇದು ಪ್ರಪಂಚದೊಳಗೆ ಅತಿ ಪ್ರಯೋಜನಕರವಾಗಿದೆ. ಪಾತ್ರೆಗಳು, ತಂತಿಗಳು, ಕೀಲಿಗಳು ಮುಂತಾದವುಗಳೆಲ್ಲ ಹಿತ್ತಾಳೆಯಿಂದಾಗುತ್ತವೆ. ಆದರೆ ಈ ಧಾತುವಿನ ಕೊಡವೆಗಳನ್ನು ನಿರಂತರವಾಗಿ ನೀರಲ್ಲಿಟ್ಟರೆ ಕೆಡುವವು. ಈ ಕುಂದನ್ನು ಹೋಗಲಾಡಿಸುವ ಉಪಾಯವನ್ನು ಕುರಿತು ಅನೇಕ ಜನ ಪಂಡಿತರು ಶೋಧ ನಡಿಸಿದರು. ಕಡೆಗೆ ಒಬ್ಬ ಶೋಧಕನು ಅನೇಕ ಪ್ರಯೋಗಗಳನ್ನು ಮಾಡಿ ಈ ಕೆಳಗಿನ ಸಿದ್ಧಾಂತಗಳನ್ನು ಪ್ರಕಟಿಸಿರುವನು:—

ಹಿತ್ತಾಳೆ ಅಲ್ಯುಮಿನಮ್ ಧಾತುಗಳ ಮಿಶ್ರಣವು.

ಹಿತ್ತಾಳೆಯಲ್ಲಿ ನೂರಕ್ಕೆ ಒಂದರಿಂದ ಐದರವರೆಗೆ ಅಲ್ಯೂಮಿನೆಮ್ ವನ್ನು ಕೂಡಿಸಿದರೆ ಆ ಮಿಶ್ರಣದ ಬಣ್ಣವು ನೂರು ಬಣ್ಣದ ಬಂಗಾರದ ಮೋರೆಯ ಮೇಲೆ ಬಡಿಯುವಂಥ ವರ್ಣವನ್ನು ಹೊಂದುವದು; ಐದರಿಂದ ಏಳರವರೆಗೆ ಬೆರಿಸಿದರೆ ಲಕಲಕ ಹೊಳೆಯುವ ಗುಲಾಬೀ ಬಣ್ಣವನ್ನು ಧರಿಸುವದು; ಹತ್ತುಭಾಗದಂತೆ ಮಿಶ್ರಮಾಡಿದರೆ ಚೊಕ್ಕ ಬೆಳ್ಳಿಯಷ್ಟು ಶುಭ್ರವಾಗುವದು. ಈ ಮೂರು ಬಗೆಯ ಮಿಶ್ರಲೋಹವು ನೀರಲ್ಲಿ ಕೆಡುವದಿಲ್ಲ. ಈ ಸಿದ್ಧಾಂತಗಳು ಪ್ರಕಟವಾದಂದಿನಿಂದ, ಇನ್ನು ಮೇಲೆ ನೀರೊಳಗೆ ಮುಳುಗಿ ನಡೆಯುವ ಯುದ್ಧದ ನಾವೆಗಳನ್ನು ಈ ಮಿಶ್ರಧಾತುವಿನಿಂದ ಮಾಡಬೇಕೆಂಬ ವಿಚಾರವು ನಡೆದಿರುತ್ತದೆ.

---

೬. ಹಿಂದುಸ್ತಾನದಲ್ಲಿ ಸುವಾಸನೆಯ ಪುಷ್ಪಗಳಿಗೆ ಕೊರತೆಯಿಲ್ಲ. ಆಯಾ ಋತುಗಳಲ್ಲಿ ಆಗುವ ತರತರದ ಹೂವುಗಳುಂಟು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಈ ಅನುಕೂಲತೆಯಿಲ್ಲ. ಅಲ್ಲಿ ಭಯಂಕರವಾದ ಹಿಮವು ಬೀಳುವದು. ಮತ್ತು ಅವರಲ್ಲಿ ಹೂವುಗಳನ್ನು ಮುಡಿಯುವ ಸೋಸು ಬಹಳ. ಹೂವು ಸಿಗದ್ದರಿಂದ ಕಾಗದ, ಅರಿವೆಗಳಿಂದ ಮಾಡಿದ ಹೂವುಗಳನ್ನು ಮುಡಿಯಬೇಕಾಗುವದು; ಇಲ್ಲವೆ, ಅವರೂಪವಾಗಿ ಬೊರೆಯುವ ಹೂವಿಗೆ ಹೆಚ್ಚು ಹಣವನ್ನು ಕೊಡಬೇಕಾಗುವದು. ಈ ತುಟ್ಟಿಯಕಾಲದಲ್ಲಿ ಹೊಟ್ಟೆ ಬಟ್ಟೆಗಳಿಗೇ ಗಳಿಕೆಯಿಲ್ಲ ವೆಚ್ಚವಾಗುತ್ತದೆ. ಇಂಥ ಪ್ರಸಂಗದಲ್ಲಿ ಹೂಗಳು ಕೆಲವು ದಿವಸದವರೆಗೆ ಅಚ್ಚಳಿಯದೆ ಉಳಿಯುವಂಥ ಉಪಾಯವನ್ನು ಹುಡುಕುವದು ಅವಶ್ಯವೆಂದು ಬಗೆದು ಅನೇಕ ಜನ ಪಾಶ್ಚಾತ್ಯ ಶೋಧಕರು ಯತ್ನನಡಿಸಿದರು. ಈಚೆಗೆ ಅಮೇರಿಕದ ಒಂದು ಯುನಿವ್ಹರ್ಸಿಟಿಯ ಶಾಸ್ತ್ರಜ್ಞರು ನೂರಾರು ಜಾತಿಯ ಹೂಗಳನ್ನು ಪಾನಕವಲ್ಲಿಟ್ಟು ನೋಡಿ ಇಂಥಿಂಥ ಹೂಗಳು ಇಷ್ಟಿಷ್ಟು ಸಕ್ಕರೆ ಕೂಡಿದ ನೀರಲ್ಲಿಡಲು, ಇಷ್ಟಿಷ್ಟು ದಿವಸಗಳ ವರೆಗೆ ಅಚ್ಚಳಿಯದೆ ಇರುವವೆಂದು ಪ್ರಯೋಗದಿಂದ ಮನಗಂಡಿದ್ದಾರೆ. ನಾಲ್ವತ್ತೈದು ಜಾತಿಯ ಗುಲಾಬೀಹೂಗಳು ನೂರುಭಾಗ ನೀರಿಗೆ ಏಳರಿಂದ ಹತ್ತರವರೆಗೆ ಸಕ್ಕರೆ ಕೂಡಿಸಿದ ನೀರಲ್ಲಿಟ್ಟರೆ ನಿಕೃಷ್ಟಪಕ್ಷಕ್ಕೆ ಇಪ್ಪತ್ತು ದಿವಸಗಳ ವರೆಗೆ ತಾಜಾ

ಸುವಾಸನೆಯ ಪುಷ್ಪಗಳನ್ನು ಬಹುದಿವಸ ಕೆಡದಂತೆ ಇಡುವದು.

ಉಳಿಯುವವೆಂದು ಕಂಡು ಹಿಡಿದಿದ್ದಾರೆ. ಇನ್ನು ಮೇಲೆ ಆ ದೇಶದವರಿಗೆ ಹೂವಿಲ್ಲದೆ, ಅಥವಾ ಕೃತ್ರಿಮ ಹೂವುಗಳನ್ನು ಮುಡಕೊಂಡು ವಿಹರಿಸುವ ಪ್ರಸಂಗವು ತಪ್ಪುವದೆಂದು ಆಶಿಸುತ್ತೇವೆ.

ಪ್ಲೇಗಬ್ಬೇನಿಗೆ ಔಷಧ

೮. ಪ್ಲೇಗಬಂದ ಮನುಷ್ಯನಿಗೆ ಟಿಂಕ್ಚರ ಆಫ್ ಆಯೋಡಾಯಿನ್ (Tincture of iodine) ದ ಒಂದು ಹನಿಯನ್ನು ತುಸು ನೀರಿನಲ್ಲಿ ಹಾಕಿ ೨ ತಾಸಿಗೊಮ್ಮೆ ಕುಡಿಸಬೇಕು, ಮತ್ತು ಗಂಟೆಯಮೇಲೆಯೂ ಆಯೋಡೀನವನ್ನು ಹಚ್ಚಬೇಕು. ಅಂದರೆ, ಬಹುತರವಾಗಿ ರೋಗಿಯು ಸಾಯುವದಿಲ್ಲವೆಂದು ಸಾಲ್‌ವ್ಹೇಶನ್ ಆರ್ಮಿಯ ಜನರಿಗೆ ಅನುಭವ ಒಂದಿರುತ್ತದೆಂದು ಒಬ್ಬ ಪತ್ರಕರ್ತರು ಬರೆಯುತ್ತಾರೆ.

ದೆವ್ವನ ಮನೆ.

೯. ಅಜ್ಞಾನ ಮುಸುಕಿದ ಜನರಲ್ಲಿ ಭೂತ-ಪ್ರೇತ-ಪಿಶಾಚಗಳ ಕಲ್ಪನೆಯು ಬಹಳ. ಅದರಲ್ಲಿ ಕರ್ನಾಟಕದಲ್ಲಿ, ವಿಶೇಷವಾಗಿ ಹಳ್ಳಿಹಳ್ಳಿಗಳಲ್ಲಿ, ಈ ಕಲ್ಪನೆಯು ಬಹು ಬಲವಾಗಿರುವದು. ಈ ಮನೆಯಲ್ಲಿ ಯಾರೂ ಜಯ ಹೊಂದಿಲ್ಲ. ಅಂದರೆ, ಮಕ್ಕಳು ಮರಿಗಳೊಂದಿಗೆ ಉಂಡು ತಿಂದು ಸುಖವಾಗಿ ಇರಲಿಲ್ಲ, ಎಂಬ ಭಾವನೆಯುಳ್ಳ ಜನರನ್ನು ಊರೂರಿಗೆ ಕಾಣಬಹುದು. ಆದರೆ ಇದರ ಕಾರಣವೇನು? ಮನೆಯ ರಚನೆಯೋ? ನೆರೆ ಹೊರೆಯ ಸ್ಥಳದ ಪ್ರಭಾವವೋ? ಮನೆಯವರ ಅಜಾಗ್ರತೆಯೋ? ಯಾವದಿರಬಹುದು? ಎಂಬ ಸಂಗತಿಗಳನ್ನು ಕುರಿತು ಸಶಾಸ್ತ್ರ ವಿಚಾರ ಮಾಡದೆ, ಕೇವಲ ದೆವ್ವನ ಮನೆಯೆಂದು ಅದಕ್ಕೆ ಹೆಸರಿಟ್ಟು ಬಿಡುತ್ತಾರೆ. ಇಂಥಾದ್ದೊಂದು ಮನೆಯ ಸಂಗತಿಯು ಒಂದು ವೃತ್ತಪತ್ರದಲ್ಲಿ ಪ್ರಕಟವಾಗಿದೆ. ಅದು ಹ್ಯಾಗಂದರೆ:—

ವಿಲಾಯತಿಯಲ್ಲಿ ಹೊರಡುವ 'ಸಾಯನ್ಸ' ಎಂಬ ಪತ್ರಕ್ಕೆ, ಫ್ರೊಫೆಸರ್ ಸ್ಯಾಕ್ರಯಡರನೆಂಬ ಶೋಧಕನು ಒಂದು ಪತ್ರ ಬರೆದಿರುವನು. ಆ ಪತ್ರದಲ್ಲಿ ಇಂಥಾದ್ದೊಂದು ಮನೆಯ ವಿಷಯಕ್ಕೆ ವಿಚಾರ ಮಾಡಲಿಕ್ಕೆ ತನ್ನನ್ನು ನೇಮಿಸಿರಲು, ತಾನು ಆ ಮನೆಯಲ್ಲಿ ವರ್ತಿಸುತ್ತಿದ್ದ ಸಂಗತಿಗಳ ಕಾರಣವನ್ನು ಶೋಧಿಸಿದ್ದನ್ನು ವಿವರಿಸಿರುವನು. ಅದು ಹ್ಯಾಗೆಂದರೆ—

"ಆ ಮನೆಯ ಮೂರನೇ ನಾಲ್ಕನೇ ಅಂತಸ್ತುಗಳಲ್ಲಿ ಹುಡುಗರೂ ಹುಳುಗಳೂ ಮಲಗುತ್ತಿದ್ದರು. ರಾತ್ರಿಯಲ್ಲೆಲ್ಲ ಯಾರೋ ಅವರಿಗೆ ಹಿಂಚಕ ಹಾಕುತ್ತಿರುವಂತೆ ಆಗುತ್ತಿತ್ತು. ಹಾಗೂ ಬಲಹೀನರಾಗಿ ಅವರ ಮೈಯೆಲ್ಲ ಕಣ್ಣಿಗೆ ಅಣೇಕಲ್ಲುಗಳಂತೆ ಆಗುವದು. ಹಾಗೂ ಯಾರೋ ಬಿದರಿದಂತೆ ಭಾಸವಾಗುವದು. ಎದ್ದು ದೀಪ ಹಚ್ಚಿಕೊಂಡು ಮನೆ ತುಂಬ ನೋಡಿದರೂ ಏನೂ ಕಾಣುತ್ತಿದ್ದಿಲ್ಲ. ಆದರೆ ಧ್ವನಿಯು ಮಾತ್ರ ಆಗೇ ಆಗುತ್ತಿರುವದು. ನಿದ್ರೆಯಲ್ಲಿ ಒಮ್ಮಿಂದೊಮ್ಮೆ ಬೆದರಿ ಬೀಳುವರು. ಇವರೆಲ್ಲ ಗುಂಜಾನೆ ಹಾಸಿಗೆಯಿಂದೆದ್ದು ಬಂದಾಗ ಸಿಂಡಿ ಸಿಪ್ಪೆಯಾದಂತೆ ತೋರುವರು. ಈ ಸಂಗತಿಗಳನ್ನು ಕುರಿತು ನಾನು ವಿಚಾರ ಮಾಡುತ್ತಿರಲು, ನೀಗನೆ ಅದರ ಕಾರಣವು ನನಗೆ ಗೊತ್ತಾಯಿತು. ಆ ಮನೆಯಲ್ಲಿ ಭಟ್ಟಿ ಸುಂಣಾದ್ದೊಂದು ಒಲೆ ಇತ್ತು. ಅದು ಕೆಟ್ಟದ್ದರಿಂದ ಅದರೊಳಗಿಂದ ಹೊರಡುವ ಹೊಗೆಯಲ್ಲಿ ಕಾರ್ಬಾನ್ ಮೋನೋ ಆಕ್ಸಾಯಿಡ್ ಎಂಬ ವಿತ್ಯುಗ್ರವಿಷವಾಯುವು ಉತ್ಪನ್ನವಾಗುವದೆಂದು ಮನಗಂಡೆನು. ಈ ವಾಯುವಿನಿಂದಲೇ ಈ ಜನರಿಗೆ ತ್ರಾಸವಾಗುವದೆಂದು ನಿರ್ಧರಿಸಿದೆನು. ಈ ವಾಯುವು ವಿದುಳನ್ನು ಕೆಡಿಸುತ್ತದೆ; ಗ್ಲಾನಿಯನ್ನುಂಟುಮಾಡುತ್ತದೆ."

ಕನ್ನಡಿಗರಲ್ಲಿ ದೆವ್ವ ಬಡಿದದೆ ಎಂಬ ಶಬ್ದಕ್ಕೆ ಗಾಳಿಯಾಗಿದೆ, ಎಂಬ ಮಾತನ್ನು ಉಪಯೋಗಿಸುವ ಸಾಂಪ್ರದಾಯವುಂಟು.

ಸಕ್ಕರೆಯ ಹೊಸ ಉಪಯೋಗ.

೧೦. ಸಕ್ಕರೆಯಿಂದ ಗಾಯವನ್ನು ಮಾಯಿಸಬಹುದೆಂದು ಒಬ್ಬ ಫ್ರಾನ್ಸದ ಡಾಕ್ಟರರು ಸ್ವಾನುಭವದಿಂದ ಸಿದ್ಧಮಾಡಿದ್ದಾರೆ. ನಮ್ಮಲ್ಲಿಯ ಹುಡುಗರು ಬಿದ್ದು ತಲೆ ಒಡಕೊಂಡರೆ ಕೂಡಲೆ ಅದರೊಳಗೆ ಸಕ್ಕರೆಯನ್ನು ತುಂಬುವ ಪರಿಪಾಠವುಂಟು. ಆದರೆ ಈ ಡಾಕ್ಟರರು ಹೇಳುವದೇನೆಂದರೆ, ನೀರಲ್ಲಿ ಅದರಲ್ಲಿ ಹಿಡಿಸಬಹುದಾದಷ್ಟು ಸಕ್ಕರೆಯನ್ನು ಹಾಕಿ ಕರಗಿಸಬೇಕು. ಬಳಿಕ ಆ ಮಿಶ್ರಣದಿಂದ ಗಾಯವನ್ನು ಚನ್ನಾಗಿ ತೊಳೆದು ಅದರ ಮೇಲೆ ಎಣ್ಣೆಯಲ್ಲಿ ತೊಯ್ಸಿದ ರೇಶಿಮೆಯ ವಸ್ತ್ರದ ಪಟ್ಟಿಯನ್ನು ಸುತ್ತಬೇಕು. ಇಲ್ಲವೆ ಗಾಯವನ್ನು ಬರೇ ನೀರಿನಿಂದ ತೊಳೆದು ಮೇಲೆ ಪುಡಿ ಸಕ್ಕರೆಯನ್ನು ಹೆತ್ತಿ ರೇಶಿಮೆಯ ವಸ್ತ್ರವನ್ನು ಸುತ್ತಬೇಕು. ಇವೆರಡು ಉಪಾಯಗಳಿಂದ ಗಾಯವು ತೀವ್ರವಾಯುವದು.

"ಸಂಪತ್ತನ್ನೂ ಕೀರ್ತಿಯನ್ನೂ ಪಡೆಯುವುದೆಂಬ" ಬಗ್ಗೆ ಸರ್ ಥಾಮಸ್ ಲಿಪ್ಟನ್ ಇವರ ಉಪದೇಶ.

ಈ ಇಪ್ಪತ್ತನೆಯ ಶತಮಾನದಲ್ಲಿ "ಚಹಾ" ಎಂದರೇನೆಂಬುದನ್ನು ಯಾರು ಅರಿಯರು? ಕೇವಲ ಗುಡ್ಡಗಾಡುಗಳಲ್ಲಿಯೇ ವಾಸಿಸುವ ಜನರನ್ನು ಬಿಟ್ಟು ಬಂದಿಲ್ಲೊಂದು ರೀತಿಯಿಂದ ಶಹರವಾಸಿಗಳ ಸಂಗಡ ಅಲ್ಪ ಸ್ವಲ್ಪವಾದರೂ ವ್ಯವಹಾರ ನಡಿಸುವ ಯಾವತ್ತು ಗ್ರಾಮವಾಸಿಗಳು ಚಹಾದ ಉಪಯೋಗವನ್ನು ಅರಿತಿರುವರು. ಸುಶಿಕ್ಷಿತರೆಂದೆನಿಸಿಕೊಳ್ಳುವ ಶಹರವಾಸಿಗಳಲ್ಲಂತೂ ಪ್ರತಿನಿತ್ಯದ ಆಹಾರವ್ಯವಹಾರಕ್ಕೆ ಅವಶ್ಯವಾಗಿ ಬೇಕಾಗುವ ಮುಖ್ಯ ವಸ್ತುಗಳಲ್ಲಿ ಚಹಾ ಒಂದಾಗಿರುವದು. ಇಂಥವರಿಗೆ ಚಹಾ ಇಲ್ಲದೆ ಬಂದು ದಿವಸವಾದರೂ ಸುಖದಿಂದ ಹೋಗಲಾರದಂತಾಗಿದೆ. ಕೆಲಕೆಲವು ಜನರಿಗಂತೂ ಚಹಾ ಕುಡಿಯುವ ಚಟವೆ ಬಿದ್ದು ಹೋಗಿರುವದು. ಅವರಿಗೆ ಪ್ರತಿದಿವಸ ನಾಲ್ಕಾರು ಸಾರೆ ಚಹಾ ಕುಡಿಯದಿದ್ದರೆ ಮನಸ್ಸಿಗೆ ಸಮಾಧಾನವೇ ಆಗುತ್ತಿರುವದಿಲ್ಲ. ಹಿಂದಿನ ಸ್ಥಾನದಲ್ಲಿ ದಿನದಿನಕ್ಕೆ ಹೆಚ್ಚಿಗೆ ಪ್ರಮಾಣದಿಂದ ಚಹಾ ಖರ್ಚಾಗಹತ್ತಿ ಜನರಲ್ಲಿ ಅದರ ಪ್ರಸಾರವು ಒಳ್ಳೇ ಭರದಿಂದ ಆಗಹತ್ತಿದೆಯೆಂದು ತಿಳಿದು ಬಂದಿದೆ.

ಅನೇಕ ಕಡೆಯಲ್ಲಿ ಅನೇಕ ಪ್ರಕಾರದ ಚಹಾ ಇರುವದು. ಅದರ ವಿಶೇಷವಾಗಿ ಹಿಂದುಸ್ಥಾನದಲ್ಲಿ ಮಾರಾಟವಾಗುವ ಚಹಾದ ಬೇರೆ ಬೇರೆ ಪ್ರಕಾರಗಳಲ್ಲಿ ಲಿಪ್ಟನ್ನನದೂ ಒಂದಾಗಿರುವದು. ಸರ್ ಥಾಮಸ್ ಲಿಪ್ಟನ್ ಎಂಬ ಹೆಸರಿನ ಶ್ರೀಮಂತನಾದ ಯುರೋಪಿಯನ್ ವ್ಯಾಪಾರಸ್ಥನ ಸ್ವಂತ ತೋಟದಲ್ಲಿ ಬೆಳೆಯುವ ಚಹಾಕ್ಕೆ "ಲಿಪ್ಟನ್ನನ ಚಹಾ" ಎನ್ನುವರು. ಬೇರೆ ಬೇರೆ ದೇಶಗಳಲ್ಲಿ ಲಿಪ್ಟನ್ನನ ಚಹಾದ ದೊಡ್ಡ ತೋಟಗಳಿರುವವು. ಅವನು ಬರೇ ಸಿಂಹಲದ್ವೀಪದೊಳಗಿನದೊಂದೇ ಚಹಾದ ತೋಟವನ್ನು ಕೆಲವು ವರ್ಷಗಳ ಹಿಂದೆ ಕೆಲವರು ವ್ಯಾಪಾರಸ್ಥರು ಮೂವತ್ತುಲಕ್ಷ ರೂಪಾಯಿಗಳಿಗೆ ಕೊಳ್ಳಲಿಕ್ಕೆ ಸಿದ್ಧರಾಗಿದ್ದರು. ಸದ್ಯಕ್ಕೆ ಅವನ ಚಹಾದ ತೋಟಗಳು ಸಿಲೋನ, ವೆಸ್ಟ ಇಂದೀಜ, ದಕ್ಷಿಣ ಅಮೇರಿಕಾ, ಮುಂತಾದ ದೇಶಗಳೊಳಗೆ ಬೇರೆ ಬೇರೆ ಕಡೆಗಳಲ್ಲಿ ಇರುವವು; ಹಾಗು ಏಶಿಯಾಖಂಡದೊ

ಗಿನ ಬೇರೆ ಬೇರೆ ಕಡೆಗಳಲ್ಲಿಯೂ ಪಾರಿಸ, ಹಂಬರ್ಗ, ಬರ್ಲಿನ, ವಿಯೆ
ನ್ನಾ, ಮಾಸ್ಕೋ, ದಕ್ಷಿಣ ಆಫ್ರಿಕಾ, ನ್ಯೂಯಿಲಂಡ, ಮತ್ತು ಆಸ್ಟ್ರೇಲಿಯಾ
ಮುಂತಾದ ಸ್ಥಳಗಳಲ್ಲಿಯೂ ಅವನ ಚಹಾಪ ಪಬಾರುಗಳಿರುವವು. ಬರೇ
ಗ್ರೇಟಬ್ರಿಟನ್ನದಲ್ಲಿಯೇ ೫೦೦ಕ್ಕಿಂತ ಹೆಚ್ಚು ಪಬಾರುಗಳಿರುವವು. ಪ್ರತಿ
ಒಂದು ವಾರದಲ್ಲಿಯೂ ಜಗತ್ತಿನ ಯಾವದಾದರೊಂದು ಕಡೆಯಲ್ಲಿ ಲಿಪ್ಟ
ನ್ನನ ಚಹಾದ ಅಂಗಡಿಯು ಹೊಸದಾಗಿ ತೆರೆಯಲ್ಪಡುವದು. ಪ್ರತಿವಾರಕ್ಕೆ
ಸುಮಾರು ೩೦೦ ಟನ್ನು ಲಿಪ್ಟನ್ನನ ಚಹಾವು ಮಾರಾಟವಾಗುವದು.
ಪ್ಟನ್ನ ಚಹಾವನ್ನು ಪ್ರಸಾರಮಾಡುವ ಏಜಂಟರು ಸುಮಾರು ೫೦೦
ಕ್ಕಿಂತ ಹೆಚ್ಚು ಇರುವರು. ಹಾಗು ಜಾಹೀರಾತಿನ ಖರ್ಚು ಪ್ರತಿವರ್ಷಕ್ಕೆ
ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಇರುವದು.

ಸರ್‌ಥಾಮಸ್ ಲಿಪ್ಟನ್ನ ಇವರು ಚಹಾದ ವ್ಯಾಪಾರದಿಂದ ಅಸಂಖ್ಯ
ದ್ರವ್ಯವನ್ನು ಸಂಪಾದಿಸಿದರು; ಹಾಗು ಅನೇಕ ಸಾರ್ವಜನಿಕ ಕಾರ್ಯ
ಗಳ ಸಲುವಾಗಿ ಉದಾರ ಬುದ್ಧಿಯಿಂದ ದ್ರವ್ಯ ಸಹಾಯವನ್ನು ಮಾಡಿದರು.
ದರಿಂದ ಸರಕಾರದವರು ಅವರಿಗೆ ೧೯೮೯ನೇ ಇಸವಿಯಲ್ಲಿ 'ನಾಯಿಟ್',
ಮತ್ತು ಸರದಾರ ಎಂಬ ಪದವಿಯನ್ನೂ ೧೯೦೨ನೇ ಇಸವಿಯಲ್ಲಿ
'ಬಾರೋನೇಟ್' ಎಂಬ ಅದಕ್ಕೂ ಹೆಚ್ಚಿನ ಬಿರುದನ್ನೂ ಕೊಟ್ಟಿರುವರು.

ಸಾಂಪತ್ತಿಕ ಸ್ಥಿತಿಯಿಂದಲೂ ಲೌಕಿಕ ರೀತಿಯಿಂದಲೂ ಈ ತರದ
ಅಸಾಧಾರಣ ಉನ್ನತಿಯನ್ನು ಹೊಂದಿದ ಸರ್ ಥಾಮಸ್ ಲಿಪ್ಟನ್ನರವರ ಚರಿ
ತ್ರವು, ಬಡತನದ ಸ್ಥಿತಿಯಲ್ಲಿದ್ದರೂ ಸತತ ಉದ್ಯೋಗದಿಂದಲೂ ಸಾಹಸ
ದಿಂದಲೂ ಉನ್ನತಿಯನ್ನು ಪಡೆಯಬೇಕೆಂಬ ಅಪೇಕ್ಷೆಯುಳ್ಳವರಿಗೆ ಉತ್ತೇ
ಜಕರವಾಗಿರುವದರಿಂದ ಅದನ್ನು ಇಲ್ಲಿ ಕೊಡುತ್ತೇವೆ:—

ಸರ್ ಥಾಮಸ್ ಲಿಪ್ಟನ್ನರವರು ಆಯರ್ಲಂಡದೊಳಗಿನ ಒಬ್ಬ ಬಡ
ವ್ಯಾಪಾರನ ಹೊಟ್ಟೆಯಲ್ಲಿ ಹುಟ್ಟಿದರು. ಬಡತನದ ಮೂಲಕ ಅವರು
ಶಾಲೆಯಲ್ಲಿ ಒಂದೇ ವರ್ಷ ಶಿಕ್ಷಣವನ್ನು ಹೊಂದಿ, ತಮ್ಮ ವಯಸ್ಸಿನ ೧೦
ನೇ ವರ್ಷದಲ್ಲಿ ಒಂದು ಅಂಗಡಿಯಲ್ಲಿ ಸಾಮಾನು ಕೊಡುವ ಚಾಕರಿಗೆ
ಸೇರಿದರು. ಇವರಿಗೆ ತಮ್ಮ ವಯಸ್ಸಿನ ೧೫ನೇ ವರ್ಷದಲ್ಲಿ ಹಡಗದಲ್ಲಿ
ಕೆಲಸ ಮತ್ತು ಪ್ರವಾಸಮಾಡಬೇಕೆಂತಲೂ ಪರದೇಶಕ್ಕೆ ಹೋಗಿ ವ್ಯಾಪಾರ
ಮಾಡಬೇಕೆಂತಲೂ ಲವಲವಿಕೆಯುಂಟಾಯಿತು. ಕೂಡಲೆ ಅವರು ಒಂದು

ಹಡಗದಲ್ಲಿ ನೌಕರಿಯನ್ನು ಹಿಡಿದು, ಹೊರಡುವ ಪೂರ್ವದಲ್ಲಿ ತಾಯಿತಂದೆ
ಗಳಿಗೂ ಏನೊಂದು ಹೇಳದೆ ನ್ಯೂಯಾರ್ಕ್‌ಕ್ಕೆ ಹೋದರು. ಹಡಗವು
ನ್ಯೂಯಾರ್ಕ್‌ಕ್ಕೆ ಮುಟ್ಟಿದ ಕೂಡಲೆ ಲಗುಬಗೆಯಿಂದ ಹಡಗದಿಂದಿಳಿದು,
ಬಂದರದ ಮೇಲಿರುವ ಒಬ್ಬ ಹೊಟೆಲ (ಖಾನಾವಳಿಯ) ದ ಯಜಮಾನ
ನಿಗೆ ಬೆಟ್ಟಿಯಾಗಿ ಹಡಗದಿಂದಿಳಿದ ಪ್ರವಾಸಿಕರನ್ನು ಅವನ ಹೊಟೇಲಕ್ಕೆ
ಕೂಡಿಸಿಕೊಟ್ಟು ಅದರಿಂದ ತಮ್ಮ ತಿಂಬುಂಬುವ ವ್ಯವಸ್ಥೆಯನ್ನು ಮಾಡಿ
ಕೊಂಡರು. ಈ ಪ್ರಕಾರ ಇವರು ತಮ್ಮ ಚಿಕ್ಕ ವಯಸ್ಸಿನಲ್ಲಿ ನ್ಯೂಯಾ
ರ್ಕ ಪಟ್ಟಣದಲ್ಲಿ ನೌಕರಿಯನ್ನುಮಾಡಿ ಅಂತೂ ಇಂತೂ ೩೦೦ ರೂಪಾ
ಯಿಗಳನ್ನು ಕೂಡಿಸಿಕೊಂಡರು. ಆ ವೇಳೆ ಹಿರಿಯರ ಅಪ್ಪಣೆಯ ಪ್ರಕಾ
ರ ಗ್ಲಾಸಗೋಕ್ಕೆ ತಿರುಗಿ ಬಂದು ಅದೇ ಬಂಡವಲದಿಂದ ಅಲ್ಲಿ ಒಂದು
ಸಣ್ಣ ಅಂಗಡಿಯನ್ನು ಹಾಕಿದರು. ಹಾಗು ಸತತ ಉದ್ಯೋಗವಾಡಿ,
ಸ್ವಬುದ್ಧಿಯಿಂದ ಅನೇಕ ಸಂಗತಿಗಳನ್ನು ಅರಿತುಕೊಂಡು, ಸರಕುಗಳ
ನ್ನು ಎಂದೂ ಉದ್ಧರಿಯಿಂದ ಮಾರದೆ, ಅನೇಕ ತರದ ಜಾಹೀರಾತುಗಳ
ಸಹಾಯದಿಂದ ತಮ್ಮ ಸರಕನ್ನು ಪ್ರಸಿದ್ಧಪಡಿಸಿ, ಸಣ್ಣ ಅಂಗಡಿಕಾರನ
ಸ್ಥಿತಿಯಿಂದ ದೊಡ್ಡ ವ್ಯಾಪಾರಸ್ಥರೂ, ಬಡತನದ ಸ್ಥಿತಿಯಿಂದ ಅತ್ಯಂ
ಶ್ರೀಮಂತರೂ ಆದರು. ಸ್ವಂತ ಪರಿಶ್ರಮದಿಂದಲೇ ಇಷ್ಟು ದೊಡ್ಡ ಯೋ
ಗ್ಯತೆಯನ್ನು ಹೊಂದಿದ ಈ ಗೃಹಸ್ಥರ ಅನುಭವವು ಯಾವತ್ತು ಜನರಿಗೆ
ಅದರಲ್ಲಿಯೂ ವಿಶೇಷವಾಗಿ ವ್ಯಾಪಾರಸ್ಥರಿಗೆ, ಚನ್ನಾಗಿ ಉಪಯೋಗ
ವಾಗಬಹುದೆಂಬ ಮಾತು ಸಹಜವಾದದ್ದು. ಈ ಜಗತ್ತಿನ ಪ್ರತಿಯೊಂದ
ವ್ಯವಹಾರಕ್ಕೂ ಹಣವು ಅವಶ್ಯವಾಗಿ ಬೇಕು. ಹಾಗು ಅರ್ವಾಚೀನ ಕಾ
ದಲ್ಲಿ ವ್ಯಾಪಾರವೇ ಹಣವನ್ನು ದೊರಕಿಸುವ ಮುಖ್ಯ ಸಾಧನವಾಗಿರುವದು
ಆದ್ದರಿಂದ ಸರ್ಫ್ರಾನುಸ್ ಲಿವ್ವನ್ನರಂಥವರ ಉಪದೇಶವು ವ್ಯಾಪಾರವನ್ನು
ಕೈಕೊಳ್ಳಲಿಚ್ಛಿಸುವ ಪ್ರತಿಯೊಬ್ಬ ತರುಣನೂ ಚನ್ನಾಗಿ ಲಕ್ಷದಲ್ಲಿಡಲಿಕ್ಕೆ
ತಕ್ಕದ್ದಾಗಿರುವದೆಂಬಲ್ಲಿ ಸಂದೇಹವಿಲ್ಲ. ಇಷ್ಟೇ ಅಲ್ಲ; ಅವರ ಉಪ
ದೇಶದ ತತ್ವಗಳು ಯಾವ ಕಾರ್ಯವನ್ನಾದರೂ ಹೊಸದಾಗಿ ಆರಂಭಿಸುವ
ತರುಣ ಸಂತತಿಗೆ ವಿಶೇಷ ಪ್ರಯೋಜನಕರವಾದವುಗಳಾಗಿರುವದರಿಂ
ಅವುಗಳನ್ನು ಇಲ್ಲಿ ಹೇಳುವೆವು. ಅವರು ಸ್ವಾನುಭವದಿಂದ ಹೇಳು
ದೇನೆಂದರೆ:—

" ನಾನು ನನ್ನ ವಯಸ್ಸಿನ ೨೪ನೆಯ ವರ್ಷದಲ್ಲಿ ಗ್ಲಾಸಗೋದಲ್ಲಿ ಂದು ಸ್ಥಳವನ್ನು ಬಾಡಿಗೆಯಿಂದ ಹಿಡಿದು ಅಲ್ಲಿ ನನ್ನ ಅಂಗಡಿಯನ್ನು ರಂಭಿಸಿದೆನು. ಆಗಿನ ಕಾಲದ ಹಾಗೂ ಈಗಿನ ಪರಿಸ್ಥಿತಿಗಳಲ್ಲಿ ವಿಶೇಷ ಚ್ಚು ಕಡಿಮೆಗಳಿರುವವು. ನಾನು ರಾತ್ರಿಯಲ್ಲಿ ನನ್ನ ಅಂಗಡಿಯ ಹಿಂದಿನ ೋಣೆಯಲ್ಲಿ ಮಲಗಿಕೊಳ್ಳುತ್ತಿದ್ದೆನು; ಹಾಗು ಅಂಗಡಿಯನ್ನು ತೆರೆಯುವ ುತ್ತು ಮುಚ್ಚುವ ಪೂರ್ವದಲ್ಲಿ ಅದರ ವ್ಯವಸ್ಥೆಯನ್ನೂ ಲೆಕ್ಕಪತ್ರಗ ನ್ನೂ ಚನ್ನಾಗಿ ನೋಡಿಕೊಳ್ಳುತ್ತಿದ್ದೆನು. ವ್ಯಾಪಾರದಲ್ಲಿ ಆಗಿನ ಕಾಲ ಲ್ಲಿ ಈಗಿನಂತೆ ಮೇಲಾಟವು ವಿಶೇಷವಾಗಿ ಕಂಡುಬರುತ್ತಿದ್ದಿಲ್ಲ. ಈ ನ ಕಾಲದಲ್ಲಿ ಅದು ವಿಶೇಷವಾಗಿ ಬೆಳೆದಿದ್ದು ಸರಕುಗಳನ್ನು ಖರೀದಿ ಾಡುವ ಹಾಗು ವಾರಾಟ ಮಾಡುವ ರೀತಿಗಳಲ್ಲಿಯಾದರೂ ವಿಶೇಷ ಚ್ಚು ಕಡಿಮೆಗಳಾಗಿರುವವು. ಸದ್ಯದ ವ್ಯಾಪಾರಸ್ಥರಲ್ಲಿ ಬಹುಕಾಲ ಾಳುವ ಕೀರ್ತಿಯನ್ನು ದೊರಕಿಸುವ ಇಚ್ಛೆಗಿಂತಲೂ, ಹ್ಯಾಗಾದರೂ ಾಡಿ ತಮ್ಮ ವ್ಯಾಪಾರವನ್ನು ಬೆಳೆಸಿಕೊಂಡು ಆದಷ್ಟು ಬೇಗನೆ ಹೆಚ್ಚು ಣವನ್ನು ಸಂಪಾದಿಸುವ ಹವ್ಯಾಸವೇ ವಿಶೇಷವಾಗಿ ಕಂಡುಬರುವದು. ೀಗಿದ್ದರೂ ವ್ಯಾಪಾರಸ್ಥನು ತನ್ನ ಉದ್ಯೋಗವನ್ನು ಹ್ಯಾಗೆ ಅಭಿವೃದ್ಧಿ ಡಿಸಬಹುದು, ಅವನು ತನ್ನ ವ್ಯವಹಾರವನ್ನು ಯಾವ ರೀತಿಯಾಗಿ ಟ್ಟರೆ ಒಳ್ಳೆಯದಾಗಬಹುದು, ಇನ್ನೇ ಮೊದಲಾದ ಸಂಗತಿಗಳ ಸಂಬಂ ಧದಿಂದ ಗ್ಲಾಸಗೋದೊಳಗಿನ ಅಂಗಡಿಯಲ್ಲಿ ಹಾಗೂ ಎರಡನೇ ಕಡೆಯ ಲ್ಲಿ ನನ್ನ ಸ್ವಂತ ಅನುಭವಕ್ಕೆ ಬಂದ ಕೆಲವು ಸಂಗತಿಗಳನ್ನು ಹೇಳುವ ರಿಂದ ಅವು ಸದ್ಯದ ತರುಣ ಸಂತತಿಗೆ ತುಸು ಮಟ್ಟಿಗಾದರೂ ಉಪ ಸೋಗವಾಗದೆ ಇರವೆಂದು ತಿಳಿದು ನಾನು ಅವುಗಳನ್ನು ಹೇಳು ತ್ತೇನೆ:—

ಯಾವನಾದರೂ ಹೊಸ ವ್ಯಾಪಾರಸ್ಥನು ತನ್ನ ಉದ್ಯೋಗವ ನ್ನು ಮುಂದರಿಸಬೇಕಾದರೆ, ದೊಡ್ಡ ಬಂಡವಲವು ಅವಶ್ಯವಾದದ್ದೆಂದು ಅನೇಕರು ಹೇಳುವದುಂಟು. ಆದರೆ ಈ ಹೇಳಿಕೆಯು ನನಗೆ ಸಮುಂ ಜಸವಾಗಿ ತೋರುವದಿಲ್ಲ. ನಾನು ನನ್ನ ಉದ್ಯೋಗದ ಸಂಬಂಧದಿಂದ ಮೂರು ಮುಖ್ಯ ತತ್ವಗಳನ್ನು ನೆನಪಿನಲ್ಲಿಟ್ಟುಕೊಂಡಿದ್ದೆನು. (೧) ನನ್ನ ಉದ್ಯೋಗದಲ್ಲಿ ಎಂದೆಂದೂ ಪಾಲುಗಾರರನ್ನು ಸೇರಿಸಿಕೊಳ್ಳಲಿಕ್ಕಿಲ್ಲ.

(೨) ಎರವಡನೆಯವರಿಂದ ಎಂದೆಂದೂ ಸಾಲವನ್ನು ತೆಗೆದುಕೊಳ್ಳಲಿಕ್ಕಿಲ್ಲ.
(೩) ನನ್ನ ಸಾಮಾನುಗಳನ್ನು ಎಂದೂ ಯಾರಿಗೂ ಉದ್ದರೀ ಕೊಡಲಿಕ್ಕಿಲ್ಲ.
ಈ ತತ್ವಗಳನ್ನನುಸರಿಸಿ ನಾನು ಕೆಲವು ದಿವಸ ವ್ಯವಹಾರ ಮಾಡಿದ ಬಳಿಕ ಗ್ಲಾಸಗೋದಲ್ಲಿಯೇ ಮತ್ತೊಂದು ಅಂಗಡಿಯನ್ನು ಆರಂಭಿಸುವಷ್ಟು ಯೋಗ್ಯತೆಯು ನನ್ನಲ್ಲಿ ಬಂದಿತು. ಆಗ ಎಷ್ಟೋ ಜನರು ನನ್ನ ಪಾಲುಗಾರರಾಗಬೇಕೆಂದು ಬಯಸಿ ನನ್ನನ್ನು ಕೇಳಿದರು. ಆದರೆ ನಾನು ಅವರ ಕೇಳಿಕೆಯನ್ನು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಯಾಕಂದರೆ, ತಕ್ಕಷ್ಟು ಯೋಗ್ಯತೆಯುಳ್ಳ ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಉದ್ಯೋಗದಲ್ಲಿ ಪಾಲುಗಾರರನ್ನು ತೆಗೆದುಕೊಳ್ಳಬೆ ಕೇವಲ ಸ್ವಂತ ಪರಿಶ್ರಮದಿಂದಲೇ ತನ್ನ ಉದ್ಯೋಗವನ್ನು ಚನ್ನಾಗಿ ಅಭಿವೃದ್ಧಿ ಪಡಿಸಿಕೊಳ್ಳಲಿಕ್ಕೆ ಬಂದೇ ಬರುವದೆಂದು ನನಗೆ ಮೇಲಿಂದಮೇಲೆ ಅನಿಸುತ್ತಿತ್ತು. ಬೇಕಿ ಬೇರೆ ಪಾಲುಗಾರರು ಕೂಡಿ ಉದ್ಯೋಗವನ್ನು ಆರಂಭಿಸಿದರೆ, ಒಮ್ಮೊಮ್ಮೆ ಯಾವದಾದರೊಂದು ಮಾತಿನ ಸಲುವಾಗಿ ಪಾಲುಗಾರರಲ್ಲಿ ಮತಭೇದ ವುಂಟಾಗಬಹುದು; ಹಾಗು ಆ ಮತಭೇದದಿಂದ ಉದ್ಯೋಗದ ಅಭಿವೃದ್ಧಿಗೆ ಅಡ್ಡಿಯುಂಟಾಗಬಹುದು. ಕೆಲಕೆಲವು ಪ್ರಸಂಗಗಳಲ್ಲಂತೂ ಪಾಲುಗಾರರ ಮತಭೇದದ ಮೂಲಕವಾಗಿ ಅವರಲ್ಲಿ ವೈಮನಸ್ಸುಂಟಾಗಿ ಉದ್ಯೋಗವೇ ಮುಣುಗಿ ಹೋಗುವ ಸಂಭವವಿರುವದು. ಮತ್ತೊಂದು ಸಂಗತಿ ಏನೆಂದರೆ,

ಉದ್ಯೋಗದಲ್ಲಿರುವಂಥ ಆನಂದವು ಎರವಡನೇ ಯಾವದರಲ್ಲಿಯೂ ಇರುವದಿಲ್ಲ.

ಪ್ರತಿಯೊಬ್ಬ ತರುಣ ವ್ಯಾಪಾರಸ್ಥನು, ಅವನು ತೀರ ಕಿರುಕುಳ ವ್ಯಾಪಾರಸ್ಥನೇ ಇರವಲ್ಲನ್ಯಾಕೆ, ತನ್ನ ಉದ್ಯೋಗದಲ್ಲಿ ಚನ್ನಾಗಿ ಯಶವನ್ನು ಬೊರಕಿಸುವ ಇಚ್ಛೆಯುಳ್ಳವನಾಗಿದ್ದರೆ ಅವನು ಆರಂಭದಲ್ಲಿ ದಾರಿದ್ರ್ಯಾವಸ್ಥೆಯಲ್ಲಿ ಇರುವದೇ ಒಳ್ಳೆಯದೆಂದು ನನಗೆ ತೋರುತ್ತದೆ. ಯಾವನಾದರೊಬ್ಬನು ಶ್ರೀಮಂತ ಸ್ಥಿತಿಯಲ್ಲಿ ಹುಟ್ಟಿ, ಹಿರಿಯರು ಹೂಡಿಟ್ಟ ಉದ್ಯೋಗದಲ್ಲಿ ತೊಡಗಿದನೆಂದು ತಿಳಿಯುವಾ. ಇದರಲ್ಲಿ ಅವನ ಹಿತದ ದೃಷ್ಟಿಯಿಂದ ನೋಡಿದರೆ ಕಂಡುಬರುವ ಮೊದಲನೇ ಕೆಟ್ಟ ಸಂಗತಿಯೆಂದರೆ, ಅವನಿಗೆ ಹಣದ ನಿಜವಾದ ಬೆಲೆಯೇ ಗೊತ್ತಿರುವದಿಲ್ಲ.

ಆದರೆ ಅದೇ ತರುಣನು ದಾರಿದ್ರ್ಯಾವಸ್ಥೆಯಲ್ಲಿ ಹುಟ್ಟಿಬೆಳೆದಿದ್ದು ಅವನ ಹತ್ತಿರಿದ್ದ ಪ್ರತಿಯೊಂದು ಆಣೆಯೂ ಅವನ ಸ್ವಂತ ಪರಿಶ್ರಮದಿಂದ ದೊರಕಿಸಿದ್ದಾಗಿದ್ದರೆ, ಅವನಿಗೆ ಆ ಹಣದ ಮಹತ್ವವೂ ಅದರ ಸರಿಯಾದ ಬೆಲೆಯೂ ಚೆನ್ನಾಗಿ ಗೊತ್ತಿರುವದು. ಹಾಗು ಇದರಿಂದ ಮತ್ತೊಂದು ಲಾಭವೇನೆಂದರೆ, ಅವನು ತನ್ನ ಹತ್ತಿರಿರುವ ಹಣವನ್ನು ಸ್ವತಃ ದೊರಕಿಸಿರುವದರಿಂದ ಅವನು ಎರಡನೆಯವರ ಹಂಗಿನಲ್ಲಿರದೆ ಸ್ವತಂತ್ರನಾಗಿರುವನು. ಇದರಿಂದ ತಮ್ಮ ವ್ಯಾಪಾರವನ್ನು ಬೆಳಿಸಲಿಚ್ಛಿಸುವ ಯಾವತ್ತೂ ಜನರಿಗೆ ನಾನು ಪುನಃ ಹೇಳುವದೇನೆಂದರೆ, 'ವ್ಯಾಪಾರದಲ್ಲಿ ನಿಮ್ಮ ಬಂಡವಲವು ಬಹಳ ಇರುವದೋ ಕಡಿಮೆಯಿರುವದೋ ಎಂಬದರ ಕಡೆಗೆ ನೀವು ಎಷ್ಟು ಮಾತ್ರವೂ ಲಕ್ಷ ಕೊಡಬೇಡಿರಿ. ನಿಮ್ಮ ಕೈಯಲ್ಲಿ ಇರುವಷ್ಟೇ ಬಂಡವಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳಿರಿ. ಅದರ ಹಾಸಿಗೆಯನ್ನು ವಿಾರಿ ಕಾಲನ್ನು ಚಾಚಲಿಕ್ಕೆ ಮಾತ್ರ ಎಂದೆಂದೂ ಪ್ರಯತ್ನಿಸ ಬೇಡಿರಿ. ನಿಮ್ಮಲ್ಲಿ ಸಿಲಕು ಇರುವಷ್ಟೇ ಹಣದಿಂದ ನಿಮ್ಮ ಬೇಕಾದ ವ್ಯವಹಾರವನ್ನು ನಡೆಯಿಸಿರಿ.' ಎರಡನೇ ಸಂಗತಿಯೇನೆಂದರೆ, ಸಾಧ್ಯವಿದ್ದ ಮಟ್ಟಿಗೂ ಸ್ವತಃ ಶ್ರಮ ಮಾಡಿರಿ. ಜಗತ್ತಿನಲ್ಲಿ ಕೀರ್ತಿಯನ್ನು ದೊರಕಿಸಲಪೇಕ್ಷಿಸುವ ಪ್ರತಿಯೊಬ್ಬ ಮನುಷ್ಯನು ಸತತ ಪರಿಶ್ರಮ ಮಾಡಲೇಬೇಕು. "ನಾನು ಇಷ್ಟೇ ತಾಸು ಕೆಲಸ ಮಾಡೇನು" ಎಂದು ನಿಯಮ ಮಾಡಿಕೊಂಡು ನಡೆಯುವ ಮನುಷ್ಯನು ಅವನ ಉದ್ಯೋಗದ ಅಭಿವೃದ್ಧಿಯ ದೃಷ್ಟಿಯಿಂದ ನೋಡಿದರೆ, ನಿಶ್ಚಯವಾಗಿಯೂ ಅಡ್ಡ ಹಾದಿಗೆ ಬಿದ್ದಿರುವನೆಂದು ಹೇಳಬಹುದು. ವ್ಯಾಪಾರದಲ್ಲಿ ಯಶಸ್ಸು ಸಂಪಾದಿಸಲಪೇಕ್ಷಿಸುವ ಮನುಷ್ಯನು ಅಂಗಡಿಯನ್ನು ತೆರೆಯುವ ಪೂರ್ವದಲ್ಲಿಯೂ, ಮುಚ್ಚಿದ ನಂತರವೂ ಕೆಲವು ತಾಸುಗಳನ್ನು ಅಂಗಡಿಯಲ್ಲಿಯೇ ಕಳಿಯಬೇಕಾಗುವದು. "ಉದ್ಯೋಗದಲ್ಲಿ ಇರುವಂಥ ಆನಂದವು ಎರಡನೇ ಯಾವದರಲ್ಲಿಯೂ ಇರುವದಿಲ್ಲ" ವೆಂಬ ಮೂಲಮಂತ್ರಸದೃಶವಾದ ನನ್ನ ಉಪದೇಶವಾಕ್ಯವನ್ನು ಎಂದೆಂದೂ ಮರೆಯಬೇಡಿರಿ. ಈ ವಾಕ್ಯವನ್ನು ನಾನು ಯಾವಾಗಲೂ ನನ್ನ ಕಣ್ಣೆದುರಿಗೇ ಇಟ್ಟು ಕೊಂಡಿರುತ್ತೇನೆ. ಈಗಂತೂ ಅದು ನನ್ನ ಹೃದಯಕ್ಕೆ ಅಂಟಿಕೊಂಡು ಬಿಟ್ಟಿರುವದು. ನಾನು ಒಡತನದಿಂದ ದೈವಭಕ್ತನೆನಿಸಿದ್ದರಲ್ಲಿ ಗುಪ್ತ ಚಮತ್ಕಾರವೇನೂ ಇಲ್ಲ.

ನನ್ನ ಸಂಪೂರ್ಣ ಮನಸ್ಸು ನಾನು ದೊರಕಿಸಿದ ಅಂಗಡಿಯಲ್ಲಿಯೇ ಇತ್ತು. ಈಗಿನ ಕಾಲದ ಅಂಗಡಿಗಳಲ್ಲಿರುವಂತೆ ನನ್ನ ಅಂಗಡಿಯಲ್ಲಿ ಅಸಂಖ್ಯ ತರದ ಸಾಮಾನುಗಳಿದ್ದಿಲ್ಲ. ಆದರೆ ನನ್ನಲ್ಲಿ ಇರುವಷ್ಟೇ ಸರಕುಗಳನ್ನು ಅಂಗಡಿಯ ಖಿಡಿಕಿಗಳನ್ನು ಝಳ ಝಳ ಸ್ವಚ್ಛ ಮಾಡಿ ಅವುಗಳಲ್ಲಿ ವ್ಯವಸ್ಥಿತವಾಗಿಯೂ ಗಿರಾಕಿಗಳ ಚಿತ್ತವನ್ನು ಆಕರ್ಷಿಸುವಂತೆಯೂ ಹೊಂದಿಸಿಡುತ್ತಿದ್ದೆನು. ಹಾಗು ಗಿರಾಕಿಗಳಿಗೆ ಸಾಮಾನು ಕೊಡುವ ಕೆಲಸವನ್ನಾದರೂ ನಾನೇ ಸ್ವತಃ ಮಾಡುತ್ತಿದ್ದೆನು. ನಾನು ಅಂಗಡಿಯನ್ನು ಯಾವಾಗಲೂ ಸಾಧ್ಯವಿದ್ದ ಮಟ್ಟಿಗೆ ಸ್ವಚ್ಛವಾಗಿಯೂ ಚಂದಕಾಣಿಸುವಂತೆಯೂ ಇಡುತ್ತಿದ್ದೆನು; ಮತ್ತು ಗಿರಾಕಿಗಳಲ್ಲಿ ನನಗೆ ಆಶ್ರಯ ಕೊಡುವ ಬುದ್ಧಿಯನ್ನು ಹುಟ್ಟಿಸುವದಕ್ಕಾಗಿ ನಾನು ಯಾವಾಗಲೂ ಪ್ರಯತ್ನ ಮಾಡುತ್ತಿದ್ದೆನು. ಅಂಗಡಿಯ ಸಂಬಂಧದ ತೀರ ಕ್ಷುಲ್ಲಕ ಸಂಗತಿಗಳಿಗೂ ಸಹ ಚನ್ನಾಗಿ ಲಕ್ಷಗೊಡುತ್ತಿದ್ದೆನು; ಮತ್ತು ನನ್ನ ಅಂಗಡಿಗೆ ಬಂದ ಗಿರಾಕಿಗಳು ತಿರುಗಿ ಹೋಗುವಾಗ ಸಂತೋಷದಿಂದ ಹೋಗುವಂತೆ ಮಾಡುವದಕ್ಕಾಗಿ ನಾನು ಮನಃಪೂರ್ವಕವಾಗಿ ಪ್ರಯತ್ನ ಮಾಡುತ್ತಿದ್ದೆನು. ಈ ಸಮಯದ ಈ ರೀತಿಯ ನನ್ನ ವಿಚಾರಪೂರ್ವಕವಾದ ವರ್ತನವೇ ನನ್ನ ಮುಂದಿನ ಆಯುಷ್ಯದೊಳಗಿನ ಅಸಾಧಾರಣವಾದ ಯಶಃಸಂಪಾದನೆಗೆ ಮೂಲಕಾರಣವಾಯಿತೆಂದು ನಾನು ನಂಬುತ್ತೇನೆ. ಈ ತರದ ನನ್ನ ಯಶಃಸಂಪಾದನೆಗೆ ಏನಾದರೊಂದು ಅದ್ಭುತವಾದ ಗೂಢ ತತ್ವವು ಕಾರಣವಾಗಿದ್ದೀತೆಂದು ಯಾರೂ ತಿಳಿಯುವ ಕಾರಣವಿಲ್ಲ. ನಾನು ಹಿಂಜರಿಯದೆ ಪರಿಶ್ರಮ ಮಾಡಿದೆನು. ನನ್ನ ಯಾವತ್ತೂ ಕಾಲವನ್ನು ನನ್ನ ಉದ್ಯೋಗದಲ್ಲಿಯೇ ಕಳೆದನು. ನನ್ನ ಪೂರ್ಣ ಅಂತಃಕರಣವನ್ನು ಅದರಲ್ಲಿಯೇ ಇರಿಸಿದ್ದೆನು. ಇವೇ ನನ್ನ ಯಶಃಸಂಪಾದನೆಗೆ ಕಾರಣವಾದ ಗೂಢ ತತ್ವಗಳು. ಇವುಗಳಲ್ಲಿ ಅದ್ಭುತವೇನಿದೆ? ಅಷ್ಟೊಂದು ಗೂಢತತ್ವವಾದರೂ ಎಲ್ಲಿದೆ? ಅಲ್ಲದೆ, ನಾನು ಈ ರೀತಿಯಾಗಿ ನಡೆದದ್ದರಿಂದ ನನಗೆ ಯಶಸ್ಸು ದೊರೆತಿದ್ದರಲ್ಲಿ ಆಶ್ಚರ್ಯವಾದರೂ ಏನಿದೆ?

ನನಗೆ ಯಶಸ್ಸು ಕೊಟ್ಟಂಥ, ಹಾಗೂ ಪ್ರತಿಯೊಬ್ಬ ತರುಣ ವ್ಯಾಪಾರಿಗೆ ಖಂಡಿತವಾಗಿ ಯಶಸ್ಸನ್ನು ಕೊಡುವಂಥ ಮಹತ್ವದ ಸಾಧನವಾದ ಇನ್ನೊಂದು ಸಂಗತಿಯಿರುವದು. ಅದು ಯಾವದೆಂದರೆ:—

ಅಂಗಡಿಕಾರನು ವ್ಯಾಪಾರದ ಪರಿಸ್ಥಿತಿಯ ಕಡೆಗೆ ಯಾವಾಗಲೂ ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿರಬೇಕು. ಅವನಿಗೆ ಜಗತ್ತಿನೊಳಗಿನ ಬೇರೆ ಬೇರೆ ವ್ಯಾಪಾರಸ್ಥಳಗಳ ಸ್ಥಿತಿ, ಹಾಗು ಸರಕುಗಳು ಅಗ್ಗವಾಗಿ ಬೊರೆಯುತಕ್ಕ ಸ್ಥಳಗಳು ಇವುಗಳ ಜ್ಞಾನವು ಚೆನ್ನಾಗಿ ಇರುವದು ಅವಶ್ಯವು. ನನ್ನ ಗಿರಾಕಿಗಳಿಗೆ ನಾನು ನಿತ್ಯದ ಗೃಹಕೃತ್ಯಕ್ಕೆ ಬೇಕಾಗುವ ಅಡಿಗೆಯ ಸಾಮಾನುಗಳನ್ನು ಪೂರೈಸಿ ಕೊಡಲಿಕ್ಕೆ ಹತ್ತಿದಾಗ ವ್ಯಾಪಾರದ ಏರಿಳತ ಗಳ ಕಡೆಗೆ ಚೆನ್ನಾಗಿ ಲಕ್ಷ ಕೊಡುತ್ತಿದ್ದೆನು. ಮತ್ತು ಅದರಿಂದ ನನ್ನ ಉದ್ಯೋಗದ ಸಂಬಂಧದ ಕೊಡಕೊಳ್ಳುವ ವ್ಯವಹಾರದಲ್ಲಿ ಮಧ್ಯಸ್ಥರನ್ನು ಸೇರಿಸಿಕೊಳ್ಳಕೂಡದೆಂದು ನಿಶ್ಚಯಿಸಿದೆನು. ನಾನು ನನ್ನ ವ್ಯಾಪಾರಕ್ಕೆ ಬೇಕಾಗುವ ಬೆಣ್ಣೆ, ತತ್ತಿ, ಹಂದಿಯ ಮಾಂಸ ಮುಂತಾದ ಸಾಮಾನು ಗಳನ್ನು ಆಯರ್ಲಂಡದಲ್ಲಿ ಖರೀದಿ ಮಾಡುತ್ತಿದ್ದೆನು. ಮತ್ತು ಸಿಂಹಲ ದ್ವೀಪದೊಳಗಿನ ನನ್ನ ಸ್ವಂತ ತೋಟದಲ್ಲಿ ತಯಾರಾಗುವ ಚಹಾ, ಕಾಫಿ, ಕೋಕೋ ಇವುಗಳನ್ನು ನನ್ನ ಗಿರಾಕಿಗಳಿಗೆ ಬದಗಿಸಿ ಕೊಡುತ್ತಿದ್ದೆನು.

ಆದರೆ ಅನೇಕ ತರುಣ ವ್ಯಾಪಾರಸ್ಥರು, ನಾನು ಹೇಳುವ ರೀತಿ ಯಿಂದ ವ್ಯಾಪಾರ ಮಾಡಿ ಅದರಲ್ಲಿ ಯಶವನ್ನು ದೊರಕಿಸುವದು ಸದ್ಯಕ್ಕೆ ಸಾಧ್ಯವಲ್ಲೆಂದೂ, ಸಿಲೋನದೊಳಗಿನ ಸಾವಿರಾರು ಎಕರೆ ಹೊಲಗಳನ್ನೂ ಆಯರ್ಲಂಡದೊಳಗಿನ ಮುಖ್ಯ ಪೇಟೆಯ ಖರೀದಿಯನ್ನೂ ದೊರಕಿಸಿ ಕೊಳ್ಳುವದು ತಮ್ಮ ಶಕ್ತಿಗೆ ಅಸಾಧ್ಯವೆಂದೂ ಹೇಳಬಹುದು. ಹಾಗು ಅವರು ಅನ್ನುವದು ನಿಜವಾಗಿಯೂ ತೋರಬಹುದು. ಆದರೆ ನನ್ನ ಹೇಳಿಕೆ ಯೊಳಗಿನ ಮುಖ್ಯ ತತ್ವವು ಇದಲ್ಲ.

ಯಾವನಾದರೊಬ್ಬ ವ್ಯಾಪಾರಸ್ಥನು ತನ್ನ ಉದ್ಯೋಗದಲ್ಲಿ ಯಶಸ್ಸು ದೊರಕಿಸಬೇಕಾಗಿದ್ದರೆ ಅವನು ಒಳ್ಳೆಯ ವ್ಯಾಪಾರಸ್ಥಳವು ಯಾವದೆಂಬ ನ್ನು ತಿಳಿದುಕೊಳ್ಳಲಿಕ್ಕೆಬೇಕು. ಇದರಿಂದ ಅವನಿಗೆ ಮೊದಲನೆಯ ಗತಿಯನ್ನು ದೊರಕಿಸಿಕೊಳ್ಳಲಿಕ್ಕೆ ಬರುವದು. ಹಾಗು ಇದರಿಂದಲೇ ನನು ಒಳ್ಳೇ ಊರ್ಜಿತ ಸ್ಥಿತಿಗೆ ಬರುವ ಸಂಭವವಾದರೂ ಇರುವದು. ನು ಈ ಮಾತಿಗೇ ಮಹತ್ವಕೊಡುತ್ತೇನೆ; ಇಷ್ಟೇ ಹೊರತು ಬೇರೆ ಯೂ ಇಲ್ಲ. ವ್ಯಾಪಾರಸ್ಥಳದ ತಿಳುವಳಿಕೆಯು ಚೆನ್ನಾಗಿ ಇದ್ದರೆ, ಯಾವ ಕಿನ ವ್ಯಾಪಾರದಿಂದ ಎಲ್ಲಿ ಹೆಚ್ಚಿಗೆ ಲಾಭವಾಗಬಹುದೆಂಬದು ಗೊತ್ತಾ

ಗುವದು, ಹಾಗು ವ್ಯಾಪಾರಸ್ಥನಿಗೆ ಈ ತಿಳುವಳಿಕೆಯಿರುವದು ಅವಶ್ಯವು. ಯಾಕಂದರೆ, ಅನೇಕ ಮಂದಿ ವ್ಯಾಪಾರಸ್ಥರ ಕೈಯೊಳಗಿಂದ ಹಾದು ಬಂದ ಸರಕಿನ ಬೆಲೆಯು ಮೊದಲೇ ಬಹಳ ಏರಿಬಂದಿರುವದರಿಂದ ಆ ಸರಕನ್ನು ಮಾರುವದರಿಂದ ವ್ಯಾಪಾರಸ್ಥನಿಗೆ ಹೆಚ್ಚಿಗೆ ಲಾಭವಾಗುವ ಸಂಭವವು ಕಡಿಮೆಯಿರುವದು. ಸರಕುಗಳನ್ನು ಭೂಮಿಯಲ್ಲಿ ಬೆಳೆಯಿಸುವವರ ಇಲ್ಲವೆ ಕಾರಖಾನೆಗಳಲ್ಲಿ ತಯಾರಮಾಡುವವರ ಕಡೆಯಿಂದ ಪ್ರತ್ಯಕ್ಷ ಖರೀದಿ ಮಾಡುವದರಿಂದ ಆ ಸರಕುಗಳನ್ನು ಹೆಚ್ಚು ಲಾಭವನ್ನು ತೆಗೆದುಕೊಂಡು ಮಾರಲಿಕ್ಕೆ ಬರುವದು. ಅಂಗಡಿಕಾರರು ಸರಕುಗಳನ್ನು ಈ ರೀತಿಯಿಂದಲೇ ಖರೀದಿ ಮಾಡಬೇಕು. ಉದಾಹರಣಾರ್ಥವಾಗಿ, ೧೮೮೯ನೇ ಇಸವಿಯಲ್ಲಿ ನನಗೆ ಚಹಾದ ವ್ಯಾಪಾರದಲ್ಲಿ ಲಾಭವಾಗುವುದೆಂದು ತೋರಿದ್ದರಿಂದ ನಾನು ಆಗ ಒಮ್ಮಿಂದೊಮ್ಮೆ ೫೦,೦೦೦ ಚಹಾದ ಡಬ್ಬಿಗಳನ್ನು ಖರೀದಿ ಮಾಡಿದೆನು. ಹಾಗು ನನ್ನ ಚಹಾದ ಸಂಬಂಧದಿಂದ ಜಾಹೀರಾತುಗಳನ್ನು ಕೊಡುವ ವ್ಯವಸ್ಥೆಯನ್ನಾದರೂ ಚನ್ನಾಗಿ ಮಾಡಿದೆನು. ಬರೇ ಗ್ಲಾಸಗೋದ ಒಂದೇ ಪಟ್ಟಣದಲ್ಲಿ ನನ್ನ ಚಹಾವನ್ನು ಪ್ರಸಿದ್ಧಪಡಿಸುವ ಸಲುವಾಗಿ ಕೊಂಬುಕಹಳೆಗಳಿಂದ ಕೂಡಿದ ೫೦ ಬಂಡಿಗಳುಳ್ಳ ಮೆರುವಣಿಗೆಯನ್ನು ಹೊರಡಿಸಿದೆನು. ಈ ರೀತಿಯಿಂದ ಯಾವತ್ತು ಜನರಿಗೆ ನನ್ನ ಚಹಾದ ಹೆಸರು ಗೊತ್ತಾಯಿತು. ನನ್ನ ಚಹಾವಾದರೂ ಒಳ್ಳೆಯದೇ ಇತ್ತಾದ್ದರಿಂದ ಅದು ದೊಡ್ಡ ಪ್ರಮಾಣದಿಂದ ಖರ್ಚಾಗಹತ್ತಿತು. ಅಲ್ಲದೆ ಆ ಸಂಬಂಧದಿಂದ ನನಗೆ ದೊರೆತ ಕೀರ್ತಿಯು ಇಂದಿನ ವರೆಗೂ ಏರಿಕೆಯ ಪ್ರಮಾಣದಲ್ಲಿಯೇ ಇರುವದು.

ಜಾಹೀರಾತುಗಳನ್ನು ಪ್ರಕಟಿಸುವದು ಉದ್ಯೋಗದಲ್ಲಿ ಯಶಸ್ಸನ್ನು ದೊರಕಿಸುವ ಇನ್ನೊಂದು ಮಹತ್ವದ ಸಾಧನವು. ಅಂಗಡಿಕಾರರು ತಮ್ಮ ಸರಕುಗಳನ್ನು ಯಾವ ರೀತಿಯಾಗಿ ಪ್ರಸಿದ್ಧಪಡಿಸಬೇಕೆಂಬ ವಿಷಯದ ಕಡೆಗೆ ಚನ್ನಾಗಿ ಲಕ್ಷಗೊಡಬೇಕು. ಈಗಿನ ಕಾಲದಲ್ಲಿ ಜಾಹೀರಾತುಗಳಿಗೆ ನಾನು ಗ್ಲಾಸಗೋ ಪಟ್ಟಣದಲ್ಲಿ ಮೆರುವಣಿಗೆಯನ್ನು ಹೊರಡಿಸಿದ್ದಕ್ಕಿಂತ ಹೆಚ್ಚು ಮಹತ್ವವುಂಟಾಗಿರುವದು. ಸದ್ಯಕ್ಕೆ ಯಾವನು ತನ್ನ ಸರಕುಗಳನ್ನು ಯಾವದಾದರೊಂದು ಹೊಸ ಇಲ್ಲವೆ ಮೋಹಕವಾದ ರೀತಿಯಿಂದ ಪ್ರಸಿದ್ಧಪಡಿಸುವನೋ ಅವನ ಸರಕುಗಳಿಗೇ ಹೆಚ್ಚು ಗಿರಾಕಿಗಳು ಸಿಗುವರು.

ನಾನು ನನ್ನ ಜಾಹೀರಾತುಗಳನ್ನು ಹಂಚುವ ರೀತಿಯನ್ನು ಮೇಲಿಂದಮೇಲೆ ಬದಲು ಮಾಡುತ್ತಿದ್ದೆನು. ನನ್ನ ಅಂಗಡಿಯ ಮುಂದಿನಿಂದ ಹಾದು ಹೋಗುವವರ ಲಕ್ಷ್ಯವನ್ನು ನನ್ನ ಅಂಗಡಿಯ ಕಡೆಗೆ ಎಳೆದುಕೊಳ್ಳುವದಕ್ಕಾಗಿ ನಾನು ತತ್ಕಾಲಿಕ ಸಾರ್ವಜನಿಕ ಸಂಗತಿಗಳನ್ನು ವಿವರಿಸುವಂಥ ಹಾಸ್ಯ ರಸೋತ್ಪಾದಕವಾದಂಥ ಹಾಗು ಮಾರ್ಮಿಕ ಟೀಕೆಗಳುಳ್ಳಂಥ ಚಿತ್ರಗಳನ್ನು ನನ್ನ ಅಂಗಡಿಯ ಖಿಡಕಿಯಲ್ಲಿ ಹಚ್ಚಿಡುತ್ತಿದ್ದೆನು. ಮುಂದೆ ನನ್ನ ಉದ್ಯೋಗವು ಬೆಳೆಯಹತ್ತಿದ ಬಳಿಕ ವಿವಾಹದೊಳಗೆ ಅಡ್ಡಾಡುವ ಒಬ್ಬ ಮನುಷ್ಯನ ಕಡೆಗೆ ನನ್ನ ಅಂಗಡಿಯ ಹೆಸರಿನಿಂದ ಬಂದ ೧೦,೦೦೦ ತಾರುಗಳನ್ನು ಕೊಟ್ಟು ಅವುಗಳನ್ನು ಕೆಳಗೆ ಚಲ್ಲಿಸಿದೆನು. ಹಾಗು ಈ ರೀತಿಯಾಗಿ ಚಲ್ಲಿದ ತಾರಿನ ಫಾರ್ಮುಗಳನ್ನು ತಿರುಗಿ ತಂದು ಕೊಟ್ಟವರಲ್ಲಿ ಮೊದಲಿನ ಇಪ್ಪತ್ತು ಜನರಿಗೆ ಇನಾಮುಗಳನ್ನು ಕೊಡುತ್ತೇನೆಂದು ಮೊದಲೇ ನೋಟೀಸು ಕೊಟ್ಟಿದ್ದೆನು. ಇದರಿಂದ ಊರೊಳಗಿನ ಬೇರೆ ಬೇರೆ ಭಾಗದ ಜನರು ಆ ತಾರಿನ ಫಾರ್ಮುಗಳನ್ನು ಕೂಡಿಸಿಕೊಂಡು ನನ್ನ ಅಂಗಡಿಯ ಕಡೆಗೆ ಗುಂಪುಗುಂಪಾಗಿ ಬರಹತ್ತಿದರು. ಈ ರೀತಿಯಿಂದ ಊರೊಳಗಿನ ಯಾವತ್ತು ಜನರ ಲಕ್ಷ್ಯವು ನನ್ನ ಅಂಗಡಿಯ ಕಡೆಗೆ ಎಳೆಯಲ್ಪಟ್ಟಿತು.

ಎರಡನೇದೊಂದು ಸಮಯದಲ್ಲಿ ನಾನು ಸಿಲೋನದಿಂದ ಹಡಗದಲ್ಲಿ ಕುಳಿತು ಬರುವಾಗ ಕೆಂಪು ಸಮುದ್ರದಲ್ಲಿ ಹಡಗಕ್ಕೆ ತುಸು ಧಕ್ಕೆಹತ್ತಿ, ಅದರೊಳಗಿನ ಸಾಮಾನುಗಳನ್ನು ಚಲ್ಲಿ ಅದರ ಭಾರವನ್ನು ಕಡಿಮೆ ಮಾಡುವ ಪ್ರಸಂಗವು ಒದಗಿತ್ತು. ಆಗ ನಾನು ಸಮುದ್ರದಲ್ಲಿ ಚಲ್ಲುವ ಗಟ್ಟಿಗಳ ಮೇಲೆ 'ಲಿಪ್ಟನ್ನನ ಚಹಾವನ್ನು ಉಪಯೋಗಿಸಿರಿ' ಎಂದು ಬರೆದು ಚಲ್ಲಿದೆನು. ಅವು ತೇಲುತ್ತ ಹೋಗಿ ದಂಡೆಗೆ ಹತ್ತಿ ಅವುಗಳನ್ನು ನೋಡಿದ ದಂಡೆಯ ಮೇಲಿನ ಬೇರೆ ಬೇರೆ ಸ್ಥಳಗಳ ಜನರಲ್ಲಿ ನನ್ನ ಸಂಬಂಧದ ತಿಳುವಳಿಕೆಯನ್ನು ಮಾಡಿಕೊಳ್ಳುವ ಲವಲವಿಕೆಯನ್ನುಂಟು ಮಾಡಿದವು.

ವ್ಯಾಪಾರದ ಉದ್ಯೋಗವನ್ನು ಕೈಕೊಂಡ ಜನರ ಹಿತಕ್ಕೋಸ್ಕರ ಹೇಳತಕ್ಕ ಇನ್ನೊಂದು ಸಂಗತಿಯೇನಂದರೆ, ವ್ಯಾಪಾರಸ್ಥನು ಬೇಕಾದಷ್ಟು ಬಂಡವಲವನ್ನು ಹಾಕಿ ವ್ಯಾಪಾರವನ್ನು ಆರಂಭಿಸಿರಲಿ,

ಅವನು ಬೇಕಾದಷ್ಟು ಶ್ರಮವಾಡಲಿ, ಹಾಗು ಅನೇಕ ರೀತಿಯಿಂದ ಜಾಣ್ಮೆ ರಾತುಗಳನ್ನು ಪ್ರಕಟಿಸಿ ತನ್ನ ಸರಕುಗಳನ್ನು ಪ್ರಸಿದ್ಧ ಪಡಿಸಲಿ, ಅವನು ನಿರ್ವ್ಯಸನಿಯಾಗಿದ್ದ ಹೊರತು ಎಂದೆಂದೂ ಯಶವನ್ನು ದೊರಕಿಸಲಾರನು. ಇದನ್ನು ಪ್ರತಿಯೊಬ್ಬ ವ್ಯಾಪಾರಸ್ಥನು ಚನ್ನಾಗಿ ನೆನಪಿನಲ್ಲಿಡಬೇಕು. ತನ್ನ ಉದ್ಯೋಗವನ್ನು ಮಾಡಿ ಯಶದೊರಕಿಸಬೇಕೆಂದು ಬಯಸುವ ಪ್ರತಿಯೊಬ್ಬ ತರುಣನಿಗೆ ನಾನು ಉಪದೇಶಿಸುವದೇನೆಂದರೆ:— "ಸರಕುಗಳನ್ನು ತುಂಬಿದ ಹಡಗು ಸಮುದ್ರದಲ್ಲಿ ಮುಳಗಿ ಹೋದದ್ದರಿಂದ ಎಷ್ಟು ಮಂದಿ ಸಾವುಕಾರರು ದಿವಾಳಿಯನ್ನು ತೆಗೆದಿರುವರೋ ಅದಕ್ಕಿಂತಲೂ ಹೆಚ್ಚು ಜನರು ಅವರ ಸದಾಚಾರವೆಂಬ ನಾವೆಯು ದುರ್ವ್ಯಸನಸಾಗರದಲ್ಲಿ ಮುಳುಗಿದ್ದರಿಂದ ಹಾಳಾಗಿ ಹೋಗಿರುವರು. ಅಂಗಡಿಯಲ್ಲಿ ಸಾಮಾನುಗಳನ್ನು ಕೊಳ್ಳಲಿಕ್ಕೆ ಬರುವ ದರಿದ್ರಗಿರಾಕಿಗಳನ್ನೂ ಶ್ರೀಮಂತ ಗಿರಾಕಿಗಳನ್ನೂ ಸರಿಯಾಗಿ ನಡಿಸಿಕೊಳ್ಳಲಿಕ್ಕೆ ಯತ್ನವಾಡಿರಿ. ಯಾಕಂದರೆ, ಬಡಮನುಷ್ಯನ ಹತ್ತರ ಇರುವ ಹದಿನಾರು ಆಣೆಗಳೂ ಶ್ರೀಮಂತನ ಕೈಯಲ್ಲಿರುವ ರೂಪಾಯಿಯೂ ಅಷ್ಟೇ ಬೆಲೆಬಾಳುವವು. ಅದರಿಂದ ಕೈಯೊಳಗೆ ಬುಟ್ಟೆಯನ್ನು ಹಿಡಿದುಕೊಂಡು ಬರುವ ಕೂಲಿಕಾರನ ಹೆಂಗಸನ್ನೂ ಗಾಡಿಯೊಳಗೆ ಕೂತು ಬರುವ ಮಡವ್‌ಸಾಹೇಬರನ್ನೂ ನಿಮ್ಮ ವ್ಯಾಪಾರದ ವಿಷಯದಲ್ಲಿ ಸರಿಯಾಗಿ ನಡೆಯಿಸಿಕೊಳ್ಳುವದು ಅವಶ್ಯವಿರುತ್ತದೆ."

ಈ ಉಪದೇಶವು ಒಬ್ಬ ಕರ್ತವ್ಯದಕ್ಷನಾದ ಮಹಾಪುರುಷನು ಅಂತಃಕರಣಪೂರ್ವಕವಾಗಿ ಮಾಡಿದ ಉಪದೇಶವಿರುವದು. ಇದು ಬರೆ ಬೇರೆ ಬೇರೆ ತರದ ಉದ್ಯೋಗಗಳಲ್ಲಿ ತೊಡಗಿರುವವರಿಗಷ್ಟೇ ಅಲ್ಲದೆ, ವ್ಯವಹಾರದಲ್ಲಿಯೂ ಸಂಸಾರದಲ್ಲಿಯೂ ಬೇರೆ ಬೇರೆ ಕೆಲಸಗಳನ್ನು ಆರಂಭಿಸುವ ತರುಣ ಸಂತತಿಗೂ ಮನನಯೋಗ್ಯವಾಗಿರುವದಲ್ಲವೇ? ತುಸು ಬಂಡವಲ, ಕೆಲವು ಮಹತ್ವದ ತತ್ವಗಳಂತೆ ಆಚರಣೆ, ಉದ್ಯೋಗತತ್ಪರತೆ, ಜಾಹಿರಾತುಗಳನ್ನು ಪ್ರಕಟಿಸುವ ಹತೋಟಿ ಇಷ್ಟು ಸಂಗತಿಗಳುಳ್ಳ ಯಾವ ಮನುಷ್ಯನಿಗೂ ದಾರಿದ್ರ್ಯಾವಸ್ಥೆಯಲ್ಲಿ ಬಹುಕಾಲವನ್ನು ಕಳೆಯುವ ಪ್ರಸಂಗವು ಬದಗಲಿಕ್ಕಿಲ್ಲೆಂದು ಲಿಪ್ಟನ್ನ ಸಾಹೇಬರು ಮೇಲಿಂದ ಮೇಲೆ ಹೇಳಿರುವರು. ಪ್ರತಿ ಒಬ್ಬ ಮನುಷ್ಯನು ತನ್ನ ಆಯುಃಕ್ರಮದಲ್ಲಿ ಯಾವ

ದಾದರೊಂದು ಉಚ್ಚ ಧ್ಯೇಯವನ್ನು ಮುಂದಿಟ್ಟುಕೊಂಡು, ಯೋಗ್ಯರೀತಿಯಿಂದ ಪರಿಶ್ರಮ ಮಾಡುತ್ತ, ತನ್ನ ಕರ್ತವ್ಯದಲ್ಲಿ ಆನಂದ ಪಡುತ್ತ, ಎರಡನೆಯವರು ತನ್ನ ಸಂಗಡ ಹ್ಯಾಗೆ ನಡೆಯ ಬೇಕೆಂದು ಅವನು ಅಪೇಕ್ಷಿಸುವನೋ ಹಾಗೆಯೇ ತಾನೂ ಎರಡನೆಯವರ ಸಂಗಡ ನಡೆಯುತ್ತ ಹೋದರೆ, ಅವನಿಗೆ ಅವನು ಹಿಡಿದ ಕಾರ್ಯದಲ್ಲಿ ಯಶವೂ ಜಯವೂ ನಿಶ್ಚಯವಾಗಿ ದೊರೆಯುವವೆಂದು ಸರ್ ಥಾಮಸ್ ಲಿಪ್ಟನ್ನರವರು ಆಶ್ವಾಸನೆ ಕೊಟ್ಟಿರುವರು. ಆ ಮಹಸೀಯರ ಉಪದೇಶವಾಕ್ಯಗಳನ್ನನುಸರಿಸಿ ತಮ್ಮ ಆಚಾರವಿಚಾರಗಳನ್ನು ಇಡುವಂಥ ತರುಣರು ನಿಜವಾಗಿಯೂ ತಮ್ಮ ಹಿತವನ್ನು ಸಾಧಿಸಿಕೊಳ್ಳುವರೆಂಬದರಲ್ಲಿ ಸಂದೇಹವಿಲ್ಲ.

ವಿದ್ಯಾಖಾತೆಯ ನೋಟೀಸುಗಳು.

ಮ್ಹೆನ್ಯಾಕ್ಯುಲರ್ ಫಾಯನಲ್ ಪರೀಕ್ಷೆಯು.
ದಕ್ಷಿಣಭಾಗ.

ಈ ನೋಟೀಸಿನಿಂದ ತಿಳಿಸುವದೇನಂದರೆ:— ಸನ್ನ ೧೯೦೩ನೇ ಇಸವಿಯ ತಾ॥ ೨೧ನೇ ನವೆಂಬರ ತಿಂಗಳ ಮುಂಬಯಿ ಗವ್ಹರ್ನಮೆಂಟ ಗ್ಯಾಝೆಟಿನ ೧೯೦೩ನೇ ಭಾಗದ ೧೪೯೪ ರಿಂದ ೧೪೯೫ನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳಿಗನುಸಾರವಾಗಿ ಮ್ಹೆನ್ಯಾಕ್ಯುಲರ ಫಾಯನಲ್ ಪರೀಕ್ಷೆಯು ಸೋಮವಾರ ತಾರೀಖು ೨೨ನೇ ಸಪ್ಟಂಬರ ೧೯೧೩ ದಿವಸ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣಭಾಗದ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ನಡೆಯುವದು:—

ಧಾರವಾಡ.	ವಿಜಾಪುರ.
ಬೆಳಗಾವ.	ಕಾರವಾರ.

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕವಿಗಾಟಿಯ ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ ಹಾಯಸ್ಕೂಲುಗಳ ಹೆಡ್‌ಮಾಸ್ತರರು ಸದರೀ ಪರೀಕ್ಷಾ ಕವಿಗಾಟಿಗಳ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಗಳನ್ನು ಉಮೇದವಾರನು ಯಾವ ಜಿಲ್ಹೆಯಲ್ಲಿ ಇರುವನೋ ಆ ಜಿಲ್ಹೆಯ ಪರೀಕ್ಷಾ ಕವಿಾಟಯ ಪ್ರೆಸಿಡೆಂಟರಿಗೆ ತಾ॥ ೧೫ ನೇ ಅಗಷ್ಟ ೧೯೧೩ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಆ ಅರ್ಜಿಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಛಾಪೀ ನಮೂನೆಗಳ ಮೇಲೆಯೇ ಮಾಡಲಿಕ್ಕೆಬೇಕು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಯನ್ನು ಮಾಡಿದರೆ ಅವು ಪುಕ್ಕಟೆಯಾಗಿ ಕೊಡಲ್ಪಡುವವು.

೪. ಧಾರವಾಡದ ಮಾನ್ಯವಾದ ದೇಶಭಾಷೆಯು ಕನ್ನಡ ಇರುವದು. ಬೆಳಗಾವ, ವಿಜಾಪುರ, ಕಾನಡಾ ಜಿಲ್ಹೆಗಳ ಮಾನ್ಯವಾದ ದೇಶಭಾಷೆಗಳು ಕನ್ನಡ, ಮರಾಠಿ ಇವುಗಳಿರುವವು. ಧಾರವಾಡ ಜಿಲ್ಹೆಯ ಮರಾಠಿಯ ಉಮೇದವಾರರು ಧಾರವಾಡದಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಬೆಳಗಾವಿಯಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಎಂಬದನ್ನು ತರುವಾಯದಲ್ಲಿ ಎಜ್ಯುಕೇಶನಲ್ ಇನ್ಸಪೆಕ್ಟರಸಾಹೇಬರವರು ನಿರ್ಯಯಿಸುವರು.

ಧಾರವಾಡ.
೧೫ ನೇ ಜೂನ ೧೯೧೩ } F. B. P. Lory.
Educational Inspector S. D.

ಹಾಯಸ್ಕೂಲುಗಳಲ್ಲಿ ದೊರೆಯುವ ಮೊಹಮಡನ್ ಬರ್ಸರಿ ಫಂಡಸ್ಕಾಲರಶಿಪ್ಪಿನ ಬಗ್ಗೆ ನೋಟೀಸು.

ಇದರ ಮೂಲಕ ನೋಟೀಸು ಕೊಡುವದೇನಂದರೆ:—ತಾ॥ ೩೦ ನೇ ಡಿಸೆಂಬರ ೧೯೧೩ ಇಸವಿಯ ಮುಂಬಯಿ ಗ್ಯಾಝೆಟ್ಟಿನ ಭಾಗ ೧ನೆಯ ೨೦೬೫ರಿಂದ ೨೦೬೭ನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳ ಪ್ರಕಾರ ಧಾರವಾಡ ಜಿಲ್ಹೆಯಲ್ಲಿ ಮೊಹಮಡನ್ ಬರ್ಸರಿ ಫಂಡದಿಂದ ಕೊಡುವ ಸ್ಕಾಲರಶಿಪ್ಪು ಕೊಡುವ ಬಗ್ಗೆ ಪರೀಕ್ಷೆಯು ಧಾರವಾಡ ಸೆಂಟರನಲ್ಲಿ ಧಾರವಾಡ ಹಾಯಸ್ಕೂಲಿನಲ್ಲಿ ಸೋಮವಾರ ತಾ॥ ೮ ನೇ ಸಪ್ಟಂಬರ ೧೯೧೪ ನೇ ದಿವಸ ಬೆಳಗಿನ ೧೧ ಘಂಟೆಗೆ ಪ್ರಾರಂಭವಾಗುವದು.

೨. ಈ ಸ್ಕಾಲರಶಿಪ್ಪ ಪರೀಕ್ಷೆಗೆ ಧಾರವಾಡ ಜಿಲ್ಹೆಯೊಳಗಿನ ಶಾಳಾ ಖಾತೆಯಿಂದ ಮಾನ್ಯ ಮಾಡಲ್ಪಟ್ಟ ಬೇಕಾದ ಶಾಲೆಯ ಮುಸಲಮಾನ ಹುಡುಗರು ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ

ಜಿಲ್ಲೆಯ ವಾಸಸ್ಥರೆಂಬ ಬಗ್ಗೆಯೂ ಹಾಯಸ್ಕೂಲಿನಲ್ಲಿ ಇಂಗ್ಲಿಷ ಕಲಿಯುವಿಕ್ಕೆ ತಗಾಗುವ ಖರ್ಚನ್ನು ಮಾಡುವದಕ್ಕೆ ಆಗಹಪ್ಪು ಬಡವರಿದ್ದ ಬಗ್ಗೆಯೂ ಇಬ್ಬರು ಪ್ರಸಿದ್ಧ ಸಂಭಾವಿತ ಗೃಹಸ್ಥರ ಸರಟಿಫಿಕೀಟನ್ನು ಹಾಜರ ಮಾಡಲಿಕ್ಕೆ ಬೇಕು.

೩. ಪರೀಕ್ಷೆಯು ಕನ್ನಡದಿಂದ ಆಗುವದು.

೪. ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ಆಗುವದು, ಆ ಕಮಿಟಿಗೆ ಧಾರವಾಡ ಸರಕಾರೀ ಹಾಯಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಯಬಗ್ಗೆ ಮಾಡತಕ್ಕ ಅರ್ಜಿಗಳನ್ನು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಪರೀಕ್ಷೆಗೆ ಕೂಡ್ರುವ ಪರವಾನಗಿಯಬಗ್ಗೆ ಅರ್ಜಿಯನ್ನು ಮಾಡತಕ್ಕ ಛಾಪೀ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆಯೇ ಮಾಡತಕ್ಕದ್ದು. ಈ ನಮೂನೆಗಳು ಕೆಳಗೆ ಸಹೀ ಮಾಡಿದವರ ಕಡೆಗೆ ಅಥವಾ ಪರೀಕ್ಷಾ ಕಮಿಟಿಯ ಅಧ್ಯಕ್ಷರಕಡೆಗೆ ಖರ್ಚು ಬೀಳದೆ ಸಿಗುವವು. ಪರೀಕ್ಷೆಯ ಬಗ್ಗೆ ಅರ್ಜಿಗಳನ್ನು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ತಾ॥ ೧೫ ನೇ ಅಗಷ್ಟ ೧೯೧೩ ನೇ ದಿವಸ ಅಥವಾ ಅದಕ್ಕೂ ಮೊದಲು ತಲಪುವಂತೆ ಕಳಿಸಲಿಕ್ಕೆ ಬೇಕು. ಅನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರ ವಯಸ್ಸು, ಪರೀಕ್ಷೆಗಳ ವಿಷಯ, ಸ್ಕಾಲರಶಿಪ್ಪನ್ನು ಕೊಡೋಣ, ಮತ್ತು ಬಂದ ಮಾಡೋಣ, ಸ್ಕಾಲರಶಿಪ್ಪ ದೊರೆದ ಉಮೇದವಾರನ ಹೆಸರು ಪ್ರಸಿದ್ಧ ಮಾಡೋಣ, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ, ಶಾಲೆಯ ಫೀ ಬಗ್ಗೆ ನಿಯಮ ಇವೆಲ್ಲವುಗಳೂ ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳಂತೆಯೇ ಇರುವವು. ಆದರೆ ಈ ಸ್ಕಾಲರಶಿಪ್ಪ ಪರೀಕ್ಷೆಗೆ ಪರೀಕ್ಷಾ ಫೀ ಮಾತ್ರ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

ಧಾರವಾಡ
೩೧ ನೇ ಜೂನ ೧೯೧೩ } F. B. P. Lory.
ಎ. ಇನಸ್ಪೇಕ್ಟರ ದಕ್ಷಿಣಭಾಗ.

ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಮಹಮ್ಮದನ್ ಬರ್ಸರೀ ಫಂಡದ ಬಂದು ಸ್ಕಾಲರಶೀಪು ಕೊಡುವ ಬಗ್ಗೆ ಮುಂಬಯಿ ಸರಕಾರೀ ಗ್ಯಾಝೆಟ್ಟು ತಾ॥ ೩೦ನೇ ದಿಸೆಂಬರ ೧೯೦೮ ಭಾಗ ೧

ಪುಟ ೨೦೬೫ರಿಂದ ೨೦೬೭ ರಲ್ಲಿ ಕೊಟ್ಟ ನಿಯಮಗಳ ಪ್ರಕಾರ ಸದರಿ ಸ್ಕಾಲರಶೀಪಿನ ಬಗ್ಗೆ ಪರೀಕ್ಷೆಯು ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಗುರುವಾರ ತಾ॥ ೧೮ ನೇ ಸಪಟೆಂಬರ ೧೯೧೩ ನೇ ದಿವಸ ೧೧ ಘಂಟೆಗೆ ಪ್ರಾರಂಭವಾಗುವದು.

೨. ಶಾಳಾಖಾತೆಯಿಂದ ಮಾನ್ಯವಾದ ಧಾರವಾಡ ಜಿಲ್ಹೆಯೊಳಗಿನ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಬರ ಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಹೆಯಲ್ಲಿ ವಾಸ ಮಾಡುವವರೆಂಬ ಬಗ್ಗೆಯೂ, ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಇದ್ದು ದೇಶಭಾಷೆಯ ಅಭ್ಯಾಸ ಮಾಡಲಿಕ್ಕೆ ತಾಗುವ ಖರ್ಚನ್ನು ಕೊಡಲಿಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ ಇಬ್ಬರು ಸಂಭಾವಿತ ಗೃಹಸ್ಥರ ಸರಟೀಫೀಕೇಟನ್ನು ಹಾಜರ ಮಾಡಲಿಕ್ಕೆ ಬೇಕು. ಆದರೆ ಪರೀಕ್ಷೆಯ ಮೊದಲು ಕನಿಷ್ಟ ೧೨ ತಿಂಗಳ ವರೆಗೆ ಶಾಲೆಯಲ್ಲಿ ನಿಜವಾಗಿ ಇರದಂಥ ಉಮೇದವಾರರನ್ನು ಈ ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

೩. ಮೇಲಿನ ೨ನೇ ನಿಯಮದಲ್ಲಿ ಹೇಳಿದ ಶರ್ತುಗಳಿಗನುಸಾರವಾಗಿ ತಿಂಗಳಿಗೆ ೩ ರೂಪಾಯಿ ಬೆಲೆಯುಳ್ಳ ಎರಡು ವರ್ಷಗಳ ವರೆಗೆ ನಡೆಯು ವಂಥ ಒಂದು ಸ್ಕಾಲರಶೀಪು ಕೆಳಗೆ ಬರೆದ ಶರ್ತುಗಳ ಪ್ರಕಾರ ಧಾರವಾಡ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಕೊಡಲ್ಪಡುವದು.

(೧) ಉಮೇದವಾರನ ವಯಸ್ಸು ೧೫ ವರ್ಷಕ್ಕಿಂತ ಹೆಚ್ಚು ಇರ ಬೇಕು.

(೨) ಕನ್ನಡ ಅಥವಾ ಉರ್ದು ೫ನೇ ಇಯತ್ತೆಯ ಪ್ರಕಾರ ತೆಗೆದು ಕೊಂಡ ಪರೀಕ್ಷೆಯಲ್ಲಿ ಅವನು ಎಲ್ಲರಲ್ಲಿ ಹೆಚ್ಚು ಗುಣಗಳನ್ನು ದೊರಕಿಸಬೇಕು, ಮತ್ತು ಹೆಚ್ಚು ಚುರುಕತನವನ್ನು ತೋರಿ ಸಬೇಕು.

(೩) ಅವನು ಪ್ರ್ಯಾಕ್ಟಿಸಿಂಗಸ್ಕೂಲಿಗೆ ತಪ್ಪಿಸದೆ ಹೋಗಬೇಕು; ಮತ್ತು ಅವನ ನಡತೆಯೂ, ಅಭ್ಯಾಸವೂ ಸಮಾಧಾನಕರ ವಾಗಿರಬೇಕು.

(೪) ಅವನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯನ್ನು ಪಾಸಾ ದ ನಂತರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಲಿತು

ಟ್ರೇಂಡ ಶಿಕ್ಷಕನಾಗಲಿಕ್ಕೂ ಮತ್ತು ಆ ಪ್ರಕಾರ ಯೋಗ್ಯ ಜಾವಿೂನುಗಳನ್ನು ಕೊಟ್ಟು ಕರಾರಪತ್ರ ಬರಕೊಡಲಿಕ್ಕೂ ಕಬೂಲ ಇರಬೇಕು.

೪. ಈ ಪರೀಕ್ಷೆಯು ಒಂದು ಕವಿೂಟಿಯ ಮುಖಾಂತರ ತೆಗೆದು ಕೊಳ್ಳಲ್ಪಡುವದು. ಆ ಕವಿೂಟಿಗೆ ಧಾರವಾಡ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡ್ರುವದಕ್ಕೆ ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯೂಲರ ಫಾಯ್ನಲ್ ಪರೀಕ್ಷೆಯ ಛಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೆ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ಕಡೆಯಿಂದ ಅಥವಾ ಪರೀಕ್ಷಾ ಕವಿೂಟಿಯ ಪ್ರೆಸಿಡೆಂಟರ ಕಡೆಯಿಂದ ಕಿವ್ಮತ್ತು ಬೀಳದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ೧೦ನೇ ಸಪ್ಟಂಬರ ೧೯೧೩ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸಬೇಕು. ಅನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

F. B. P. Lory,
ಎಜ್ಯುಕೇಶನಲ್ ಇನಸ್ಪೇಕ್ಟರ, ದಕ್ಷಿಣಭಾಗ.

ಧಾರವಾಡ ಟ್ರೇನಿಂಗ ಕಾಲೇಜದ ಸರಟೀಫಿಕೇಟ ಪರೀಕ್ಷೆಯು ಗುರುವಾರ ತಾ|| ೨ನೇ ಅಕ್ಟಂಬರ ೧೯೧೩ನೇ ಇಸವಿ ದಿವಸ ಪ್ರಾರಂಭವಾಗುವದು. ಈ ಪರೀಕ್ಷೆಯ ಡ್ರಾಯಿಂಗ ಪರೀಕ್ಷೆಯು ಗುರವಾರ ತಾ|| ೨೫ನೇ ಸಪ್ಟಂಬರ ೧೯೧೩ನೇ ದಿವಸ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರುವವರು ಮೆ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾ|| ಬಾ|| ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು. ಹಾಗೂ ಹೊರಗಿನಿಂದ ೧೯೧೨ನೇ ವರ್ಷದ ಸರ್ಟಿಫಿಕೇಟಿನ ಪರೀಕ್ಷೆಗೆ ಬರುವವರು ತಮ್ಮ ಮುಲ್ಕೀ ಅಥವಾ ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಸರ್ಟಿಫಿಕೇಟನ್ನು ತಮ್ಮ ಸಂಗಡ ತರಬೇಕು. ಈ ಸರ್ಟಿಫೀಕೇಟನ್ನು ಹಾಜರ ಮಾಡದವರು ಪರೀಕ್ಷೆಗೆ ಕೂಡ್ರಗೊಡಲ್ಪಡಲಿಕ್ಕಿಲ್ಲ.

ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು.

——೫೫(೦)೫೫——

೧೭ನೇ ಜನವರಿ ೧೯೦೬ನೇ ಇಸವಿಯ ಮುಂಬಯಿ ಗವ್ಹರ್ನೆಮೆಂಟ ಗ್ಯಾಝೆಟಿನ ಒಂದನೇ ಭಾಗದ ೯೫, ೯೬ನೇ ಪಾನಿನಲ್ಲಿ ಪ್ರಸಿದ್ಧಪಡಿಸಿದಂತೆ, ಪ್ರತಿ ಒಂದು ಜಿಲ್ಲೆಗೆ ಆರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಪರೀಕ್ಷೆಯು ಸೋಮವಾರ ತಾ|| ೮ನೇ ಸಪ್ಟೆಂಬರ ೧೯೦೬ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಸ್ಟ್ಯಾಂಡರ್ಡ ಕಾಲವಾನದ ೧೦ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ—

೧. ಧಾರವಾಡ ಹೈಸ್ಕೂಲ, ಬೆಳಗಾವ ಹೈಸ್ಕೂಲ, ವಿಜಾಪೂರ ಹೈಸ್ಕೂಲ, ಕಾರವಾರ ಹೈಸ್ಕೂಲ, ಅಲೀಬಾಗ ಜಾನ್ ಎಲ್ಫಿನಸ್ಟನ್ ಹೈಸ್ಕೂಲ.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೀನಿ ಇಸ್ರಾಯಲ್, ಕುಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲಮಾನರಿಗಾಗಿ ಕಾದಿಡಲ್ಪಡುವವು.

೩. ಮೇಲಿನ ಸ್ಕಾಲರಶಿಪ್ಪುಗಳ ಹೊರ್ತು ಶಾಲಾಖಾತೆಯ ಸರಕಾರ ತರಾವ ಸ, ೧೯೦೬ ತಾ|| ೧೬ನೇ ಜುಲೈ ೧೯೦೬ ರ ಪ್ರಕಾರ ತಿಂಗಳಿಗೆ ೫ ರೂಪಾಯಿ ಬೆಲೆಯ ಮತ್ತೊಂದು ಹೊಸ ಸ್ಕಾಲರಶಿಪ್ಪು ಮಂಜೂರು ಮಾಡಲ್ಪಟ್ಟಿರುವದು. ಈ ಸ್ಕಾಲರಶಿಪ್ಪು ಕೀಳುಜಾತಿಯ ಉಮೇದವಾರರಿಗೋಸ್ಕರವೇ ಇರುವದು. ಮಿಡಲ್ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯ ಸಂಬಂಧವಾಗಿ ಈಗ ಅಮಲಿನಲ್ಲಿರುವ ನಿಯಮಗಳೇ ಈ ಸ್ಕಾಲರಶಿಪ್ಪಿಗೂ ಇರುವವು.

೪. ಈಗ ಖಾಲೀ ಬಿದ್ದಿರುವ ಕೆಳಗೆ ಕಾಣಿಸಿದ ಮಿಡಲ್‌ಸ್ಕೂಲ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪುಗಳೂ ಪರೀಕ್ಷೆಯಲ್ಲಿ ಮೇಲು ಪಡೆಯುವವರಿಗೆ ದೊರೆಯುವಂತೆ ಇವೆ:—

ನಂಬರ್	ಜಿಲ್ಲಾ	ಯಾವ ಸ್ಕಾಲರ ಶಿಪ್ಪುಗಳು.	ಎಷ್ಟು ಕಾಲ ಸಜೆಯುವದು?	
			ಯಾವ ತಾರೀಖಿನಿಂದ	ಯಾವ ತಾರೀಖಿನ ವರೆಗೆ.
೧	ವಿಜಾಪುರ.	ಹಿಂದುಳಿದ ಹಿಂದೂ ಗಳಿಗೋಸ್ಕರ ಕಾದಿಟ್ಟಿದ್ದು.	೧ನೇ ಸಪ್ಟಂಬರ ೧೯೧೩	೩೧ನೇ ದಶಂಬರ ೧೯೧೪
೨	ಸದರ	ಮುಸಲವಾನರಿಗೋಸ್ಕರ ಕಾದಿಟ್ಟದ್ದು.	ಸದರ	೩೧ನೇ ದಶಂಬರ ೧೯೧೪
೩	ಕಾನಡಾ	ಸದರ	ಸದರ	ಸದರ
೪	ಧಾರವಾಡ	ಕೀಳಜಾತಿಯವರಿಗೋಸ್ಕರ ಕಾದಿಟ್ಟದ್ದು.	ಸದರ	ಸದರ
೫	ಬೆಳಗಾವ	ಸದರ	ಸದರ	ಸದರ
೬	ವಿಜಾಪುರ	ಸದರ	ಸದರ	ಸದರ
೭	ಕಾನಡಾ	ಸದರ	ಸದರ	ಸದರ

ಇವು, ಮೇಲೆ ಹೇಳಿದ ಪೂರ್ಣ ಅವಧಿಯ ಸ್ಕಾಲರಶಿಪ್ಪುಗಳು ದೊರೆತ ಉಮೇದವಾರರಲ್ಲಿ ಕಡೆಯ ನಂಬರಿನವನೆ ಕೆಳಗೇ ಯಾವ ಯೋಗ್ಯರಾದ ಉಮೇದವಾರರ ನಂಬರಗಳು ಬರುವವೋ ಅವರಿಗೆ ಕೊಡ ಲ್ಪಡುವವು.

೫. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

೬. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲ್ಲಲ್ಲಿಯ ಹೈಸ್ಕೂಲ ಹೆಡ್ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಫಾಯಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯು ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇದವಾರರು ಅರ್ಜಿಗಳನ್ನು ೧೫ನೇ ಅಗಷ್ಟ ೧೯೧೩ನೇ ಇಸವಿಯ ದಿವಸ ಅಥವಾ ಅದರ ಒಳಗಾಗಿ ತಮ್ಮ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿ ಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಯನ್ನು ಹಿಡಿಯಲಿಕ್ಕಿಲ್ಲ.

೭. ಉಮೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ, ಪರೀಕ್ಷೆಯ ಫೀ, ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ಸುಧಾರಿಸಿದ ನಿಯಮಗಳಲ್ಲಿ ಕಂಡು ಬರುವದು. ಈ ನಿಯಮಗಳ ಪ್ರತಿಗಳು ಕೆಳಗೆ ಸಹಿ ಮಾಡಿದವರ ಕಡೆಗಾಗಲಿ ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗಾಗಲಿ ಅರ್ಜಿಯನ್ನು ಮಾಡಿದರೆ ಬೆಲೆ ತಕ್ಕೊಳ್ಳದೆ ಸಿಗುವವು.

ಧಾರವಾಡ,
ತಾ॥ ೨೧ನೇ ಜೂನ ೧೯೧೩

F. B. P. Lory,
Educatinal Inspector S. D.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯು ಸೋಮವಾರ ತಾ॥ ೧೩ ಅಕ್ಟೊಂಬರ ೧೯೧೩ನೇ ದಿವಸ ಪ್ರಾರಂಭವಾಗುವದು.

ನೋಟೀಸು.

ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಅಕ್ಟೋಬರ ತಿಂಗಳ ೬ನೇ ತಾರೀಖಿನ ದಿವಸ ಮುಂಜಾನೆ ೧೧॥ ಘಂಟೆಗೆ ಪ್ರಾರಂಭವಾಗುವದು. ಪರೀಕ್ಷೆಗೆ ಕೂಡ್ರಲಿಚ್ಛಿಸುವ ವಿದ್ಯಾರ್ಥಿನಿಯರು ಅಗಷ್ಟ ತಿಂಗಳ ೩೦ನೇ ತಾರೀಖಿನೊಳಗಾಗಿ ತಮ್ಮ ಅರ್ಜಿಗ

ಳನ್ನು ತಮ್ಮ ತಮ್ಮ ಜಿಲ್ಲೆಯ ಡಿ|| ಎಜ್ಯುಕೇಶನಲ್ ಇನ್‌ಸ್ಪೆಕ್ಟರವರ ಮುಖಾಂತರ ನಮ್ಮ ಕಡೆಗೆ ಕಳಿಸಬೇಕು.

ಧಾರವಾಡ ಟ್ರೇನಿಂಗ ಕಾಲೇಜ
ಫಾರ್ ವೀಮೆನ್.
ತಾ|| ೨೬ನೇ ಜೂನ ೧೯೧೩

F. L. McAfee,
ಲೇಡೀ ಸುಪರಿಂಟಿಂಡೆಂಟ.

ನೋಟೀಸು.

ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜಕ್ಕೆ ಈ ವರ್ಷದಿಂದ "ಪ್ರಿಪರೇಟರಿ" ಅಂದರೆ ಪ್ರವೇಶ ಪರೀಕ್ಷೆಯ ಅಭ್ಯಾಸದ ಸಿದ್ಧತೆಯನ್ನು ಮಾಡುವ ಕ್ಲಾಸು, ಎಂಬದೊಂದು ವರ್ಗವು ಹೊಸದಾಗಿ ಜೋಡಿಸಲ್ಪಟ್ಟಿದೆ. ಅದಕ್ಕಾಗಿ ಸ್ಕಾಲರಶಿಪ್ ದೊರೆಯುವದು. ಈ ವರ್ಗಕ್ಕೆ ಸೇರಲಪೇಕ್ಷಿಸುವ ಹೆಣ್ಣು ಮಕ್ಕಳ ಪರೀಕ್ಷೆಯು ಹೆಣ್ಣು ಮಕ್ಕಳ ಳನೇ ಇಯತ್ತೆಯಂತೆ, ಇದೇ ಟ್ರೇನಿಂಗ ಕಾಲೇಜದಲ್ಲಿ ಅಕ್ಟೋಬರ ತಿಂಗಳ ೬ನೇ ತಾರೀಖಿನ ದಿವಸ ಹಗಲು ೧೧|| ಘಂಟೆಗೆ ತೆಗೆದುಕೊಳ್ಳಲ್ಪಡುವದು. ವಿದ್ಯಾರ್ಥಿನಿಯರು ತಮ್ಮ ಅರ್ಜಿಯನ್ನೂ ಅದರ ಸಂಗಡ ಗಂಡನ ಇಲ್ಲವೆ ಪಾಲಕನ ಕಬೂಲಿ ಪತ್ರವನ್ನೂ ವಯಸ್ಸಿನ ದಾಖಲೆಯನ್ನೂ ತಮ್ಮ ಶಾಲೆಯ ಹೆಡ್ ಮಿಸ್ಟ್ರೆಸ್ ಹಾಗೂ ತಮ್ಮ ಜಿಲ್ಲೆಯ ಡಿ|| ಎ|| ಇನ್‌ಸ್ಪೆಕ್ಟರವರ ಮುಖಾಂತರ ತಾ|| ೨೦ ಅಗಷ್ಟ ೧೯೧೩ ಇಸವಿಯ ಒಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ಕಳಿಸತಕ್ಕದ್ದು. ಮುಂದೆ ಈ ಅರ್ಜಿಯ ವಿಚಾರವಾಗಿ ಅಕ್ಟೋಬರ ತಿಂಗಳ ೬ನೇ ತಾರೀಖಿನ ದಿವಸ ಬಂದು ಹಾಜರಾಗಲಿಕ್ಕೆ ತಿಳಿಸಲಾದೀತು. ವರ್ಗಗಳು ನವಂಬರ ತಿಂಗಳ ೩ನೇ ತಾರೀಖಿನ ದಿವಸ ಪ್ರಾರಂಭವಾಗುವವು. ವರ್ಗಗಳು ಪ್ರಾರಂಭವಾದ ಬಳಿಕ ಸ್ಕಾಲಶಿಪ್ಪಿನೊಂದಿಗೆ ಬರಲಿಚ್ಛಿಸುವ ವಿದ್ಯಾರ್ಥಿನಿಯರನ್ನು ಯಾವದೇ ಕಾರಣದಿಂದ ಶಾಲೆಯಲ್ಲಿ ಕರಕೊಳ್ಳಲಿಕ್ಕಿಲ್ಲ.

ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜ
ಧಾರವಾಡ.
ತಾ|| ೨೬-೬-೧೯೧೩

F. L. McAfee.
ಲೇಡೀ ಸುಪರಿಂಟಿಂಡೆಂಟ.

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರಾದ ಪುಸ್ತಕಗಳ ಕೆಳಗಿನ ಪಟ್ಟಿಯನ್ನು ಎಲ್ಲವರ ತಿಳುವಳಿಕೆಯ ಬಗ್ಗೆ ಪ್ರಸಿದ್ಧ ಮಾಡಿರುತ್ತೆದೆ.

ನಂಬರು.	ಪುಸ್ತಕದ ಹೆಸರು.	ಪುಸ್ತಕದ ಭಾಷೆ.	ಯಾತಕ್ಕೆ ಮಂಜೂರು ಮಾಡಲ್ಪಟ್ಟಿದೆ.	ಕ್ರಯ.			ಶರಾ.
೧	ಲಾಲಾ ಶ್ರೀರಾಮು ಎಮ್. ಎ. ಲಾ ಹೋರ ಕೃತ:— "ಖುಮ್ ಖಾನಾ-ಈ-ಜಾವಡಿ" ಭಾಗ ೨ನೇದು (ಉರ್ದು ಕವಿಗಳ ಚರಿತ್ರೆಗಳು, ಅವರಲೇಖಗಳೊಳಗಿಂದ ಆರಿಸಿದ ಅವತರಣಗಳು ಸಹಿತವಾಗಿ)	ಉರ್ದು.	ಊರ್ದು ಶಾಲೆಗಳ ಲಾಯಬ್ರರಿಗಳಿಗೋಸ್ಕರ.	೩	೮	೦	ಚಲೋ ಕಾಗದವಳ್ಳದ್ದು
೨	ಮುನಶಿ ಮಹಮ್ಮದ ಇಸ್ಮಾಯಿಲ್ ಅಲಹಾಬಾದ:— "ತಾಪೀಮುಲ್-ಕ್ವಾಯಿಡ್" ಮೊಲ ವಿಕೃತ.	ಸದರ.	ಊರ್ದು ಶಾಲೆಗಳ ಲಾಯಬ್ರರಿಗಳಿಗೂ ಇನಾಮುಗಳಿಗೂ	೦	೩	೦	

ಡಾಯರೇಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ
ಇವರಆಫೀಸು ಪುಣೆ.

(Sd) D. S. SAVARKAR.
Ag. Asst. to D. P. I.

ಸಿದ್ಧನಾಥ ವಾಚನ ಮಂದಿರ.
ಮೂರಬ. ಜಿ ಧಾರವಾಡ.

ಶಾಲಾಪತ್ರ.

ಪುಸ್ತಕ ೪೯. | ಸಪ್ಟೆಂಬರ ೧೯೧೩. | ಸಂಚಿಕೆ ೯.

ಸ್ಫುಟ ವಿಷಯಗಳು.

೧. ಮಾತಾಡುವ ವಿದ್ಯುದ್ದೀಪವು.

ಜರ್ಮನಿಯ ಇಬ್ಬರು ಶೋಧಕರು ಬಂದು ವಿಲಕ್ಷಣ ಸಂಗತಿಯನ್ನು ಕಂಡು ಹಿಡಿದಿದ್ದಾರೆ. ಇವರು ವಿದ್ಯುತ್ತಿನ ಸಂಬಂಧದಿಂದ ಕೆಲವು ಪ್ರಯೋಗಗಳನ್ನು ನಡಿಸಿರಲು, ವಿದ್ಯುದ್ವಾಹಕತಂತಿಗೆ, ಟೆಲಿಫೋನ ಯಂತ್ರದ ರಿಸೀಹ್ವರವನ್ನೂ ಹೊಸದಾಗಿ ಬಳಿಕೆಯಲ್ಲಿ ಬಂದ ಟಂಗಸ್ಟನ್ ಎಂಬ ಧಾತುವಿನ ತಂತಿಯಿಂದಾದ ವಿದ್ಯುದ್ದೀಪವನ್ನೂ ಜೋಡಿಸಿ, ತಾವು ಬೇಕೊಂಡ ವಿಷಯವನ್ನು ಕುರಿತು ಮಾತಾಡುತ್ತ ಕುಳಿತರು. ಒಬ್ಬರು ಆ ರಿಸೀವ್ಹರದ ಬಳಿಯಲ್ಲಿ ಕುಳಿತಿದ್ದರು; ಮತ್ತೊಬ್ಬರು, ಆ ವಿದ್ಯುದ್ದೀಪದ ಹತ್ತರ ಕುಳಿತಿದ್ದರು. ಆಗ ಅವರಿಗೆ ಆ ರಿಸೀವ್ಹರದಲ್ಲಿ ಆಡಿದ ಮಾತು ಆ ದೀಪದೊಳಗಿಂದ ನಿಚ್ಚಳವಾಗಿ ಕೇಳ ಬಂತು. ಈ ಮಾತನ್ನು ಅವರು ಹಲವು ಸಾರೆ ಮನಗಂಡ ಬಳಿಕ, ಹೀಗಾಗುವ ಕಾರಣವನ್ನು ಕುರಿತು ವಿಚಾರ ಮಾಡಿಸಿದರು. ಅದರ ನಿರ್ಣಯವು ಇನ್ನೂ ಆಗಿಲ್ಲ. ಧ್ವನಿಯು ಕೇಳ ಬರುವಿಕ್ಕೆ ಹವೆಯು ಅವಶ್ಯವಾಗಿ ಬೇಕು. ಆ ದೀಪದ ಕಾಜಿನ ಬುರುಡೆಯೊಳಗಿನ ಹವೆಯನ್ನಂತೂ ತೆಗೆದು ಬಿಟ್ಟಿದ್ದರು. ಹಾಗಾದರೆ ಆ ಗೋಲಾಕಾರದ ಕಾಜಿನ ಬುರುಡೆಯು ವಾಹಕದ ಕಾರ್ಯವನ್ನು ಕೈಕೊಂಡಿರಬಹುದೋ? ಈ ಮಾತಿನ ನಿಶ್ಚಯಾತ್ಮಕವಾದ ಸಿದ್ಧಾಂತವು ಇನ್ನೂ ಪ್ರಕಟವಾಗಿಲ್ಲ.

೨. ಎಕ್ಸರೇಜವೆಂಬ ನಿಶ್ಚಿಷ್ಟ ಪ್ರಕಾರದ ವಿದ್ಯುತ್ಕಿರಣಗಳು.

ಈ ಕಿರಣಗಳ ಸಹಾಯದಿಂದ ಶರೀರವನ್ನು ಕೊಯ್ಯದೆ, ಹೊರಗಿನಿಂದಲೇ ಅದರ ಒಳಭಾಗವನ್ನು ನಾವು ನೋಡಲು ಸಮರ್ಥರಾಗಿದ್ದೇವೆಂಬ ಮಾತು ಧಾರವಾಡ ಟ್ರೇನಿಂಗ ಕಾಲೇಜಿನಲ್ಲಿ ಒಳಗಡೆಯಲ್ಲಾದ ಪ್ರಯ

ರ್ಶನಕ್ಕೆ ಬಂದ ಮೂಸ್ತರ ಜನರಿಗೆ ಗೊತ್ತಿರಬಹುದು. ಇತ್ತೆಲಾಗಿ ಶಾಸ್ತ್ರಜ್ಞರು ಈ ಕಿರಣಗಳನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ಉಪಯೋಗಿಸಿ ಬರಿಗಣ್ಣಿಗೆ ಕಾಣದ ಸೂಕ್ಷ್ಮ ಜೀವಿಗಳ ಶರೀರದ ಅಂತರಂಗ ರಚನೆಯನ್ನು ನೋಡಲಿಕ್ಕೆ ಶಕ್ತರಾಗಿದ್ದಾರೆ. ಈ ಮಾತನ್ನು ಮೊದಲಿಗೆ ಗೊತ್ತು ಹಚಿದವನು ಮಿ. ಗೋಬಿ ಎಂಬ ಫ್ರೆಂಚ ಶಾಸ್ತ್ರಜ್ಞನು. ಈ ಶೋಧ ವಾಗುವದಕ್ಕಿಂತ ಮೊದಲು ಬರೇ ಬಲವುಳ್ಳ ಸೂಕ್ಷ್ಮದರ್ಶಕಯಂತ್ರ ದಿಂದ ನೋಡಿ ಹೆಲ ಕೆಲವು ಸೂಕ್ಷ್ಮ ಜೀವಿಗಳು ಒಂದೇ ವರ್ಗದವೆಂದು ಭಾವಿಸುತ್ತಿದ್ದರು. ಈಗ ಈ ಹೊಸ ಶೋಧದಿಂದ ಅಯಾ ಪ್ರಾಣಿಗಳ ಶರೀರಾಂತರ್ಗತ ರಚನೆಗಳು ಸ್ಪುಟವಾಗಿ ಕಾಣುತ್ತಿರುವದರಿಂದ ಅವೆಲ್ಲ ಭಿನ್ನ ಭಿನ್ನ ವರ್ಗದವೆಂದು ಗೊತ್ತಾಗಿದೆ. ಒಟ್ಟಿಗೆ ಈ ಶೋಧದಿಂದ ಮಾನವನ ದೃಷ್ಟಿ ಶಕ್ತಿಯು ಮಿತಿಮೀರಿ ಬೆಳೆಯಿತೆಂಬದಕ್ಕೆ ಸಂಶಯವಿಲ್ಲ.

---

೩. ಕಟ್ಟಿಗೆಯ ಪುಡಿಯಿಂದಾಗುವ ಹೊಸ ಪದಾರ್ಥಗಳು.

ತೊಲೆಗಳನ್ನು ಕೊರೆಯುವಾಗ ಕಟ್ಟಿಗೆಯ ಪುಡಿಯು ಕೆಳಗೆ ಬೀಳುತ್ತದಷ್ಟೇ. ಅದರ ಉಪಯೋಗವೇನು ಮಾಡಬೇಕೆಂಬದು ಇಪ್ಪತ್ತು ದಿವಸ ಯಾರಿಗೂ ಹೊಳೆದಿದ್ದಿಲ್ಲ. ನಮ್ಮಲ್ಲಂತೂ ಅದನ್ನು ತಿಪ್ಪಿಗೆ ಹಾಕುತ್ತಿದ್ದರು. ಅದಕ್ಕೂ ಬುದ್ಧಿವಂತರು ಕುಳ್ಳು ಹಚ್ಚಲಿಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಇಷ್ಟೇ. ಆದರೆ ಈಗ ಪಾಶ್ಚಾತ್ಯ ಶೋಧಕರು, ಇದರಲ್ಲಿ ಗಂಧಕಾಮ್ಲವನ್ನು ತಕ್ಕಸ್ಟು ಹಾಕಿ ಒಂದು ಪಾತ್ರೆಯಲ್ಲಿ ಈ ಮಿಶ್ರಣವನ್ನಿಟ್ಟು ಮೇಲೆ ಒಳ್ಳೇ ಜಡವಾದ ಭಾರವನ್ನು ಹೇರಿ ಪಾತ್ರೆಯ ಬಾಯನ್ನು ಗಟ್ಟಿಯಾಗಿ ಮುಚ್ಚಿ ಬಿಡುವರು. ಬಹಳ ಹೊತ್ತಿನ ಮೇಲೆ ಆ ಪಾತ್ರೆಯನ್ನು ತೆರೆದು ನೋಡಿದರೆ, ಗಂಧಕಾಮ್ಲದ ಸಂಯೋಗದಿಂದ ರಸಾಯನ ಕ್ರಿಯೆಯು ನಡೆದು, ಅದರಿಂದ ಒಂದು ತರದ ಸೀ-ಪದಾರ್ಥವು ಸಿದ್ಧವಾಗಿರುವದು. ಬಳಿಕ ಅದರಲ್ಲಿ ತುಸು ಕಾಕಂಬಿಯನ್ನು ಕಲಿಸಿ ಕುದುರೆಗಳಿಗೆ ತಿನಿಸುವರು. ಅವು ಪ್ರೀತಿಯಿಂದ ಇದನ್ನು ತಿನ್ನುವವಿಷ್ಟೇ ಅಲ್ಲ; ಈ ಖಾದ್ಯದಿಂದ ಪುಷ್ಟವಾಗಿಯೂ ಆಗುವವು. ಇದಲ್ಲದೆ ಈ ಪದಾರ್ಥದಿಂದ ಮೋಟಾರ ಗಾಡಿಗೆ ಬೇಕಾಗುವ ಸ್ಪಿರಿಟನ್ನು ಹುಟ್ಟಿ

ಪಲಿಕ್ಕೆ ಬರುವದು. ಒಂದು ಟನ್ನು ಪುಡಿಯಿಂದ ೩೦-೩೫ ಗ್ಯಾಲನ್ ಸ್ಪಿರಿಟು ಉತ್ಪನ್ನವಾಗುವದು.

---

೪. ಬವ್ಹೇರಿಯಾದ ಅರಸನ ಉಪದೇಶ.

ಬವ್ಹೇರಿಯಾದ ಅರಸನು ತನ್ನ ಪ್ರಜೆಗಳಿಗೆ ಮಾಡಿದ ಉಪದೇಶವು ಸಂಸಾರಿಕರಾದ ಯಾವತ್ತು ಜನರಿಗೂ ಉಪಯುಕ್ತವಾಗಿರುವದರಿಂದ ಅದನ್ನು ಇಲ್ಲಿ ಕೊಡುತ್ತೇವೆ:—

(೧). ತೀರ ಅಗತ್ಯವಿದ್ದಷ್ಟಕ್ಕಿಂತ ಹೆಚ್ಚು ಶಬ್ದಗಳನ್ನು ಮಾತಾಡ ಬಾರದು. ಯಾವ ಸಂಗತಿಯ ಬಗ್ಗೆ ಉಪಾಯಗಳು ಕುಂಠಿತವಾಗಿರುವವೋ ಆ ಸಂಗತಿಯ ಬಗ್ಗೆ ಮನಸಿಗೆ ತೊಂದರೆಯನ್ನು ಮಾಡಿಕೊಳ್ಳ ಬಾರದು.

(೨). ಪ್ರತಿಯೊಬ್ಬ ಮನುಷ್ಯನು ತನ್ನ ಶರೀರವೆಂಬದೊಂದು ಪ್ರಬಲವಾದ ರಾಜ್ಯವಿರುತ್ತದೆಂತಲೂ, ಪ್ರತಿಕ್ಷಣದಲ್ಲಿ ಆ ರಾಜ್ಯವನ್ನು ತಾನು ಆಳುತ್ತಿರುವೆನೆಂತಲೂ, ತನ್ನ ಮನಸಿನಲ್ಲಿ ತಿಳಿದು ನಡೆಯುತ್ತಿರಬೇಕು. ಈ ಶರೀರರೂಪವಾದ ರಾಜ್ಯವಲ್ಲಿ ಸುವಿಚಾರ-ಸದಾಚಾರಗಳೆಂಬ ಮಂತ್ರಿಗಳ ಸಹಾಯದಿಂದ ರೋಗ, ಭಯ, ದುಃಖ ಇತ್ಯಾದಿ ಅನೇಕ ಶತ್ರುಗಳನ್ನು ಯಾವಾಗಲೂ ಗೆಲ್ಲುತ್ತ, ತನ್ನ ರಾಜ್ಯವನ್ನು ಸ್ಥಿರವಾಗಿ ಕಾಯ್ದುಕೊಳ್ಳತಕ್ಕದ್ದು.

(೩). ಜನರ ಅಭಿಪ್ರಾಯಗಳಿಗೆ ಮಾನಕೊಡತಕ್ಕದ್ದು. ಆದರೆ ಸ್ವಂತ ಸ್ಫೂರ್ತಿಯಿಂದಲೂ, ದೃಢವಾದ ಆತ್ಮವಿಶ್ವಾಸದಿಂದಲೂ ಮಾಡಿದ ಕೆಲಸದಲ್ಲಿ ಆ ಅಭಿಪ್ರಾಯಗಳನ್ನು ಲೆಕ್ಕಿಸಬಾರದು.

(೪). ಜನರ ಮನಸ್ಸನ್ನು ಸಂತೋಷಗೊಳಿಸುವದಕ್ಕಾಗಿ ಸತ್ಯವಾದ ಅಭಿಪ್ರಾಯಗಳನ್ನು ಮುಚ್ಚುಮರೆಮಾಡಬಾರದು. ಜನರು ನಿಮ್ಮ ಅಭಿಪ್ರಾಯಗಳನ್ನು ಆದರಿಸಬೇಕೆಂದು ನೀವು ಇಚ್ಛಿಸುತ್ತಿದ್ದರೆ, ಮೊದಲು ನೀವೇ ನಿಮ್ಮ ಅಭಿಪ್ರಾಯಗಳನ್ನು ಆದರಿಸುತ್ತೀರೆಂಬ ಸಂಗತಿಯನ್ನು ಜನರ ಅನುಭವಕ್ಕೆ ತಂದುಕೊಡಬೇಕು.

---

೫. ಮನುಷ್ಯಪ್ರಾಣಿಯು ಚಿರಂಜೀವಿಯೂ ಆಗಬಹುದು.

ಜಗತ್ತಿನಲ್ಲಿ ಅತಿ ಪ್ರಸಿದ್ಧ ಶಾಸ್ತ್ರಜ್ಞರಾದ ಪ್ರೊ. ವ್ಯಾಕ್ನಿಕಾಫ್ ಎಂಬವರು ಒಂದು ಮಾಸಪತ್ರಿಕೆಯಲ್ಲಿ ಈ ವಿಷಯದ ಸಂಬಂಧದಿಂದ ಕೆಳಗೆ ಕೊಟ್ಟಂತೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುತ್ತಾರೆ

"ನೂರುವರ್ಷಗಳ ಪೂರ್ವದಲ್ಲಿ ಮಾನವೀ ಆಯುಷ್ಯದ ಸರಾಸರಿಯು ಇಪ್ಪತ್ತಕ್ಕಿಂತ ಹೆಚ್ಚು ಹೊರಡುತ್ತಿದ್ದಿಲ್ಲ. ಸದ್ಯಕ್ಕೆ ಆರೋಗ್ಯಶಾಸ್ತ್ರವು ಅನೇಕ ರೋಗಗಳನ್ನು ಗೆದ್ದಿದ್ದರಿಂದ ಆ ಸರಾಸರಿಯು ಮೊದಲಿನ ಇಮ್ಮಡಿಯಾಗಿರುತ್ತದೆ. ಸದ್ಯದ ಎಷ್ಟೋ ಪ್ರಾಣಿಶಾಸ್ತ್ರಜ್ಞರು ಮಾನವ ಶರೀರಕ್ಕೆ ಸ್ವಾಭಾವಿಕವಾದ ಮರಣವು ಬರುವ ಅಗತ್ಯವಿಲ್ಲೆಂದು ಪ್ರತಿಪಾದಿಸಹತ್ತಿದ್ದಾರೆ. ಅತಿ ಸೂಕ್ಷ್ಮ ಪ್ರಾಣಿಗಳಲ್ಲಿಯೂ ಕೂಡ ಶಾರೀರಿಕ ಅನುಭವವು ಕಂಡು ಬಂದ ಮೇಲೆ ಒಳ್ಳೇ ಉನ್ನತಸ್ಥಿತಿಯನ್ನು ಹೊಂದಿದ ಮನುಷ್ಯ ಪ್ರಾಣಿಯಲ್ಲಿ ಅದು ಯಾಕೆ ಇರಬಾರದೆಂಬ ಪ್ರಶ್ನವು ವಿಚಾರಕ್ಕೆ ತಕ್ಕದ್ದಾಗಿರುವದು. ಮನುಷ್ಯಪ್ರಾಣಿಗೆ ಮರಣವಿಲ್ಲೆಂಬ ಮಾತು ಎಷ್ಟೋ ಜನರಿಗೆ ಅಸಾಧ್ಯವೂ ಕಲ್ಪನಾತೀತವೂ ಆಗಿ ತೋರಬಹುದು. ಆದರೆ ನಮ್ಮ ಪೂರ್ವಜರಿಗೆ ಅಸಾಧ್ಯವಾಗಿ ತೋರುತ್ತಿದ್ದ ಎಷ್ಟೋ ಸಂಗತಿಗಳನ್ನು ಸದ್ಯದ ಶಾಸ್ತ್ರಗಳು ಜಗತ್ತಿಗೆ ಸಾಧ್ಯವಾಗಿ ತೋರಿಸಿರುತ್ತವೆ. ಅದೇ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೆ ಚಿರಂಜೀವಿತ್ವವನ್ನು ಸಾಧ್ಯಮಾಡಿಕೊಡುವದು ಆ ಶಾಸ್ತ್ರಗಳಿಂದ ಆಗದ ಮಾತಲ್ಲ. ಸೂಕ್ಷ್ಮದೃಷ್ಟಿಯಿಂದ ಅವಲೋಕನ ಮಾಡುವವರಿಗೆ ಮರಣವು ಮನುಷ್ಯ ಶರೀರದ ಸಹಜ ಧರ್ಮವೇ ಅಲ್ಲವೆಂದು ಕಂಡುಬರುವದು. ಮಾನವೀ ಶರೀರಕ್ಕೆ ಬಿದಗುವ ಈ ಮರಣವು ಕೆಲವು ಕಾರಣಗಳಿಂದ ಉತ್ಪನ್ನವಾದ ಬಂದು ಕಾರ್ಯವಾಗಿರುತ್ತದೆ. ಮರಣವೆಂಬ ಕಾರ್ಯವನ್ನು ಉತ್ಪನ್ನಮಾಡುವ ಕಾರಣಗಳನ್ನೇ ನಾವು ನಮ್ಮ ಶರೀರದಲ್ಲಿ ಮೂಲತಃ ಹುಟ್ಟಗೊಡದಿದ್ದರೆ, ನಮಗೆ ಖಂಡಿತವಾಗಿ ಅಮರರಾಗಲಿಕ್ಕೆ ಬರುತ್ತದೆ. ಮಾನವೀ ಶರೀರದಲ್ಲಿ ಕೆಲವು ವಿಷಪದಾರ್ಥಗಳ ಸಂಚಯವು ಯಾವಾಗಲು ಆಗುತ್ತಿರುತ್ತದೆ; ಈ ವಿಷಪದಾರ್ಥಗಳಿಂದಲೇ ಮುಂದೆ ಶರೀರದಲ್ಲಿ ನಡೆಯುವ ಬೇರೆ ಬೇರೆ ವ್ಯಾಪಾರಗಳಿಗೆ ಪೂರ್ಣ ಪ್ರತಿಬಂಧವಾಗಿ ಮರಣವು ಸಂಭವಿಸುತ್ತದೆ. ಶರೀರದಲ್ಲಿ ಈ ವಿಷಪದಾರ್ಥಗಳೇ ಮೂಲತಃ ಹುಟ್ಟದಿರುವಂತೆ ಮಾಡುವ ಉಪಾಯ

ಮನುಷ್ಯ, ಒಂದು ವೇಳೆ ಪಟ್ಟಿದರೆ ಯಾವ ಔಷಧಗಳಿಂದ ಅವುಗಳನ್ನು ಪೂರ್ಣವಾಗಿ ನಾಶಮಾಡಬಹುದೆಂಬುದನ್ನೂ ಶೋಧಿಸುವದರಲ್ಲಿ ಪ್ರೊಫೆಸರ್ ಮ್ಯಾಕ್ನಿಕಾಫರೆಂಬವರು ತೊಡಗಿರುವರು. ಅಜ್ಞಾನದಿಂದಲೂ ಬೇರೆ ಅನೇಕ ಕಾರಣಗಳಿಂದಲೂ ಮಾನವ ವಂಶದೊಳಗಿನ ಪ್ರತಿಯೊಂದು ವ್ಯಕ್ತಿಗೆ ಮರಣದ ಕೆಟ್ಟ ಚಟವು ಹತ್ತಿ ಹೋಗಿದೆ. ಈ ಚಟದ ಮೂಲಕವಾಗಿ ಮನುಷ್ಯನಿಗೆ

"मरणं प्रकृतिः शरीरिणां विकृतिर्जीवितमुच्यते बुधैः

ಎಂದು ತಪ್ಪುತಿಳುವಳಿಕೆಯು ಆಗಿ ಹೋಗಿದೆ. ಸದ್ಯನ ಶಾಸ್ತ್ರೀಯ ಶೋಧಗಳಿಂದ ಅಮರತ್ವವೇ ಮನುಷ್ಯಜಾತಿಯ ಪ್ರಕೃತಿಯಾಗಿದ್ದು, ಸೃಷ್ಟಿಯ ನಿಯಮವನ್ನು ಪುರಿಡಸ್ಥಕ್ಕಾಗಿ ಮರಣವು ಮನುಷ್ಯಜಾತಿಗೆ ಸಿಗತಕ್ಕ ಶಿಕ್ಷೆಯಾಗಿರುತ್ತದೆಂದು ಸಿದ್ಧವಾಗುತ್ತದೆ. ಮೃತ್ಯುವನ್ನು ಗೆಲ್ಲುವ ಸಾಮರ್ಥ್ಯವು ಪ್ರತಿಯೊಬ್ಬ ಮನುಷ್ಯನಲ್ಲಿ ಸ್ವಾಭಾವಿಕವಾಗಿ ಇರುವದು. ಆದರೆ ಅಜ್ಞಾನದ ಮೂಲಕವಾಗಿ ಆ ಶಕ್ತಿಯ ಉಪಯೋಗವನ್ನು ಮಾಡಿಕೊಳ್ಳಲಿಕ್ಕೆ ಅವನಿಗೆ ಬರುವದಿಲ್ಲ. ಆತ್ಮಕ್ಕೆ ಸಾವಿಲ್ಲೆಂದು ಸಾಧಾರಣವಾಗಿ ಎಲ್ಲ ಸುಶಿಕ್ಷಿತರು ಒಡಂಬಡುತ್ತಾರೆ. ಆದರೆ ಅವರು ಶಾರೀರಿಕ ಅಮರತ್ವವನ್ನು ಒಪ್ಪಿಕೊಳ್ಳುವದಿಲ್ಲ. ಜ್ಞಾನದ ಹಾಗು ಶಾಸ್ತ್ರಗಳ ಅಭಿವೃದ್ಧಿಯು ಆಗುತ್ತ ಹೋದಂತೆಯೂ, ಶಾರೀರಿಕ ಅಮರತ್ವದ ಉದಾಹರಣೆಗಳು ದೃಷ್ಟಿಗೆ ಬೀಳುತ್ತ ಹೋದಂತೆಯೂ, ಮರಣದ ಸಂಬಂಧವಾದ ಮನುಷ್ಯನ ಕಲ್ಪನೆಗಳು ಬದಲಾಗುತ್ತ ಹೋಗುವವು.

---

೬. ರಾಷ್ಟ್ರಗಳ ಸದ್ಗುಣಗಳೂ ದುರ್ಗುಣಗಳೂ.

ಸುಪ್ರಸಿದ್ಧ ಇತಿಹಾಸಕಾರರಾದ ಮಿ. ಜೇಮ್ಸ್ ಬ್ರಾಯಿಸ ಎಂಬವರು ಈ ವಿಷಯದಲ್ಲಿ ಅಭಿಪ್ರಾಯ ಪಡುವದೇನೆಂದರೆ:—

"ಇತಿಹಾಸಕಾರರಿಗೆ ರಾಷ್ಟ್ರಗಳ ಸದ್ಗುಣಗಳು ಗೊತ್ತಿರುವಂತೆ ದುರ್ಗುಣಗಳೂ ಗೊತ್ತಿರುವವು. ನಿಷ್ಟಾವಾದ ರಾಷ್ಟ್ರವು ಈ ಜಗತ್ತಿನಲ್ಲಿ ಒಂದೂ ಇಲ್ಲ. ಜಗತ್ತಿನ ಸಂಸಾರಕ್ಕೆ ಪ್ರತಿಯೊಂದು ರಾಷ್ಟ್ರದಿಂದ ಸಹಾಯವು ಆಗಿಯೇ ಆಗುತ್ತದೆ ಎಂಬ ಮಾತನ್ನು ಪುರೆಸುಕೂಡದು. ಪ್ರತಿಯೊಂದು ರಾಷ್ಟ್ರನ ಮೇಲೆ ಬೇರೆ ರಾಷ್ಟ್ರಗಳ

ಉಪಕಾರವಾಗಿರುವದು. ಬರೀ ಭೌತಿಕ ಉನ್ನತಿಯೆಲ್ಲಿಷ್ಟೇ ಅಲ್ಲ; ಆಧ್ಯಾತ್ಮಿಕ ಹಾಗು ಬೌದ್ಧಿಕ ಉನ್ನತಿಯಲ್ಲಿಯೂ ಕೂಡ ಪ್ರತಿಯೊಂದು ರಾಷ್ಟ್ರಕ್ಕೆ ಬೇರೆ ರಾಷ್ಟ್ರಗಳ ಉನ್ನತಿಯಿಂದಲೂ ಗೌರವದಿಂದಲೂ ಸಹಾಯವಾಗುತ್ತಿರುತ್ತದೆ." ನಮ್ಮ ಸುಧಾರಣೆಯೇ ಶ್ರೇಷ್ಠವಾದದ್ದು; ನಿಮ್ಮ ಸುಧಾರಣೆಯಂದರೆ ತೀರ ನಿರುಪಯುಕ್ತವಾವದ್ದು ಅದರಲ್ಲಿ ಏನೂ ಅರ್ಥವಿಲ್ಲ! ಎಂದು ಅನ್ನುವವರು ಬ್ರಾಯಿಸಸಾಹೇಬರವರ ಮೇಲಿನ ಅಭಿಪ್ರಾಯವನ್ನು ಲಕ್ಷದಲ್ಲಿಡತಕ್ಕದ್ದಾಗಿದೆ.

---

೭. ಸ್ವಾವಲಂಬನದ ಉದಾಹರಣೆ.

ಬಿಳಗಡೆಯಲ್ಲಿ ಲೀಡ್ಸ ಎಂಬಲ್ಲಿ ಒಂದು ದಿವಸ ಲೋಣಿಗಳನ್ನು ಉಡುಗುವ ಐದು ಸಾವಿರ ಜನರು ಒಕ್ಕಟ್ಟಿನಿಂದ ತಮ್ಮ ಕೆಲಸ ಮಾಡಲಿಕ್ಕಿಲ್ಲೆಂದು ಹಟ ಹಿಡಿದರು. ಅದರಿಂದ ಊರೊಳಗಿನ ಹೊಲಸು ಹೋಗದೆ ಉಳಿಯಿತು. ಆದರೆ ಅಲ್ಲಿಯ ನಿವಾಸಿಗಳಿಗೆ ಸ್ವಚ್ಛತೆಯ ಮಹತ್ವವು ಗೊತ್ತಿದ್ದರಿಂದ ಒಳ್ಳೇ ಡೌಲಿನ ಪೋಷಾಕು ಹಾಕಿಕೊಂಡ ಗೃಹಸ್ಥರೂ ಕೂಡ ಕೈಯಲ್ಲಿ ಕಸಬರಿಗೆಯನ್ನು ತಕ್ಕೊಂಡು ಲೋಣಿಗಳನ್ನು ಉಡುಗಹತ್ತಿದರು. ಹಾಗೂ ಸಣ್ಣ ಸಣ್ಣ ಹುಡುಗರು ಸಹ ಗುಂಪುಗುಂಪಾಗಿ ಈ ಕೆಲಸಕ್ಕೆ ಸಹಾಯವಾಡಿದರು. ನಮ್ಮ ದೇಶದಲ್ಲಿ ಶಾವು ಕೂಡ್ರುವ ಕೋಣೆಯೊಳಗೆ ಮೊಣಕಾಲಮಟ ಕಸಬಿದ್ದರೂ ಕಣ್ಣೆತ್ತಿ ನೋಡದವರು ಈ ಮಾತನ್ನು ಸ್ವಲ್ಪ ವಿಚಾರಮಾಡಬೇಕು.

---

೮. ಹುಡುಗರ ಅವಿಧೇಯತ್ವದ ಪರಿಣಾಮ.

ಮೂರು ದಿವಸಗಳ ಹಿಂದೆ ಹ್ಯೂಬರ್ಟ್‌ಮೂರ್ ಹಾಗು ಡೊನಾಲ್ಡ ಎಂಬ ಹೆಸರಿನ್ನೊಂದು, ಒಂಭತ್ತು ವರ್ಷದ ವಯಸ್ಸಿನ ಇಬ್ಬರು ಹುಡುಗರು ಒಂದು ಸಣ್ಣ ನಾವಿನಲ್ಲಿ ಕುಳಿತು ವಿನೋದವಾಡುತ್ತ ಸಾಯಂಗಾರಾನದಿಯ ಪ್ರವಾಹದಲ್ಲಿ ತಿರುಗಾಡುತ್ತಿರಲು, ದುರ್ದೈವದಿಂದ ನೀರಿನ ಸೆಳವಿಗೆ ಸಿಕ್ಕರು. ಆಗ ನೂರಾರು ಜನ ಪ್ರೇಕ್ಷಕರು ದಂಡೆಯಮೇಲೆ ನಿಂತಿದ್ದರು. ಆದರೆ ಆ ಹುಡುಗರು ಕುಳಿತ ನಾವಿಗೆ ಕಟ್ಟಿದ ಹಗ್ಗವು ಹರಿದು ಹೋದದ್ದರಿಂದ ಛಾಪ! ಅವರನ್ನು ಉಳಿಸಿಕೊಳ್ಳುವದು ಅಶಕ್ಯವಾಯಿತು.

ಸೆಳವಿಗೆ ಬಿದ್ದ ಮೇಲೆ ಆ ಹುಡುಗರು ನೀರೊಳಗೆ ಮುಣುಮುಣುಗಿ ಏಳುತ್ತ ಪ್ರವಾಹದಲ್ಲಿ ಅಲ್ಲಲ್ಲಿಗೆ ಇರುವ ಕಲ್ಲುಗಳ ಮೇಲೆ ಅಪ್ಪಳಿಸುತ್ತ ಮರಣ ಹೊಂದಿದರು. ಅವರನ್ನು ಉಳಿಸಿಕೊಳ್ಳುವದಕ್ಕಾಗಿ ಎಷ್ಟೋ ಜನರು ನದಿಯಲ್ಲಿ ಹಾರಿಕೊಂಡು ಪ್ರಯತ್ನಮಾಡಿದರು. ಆದರೆ ಅವರಿಗೆ ಯಶ ದೊರೆಯಲಿಲ್ಲ. ಆ ಹುಡುಗರೂ ಎಷ್ಟೋ ಹೊತ್ತಿನ ವರೆಗೆ ದಂಡೆಯ ಮೇಲೆ ಇದ್ದವರನ್ನು ದೀನಸ್ವರದಿಂದ ಬಿದರುತ್ತಿದ್ದರು. ಕಡೆಗೆ ಆ ಶಬ್ದವು ಕಟ್ಟಾಗಿ ಅವರು ಮೃತ್ಯುವಿನ ಬಾಯಿಗೆ ತುತ್ತಾದರು. ಅವರಿಬ್ಬರೂ ಹುಡುಗರು ದೊಡ್ಡ ಮನೆತನಕ್ಕೆ ಹೊಂದಿದವರಿದ್ದು ಒಳ್ಳೇ ಪ್ರೀತಿಯ ಗೆಳೆಯರಾಗಿದ್ದರು. ಎಷ್ಟೋ ಸಾರೆ ಅವರು ಈಗಿನಂತೆ ಸಣ್ಣ ನಾವಿನಲ್ಲಿ ಕುಳಿತು ನಾಯಗಾರಾ ನದಿಯ ಪ್ರವಾಹದಲ್ಲಿ ವಿನೋದಮಾಡುತ್ತ ತಿರುಗಾಡುತ್ತಿದ್ದುದರಿಂದ " ನಿಮ್ಮ ಮೇಲೆ ಬಿಮ್ಮಿಲ್ಲೊಮ್ಮೆ ಭಯಂಕರ ಪ್ರಸಂಗವು ಬಿದ್ದಗ ಬಹುದು" ಎಂದು ಅವರ ತಾಯಿತಂದೆಗಳು ಅವರಿಗೆ ಆಗಾಗ್ಗೆ ಹೇಳುತ್ತಿದ್ದರು. ಆದರೆ ಅದನ್ನು ಆ ಹುಡುಗರು ಲೆಕ್ಕಿಸಿದ್ದಿಲ್ಲ. ಕಡೆಗೆ ಮೇಲೆ ವಿವರಿಸಿದಂತೆ ಅತ್ಯಂತ ದುಃಖದಾಯಕ ರೀತಿಯಿಂದ ಅವರ ಅಂತವಾಯಿತು.

ಜಾವಾ ದ್ವೀಪದ ಪ್ರಾಚೀನ ಹಿಂದೂ ಜನರೂ ಅವರ ಪ್ರಾಂಜ್ಞೆಯವೂ.

(ಡಾ. ನ. ಗೋ. ಸರದೇಸಾಯಿ ಎಂಬವರು ಸ್ವತಃ ನೋಡಿ ಬರೆದ ವೃತ್ತಾಂತದಿಂದ ಕನ್ನಡಿಸಿದ್ದು.)

ಈ ದ್ವೀಪವು ಹಿಂದುಸ್ತಾನದ ಆಗ್ನೇಯಕ್ಕೆ ವಿಷುವೃತ್ತದ ಕೆಳಗೆ ೫ ದ ಮೇಲೆ ಇರುತ್ತದೆ. ನಮ್ಮ ಪೂರ್ವಜರು ಆಗ್ನೇಯ ದಿಕ್ಕಿಗೆ ಅಗ್ನಿಯ ನಿವಾಸಸ್ಥಳವಿರುವದೆಂದು ಕಲ್ಪಿಸಿದ್ದು ಯಥಾರ್ಥವದೆ. ಹ್ಯಾಗಂದರೆ, ಪಾಸಿಫಿಕ್ ಮಹಾಸಾಗರದ ನಡುಗಡ್ಡೆಗಳಲ್ಲಿ ಎಷ್ಟೋ ಜಾಗೃತ ಜ್ವಾಲಾಮುಖಿಗಳು ಸರ್ವಕಾಲದಲ್ಲಿಯೂ ಉರಿಯುತ್ತಿರುತ್ತವೆ. ಒಂದೇ ಜಾವಾ ದ್ವೀಪದಲ್ಲಿ ೧೪೦ ಜಾಗೃತ ಜ್ವಾಲಾಮುಖಿಗಳೂ, ೯೦ ಅಜಾಗೃತ ಜ್ವಾಲಾಮುಖಿಗಳೂ ಇರುವವು. ಇಲ್ಲಿಯ ಹವೆ ಬಹು ಸೊಗಸಾದದ್ದು. ಅಲ್ಲಿ

ಹನ್ನೆರಡು ತಿಂಗಳುಗಳಲ್ಲಿಯೂ ವಸಂತನು ಮನೆಮಾಡಿಕೊಂಡು ಇರುವನು. ಅದರಿಂದಲೇ ಪಾಶ್ಚಿಮಾತ್ಯರು ಈ ದ್ವೀಪಕ್ಕೆ ಪೂರ್ವದೋಟ (The garden of the East) ವೆಂಬ ಹೆಸರು ಕೊಟ್ಟಿರುವರು. ಈದ್ವೀಪದ ಉದ್ದಳತೆಯು ಸುಮಾರು ೬೦೦ ಮೈಲು, ಅಗಲಳತೆ ೧೪೦ ಮೈಲು. ಈ ದ್ವೀಪದಲ್ಲಿ ಹಲ ಕೆಲವು ಗುಡ್ಡದ ಸಾಲುಗಳಿರುವವು. ಈ ದ್ವೀಪಕ್ಕೆ ಮೊತ್ತಮೊದಲು "ನುಸಾ ಹರಾಹರ" ಅಂದರೆ ಗುಡ್ಡದ ಸಾಲು ಎಂಬ ಹೆಸರಿತ್ತು. ಪಂಡು ವಂಶದಲ್ಲಿ ಅರ್ಜುನನಿಂದ ಐದನೇ ತಲೆಯವನಾದ "ಪೊಂಡು ವೀವನಾತ"ನು ರಾಜ್ಯವಾಳುವಾಗ ಅವನ ಮಂತ್ರಿಯಾದ 'ಆದಿ' ಎಂಬವನು ೫೦ ಸಾವಿರ ಸೈನಿಕರೊಂದಿಗೆ ಈ ದ್ವೀಪಕ್ಕೆ ಹೋದಾಗ ಅಲ್ಲಿ ರಾಕ್ಷಸರು ರಾಜ್ಯವಾಳುತ್ತಿದ್ದರು. ಅವರಲ್ಲಿ ಶಂಕರದೇವನು ಮುಖ್ಯಸ್ಥನಾಗಿದ್ದನು. ಅವನೊಡನೆ ಹೋರಾಡಿ, ಆದಿಯು ಅವನನ್ನು ಪರಾಜಯ ಪಡಿಸಿದನು. ಅಂದಿನಿಂದ ಅಲ್ಲಿ ಆವಿಶಕವೆಂಬುದೊಂದು ಶಕವು ಪ್ರಾರಂಭವಾಗಿ, ಅದು ಈಗ್ಯೂ ಅಲ್ಲಿ ನಡೆಯುತ್ತದೆ. ಈ ಶಕವು ನಮ್ಮ ದೇಶದಲ್ಲಿ ನಡೆಯುವ ಶಾಲಿವಾಹನ ಶಕವನ್ನು ಹೆಚ್ಚಾಗಿ ಹೋಲುವದು. ಅವುಗಳಲ್ಲಿ ಕೆಲವು ತಿಂಗಳುಗಳ ಅಂತರವು ಮಾತ್ರ ಬೀಳುವದು. ಆದಿಯು ಈ ದ್ವೀಪಕ್ಕೆ ಹೋದಾಗ ಎಲ್ಲೆಡೆಯಲ್ಲಿಯೂ ಭತ್ತದ ಪೈರು ಇದ್ದದರಿಂದ ಅವನು ಇದಕ್ಕೆ ಯವದ್ವೀಪವೆಂಬ ಹೆಸರು ಕೊಟ್ಟನು. ಮತ್ತು ಅಲ್ಲಿ ಗಿಡಗಳ ಗುಂಪುಗಳೂ, ರಮ್ಯೋದ್ಯಾನಗಳೂ, ಏಕಾಂತ ಸ್ಥಳಗಳೂ ಅಲ್ಲಲ್ಲಿ ಕಂಗೊಳಿಸಲು, ಅದಕ್ಕೆ ತಪೋವನವೆಂಬ ಬೇರೊಂದು ಹೆಸರನ್ನಾದರೂ ಕೊಟ್ಟನು. ಆದಿಯು ಸಂಗಡ ಹೋದ ೫೦ ಸಾವಿರ ಜನರಲ್ಲಿ ಬಹುಶಃ ಎಲ್ಲರೂ ವ್ಯಾಧಿಯಿಂದ ಮರಣಹೊಂದಿದರು. ಅವರಲ್ಲಿ ಹತ್ತಿಪ್ಪತ್ತು ಕುಟುಂಬಗಳು ಮಾತ್ರ ಉಳಿದವು. ಇಲ್ಲಿಯ ಮೂಲನಿವಾಸಿಗಳಾದ ರಾಕ್ಷಸರು ಬಿಕ್ಕಲತನವನ್ನು ಅರಿತು, ಭೂಮಿಗಳನ್ನು ಬಿತ್ತಿ, ಪೈರುಗಳನ್ನು ಒಕ್ಕಿಕೊಳ್ಳುವಾಗ ಸಮಾರಂಭವನ್ನಾದರೂ ಮಾಡುತ್ತಿದರು. ಕುಟುಂಬದಲ್ಲಿ ಹಿರಿಯವನಾದವನಿಗೆ ಬಹಳ ಮಾನ ಕೊಡುತ್ತಿದ್ದರು. ಕಾಗೆಗಳಿಗೆ ನೈವೇದ್ಯವನ್ನಿಟ್ಟು, ಅವು ತಿಂದರೆ ಶುಭಸೂಚಕವೆಂದು ಗ್ರಹಿಸುತ್ತಿದ್ದರು. ಮತ್ತು ತಮ್ಮ ತಮ್ಮ ಕುಟುಂಬಗಳನ್ನು ಕಟ್ಟಿಕೊಂಡು ಒಂದೇ ನಿಯಮಿತ ಸ್ಥಳದಲ್ಲಿರದೆ ಬೇರೆ ಬೇರೆ ಸ್ಥಳಗಳಲ್ಲಿ ಅಲೆದಾಡುತ್ತಿದ್ದರು. ಈ ಜನರು

ಇಲ್ಲಿಗೆ ಯಾವ ಭಾಗದಿಂದ ಬಂದಿರಬಹುದೆಂಬ ಬಗ್ಗೆ ಅನೇಕರು ಅನೇಕ ವಿಧವಾಗಿ ತರ್ಕಿಸುವರು. ಕೆಲವರು ಇಜಿಪ್ಟದಲ್ಲಿ ಹದ್ದುವಾರು ಮಾಡಿದ ಜನರು ಇಲ್ಲಿಗೆ ಬಂದರೆಂತಲೂ, ಬೇರೆ ಕೆಲವರು ಮೊಂಗೋಲಿಯಾದಿಂದ ಬಂದರೆಂತಲೂ ಹೇಳುವರು. ಆದರೆ ಈ ಮೂಲ ನಿವಾಸಿಗಳು ಮೇಲೆ ಬರೆದ ಎರಡೂ ಜನರಿಂದ ತೀರ ಭಿನ್ನವಾಗಿರುವರು. ಬೇರೆ ಕೆಲವರು ಸಾವಿರಾರು ವರ್ಷಗಳ ಮುಂಚೆ ಈಗಿರುವ ಪಾಸಿಫಿಕ್ ಮಹಾಸಾಗರದಲ್ಲಿ ದೊಡ್ಡದೊಂದು ಭೂಭಾಗವಿದ್ದು, ಅದು ಕಾಲಾಂತರದಿಂದ ಮುಳುಗುತ್ತ ಹೋಗಲು, ಅಲ್ಲಿದ್ದ ಜನರು ಗುಡ್ಡ-ಬೆಟ್ಟಗಳನ್ನಾಶ್ರಯಿಸಿಕೊಂಡು ನಿಂತರು. ಇವರು ಅವರೇ ಆಗಬಹುದು,' ಎಂದು ಹೇಳುವರು. ಸದ್ಯಕ್ಕೆ ಇವರಿಗೆ 'ಪೊಲೇನೇಶಿಯನ್' ರೆಂದು ಕರೆಯುವರು.

ಈ ದ್ವೀಪದಲ್ಲಿ ಮುಸಲ್ಮಾನರು ಇ. ಸ. ೧೫೫೦ ರಲ್ಲಿ ಪ್ರವೇಶ ಮಾಡಿದರು. ಸದ್ಯಕ್ಕಾದರೂ ಅಲ್ಲಿ ಇಬ್ಬರು ಮುಸಲ್ಮಾನ ಸಂಸ್ಥಾನಿಕರಿರುವರು. ಮುಂದೆ ೧೭೦೦–೧೫೦ ವರ್ಷಗಳಲ್ಲಿಯೇ ಡಚ್ಚರು ಈ ನಡುಗಡ್ಡೆಯ ಸ್ವಾಮಿತ್ವವನ್ನು ಕೈಕೊಂಡರು. ಮತ್ತು ಕ್ರೈಸ್ತಶಕವನ್ನು ಪ್ರಾರಂಭಿಸುವದಕ್ಕೆ ಬಹಳ ಯತ್ನಮಾಡಿದರು; ಆದರೆ ಅಲ್ಲಿಯ ಹಿಂದೂಗಳೂ ಮುಸಲ್ಮಾನರೂ ಅದನ್ನು ನಡೆಯಿಸಗೊಡಲಿಲ್ಲ. ಈ ನಡುಗಡ್ಡೆಯು ಡಚ್ಚರ ವಶದಲ್ಲಿ ಇದ್ದರೂ ಸರಕಾರೀ ಕೆಲಸಗಳಲ್ಲಿ ಮಲಾಯಿ ಭಾಷೆಯನ್ನು ಉಪಯೋಗಿಸುವರು. ಡಚ್ಚರ ಮುಖ್ಯ ಅಧಿಕಾರಿಗೆ ಹಿರಿಯಣ್ಣ (ಎಲ್ಡರ್ ಬ್ರದರ್)ನೆಂದು ಕರೆಯುವರು. ಪೂರ್ವದ ರಾಜವಂಶದಲ್ಲಿಯ ಇಬ್ಬರಿಗೆ ಪ್ರತಿವರ್ಷ ೩೦ ಲಕ್ಷ್ಮದಂತೆ ವೇತನವನ್ನು ಕೊಡುವರು. ಆ ರಾಜರಿಗಾದರೂ ಮೂರು ಮೂರು ಸಾವಿರ ಹೆಂಡಂದಿರಿದ್ದು, ಅವರು ಯಾವಾಗಲೂ ಸುಖೋಪಭೋಗದಲ್ಲಿ ಮಗ್ನರಾಗಿರುವರು. ಆದಿ ಶಕದ ೧೪೦೦ನೇ ಇಸವಿಯಲ್ಲಿ ಪೂರ್ವದ ಹಿಂದೂ ರಾಜರ ಸ್ವಾತಂತ್ರ್ಯವು ನಷ್ಟವಾಯಿತು ಎಂಬ ಉಲ್ಲೇಖವು ದೊರೆಯುವದು. ಆದಿಯು ಹೋಗುವ ಮುಂಚೆ ಅಲ್ಲಿಯ ಕಾಯಿದೆಗಳಾದರೂ ವಿಲಕ್ಷಣವಾಗಿದ್ದವು. ಉದಾ:– ಯಾವನೊಬ್ಬನು ಕಳವು ಮಾಡಲು ಅವನು ಅದಕ್ಕೆ ಪ್ರತಿಯಾಗಿ ಇಂತಿಷ್ಟು ಅಕಳಗಳನ್ನು ಕೊಡಬೇಕಾಗುತ್ತಿತ್ತು. ಕೊಲೆ ಮಾಡಿದವನು ಕೊಲೆ ಹೊಂದಿದವನ ಮನೆಯಲ್ಲಿ ಆಮರಣ ಸೇವೆ ಮಾಡಿಕೊಂಡಿರಬೇಕಾಗುತ್ತಿತ್ತು. ಬೇರೆ ಕೆಲವು ಅಪ

ರಾಧಗಳಿಗೆ ಪ್ರಾಯಶ್ಚಿತ್ತಗಳಾದರೂ ಇರುತ್ತಿದ್ದವು. ಆದಿಯು ಮೊದಲಿದ್ದ ಕಾಯಿದೆಗಳನ್ನು ತೆಗದು ಹೊಸ ಹೊಸ ಕಾಯಿದೆಗಳನ್ನು ಮಾಡಿದನು. ಜಾವಾದ್ವೀಪದ ನಿವಾಸಿಗಳಲ್ಲಿ ಒಂದು ದಂತಕಥೆ ಇರುವದು. ಅದೇನಂದರೆ—"ಮೊದಲು ಬ್ರಹ್ಮನು, ಬ್ರಹ್ಮನ ಮಗ ಮಾನಸನು, ಮಾನಸನ ಮಗ ತ್ರಿತ್ರೇಷ್ಠಾ ಎಂಬವನು, ಇವನೇ ರಾಜ್ಯಸ್ಥಾಪಕರಲ್ಲಿ ಮೊದಲನೆಯವನು. ಇವನ ವಂಶಜನಾದ ಸಂಕ್ರಿಯು ರಾಜ್ಯಮಾಳುವಾಗ ಅಯೋಧ್ಯೆಯಲ್ಲಿ ರಾಮಾವತಾರವು ಸಮಾಪ್ತಿಯಾಗಿ ರಾಮನು ವೈಕುಂಠಕ್ಕೆ ತೆರಳಿದನು."

ಪ್ರಾಚೀನ ಕಾಲದಲ್ಲಿ ಅಲ್ಲಿ ಮಜಪಾಹಿತವೆಂಬ ದೊಡ್ಡ ನಗರವಿತ್ತು. ಅದರ ಕ್ಷೇತ್ರಫಲವು ಮುಂಬಯಿಯಾ ಶಹರದ ಕ್ಷೇತ್ರದಷ್ಟೆಂದು ಹೇಳುವರು. ಈಗ ಆ ಪಟ್ಟಣದ ಅವಶೇಷಗಳೆಂದರೆ, ಒಂದು ಮಹಾದ್ವಾರವೂ ಕೆಲವು ರಾಜರ ಗೋರಿಗಳೂ ಮಾತ್ರ ಗೋಚರವಾಗುವವು. ಅವುಗಳಲ್ಲಿ ಹಿಂದೂ ಜನರ ಪ್ರಾಚೀನ ಸುಧಾರಣೆಗಳು ವಿಶೇಷವಾಗಿ ಕಂಡು ಬರುವವು. ಇದಲ್ಲದೆ ಬೌದ್ಧರ ವಸತಿಯಾದರೂ ಹೆಚ್ಚಾಗಿದ್ದಂತೆ ಕಂಡು ಬರುವದು. ಬೋರೋ ಬುದೂರ ಎಂಬದು ಬೌದ್ಧರ ಮುಖ್ಯ ದೇವಾಲಯವು. ಇದು ಒಂಭತ್ತು ಅಂತಸ್ತಗಳುಳ್ಳದ್ದಿದ್ದು ಇದರಲ್ಲಿ ಒಳಗೂ ಹೊರಗೂ ಕೂಡಿ ಸಾವಿರ ಬುದ್ಧ ಮೂರ್ತಿಗಳಿದ್ದದರಿಂದ ಇದಕ್ಕೆ ಸಹಸ್ರ ಬುದ್ಧ ದೇವಾಲಯವೆಂಬ ಬೇರೊಂದು ಹೆಸರಾದರೂ ಉಂಟು. ಜ್ವಾಲಾಮುಖಿ-ಭೂಕಂಪಗಳ ಧಕ್ಕೆ ತಗಲಿ ಈ ಗುಡಿಯು ಹುಗಿದಿತ್ತು. ಅದನ್ನು ಇತ್ತಿತ್ತ ಅಗಿದು ತೆಗೆದಿದ್ದಾರೆ. ಇದು ೫೩೧ ಫೂಟು ಚಚ್ಚೌಕಾದ ಇವಾರತಿಯು. ಎಡಬಲದ ಗೋಡೆಗಳ ಮೇಲೆ ಹಿಂದೂ ಜನರು ಹಡಗವನ್ನೇರಿ ಜಾವಾದ್ವೀಪಕ್ಕೆ ಬರುತ್ತಾರೆಂಬಂತೆ ಚಿತ್ರಕೊರೆದಿರುವರು. ದೇವಾಲಯದಲ್ಲಿ ಬುದ್ಧನ ಮೂರ್ತಿಯು ಪದ್ಮಾಸನ ಹಾಕಿ ಕುಳಿತಿರುವದು. ಇದರ ಹೊರತು ಹಲಕಲವು ಮೂರ್ತಿಗಳು ತುಂಡು ತುಂಡಾಗಿರುವವು. ಈ ಭವ್ಯವಾದ ಗುಡಿಯಿಂದ ನಾಲ್ಕೂ ಕಡೆಗೆ ೫೦ ಮೈಲಿನೊಳಗಾಗಿ 'ಮೇರಾ ಪೀರ ಮರಿಬಾಬೂ' ಎಂಬ ಹೆಸರಿನ ನಾಲ್ಕು ಜ್ವಾಲಾಮುಖಿಗಳು ಜಾಗ್ರತಾವಸ್ಥೆಯಲ್ಲಿರುವವು. ಈ ದೇವಾಲಯದ ಹತ್ತರ ನಿಂತು ನೋಡಿದರೆ, ಹಗಲು ಕಪ್ಪಾದ ಹೊಗೆಯೂ, ರಾತ್ರಿಯಲ್ಲಿ ಕಿಡಿಗಳೂ ದೃಷ್ಟಿಗೆ ಬೀಳುವವು. ಈ ದೇವಾಲಯದಲ್ಲಿಯ ಹಸ್ತಕೌಶಲ್ಯದ ಬಗ್ಗೆ ಒಬ್ಬ ಯುರೋ

ಪದ ಪ್ರವಾಸಿಯು "ಇದು ಇಜಿಪ್ತದ ಪಿರಮಿಡ್‌ಗಳಲ್ಲಿಯ ಹಸ್ತಕೌಶಲ್ಯಕ್ಕಿಂತ ಮೇಲಾದದ್ದು" ಎಂದು ಬರೆದಿದ್ದಾನೆ. ಇಲ್ಲಿ ಎರಡನೇದೊಂದು ಹಿಂದುಗಳ ದೇವಾಲಯವಿದೆ. ಅದರಲ್ಲಿ ಶಿವನ ಲಿಂಗವಿರುವದು. ಜಾವಾದಲ್ಲಿ ಲಿಂಗವು ಪ್ರಚಾರದಲ್ಲಿಲ್ಲ. ಎಲ್ಲ ಕಡೆಗೂ ಮೂರ್ತಿಗಳೇ ದೊರೆಯುವವು. ಇಂಥ ಸಾವಿರಾರು ದೇವಾಲಯಗಳು ಜ್ವಾಲಾಮುಖಿಗಳೆಂಬ ಅದ್ಭುತ ಶಕ್ತಿಯಿಂದ ನೆಲದಲ್ಲಿ ಹೂಳಿದ್ದವು. ಅವುಗಳನ್ನಾದರೂ ಈಗ ಅಗಿದು ತೆಗೆದಿರುವರು. ಇವುಗಳ ಮಧ್ಯದಲ್ಲಿ ಶಿವನ ಮೂರ್ತಿಯೂ, ಎಡಬಲದಲ್ಲಿ ಬ್ರಹ್ಮ, ವಿಷ್ಣು, ದುರ್ಗಾ, ಗಣಪತಿ ಇವುಗಳ ಮೂರ್ತಿಗಳೂ ಇರುವವು. ಕಟ್ಟಡಗಳ ಕಟ್ಟುವಿಕೆಯು ಹೇಮಾಡಪಂತನ ಪದ್ಧತಿಯನ್ನು ಹೋಲುವದು. ಅಂದರೆ, ಇದರಲ್ಲಿ ಕಲ್ಲುಗಳು ಒಂದರಮೇಲೊಂದು, ಮಧ್ಯದಲ್ಲಿ ಸುಣ್ಣಗಚ್ಚುಗಳಿಲ್ಲದೆ ಸಂದುಬಿಡದಂತೆ ಕೂಡಿಸಲ್ಪಟ್ಟಿರುವವು. ಈ ದ್ವೀಪದ ಮೇಲೆ ಮುಸಲ್ಮಾನರು ದಂಡೆತ್ತಿ ಹೋದಾಗ ಅಲ್ಲಿಯ ನಿವಾಸಿಗಳಲ್ಲಿ ಕೆಲವರು ಪೂರ್ವಕಡೆಯ 'ಬಾಲಿ' ಎಂಬ ಪ್ರದೇಶಕ್ಕೂ, ಬೇರೆ ಹಲವರು "ಬ್ರಹ್ಮೋ" ಪರ್ವತದ ಕಡೆಗೂ ಓಡಿಹೋದರು. ಇಲ್ಲಿಯ ಹಿಂದೂ ಮುಸಲ್ಮಾನರಲ್ಲಿ ವಿಶೇಷ ಭೇದಭಾವವಿಲ್ಲ. ಒಬ್ಬರನ್ನೊಬ್ಬರು ದ್ವೇಷಿಸುವದೂ ಇಲ್ಲ. ಅವರಲ್ಲಿಯ ಮುಖ್ಯ ವೈಲಕ್ಷಣ್ಯವೆಂದರೆ ಹಿಂದುಗಳು ಪ್ರೇತಗಳನ್ನು ಸುಡುವರು, ಮತ್ತು ಮುಸಲ್ಮಾನರು ಹೂಗಿಯುವರು. 'ಬ್ರಹ್ಮೋ' ಪರ್ವತದ ಮೇಲಿರುವ ಜನರು ಕುರಿಗಳನ್ನು ಸಾಕಿ, ಅವುಗಳಿಂದ ಉಪಜೀವನ ಮಾಡಿಕೊಳ್ಳುವರು. ಈ ಪರ್ವತದ ನೆರೆ ಹೊರೆಯಲ್ಲಿ ಹಿಂದೂ ಜನರು ವಾಸಿಸುತ್ತಿದ್ದು, ಅವರು 'ಬ್ರಹ್ಮೋ' ನ ಉಪಾಸನೆಯನ್ನು ಮಾಡುವರು. ಎಲ್ಲರ ಮನೆಗಳೂ ಈ ಪರ್ವತಕ್ಕೆ ಅಭಿಮುಖವಾಗಿರುವವು. ಮನೆಗಳಿಗೆ ಒಂದೇ ಒಂದು ಬಾಗಿಲವಲ್ಲದೆ ಕಿಡಕಿಗಳು ಸಹ ಇರುವದಿಲ್ಲ. ಈ ಪರ್ವತವು ಸುಮಾರು ೧೦,೦೦೦ ಫೂಟು ಎತ್ತರವಿರುವದು. ೫೦೦೦ ಫೂಟು ಏರಿ ಹೋಗಲು ಡಚ್ಚರ ಸ್ಯಾನಿಟೋರಿಯಮ್ (ಆರೋಗ್ಯಸ್ಥಳ) ಹತ್ತುವದು. ತೀರ ತುದಿಗೆ, ಅಂದರೆ ಶಿಖರಕ್ಕೆ ಹೋಗಲು, ಅಲ್ಲಿ ೭೦೦ ಫೂಟು ಪರಿಘವುಳ್ಳದ್ದೊಂದು ವೈಶ್ವದೇವಕುಂಡವಿರುವದು. ಅಲ್ಲಿ ಯಾವಾಗಲೂ ವೈಶ್ವಾನರನು ಸುಪ್ರಸನ್ನನಾಗಿರುವನು. ಮಾರ್ಗದಲ್ಲಿ ಗಂಧಕ, ಸೋರುಪ್ಪುಗಳ ದುರ್ಗಂಧವು ಇಡಗಿರುವದು.

ಜ್ವಾಲಾಮುಖಿಯ ಆ ಪರಿಸರದ ಸವಿಾಪಕ್ಕೆ ಹೋಗಲು, ಬಳಿಗೆ ದೊಡ್ಡ ದೊಂದು "ವರ್ಕಶಾಪ" ದ ಕಾರಖಾನೆಯು ನಡೆದಷ್ಟು ಸಪ್ಪಳವು ಕೇಳ ಬರುವದು. ಪಂಚೆಯು ಮೇಲೆ ಹಾರಿಬಿದ್ದ ಲಾವ್ಹಾರಸವು ಅಲ್ಲಲ್ಲಿ ಶಿಲೆಯಾ ಗಿರುವದು, ಆಗಾಗ ಹೊಗೆಯೊಡನೆ ಬಹುದೂರ ಹಾರುವ ಕಿಡಿಗಳೂ ದೊಡ್ಡ ದೊಡ್ಡ ಕಲ್ಲುಗಳೂ ಕಾಣಿಸುವವು. ಇದನ್ನು ನೋಡುವದರಿಂದ ಮನುಷ್ಯನು ಭಯಭ್ರಾಂತನಾಗುವನು. 'ಬಾಳೀ' ಯಲ್ಲಿಯ ಹಿಂದುಗಳು ತಮ್ಮ ಪ್ರಾಂತವನ್ನು ಬಿಟ್ಟು ಎಂದೂ ಹೋಗುವದಿಲ್ಲ. ಸಮುದ್ರ ತೀರಕ್ಕೆ ಸಹ ತಿರುಗಾಡಲಿಕ್ಕೆ ಹೋಗುವದಿಲ್ಲ. ಬಾಲೀ, ಅಂದರೆ ಶೂರರ ಸಂಗ್ರಹವು. ಇಲ್ಲಿಯ ಜನರು ಪರಕೀಯರನ್ನು ಬಹಳ ಉದಾಸೀನ ಮಾಡುವರು. ಇಲ್ಲಿಯ ಬ್ರಾಹ್ಮಣರಲ್ಲಿ ಶೈವಬ್ರಾಹ್ಮಣ, ಬುದ್ಧಬ್ರಾಹ್ಮಣ, ಭುಜಗಬ್ರಾಹ್ಮಣ ಎಂದು ಹಲವು ಭೇದಗಳಿರುವವು. ಜನರಲ್ಲಿ ನಾಲ್ಕು ವರ್ಣಗಳಿರುವವು. ಬ್ರಾಹ್ಮಣನು ೪೦ ವರ್ಷದವನಾಗಲು ಒಂದು ವಿಧಿ ಯನ್ನು ಮಾಡಬೇಕಾಗುವದು. ಆ ವಿಧಿಯನ್ನು ಮಾಡಿದ ನಂತರ ಅವ ನಿಗೆ ಪಡಾಂಡಾ (ಪಂಡಿತ) ನೆಂಬ ಸಂಜ್ಞೆ ಬರುವದು. ಹಾಗೂ ಅವನು ಮುಪ್ಪಿನವನಾದಂತೆ ಅವನ ಬೋಗ್ಯತೆಯಾದರೂ ಹೆಚ್ಚೆಂದು ತಿಳಿಯಲ್ಪ ಡುವದು. ಬ್ರಾಹ್ಮಣನಿಗೆ ಇಡಾ, ಬ್ರಾಹ್ಮಣಪತ್ನಿಗೆ ಇಡಾಯೂ, ಕ್ಷತ್ರಿ ಯನಿಗೆ ದೇವ, ವೈಶ್ಯನಿಗೆ ಗುಸ್ತೀ, ಶೂದ್ರನಿಗೆ ಬಾಪ್ಪಾ, ಎಂದು ಅವರ ವರ ಹೆಸರುಗಳ ಹಿಂದೆ ಶಬ್ದಗಳನ್ನು ಜೋಡಿಸುವರು. ಇವುಗಳ ಹೊರ ತು ಚಾಂಡಾಲ ಮುಂತಾದ ಅನ್ಯಜಾತಿಗಳಿಲ್ಲ. ಮಹಾರೋಗಿಗೆ ಚಾಂಡಾಲ ನಂತೆ ದೂರ ಇರಹೇಳುವರು. ಗಂಡಸರು ಬಣ್ಣದ ಅರಿವೆಯ ಪರಕರ ಗಳನ್ನುಟ್ಟುಕೊಳ್ಳುವರು; ಮತ್ತು ಕೂದಲುಗಳನ್ನು ಕಾಯುವರು. ಹಿಂದೂ ಸ್ತ್ರೀಯರು ಲುಂಗೀ ಸುತ್ತುವರು. ಆದರೆ ಸೆರಗು ಹೊದ್ದುಕೊ ಳ್ಳುವದಿಲ್ಲ. ಮುಸಲ್ಮಾನ ಹೆಂಗಸರು ಮೈಕಾಣದಂತೆ ಕಪನಿಯಂಥ ವಸ್ತ್ರ ಧರಿಸುವರು. ಜನರ ಮುಖ್ಯಾಹಾರವು ಅಕ್ಕಿಯೇ. ಆದರೆ ಮಾಂಸವನ್ನಾ ದರೂ ಎಲ್ಲರೂ ಸೇವಿಸುವರು. ಹಿಂದೂಜನರು ಆಕಳ ಮಾಂಸವನ್ನು ಮಾತ್ರ ತಿನ್ನುವದಿಲ್ಲ. ಪಡಾಂಜೇ ಜನರಿಗೆ ಸಿಕ್ಕದ್ದನ್ನು ತಿನ್ನಲಿಕ್ಕೆ ಬರುವ ದಿಲ್ಲ. ಅವರು ಮಾಂಸಾಹಾರ ಮಾಡ ಬೇಕಾದರೆ ಪಾರಿವಾಳಗಳನ್ನು ಮಾತ್ರ ತಿನ್ನಬೇಕು. ಅಲ್ಲಿಯ ಹೆಂಗಸರೂ, ಗಂಡಸರೂ, ಹುಡುಗರೂ

ತಂಬಾಕ ತಿನ್ನುವರು. ಇವರ ಬಾಯಲ್ಲಿ ಯಾವಾಗಲೂ ತಂಬಾಕಿನ ಚೊಂಪೆಯಿದ್ದು ಎಲ್ಲಿ ಸಿಕ್ಕಲ್ಲಿ ಉಗುಳುವರು. ಕಾರಾಂಗಅಸಾಮದಲ್ಲಿದ್ದ ರಾಜನು ೭೦ ವರ್ಷದ ಮುದುಕನು. ಅವನು ೧೧ ಗಂಟೆಗೆ ಏಳುವನು. ರಾಜ್ಯಕಾರಭಾರವೆಲ್ಲ ಹಿರಿಯಣ್ಣನ ಕೈಯಲ್ಲಿಯೇ ಇರುತ್ತದೆ. ಆ ಅರಸನ ಭೆಟ್ಟಿಗೆಂದು ನಾನು ಹೋದಾಗ ಅವನು ಪರಕರವನ್ನುಟ್ಟುಕೊಂಡು ನೆಲದ ಮೇಲೆ ಕುಳಿತಿದ್ದನು. ನಾನು ಹಿಂದುಸ್ತಾನದಲ್ಲಿಯ ಪಡಾಂಡನೆಂಬ ಸುದ್ದಿಯನ್ನು ಕೇಳಿ ಅವನು ಆಶ್ಚರ್ಯಪಟ್ಟನು; ಮತ್ತು ನೀವು ಕರೀ ಅಂಗಿಯನ್ನು ಹ್ಯಾಗೆ ಹಾಕಿರುವಿರೆಂದು ನನಗೆ ಪ್ರಶ್ನ ಮಾಡಿದನು. ಹಿಂದುಸ್ತಾನದ ಪಡಾಂಡರು ಬಿಳೀ ಅಂಗಿಯನ್ನೇ ಹಾಕಿಕೊಳ್ಳುವರೆಂದು ಅವರು ತಿಳಿಯುವರು. ಆಗ ನನ್ನ ತಪ್ಪನ್ನು ಒಪ್ಪಿಕೊಳ್ಳಬೇಕಾಯಿತು. ಬಳಿಕ ನನ್ನ ಕೈಯೊಳಗೆ ಒಂದು ಗಂಟೆಯನ್ನು ಕೊಟ್ಟರು. ಅದನ್ನು ನಾನು ಬಲಗೈಯಿಂದ ಬಾರಿಸ ಹತ್ತಲು, ಅವರು ನಾನು ಬ್ರಾಹ್ಮಣನಲ್ಲೆಂದು ತಿಳಿದರು. ಬ್ರಾಹ್ಮಣನಾದವನು ಬಲಗೈಯಿಂದ ಎಂದೂ ಗಂಟೆಯನ್ನು ಬಾರಿಸಲಾರನೆಂಬ ತಿಳುವಳಿಕೆಯು ಅವರಲ್ಲಿರುವದು. ಈ ಜನರಲ್ಲಿ ಘಂಟೆಯು ಮಹಾತ್ಮೆ ಬಹಳ. ಅಲ್ಲಿಯೊಬ್ಬ ಬ್ರಾಹ್ಮಣನಿಂದ ಮಹಾಭಾರತದ ಭೀಷ್ಮ ಪರ್ವದ ಕೆಲವು ಶ್ಲೋಕಗಳನ್ನು ಬಿದಿಸಿಬಿನೆ. ಪುಸ್ತಕವು ತಾಡವಾಲೆಯು ದಿತ್ತು. ಅದರಲ್ಲಿ ನೂರಾರು ಭಗವದ್ಗೀತಾಶ್ಲೋಕಗಳೂ ಇದ್ದವು. ಅವರ ಉಚ್ಚಾರವು ಅಸ್ಪಷ್ಟವಾದದ್ದು, ಮತ್ತು ಅಶುದ್ಧವಾದದ್ದು. ರಾಜನ ಬಳಿಯಲ್ಲಿ ತುಸು ಹಾಲನ್ನು ಬೇಡಿದೆನು. ಅವು ನನಗೆ ದೊರಕಲಿಲ್ಲ ಅಲ್ಲಿ ಆಕಳುಗಳು ಇರುತ್ತವೆ. ಆದರೆ ಇವನ್ನು ಎಂದೂ ಯಾರು ಹಿಂಡಿಕೊಳ್ಳದೆ ಇದ್ದುದರಿಂದಲೂ, ನನಗೂ ಅಭ್ಯಾಸವಿಲ್ಲದ್ದರಿಂದಲೂ ಅವುಗಳ ಮೊಲೆಯೊಳಗಿನ ಹಾಲೇ ಬಿದಗಲಿಲ್ಲ. ಈ ಜನರಲ್ಲಿ ಮನೆ ಮಾರುಗಳಲ್ಲಿಯೂ ಸಾರ್ವಜನಿಕವಾಗಿಯೂ ಪೂಜೆ ಮಾಡತಕ್ಕ ಪದ್ಧತಿಯಿದೆ. ಅವರು ಪೂಜೆಗೆ ಸೂರ್ಯಸೇವನವೆನ್ನುವರು. ಸೂರ್ಯನೆಂದರೆ ಶಿವನು. ಸ್ನಾನವಾದ ಬಳಿಕ ಬಿಳೀ (ಬಿಗೆದ) ವಸ್ತ್ರವನ್ನುಡುವರು. ಬಳಿಕ ಪೂಜೆ ಮಾಡುವರು. ಮೊದಲು ನ್ಯಾಸವನ್ನು ಮಾಡುವರು. ಕರಾಂಗುಲಿಯಿಂದ ನ್ಯಾಸಮಾಡುತ್ತಾ ಮಾಡುತ್ತಾ ಪುಷ್ಪಾಂಜಲಿಯನ್ನು ದೇವರ ಮೇಲೆ ಎಸೆಯುವ ಪಡಾಂಡನು ಶ್ರೇಷ್ಠನೆಂದು ಎಣಿಸಲ್ಪಡುತ್ತಾನೆ. ಅವರು ಅಗ್ನಿ, ಶಿವ ಇವೆ

ರನ್ನು ಆರಾಧಿಸುತ್ತಾರೆ. ವಿದ್ಯೆಗೆ ಅಧಿದೇವತೆ ಸರಸ್ವತಿ, ಅವಳು ಬ್ರಹ್ಮನ ಸತಿಯೆಂದು ಅವರೂ ತಿಳಿಯುವರು. ಅವರು ತ್ರ್ಯಂಬಕನೆಂದರೆ ಮೂರು ವೇದಗಳನ್ನು ಅನ್ನುವವನು, ಶ್ರೀಕಂಠವೆಂದರೆ ವಕ್ತೃವಿನ ಕುತ್ತಿಗೆ, ವೈಕುಂಠವೆಂದರೆ ನಿಶ್ಚಿಂತೆಯು, ಎಂದು ತಿಳಿಯುವರು. ವಿಷ್ಣುವಿನ ಅವತಾರಗಳು ೧೦. ೧೦ನೇದು ಕೋಳಿಯೆಂದು ಗ್ರಹಿಸುವರು. ಅಲ್ಲಿ ಕೋಳಿಯ ಮಾರ್ಕೆಟ್ಟುಗಳು ಬಹಳ. ಹಿಂದುಗಳು ಶವವನ್ನು ಸುಡುವ ಮತ್ತು ಮುಸಲ್ಮಾನರು ಹುಗಿಯುವ ಪದ್ಧತಿಯಿದ್ದರೂ ರಾಜನ ಶವವನ್ನು ಸುಡುತ್ತಾರೆ. ಅವರು ರಾಜನ ಹೆಣವನ್ನು ಅರಿವೆಯಲ್ಲಿ ಕಟ್ಟಿ ಒಂದು ಗಿಡ ಕ್ಕೆ ನಿಲ್ಲಿಸುವರು. ಅಲ್ಲಿ ೬ ತಿಂಗಳು ಇಟ್ಟು ಅದಕ್ಕೆ ದಿನಾಲು ನೈವೇದ್ಯ ತೋರಿಸುವರು. ಬಳಿಕ ಅದನ್ನು ಸುಡುವರು. ಸತಿಹೋಗುವ ಪದ್ಧತಿಯೂ ದರೂ ಅವರಲ್ಲಿ ಇತ್ತು, ಅದರೆ ಬ್ರಿಟಿಷ್ ಸರಕಾರದವರು ಅದನ್ನು ನಿಲ್ಲಿಸಿ ದರು. ದಹನವಿಧಿಗೆ ಅಲ್ಲಿ ೫೦೦ ರೂ. ಖರ್ಚು ಬರುವದು. ಅದರಿಂದ ಬಡ ಹಿಂದೂಗಳು ತಮ್ಮ ಹೆಣಗಳನ್ನು ಹುಗಿಯುವರು. ಅದರೆ ಅವರ ವಂಶದಲ್ಲಿ ಯಾವನಾದರೂ ಶ್ರೀಮಂತನಾದನೆಂದರೆ ಅವನು ತಮ್ಮ ಪೂರ್ವ ಜರ ಎಲುಬುಗಳನ್ನೆಲ್ಲ ತೆಗೆಯಿಸಿ, ಪಡಾಂಡನೆ ಕಡೆಯಿಂದ ಶಾಸ್ತ್ರೋಕ್ತ ವಾಗಿ ಸುಡಿಸುವನು. ಅಲ್ಲಿ ವಾರವೆಂದರೆ ೫ ದಿನಗಳು, ೭ ವಾರವೆಂದರೆ ೧ ತಿಂಗಳು, ೧೦ ತಿಂಗಳಿಗೆ ಒಂದು ವರುಷ. ಋತುಗಳು ಎರಡೇ: ಬಿಸಿಲು ಗಾಲ, ಮಳೆಗಾಲ.

ಅವರ ವಾಙ್ಮಯವು ದೊಡ್ಡದು. ಕವಿಭಾಷೆಯಲ್ಲಿ ೨೦ ಮೂಲಾಕ್ಷ ರಗಳಿವೆ. ಬೌದ್ಧರ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿರುತ್ತವೆ. ಅವರು ಸ್ವರ್ಗಶ್ಚ ಗಾಯತ್ರಿಶ್ಚ....ಮುಂತಾದ ಮಂತ್ರಗಳನ್ನು ಅನ್ನುವರು. ಅದರೆ ಅಶು ದ್ಧ ಬಹಳ. ಅವರ ಸರ್ವಮಾನ್ಯ ಗ್ರಂಥವು ಬ್ರಹ್ಮಾಂಡ ಪುರಾಣ. ಅಲ್ಲಿಯ ಮಹಾಭಾರತಕ್ಕೆ ೮ ಪರ್ವಗಳು; ಉಳಿದವುಗಳ ಹೆಸರು ಮಾತ್ರ ಗೊತ್ತಿ ರುವವು. ಕೇಳಿದರೆ ಅವು ಇನ್ನೂ ಬಂದಿಲ್ಲವೆಂದು ಹೇಳುವರು. ರಾಮಾ ಯಣವು ಕವಿಭಾಷೆಯಲ್ಲಿದೆ. ಉತ್ತರಕಾಂಡವನ್ನು ಅನೇ ವಾಲ್ಮೀಕಿಯು ರಚಿಸಿದನು ಎಂದೆನ್ನುವರು. ಮನುಸ್ಮೃತಿಯು ಸಂಸ್ಕೃತದಲ್ಲಿದೆ; ಕಾರ ವರು ೯೭ ಮಂದಿ; ಕರ್ಣ, ಅಶ್ವತ್ಥಾಮ, ಜೈದ್ರಥರು ಕೂಡಿ ೧೦೦ ಮಂದಿ, ಮತ್ತು ವಿದುರನು ಕುಂಟನೆಂದು ಹೇಳುವರು. ಅವರಲ್ಲಿ ಕೆಲವು ಐತಿಹಾಸಿ

ಈ ಗ್ರಂಥಗಳಿವೆ. ಅವುಗಳನ್ನು ಬಟೇವಿಯಾದ ಮ್ಯುಝಿಯೂಯಮದಲ್ಲಿ ಇಟ್ಟಿದ್ದಾರೆ. ಈ ದ್ವೀಪದಲ್ಲಿಯ ಹಿಂದೂ ಜನರ ಸಂಖ್ಯೆ ೫ ಲಕ್ಷವಿರುವದು. ಆದರೆ ಅವರು ಇನ್ನೂ ಉಚ್ಚಸ್ಥಿತಿಯನ್ನು ಪಡೆದಿಲ್ಲ. ಅವರನ್ನು ಸುಶಿಕ್ಷಿತರನ್ನಾಗಿ ಮಾಡಿಕೊಂಡರೆ, ಹಿಂದೂ ಸಮಾಜದಲ್ಲಿ ಪುನಃ ೫ ಲಕ್ಷದ ಭರತಿಯಾಗುವದು ಎಂಬದಾಗಿ ಡಾ. ನ. ಗೊ. ಸರದೇಸಾಯಿ ಇವರು ಸ್ವತಃ ಜಾವಾದ್ವೀಪಕ್ಕೆ ಹೋಗಿ ಅಲ್ಲಿಯ ನಡವಳಿಕೆ, ಸ್ಥಿತಿ ರೀತಿಗಳನ್ನು ನೋಡಿ ಪ್ರಸಿದ್ಧಮಾಡಿದ್ದಾರೆ.

S. A. Kittur.

ಗಣಿತಶಾಸ್ತ್ರದ ಇತಿಹಾಸದೊಳಗಿನ ಕೆಲವು ಸಂಗತಿಗಳು.

(ಕಳೆದ ಮಾರ್ಚ ತಿಂಗಳ ಸಂಚಿಕೆಯ ೨೫ನೆಯ ಪುಟದಿಂದ ಮುಂದೆಸಾಗಿದ್ದು.)

ಗಣಿತಶಾಸ್ತ್ರದ ಸಂಬಂಧದ ಕೃತಿಗಳೂ ಸಾಧನೆಗಳೂ ಕಾಲ ಮತ್ತು ಅನುಭವ ಇವುಗಳ ಸಹಾಯದಿಂದ ಗೊತ್ತಾಗಿರುವವು. ಗಣಿತಶಾಸ್ತ್ರದ ಇತಿಹಾಸವನ್ನು ನೋಡಿದರೆ ಪೂರ್ವಕಾಲದಲ್ಲಿ ಮೊದಲು ಮಗ್ಗಿಗಳನ್ನು ಪಾಠಮಾಡುವದರ ಉಪಯುಕ್ತತೆಯು ಜನರ ಲಕ್ಷ್ಯದಲ್ಲಿ ಬಂದಿದ್ದಿಲ್ಲವೆಂದು ಗೊತ್ತಾಗುವದು. ಈಗ ನನಗೆ ಮಗ್ಗಿಯು ಬಾಯಿಪಾಠ ಬರುವದರಿಂದ (೧೭×೮=೧೩೬) ಈ ಕೃತಿಯನ್ನು ಮಾಡಲಿಕ್ಕೆ ಏನೂ ಕಠಿಣವೆನಿಸುವದಿಲ್ಲ; ಆದರೆ ಆಗಿನ ಕಾಲದಲ್ಲಿ ಈ ತರದ ಸಣ್ಣಪುಟ್ಟ ಗುಣಾಕಾರಗಳನ್ನು ಮಾಡುವದು ಸಹ ಮಹಪ್ರಯಾಸದ ಹಾಗೂ ತೀಕ್ಷ್ಣ ಬುದ್ಧಿಯ ಕಾರ್ಯವೆಂದು ತಿಳಿಯಲ್ಪಡುತ್ತಿತ್ತು. ನಮಗೆ ಮಗ್ಗಿಗಳು ಬಾಯಿಪಾಠ ಬರುವದಿಲ್ಲವೆಂದು ತಿಳಿದುಕೊಂಡು ಇಂದು ಸಣ್ಣ ತ್ರೈರಾಶಿಕವನ್ನು ಬಿಡಿಸಲಿಕ್ಕೆ ಯತ್ನಮಾಡಿದರೆ, ಆಗ ನಮಗೆ ಮಗ್ಗಿಗಳನ್ನು ಪಾಠಮಾಡುವದರ ಮಹತ್ವವು ಕಂದು ಬರುವದು.

ಸಣ್ಣ ಸಣ್ಣ ಅಂಕಿಗಳ ಬೇರೀಜು ವಜಾಬಾಕಿಗಳನ್ನು ಪಾಠಮಾಡುವದರ ಉಪಯುಕ್ತತೆಯು ಜನರ ಲಕ್ಷಕ್ಕೆ ಬರುವದಕ್ಕಿಂತಲೂ ಪೂರ್ವದಲ್ಲಿ ದೊಡ್ಡ ದೊಡ್ಡ ಗಣಿತಶಾಸ್ತ್ರಜ್ಞರು ಸಹ ಇಂಥ ಬೇರೀಜು ವಜಾಬಾಕಿಗಳನ್ನು ಗುಂಡಿನ ಚೌಕಟ್ಟಿನ ಸಹಾಯದಿಂದ ಮಾಡುತ್ತಿದ್ದರು. ಚೀನ

ಜಪಾನದೇಶಗಳ ಜನರು ಸಾಂಪ್ರತಕಾಲದಲ್ಲಿ ಸಹ ಗುಂಡಿನ ಚೌಕಟ್ಟನ್ನು ಉಪಯೋಗಿಸುವರು. ಜಪಾನೀ ಜನರಂತೂ ದೊಡ್ಡ ದೊಡ್ಡ ಸಂಖ್ಯೆಗಳ ಬೇರೀಜನ್ನು ಸಹ ಈ ಗುಂಡಿನ ಚೌಕಟ್ಟಿನ ಸಹಾಯದಿಂದ ಮಾಡಿ ಸಂಖ್ಯೆಯನ್ನು ಹೇಳಿ ಮುಗಿಸುವದರೊಳಗಾಗಿಯೇ ಉತ್ತರವನ್ನು ತಂದು ಬಿಡುವರು.

+, –, ಮುಂತಾದ ಕಾರ್ಯಪ್ರಕಾಶಕ ಚಿಹ್ನಗಳ ಸಹಾಯದಿಂದ ಗಣಿತ ವಿಷಯದ ಕಲ್ಪನೆಗಳನ್ನು ಸ್ವಲ್ಪದರಲ್ಲಿ ಸುಲಭವಾಗಿ ಹೇಳಲಿಕ್ಕೆ ಬರುವದೆಂಬದು ಎಲ್ಲರಿಗೂ ಗೊತ್ತಿರುವದು. ಆದರೆ ೧೬ನೇ ಶತಮಾನದ ಅಂತ್ಯದವರೆಗೂ ಇವುಗಳಲ್ಲಿ ಎಷ್ಟೋ ಚಿಹ್ನಗಳು ಪ್ರಚಾರದಲ್ಲಿ ಬಂದಿದ್ದಿಲ್ಲ; ಬೇರೆ ಬೇರೆ ಜನರು ತಮ ತಮಗೆ ಅನುಕೂಲವಾದ ಬೇರೆ ಬೇರೆ ಗುರುತುಗಳನ್ನು ಉಪಯೋಗಿಸುತ್ತಿದ್ದರು.

೧೬ನೇ ಶತಮಾನಕ್ಕಿಂತಲೂ ಪೂರ್ವದಲ್ಲಿ + ಈ ಚಿಹ್ನವನ್ನು ಉಪಯೋಗಿಸುವದರ ಬದಲಾಗಿ ಬೇರೀಜು ಮಾಡತಕ್ಕ ಸಂಖ್ಯೆಗಳನ್ನು ಒಂದರ ಹತ್ತರ ಒಂದು ಬರೆಯುವ ರೂಢಿಯಿತ್ತು. ಕೆಲಕೆಲವು ಸಾರೆ ಮುಂದಿನಿಂದ ಬರುವ ಮನುಷ್ಯನ ಪಾದದ ಗುರುತನ್ನು ಈ ಚಿಹ್ನದ ಸ್ಥಳದಲ್ಲಿ ಉಪಯೋಗಿಸುತ್ತಿದ್ದರು. + ಈ ಚಿನ್ಹವನ್ನು ಇ. ಸ. ೧೫೫೫ ರಲ್ಲಿ ಸ್ಟಾಯಫೆಲನೆಂಬ ಗಣಿತಶಾಸ್ತ್ರಜ್ಞನು ವಿಶೇಷವಾಗಿ ಪ್ರಚಾರದಲ್ಲಿ ತಂದನು.

– ಈ ಚಿಹ್ನದ ಬದಲಾಗಿ < ಅಂದರೆ ಮುಂದೆ ಬಿಟ್ಟ ಬಾಣದ ಅಥವಾ ಹಿಂದೆ ಹೋಗುವ ಹೆಜ್ಜೆಯ ಗುರುತನ್ನು ಉಪಯೋಗಿಸುತ್ತಿದ್ದರು. ಹಾಗೂ ಈ ಗುರುತನ್ನು ಬರೆದು, ಇಲ್ಲವೆ ವಜಾ ಕಳೆಯುತಕ್ಕ ಸಂಖ್ಯೆಯ ಮೇಲೆ ಸಣ್ಣ ಟಿಪ್ಪು ಮಾಡಿ ವಜಾಬಾಕಿಯನ್ನು ಮಾಡಬೇಕೆಂಬದನ್ನು ತೋರಿಸುತ್ತಿದ್ದರು. "ಡೀ ಮಾರ್ಗನ್" ಎಂಬ ಯುರೋಪಿಯನ್ ಗಣಿತಶಾಸ್ತ್ರಜ್ಞನು ಈ ಟಿಪ್ಪನ್ನೇ ಗಡಬಡಿಯಿಂದ ಕೊಡುವದರಿಂದ ಅದು ಹಬ್ಬಿ ಸಾಂಪ್ರತಕಾಲದ ಊರ್ಣಾಚಿಹ್ನವಾಗಿದೆಯೆಂದು ಹೇಳುವನು.

= ಈ ಚಿನ್ಹದ ಬದಲಾಗಿ ≯ ಈ ಚಿಹ್ನವನ್ನು ಉಪಯೋಗಿಸುತ್ತಿದ್ದರು.

ಅವ್ಯಕ್ತರಾಶಿಯನ್ನು ತೋರಿಸುವದಕ್ಕಾಗಿ △ ಈ ಗುರುತನ್ನು ಅಂದರೆ, ಧಾನ್ಯದ ರಾಶಿಯ ಗುರುತನ್ನು ಉಪಯೋಗಿಸುತ್ತಿದ್ದರು. ಇಂಥ ರಾಶಿಗಳನ್ನು ತೋರಿಸುವದಕ್ಕಾಗಿ ವರ್ಣಮಾಲೆಯೊಳಗಿನ ಅಕ್ಷರಗಳನ್ನು ಉಪಯೋಗಿಸುವ ರೂಢಿಯು ೧೫ನೇ ಶತಮಾನದಿಂದ ಆರಂಭವಾಗಿರುವದು.

$\surd$ ಈ ಕರಣೀ ಚಿಹ್ನನ ವೃತ್ತಾಂತವಾದರೂ ಹೀಗೆಯೇ ಇರುವದು. "ಮೂಲ" ಎಂಬ ಅರ್ಥದ ರೇಡಿಕ್ಸ ಎಂಬ ಲ್ಯಾಟಿನ ಶಬ್ದದ ಆದ್ಯಕ್ಷರವು ಆರ್ r ಇರುವದು. $\surd$ ಈ ಚಿಹ್ನವು ಗಡಬಡಿಯಿಂದ ಬರೆದ r ಅಕ್ಷರವಾಗಿರುವಹು. ಲೀಲಾವತೀ ಗಣಿತದಲ್ಲಿ ಈ ಚಿಹ್ನಗಳನ್ನು ಉಪಯೋಗಿಸಿರುವರು. ಆದರೆ ಇ. ಸ. ೧೫೫೬ ರ ತರುವಾಯ ಈ ಚಿಹ್ನವು ಪ್ರಚಾರದಲ್ಲಿ ಬಂದಿರುವದು. ಘಾತಪ್ರಕಾಶಕಗಳನ್ನು ಬರೆಯುವದು ಪ್ರಚಾರದಲ್ಲಿಲ್ಲದಾಗ ಘನಮೂಲ ಎಂಬದನ್ನು $\surd\surd\surd$ ಹೀಗೆ ಬರೆದು ತೋರಿಸುತ್ತಿದ್ದರು. ಹಾಗೂ ಚತುರ್ಘಾತಮೂಲ ಇದನ್ನು $\surd\surd\surd\surd$ ಹೀಗೆ ಬರೆದು ತೋರಿಸುತ್ತಿದ್ದರು.

ಸಾರಾಂಶವೇನಂದರೆ, ಪ್ರಾಚೀನ ಕಾಲದಲ್ಲಿ ಈ ಸಾಂಕೇತಿಕ ಚಿಹ್ನಗಳು ಎಲ್ಲ ಕಡೆಯಲ್ಲಿಯೂ ಒಂದೇ ಇದ್ದಿಲ್ಲವಾದ್ದರಿಂದ ಜನರಿಗೆ ಗಣಿತಗಳನ್ನು ಮಾಡಲಿಕ್ಕೆ ಬಹಳೇ ಅಡಚಣಿಯಾಗುತ್ತಿತ್ತು.

ಗಣಿತಶಾಸ್ತ್ರದ ಬಾಲ್ಯದಶೆಯಲ್ಲಿ ಗುಣಾಕಾರ ಭಾಗಾಕಾರಗಳಂಥ ಸಾಮಾನ್ಯ ಕೃತಿಗಳನ್ನು ಸಹ ಅತಿಶಯ ಕಷ್ಟದಿಂದಲೂ ಬಹಳೇ ಉದ್ದವಾದ ರೀತಿಯಿಂದಲೂ ಮಾಡುತ್ತಿದ್ದರೆಂಬದು ಕೆಳಗಿನ ಉದಾಹರಣೆಯಿಂದ ಗೊತ್ತಾಗುವದು.

ಗಣಿತಶಾಸ್ತ್ರದ ಇತಿಹಾಸದ ಸಂಬಂಧದ ಒಂದು ಪುಸ್ತಕದಲ್ಲಿ ಕ್ರಿ. ಶ. ಪೂರ್ವದಲ್ಲಿ ೧೮೦೦ ವರ್ಷಗಳ ಹಿಂದೆ ಅಹಮ್ ಎಂಬ ಹೆಸರಿನ ಒಬ್ಬ ಇಜಿಪ್ತದೇಶದ ಗಣಿತ ಶಿಕ್ಷಕನು ಬರೆದ ಒಂದು ಲೇಖನ ಅವತರಣಗಳಿರುವವು. ಅದರ ಮೇಲಿಂದ ನೋಡಿದರೆ ಅಹಮ್ಮನು ಯಾವದಾದರೊಂದು ಸಂಖ್ಯೆಗೆ ೧೩ ರಿಂದ ಗುಣಿಸುವದಾದರೆ ಮೊದಲು ಗುಣ್ಯದ ಇಮ್ಮಡಿ

ಆ ಮೇಲೆ ಅದರ ಇಮ್ಮಡಿ, ಆ ಮೇಲೆ ಅದರ ಇಮ್ಮಡಿಯೂಡಿ ಅವುಗಳ ಜೇರೀಜಿನ ಸಹಾಯದಿಂದ ಮಾಡುತ್ತಿದ್ದನೆಂದು ಗೊತ್ತಾಗಿದೆ.

ಉದಾ:–

ಕ್ಷ × ೧೩ = ?

	ಕ್ಷ × ೨	=	೨ ಕ್ಷ
೨	ಕ್ಷ × ೨	=	೪ ಕ್ಷ
೪	ಕ್ಷ × ೨	=	೮ ಕ್ಷ

ಕ್ಷ × ೧೩ = ೮ಕ್ಷ + ೪ಕ್ಷ + ಕ್ಷ = ೧೩ ಕ್ಷ.

ಕ್ರಿ. ಶ. ದ ೬–೭ನೇ ಶತಮಾನಗಳಿಗಿಂತ ಪೂರ್ವದಲ್ಲಿ, ಅಂದರೆ ದಶಕ ಪದ್ಧತಿಯ ಸಂಖ್ಯಾಲೇಖನಪದ್ಧತಿಯು ಪ್ರಚಾರದಲ್ಲಿ ಬರುವ ವರೆಗೆ ಗಣಿತಶಾಸ್ತ್ರವು ಅಭಿವೃದ್ಧಿ ಹೊಂದಲಿಕ್ಕೆ ಅನುಕೂಲತೆಯೇ ಇದ್ದಿಲ್ಲ. ಯಾಕಂದರೆ ಆಗ ಸಂಖ್ಯೆಗಳನ್ನು ಅಕ್ಷರಗಳ ಸಹಾಯದಿಂದ ಇಲ್ಲವೆ ಶಬ್ದಗಳಿಂದ ಬರೆದು ತೋರಿಸುವ ರೂಢಿಯಿದ್ದದರಿಂದ ಸಾಮಾನ್ಯ ಕೃತ್ಯ ಗಳನ್ನು ಸಹ ಬಹಳ ಗೊಂದಲವಾಗುವಂತೆಯೂ ಉದ್ದವಾಗಿಯೂ ಬರೆ ಯಬೇಕಾಗುತ್ತಿತ್ತು. ಗ್ರೀಕರು ಸಂಖ್ಯೆಗಳನ್ನು ಅಕ್ಷರಗಳಿಂದ ಬರೆಯು ತ್ತಿದ್ದರು. ಹಾಗು ಸಂಖ್ಯೆಗಳ ಗಣನೆಯನ್ನು ಕಲಿತವರು ಅವುಗಳನ್ನು ಬರೆಯುವದಕ್ಕೆ ಅಂಕೆಗಳನ್ನು ಉಪಯೋಗಿಸುತ್ತಿದ್ದರು. ಗಡಿಯಾಳದ ಮೇಲಿನ ಅಂಕೆಗಳು ಅಕ್ಷರಾತ್ಮಕವಾದವುಗಳೆಂಬದನ್ನು ಪುನಃ ಜೇಳ ಬೇಕಾಗಿಲ್ಲ;

C × LVII ಇದಕ್ಕೆ LXVI ಇದರಿಂದ ಗುಣಿಸುವದದಿಯೆಂದು ತಿಳಿಯೋಣ. ಅಂಕಲಿಪಿಯ ಹಾಗೂ ದಶಕಪದ್ಧತಿಯ ಸಂಖ್ಯೆಯ ಕಲ್ಪನೆ ಗಳು ಇಲ್ಲವೆಂದು ತಿಳಿದರೆ, ಈ ಗುಣಾಕಾರ ಮಾಡುವದು ಎಷ್ಟು ಕಠಿಣ ಹೋಗುವದೆಂಬದೂ ಎಷ್ಟು ಬೆಳೆಯುವದೆಂಬದೂ ಗೊತ್ತಾಗುವದು. ಅದ ರಿಂದಲೇ ಆಗಿನಕಾಲದಲ್ಲಿ ಗುಣಾಕಾರವನ್ನು ಕ್ರಮಿಕ ಜೇರೀಜಿನ ಸಹಾ ಯದಿಂದಲೂ, ಭಾಗಾಕಾರವನ್ನು ಕ್ರಮಿಕ ವಜಾಬಾಕಿಯ ಸಹಾಯ ದಿಂದಲೂ ಮಾಡುತ್ತಿದ್ದರೆಂದು ತೋರುತ್ತದೆ. ಅಂಕಲಿಪಿಯು ಪ್ರಚಾರದಲ್ಲಿ ಬಂದ ತರುವಾಯ ಮಾತ್ರ ಬಂದು ದೊಡ್ಡ ಅಡಚಣಿಯು ಹೋದಂತಾ ಯಿತು. ಅರಬರು, ಆರ್ಯರು, ಚೀನೀಯರು ಇವರಲ್ಲಿ ಪ್ರತಿಯೊಬ್ಬರು ತಾವೇ ಅಂಕಲಿಪಿಯನ್ನು ಹುಡುಕಿ ತೆಗೆದೆವೆಂದು ಹೇಳುತ್ತಾರ!!

ಏನೇ ಇರಲಿ, ಇದರಿಂದ ಗಣಿತಶಾಸ್ತ್ರವು ಭರದಿಂದ ಮುಂದಡಿಯಿಡಲಿಕ್ಕೆ ಬಹಳೇ ಸಹಾಯವಾಯಿತೆನ್ನಲಿಕ್ಕೆ ಅಡ್ಡಿ ಇಲ್ಲ. ಆದರೂ ಮುಂದೆ ಎಷ್ಟೋ ಕಾಲದ ವರೆಗೆ ಗುಣಾಕಾರ ಭಾಗಾಕಾರಗಳಂಥ ಕೃತಿಗಳನ್ನು ಸಹ ಬಹಳ ಕಠಿಣವಾದ ಹಾಗೂ ಉದ್ದವಾದ ರೀತಿಯಿಂದ ಮಾಡಬೇಕಾಗುತ್ತಿತ್ತೆಂದು ತಿಳಿಯುತ್ತದೆ. ಸಂಖ್ಯೆಗಳನ್ನು ಬರೆದು ತೋರಿಸುವದಕ್ಕಾಗಿ ಗೊತ್ತು ಮಾಡಿದ ಗುರುತುಗಳಲ್ಲಿ, ಅಂದರೆ ಅಂಕಿಗಳಲ್ಲಿ, ೧೩ನೇ ಶತಮಾನದ ವರೆಗೆ ಂ ಈ ಗುರುತು ಇದ್ದಿಲ್ಲ!!

ಹಿಂದೆ ಹೇಳಿದಂತೆ ಗುಣಾಕಾರವನ್ನು ಮಾಡುವದಕ್ಕೆ ಬಹಳ ಅಡಚಣಿಯುಂಟಾಗುವದರಿಂದ ಕೆಲವರು ಗುಣಾಕಾರದ ಸಂಬಂಧದಿಂದ ಕೆಲವು ಯುಕ್ತಿಗಳನ್ನು ಹುಡುಕಿ ತೆಗೆದರು. ಇಸವೀ ಸನ್ ೧೬೧೨ ರಲ್ಲಿ ನೇಪಿಯರನೆಂಬವನು ಮುಂದೆ ಹೇಳಲಾಗುವ ಯುಕ್ತಿಯನ್ನು ಪ್ರಚಾರದಲ್ಲಿ ತಂದನು. ಈ ಪದ್ಧತಿಯು ಅವನಿಗಿಂತಲೂ ಪೂರ್ವದಲ್ಲಿ ಹಿಂದುಸ್ತಾನದಲ್ಲಿಯೂ, ಇರಾಣದಲ್ಲಿಯೂ ಪ್ರಚಾರದಲ್ಲಿತ್ತು. ಗುಣಾಕಾರ ಮಾಡುವದಕ್ಕಾಗಿ ಇವನು ೫" ಉದ್ದ ಹಾಗೂ ೨" ಅಗಲ ಇಂಥಾದ್ದೊಂದು ಪಟ್ಟಿಯನ್ನು ಮಾಡಿದ್ದನು. ಆಗ ಈ ಪಟ್ಟಿಯನ್ನು ಕಟ್ಟಿಗೆಯಿಂದಾಗಲಿ, ಹಸ್ತಿದಂತದಿಂದಾಗಲಿ ಮಾಡಿರುತ್ತಿದ್ದರು. ಈ ಪಟ್ಟಿಯಲ್ಲಿ ಒಂದರ ಕೆಳಗೊಂದರಂತೆ ಒಂಭತ್ತು ಚೌರಸಗಳನ್ನು ಮಾಡಿ, ಆ ಚೌರಸುಗಳ ಕರ್ಣಗಳಿಂದ ಪ್ರತಿಯೊಂದು ಚೌರಸದಲ್ಲಿ ಪುನಃ ಸರಿಯಾಗಿ ಎರಡು ಭಾಗಗಳನ್ನು ಮಾಡಿರುತ್ತಿದ್ದರು. ಹಾಗೂ ಮುಂದೆ ೧೦ನೇ ಆಕೃತಿಯಲ್ಲಿ ೩೨ ಮೆಗ್ಗಿಯನ್ನು ಬರೆದು ತೋರಿಸಿದಂತೆ ೯ರ ಪರೆಗಿನ ಯಾವತ್ತೂ ಮಗ್ಗಿಗಳನ್ನು ೯ ಬೇರೆ ಬೇರೆ ಪಟ್ಟಿಗಳಲ್ಲಿ ಬರೆದು ಇಟ್ಟುಕೊಳ್ಳುತ್ತಿದ್ದರು.

ಆ. ೧.



ಆ. ೨.



೫ ಪಟ್ಟು

೬ ಪಟ್ಟು

೯ ಪಟ್ಟು

ಇನ್ನು ಈ ತರದ ಪಟ್ಟಿಗಳನ್ನು ಗುಣಾಕಾರ ಮಾಡುವಪದ್ಧತಿಯಲ್ಲಿ ಹ್ಯಾಗೆ ಉಪಯೋಗಿಸುತ್ತಿದ್ದರೆಂಬದನ್ನು ನೋಡುವಾ:—

೪೩೧೫ಕ್ಕೆ ೭೬೯ರಿಂದ ಗುಣಿಸಬೇಕಾಗಿದೆಯೆಂದು ತಿಳಿಯುವ. ಮೊದಲು ೪,೩,೧,೫ ಈ ಮೆಗ್ಗಿಗಳ ನಾಲ್ಕು ಪಟ್ಟಿಗಳನ್ನು ತೆಗೆದುಕೊಂಡು ಅನುಕ್ರಮವಾಗಿ (ಹಿಂದೆ ಎರಡನೇ ಆಕೃತಿಯಲ್ಲಿ ತೋರಿಸಿದಂತೆ) ಎಡಗಡೆಯಿಂದ ಬಲಗಡೆಗೆ ಹೊಂದಿಸಿಡಬೇಕು. ಈಗ ಇದರೊಳಗೆ ಮೇಲಿನಿಂದ ಮೂರನೇ ಅಡ್ಡಸಾಲಿನಲ್ಲಿ ೪,೩,೧,೫ ಈ ಅಂಕಿಗಳಲ್ಲಿ ಪ್ರತಿಯೊಂದು ಅಂಕೆಯ ಮುಮ್ಮಡಿಯನ್ನು ಬೇರೆ ಬೇರೆ ಚೌರಸಗಳಲ್ಲಿ ಬರೆದದ್ದು ಕಂಡು ಬರುವದು. ಮತ್ತು ಕರ್ಣಗಳಿಂದ ಆದ ಮೂಲೆಗಳಲ್ಲಿ ಆ ಪಟ್ಟಿಯೊಳಗಿನ

೧೫	
೩	
೯	
೧೨	
೧೨೯೩೫	

ಅಂಕಿಗಳು ಸ್ಥಾನಪರತ್ವದಿಂದ ಎಡಗಡೆಗೆ ತೋರಿಸಿದಂತೆ ಬಂದರಕೆಳಗೊಂದು ಬಂದಿರುವವು. ಇವುಗಳ ಬೇರೀಜು ೪೩೧೫ರ ಮೂರು ಪಟ್ಟಾಯಿತೆಂಬದು ಸಹಜವು. ಇದರಂತೆಯೇ ೭ನೇ ಸಾಲಿನಲ್ಲಿಯೂ ೪, ೩, ೧, ೫ ಈ ಅಂಕಿಗಳ ೭ ಪಟ್ಟು, ಯೋಗ್ಯಸ್ಥಾನಗಳಲ್ಲಿ ಎಡಗಡೆಗೆ ತೋರಿಸಿದಂತೆ ಬಂದದ್ದು ಕಂಡು ಬರುವದು. ಕರ್ಣಗಳಿಂದಾದ ಮೂಲೆಗಳೊಳಗಿನ ಅಂಕಿಗಳ ಬೇರೀಜುಮಾಡಿ ಬಂದ ಸಂಖ್ಯೆಯೊಳಗಿನ ಮೊದಲನೆಯ ಅಂಕೆಯನ್ನು ಕೆಳಗೆ ಬರೆದದೆ. ಅದರಲ್ಲಿ

೨೦	
೬	
೧೮	
೨೪	
೨೫೮೯೦	

ಹತ್ತನೆಯ ಅಂಕಿ ಬರುತ್ತಿದ್ದರೆ ಅದನ್ನು ಕೈಲೆ ಹಿಡಿದು ಮುಂದಿನ ಮೂಲೆಗಳೊಳಗಿನ ಅಂಕಿಗಳ ಬೇರೀಜಿನಲ್ಲಿ ಅದನ್ನು ಕೂಡಿಸಬೇಕು. ಈ ಪ್ರಕಾರ ಮಾಡಲು ಗುಣ್ಯಸಂಖ್ಯೆಯ ಇಚ್ಛಿತ ಪಟ್ಟು ಆಗುವದು. ಮೇಲಿನ ಆಕೃತಿಯಲ್ಲಿ ಆರನೆಯ ಸಾಲಿನಲ್ಲಿದ್ದ ಅಂಕಿಗಳ ಬೇರೀಜು ೨೫೮೯೦ ಆಗುವದು. ಇದು ೪೩೧೫ ಇದರ ೬ ಪಟ್ಟು ಇರುವದು. ಈ ಮೇರೆಗೆ ಗುಣ್ಯ ಸಂಖ್ಯೆಯ ಬೇರೆ ಬೇರೆ ಪಟ್ಟುಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡು ಅವುಗಳ ಬೇರೀಜು ಮಾಡಲಾಗಿ ಇಷ್ಟ ಗುಣಾಕಾರವು ಬರುವದು. ಮೇಲೆ ಕೊಟ್ಟ ಉದಾಹರಣೆಯ ಉತ್ತರವನ್ನು ತೆಗೆಯಬೇಕಾದರೆ, ಮೊದಲು ತೀರ ಕೆಳಗಿನ ಸಾಲಿನಲ್ಲಿದ್ದ ಗುಣ್ಯದ ೯ ಪಟ್ಟನ್ನು ತೋರಿಸುವ ಸಂಖ್ಯೆಯನ್ನು ಬರೆದು,

ಅದರ ಕೆಳಗೆ ೬ ಪಟ್ಟು ತೋರಿಸುವ ಸಂಖ್ಯೆಯನ್ನು ಬಂದು ಅಂಕಿ ಎಡಕ್ಕೆ ಸರಿಸಿ ಬರೆದು ಅದರ ಕೆಳಗೆ ಮೇಲಿನ ಸಂಖ್ಯೆಯಂತೆಯೇ ೩ ಪಟ್ಟನ್ನು ಬಂದು ಅಂಕಿ ಎಡಗಡೆಗೆ ಸರಿಸಿ ಬರೆಯಲಾಗಿ, ಕೆಳಗೆ ತೋರಿಸಿದಂತೆ ಮೂರು ಸಂಖ್ಯೆಗಳು ಬರುವವು:—

೩೮೬೩೫

೨೫೬೯೦

೧೨೯೪೫

ಈ ಸಂಖ್ಯೆಗಳ ಬೇರೀಜು ೧೫೯೬೨೩೫ ಬರುವದು. ಇದೇ ಉತ್ತರವು.

ಗುಣಾಕಾರ ಮಾಡುವದೇ ಇಷ್ಟೊಂದು ಕಷ್ಟವಾದ ಮೇಲೆ ಭಾಗಾಕಾರ ಮಾಡುವದು ಎಷ್ಟು ಕಷ್ಟ ಸಾಧ್ಯವೆಂಬದು ಸಹಜವಾಗಿ ಗೊತ್ತಾಗುವದು. ಅರಬರೂ, ಇರಾಣೀ ಜನರೂ ಬಹಳ ದಿವಸದ ವರೆಗೆ ಭಾಗಾಕಾರವನ್ನು ಕೆಳಗೆ ಹೇಳಿದಂತೆ ಮಾಡುತ್ತಿದ್ದರು. ೧೭೯೩೫೯೬ಕ್ಕೆ ೪೩೭ರಿಂದ ಭಾಗಿಸತಕ್ಕದ್ದೆಂದು ತಿಳಿಯೋಣ.

ಆ. ೩.

೧ ೧	೩ ೨	೯	೩	೮
	೫ ೨	೯ ೧	೩	೮
	೩	೮	೩ ೬	೮
	೩ ೪	೮ ೩	೧ ೨	೮
೪	೨	೨		
	೦	೩		

ಆ. ೪.

	೩ ೩	೮ ೨	೮
		೬ ೫	೧ ೬.	೮
			೫ ೧	೪ ೬
		೪	೪ ೩	೨ ೨
	೪	೬	೨	
೪	೩	೨		
		೦	೩	೮

೩ನೇ ಆಕೃತಿಯಲ್ಲಿ ತೋರಿಸಿದಂತೆ ಭಾಜ್ಯವನ್ನು ಆಕೃತಿಯ ಮೇಲ್ಭಾಗದಲ್ಲಿಯೂ, ಭಾಜಕವನ್ನು ಕೆಳಗಡೆಯಲ್ಲಿ ಅವುಗಳೊಳಗಿನ ಮಹತ್ತ್ವ ಸ್ಥಾನಾಂಕಿಗಳು ಎಲ್ಲಕ್ಕೂ ಎಡಕ್ಕಿರುವ ಉದ್ದ ಸಾಲಿನಲ್ಲಿ ಬರುವಂತೆಯೂ ಬರೆದು ಭಾಜ್ಯದೊಳಗಿನ ಮಹತ್ತ್ವಸ್ಥಾನಾಂಕೆಗೆ ಭಾಜಕದೊಳಗಿನ ಮಹತ್ತ್ವ ಸ್ಥಾನಾಂಕೆಯಿಂದ ಭಾಗಿಸಿ, ಎಷ್ಟರಿಂದ ಭಾಗಹೋಗುವದೆಂಬದನ್ನು ಗೊತ್ತುಮಾಡಿಕೊಂಡು ಆ ಅಂಕಿಯನ್ನು ಭಾಜಕದ ಎಕ್ಕಂ ಸ್ಥಾನದ ಅಂಕೆ

ಯು ಕೆಳಗೆಬರೆಯಬೇಕು. ಈ ಉದಾಹರಣೆಯಲ್ಲಿ ೧ಕ್ಕೆ ೪ರಿಂದ ಭಾಗ ಹೋಗದೆ ಇರುವದರಿಂದ ೨ರ ಕೆಳಗೆ ೦ ಯನ್ನು ಬರೆದದೆ. ಆ ಮೇಲೆ ಭಾಜಕವನ್ನು ಮೊದಲು ಬರೆದ ಅಡ್ಡಸಾಲಿನ ಮೇಲಿರುವ ಸಾಲಿನಲ್ಲಿ ಒಂದುಸ್ಥಾನ ಬಲಕ್ಕೆ ಸರಿಸಿ ಬರೆದು, ಭಾಜ್ಯದೊಳಗಿನ ೧೭ಕ್ಕೆ ಭಾಜಕದೊಳಗಿನ ೪ರಿಂದ ಭಾಗಿಸಿ ನೋಡಿ, ಅದಕ್ಕೆ ೪ರಿಂದ ಭಾಗ ಹೋಗುವಂತೆ ಇದ್ದರೂ ಇಡೀ ಸಂಖ್ಯೆಗೆ ಭಾಗ ಹೋಗುವಂತೆ ಇಲ್ಲವಾದ್ದರಿಂದ ೩ರಿಂದ ಭಾಗ ಹಚ್ಚಿ, ಅದನ್ನು ಹಿಂದೆ ಬರೆದ ೦ ಯ ಬಲಕ್ಕೆ ಬರೆದದೆ. ೪೨೨ಕ್ಕೆ ೩ರಿಂದ ಹ್ಯಾಗೆ ಗುಣಿಸ ಬೇಕೆಂಬದನ್ನೂ ಗುಣಾಕಾರವನ್ನು ಭಾಜ್ಯದೊಳಗಿಂದ ಹ್ಯಾಗೆ ವಜಾ ಕಳಿಯಬೇಕೆಂಬದನ್ನೂ ೩ನೇ ಆಕೃತಿಯಲ್ಲಿ ತೋರಿಸಿದೆ. ಆ ಮೇಲೆ ೪೨೨ ಈ ಭಾಜಕವನ್ನು ಕಾಟು ಹಾಕಿ, ಅದನ್ನು ಪುನಃ ಮೊದಲಿನಂತೆ ಸರಿಸಿ ಬರೆಯಬೇಕು. ಆ ಮೇಲೆ ೩೮೧೫ ಈ ಬಾಕಿಗೆ ೪೨೨ ರಿಂದ ಭಾಗಿಸಬೇಕಾಗಿದ್ದು, ಎಷ್ಟರಿಂದ ಭಾಗಹತ್ತುವದೆಂಬದನ್ನು ೩೮ಕ್ಕೆ ೪ರಿಂದ ಭಾಗ ಹಚ್ಚಿ, ನೋಡಬೇಕಾಗುವದು. ಈ ಎಲ್ಲ ಕೃತಿಗಳು ನಾಲ್ಕನೇ ಆಕೃತಿಯಿಂದ ಲಕ್ಷದಲ್ಲಿಬರುವವು.

ಕೆಳಗೆ ಬರೆದಂಥ ಭಾಗಾಕಾರದ ರೀತಿಯು ಇಸವೀ ಸನ್ ೧೬ನೇ ಶತಮಾನದೊಳಗಿನ ಪೌಸೀಬೆಲೀ ಎಂಬ ಹೆಸರಿನ ಒಬ್ಬ ಗಣಿತಶಾಸ್ತ್ರಜ್ಞನ ಪುಸ್ತಕದೊಳಗಿಂದ ತೆಗೆದುಕೊಂಡಿರುತ್ತದೆ. ಇಂಥಾದ್ದೇ ಒಂದು ಭಾಗಾಕಾರವನ್ನು ಮಾಡುವ ರೀತಿಯು ಇಸವೀ ಸನ್ ೧೬ನೇ ಶತಮಾನ ಪರ್ಯಂತರ ಇತಲಿಯಲ್ಲಿಯೂ, ಹಿಂದುಸ್ತಾನದಲ್ಲಿಯೂ ಪ್ರಚಾರದಲ್ಲಿತ್ತು:—

ಉದಾ:—೨೩೪೦೦ ಕ್ಕೆ ೧೦೦ ರಿಂದ ಭಾಗಿಸು.

೦
೦ ೪ ೦
೦ ೩ ೪ ೦ ೦
೨ ೩ ೪ ೦ ೦ (೨೩೪
೧ ೦ ೦ ೦ ೦
೧ ೦ ೦
೧

ಉತ್ತರ ೨೩೪.

ಆ ಕಾಲದಲ್ಲಿ ಇದೇ ರೀತಿಯು ರಾಜಮಾನ್ಯವಾಗಿತ್ತೆಂಬದರಲ್ಲಿ ಆಕ್ಷೇಪಣೆಯೇನೂ ಇಲ್ಲ.

ಮ. ಶಿ.

ಶಾಲಾಧ್ಯಾಪಕರ ಲೇಖಗಳು.

ಶ್ರೀಯುತ ರಾ|| ಕರ್ನಾಟಕ ಶಾಲಾಪತ್ರಿಕಾ ಕರ್ತರ ಚರಣ
ಸನ್ನಿಧಿಗೆ:—

ಆರ್ಯರೇ, ತಮ್ಮ ಕರಕಮಲದಿಂದುದ್ಭವಿಸುವ ಸರ್ವಾಂಗ ಸುಂದರವಾದ ಹೂಸ ಪತ್ರಿಕೆಯ ಕಳಿದ ಮಾರ್ಚ ತಿಂಗಳ ಸಂಚಿಕೆಯಲ್ಲಿ ನೆಲೆಮಾಂವದ ಹೆಡ್‌ಮಾಸ್ತರ ಪೀ. ಆಯ್. ಯಡೀಕೇರಿಯವರು ಕೊಟ್ಟಂಥ ಎರಡು ಉದಾಹರಣೆಗಳನ್ನು ನನ್ನ ಅಲ್ಪ ಮತಿಗೆ ತೋಚಿದ ಮೇರೆಗೆ ಬಿಡಿಸಿ ಇದರಡಿಯಲ್ಲಿ ಕೊಟ್ಟಿರುತ್ತೇನೆ. ಯೋಗ್ಯ ಕಂಡರೆ ಸ್ಥಳವನ್ನಿತ್ತು ಪ್ರಕಟಿಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ:—

ಗನೇ ಉದಾಹರಣೆ:— ರೀತಿಯು.

ಕ= ಬೆಲ್ಲವನ್ನು ತೆಗೆದುಕೊಳ್ಳಲಿಕ್ಕೆ ವೆಚ್ಚಮಾಡಿದ ದುಡ್ಡುಗಳು.
ಯ= ಬೊಬ್ಬರಿಯನ್ನು ತೆಗೆದುಕೊಳ್ಳಲಿಕ್ಕೆ ವೆಚ್ಚ ಮಾಡಿ ದದುಡ್ಡುಗಳು.
ಖ= ಭೈಮೂಗವನ್ನು ತೆಗೆದುಕೊಳ್ಳಲಿಕ್ಕೆ ವೆಚ್ಚಮಾಡಿದ ದುಡ್ಡುಗಳು.
$\therefore$ ಕ + ಯ + ಖ = ೨೦.

ಉದಾಹರಣೆಯಲ್ಲಿ ಹೇಳಿದ ದರದಂತೆ:—

$\frac{ಕ}{೪} + \frac{ಯ}{೨} + ೪ ಖ = ೨೦$ ಇದಕ್ಕೆ ೪ರಿಂದ ಗುಣಿಸು.

$\therefore$ ಕ + ೨ಯ + ೧೬ ಖ = ೮೦ ಆದರೆ,

ಕ + ಖ + ಯ = ೨೦ ವಜಾ ತೆಗೆಯಲು,

ಯ + ೧೫ ಖ = ೬೦ $\therefore$ ಯ = ೧೫ (೪–ಖ)

ಇನ್ನು (೪–ಖ) = ಮ ಎಂದು ಗ್ರಹಿಸು. $\therefore$ ಖ = ೪–ಮ.

ಕ = ೨೦ – ಯ – ಖ ಅಂದರೆ, ಕ = ೧೬ – ೧೪ ಮ.

$\therefore$ ಕ = ೧೬ – ೧೪ ಮ.

ಯ = ೧೫ (೪ – ಖ) = ೧೫ ಮ.

ಖ = ೪ – ಮ.

ಇಲ್ಲಿ ಮ ಇದಕ್ಕೆ ೧ಕ್ಕಿಂತ ಹೆಚ್ಚು ಬೆಲೆ ಕೊಡಲಿಕ್ಕೆ ಬರುವದಿಲ್ಲ.

ಯಾಕಂದರೆ ಛ ಜ ಬೆಲೆಯು ಉಹಾ ಬರುವದು. ಆದರಿಂದ ಥ = ೧ ಎಂದು ತಿಳಿ. ಅಂದರೆ,

ಛ = ೨, ಥ = ೧೫, ಜ್ಞ = ೩.

೨ ದುಡ್ಡುಗಳ ಬೆಲ್ಲವನ್ನೂ, ೧೫ ದುಡ್ಡುಗಳ ಒಬ್ಬರಿಯನ್ನೂ, ೩ ದುಡ್ಡುಗಳ ಭೈಮೂಗವನ್ನೂ ಕೊಂಡಿದ್ದನು. ಅಥವಾ ೪ ಸೇರು ಬೆಲ್ಲವನ್ನೂ ೭೫ ಸೇರು ಒಬ್ಬರಿಯನ್ನೂ, ೧೫ ಸೇರು ಭೈಮೂಗವನ್ನೂ ಕೊಂಡಿದ್ದನು. ಇದೇ ಉತ್ತರವು.

ಇಂತಿ ಶಿರಸಾಷ್ಟಾಂಗ ನಮಸ್ಕಾರ ವಿನಂತಿ ವಿಜ್ಞಾಪನೆಗಳು.

ತಮ್ಮ ವಿನಮ್ರ ಶಿಷ್ಯ.
ಭೀಮಾಜಿ ಜೀವಾಜಿ ಹೂಲೀಕವಿ.
ಪ್ರವೇಶ ಪರೀಕ್ಷೆಯ ವಿದ್ಯಾರ್ಥಿ.

ದೇವರಹೀಗೀಹಳ್ಳಿ
(ಬೆಳಗಾಂವ)
ತಾ. ೧ – ೬ – ೧೯೧೩.

ಪ್ರಿಯ ಗುರುವರ್ಯ ಶಾಲಾಪತ್ರಿಕಾಕರ್ತರ ಸನ್ನಿಧಿಗೆ—

ತಮ್ಮ ಶಿಷ್ಯರಲ್ಲೋರ್ವನ ಸಾಷ್ಟಾಂಗ ನಮಸ್ಕಾರ ವಿಜ್ಞಾಪನೆಗಳು.

ಗುರುಗಳೇ ಇದೇ ಇಸ್ವಿಯ ಮಾರ್ಚ ತಿಂಗಳ ಶಾಲಾಪತ್ರಿಕೆಯಲ್ಲಿ ನಮ್ಮ ಮಿತ್ರರಲ್ಲೋರ್ವರು ಕೊಟ್ಟ ಲೆಖ್ಖಗಳನ್ನು ನನ್ನ ಅಲ್ಪಮತಿಗೆ ತಿಳಿದಷ್ಟರ ಮಟ್ಟಿಗೆ ಬಿಡಿಸಿ ತೋರಿಸಿರುತ್ತೇನೆ. ಯುಕ್ತ ಕಂಡಲ್ಲಿ ದಯ ಮಾಡಿ, ಇಂಬನ್ನಿತ್ತು ಮುದ್ರಿಸುವಿರೆಂದು ನೆನಿಸುತ್ತೇನೆ:—

೧ ನೇ ಲೆಖ್ಖ

ಕ್ಷ ಸೇರು ಬೆಲ್ಲವನ್ನೂ ಯ ಸೇರು ಒಬ್ಬರಿಯನ್ನೂ ತೆಗೆದುಕೊಂಡನೆಂದು ತಿಳಿಯುವಾ.

∴ ೨೦–ಕ್ಷ–ಯ ಸೇರು ಭೈಮೂಗವನ್ನು ಕೊಂಡಂತಾಯಿತು. ಇನ್ನು ಇವುಗಳ ಬೆಲೆಯನ್ನು ತೆಗೆಯಲು

೪ ಸೇರು : ಕ್ಷ :: ೧ ದು : ೪ ಕ್ಷದು; ೪ನೇ : ಯ :: ೧ ದು : ೪ ಯೆದು.

೪ ಸೇ : ೨೦ – ಕ್ಷ – ಯ :: ೧ ದು : $\frac{೨೦ - ಕ್ಷ - ಯ}{೪}$ ದು.

ಇವೆಲ್ಲವುಗಳ ಬೇರೀಜು ೨೦ ದುಡ್ಡಿಗೆ ಸರಿಯಬೆ.

$$೪\ ಕ್ಷ + ೨\ ಯ + \frac{೨೦ - ಕ್ಷ - ಯ}{೪} = ೨೦$$

$$\therefore\ ೧೬\ ಕ್ಷ + ೮\ ಯ + ೨೦ - ಕ್ಷ - ಯ = ೮೦$$

$$\therefore\ ೧೬\ ಕ್ಷ - ಕ್ಷ + ೮\ ಯ - ಯ = ೮೦ - ೨೦$$

$$= ೧೫\ ಕ್ಷ + ೭\ ಯ = ೬೦$$

ಸಮೀಕರಣದಲ್ಲಿ ನಿಯಮಿತವಾದ ಉತ್ತರವು ಬರಬೇಕಾದರೆ, ಅವ್ಯಕ್ತ ಪದಗಳಿದ್ದಷ್ಟು ಸಮೀಕರಣಗಳನ್ನು ಕೊಡಬೇಕಾಗುತ್ತದೆ. ಈ ಲೆಖ್ಖದಲ್ಲಿ ಅವ್ಯಕ್ತ ಪದಗಳು ಎರಡು ಇದ್ದು ಸಮೀಕರಣವು ಒಂದೇ ಇದ್ದದರಿಂದ ಅನೇಕ ಉತ್ತರಗಳು ಬರುತ್ತವೆ. ಅವುಗಳಲ್ಲಿ ಅನುಕೂಲವಾದ ಒಂದೆರಡನ್ನು ಇಲ್ಲಿ ತೆಗೆದು ತೋರಿಸಿರುತ್ತೇನೆ.

$$೧೫\ ಕ್ಷ + ೭\ ಯ = ೬೦$$

$$\therefore\ ಕ್ಷ + \frac{೭}{೧೫}\ ಯ = ೪$$

ಇನ್ನು $ಯ = ೧೫$ ಎಂದು ತಿಳಿದರೆ $ಕ್ಷ + ೭ = ೪$ $\therefore ಕ್ಷ = -೩$ ಆಯಿತು.

-೩ ಸೇರು ಬೆಲ್ಲ, ೧೫ ಸೇರು ೭ಒಬ್ಬರಿ ಆಯಿತು. ಒಟ್ಟು ಬೇರೀಜು ೨೦ ಆಗಬೇಕಾಗಿದೆ. ಆದ್ದರಿಂದ ೮ ಸೇರು ಭೈಮೂಗು ಆಯಿತು.

ಈ ಉತ್ತರವು ಗಣಿತದೃಷ್ಟಿಯಿಂದ ನಿಜವಾದದ್ದಿದ್ದಾಗ್ಯೂ ವ್ಯವಹಾರದೃಷ್ಟಿಯಿಂದ ಉಪಾ ಉತ್ತರವು ಅಸಂಭವ. ಆದಕಾರಣ,

$ಯ = \frac{೨೪}{೭}$ ಎಂದು ತಿಳಿದರೆ $ಕ್ಷ + \frac{೨೪}{೭} = ೪$

$$\therefore\ ಕ್ಷ = \frac{೪}{೭}$$

$ಕ್ಷ = \frac{೪}{೭}$, $ಯ = \frac{೨೪}{೭}$ $\therefore ೨೦ - ಕ್ಷ - ಯ = ೧೭$ ಆಯಿತು.

$\therefore \frac{೪}{೭}$ ಸೇರು ಬೆಲ್ಲ, $\frac{೨೪}{೭}$ ಸೇರು ೭ಒಬ್ಬರಿ, ೧೭ ಸೇರು ಭೈಮೂಗು ಆಯಿತು.

$ಯ = \frac{೨೪}{೮}$ ಎಂದು ತಿಳಿದರೆ,

$ಕ್ಷ = \frac{೮}{೮}$ ಆಗುವದು, $ಯ = \frac{೨೪}{೮}$ $\therefore ೨೦ - ಕ್ಷ - ಯ = ೧೪$

ಆದ್ದರಿಂದ $\frac{೮}{೮}$ ಸೇರುಬೆಲ್ಲ, $\frac{೨೪}{೮}$ ಸೇರು ೭ಒಬ್ಬರಿ, ೧೪ ಸೇ. ಭೈಮೂಗ, ಇದರಂತೆ ಎರಡನೇ ಲೆಖ್ಖವನ್ನು ಬಿಡಿಸಲು,

$೭೯\ ಕ್ಷ + ೭೫\ ಯ = ೬೦೦$ ಆಗುವದು.

∴ ಕ್ಷ್ಮ್ಲ್ಕ್ಷ್ಯ + ಯೆ = ಲಂ, ಕ್ಷ್ಯ = ೭೫ ಎಂದು ತಿಳಿದರೆ ಯೆ = ೧ ಆಯಿತು. ೧೦೦ − ಕ್ಷ್ಯ − ಯೆ = ೨೪ ಆಯಿತು.

∴ ೭೫ ಅಂಜೀರಹಂಣ್ಣು, ೧ ಕಿತ್ತಳೆಹಣ್ಣು, ೨೪ ದಾಳಿಂಬ.

ಹೆ. ಮಾ. ಕೊಟ್ಟು
ಪುಚಿಗಿ. } ಕ. ಜೆ. ಪಾಟೀಲ.

ಅಲಂಕಾರದರ್ಪಣ-ಸಮಾಲಂಕಾರವು.

(ಕಳೆದ ಜುಲೈ ತಿಂಗಳ ಸಂಚಿಕೆಯ ೨೨ನೆಯ ಪುಟದಿಂದ ಮುಂದೆ ಸಾಗಿದ್ದು).

ಭಾ॥ ಚಂದ್ರಮಂಡಲವನ್ನು ಕೌಮುದಿ ।
ಹೊಂದಿದಂದದೆ ಶಿವನ ಪ್ರೊರೆಯಲಿ ।
ಬಂಪು ಗಂಗೆಯು ಸೇರಿದಂತಿರೆ ಜಾರ್ಜ ಭೂಮಿಪನೆ ॥
ಚಂದಿರಗೆ ಸರಿಯಾದ ನಿನ್ನನು ।
ಹೊಂದಿ ಸಲೆ ಶೋಭಿಪುದು ಕೀರ್ತಿಯು ।
ಚಂದದಿಂದೀ ಭರತಭೂಮಿಯ ಹಿಂದು ಜನರೊಳಗೆ ॥

ಅರ್ಥ– ಶ್ರೀಜಾರ್ಜ ಮಹಾರಾಜನೇ ಚಂದಿರಗೆ ಸರಿಯಾದ ನಿನ್ನನ್ನು ಕೀರ್ತಿಯು ಹೊಂದಿ ಚನ್ನಾಗಿ ಶೋಭಿಸುವದು, ಎಂದು ಹೇಳಿದೆ. ಅಂದರೆ ಸ್ತುತಿಗೆ ಪಾತ್ರನಾದಂಥ, ಶುಭ್ರನಾದಂಥ ನಿನ್ನನ್ನು ಹೊಂದಿದ್ದು ಕೀರ್ತಿಗೆ ಯೋಗ್ಯವೇ ಎಂದ ಹಾಗಾಯಿತು. ಮತ್ತೆ ಉದಾ:—

ಭಾ॥ ಯೋಜನೆಗೆ ಯೋಜನೆಯ ಕೂಡಿಸ ।
ಲೀಜಗದ ಪಲ ತೆರದ ಬ್ರಹ್ಮನೆ ।
ಸೋಜಿಗದ ಸೃಷ್ಟಿಯಲಿ ಬೇವಿನ ಗಿಡದ ಫಲಗಳನು ॥
ಕೂಜಿಸುತ ಕಾಕಾಳಿ ಸಂಘವು ।
ಸಾಜದಿಂ ಭೋಜನವ ಮಾಳ್ಪುದು ।
ಸೋಜಿಗದೆ ಸೋಜಿಗವಿದಲ್ಲವೇ ಯೋಜನೆಯ ಕ್ರಮವು ॥

ಮೇಲಿನವೆರಡು ಉದಾಹರಣೆಗಳಲ್ಲಿ ಸ್ತುತಿಗೆ ಪಾತ್ರಗಳಾದ ಎರಡು ವಸ್ತುಗಳ ಘಟನೆಯು ವರ್ಣಿತವಾಯಿತು. ಆದರೆ ಇಲ್ಲಿ 'ಬೇವಿನ ಹಣ್ಣು

ಗಳನ್ನು ತಿನ್ನಲಿಕ್ಕೆ ಕಾಗೆಯು ತಕ್ಕದ್ದೆಂದು ಹೇಳಿದ್ದರಿಂದ ನಿಂದೆಗೆ ಪಾತ್ರ ಗಳಾದ ಎರಡು ವಸ್ತುಗಳ ಘಟನೆಯು ವರ್ಣಿತವಾದಂತಾಯಿತು.

೨. ಕ್ರಿಯೆಯ ಕಾರಣಕ್ಕೆ ಯೋಗ್ಯವಾದದ್ದೆಂದು ಹೇಳಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ಜಲಜಾತೆಯಾದ ಲಕ್ಷ್ಮಿಯೆ।
ಬಲು ತಕ್ಕುದು ನೀಚಗತಿಯ ವೃತ್ತಿಯು ನಿನಗೆ॥

ಇಲ್ಲಿ 'ನೀಚಗಮನದ ನೀರಿನ ಸ್ವಾಭಾವಿಕ ಗುಣವು ಅದರಲ್ಲಿ ಹುಟ್ಟಿದ ಲಕ್ಷ್ಮಿಗೆ ಬರುವದು ಯೋಗ್ಯವೇ ಎಂದು ಹೇಳಿದ್ದರಿಂದ ಕ್ರಿಯೆಯ ಕಾರಣಕ್ಕೆ ಅನುರೂಪವಾಗಿದೆ, ಎಂದು ವರ್ಣಿಸಿದಂತಾಯಿತು. (ನೀಚ ಗತಿ = ಕೆಟ್ಟವರಲ್ಲಿ ಹೋಗುವದು; ತಗ್ಗಿನ ಕಡೆಗೆ ಹೋಗುವದು) ಇದ ವಿಷಮಾಲಂಕಾರದ ೩ನೇ ಭೇದಕ್ಕೆ ಪ್ರತಿದ್ವಂದ್ವವಾಗಿದೆ. ಮತ್ತೆ ಉದಾ:-

ಭಾ॥ ದವದಹನದಲಿ ಜನಿಸಿದೀ ಧೂ।
ಮವದು ಘನ ಭಾವವನು ಹೊಂದುತ।
ಲವನಿಯಲಿ ವರ್ಷಗಳ ಭರದಿಂದದನು ಶಮಿಸುವದು॥
ಜವದೆ ಸೋತ್ಪಾದಕನ ದಹಿಸುವ।
ದವಕೆ ಬಹು ತಕ್ಕದ್ದಿದಲ್ಲವೆ?।
ಭುವಿಯೊಳಗೆ ತಾನೈದೆ ಮಾಡಿದ ಫಲವನುಣ್ಣುವದು॥

ಅರ್ಥ— 'ಕಾಡುಬೇಗೆಯು ತಾನು ಹುಟ್ಟಿದ ಅಡವಿಯನ್ನೇ ದಹಿಸ ವದು. ಕಾರಣ ಕಾಡು ಬೇಗೆಯಿಂದ ಹುಟ್ಟಿದ ಹೊಗೆಯು ಮೋಡರೂಪ ವನ್ನು ಹೊಂದಿ ಮಳೆಗಳಿಂದ ಕಾಡುಬೇಗೆಯನ್ನು ನಂದಿಸುವದು ಬಹ ಯೋಗ್ಯವಾಗಿದೆ, ಎಂದು ಹೇಳಿದೆ. ಕಾರಣ ಶಮನ ಕ್ರಿಯೆಯು ಅದ ಕಾರಣಕ್ಕೆ ಯೋಗ್ಯವಾಗಿದೆ, ಎಂದು ಹೇಳಿದಂತಾಯಿತು. ಮತ್ತೆ ಉದಾ—

ವಾರ್ಧಿಕ॥ ಹಾಲಾಹಲಾಗ್ನಿಯಿಂದಾದಿಯಲಿ ವರ್ಧಿಸಿದ।
ಮೇಲೆ ಶಿವಲೋಚನದ ಬೆಂಕಿಯ ಸವಿಸಾಪದಿಂ।
ಬಾಲತನವನು ಕಳೆದು ಪ್ರೌಢತನದೊಳಗ್ಗೈದೆ
ರಾಹುವಿನ ಮುಖದ ವಿಷದೆ॥
ಮುಳುಗಿದೀ ಚಂದಿರನು ಕರಗಳನು ಜಗದೊಳಗೆ।

ಬೆಳಗಿಸುತ ನನ್ನನೀಗಲು ಬಹಳ ಪರಿಯಿಂದೆ ।
ತಳವುಳಿಪುದುಚಿತವಲ್ಲವೆ? ದುಷ್ಟಸಂಸರ್ಗ
ದಲ್ಲಿ ನೆರೆ ವರ್ಧಿಸಿರಲು ॥

ಅರ್ಥ– 'ಹಾಲಾಹಲದ ವಿಷ, ಶಿವಲೋಚನದ ಬೆಂಕಿ, ರಾಹುವಿನ ಮುಖದ ವಿಷ ಇವುಗಳ ಸಂಸರ್ಗವುಳ್ಳ ಚಂದ್ರನ ಕರಗಳು ನನ್ನನ್ನು ತಾಪಬಡಿಸುವದು ಯೋಗ್ಯವಾಗಿದೆ, ಎಂದು ಹೇಳಿದೆ. ಕಾರಣ ತಾಪನ-ಕ್ರಿಯೆಯು ಅದರ ಕಾರಣಕ್ಕೆ ಯೋಗ್ಯವಾಗಿದೆ ಎಂದು ವರ್ಣಿಸಿದಂತಾಯಿತು. ಮೊದಲಿನ ಉದಾಹರಣೆಯಲ್ಲಿ ಕ್ರಿಯೆಯು ಕಾರಣ-ಸ್ವಭಾವಗಳಿಗೆ ಯೋಗ್ಯವಾಗಿದೆ ಎಂದು ಹೇಳಲ್ಪಟ್ಟಿತು. ಆದರೆ ಉಳಿದವೆರಡು ಉದಾಹರಣೆಗಳಲ್ಲಿ ಕ್ರಿಯೆಯು ಅಗಂತುಕಗಳಾದ ಅವುಗಳ ದುಷ್ಟ ಸಂಸರ್ಗಗಳಿಗೆ ಯೋಗ್ಯವಾಗಿದೆ ಎಂದು ವರ್ಣಿಸಿದೆ.

೩. ಅನಿಷ್ಟ ಪ್ರಾಪ್ತಿಯಾಗದೆ ಅವನ ಇಷ್ಟವು ಪೂರ್ಣವಾಯಿತು, ಎಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ವಾರಣ ಲಾಭವದುಚಿತವೆ? ।
ವಾರಣವನು ಬಯಸಿದಂಥ ವಿದುಷನೆ ನಿನಗೆ ॥

ಇಲ್ಲಿ 'ವಾರಣವನು ಬಯಸಿದಂಥವನಿಗೆ ವಾರಣ ಲಾಭವು ಉಚಿತವೆ?' ಎಂದು ಹೇಳಿದ್ದರಿಂದ ಅನಿಷ್ಟಪ್ರಾಪ್ತವಾಗದೆ ಇಷ್ಟವು ನೆರವೇರಿದಂತಾಯಿತು. ಇದು ಆನೆಯನ್ನು ಬೇಡಲೋಸುಗ ರಾಜಮಂದಿರಕ್ಕೆ ಹೋಗಿ ದ್ವಾರಪಾಲಕರಿಂದ ತಿರುಗಿಸಲ್ಪಟ್ಟಂಥವನಿಗೆ ಯಾವನೋ ಒಬ್ಬನು ಆಡಿದ ನರ್ಮವಚನವು. ರಾಜದ್ವಾರದಲ್ಲಿ ಕೆಲವು ವೇಳೆಗಳಲ್ಲಿ ನಿವಾರಿಸಲ್ಪಡುವದು ಯುಕ್ತವಾದದ್ದೇ ಸರಿ. ಇದನ್ನು ಅಂಗೀಕರಿಸಿ ತಿರುಗಿ ಬರುವವನಿಗೆ ಅನಿಷ್ಟವು ಬರಲಿಲ್ಲವೆಂಬದು ಸಹಜವೇ. ಕಾರಣ ಇದು ವಿಷಮಾಲಂಕಾರದಲ್ಲಿ ಬರುವದಿಲ್ಲ. ಇದು ವಿಷಮಾಲಂಕಾರದ ೩ನೇ ಭೇದಕ್ಕೆ ಪ್ರತಿದ್ವಂದ್ವವಾಗಿರುವದು. (ವಾರಣ = ಆನೆ; ಒಳಗೆ ಹೋಗಗೊಡದಿರುವದು.)

ಅತರ್ಕಿತವಾದ ಅನಿಷ್ಟವು ಪ್ರಾಪ್ತಿಸಿದರೂ ಯಾವಕಡೆಯಲ್ಲಿ ಶ್ಲೇಷ ಮಹಿಮೆಯಿಂದ ಇಷ್ಟವು ನೆರವೇರಿತೆಂದು ಹೇಳಲ್ಪಡುವದೋ ಅಲ್ಲಿಯೂ ಈ ಅಲಂಕಾರವಾಗುವದು. ಹೇಗಂದರೆ:—

ಭಾ॥ ಉಚ್ಚವಾಗಿಹ ಗಜಗಳಟನಕೆ ।
ಮೆಚ್ಚಿನಾನಿಲ್ಲಿದ್ದೆ ರಾಜನೆ ।
ಉಚ್ಚವಾದಟನದ ಪ್ರಸಂಗವನೀಗಲೊದಗಿಸಿದ್ಯೆ ॥
ನಿಚ್ಚದಲಿ ಭೂವರನು ಸೇವಿಸ ।
ಲಿಚ್ಛೆಯುದು ಚಚ್ಚರದೆ ಫಲಿಸುವ ।
ದಚ್ಚರಿಯೆ? ಜಗದೊಳಗೆ ಹೆಚ್ಚಿನ ಜನರ ಸೇವಿಸಲುಂ ॥

ಅರ್ಥ—"ಎಲ್ಯೆ ರಾಜನೇ, ಗಜಗಳ ಉಚ್ಚವಾಗಿಹ ಅಟನಕೆ ಮೆಚ್ಚಿ ನಾನು ಇಲ್ಲಿ ಇದ್ದೆನು. ಆ ಉಚ್ಚವಾದ ಅಟನದ ವೇಳೆಯನ್ನು ಈಗ ಉಂಟುಮಾಡಿದಿ" ಇಲ್ಲಿ "ನಿನ್ನ ದೇಶವನ್ನು ಬಿಟ್ಟು ಹೋಗುವ ಪ್ರಸಂಗವು ಬಂತು" ಎಂಬ ನಿರ್ಮವಚನವು ಉಕ್ತವಾಗಿದೆ. ಕಾರಣ ಅತರ್ಕಿತವಾದ ಅನಿಷ್ಟವು ಬಿದಗಿದಂತಾಯಿತು. ಇನ್ನು ಶ್ಲೇಷಮಹಿಮೆಯಿಂದ "ಉಚ್ಚವಾಗಿಹ ಅಟನದ" ಬಯಕೆಯಾದರೂ ನೆರವೇರಿದಂತಾಯಿತು. (ಉಚ್ಚವಾ (ಗಿಹ) ದ ಅಟನ = ಎತ್ತರದ ಮೇಲಿಂದ ಗಮನ; ದೂರ ಗಮನ).

ಯಾವ ಕಡೆಯಲ್ಲಿ ಇಷ್ಟವು ಪ್ರಾಪ್ತಿಸಿದರೂ ಶ್ಲೇಷಮಹಿಮೆಯಿಂದ ಇಲ್ಲದ ಅನಿಷ್ಟವು ಪ್ರಾಪ್ತಿಸಿದ್ದು ತೋರುವದೋ ಅಲ್ಲಿಯೂ ಈ ಅಲಂಕಾರವಾಗುವದು. ಹೇಗಂದರೆ:—

ಭಾ॥ ಅಲ್ಲಬೆಲ್ಲವು ಮೆಲ್ಲಬೇಡೆನೆ ।
ನಿಲ್ಲಿದನು ನೋಡೆನ್ನುತದನವ ।
ನೆಲ್ಲವನು ಚಲ್ಲಿದರು ತಂದೆಯ ಮಾತು ವಿಾರಿದನ್ಯೆ ॥

ಅರ್ಥ—"ಬೆಲ್ಲವು ಅಲ್ಲ ಮೆಲ್ಲ ಬೇಡ ಎನೆ, ಅದನು (ಬೆಲ್ಲವನು) ಎಲ್ಲವನು ಚಲ್ಲಿದರು ತಂದೆಯ ಮಾತು ವಿೂರಿದನು." ಇಲ್ಲಿ "ಚಲ್ಲಿದರು" ಎಂಬ ಪದದಿಂದ ತಂದೆಯ ಇಷ್ಟವು ನೆರವೇರಿದರೂ ಶ್ಲೇಷದಿಂದ "ಅಲ್ಲ ಬೆಲ್ಲವು ಮೆಲ್ಲಬೇಡ, ಅಂದರೆ ಹಸಿಸುಂಠಿಯನ್ನೂ ಬೆಲ್ಲವನ್ನೂ ತಿನಬೇಡ, ಎಂಬ ಅರ್ಥವನ್ನು ಗ್ರಹಿಸಲು ಉಕ್ತವಾಗಿರುವ ವಸ್ತುಗಳಲ್ಲಿ ಬಂದನ್ನು ಮಾತ್ರ ತಿನ್ನಲಿಕ್ಕೆ ತಂದೆಯ ಅಪ್ಪಣೆಯಾದಂತೆ ತೋರುವದು. ಹೀಗಿರಲು ಎರಡನ್ನೂ ಚಲ್ಲಿಕೊಡಲು ತಂದೆಯ ಮಾತು ವಿಾರಿದನೆಂಬ ಇಲ್ಲದ ಅನಿಷ್ಟವು ಪ್ರಾಪ್ತಿಸುವದು.

ಮೇಲಿನವು ಶ್ಲೇಷಮಹಿಮೆಯಿಂದ ಇಲ್ಲದ ಇಷ್ಟವು ನೆರವೇರಿತೆಂಬ ದಕ್ಕೆ ಉದಾಹರಣಗಳು. ಇನ್ನು ವಿದ್ಯಮಾನವಾದ ಇಷ್ಟ ಪ್ರಾಪ್ತಿಯು ಹೇಗಂದರೆ:—

ಭಾ॥ ಸುಗತಿಯನು ನಿಜವಾಗಿ ಕೊಡುವದು।
ಮಗಳೆ ಸೂರ್ಯನ ಮೊಗವ ನೋಡುತ।
ಪಗಲಿರುಳು ನೀರಲ್ಲಿ ನಿಲ್ಲುತ ಮಾಡಿರುವ ತಪವು॥
ಜಗದೆ ತವ ಪದಜನ್ಮದಲಿ ವರ।
ಸುಗತಿಯನು ಹೊಂದಿರುವದಲ್ಲವೆ?।
ಮಿಗೆ ತಪಿಸಿದೀಕಮಲವಾ ಬಿಸಿಲೊಳಗು ಮರೆಯದಲೆ॥

ಅರ್ಥ—"ಸೂರ್ಯನನ್ನು ನೋಡುತ್ತ ಹಗಲಿರುಳು ಮಾಡಿರುವ ತಪವು ಸುಗತಿಯನ್ನು ನಿಜವಾಗಿ ಕೊಡುವದು. ಯಾಕಂದರೆ ಇದರಂತೆ ತಪವನ್ನು ಮಾಡಿದ ಕಮಲವು ನಿನ್ನ ಪಾದಗಳ ಜನ್ಮಕ್ಕೆ ಬಂದು ಸುಗತಿಯನ್ನು ಹೊಂದಿಲ್ಲವೆ? ಎಂದು ಹೇಳಿದೆ. ಇಲ್ಲಿ ಕಮಲಕ್ಕೆ ಉತ್ತಮ ಲೋಕಪ್ರಾಪ್ತಿಯಾಗದೆ ಇದ್ದರೂ "ಸುಗತಿ" ಎಂಬ ಶ್ಲೇಷ ಪದದಿಂದ ಅದು ಪ್ರಾಪ್ತಿಯಾಯಿತೆಂದು ಹೇಳಲ್ಪಟ್ಟದೆ. ಇದು ವಿದ್ಯಮಾನವಾದ ಇಷ್ಟ ಪ್ರಾಪ್ತಿಯೆನಿಸುವದು. (ಸುಗತಿ = ಉತ್ತಮಲೋಕಪ್ರಾಪ್ತಿ; ಒಳ್ಳೆ ನಡಿಗೆ)

---

೪೦. ವಿಚಿತ್ರಾಲಂಕಾರವು. ಲಕ್ಷಣ:—ಫಲೇಚ್ಛೆಯ ವಿರುದ್ಧವಾಗಿ ಪ್ರಯತ್ನವು ಮಾಡಲ್ಪಟ್ಟಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂ॥ ಬಾಗುವರು ಸಂತರೆಂಬವ।
ರಾಗಿರೆ ಮೂಲೋಕಕಿಂತ ಮಹದುನ್ನತರುಂ॥

ಇಲ್ಲಿ "ಉನ್ನತಭಾವವನ್ನು ಹೊಂದಿದವರು ಬಾಗುವರು, ಎಂದರೆ ಫಲೇಚ್ಛೆಯ ವಿರುದ್ಧ ಪ್ರಯತ್ನವಾದಂತಾಯಿತು. ಮತ್ತೆ ಉದಾ:—

ಕಂದ॥ ಶತ್ರುವಿನ ನೊಗವ ಮಾಸಲು।
ಧಾತ್ರಿಯ ಬೆಳಗುವದು ನ್ಪಪನೆ ನಿಸ್ಸಯ ಜಸವು॥
ವಿಚಿತ್ರಾಲ್ಹಾದವ ಮಾಡಲು।
ಮಿತ್ರಗೆ ವೈರವನು ಬಳಿಸುತಿರುವದು ನಿರುತಂ॥

ಮೇಲಿನ ಪದ್ಯದ ಮೊದಲನೇ ವಾಕ್ಯದಲ್ಲಿ ಬೆಳಗುವ ಪ್ರಯತ್ನವು ಮಾಸುವ ಇಚ್ಛೆಗೆ ವಿರುದ್ಧವಾಗಿದೆ. ಎರಡನೇ ವಾಕ್ಯದಲ್ಲಿ "ವೈರಬಳಿಸುವ ಯತ್ನವು" "ಅಲ್ಹಾದ ಮಾಡುವ" ಇಚ್ಛೆಗೆ ವಿರುದ್ಧವಾಗಿದೆ.

(ಮಿತ್ರ = ಗೆಳೆಯ; ಸೂರ್ಯ).

೪೧. ಅಧಿಕಾಲಂಕಾರವು. ಲಕ್ಷಣ:— ವಸ್ತುವು ನಿಲ್ಲಲಿಕ್ಕೆ ಆಶ್ರಯವಾದದ್ದು ಆಧಾರವೆನಿಸುವದು. ಆಧಾರದ ಮೇಲಿರುವ ವಸ್ತುವು ಆಧೇಯವೆನಿಸುವದು. ವಿಶಾಲವಾಗಿ ಇರುವ ಆಧಾರದಿಂದ ಆಧೇಯದ ಆಧಿಕ್ಯವು ಗಮ್ಯವಾಗುವಂತೆ ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಇಡಲೊಂದು ನಿನ್ನ ಗುಣವನು ।
ಪಿಡಿಸದು ಬ್ರಹ್ಮಾಂಡವೆಲ್ಲವಡಗಿದ ಜಲದೊಳ್ ॥

ಇಲ್ಲಿ "ಬ್ರಹ್ಮಾಂಡವೆಲ್ಲವಡಗಿದ ಜಲದೊಳ್" ಎಂದು ಆಧಾರದ ವಿಸ್ತಾರತ್ವವನ್ನು ಹೇಳಿ, ಮುಂದೆ "ಒಂದು ಗುಣವನು ಇಡಲು ಪಿಡಿಸದು, ಎಂದು ಹೇಳಿದ್ದರಿಂದ ಆಧೇಯವು ಬಹಳೇ ವಿಸ್ತಾರವಾಗಿದೆ ಎಂದು ವರ್ಣಿಸಿದಂತಾಯಿತು. ಮತ್ತೆ ಉದಾ:—

ಭಾ ॥ ನೂರಾರು ಬ್ರಹ್ಮಾಂಡಗಳು ವಿ ।
ಸ್ತಾರದಿಂ ಪಸರಿಪವೊ ಯಾವನ ।
ಘೋರದೇಹದೆ ಭೂರಿಯುಗಸಂಹಾರಕಾಲದಲಿ ॥

ನಾರದಾಗಮಜನಿತಹರ್ಷದ ।
ಪಾರವದು ನೆರೆ ಪಿಡಿಸದಾಯಿತು ।
ಆರತಿಯುಪತಿಪಿತನ ಬಹಳ ವಿಶಾಲದೇಹದಲಿ ॥

ಇಲ್ಲಿ 'ನೂರಾರು ಬ್ರಹ್ಮಾಂಡಗಳು ವಿಸ್ತಾರವಾಗಿ ಪಸರಿಸಿದ ಕೃಷ್ಣನ ದೇಹವಲ್ಲಿ' ಎಂದು ಆಧಾರದ ವಿಶಾಲತ್ವವನ್ನು ಹೇಳಿ, ಮುಂದೆ 'ನಾರದಾಗಮಜನಿತ ಹರ್ಷದ ಸಮೂಹ ಪಿಡಿಸಲಿಲ್ಲ,' ಎಂದು ಹೇಳಿದ್ದರಿಂದ ಆಧೇಯಭೂತವಾದ ಹರ್ಷಸಮೂಹವು ಬಹಳೇ ವಿಶಾಲವಾಗಿದೆ ಎಂದು ವರ್ಣಿಸಿದಂತಾಯಿತು.

೨. ವಿಶಾಲವಾದ ಆಧೇಯದಿಂದ ಆಧಾರದ ಆಧಿಕ್ಯವು ಗಮ್ಯವಾಗುವಂತೆ ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಶಾಲಾಪತ್ರಿಕೆ.

ಪುಸ್ತಕ ೪೯. | ಅಕ್ಟೋಬರ ೧೯೧೩. | ಸಂಚಿಕೆ ೧೦.

ಸ್ಫುಟವಿಷಯಗಳು.

೧. ಹೇಗದ ಶಾಂತತಾಪರಿಷತ್ತು. ಎರಡು ರಾಷ್ಟ್ರಗಳ ನಡುವಿನ ಕಲಹವು ಯುದ್ಧದಿಂದ ಕೊನೆಗಾಣದೆ, ಸಾಧ್ಯವಿದ್ದ ಮಟ್ಟಿಗೆ ಆ ಕಲಹದ ವಿಚಾರವು ಬೇರೆ ಬೇರೆ ರಾಷ್ಟ್ರಗಳು ನಿಯಮಿಸಿದ ಪಂಚರ ಮುಖಾಂತರವಾಗಿ ನಿರ್ಣಯಿಸಲ್ಪಡಬೇಕು, ಎಂಬ ಸೂಚನೆಯನ್ನು ಸನ್ ೧೮೯೯ನೆಯ ಇಸವಿಯಲ್ಲಿ ರಶಿಯದ ಝಾರನು ಪ್ರಮುಖರಾಷ್ಟ್ರಗಳಿಗೆ ಮಾಡಿದನು. ಈ ಸೂಚನೆಯ ವಿಚಾರ ಮಾಡುವದಕ್ಕಾಗಿ ಸನ್ ೧೮೯೯ನೆಯ ಇಸವಿಯಲ್ಲಿ ಹಾಲಂಡ ದೇಶದೊಳಗಿನ ಹೇಗ ಪಟ್ಟಣದಲ್ಲಿ ಬಂದು ರಾಷ್ಟ್ರಗಳ ನ್ಯಾಯಕೋರ್ಟು ಸ್ಥಾಪಿಸಲ್ಪಟ್ಟಿತು. ಸಮುಂಡಲದೊಳಗಿನ ಬೇರೆ ಬೇರೆ ೪೦ ದೇಶಗಳ ಅರಸರು ಕೂಡಿ, ತಮ್ಮ ಮತಿಯಿಂದ ಕಾಯಿದೆಗಳನ್ನು ಬಲ್ಲಂಥ ೧೫೦ ಜನ ಪ್ರತಿನಿಧಿಗಳನ್ನು ಆರಿಸಿ, ಈ ಕೋರ್ಟಿಗೆ ಕಳುಹುವರು. ಹಾಗೂ ಯಾವವಾದರೂ ಎರಡು ರಾಷ್ಟ್ರಗಳ ನಡುವೆ ಬಡಿದಾಟವುಂಟಾದಾಗ ಅದನ್ನು ತೀರಿಸುವದಕ್ಕಾಗಿ ಈ ೧೫೦ ಜನರಲ್ಲಿ ಕೆಲವರನ್ನು ನ್ಯಾಯಾಧೀಶರನ್ನು ಮಾಡುವರು. ಒಳ್ಳೆಯದೆಯಲ್ಲಿ ಈ ನ್ಯಾಯಸಭೆಯ ಸಲುವಾಗಿ ಒಂದು ಭವ್ಯವಾದ ಮಂದಿರವನ್ನು ಕಟ್ಟಿಸುವದಕ್ಕಾಗಿ ಬ್ರಿಟಿಶ್ ಸಾಮ್ರಾಜ್ಯದಲ್ಲಿ ಧನವಂತರೆಂದು ಹೆಸರಾದ ಸರ್ ಆಂಡ್ರ್ಯೂ ಕಾರ್ನೇಜಿ ಎಂಬವರು ಬಹಳ ದ್ರವ್ಯವನ್ನು ಕೊಟ್ಟರು. ಈ ಮಂದಿರದ ಕೆಲಸವು ಮುಗಿದು, ಅದನ್ನು ತೆರೆಯುವ ಸಮಾರಂಭವು ಸ್ವಲ್ಪ ದಿವಸಗಳ ಹಿಂದೆ ನೆರವೇರಿಸಲ್ಪಟ್ಟಿತು. ಈ ಮಂದಿರಕ್ಕೆ ಶಾಂತತಾಪ್ರಾಸಾದವೆಂಬ ಹೆಸರು ಚಕ್ಕನ್ನಾಗಿ ಒಪ್ಪುವದು. ಈ ಸಂಸ್ಥೆಯ ಉದ್ದೇಶವು ಜಗತ್ತಿನಲ್ಲಿ ಯುದ್ಧಗಳು ಇಲ್ಲದಂತಾಗಿ, ಎಲ್ಲ ರಾಷ್ಟ್ರಗಳಲ್ಲಿ ಪರಸ್ಪರ ಸ್ನೇಹಭಾವವು ಬೆಳೆಯಬೇಕೆಂಬದೇ ಇರುವದು. ಈ ಉದ್ದೇ

ತವು ಸ್ತುತ್ಯವಾದದ್ದೆಂಬದನ್ನು ಹೇಳಬೇಕಾಗಿಲ್ಲ. ಆದರೆ ಭೂಮಂಡಲದೊಳಗಿನ ರಾಷ್ಟ್ರಗಳ ಮನಸ್ಸಿನಲ್ಲಿ ಪರಸ್ಪರರ ಅಂತಸ್ಥ ಉದ್ದೇಶಗಳ ವಿಷಯವಾಗಿ ಸಂಶಯವಿರುವದು; ಹಾಗೂ ಸಂಪತ್ತು, ವೈಭವ, ಸಾಮರ್ಥ್ಯ ಮುಂತಾದವುಗಳಲ್ಲಿ ತಮ್ಮ ರಾಷ್ಟ್ರವು ಮಿಗಿಲಾಗಿ, ಯಾವತ್ತು ರಾಷ್ಟ್ರಗಳಲ್ಲಿ ತಮ್ಮ ರಾಷ್ಟ್ರಕ್ಕೇ ಅಗ್ರಸ್ಥಾನವು ದೊರೆಯಬೇಕೆಂಬ ಅಕಾಂಕ್ಷೆಯು ಪ್ರಮುಖ ರಾಷ್ಟ್ರಗಳಲ್ಲಿರುವದು. ಯಾವದೊಂದು ರಾಷ್ಟ್ರವು ತಮಗಿಂತಲೂ ಪ್ರಬಲವೂ ವೈಭವಸಂಪನ್ನವೂ ಆದದ್ದನ್ನು ನೋಡಿ, ತಾವೂ ಅದನ್ನು ಸರಿಗಟ್ಟಬೇಕೆಂಬ ಮಹತ್ವಾಪೇಕ್ಷೆಯು ಉಳಿದ ರಾಷ್ಟ್ರಗಳಲ್ಲಿ ಕಂಡುಬರುವದು. ಬೇರೊಂದು ರಾಷ್ಟ್ರದ ಯುದ್ಧಸಾಮರ್ಥ್ಯವು ತಮ್ಮ ಸಾಮರ್ಥ್ಯಕ್ಕಿಂತ ಬೆಳೆದರೆ, ಅದು ತಮ್ಮ ಪ್ರತಿಸ್ಪರ್ಧಿಯಾಗಬಹುದೆಂದು, ತಮ್ಮ ಸಾಮರ್ಥ್ಯವನ್ನು ಮತ್ತಿಷ್ಟು ಬೆಳಿಸಬೇಕೆಂದು ಪ್ರತಿಯೊಂದು ಪ್ರಮುಖರಾಷ್ಟ್ರವೂ ಹವಣಿಸುವದು. ಹೀಗಿದ್ದ ಮೇಲೆ, ಶಾಂತತಾಸಂರಕ್ಷಣೆಯ ಕಾರ್ಯದಲ್ಲಿ ಜಗತ್ತಿನೊಳಗಿನ ಪ್ರಮುಖ ರಾಷ್ಟ್ರಗಳು ನಿಜವಾಗಿ ವಿಕಾಭಿಪ್ರಾಯವುಳ್ಳವುಗಳಾಗುವದೂ ಒಬ್ಬರಿಗೊಬ್ಬರು ಸಹಕಾರಿಗಳಾಗುವದೂ ತಾತ್ವಿಕದೃಷ್ಟಿಯಿಂದ ಅವಶ್ಯವಿದ್ದರೂ ಪ್ರತ್ಯಕ್ಷವ್ಯವಹಾರದಲ್ಲಿ ಈ ಉದ್ದೇಶಕ್ಕೆ ಮೂರ್ತಸ್ವರೂಪವುಂಟಾಗುವದು ಸುಲಭಸಾಧ್ಯವಲ್ಲ. ಆದರೂ ಜಗತ್ತಿನಲ್ಲಿ ಶಾಂತತೆಯು ನೆಲೆಗೊಳ್ಳಬೇಕು; ರಾಷ್ಟ್ರ ರಾಷ್ಟ್ರಗಳ ನಡುವಿನ ಯುದ್ಧದ ಪ್ರಸಂಗವನ್ನು ಆದಷ್ಟು ದೂರ ಮಾಡಬೇಕು, ಎಂಬ ಉದ್ದೇಶದಿಂದ ಸರ್ ಆಂಡ್ರ್ಯೂ ಕಾರ್ನೇಜೀಯವರಂಥ ಉದಾರಧೀಗಳಾದ ಪುರುಷರು ಮಾಡುವ ಪ್ರಯತ್ನಗಳು ಆ ಉದ್ದೇಶಗಳನ್ನು ಕೊನೆಗಾಣಿಸಲಿಬಹಳವಿಲ್ಲದಿದ್ದರೆ ಸ್ವಲ್ಪಾದರೂ ಉಪಯೋಗವಾಗಬಹುದಾದ ಕಾರ್ಯಸ್ತುತ್ಯವಾದವುಗಳಾಗಿರುವವು.

---

೨. ಪಾನಾಮಾ ಕಾಲುವೆ.

ಉತ್ತರ ದಕ್ಷಿಣಅಮೇರಿಕೆಗಳನ್ನು ಕೂಡಿಸುವ ಪಾನಾಮಾ ಸಂಯೋಗಭೂಮಿಯನ್ನು ಕಡಿದು ಅಂಟ್ಲಾಂಟಿಕ ಪಾಸಿಫಿಕ್ ಮಹಾಸಾಗರಗಳನ್ನು ಒಂದಕ್ಕೊಂದು ಕೂಡಿಸುವ ಕಾಲುವೆಯ ಕೆಲಸದ ಇತಿಹಾಸವನ್ನು ಕಳೆದ ಜೂನ ತಿಂಗಳ ಶಾಲಾ ಪತ್ರಕದಲ್ಲಿ ಕೊಟ್ಟಿದ್ದೇವಷ್ಟೇ. ಈ ಪಾನಾಮಾ

ಕಾಲುವೆಯೊಳಗಿಂದ ಈಗ ಹಡಗಗಳು ಹೋಗಬರಲಾರಂಭಿಸಿವೆ. ಹಿಂದೆ ಹೇಳಿದ ಮೇರೆಗೆ ಈ ಕಾಲುವೆಯ ಕೆಲಸವು ೧೯೦೪ರಲ್ಲಿ ಪ್ರಾರಂಭವಾಯಿತು. ಯುನಾಯಿಟೆಡ್ ಸ್ಟೇಟ್ಸ ಸರಕಾರವು ಕೈಕೊಂಡ ಈ ಕಾಲುವೆಯ ಕೆಲಸವು ಕೊನೆಗಾಣುವ ಪೂರ್ವದಲ್ಲಿ ಅನೇಕ ವಿಘ್ನಗಳು ಒದಗಿದವು. ಆದರೂ ದೀರ್ಘೋದ್ಯೋಗ, ಧೈರ್ಯ ಶಾಸ್ತ್ರೀಯ ಜ್ಞಾನದ ಬೆಂಬಲ, ಬೇಕಾದಷ್ಟು ಹಣದ ಅನುಕೂಲತೆ, ಇವುಗಳ ಸಹಾಯದಿಂದ ಅಮೇರಿಕನ್ನರು ಈ ಕೆಲಸವನ್ನು ಕೊನೆಗಾಣಿಸಿದರು. ಈ ಕಾಲುವೆಯ ಯೋಗದಿಂದ ಬೇರೆ ಬೇರೆ ರಾಷ್ಟ್ರಗಳ ರಾಜಕೀಯ ಹಾಗು ವ್ಯಾಪಾರವಿಷಯಕ ಸ್ಥಿತಿಗಳಲ್ಲಿ ಮಹತ್ವದ ಪರಿಣಾಮಗಳಾಗಬಹುದೆಂದು ತೋರುತ್ತದೆ. ರೂಸೋ-ಜಪಾನೀ ಯುದ್ಧದಲ್ಲಿ, ನೀರ ಮೇಲಿನ ಯೆದ್ದದಲ್ಲಿ ಜಪಾನೀಯರು ಜಯಶಾಲಿಗಳಾಗಿ ನೌಕಾಬಲವುಳ್ಳವರೆಂದು ಹೆಸರಾವರಷ್ಟೆ. ಆಗ ಯುನಾಯಿಟೆಡ್ ಸ್ಟೇಟ್ಸ ಸರಕಾರದವರಿಗೆ, ತಮ್ಮ ವಶದಲ್ಲಿರುವ ಫಿಲಿಪ್ಪೈನ ದ್ವೀಪವನ್ನೂ ಪಾಸಿಫಿಕ್ ಮಹಾಸಾಗರದ ಕಡೆಗೆ ಇರುವ ತಮ್ಮ ರಾಜ್ಯಕ್ಕೊಳಗಾದ ಭಾಗವನ್ನೂ ಸಂರಕ್ಷಿಸಿಕೊಳ್ಳುವದಕ್ಕೆ ಅಟ್‌ಲಾಂಟಿಕ್ ಮಹಾಸಾಗರದಲ್ಲಿದ್ದ ತಮ್ಮ ಹಡಗುಪಡೆಯನ್ನು ಒಮ್ಮಿಂದೊಮ್ಮೆ ಪಾಸಿಫಿಕ್ ಮಹಾಸಾಗರಕ್ಕೆ ತರಲಿಕ್ಕೆ ಬರುವ ಅನುಕೂಲತೆಯನ್ನು ಮಾಡಿಕೊಳ್ಳುವದು ಅವಶ್ಯವಿರುವದೆಂದು ಕಂಡು ಬಂತು. ಅದರಿಂದ ಅವರು ಪಾನಾಮಾ ಸಂಯೋಗ ಭೂಮಿಯನ್ನು ಕಡಿದು ಕಾಲುವೆಯನ್ನು ತೀವ್ರ ಮಾಡಬೇಕೆಂದು ನಿರ್ಣಯಿಸಿದರು. ಈಗ ಕಾಲುವೆಯು ಸಿದ್ಧವಾಗಿರುವದು. ಆದ್ದರಿಂದ ಯುನಾಯಿಟೆಡ್ ಸ್ಟೇಟ್ಸದವರು ಅವಶ್ಯವಿದ್ದಕೂಡಲೆ ಅಟ್‌ಲಾಂಟಿಕ್ ಮಹಾಸಾಗರದೊಳಗಿನ ತಮ್ಮ ಸೈನ್ಯವನ್ನು ಒಮ್ಮಿಂದೊಮ್ಮೆ ಪಾಸಿಫಿಕ್ ಮಹಾಸಾಗರಕ್ಕೆ ತರಲಿಕ್ಕೆ ಅನುಕೂಲವಾಗಿರುವದು. ಈ ಕಾಲುವೆಯಿಂದ ಯುನಾಯಿಟೆಡ್ ಸ್ಟೇಟ್ಸದವರಿಗೆ ಪಾಸಿಫಿಕ್ ಮಹಾಸಾಗರದಲ್ಲಿ ತಮ್ಮ ಹಡಗುಪಡೆಯ ವರ್ಚಸ್ಸನ್ನು ಬೆಳೆಸಲಿಕ್ಕೆ ಅನುಕೂಲವುಂಟಾಗಿರುವದರಿಂದ ಜಪಾನ ದೇಶವು ತನ್ನ ನೌಕಾಬಲವನ್ನು ಬೆಳೆಸಬೇಕಾಗಬಹುದೆಂದು ತೋರುತ್ತದೆ. ಮೊದಲು ನ್ಯೂಯಾರ್ಕದಿಂದ ಸ್ಯಾನ್ ಫ್ರಾನ್ಸಿಸ್ಕೋಕ್ಕೆ ಹಡಗದ ಮಾರ್ಗವಾಗಿ ಹೋಗಬೇಕಾದರೆ ಹಾರ್ನ ಭೂಶಿರವನ್ನು ಸುತ್ತಿಕೊಂಡು ಹೋಗ ಬೇಕಾಗುತ್ತಿತ್ತು. ಆದರೆ ಈಗ ಪಾನಾಮಾ ಕಾಲುವೆಯು

ಮಾರ್ಗವು ಸಿದ್ಧವಾಗಿರುವದರಿಂದ, ಇಂಥ ಹಡಗುಗಳಿಗೆ ೧೦,೦೦೦ ಮೈಲು ಪ್ರವಾಸವು ಕಡಿಮೆಯಾದಂತಾಗುವದು. ಲಂಡನ್ನಿನಿಂದ ಜಲಮಾರ್ಗವಾಗಿ ಸ್ಯಾನ್ ಫ್ರಾನ್ಸಿಸ್ಕೋಕ್ಕೆ ಹೋಗುವಾಗ, ಕೇಪ್ ಹಾರ್ನವನ್ನು ಸುತ್ತುರಿದು ಹೋಗುವ ಅವಶ್ಯಕತೆಯು ಉಳಿಯಲಿಲ್ಲ. ಅದರಿಂದ ಲಂಡನ್ ಸ್ಯಾನ್ ಫ್ರಾನ್ಸಿಸ್ಕೋಗಳ ನಡುವಿನ ಜಲಮಾರ್ಗದ ಅಂತರವು ಸದ್ಯಕ್ಕಿಂತ ೬೦೦ ಮೈಲು ಕಡಿಮೆಯಾದಂತಾಗುವದು. ಅದರಂತೆ, ನ್ಯೂಯಾರ್ಕ, ಸಿಡ್ನಿ ಇವುಗಳ ನಡುವಿನ ಅಂತರವು ೪೦೦೦ ಮೈಲುಗಳಿಂದ ಕಡಿಮೆಯಾಗಿರುವದು. ವ್ಯಾಪಾರದ ಹಡಗಗಳಿಗೆ ಪಾನಾಮಾ ಕಾಲುವೆಯು ಮಾರ್ಗವನ್ನು ಕೊಟ್ಟರೆ, ಅಮೇರಿಕಾ ಮತ್ತು ಪೂರ್ವ ಏಶಿಯಾ ಇವುಗಳ ನಡುವಿನ ವ್ಯಾಪಾರವು ಬೆಳೆಯು ಬಹುದು. ಜಪಾನದೊಳಗಿನ ಅರಿವೆಯ ಗಿರಣಿಯವರು ಅಮೇರಿಕದೊಳಗಿನ ಉದ್ದಿಳೆಯ ಹತ್ತಿಯನ್ನು ಕಡಿಮೆ ಖರ್ಚಿನಿಂದ ದೊರಕಿಸಲಿಕ್ಕೆ ಬರುವದು. ಅದರಿಂದ ಜಪಾನ ಸರಕಾರವು ತಮ್ಮ ದೇಶದ ಔದ್ಯೋಗಿಕ ಪ್ರಗತಿಗೆ ಅನುಕೂಲವನ್ನೂ ಉತ್ತೇಜನವನ್ನೂ ಕೊಡುವದರ ಕಡೆಗೆ ಸ್ವಭಾವತಃ ವಿಶೇಷ ಲಕ್ಷ್ಯಗೊಡುತ್ತಿರುವದು. ಇಂಥ ಸ್ಥಿತಿಯಲ್ಲಿ ಆ ದೇಶದ ಗಿರಣಿಗಳಿಗೆ ಅಮೇರಿಕನ್ ಹತ್ತಿಯು ಕಡಿಮೆ ಖರ್ಚಿನಿಂದ ದೊರೆಯಹತ್ತಿತೆಂದರೆ, ಹಿಂದುಸ್ತಾನದ ಗಿರಣಿಗಳ ಚೀನೀ ಗಿರಾಕಿಗಳನ್ನು ತಮ್ಮ ಕಡೆಗೆ ಎಳಕೊಳ್ಳಲಿಕ್ಕೆ ಅವರಿಗೆ ಮತ್ತಷ್ಟು ಅನುಕೂಲ ದೊರೆದಂತಾಗುವದು. ದಕ್ಷಿಣ ಅಮೇರಿಕದ ಪಶ್ಚಿಮ ದಂಡೆಯಲ್ಲಿ ಕಲ್ಲಿದ್ದಲಿನ ಖಣಿಗಳಿರುವವು. ಆ ಖಣಿಯ ಕೆಲಸವು ಪಾನಾಮಾ ಕಾಲುವೆಯ ಸಹಾಯದ ಮೂಲಕವಾಗಿ ಅಭಿವೃದ್ಧಿಯನ್ನು ಹೊಂದ ಬಹುದೆಂದು ತೋರುತ್ತದೆ. ಉತ್ತರ ಅಮೇರಿಕದಿಂದ ಪ್ರತಿವರ್ಷ ಲಕ್ಷಾಂತರ ಕ್ವಾರ್ಟರ್ ಗೋದಿಯು ಇಂಗ್ಲಂಡ-ಯುರೋಪಗಳಿಗೆ ಹೋಗುವದು. ಈ ಗೋದಿಯ ವ್ಯಾಪಾರವು ಆರೇಗಾನ್ ಸಂಸ್ಥಾನದೊಳಗಿನ ಪೋರ್ಟಲಂಡ್ ಬಂದರ ಮಾರ್ಗವಾಗಿ ನಡೆಯುವದು. ಅಲ್ಲಿಂದ ಕೇಪ್ ಹಾರ್ನದ ಮಾರ್ಗವಾಗಿ ಯುರೋಪಕ್ಕೆ ಹೋಗುವದು. ಆದರೆ ಪಾನಾಮಾ ಕಾಲುವೆಯ ಮಾರ್ಗ ತೆರೆಯಲ್ಪಟ್ಟರೆ ಇಷ್ಟೊಂದು ಸುತ್ತಿನ ಪಾದಿಯನ್ನು ಸುತ್ತುರಿಯುವ ಅವಶ್ಯಕತೆಯು ಉಳಿಯುವದಿಲ್ಲ. ಪಾನಾಮಾ ಕಾಲುವೆಯನ್ನು, ಯುದ್ಧದ ನಾಗಗಳಿಗೂ ವ್ಯಾಪಾರದ ಹಡಗುಗಳಿಗೂ ಯಾವ ತರದ ಭೇದಭಾವವನ್ನು

ಣಿಸದೆ ಯಾವತ್ತೂ ಹಡಗಗಳಿಗೆ ಮುಕ್ತದ್ವಾರವಾಗಿಡಬೇಕೆಂದು ಯುನಾ
ಯಿಟೆಡ್ ಸ್ಟೇಟ್ಸ ಸರಕಾರದವರ ವಿಚಾರವಿರುವದು.

ಇ. ಸ. ೧೮೬೯ನೇ ವರ್ಷದಲ್ಲಿ ಸುಯೇಜದ ಕಾಲುವೆಯು ಸಿದ್ಧವಾ
ಯಿತು. ಅಂದಿನಿಂದ ಯುರೋಪ-ಏಶಿಯಾಗಳ ನಡುವಿನ ವ್ಯಾಪಾರ-
ವ್ಯವಹಾರವು ಬೆಳೆಯುತ್ತ ನಡೆದಿರುವದು. ಹಾಗು ಸುಯೇಜ ಕಾಲು
ವೆಯ ಕಂಪನಿಗೆ ಆ ಕಾಲುವೆಯೊಳಗಿಂದ ಬರ ಹೋಗುವ ಹಡಗುಗ
ಳಿಂದ ಒಳ್ಳೇ ಲಾಭವಾಗಹತ್ತಿರುವದು. ಇ. ಸ. ೧೯೦೪ರಲ್ಲಿ ಸುಯೇಜ
ಕೆನಾಲ್ ಕಂಪನಿಯವರಿಗೆ ೪೪,೫೯,೦೦೦ ಪೌಂಡು ಉತ್ಪನ್ನವಾಗಿತ್ತು;
೧೯೧೯ರಲ್ಲಿ ೫೫,೨೨,೦೦೦ ಪೌಂಡು ಆಯಿತು. ಈನಾವಾ ಕಾಲುವೆ
ಯಿಂದ ಯುನಾಯಿಟೆಡ್ ಸ್ಟೇಟ್ಸದವರಿಗೆ ಹಡಗುಪಡೆಯ ಸಂಚಾರಕ್ಕೆ
ವಿಶೇಷ ಅನುಕೂಲವಾಯಿತೆಂಬದಂತೂ ನಿಶ್ಚಯವೇ. ಆದರೆ, ಸುಯೇಜ
ಕಾಲುವೆಯಿಂದ ವ್ಯಾಪಾರ ವ್ಯವಹಾರಕ್ಕೆ ಅನುಕೂಲವಾದಂತೆ ಇದರಿಂದ
ಯೂ ಆಗಬಹುದು, ಮತ್ತು ಈ ಕಾಲುವೆಯ ಮಾರ್ಗವಾಗಿ ಬರ
ಹೋಗುವ ವ್ಯಾಪಾರದ ಹಡಗುಗಳ ಸಂಖ್ಯೆಯಾದರೂ ಬೆಳೆಯುತ್ತ
ಹೋಗಬಹುದು, ಎಂದು ಸುಯೇಜ ಕಾಲುವೆಯಿಂದ ಗೊತ್ತಾದ ಅನು
ಭವದ ಮೇಲಿಂದ ತರ್ಕಿಸಬಹುದಾಗಿದೆ.

---

೩. ಬಿಕ್ಕೋಡಿಶಾಲೆ ಒಬ್ಬ ವಿದ್ಯಾರ್ಥಿ ಹೊಗಳತಕ್ಕಂಥ ಕೃತಿ.

ಬೆಳಗಾವ ಜಿಲ್ಲಾ ಚಿಕ್ಕೋಡಿ ಗಂಡು ಹುಡುಗರ ಇನೇ ನಂಬರ ಶಾಲೆಯೊಳಗಿನ ೨ನೇ ಇಯತ್ತೆಯ ೭ ವರ್ಷ ವಯಸ್ಸಿನ ವಿದ್ಯಾರ್ಥಿಯಾದ ಗೋಪಾಳ ರಾಮಜಿ ಚವ್ಹಾಣ ಎಂಬವನಿಗೆ ಸ್ವಲ್ಪ ದಿವಸದ ಹಿಂದೆ ಹಾದಿಯಲ್ಲಿ ೫೦ದು ಪವನ (ತೊಲ) ಸಿಕ್ಕಿತು. ಅವನು ಅದನ್ನು ತಕ್ಕೊಂಡು ಹಾಗೇ ನೆಟ್ಟಗೆ ತನ್ನ ಶಾಲೆಯ ಹೆಡಮಾಸ್ತರರ ಕಡೆಗೆ ಹೋಗಿ ಅದನ್ನು ಅವರ ಕೈಯ ಕೊಟ್ಟನು. ಹೆಡಮಾಸ್ತರರು ಅದನ್ನು ಮಾಮಲೇದಾರರ ಕಡೆಗೆ ಕಳಿಸಿದರು. ಹುಡುಗರ ಇಂಥ ನಡತೆಯು ಸ್ತುತಿಗೆ ಪಾತ್ರವಿರುತ್ತದೆ.

ಸಮುದ್ರ ಸಪಾಟಿಯಿಂದ ಊರುಗಳ ಎತ್ತರಗಳು.

ವಿಜಾಪೂರ ಜಿಲ್ಲೆ.

೧. ಬಾದಾಮಿ ತಾಲೂಕು.

೧. ಬದಾಮಿ	೧೯೩೧ ಫೂ.	೧೩. ಕೆಲವಡಿ	೧೯೦೨ ಫೂ.
(ಗುಡ್ಡ)	(೨೩೦೦) ,,	೧೪. ಕೆರಕಲಮಟ್ಟಿ	೧೯೦೪ ,,
೨. ಅನೆವಾಲ	೨೦೭೭ ,,	೧೯. ಕೆರೂರ	೨೦೫೩ ,,
೩. ಬಟಕುರಿಕಿ	೨೧೩೧ ,,	೨೦. ಖ್ಯಾಡ	೧೪೬೭ ,,
೪. ಬೇಲೂರ	೧೪೩೫ ,,	೨೧. ಕುಟಕನಕೇರಿ	೧೪೯೦ ,,
(ಗುಡ್ಡ)	(೨೨೩೫) ,,	೨೨. ಲಾಯದಗುಂಡಿ	೧೯೩೫ ,,
೫. ಚೊಳಚಗೊಡ	೧೪೪೬ ,,	೨೩. ಮುದಕವಿ	೧೯೬೭ ,,
೬. ಗೋವನಕೊಪ್ಪ	೧೪೬೫ ,,	೨೪. ಮುತ್ತಲಗೇರಿ	೧೪೬೪ ,,
೭. ಹಂಗರಿಗಿ	೧೯೩೩ ,,	೨೫. ನಂದಿಕೇಶ್ವರ	೧೭೪೦ ,,
೮. ಹೆಬ್ಬಳ್ಳಿ	೧೭೨೬ ,,	೨೬. ನೀಲಗುಂದ	೧೯೪೪ ,,
೯. ಹೇಲೂರ	೧೯೩೪ ,,	೨೭. ನೀರಲಕೇರಿ	೨೦೦೪ ,,
೧೦. ಹೊಸೂರ	೧೪೬೭ ,,	೨೪. ನೀರಬೂದಿಹಾಳ	೧೪೩೦ ,,
೧೧. ಹುಲಗೇರಿ	೧೪೭೨ ,,	೨೯. ಪಟ್ಟದಕಲ್ಲು	೧೬೮೪ ,,
೧೨. ಜಾಲೀಹಾಳ	೧೭೭೨ ,,	೩೦. ಉಗಲವಾಟ	೨೦೬೪ ,,
೧೩. ಕಾಡನಕೊಪ್ಪ	೧೯೫೪ ,,	೩೧. ಎಂಡಿಗೇರಿ	೧೭೪೦ ,,
೧೪. ಕಗಲಗೊಂಬ	೧೯೯೧ ,,	೩೨. ಯಂಕಂಚಿಮಣ ನಾಗರ	೧೯೭೭ ,,
೧೫. ಕಾಕನೂರ	೧೪೬೯ ,,	೩೩. ಗುಳೇದಗುಡ್ಡ (ಗುಡ್ಡ)	೧೭೪೫ ,, (೨೨೭೬) ,,
೧೬. ಕಟಗೇರಿ	೧೯೯೪ ,,		

೨. ಬಾಗಲಕೋಟ ತಾಲೂಕ.

೧. ಬಾಗಲಕೋಟ	೧೬೭೩ ಫೂ.	೫. ಬಾದರದಿನ್ನಿ	೧೭೪೪ ಫೂ.
೨. ಅನಗವಾಡಿ	೧೭೦೫ ,,	೬. ಬೆನಕಟ್ಟಿ	೧೪೭೧ ,,
೩. ಅರಕೇರಿ	೧೭೫೩ ,,	೭. ಬೆಣ್ಣೂರ	೧೬೯೯ ,,
೪. ಬಾಡಗಿ	೧೭೬೬ ,,	೮. ಬೇವೂರ	೧೯೩೧ ,,

ಭಗವತಿ	೧೭೦೫ ಫೂ.	೨೫. ಮನ್ನಿಕೇರಿ	೧೭೫೦ ಫೂ.
ಬೀಳಗಿ	೧೮೪೩ ,,	೨೬. ಮುರನಾಳ	೧೭೧೪ ,,
ಗುಡ್ಡ	೨೧೪೬ ,,	೨೭. ನಾಗರಾಳ.	೧೭೭೪ ,,
ಚಿಕ್ಕಸೆಲ್ಲಿಕೇರಿ	೧೭೬೨ ,,	೨೮. ಸೀಮಿಕೇರಿ	೧೭೪೪ ,,
ಚಿಕ್ಕಆಲಗುಂಡಿ	೧೭೪೪ ,,	೨೯. ಶಿರೂರ	೧೯೭೯ ,,
ಗಲಗಲಿ	೧೭೧೪ ,,	೩೦. ಸಿದ್ದಾಪುರ	೧೭೭೬ ,,
ಗಿರಿಸಾಗರ	೧೪೦೩ ,,	೩೧ ಸೊನ್ನ	೧೭೧೪ ,,
ಹಳ್ಳೂರ	೧೪೦೪ ,,	೩೨. ಸೋರಕೊಪ್ಪ	೧೭೩೯ ,,
ಹಂಚಿನಹಾಳ	೧೭೨೩ ,,	ಗುಡ್ಡ	(೨೨೦೭) ,,
ಹೆರಕಲ್ಲ	೧೭೦೦ ,,	೩೩. ಸುನಗ	೧೭೬೩ ,,
(ಗುಡ್ಡ)	(೨೦೪೯) ,,	೩೪. ಟಕ್ಕಳಿಕಿ	೧೬೪೪ ,,
ಜಾನಮಟ್ಟಿ	೧೪೪೯ ,,	೩೫. ತೆಗ್ಗಿ	೧೪೨೪ ,,
ಕಲಾದಗಿ	೧೭೭೦ ,,	೩೬. ತೋಳಮಟ್ಟಿ	೧೭೭೨ ,,
ಖಜ್ಜಿಡೋಣಿ	೧೪೫೪ ,,	೩೭. ತುಂಬರಮಟ್ಟಿ	೧೪೧೦ ,,
ಕಿರಸೂರ	೧೭೦೦ ,,	೩೪. ಎಡಹಳ್ಳಿ	೧೭೨೪ ,,
(ಗುಡ್ಡ)	೨೧೪೨ ,,	೩೯. ಕಾತರಕಿ	೧೭೭೫ ,,
ಕೋಳೂರ	೧೭೩೫ ,,	೪೦. ತುಬೆನಕೇರಿ	೧೬೬೬ ,,
ಕೊರ್ತಿ	೧೬೭೭ ,,	೪೧. ತಮನಾಳ	೧೬೫೬ ,,
ಕುಂದರಗಿ	೧೭೭೨ ,,	೪೨. ಕೋಳೀಕೇರಿ	೧೭೬೨ ,,
(ಗುಡ್ಡ)	(೧೯೧೬) ,,		

---

೩. ಬಾಗೇವಾಡಿ ತಾಲೂಕ.

ಬಾಗೇವಾಡಿ	೨೦೪೪ ಫೂ.	೮. ಡೋಣೂರ	೧೪೧೫ ಫೂ.
ಬಮ್ಮನಹಳ್ಳಿ	೧೭೫೬ ,,	೯. ಗಣಿ	೧೬೭೦ ,,
ಬಳೂತಿ	೧೬೭೪ ,,	೧೦. ಗೊಳಸಂಗಿ	೧೪೫೧ ,,
ಭೈರವಾಡಿಗಿ	೧೭೭೯ ,,	೧೧. ಹಂಗರಗಿ	೧೯೫೦ ,,
ಬ್ಯಾಕೋಡ	೧೯೨೫ ,,	೧೨. ಹೆತ್ತರಕಿಹಾಳ	೧೪೮೬ ,,
ಚಿಮ್ಮಲಗಿ	೧೬೭೪ ,,	೧೩. ಬೆಬ್ಬಾಳ	೧೭೫೯ ,,
ದಿಂಡವಾರ	೧೯೫೪ ,,	೧೪. ಹಿರೇಪಡಸಂಗಿ	೧೪೨೪ ,,

೧೫. ಹೊವಿನ ಹಿಪ್ಪರಿಗಿ	೧೯೯೫ ಫ್ರೂ.	೨೯. ನಿಡಗುಂದಿ	೧೬೪೧ ಫ್ರೂ.
೧೬. ಹುಣಸೀಹಾಳ	೨೦೧೦ ,,	(ಗುಡ್ಡ	೧೪೮೯) ,,
೧೭. ಇಂಗಳೇಶ್ವರ	೨೧೦೪ ,,	೩೦. ರಬಿನಾಳ	೧೯೩೪ ,,
೧೪. ಇಟ್ಟಿಗಿ	೧೪೬೬ ,,	೩೧. ರೋಣೀಹಾಳ	೧೯೦೬ ,,
೧೯. ಕೊಲ್ಹಾರ	೧೬೪೫ ,,	೩೨. ಸಾಲವಾಡಗಿ	೧೯೧೪ ,,
೨೦. ಕೂಡಿಗಿ	೧೬೪೫ ,,	೩೩. ಸಾತೀಹಾಳ	೧೬೪೬ ,,
೨೧. ಮನಗೋಳಿ	೧೬೫೬ ,,	೩೪. ಸಾಸನೂರ	೧೬೨೩ ,,
೨೨. ಮಣ್ಣೂರ	೧೬೬೯ ,,	೩೫. ತೆಲಗಿ	೧೯೦೫ ,,
೨೩. ಮಾರಕಬ್ಬನಹಳ್ಳಿ	೧೬೫೬ ,,	೩೬. ಉಕ್ಕಲಿ	೧೪೯೬ ,,
೨೪. ಮುಸಬಿನಹಾಳ	೧೯೫೦ ,,	೩೭. ಒಡಬಿಡಕಿ	೧೪೭೧ ,,
೨೫. ಮುಳವಾಡ	೧೬೪೯ ,,	೩೮. ಒಂದಾಲ	೧೬೫೦ ,,
೨೬. ಮೆಸೂತಿ	೧೬೩೬ ,,	೩೯. ಯಾಳವಾರ	೧೬೪೯ ,,
೨೭. ಮುತ್ತಿಗಿ	೧೪೬೪ ,,	೪೦. ಯರನಾಳ	೧೬೬೫ ,,
೨೮. ನಂಬಿಹಾಳ	೧೯೯೬ ,,		

೪. ವಿಜಾಪೂರ ತಾಲೂಕ.

೧. ವಿಜಾಪೂರ	೧೯೬೬ ಫ್ರೂ	೧೫. ಹಲಗಣಿ	೧೬೬೪ ಫ್ರೂ.
೨. ಅಂಕಲಗಿ	೧೬೧೫ ,,	೧೪. ಹಿಟ್ಟಿನಹಳ್ಳಿ	೧೯೪೯ ,,
೩. ಅರ್ಜುನಗಿ	೧೪೫೬ ,,	೧೫. ಹೊನಗನಹಳ್ಳಿ	೧೪೫೬ ,,
೪. ಅರಕೇರಿ	೧೯೧೬ ,,	೧೬. ಹೊನವಾಡ	೧೯೪೬ ,,
೫. ಬಾಬಾನಗರ	೨೦೪೬ ,,	೧೭. ಹೊನವಾಡ	೨೦೫೬ ,,
೬. ಬಬಲಾದ	೧೪೪೬ ,,	೧೪. ಜೈನಾಪುರ	೧೬೪೬ ,,
೭. ಬಬಲೇಶ್ವರ	೧೬೬೫ ,,	೧೯. ಜಂಬಿಗಿ	೧೬೫೫ ,,
೮. ಬೆಳ್ಳುಬ್ಬಿ	೧೪೪೪ ,,	೨೦. ಜಮನಾಳ	೨೦೧೪ ,,
೯. ಬಿಜ್ಜರಗಿ	೨೧೬೧ ,,	೨೧. ಕಾಖಂಡಿಕಿ	೧೪೬೫ ,,
೧೦. ದರ್ಗಾ	೧೯೪೦ ,,	೨೨. ಕಮತಿಗಿ	೧೪೨೫ ,,
೧೧. ದನ್ಯಾಳ	೨೦೫೪ ,,	೨೩. ಕನಮಡಿ	೨೧೧೨ ,,
೧೨. ದೇವರಗೆಣ್ಣೂರ	೧೪೬೫ ,,	೨೪. ಕಣಮುಚನಾಳ	೧೪೬೪ ,,

ಈ ವಿಷಯವನ್ನು ಕುರಿತು ವಿಲಾಯತಿಯಲ್ಲಿ ಬಾಬೂ ರವೀಂದ್ರ ನಾಥ ಟಾಗೋರ ಎಂಬ ಬಂಗಾಲೀ ಪಂಡಿತರೊಬ್ಬರು ಒಂದು ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸಕ್ಕೆ ದೊಡ್ಡ ದೊಡ್ಡ ಗ್ರಂಥಕಾರರೂ, ನಾಮಾಂಕಿತರಾದ ಸಭ್ಯಸ್ತ್ರೀಪುರುಷರೂ ಬಂದಿದ್ದರು. ಅದರ ಸಾರಾಂಶವನ್ನು ಇದರಡಿಯಲ್ಲಿ ಕೊಡುತ್ತೇವೆ:—

"ಯುರೋಪಖಂಡದೊಳಗಿನ ದೊಡ್ಡ ದೊಡ್ಡ ನಗರಗಳ ಪರಿಸ್ಥಿಯನ್ನು ನೋಡಿದರೆ, ಹಿಂದೂ ಜನರ ಸಂಸ್ಕೃತಿಗೂ ಪಾಶ್ಚಾತ್ಯರ ಸಂಸ್ಕೃತಿಗೂ ಮಹದಂತರವುಂಟೆಂಬದು ತೋರದೆ ಇರದು. ಭಾರತೀಯರ ಸಂಸ್ಕೃತಿಯು ಅರಣ್ಯದಲ್ಲುದಯವಾಯಿತು; ಪಾಶ್ಚಾತ್ಯರ ಸಂಸ್ಕೃತಿಯು ಬಲವಾದ ಭಿತ್ತಿಯಿಂದ ಭದ್ರವಾಗಿರುವ ಕೋಟೆಯ ಮಧ್ಯದಲ್ಲಿ ಜನ್ಮ ತಾಳಿತು. "ಎಲೈ ಮಾನವಾ, ನಿನಗೆ ಪ್ರತಿಬಂಧವಾಗಿರುವ ಗೋಡೆಯ ಕಲ್ಲುಗಳನ್ನು ಕಿತ್ತಿ ಬಿಗೆದು, ಅಧಿಕಾರ ನಡಿಸು" ಎಂಬದೇ ಪಾಶ್ಚಿಮಾತ್ಯರ ಸಂಸ್ಕೃತಿಯ ಮೂಲಮಂತ್ರವು. ಆ ಜನರಾದರೂ ಈ ತತ್ವವನ್ನು ನೆರೆ ನಂಬಿ, ತಾವು ಪೌರುಷದಿಂದ ಸಂಪಾದಿಸಿದ ವಸ್ತುಗಳನ್ನು ಭದ್ರವಾಗಿ ಇಟ್ಟು ಕೊಳ್ಳುತ್ತ, ಸ್ವಬಾಂಧವರನ್ನಗಲಿ ದೂರ ದೂರ ಇರತೊಡಗಿದರು. ಇತ್ತ ಅರಣ್ಯವಾಸಿಗಳಾದ ಆರ್ಯಋಷಿಗಳಿಗೆ ವಿಶ್ವ-ವ್ಯಕ್ತಿಗಳಲ್ಲಿ ಐಕ್ಯವುಂಟೆಂಬ ತತ್ವದ ಸಾಕ್ಷಾತ್ಕಾರವಾಯಿತು. ಪಾಶ್ಚಾತ್ಯ ಮಾನವನು ಸೃಷ್ಟಿಯ ಮೇಲೆ ಅಧಿಕಾರ ನಡಿಸುತ್ತಾನೆ; ಸ್ಪರ್ಧಿತವನ್ನು ಬಹು ದಕ್ಷತೆಯಿಂದ ಕಾಯ್ದು ಕೊಳ್ಳುತ್ತಾನೆ; ತನ್ನ ಪೌರುಷವನ್ನು ಬಹಳವಾಗಿ ನಂಬುತ್ತಾನೆ. ಇದರಿಂದ ವಿಶ್ವ-ವ್ಯಕ್ತಿಗಳಲ್ಲಿ ಒಂದು ಬಗೆಯ ಕೃತ್ರಿಮ ವಿರೋಧ ಉಂಟಾಗುವದು. ಆದರೆ ಇದಕ್ಕೆ ವಿಪರೀತವಾಗಿ, ಅರಣ್ಯವಾಸಿಗಳಾದ ಮಹರ್ಷಿಗಳಲ್ಲಿಯೂ ಅವರ ತತ್ವವನ್ನನುಸರಿಸಿ ನಡೆಯುವ ಹಿಂದೂ ಗೃಹಸ್ಥರಲ್ಲಿಯೂ ವಿಶ್ವ-ವ್ಯಕ್ತಿಗಳ ತಾದಾತ್ಮ್ಯವು ಉದಯಹೊಂದಿ ನೆಲೆಗೊಂಡು ನಿಲ್ಲುವದು. ಪಾಶ್ಚಾತ್ಯ ನಾಗರಿಕನು ಜಡ ಸೃಷ್ಟಿಯೂ ಮನುಷ್ಯೇತರ ಜಂಗಮ ಸೃಷ್ಟಿಯೂ ಮನುಷ್ಯ ಕೋಟಿಗಿಂತ ಕಡಿಮೆತರದವೆಂದು ಭಾವಿಸುವನು. ಅಂದರೆ, ಮಾನವ ಸೃಷ್ಟಿಯೇ

ಪೂರ್ಣವಾದದ್ದೂ ಶ್ರೇಷ್ಟವಾದದ್ದೂ ಎಂಬರ್ಥವು. ಇತರ ಪ್ರಾಣಿಗಳಲ್ಲಿಯೂ ಜಡ ಪದಾರ್ಥಗಳಲ್ಲಿಯೂ ಶರೀರ ರಚನೆಯು ಅಪೂರ್ಣವಿದ್ದಂತೆ, ಬುದ್ಧಿನೀತಿಗಳು ಕಡಿಮೆಯಿದ್ದಂತೆ, ಅವು ನೀಚತರ ವರ್ಗಗಳಲ್ಲಿ ಬರುತ್ತವೆಂತಲೂ, ಅವುಗಳಲ್ಲಿ ಪೂರ್ಣತೆಯನ್ನು ಪಡೆದವುಗಳು ಉಚ್ಚತರ ವರ್ಗದಲ್ಲಿ ಸಮಾವೇಶವಾಗುತ್ತವೆಂತಲೂ ಅವರು ಬಗೆದು, ಮಾನವಕೋಟಿಯನ್ನು ಉಚ್ಚಸೃಷ್ಟಿಯಲ್ಲಿ ಎಣಿಸುತ್ತಾರೆ. ಆದರೆ ಭಾರತೀಯ ತತ್ವವಿದರು ಉಚ್ಚವೆಂದೆಣಿಸುವ ಮನುಷ್ಯಸೃಷ್ಟಿಯು ಇತರ ಸೃಷ್ಟಿಯ ಒಡಹುಟ್ಟಿದ್ದೆಂದು ಭಾವಿಸುವರು. ಅಂದರೆ, ವಾಸ್ತವಿಕವಾಗಿ ಇವೆರಡರಲ್ಲಿಯೂ ಭೇದವಿಲ್ಲೆಂದು ತಿಳಿಯುವರು.

ಈ ಸರ್ವಸೃಷ್ಟಿಯ ಸಂಬಂಧದ ಅಭೇದಬುದ್ಧಿಯು ತತ್ವಜ್ಞಾನದ್ದೊಂದು ವಿಷಯವೆಂದು ಎಂದೂ ಭಾರತೀಯರ ಗ್ರಹಿಕೆಯಿದ್ದಿಲ್ಲ. ಈ ಅಭೇದಬುದ್ಧಿಯ ಅನುಭವವನ್ನು ಅಂತಃಕರಣಕ್ಕೆ ಮಾಡಿಕೊಂಡು, ಅದರಂತೆ ಕೃತಿಯನ್ನು ಮಾಡಬೇಕೆಂಬುದೇ ಭಾರತೀಯರ ಧ್ಯೇಯವಾಗಿರುವದು. ಆದ್ದರಿಂದಲೇ ಹಿಂದುಸ್ತಾನದಲ್ಲಿ ಪ್ರತಿ ಒಂದು ವಿಷಯಕ್ಕೆ ಆಧ್ಯಾತ್ಮಿಕ ಸ್ವರೂಪವು ವ್ಯಾಪ್ತವಾಗಿರುವದು. ಸರ್ವಾಂಗಸಂಪೂರ್ಣತೆಯ ಧ್ಯೇಯವು ಆಧ್ಯಾತ್ಮಿಕ ಸ್ವರೂಪದ್ದೇ ಸರಿ.

ಮನುಷ್ಯರಲ್ಲಿ ಅಭೇದಬುದ್ಧಿಯು ಮೊಳೆದೋರದಿದ್ದಾಗ, ಅವನು ಬಂಧನದಲ್ಲಿ ಸಿಕ್ಕವನೆಂತಿರುವನು. ಅವನ ವಿಚಾರಮರ್ಯಾದೆಯು ಅವನ ಶರೀರವನ್ನು ದಾಟಿ ಹೋಗಿರುವದಿಲ್ಲ. ಆದರೆ ಅವ್ಯಯವೂ ವಿಶ್ವಂಭರವೂ ಆದ ವಸ್ತುವು ಪ್ರತಿಬಿಂದು ವಸ್ತುವಿನಲ್ಲಿ ಉಂಟೆಂಬದು ಪ್ರತ್ಯಯಕ್ಕೆ ಬಂದ ಬಳಿಕ, ಅವನು ಮುಕ್ತನಾಗುತ್ತಾನೆ. ಅಂದರೆ, ಜನ್ಮದ ಸಾರ್ಥಕ್ಯವೆಂದರೇನೆಂಬದರ ಮರ್ಮವು ಅವನಿಗೆ ಮನವರಿಕೆಯಾಗುವದು. ಆಗ ಸತ್ಯಜ್ಞಾನವೆಂಬ ಸೂರ್ಯನು ಅವನ ಮನದಲ್ಲಿ ಉದಯನಾಗಿ ತನ್ನ ಪ್ರಕಾಶದಿಂದ, ಅವನ ಅಂತಃಕರಣದಲ್ಲೆಲ್ಲ ಹುಟ್ಟಿಕೊಂಡಿದ್ದ ಅಜ್ಞಾನ, ಮತ್ತು ಮಿಥ್ಯಾಜ್ಞಾನವೆಂಬ ಕತ್ತಲೆಯನ್ನು ಓಡಿಸಿಬಿಡುತ್ತಾನೆ. ಜೀವಸೃಷ್ಟಿಯಲ್ಲಿ ಮನುಷ್ಯನ ಯೋಗ್ಯತೆಯು ಹೆಚ್ಚಿನದಿರುತ್ತದೆಂಬ ಪಾಶ್ಚಾತ್ಯರ ಇಷ್ಟು ಮಾತಿಗೆ ನಾವು ಒಪ್ಪುತ್ತೇವೆ. ಆದರೆ ಆ ಶ್ರೇಷ್ಠತೆಯು ಯಾತರಲ್ಲುಂಟೆಂಬ ಬಗ್ಗೆ ಅವರಾ ನವ್ಯಾ ವಿಚಾರ

ಗಳು ಭಿನ್ನವಾಗಿರುವವು. ಕೇವಲ ಅಧಿಕಾರ ನಡಿಸುವದೇ ಶ್ರೇಷ್ಠತೆಯ ಲಕ್ಷಣವೆಂದು ನಾವು ತಿಳಿಯುವದಿಲ್ಲ. ಅಭೇದ ಬುದ್ಧಿಯಿಂದ ಸೃಷ್ಟಿಯಲ್ಲಿ ವರ್ತಿಸುವ ಸಾಮರ್ಥ್ಯವು, ಅಥವಾ ವಸುಧೈವಕುಟುಂಬಕಂ ಎಂಬ ಸಿದ್ಧಾಂತವನ್ನು ನೆರೆನಂಬಿ ನಡೆಯುವ ಶಕ್ತಿಯು ಮನುಷ್ಯತ್ವದ ಉಚ್ಚತಮಧ್ಯೇಯವೆಂದು ಬಗೆಯುವದೇ ಮನುಷ್ಯನ ಶ್ರೇಷ್ಠತೆಯ ಲಕ್ಷಣವು. ನಾವು ಮಾನಸಿಕ ಭೌತಿಕ ಭಯಗಳಿಗೆ ಹೆದರಿ, ಮಿಕ್ಕ ಜೀವ ರಾಶಿಗಳಿಂದ ಭಿನ್ನರಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ. ಹೀಗಾಗಲು, ತಾನೊಬ್ಬನು ವಿಶ್ವದ ಘಟಕನೆಂಬದರ ವಿಸ್ಮರಣವು ಮನುಷ್ಯನೆಲ್ಲುಂಟಾಗುವದು; ಹಾಗು ಅವನು ಸ್ವಾರ್ಥಸಾಧನೆಯ ನೀಚತದು ವೃತ್ತಿಯಲ್ಲಿ ಸೇರುವನು. ಈ ಸ್ಥಿತಿಯಲ್ಲಿ ಮನುಷ್ಯನಿಗೆ ಅನೇಕ ತೊಂದರೆಗಳು ಒದಗುತ್ತವೆ. ಈ ತೊಂದರೆಗಳನ್ನು ಅವನು ವಿಶ್ವಪ್ರಯತ್ನದಿಂದ ಪರಿಹರಿಸಿಕೊಳ್ಳಲಿಕ್ಕೆ ಹೆಣಗಾಡುತ್ತಾನೆ. ವಿಶ್ವದಿಂದ ಬೇರೆಯಾಗಿ ಇವನು ಆತ್ಮ ಪೌರುಷವನ್ನೇ ನಂಬಿ ಮನ ಬಂದಂತೆ ಕುಣಿದಾಡ ಹತ್ತುತ್ತಾನೆ; ಕಡೆಗೆ ಅಧಃಪತನವನ್ನು ಹೊಂದುತ್ತಾನೆ. ಆಗ ಅವನು ಈ ಅದ್ಭುತ ವಿಶ್ವರಚನೆಯು ಕೇವಲ ತನ್ನ ನಾಶಕ್ಕೆ ಉಂಟಾಗಿರುವದೆಂದು ಹಳ ಹಳಿಸುತ್ತಾನೆ.

ಆದರೆ ಹಿಂದುಸ್ತಾನದವರ ಧ್ಯೇಯವು ಬೇರೆಯಾಗಿರುವದು. ಈ ಧ್ಯೇಯವನ್ನು ಸಾಧ್ಯ ಮಾಡಿಕೊಳ್ಳಲೋಸುಗ ಆರ್ಯಪುತ್ರರು ಅರಣ್ಯವಾಸವನ್ನು ಕೈಕೊಂಡು, ಆಳವಾದ ಸಮುದ್ರದ ತಳದಲ್ಲಿ ಸಿಕ್ಕಿಕೊಂಡ ದಿವ್ಯ ರತ್ನದಂತಿರುವ ಶಾಂತಿಯನ್ನು ಜಗಜ್ಜನರಿಗೆಲ್ಲ ದೊರಕಿಸಿಕೊಡುವ ಮಹತ್ಕಾರ್ಯದಲ್ಲಿ ತೊಡಗಿದ್ದರಿಂದ, ಪ್ರಾಪಂಚಿಕ ದೃಷ್ಟಿಯಿಂದ ಭರತಖಂಡಕ್ಕೆ ದೊಡ್ಡ ಹಾನಿಯೊದಗಿತೆಂದು ನಿರ್ವಿವಾದವಾಗಿ ಹೇಳಬಹುದು. ಆದರೂ ಈ ಕಾರ್ಯವು ಕಡಿಮೆ ಗೌರವದ್ದೆಂದು ತಿಳಿಯಲಾಗದು.

ಮನುಷ್ಯನು ಭೋಗತೃಷ್ಣೆಗೆ ಮೋಹಿತನಾಗಿ, ಅದರ ತೃಪ್ತಿಗೋಸುಗ ಕೊಲೆ, ಸುಲಿಗೆ, ಪರಹಿಂಸೆ ಮುಂತಾದ ಕ್ರೂರಾಚರಣೆಗಳಲ್ಲಿ ಪ್ರವೃತ್ತನಾಗುತ್ತಾನೆ; ಲುಬ್ಧನಾಗಿ ಮನೆಯಲ್ಲಿ ಧನರಾಶಿಯನ್ನು ಕೂಡಹಾಕುತ್ತಾನೆ. ಅವನು ಹೊಸ ಹೊಸ ಶೋಧಗಳನ್ನು ಮಾಡುತ್ತಾನೆ ನಿಜ. ಆದರೆ ಮಾನವ ಪ್ರಾಣಿಯ ಆತ್ಮಿಕ ತತ್ವವು ಸರ್ವಜ್ಞತಾಕ್ಷಮವಿರುವದೆಂಬದು ಭರತಭೂಮಿಯಲ್ಲಿಯೇ ಪ್ರತ್ಯಯಕ್ಕೆ ಬಂದಿರುವದಲ್ಲದೆ ಅನ್ಯತ್ರವಿಲ್ಲ.

ಉಪನಿಷತ್ತುಗಳಲ್ಲಿ ವರ್ಣಿಸಲ್ಪಟ್ಟಂತೆ ಸರ್ವಭೂತಗಳಲ್ಲಿ ಈಶ್ವರ ನಿರುತ್ತಾನೆಂಬು ಭಾರತೇಯರು ತಿಳಿಯುವರು; ಅವರು ವಿಶ್ವವನ್ನು ಪ್ರೀತಿಸುವರು; ಪ್ರತಿ ಬೀದು ಸೃಷ್ಟ ಪದಾರ್ಥವು ಅವರಿಗೆ ಪೂಜನೀಯವೆನಿಸುವದು. ಪ್ರಸಿದ್ಧನಾದ ಬುದ್ಧನಾದರೂ ಇದೇ ತತ್ವವನ್ನು ಜನರಿಗೆ ಬೋಧಿಸಿದನು. ಸದಾ ಬ್ರಹ್ಮಾನಂದದಲ್ಲಿರುವದೇ ಜನ್ಮದ ಸಾರ್ಥಕತೆಯು; ಸರ್ವ ವಿಶ್ವವನ್ನು ವ್ಯಾಪಿಸಿನ ಕಾರಣವೇ ಬ್ರಹ್ಮವು, ಎಂದು ಉಪನಿಷತ್ತುಗಳು ಸಾರುವವು. ಈ ಕಾರಣವೆನಿಸುವ ಬ್ರಹ್ಮದಿಂದಲೇ ಸೂರ್ಯನು ಪೃಥ್ವಿಯನ್ನು ಆಕರ್ಷಿಸುತ್ತಾನೆ. ಮತ್ತು ಆ ಕಾರಣದಿಂದಲೇ ತೇಜಸ್ತರಂಗಗಳು ವಿಶ್ವದ ತುಂಬಾ ಸಂಚರಿಸುತ್ತವೆ. ವಿಶ್ವದಲ್ಲಿ ಐಕ್ಯವಾಗಬೇಕೆಂಬವನು ವಿಶ್ವವನ್ನು ಪ್ರೀತಿಸಬೇಕು. ಈ ವಿಶ್ವಪ್ರೇಮದ ಅಭ್ಯುದಯವೇ ಮನುಷ್ಯನ ನಿಜವಾದ ಪ್ರಗತಿಯು. ಹೆಚ್ಚು ಭೂಮಿಯನ್ನು ಸಂಪಾದಿಸಿದವನು ಶ್ರೇಷ್ಠನಾಗನು; ಅಪರೆ ಹೆಚ್ಚು ಹೆಚ್ಚು ಪಕ್ವವಾದ ಅಭೇದ ಬುದ್ಧಿಯುಳ್ಳವನೇ ಹೆಚ್ಚು ಹೆಚ್ಚು ಉನ್ನತಿಯನ್ನು ಹೊಂದುವನು. ಸ್ವಾತಂತ್ರ್ಯವನ್ನು ಬಯಸುವವನು ಸ್ವಾರ್ಥವನ್ನು ಬೇರೊರಿಸಿ ಕಿತ್ತಿ ಬಿಗೆಯಬೇಕು. "ಕೊಟ್ಟರೆ ಸಿಗುವದೆ"ಂಬದನ್ನು ಮರೆಯಲಾಗದು.

ಈ ಉದಾತ್ತವಾದ ಧ್ಯೇಯವೇ ನಮ್ಮ ತಾಯಿತಂದೆಗಳು ನಮಗೋಸ್ಕರ ಸಂಚಯಮಾಡಿಟ್ಟ ಸಂಪತ್ತು. ಉಪನಿಷತ್ತುಗಳಾದರೂ ಈ ಧ್ಯೇಯಸಾಧನಕ್ಕೆ ಭಕ್ತಿ, ಜ್ಞಾನ, ಉಪಾಸನೆ, ವಿಶ್ವೈಕ್ಯ ಇವೇ ಪ್ರಾಮುಖ್ಯವಾದವುಗಳೆಂದು ಸಾರಿ ಸಾರಿ ಹೇಳುತ್ತವೆ."

ದೇಶಶೋಧಕನಾದ ಡಾ. ಲಿವಿಂಗ್‌ಸ್ಟನ್ನನು.

संतः स्वयं परहितेषु कृताभियोगाः ।

ಪಾಶ್ಚಿಮಾತ್ಯ ರಾಷ್ಟ್ರಗಳು ಸಾಂಪ್ರತಕಾಲದಲ್ಲಿ ಪೃಥ್ವಿಯ ಮೇಲಿನ ಅಜ್ಞಾತಭಾಗಗಳನ್ನು ಗೊತ್ತುಹಚ್ಚುವದರಲ್ಲಿಯೂ ರಾಷ್ಟ್ರೋನ್ನತಿಗೆ ಅವಶ್ಯಕ ಸಂಗತಿಗಳಾದ ಶಾಸ್ತ್ರೀಯ ಶೋಧಗಳನ್ನು ಮಾಡುವದರಲ್ಲಿಯೂ ಮುಂದರಿದು ನಿಂತಿರುವಂತೆ, ಅವುಗಳ ಇತಿಹಾಸವಾದರೂ ವಿಸ್ಮಯಕಾರಕವಾಪದ್ದೂ ಬೋಧಪ್ರದವಾಪದ್ದೂ ಆಗಿರುವದು. ತಮ್ಮ ರಾಷ್ಟ್ರದ ಹಾಗೂ

ಇಡೀ ಜಗತ್ತಿನ ಹಿತಕ್ಕಾಗಿ ಪ್ರಯತ್ನಪಡುತ್ತಿರುವಂಥ ಮಹನೀಯರಿಗೇ ರಾಷ್ಟ್ರಮಾಲಿಕೆಯಲ್ಲಿ ಉಚ್ಚಸ್ಥಾನವು ದೊರೆಯುವದು; ಅವರೇ ಅಬಾಲ ವೃದ್ಧರಿಗೂ ವಂದನೀಯರಾಗುವರು; ಅವರೇ ಅಸಾಧಾರಣವಾದ ಸ್ವಾರ್ಥ ತ್ಯಾಗಿಗಳೂ ಪರಾರ್ಥಸಹಾಯಕರೂ ಅನ್ನಿಸಿಕೊಳ್ಳುವರು. ಅಂಥ ಮಹಾತ್ಮರ ಅದ್ವಿತೀಯವಾದ ಬುದ್ಧಿಸಾಮರ್ಥ್ಯವನ್ನು ನಿದರ್ಶಿಸುವ ಕುರುಹುಗಳು ಉಳಿದು, ಅವುಗಳ ಮೂಲಕವಾಗಿ ಜನರಲ್ಲಿ ಅವರನ್ನು ಅನುಸರಿಸುವ ಬುದ್ಧಿಯು ಉಂಟಾಗಬೇಕೆಂಬ ಉದ್ದೇಶದಿಂದ ಅಂಥವರ ಪ್ರತಿಮೆಗಳನ್ನು ಸ್ಥಾಪಿಸುವ ರೂಢಿಯುಂಟಾಗಿರುವದು. ಅವರ ಹೆಸರು ಚಿರಸ್ಥಾಯಿಯಾಗಬೇಕೆಂಬ ಉದ್ದೇಶದಿಂದ ದೊಡ್ಡ ದೊಡ್ಡ ಸಂಸ್ಥೆಗಳು ಅವರ ಹೆಸರಿನಿಂದ ಆರಂಭಿಸಲ್ಪಡುವವು; ಸುಂದರವೂ ಭವ್ಯವೂ ಆದ ಇಮಾರತುಗಳು ಹೆರೆಯಲ್ಪಡುವವು. ಕೆಲವರ ಜನ್ಮ ತಿಥಿಯ ದಿವಸ ಅವರ ಸ್ಮರಣಾರ್ಥವಾಗಿ ಧಾರ್ಮಿಕ ಅಥವಾ ಸಾಮಾಜಿಕ ವಿಧಿಗಳು ಆಚರಿಸಲ್ಪಡುವವು. ಶಾಸ್ತ್ರೀಯ ಶೋಧಗಳ ಬಗ್ಗೆ ಜಗದ್ವಿಖ್ಯಾತನಾದ ಲಾರ್ಡ ಕೆಲ್ವಿನ್, ಖಂಡಗಳಲ್ಲಿ ಕೆಲಸಮಾಡುವ ಕೂಲಿಕಾರರ ಪ್ರಾಣರಕ್ಷಣೆಯ ದೀಪದ ಶೋಧಕನಾದ ಸರ್ ಹಂಫ್ರೆ ಡೇವ್ಹೀ, ಅಮೇರಿಕಾಖಂಡವನ್ನು ಶೋಧಿಸಿದ ಕೋಲಂಬಸ್ ಇವರೇ ಮೊದಲಾದವರು ಇಂಥ ಮಹಾತ್ಮರಾಗಿರುವರು. ಆಫ್ರಿಕಾಖಂಡದೊಳಗಿನ ಪ್ರದೇಶಗಳನ್ನು ಗೊತ್ತುಹಚ್ಚಿದ ಡಾಕ್ಟರ್ ಲಿವ್ಹಿಂಗ್ಸ್ಟನ್ನನೂ ಇಂಥ ಮಹಾತ್ಮರೊಳಗಿನವನೇ ಒಬ್ಬನು. ಇವನ ಜನ್ಮತಿಥಿಯ ಶತಸಾಂವತ್ಸರಿಕ ಉತ್ಸವವು ಕಳೆದ ಎಪ್ರೀಲ ತಿಂಗಳಲ್ಲಿ ಲಾರ್ಡ ಕರ್ಝನ್‌ಸಾಹೇಬರ ಅಧ್ಯಕ್ಷತೆಯ ಕೆಳಗೆ ನೆರವೇರಿತು. ಈ ಮಹಾತ್ಮನ ಚರಿತ್ರವು ಬೋಧಪ್ರದವಾಗಿದ್ದು, ಕೆಲವಂಶದಿಂದ ಮನೋರಂಜಕವೂ ಆಗಿರುವದರಿಂದ ಅದನ್ನು ಶಾಲಾಪತ್ರಕದ ವಾಚಕರಿಗೋಸ್ಕರ ಇಲ್ಲಿ ಕೊಡುತ್ತೇವೆ:—

ಡಾಕ್ಟರ್ ಲಿವ್ಹಿಂಗ್ಸ್ಟನ್ನನು ಕೈಕೊಂಡ ಕೆಲಸವು ಅತಿವ್ಯಾಪಕವಾದದ್ದೂ, ಸಾರ್ವಜನಿಕ ದೃಷ್ಟ್ಯಾಯಿಂದ ಹೇಳಕೂಡದಷ್ಟು ಪ್ರಯೋಜನವುಳ್ಳದ್ದೂ ಆಗಿತ್ತು. ಅದರಿಂದ ಯುರೋಪದೊಳಗಿನ ಪ್ರತಿಯೊಂದು ರಾಷ್ಟ್ರದವರು, ಅವನು ತಮ್ಮ ರಾಷ್ಟ್ರದಲ್ಲಿ ಹುಟ್ಟಬೇಕಾಗಿತ್ತೆಂದು ಬಯಸುವರು; ಹಾಗೂ ಅವನ ವಿಷಯವಾಗಿ ಅತ್ಯಂತ ಅಭಿಮಾನವನ್ನು ತೋರಿಸುವರು.

ಇವನು ಸ್ಕಾಟಲಂಡದಲ್ಲಿ ಲ್ಯಾನಾರ್ಕ್‌ಶಾಯರದಲ್ಲಿದ್ದ ಬ್ಲಾಂಟೈಯರ ಎಂಬಲ್ಲಿ ೧೮೧೩ ರಲ್ಲಿ ಹುಟ್ಟಿದನು. ಅವನ ತಾಯಿತಂದೆಗಳು ಬಡವರು; ಆದರೂ ಧರ್ಮಾಚರಣೆಯುಳ್ಳವರೂ ಉತ್ತಮವಾದ ಶೀಲವುಳ್ಳವರೂ ಆಗಿದ್ದರು. ಲಿವ್ಹಿಂಗ್ಸ್‌ಟನ್ನನ ತಂದೆಯು ಅತ್ಯಂತ ವಾಚನಾಭಿರುಚಿಯುಳ್ಳವನಾಗಿದ್ದನು. ಮುಖ್ಯವಾಗಿ ಪ್ರವಾಸಗಳ ಸಂಬಂಧದಿಂದಲೂ ಮಿಶನರಿಗಳ ವೃತ್ತಾಂತದ ಸಂಬಂಧದಿಂದಲೂ ಅವನು ಬಹಳ ಓದುವನು. ತಾಯಿತಂದೆಗಳ ಬಡತನದ ಮೂಲಕವಾಗಿ ಲಿವ್ಹಿಂಗ್ಸ್‌ಟನ್ನನಿಗೆ ಅವನ ವಯಸ್ಸಿನ ೧೦ನೆಯ ವರ್ಷಕ್ಕೆ ಒಂದು ಅರಳೆಯ ಕಾರಖಾನೆಯಲ್ಲಿ ಕೂಲಿಕಾರನ ಕೆಲಸವನ್ನು ಕೈಕೊಳ್ಳಬೇಕಾಯಿತು. ಈ ಮೈದುಡತದ ಉದ್ಯೋಗದಲ್ಲಿ ಅವನು ೧೪ ವರ್ಷಗಳನ್ನು ಕಳೆದನು. ಆದರೂ ಈ ಕಾಲದಲ್ಲಿ ಅವನಲ್ಲಿ ವಾಚನಾಭಿರುಚಿಯು ಅತಿಶಯವಾಗಿದ್ದದರಿಂದ ಅವನ ಕೈಗೆ ಸಿಕ್ಕ ಯಾವತ್ತು ಗ್ರಂಥಗಳನ್ನು ಓದಿ ಬಿಟ್ಟನು. ಅವನು ಮುಂಜಾನೆ ೬ ಘಂಟೆಯಿಂದ ಸಂಜೆಯ ೮ ಘಂಟೆಯವರೆಗೆ ಕಾರಖಾನೆಯಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಅವನು ತನಗೆ ಹೆಚ್ಚಾಗಿ ಸೇರುವ ಪುಸ್ತಕಗಳನ್ನು ಮಗ್ಗದ ಮೇಲಿಟ್ಟುಕೊಂಡು ನಡುನಡುವೆ ಓದುವನು. ಪ್ರತಿದಿವಸ ಗಿರಣಿಯಲ್ಲಿ ೧೪ ತಾಸು ದುಡಿದು, ಆ ಮೇಲೆ ರಾತ್ರಿಯ ಶಾಲೆಗೆ ಹೋಗಿ ಲ್ಯಾಟಿನ್ ಭಾಷೆಯ ಅಭ್ಯಾಸ ಮಾಡುತ್ತಿದ್ದನು. ಈ ರೀತಿಯಾಗಿ ೧೪ ವರ್ಷ ಕಳೆದ ಬಳಿಕ ಅಭ್ಯಾಸಕ್ಕಾಗಿ ಗ್ಲಾಸಗೋಕ್ಕೆ ಹೋದನು. ಅಲ್ಲಿಯೂ ಬೇಸಿಗೆಯ ದಿವಸಗಳಲ್ಲಿ ಪಗಾರವಾಗಿ ದೊರಕಿಸಿಕೊಂಡ ಹಣವನ್ನು ಕಾಲೇಜವು ಆರಂಭವಾದ ಮೇಲೆ ಫೀಯ ಸಲುವಾಗಿ ಉಪಯೋಗಿಸಿಕೊಳ್ಳುತ್ತಿದ್ದನು. ಯಾವ ಜ್ಞಾನವನ್ನು ಮುಂದೆ ಜಗತ್ತಿನ ಹಿತಕ್ಕಾಗಿಯೇ ಅವನು ಉಪಯೋಗಿಸಿದನೋ ಅಂಥ ಜ್ಞಾನವನ್ನು ಅವನು ಇಷ್ಟೊಂದು ಕಷ್ಟಬಟ್ಟು ದೊರಕಿಸಿಕೊಳ್ಳಬೇಕಾಯಿತು! ಮುಂದೆ ಅವನು ತಿಂಗಳಿಗೆ ೧೫೫ ರೂಪಾಯಿ ಪಗಾರದ ಮೇಲೆ ಲಂಡನದ ಮಿಶನರೀ ಸಂಸ್ಥೆಯಲ್ಲಿ ನೌಕರಿಗೆ ನಿಂತನು. ಮತ್ತು ಆ ಸಂಸ್ಥೆಯ ಆಶ್ರಯದಿಂದ ೧೮೪೦ನೇ ಇಸವಿಯಲ್ಲಿ ಆಫ್ರಿಕಾಕ್ಕೆ ಹೋದನು. ಅವನು ತನಗೆ ದೊರೆಯುತ್ತಿದ್ದ ಪಗಾರದಿಂದ ಅಂತೂ ಇಂತೂ ಸಂಸಾರವನ್ನು ಸಾಗಿಸಿಕೊಳ್ಳುತ್ತಿದ್ದನು. ಲಿವ್ಹಿಂಗ್ಸ್‌ಟನ್ನನು ತನ್ನ ಸುತ್ತಲಿನ ಜನರಿಂದ ಅನೇಕ ಕಷ್ಟಗಳನ್ನನುಭವಿಸಬೇಕಾಯಿತು. ಆದಕಾರಣ ಅವನು

ತನ್ನ ಪದ್ಧತಿಯ ಮೇರೆಗೆ ಸ್ವತಂತ್ರವಾಗಿ ಕೆಲಸಮಾಡಲಿಕ್ಕೆ ದೊರೆಯಬೇಕೆಂದು ಊರೂರು ತಿರುಗಹತ್ತಿದನು. ಈ ಪ್ರವಾಸದಲ್ಲಿ ಅವನ ಮನಸ್ಸಿನೊಳಗಿನ ಇಚ್ಛೆಗೆ ನೂತನವಾದ ಉತ್ತೇಜನವು ದೊರೆತು, ಹೊಸದೇಶಗಳನ್ನು ಶೋಧಿಸಲಿಕ್ಕೆ ಹೊರಡಬೇಕೆಂದು ನಿಶ್ಚಯಿಸಿದನು. ಸುಬ್ಯೆವದಿಂದ ಅವನಿಗೆ ಈ ಸಮಯದಲ್ಲಾಗಿದ್ದ ಅಫ್ರಿಕನ್ ಭಾಷೆಯ ಪರಿಚಯದಿಂದ ಅಲ್ಲಿಯ ಹಳ್ಳಿಗಾಡ ಜನರ ಪರಿಚಯ ಮಾಡಿಕೊಳ್ಳಲಿಕ್ಕೆ ಒಳ್ಳೇ ಅನುಕೂಲವಾಯಿತು. ಮಾಬೋಟ್ಸಾಕ್ಕೆ ಹೋಗುವಾಗ ಹಾದಿಯಲ್ಲಿ ಲಿವ್ಹಿಂಗ್ಸ್ಟನ್ನನಿಗೆ ಒಂದು ಸಿಂಹವು ಗಂಟುಬಿದ್ದಿತು. ಈ ಭಯಂಕರಪ್ರಸಂಗದೊಳಗಿಂದ ಅವನು ಪ್ರಸಂಗಾವಧಾನದಿಂದ ಪಾರಾದನು! ಆದರೆ ಮೈಗೆ ಕೆಲವು ಗಾಯಗಳು ಮಾತ್ರ ಆದವು. "ಕ್ಲೋರೋಫಾರ್ಮ್ ಎಂಬ ದ್ರವ್ಯವನ್ನು ಮೂಸಿ ನೋಡುವದರಿಂದ ಒಂದು ಬಗೆಯ ಅಮಲೇರಿ ಪಂತಾಗಿ ಮನುಷ್ಯನು ಮುಂದೆ ಎಚ್ಚರದಪ್ಪುವನು. ಅದರಂತೆ ಕ್ರೂರ ಪಶುಗಳನ್ನು ನೋಡಿದ ಕೂಡಲೆ ಪ್ರಾಣಿಗಳಿಗೆ ಮೈಮೇಲಿನ ಸ್ಮೃತಿಯು ತಪ್ಪುವದು; ಹಾಗೂ ಮುಂಬೆ ಆ ಕ್ರೂರ ಪ್ರಾಣಿಯು ಅವುಗಳನ್ನು ಕೊಲ್ಲುವದರಿಂದುಂಟಾಗುವ ಮರಣಯಾತನೆಯು ಆ ಪ್ರಾಣಿಗಳಿಗೆ ಗೊತ್ತಾಗುವದಿಲ್ಲ" ಎಂದು ಲಿವ್ಹಿಂಗ್ಸ್ಟನ್ನನು ಹೇಳಿರುವನು. ಆದರೆ ಲಿವ್ಹಿಂಗ್ಸ್ಟನ್ನನಿಗೆ ಈ ಪ್ರಸಂಗದಲ್ಲಾದ ಧಕ್ಕೆಯಿಂದ, ಅವನು ಸಾಯುವವರೆಗೂ ಕಷ್ಟವನ್ನನುಭವಿಸಬೇಕಾಯಿತು.

೧೮೪೯ನೇ ಇಸವಿಯಲ್ಲಿ ಲಿವ್ಹಿಂಗ್ಸ್ಟನ್ನನು ನಾಮಿ ಎಂಬ ಸರೋವರವನ್ನು ಹುಡುಕಿ ತೆಗೆದನು. ಇದೇ ಇವನು ಮಾಡಿದ ಮೊದಲನೆಯ ಶೋಧವು. ಇವನು ಆಫ್ರಿಕಾ ಖಂಡದಲ್ಲಿ ೩೯,೦೦೦ ಮೈಲು ಪ್ರವಾಸ ಮಾಡಿ ಪೃಥ್ವಿಯ ಮೇಲಿನ ಜನರಿಗೆ ಗೊತ್ತಿಲ್ಲದಂಥ ೧ ಲಕ್ಷ ಚೌದಸ ಮೈಲು ಪ್ರದೇಶವನ್ನು ಹೊಸದಾಗಿ ಹುಡುಕಿ ತೆಗೆದನು. ಶಿರ್ವಾ, ನ್ಯಾಸಾ, ಮೋರಾ, ಹಾಗೂ ಬ್ಯಾಂಗವೀಅಲಾ ಎಂಬ ಸರೋವರಗಳನ್ನೂ ಝಾಂಬೇಝೀ ಮುಂತಾದ ನದಿಗಳನ್ನೂ ಇವನೇ ಗೊತ್ತುಹಚ್ಚಿದನು. ಅದರಂತೆ ಸದ್ಯಕ್ಕೆ ಪ್ರಸಿದ್ಧವಾಗಿದ್ದ ವ್ಹಿಕ್ಟೋರಿಯಾ ಧಬಧಬೆಯನ್ನೂ ನೈಲ ನದಿಯ ಉಗಮವನ್ನೂ ಇವನೇ ಹುಡುಕಿ ತೆಗೆಯುತ್ತಿದ್ದನು. ಅದರೆ ಸ್ವಲ್ಪದರಲ್ಲಿ ತಪ್ಪಿತು. ಈ ಯಾವತ್ತು ಶೋಧಗಳನ್ನು ಅವನು ಸ್ವತಃ ೩೦ ವರ್ಷ ಶ್ರಮಬಟ್ಟು ಮಾಡಿದನು. ಮುಂದೆ ಅವನು ಇಂಗ್ಲಂಡಕ್ಕೆ

ಹೋದ ಮೇಲೆ ಬ್ರಿಟಿಶರು ಅವನನ್ನು ಅತ್ಯಂತವಾಗಿ ಸತ್ಕರಿಸಿದರು. ಹಾಗೂ ಅವನ ಪ್ರಯತ್ನಕ್ಕೆ ಸ್ವಲ್ಪವಾದರೂ ಪ್ರತಿಫಲವು ದೊರೆಯಲೆಂಬ ಉದ್ದೇಶದಿಂದ ೩೦,೦೦೦ ರೂಪಾಯಿಗಳನ್ನು ಅವನಿಗೆ ಇನಾಮಾಗಿ ಕೊಟ್ಟರು. ವಿಕ್ಟೋರಿಯಾ ಮಹಾರಾಣಿಯವರು ಸ್ವತಃ ಅವನನ್ನು ಕರಿಸಿಕೊಂಡು ಯಾವತ್ತೂ ಪ್ರವಾಸ ವೃತ್ತಾಂತವನ್ನು ಕೇಳಿಕೊಂಡರು. ಅವನು ಪ್ರಸಿದ್ಧ ಮಾಡಿದ "ಒಬ್ಬ ಮಿಶನರಿಯ ಪ್ರವಾಸ ವೃತ್ತಾಂತ" ಎಂಬ ಪುಸ್ತಕದ ಮೊದಲನೇ ಆವೃತ್ತಿಯು ಬೇಗನೆ ತೀರಿ, ಎರಡನೇ ಆವೃತ್ತಿಯ ೧೫,೦೦೦ ಪ್ರತಿಗಳಿಗೆ ಗಿರಾಕಿಗಳು ಬಂದವು. ಇಲ್ಲಿಯವರೆಗೆ ಇಸ್ವಿಯಲ್ಲಿ ಬ್ರಿಟಿಶ್ ಸರಕಾರದವರು ಲಿವ್ಹಿಂಗ್ಸ್ಟನ್ನನನ್ನು ಕ್ವಿಲಿಮೇನದಲ್ಲಿ ತಮ್ಮ ಪ್ರತಿನಿಧಿಯಾಗಿ ನೇಮಿಸಿದರು. ಹಾಗೂ ಅವನನ್ನು ಆ ದೇಶದೊಳಗಿನ ಇತರ ಭಾಗವನ್ನು ಗೊತ್ತು ಹಚ್ಚುವದಕ್ಕಾಗಿ ನೇಮಿಸಿದ ಸಂಸ್ಥೆಯ ಮುಖ್ಯಸ್ಥನನ್ನಾಗಿ ಮಾಡಿದರು. ಅವನು ಆ ದೇಶದ ಜನರ ಮನಸ್ಸನ್ನು ಒಲಿಸಿಕೊಂಡು ನಡೆಯುತ್ತಿದ್ದನಾದ್ದರಿಂದ ಮುಂದಿನ ನಾಲ್ಕು ವರ್ಷಗಳಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಿದನು. ಪರರಾಷ್ಟ್ರೀಯ ಖಾತೆಯ ತಿಳುವಳಿಕೆಯ ಬಗ್ಗೆ ಅವನು ಕಳಿಸಿದ ಪ್ರಸಿದ್ಧ ಪತ್ರಕದ ಮೇಲಿಂದ ನೋಡಿದರೆ ಅವನು ಎರಡನೇ ದೇಶದೊಳಗಿನ ಜನರ ಸಂಗಡ ಎಷ್ಟು ಸರಳ ರೀತಿಯಿಂದ ವರ್ತಿಸುತ್ತಿದ್ದನೆಂಬದು ಕಂಡುಬರುತ್ತದೆ. ಅವನು ಹೇಳಿದ್ದೇನೆಂದರೆ:—"ಎರಡನೆಯವರ ದೇಶದಲ್ಲಿ ಹೋದ ಮೇಲೆ ನೀತಿಬಾಹ್ಯ ಆಚರಣೆಯನ್ನು ಎಂದೆಂದೂ ಮಾಡಕೂಡದು. ಅವರ ಮನಸ್ಸಿನಲ್ಲಿ ತಮ್ಮ ಬಗ್ಗೆ ಅದಷ್ಟು ಸದ್ಭಾವನೆಗಳು ಉಂಟಾಗುವಂತೆ ಅವರೊಡನೆ ಸೌಮ್ಯರೀತಿಯಿಂದಲೂ ಸೌಜನ್ಯದಿಂದಲೂ ನಡೆಯಬೇಕು. ಕಾರಣವಿಲ್ಲದೆ ಪ್ರಾಣಿಗಳನ್ನು ಅಥವಾ ಪಶುಗಳನ್ನು ಕೊಲ್ಲಬಾರದು. ಎಲ್ಲ ಜಾತಿಯ ಜನರ ಸಂಗಡಲೂ ನ್ಯಾಯದಿಂದಲೂ ಸಮಭಾವದಿಂದಲೂ ನಡೆಯಬೇಕು. ಮತ್ತು ಅವರೊಳಗಿನ ಮುಖ್ಯಸ್ಥರ ವಿಷಯವಾಗಿ ಪೂಜ್ಯ ಬುದ್ಧಿಯುಳ್ಳವರಾಗಬೇಕು; ಹಾಗೂ ತಾವು ಪವಿತ್ರವೂ ಉದಾತ್ತವೂ ಆದ ಒಂದು ಧರ್ಮದ ಪ್ರವರ್ತಕರೆಂಬದನ್ನು ಮನಸ್ಸಿನಲ್ಲಿಟ್ಟುಕೊಂಡು, ಅದರ ಮೂಲತತ್ವಗಳಿಗೆ ಯಾವ ರೀತಿಯಿಂದಲೂ ವಿರುದ್ಧ ಕಂಡುಬರದಂತೆ ತಮ್ಮ ವರ್ತನೆಯನ್ನು ಇಡಬೇಕು. ಹಾಗೂ ತಾವು ಕಾಡು ಜನರಲ್ಲಿ ಶಾಂತತೆಯನ್ನುಂಟು ಮಾಡುವಂಥ ಪವಿತ್ರವಾದ ಕಾರ್ಯದ ಪ್ರವರ್ತಕರಾಗಬೇಕೆಂದು ಸಂಕಲ್ಪವನ್ನು ಮಾಡಿಕೊಳ್ಳಬೇಕು."

ಲಿವ್ಹಿಂಗ್ಸ್ಟನ್ನನು ಈ ಎರಡನೇ ಸರತಿಯ ಪ್ರವಾಸದಲ್ಲಿ ಬಹಳ ತೊಂದರೆಗಳನ್ನು ಅನುಭವಿಸಬೇಕಾಯಿತು. ಹಡಗದ ಮುಖ್ಯಸ್ಥನು ರಾಜೀನಾಮೆಯನ್ನು ಕೊಟ್ಟದ್ದರಿಂದ ಹಡಗೆ ನಡಿಸುವ ಕೆಲಸವನ್ನು ಸ್ವತಃ ಮಾಡಬೇಕಾಯಿತು. ಅವನು ಹಡಗವನ್ನು ೧೬೦೦ ಮೈಲುಗಳ ವರೆಗೆ ಒಬ್ಬನೇ ಒಯ್ದನು. ಅನಂತರದಲ್ಲಿ ಈ ಸರಕಾರೀ ಹಡಗವು ನಾದುರಸ್ತಾದದ್ದರಿಂದ, ತನಗೆ ಪುಸ್ತಕ ಮಾರಿ ಬಂದಿದ್ದ ಹಣದಿಂದ ಮತ್ತೊಂದು ಹೊಸ ಹಡಗವನ್ನು ಕೊಂಡುಕೊಂಡನು. ಮುಂದೆ ಅವನು ತುಸು ದಿವಸಗಳಲ್ಲಿಯೇ 'ಮರಕಿಯನ್ ಫಾಲ್ಸ್' ಎನ್ನೂ ಶಿರವಾ, ಹಾಗೂ ನ್ಯಾಸಾ ಎಂಬ ಸರೋವರಗಳನ್ನೂ ಹುಡುಕಿ ತೆಗೆದನು. ಎರಡನೇ ಸರೋವರವು ೩೦೦ ಮೈಲು ಉದ್ದವಾಗಿದ್ದು ಅದರ ಸುತ್ತಲಿನ ಪ್ರದೇಶವು ಹೊಸದಾಗಿ ವಸಾಹಾತು ಮಾಡಲಿಕ್ಕೆ ಬಹಳೇ ಉತ್ತಮ ಸ್ಥಳವೆಂದು ಅವನಿಗೆ ತೋರಿತು. ಹಾಗೂ ಬಿಳೇ ಜನರಿಗೆ ವಸಾಹತು ಮಾಡಲಿಕ್ಕೆ ಇದರಂಥ ಒಳ್ಳೆಯ ಜಾಗವು ಬೇರೆ ಕಡೆಯಲ್ಲಿ ನಿಶ್ಚಯವಾಗಿಯೂ ತೀರ ಕ್ವಚಿತ್ತಾಗಿ ದೊರೆಯಬಹುದೆಂದು ಅವನ ಅಭಿಪ್ರಾಯವಾಯಿತು. ಆದರೆ ಅವನು ಲೋಕಕಲ್ಯಾಣಕ್ಕೆ ಇಷ್ಟ ಕಷ್ಟ ಪಟ್ಟರೂ ಅವನು ಗುಲಾಮರ ವ್ಯಾಪಾರವನ್ನು ಮುರಿಯುವದರಲ್ಲಿ ಮುಂದಾಳಾಗಿದ್ದನಾದ್ದರಿಂದ ಸರಕಾರದವರು ಅವನ ಹೊಸ ದೇಶಗಳನ್ನು ಶೋಧಿಸುವ ಪರವಾನಗಿಯನ್ನು ರದ್ದು ಮಾಡಿ ಬಿಟ್ಟರು. ಅದರಿಂದ ಅವನಿಗೆ ಕೆಲಸದಲ್ಲಿ ಬಹಳೇ ಅಡಚಣಿಯುಂಟಾಯಿತು. ಆದ್ದರಿಂದ ಅವನು ತನ್ನ ಹಡಗಕ್ಕೆ ಗಿರಾಕಿಗಳನ್ನು ಹುಡುಕುವದಕ್ಕಾಗಿ ಮುಂಬಯಿಗೆ ಬಂದನು. ಲಿವ್ಹಿಂಗ್ಸ್ಟನ್ನನಂಥ ಕಲ್ಲೆದೆಯ ಮನುಷ್ಯರು ತೀರ ಕ್ವಚಿತ್ತಾಗಿರುವರು. ಮುಂಬಯಿಯ ವರೆಗೆ ೫೫೦೦ ಮೈಲು ಪ್ರವಾಸ ಮಾಡತಕ್ಕದ್ದಿದ್ದು ಅವನ ಹಡಗದಲ್ಲಿ ಬರೇ ೧೪ ಟನ್ನ ಕಲ್ಲಿದ್ದಲಿಯಿತ್ತು. ಒಟ್ಟು ೪೫ ದಿವಸ ಪ್ರವಾಸ ಮಾಡಿದ ತರುವಾಯ ಅವನು ಮುಂಬಯಿ ಬಂದರಕ್ಕೆ ಸುಖರೂಪವಾಗಿ ಬಂದು ಮುಟ್ಟಿದನು.

ಕೆಲವು ದಿವಸ ಇಲ್ಲಿ ಉಳಿದ ತರುವಾಯ, ಅವನು ಇಂಗ್ಲಂಡಕ್ಕೆ ತರುಗಿ ಹೋದನು. ಆದರೆ ಅಲ್ಲಿ ಏಳು ವರ್ಷಗಳ ಹಿಂದಿನ ಸ್ಥಿತಿಗೂ ಇಂದಿನ ಸ್ಥಿತಿಗೂ ಮಹದಂತರವುಂಟಾಗಿತ್ತು! ಸರಕಾರೀ ನೌಕರಿಯನ್ನು ಸ್ವೀಕರಿಸಿದ್ದರಿಂದ ಹೊಸ ಪ್ರದೇಶವನ್ನು ಹುಡುಕಿ ತೆಗೆಯುವ ಅವನ ಮಹತ್ವಾಕಾಂ

ಷ್ಟೆಯು ಅರ್ಧಕ್ಕೇ ನಿಂತಿತ್ತು. ಅದರಂತೆ, ಗುಲಾಮರ ವ್ಯಾಪಾರದಿಂದ ಮ
ನವ ಜಾತಿಯ ಕೆಲವೊಂದು ಭಾಗಕ್ಕೆ ಉಂಟಾದ ಅತಿ ದುಃಖದಾಯಕ
ವಾದ ಹೇಯ ಸ್ಥಿತಿಯನ್ನು ನೋಡಿ ಅವನ ಮೈಮೇಲೆ ಮುಳ್ಳು ಬರುತ್ತಿತ್ತು
ಹಾಗು ಇಂಥ ನೀಚ ಸ್ಥಿತಿಯನ್ನು ನೀಗುವದಕ್ಕೆ ಯತ್ನಿಸಬೇಕೆಂದ
ಅವನು ಮನಃಪೂರ್ವಕವಾಗಿ ನಿರ್ಧಾರ ಮಾಡಿಕೊಂಡಿದ್ದನು. ಆಫ್ರಿಕ
ದೊಳಗಿನ ಗುಲಾಮರ ದೀನ ದಶೆಯನ್ನು ವರ್ಣಿಸುವಂಥ ಒಂದು ನವೀನ
ಪುಸ್ತಕವನ್ನು ಅವನು ಪ್ರಸಿದ್ಧ ಪಡಿಸಿದ ದಿನವೇ ಕೆಲವೊಂದು ವಿಲಕ್ಷಣ
ಯೋಗದಿಂದ ಆಫ್ರಿಕಾದೊಳಗಿನ ಸ್ವತಂತ್ರತೆಯ ಸಲುವಾಗಿ ಹೆಣಗುತ್ತಿದ್ದ
ಲಿಂಕನನೆಂಬ ಪ್ರಸಿದ್ಧ ಪುರುಷನ ಕೊಲೆಯಾದ ಸುದ್ದಿಯು ಇಂಗ್ಲಂಡಕ್ಕೆ
ಮುಟ್ಟಿತು. ಲಿವ್ಹಿಂಗ್ಸ್ಟನ್ನನಿಗೆ ಬ್ರಿಟಿಶ ಸರಕಾರವು, "ನಿನಗೆ ನಾವು ಯಾವ
ರೀತಿಯಿಂದ ಸಹಾಯ ಮಾಡಬೇಕೆಂದು" ಕೇಳಿದ್ದಕ್ಕೆ, ಅವನು "ಪೋರ್ತು
ಗೀಜರ ಸಂಗಡ ಒಡಂಬಡಿಕೆ ಮಾಡಿಕೊಂಡು, ಝಾಂಬಿಜೀ ಹಾಗು ಶಿರೆ
ನದಿಗಳ ಮಾರ್ಗವಾಗಿ ಮೇಲಿನ ಪ್ರಾಂತಗಳಿಗೆ ಹೋಗುವ ಅನುಕೂಲತೆ
ಯನ್ನು ಮಾಡಿಕೊಡಿರಿ," ಎಂದು ವಿನಂತಿ ಮಾಡಿಕೊಂಡನು. ಇಸವಿ ಸನ
೧೮೬೫ನೇ ಅಗಷ್ಟ ತಿಂಗಳಲ್ಲಿ ತನ್ನ ಹಡಗದ ಮಾರಾಟದ ನಿಕಾಲೆಯನ್ನು
ಮಾಡುವದಕ್ಕಾಗಿ ಲಿವ್ಹಿಂಗ್ಸ್ಟನ್ನನು ತಿರುಗಿ ಮುಂಬಯಿಗೆ ಬಂದನು. ಅಲ್ಲಿ
ಅವನಿಗೆ ಆಗಿನ ಮುಂಬಯಿ ಗವರ್ನರರಾದ ಸರ್ ಬಾರ್ಟಲ್ ಫ್ರೀಅರರ
ವರ ಭೆಟ್ಟಿಯಾಯಿತು. ಅವನು ಇಲ್ಲಿಗೆ ಬಂದ ತರುವಾಯ ತಾನು ಹಣವ
ನ್ನು ಇಟ್ಟಿದ್ದ ಬ್ಯಾಂಕು ದಿವಾಳಿ ತೆಗೆದ ಸುದ್ದಿಯು ಹತ್ತಿತು. ಮುಂದೆ ನಾಸಿ
ಕ ಮುಕ್ಕಾಮಿನಿಂದ ೯ಜನ ಸ್ವಯಂ ಸೇವಕರನ್ನು ಸಂಗಡ ಕರೆದುಕೊಂ
ಡನು. ಆದರೆ ಮುಂದಿನ ಪ್ರವಾಸದಲ್ಲಿ ಲಿವ್ಹಿಂಗ್ಸ್ಟನ್ನನಿಗೆ ಅವರ ಉಪಯೋ
ಗವಾದಂತೆ ಕಂಡು ಬರಲಿಲ್ಲ. ತಿರುಗಿ ಹೋಗುವಾಗ ಅವನು ತನ್ನ ಸಂಗಡ
೬ ಒಂಟೆಗಳನ್ನೂ, ೨ ಕೋಣಗಳನ್ನೂ, ಬೇರೆ ಕೆಲವು ಪ್ರಾಣಿಗಳನ್ನೂ
ಆಫ್ರಿಕದ ಹವೆಯಲ್ಲಿ ಬೆಳೆಸುವದಕ್ಕಾಗಿ ತೆಗೆದುಕೊಂಡು ಹೋಗಿದ್ದನು.

ಲಿವ್ಹಿಂಗ್ಸ್ಟನ್ನನ ಕಟ್ಟಕಡೆಯ ಹಾಗೂ ಭಯಂಕರವಾದ ಪ್ರವಾ
ಸವು ೧೮೬೬ನೇ ಇಸವಿಯಲ್ಲಿ ಆರಂಭವಾಯಿತು. ನೈಲನದಿಯ ಉಗಮ
ವನ್ನು ಗೊತ್ತುಹಚ್ಚುವದೇ ಈ ಪ್ರವಾಸದ ಧ್ಯೇಯವಾಗಿತ್ತು. ಆದರೆ ಈ
ಉದ್ದೇಶವನ್ನು ಕೊನೆಗಾಣಿಸುವದಕ್ಕಿಂತಲೂ ಪೂರ್ವದಲ್ಲಿಯೇ ನಿಷ್ಕರುಣಿ

ಾದ ದುರ್ದೈವವು ಲೋಕೋಪಕಾರಿಯಾದ ಲಿವ್ಹಿಂಗ್ಸ್ಟನ್ನನ ಪ್ರಾಣವ
ನ್ನು ಅಪಹರಿಸಿಬಿಟ್ಟಿತು! ನಿರ್ಜನವಾದ ಅರಣ್ಯ ಪ್ರದೇಶದಲ್ಲಿ ಜ್ವರದಿಂದ
ೀನೆಬಿದ್ದಾಗ ಅವನ ಔಷಧದ ಪೆಟ್ಟಿಗೆಯು ಕಳೆದು ಹೋಯಿತು. ಕೆಲವು
ಂಗಳುಗಳ ವರೆಗಂತೂ ಈ ಶೋಧಕನ ಸುದ್ದಿಯೇ ಇದ್ದಿಲ್ಲ. ಆ
ೀಲೆ ಅವನನ್ನು ಹುಡುಕುವದಕ್ಕಾಗಿ ಜನರನ್ನು ಕಳುಹಿಸಬೇಕೆಂದು
ಹು ಜನರು ಸರಕಾರದ ಸಂಗಡ ಆಗ್ರಹ ಹಿಡಿದರು. ಇ. ಸ. ೧೮೭೨ರ
ೀ ಅಕ್ಟೋಬರ ೨೮ ನೇ ತಾರೀಖಿನ ದಿವಸ "ಸರ್ ಹೆನ್ರಿ ಸ್ಟ್ಯಾನಲೆ"
ಂಬವನು ಲಿವ್ಹಿಂಗ್ಸ್ಟನ್ನನನ್ನು ಹುಡುಕುವದಕ್ಕಾಗಿ ಹೊರಟನು. ಅವ
ು ಶಕ್ತಿಯಿಲ್ಲದೆ ಬರೇ ಚರ್ಮಾಚ್ಛಾದಿತವಾದ ಅಸ್ಥಿಪಂಜರವೊಂದೇ ಉಳಿ
ದ್ದು, ಒಂದು ಕಂದರದಲ್ಲಿ ಕುಳಿತ್ತಿದ್ದ ಲಿವ್ಹಿಂಗ್ಸ್ಟನ್ನನನ್ನು ನೋಡಿದನು.
ಗ ಸ್ಟ್ಯಾನಲೆಯು ಅವನಿಗೆ ಸ್ವದೇಶಕ್ಕೆ ತಿರುಗಿ ಹೋಗಬೇಕೆಂದು ಬಹಳ
ೀಳಿಕೊಂಡನು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ.
ವ್ಹಿಂಗ್ಸ್ಟನ್ನನು ನಾಸಿಕದಿಂದ ಕರೆದುಕೊಂಡು ಬಂದಿದ್ದ ತನ್ನ ಜನರ
ನ್ನು ಕೂಡಿಕೊಂಡು ಹಾಗೆಯೇ ಮುಂದಕ್ಕೆ ಸಾಗಿದನು; ಸ್ಟ್ಯಾನಲೆಯು
ಸ್ವದೇಶಕ್ಕೆ ಹೊರಟನು. ಲಿವ್ಹಿಂಗ್ಸ್ಟನ್ನನು ಈ ಸಾರೆಯ ಪ್ರವಾಸದಲ್ಲಿ
ಾಂಗಾನಿಕಾ ಸರೋವರದ ಸುತ್ತಲಿನ ಪ್ರದೇಶದ ವಿಷಯವಾಗಿ ಬಹಳ
ಮಾಹಿತಿಯನ್ನು ದೊರಕಿಸಿದನು. ಕಡೆಗೆ ಶರೀರದ ಅಸ್ವಸ್ಥತೆಯ ಮೂಲ
ವಾಗಿ (Ilala) ಇಲಾಲಾ ಮುಕ್ಕಾಮಿನಲ್ಲಿ ಅವನು ವಿಶ್ರಾಂತಿಯು
ಲುವಾಗಿ ಒಬ್ಬನೇ ಉಳಿದುಕೊಂಡನು. ಅವನು ಈ ರೀತಿಯಾಗಿ
ಂಟಿಗನಾಗಿದ್ದಾಗ ೧೮೭೩ನೇ ಇಸವಿಯ ಮೇ ತಿಂಗಳ ೧ನೇ
ಾರೀಖಿನಲ್ಲಿ ಮೃತ್ಯುವು ಅವನನ್ನು ಆಕ್ರಮಿಸಿತು. ಅವನು ಆ
ಸಮಯದಲ್ಲಿ ಅಸ್ಪಷ್ಟಭಾಷೆಯಲ್ಲಿ ಬರೆದಿದ್ದ ಆ ಕಾಲದ ಅಲ್ಪಸ್ವಲ್ಪ
ಟಿಂಗತಿಗಳು ಉಪಲಬ್ಧವಾಗಿರುವವು. ಅವನ ನೌಕರ ಜನರು ಬಂದು
ನೋಡುವಷ್ಟರಲ್ಲಿ ಲಿವ್ಹಿಂಗ್ಸ್ಟನ್ನನು ಪೊಳಕಾಲೂರಿ ದೇವರಿಗೆ ನಮ
ಸ್ಕಾರಮಾಡುವ ಸ್ಥಿತಿಯಲ್ಲಿ ಸತ್ತಿದ್ದನು. ಅವನ ಆಫ್ರಿಕದ ಸೇವಕರು
ಅವನ ಶವವನ್ನು ಕಳುಹಿಸಿದ ರೀತಿಯನ್ನು ನೋಡಿದರೆ, ಲಿವ್ಹಿಂಗ್ಸ್ಟನ್ನ
ನು ಆಫ್ರಿಕದ ಜನರಿಗೆ ಎಷ್ಟು ಪ್ರಿಯಕರನಾಗಿದ್ದನೆಂಬದು ಗೊತ್ತಾಗು
ವದು. ಆಫ್ರಿಕನ್ನರು ಯಾವತ್ತು ಬಿಳೀ ಜನರಲ್ಲಿ ಡಾ. ಲಿವ್ಹಿಂಗ್ಸ್ಟನ್ನನ

ವಿಷಯವಾಗಿ ಮಾತ್ರ ಅತಿಶಯ ಪೂಜ್ಯಬುದ್ಧಿಯುಳ್ಳವರಾಗಿದ್ದರು. ಆದರೆ
ಅವರು ಅವನ ಶವವು ಸಮುದ್ರದ ದಂಡಿಗೆ ಮುಟ್ಟುವವರೆಗೆ ಕಾಡು ಕ
ಜನರು ಏನಾದರೂ ಅಡ್ಡಿ ಮಾಡಬಹುದೆಂದು ತಿಳಿದು ಅದನ್ನು ಅರಳಿ
ಅಂಡಿಗೆಗಳ ಸಂಗಡ ತೆಗೆದುಕೊಂಡು ಬಂದಿದ್ದರು. ಹಾಗೂ ಅದನ
ಗಿಅಳನೇ ಇಸವಿಯ ಫೆಬ್ರುವರಿ ಗಿಇನೇ ಶಾರೀಖಿನ ದಿವಸ ಬ್ಯಾ
ಮೊಯಿಮೊ (Bagamoio) ಶಹರದಲ್ಲಿನ್ನ ಬ್ರಿಟಿಶ್ ರೆಸಿಡೆಂಟನ ವಶ
ಒಪ್ಪಿಸಿದರು. ಸ್ವದೇಶಾಭಿವೃದ್ಧಿಯ ಸಲುವಾಗಿ ಆತ್ಮಸಮರ್ಪಣ ಮಾ
ದಂಥ ಧೀರಪುರುಷರ ಕೀರ್ತಿಯು ಜಗತ್ತಿನಲ್ಲಿ ಬೆಳಗುತ್ತಿರುವ ವರೆಗೆ ಹ
ಲಿವ್ಹಿಂಗ್ಸ್ಟನ್ನನ ಹೆಸರು ಅಕ್ಷಯವಾಗಿಯೂ ಪೂಜ್ಯವಾಗಿಯೂ ಇರು
ದೆಂಬುದರಲ್ಲಿ ಸಂದೇಹವಿಲ್ಲ.

ಅಲಂಕಾರವರ್ಣನೆ-ಅಧಿಕಾಲಂಕಾರವು.

(ಕಳೆದ ಸಂಚಿಕೆಯ ಒಸಿಯ ಪುಟದಿಂದ ಮುಂದೆ ನಾಗಿದ್ದು.)

ಕಂದ|| ಮಾಣದಲೆ ನಿನ್ನ ಗುಣಗಳು |
ಕಾಣಿಸಲಾಗುವವೆನಿತು ವಾಗ್ಬ್ರಹ್ಮವಿಭೈ ||

ಇಲ್ಲಿ 'ಅವು ನಿನ್ನ ಗುಣಗಳು' ಎಂದು ಆಧೇಯದ ವಿಶಾಲತ್ವವನ್ನ
ಹೇಳಿ, ಮುಂದೆ 'ವಾಗ್ಬ್ರಹ್ಮವು ಬಹಳೇ ವಿಸ್ತಾರವಾಗಿದೆ, ಎಂದು ವರ್ಣ
ಸಿದಂತಾಯಿತು. ಮತ್ತೆ ಉದಾ:—

ಭಾ|| ಮೂರು ಲೋಕದ ಜಠರವಿದು ವಿ |
ಸ್ತಾರವಲ್ಲವೆ? ನೈಪನೆ ಅಳೆಯಲು |
ಬಾರದೀ ಜಸವೈದೆ ಹಿಡಿಸುವದಿದರೊಳಗೆ ನಿನ್ನ ||

ಇಲ್ಲಿ 'ಅಳೆಯಲು ಬಾರದ ಜಸವು' ಎಂದು ಆಧೇಯದ ವಿಶಾಲ
ವನ್ನು ಹೇಳಿ, ಮುಂದೆ 'ಇದರೊಳಗೆ ಹಿಡಿಸುವದು' ಎಂದು ಹೇಳಿದ್ದರಿ
ಆಧಾರರೂಪವಾದ ಮೂರು ಲೋಕದ ಜಠರವು ಬಹಳೇ ವಿಸ್ತಾರವಾಗಿ
ಎಂದು ವರ್ಣಿಸಿದಂತಾಯಿತು.

ಮೇಲಿನವೆರಡು ಉದಾಹರಣಗಳಲ್ಲಿ 'ವಾಗ್ಬ್ರಹ್ಮವು ಇದು ಎನಿ
'ಜಠರವಿದು ವಿಸ್ತಾರವಲ್ಲವೆ?' ಎಂದು ಆಧಾರಗಳ ಪ್ರಶಂಸೆಯು ಮಾಡ

ಬದೆ. ಇವುಗಳ ಪ್ರಶಂಸೆಯಾದರೂ ಆಧೇಯಗಳಾದ ಗುಣ-ಯಶಸ್ಸು
ಗಳ ಪ್ರಶಂಸೆಯಲ್ಲಿಯೇ ಪರ್ಯವಸಾನವಾಗುವದು.

---

೪೨. ಅಲ್ಪಾಲಂಕಾರವು. ಲಕ್ಷಣ:— ಸೂಕ್ಷ್ಮವಾದ ಆಧೇಯದಿಂದ
ಆಧಾರದ ಸೂಕ್ಷ್ಮತ್ವವು ಗಮ್ಯವಾಗುವಂತೆ ವರ್ಣಿಸಿದಲ್ಲಿ ಈ ಅಲಂಕಾರ
ವಾಗುವದು. ಉದಾ:—

ಕಂದ॥ ನಿನ್ನಯ ಕರದುಂಗುರವಿದು ।
ಚಕ್ಕನೆ ಜಪಮಾಲೆಯಂತೆ ತೋರುವುದೀಗಳ್ ॥

ಇಲ್ಲಿ 'ಉಂಗುರವು ಬೆರಳಿನಲ್ಲಿ ಹಾಕತಕ್ಕದ್ದಾದ್ದರಿಂದ ಕರಕ್ಕಿಂತ
ಅತಿಸೂಕ್ಷ್ಮವಾದದ್ದು. 'ಇಂಥ ಉಂಗುರವು ಕೈಯಲ್ಲಿ ಬಳಿಯುಂತೆ ಹಾಕ
ಲಿಟ್ಟಿದ್ದಾಗಿ ಜಪಮಾಲೆಯಂತೆ ತೋರುವದು' ಎಂದು ವರ್ಣಿಸಿದ್ದರಿಂದ
ಈಗ ಆಧಾರರೂಪವಾದ ಕರವು ವಿರಹದಿಂದ ಅತಿ ಸೂಕ್ಷ್ಮವಾಗಿರುವ
ಎಂಬ ಅರ್ಥವು ಗಮ್ಯವಾಗುವದು. ಮತ್ತೊ ಉದಾ:—

ಭಾ॥ ನಡುವಿನಿಂ ಬಹು ಸೂಕ್ಷ್ಮವಾಗಿಹ ।
ಬಡಮೃಣಾಲದ ಸೂತ್ರವೀಗಲು ।
ಹಿಡಿಸದೌ ಲೋಲಾಕ್ಷಿ ಈಸ್ತನವೆರಡುಗಳ ನಡುವೆ ॥

ಇಲ್ಲಿ 'ನಡುವಿಗಿಂತಲು ಬಹು ಸೂಕ್ಷ್ಮವಾಗಿರುವ ಮೃಣಾಲದ ಎಳೆ
ಯು' ಎಂದು ಆಧೇಯದ ಸೂಕ್ಷ್ಮತ್ವವನ್ನು ವರ್ಣಿಸಿ ಮುಂದೆ 'ಸ್ತನವೆರ
ಡುಗಳ ನಡುವೆ ಹಿಡಿಸದೌ' ಎಂದು ಹೇಳಿದ್ದರಿಂದ ಆಧಾರಭೂತವಾದ ಸ್ತ
ನಾವಕಾಶವು ಬಹಳೇ ಸೂಕ್ಷ್ಮವಾಗಿದೆ, ಎಂದು ವರ್ಣಿಸಿದಂತಾಯಿತು.
(ಉತ್ತಮ ಸ್ತ್ರೀಯರ ನಡುವು ಬಹು ಸೂಕ್ಷ್ಮವಾಗಿರುವದು ಕಾರಣ ಅದ
ನ್ನು ಇಲ್ಲಿ ಸಾದೃಶ್ಯವಾಗಿ ಗ್ರಹಿಸಿದ್ದಾನೆ)

---

೪೩. ಅನ್ಯೋನ್ಯಾಲಂಕಾರವು. ಲಕ್ಷಣ:— ಯಾವ ಕಡೆಯಲ್ಲಿ ಪರ
ಸ್ಪರವಾಗಿ ಉಪಕಾರತ್ವವು ತೋರುವದೋ ಅಲ್ಲಿ ಈ ಅಲಂಕಾರವಾಗು
ವದು. ಉದಾ:—

ಕಂದ॥ ಶೋಭಿಸುವದಿಗುಳು ಶಚಿಯಿಂ ।
ಶೋಭಿಸುವನದಿರುಳಿನಿಂದೆ ನಭದೊಳು ಶಚಿಯುಂ ॥

ಇಲ್ಲಿ ಶಶಿ-ಇರುಳುಗಳಲ್ಲಿ ಪರಸ್ಪರವಾಗಿ ಶೋಭನ ಕ್ರಿಯೆಗೆ ಉಪಕಾರ ಭಾವವು ತೋರುವದು. ಮತ್ತೆ ಉದಾ:—

ಕಂದ|| ಬಿಡಿ ಬಿಡಿಸಿ ಬೆರಳು ಪಥಿಕನು ।
ಕಡೆಗಣ್ಣಿಂ ಮೊಗವ ನೋಡಿ ಕುಡಿಯುತಲಿರಲು ॥
ತಡೆ ತಡೆದು ಕರದೊಳಾತಗೆ ।
ಬಿಡುವಳು ಬಡವಾಗಿ ನೀರಧಾರೆಯನವಳು ॥

ಇಲ್ಲಿ ಬೆರಳು ಬಿಡಿಸಿ ನೀರು ಕುಡಿಯುವದರಿಂದ ಬಹಳ ವೇಳೆಯ ವರೆಗೆ ಅವಳ ಮೊಗವನ್ನು ನೋಡಬೇಕೆಂಬ ಪಥಿಕನ ಸ್ವಹಿತವೂ, ನೀರಧಾರೆಯನ್ನು ಸಣ್ಣಗಿ ಮಾಡುವದರಿಂದ ಬಹಳ ವೇಳೆಯವರೆಗೆ ಅವನ ಮೊಗವನ್ನು ನೋಡಬೇಕೆಂಬ ನೀರು ಕೊಡುವವಳ ಸ್ವಹಿತವೂ ತೋರುತ್ತಿದ್ದರೂ ಪರಸ್ಪರೋಪಕಾರ ಭಾವವಾದರೂ ಇದ್ದೇ ಇರುವದು.

---

೪೪. ವಿಶೇಷಾಲಂಕಾರವು. ಲಕ್ಷಣ:— ಆಧೇಯವು ಪ್ರಸಿದ್ಧವಾದ ಆಧಾರವನ್ನು ಬಿಟ್ಟು ಬೇರೊತ್ತಟ್ಟಿಗೆ ಇರುವದೆಂದು ವರ್ಣಿಸಿದರೆ ಈ ಅಲಂಕಾರವಾಗುವದು. ಉದಾ:—

ಕಂದ|| ಮುಳುಗಿರೆ ಸೂರ್ಯನು ತಮವನು ।
ಕಳೆವವು ದೀಪಸ್ಥ ತತ್ಕರಂಗಳು ಜಗದೆ ॥

ಇಲ್ಲಿ ಕಿರಣಗಳಿಗೆ ಸೂರ್ಯನು ಪ್ರಸಿದ್ಧವಾದ ಆಧಾರವಾಗಿರುತ್ತಿದ್ದರೂ ಬೇರೆ ಕಡೆಯಲ್ಲಿ (ದೀಪದಲ್ಲಿ) ಅವುಗಳ ಅವಸ್ಥಿತಿಯು ಉಕ್ತವಾಗಿದೆ. ಮತ್ತೆ ಉದಾ:—

ಭಾ॥ ಜಲದೆ ಕಮಲವದಿರದೆ ಕಮಲಳು ।
ವಲಯಗಳು ಸಲೆ ಕನಕಲತೆಯಲಿ ।
ತೊಳಗುವವು ಸುಕುಮಾರತರ ಸೌಭಾಗ್ಯಲಹರಿಯಲಿ ॥

ಇಲ್ಲಿ ಕಮಲ ಕುವಲಯಗಳಿಗೆ ಜಲವು ಪ್ರಸಿದ್ಧವಾದ ಆಧಾರವಾಗಿರುತ್ತಿದ್ದರೂ ಬೇರೆ ಕಡೆ (ಕನಕಲತೆ)ಯಲ್ಲಿ ಅವುಗಳ ಅವಸ್ಥಿತಿಯು ಉಕ್ತವಾಗಿದೆ. (ಉತ್ತಮ ಸ್ತ್ರೀಯರ ಮುಖನೇತ್ರಗಳಿಗೆ ಕಮಲ—ಕುವಲಯಗಳ ಸಾದೃಶ್ಯಕೊಡುವದು.

ಇನ್ನು ಕೆಲವು ಕಡೆಯಲ್ಲಿ ಪ್ರಸಿದ್ಧವಾದ ಆಧಾರವಿಲ್ಲದವುಗಳಿಗೆ ಬೇರೆ ಆಧಾರಗಳನ್ನು ಹೆಳದಲೆಯೇ ಬಹು ಚಿರಕಾಲವಿರುವವೆಂದು ವರ್ಣಿಸುವರು. ಹ್ಯಾಗಂದರೆ:—

ಭಾ॥ ಸುರರ ಲೋಕವ ನೈದಿರಲು ಬಹು ।
ಚಿರದಿನವು ರವಿಸುವದದಾವನ ।
ಗಿರವು ಜನರನು ವಂದ್ಯನವನಲ್ಲವೆ? ಸಮಸ್ತರಿಗೆ ॥

ಇಲ್ಲಿ ಪ್ರಸಿದ್ಧವಾದ ಆಧಾರಭೂತರಾದ ಕವಿಗಳು ಇಲ್ಲದಿದ್ದರೂ ಅವರ ನುಡಿಗಳಿಗೆ ಬೇರೆ ಆಧಾರವನ್ನು ಹೇಳದಲೆಯೇ ಬಹು ದಿವಸವಿರುವೆಂಬ ವರ್ಣನೆಯದೆ.

೨. ಒಂದೇ ವಸ್ತುವು ಅನೇಕ ಕಡೆಗಳಲ್ಲಿ ಇರುವದೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ಪೊರಗೊಳಗು ಹಿಂದೆ ಮುಂದೆಯು ।
ಚರಿಸುತ ನಿಂತಿಹಳು ಸರ್ವದಿಕ್ಕುಗಳಲ್ಲಿ ॥

ವಿರಹಿಗೆ ಕಾಮಿನಿಯು ಎಲ್ಲ ಕಡೆಗಳಲ್ಲಿ ತೋರುವದು ಸ್ವಾಭಾವಿಕವು. ಕಾರಣ ಒಂದೇ ವಸ್ತುವು ಅನೇಕ ಕಡೆಗಳಲ್ಲಿದ್ದಂತಾಯಿತು. ಮತ್ತೆ ಉದಾ:—

ಕಂದ॥ ಅಗಲದೆ ಮನದೊಳಗಿರುತಲೆ ।
ಜಗದೊಳು ಕಾಣುವಿಯೊ ನೀನಿದೆಲ್ಲಾ ಕಡೆಗೆ ॥
ಮಿಗಿಲಾದ ತಾಪದಿಂದಲೆ ।
ಮಗನೇ ತಿಳಿಯುವದು ನೀನು ಗಮಿಸಿದಿಯೆಂದು ॥

ಮೃತನಾದ ಪುತ್ರನ ಮೋಹದಿಂದ ಶೋಕಮಾಡುವವನಿಗೆ ಅವನು ಎಲ್ಲ ಕಡೆಗಳಲ್ಲಿ ನಿಂತಂತೆ ಕಾಣುವದು ಸ್ವಾಭಾವಿಕವು. ಕಾರಣ ಒಂದೇ ವಸ್ತುವು ಅನೇಕ ಕಡೆಗಳಲ್ಲಿ ಇದ್ದಂತಾಯಿತು.

೩. ಒಂದನ್ನು ಮಾಡಲುದ್ಯೋಗಿಸಿರಲು ಅದರಿಂದ ಅಕಸ್ಮಾತ್ತಾದ ಬೇರೊಂದು ವಸ್ತುವಿನ ಸೃಷ್ಟಿಯಾಯಿತೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ ॥ ದೊರಕಿತು ನಿಜದಿಂ ಸುರತರು ।
ನೆರೆ ನಿನ್ನಯ ಮೊಗವ ನೋಡಲೀ ಸಮಯದಲಿ ॥

ಇದು ರಾಜದರ್ಶನಕ್ಕೆ ಹೋದಾಗ್ಗೆ ಯಾವನೋ ಒಬ್ಬ ಯಾಚಕನು ಅಡಿದ ವಾಕ್ಯವು. ಇಲ್ಲಿ ರಾಜದರ್ಶನದ ಉದ್ಯೋಗದಿಂದ ಅಶಕ್ಯವಾದ ಕಲ್ಪವೃಕ್ಷದ ಸಾಧನವಾಯಿತೆಂಬ ವರ್ಣನೆಯುದೆ. ಮತ್ತೆ ಉದಾ:—

ಭಾ. ॥ ಅಧಿಕವಿದ್ಯನ ವರಪರಮತೇ।
ಜೋಧಿಕನ ವರರೂಪವುಳ್ಳನ।
ಬುಧಕದಂಬಕೆ ಕಲ್ಪತರುವಿನ ತೆರದಲಿರ್ಪವನ ॥
ಈ ಧರಣಿಯಲಿ ನಿನ್ನ ಸೃಜಿಸಿದ।
ವಿಧಿಯು ನಿಜವಾಗೀಗನೂತನ।
ದಾಧಿಸುಣ-ರವಿ-ಕಾಮು-ಕರ್ಣರನೈದೆ ಸೃಜಿಸಿದನೈ ॥

ಇಲ್ಲಿ ರಾಜನನ್ನು ನಿರ್ಮಿಸುವ ಬ್ರಹ್ಮನ ಉದ್ಯೋಗದಿಂದ ಅಶಕ್ಯವಾದ ಗುರು-ಕಾಮು-ಕರ್ಣರೇ ಏಕತ್ರವಾಗಿರುವುಳ್ಳ ಬೇರೊಂದು ವಸ್ತುವಿನ ಸೃಷ್ಟಿಯಾಯಿತೆಂಬ ವರ್ಣನೆಯುದೆ. ಇದು ಮೇಲಿನ ಮೂರು ತರಗಿಂತ ಬೇರೆ ತರದ್ದಾಗಿದೆ.

---

೪೫. ವ್ಯಾಘಾತಾಲಂಕಾರವು. ಲಕ್ಷಣ:—೧. ಲೋಕದಲ್ಲಿ ಯಾವದು ಏತಕ್ಕೆ ಸಾಧನವಾಗಿರುವದೋ ಅದನ್ನು ಕೆಲವೊಬ್ಬನು ವಿರುದ್ಧ ಕಾರ್ಯಕ್ಕೆ ಸಾಧನವಾಗಿ ಉಪಯೋಗಿಸುವನೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಏತರಿನೀಯಖಿಳ ಜಗಂ।
ಪ್ರೀತಿಪುದದರಿಂದೆ ಕಾವನುರೆ ಘಾತಿಸುವಂ ॥

ಅರ್ಥ—ಯಾವ ತರುಣಿಯರ ಕಟಾಕ್ಷದಿಂದ ಎಲ್ಲ ಜಗವು ಸಂತೋಷವನ್ನು ಹೊಂದುವದೋ ಅದರಿಂದಲೇ ಕಾಮನು ಜನರನ್ನು ಬಾಧಿಪಸುವನು, ಎಂದು ಹೇಳಿದ್ದರಿಂದ ಜನರ ಸಂತೋಷಕ್ಕೆ ಸಾಧನವಾದ ಕಟಾಕ್ಷವು ಕಾಮನಿಂದ ವಿರುದ್ಧ ಕಾರ್ಯಕ್ಕೆ ಸಾಧನವಾಗಿ ಉಪಯೋಗಿಸಲ್ಪಟ್ಟಿಂತಾಯಿತು.

ಒಬ್ಬನು ಒಂದಕ್ಕೆ ಸಾಧನವಾಗಿ ಉಪಯೋಗಿಸಿದ್ದನ್ನು ಪ್ರತಿಕ್ಷೇಪಯಾದ ಮತ್ತೊಬ್ಬನು ಅದನ್ನೇ ವಿರುದ್ಧ ಕಾರ್ಯಕ್ಕೆ ಸಾಧನವಾಗಿ ಉಪಯೋಗಿಸಿದನೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಹೇಗದರೆ:—

ಕಂದ ॥ ಕಣ್ಣಿಂದಹಿಸಿದ ಕಾಮನ ।
ಕಣ್ಣಿಂದಲದಾರು ಬದುಕಿಸಿರುವರೊ ಜಗದೀ ॥
ಬಣ್ಣಿಪೆನವರಂ ನೆರೆವು ।
ಕ್ಕಣ್ಣನ ಜಯಿಸಿರುವ ಪಾವುಲೋಚನೆಯರನು ॥

ಇಲ್ಲಿ ಕಣ್ಣನ್ನು ಶಿವನು ಕಾಮನನ್ನು ದಹಿಸಲಿಕ್ಕೆ ಉಪಯೋಗಿಸಿರಲು ಪ್ರತಿಕಕ್ಷಿಗಳಾದ ಸ್ತ್ರೀಯರು ಅದನ್ನೇ ವಿರುದ್ಧವಾಗಿ ಬದುಕಿಸುವ ಕಾರ್ಯಕ್ಕೆ ಉಪಯೋಗಿಸಿದರೆಂದು ಹೇಳಿದೆ.

೨. ಯಾವ ಕಡೆಯಲ್ಲಿ ಕಾರ್ಯವನ್ನು ವಿರೋಧಿಸುವ ಕ್ರಿಯೆಯು ಸೌಕರ್ಯದಿಂದ ನಿಬದ್ಧವಾಗಿರುವದೋ, ಅಂದರೆ ಒಂದು ಕಾರ್ಯದ ಕಾರಣವೇ ಅದರ ವಿರುದ್ಧ ಕಾರ್ಯಕ್ಕೆ ಕಾರಣವಾಗಿ ಉಪಯೋಗಿಸಿಕೊಳ್ಳಲ್ಪಡುದೋ ಅಲ್ಲಿಯೂ ಈ ಅಲಂಕಾರವಾಗುವದು. ಹೇಗಂದರೆ:—

ಕಂದ ॥ ತಕ್ಕುದು ಬಿಡದಿರುವುದು ಗಡ! ।
ಚಿಕ್ಕವನೆಂದೆನ್ನಮೇಲಿನಕ್ಕರವಿರಲುಂ ॥

ದಿಗ್ವಿಜಯಕ್ಕೆ ಹೊರಟ ಅರಸನು ಯುವರಾಜನಿಗೆ 'ನೀನು ಚಿಕ್ಕವನು ಸಂಗಡ ಬರಬೇಡ, ಎಂದು ಅನ್ನಲು ಯುವರಾಜನು ತಿರುಗಿ ಆಡಿದ ವಾಕ್ಯವು ಮೇಲಿನ ಪದ್ಯದಲ್ಲಿ ಹೇಳಲ್ಪಟ್ಟಿದೆ. ಅಂದರೆ ಅರಸನು ಯಾವ ಚಿಕ್ಕತನದ ಮೂಲಕವಾಗಿ ತನ್ನ ಸಂಗಡ ಬರಬೇಡೆಂದನೋ ಆ ಚಿಕ್ಕತನವನ್ನೇ ಯುವರಾಜನು ಸಂಗಡ ಒಯ್ಯಲಿಕ್ಕೆ ಕಾರಣವಾಗಿ ಉಪಯೋಗಿಸಿಕೊಂಡಿದ್ದಾನೆ. ಮತ್ತೆ ಉದಾ:—

ಕಂದ ॥ ಕೊಡನರ್ಥವನಾ ಲೋಭಿಯು ।
ಬಡುವೆನು ಬಡತನವನೆಂಬ ಬಹುಸಂಶಯದಿಂ ॥
ಕೊಡುವನು ದಾತನು ಧನವನು ।
ಬಡವನು ತನಗೆಂಬರೆಂಬ ಬಹುಭೀತಿಯಲಿ ॥

ಇಲ್ಲಿ 'ಬಡುವೆನು ಬಡತನವನು' 'ಬಡವನು ತನಗೆಂಬರು' ಎಂಬ ವಾಕ್ಯಗಳಿಂದ ಉಭಯತರಿಗೂ ಬಡತನ ಬರುವ ಭೀತಿಯು ತೋರುವದು. ಕಾರಣ ಲೋಭಿಯು ಯಾವ ಬಡತನ ಬರುವ ಭೀತಿಯನ್ನು ಧನವನ್ನು ಪರರಿಗೆ ಕೊಡಬಾರದೆಂಬದಕ್ಕೆ ಉಪಯೋಗಿಸಿಕೊಂಡನೋ ಅದನ್ನೇ ಕವಿಯು ಇಲ್ಲಿ ವಿರುದ್ಧ ಕಾರ್ಯವಾದ ಕೊಡುವ ಕೆಲಸಕ್ಕೆ ಉಪಯೋಗಿಸಿಕೊಂಡಿದ್ದಾನೆ.

೪೬. ಕಾರಣಮಾಲಾಲಂಕಾರವು. ಲಕ್ಷಣ :—ಪೂರ್ವಪೂರ್ವಗೆಳೆಗೆ ಕಾರಣಭೂತಗಳಾದ ಉತ್ತರೋತ್ತರವಸ್ತುಗಳ ರಚನೆಯಿಂದಾಗಲಿ ಉತ್ತರೋತ್ತರಗಳಿಗೆ ಕಾರಣಭೂತಗಳಾದ ಪೂರ್ವಪೂರ್ವ ವಸ್ತುಗಳ ರಚನೆಯಿಂದಾಗಲಿ ಈ ಅಲಂಕಾರವಾಗುವದು. ಉದಾ :—

ಕಂದ ॥ ಸಿರಿಯನು ನಯದಿಂದ ತ್ಯಾಗವು।
ಸಿರಿಯಿಂದಲೆ ಜಸವದ್ಯೈದೆ ತ್ಯಾಗದೆ ಬಕ್ಕುಂ ॥

ಇಲ್ಲಿ ಸಿರಿ ಮೊದಲಾದ ಪೂರ್ವ ಪೂರ್ವಗಳಿಗೆ ನಯ ಮೊದಲಾದ ಉತ್ತರೋತ್ತರಗಳು ಕಾರಣಭೂತಗಳಾಗಿವೆ. ಮತ್ತೆ ಉದಾ :—

ಭಾ. ॥ ಭೂಪಕೇಳ್ದಾನವನು ಕೊಡದಲೆ।
ಪಾಪಿ ದಾರಿದ್ರ್ಯವನು ಬಡತನ।
ತಾಪದಿಂ ಪಾಪವನು ಪಾಪದೆ ನರಕವೈದುವನು ॥

ಇಲ್ಲಿ ದಾರಿದ್ರ್ಯ-ಪಾಪ-ನರಕ ಮೊದಲಾದ ಉತ್ತರೋತ್ತರಗಳಿಗೆ 'ದಾನಕೊಡದಿರುವದು, ಬಡತನತಾಪ, ಪಾಪ' ಮೊದಲಾದ ಪೂರ್ವ ಪೂರ್ವಗಳು ಕಾರಣಗಳಾಗಿವೆ.

---

೪೭. ಏಕಾವಲ್ಯಲಂಕಾರವು. ಲಕ್ಷಣ:—ಪೂರ್ವ ಪೂರ್ವವಸ್ತುಗಳಿಗೆ ಉತ್ತರೋತ್ತರಗಳನ್ನು ವಿಶೇಷಣಗಳನ್ನಾಗಿಯಾಗಲಿ ಉತ್ತರೋತ್ತರ ವಸ್ತುಗಳಿಗೆ ಪೂರ್ವ ಪೂರ್ವಗಳನ್ನು ವಿಶೇಷಣಗಳನ್ನಾಗಿಯಾಗಲಿ ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ :—

ಕಂದ ॥ ತವ ನಯನ ಕವಿಯವರಿಪುವು।
ಕವಿಗಳು ವರಭುಜವ ಭುಜವು ಮೊಳಕಾಲುಗಳಂ ॥

ಅರ್ಥ–ನಿನ್ನ ಕಣ್ಣು ಕವಿಯನ್ನು ಮುಟ್ಟುವಂಥವು; ಕವಿಗಳು ಭುಜಗಳನ್ನು ಮುಟ್ಟುವಂಥವು; ಭುಜಗಳು ಮೊಳಕಾಲುಗಳನ್ನು ಮುಟ್ಟುವಂಥವು, ಎಂದು ಹೇಳಿದೆ. ಕಾರಣ ಇಲ್ಲಿ ಪೂರ್ವ ಪೂರ್ವಗಳಿಗೆ ಉತ್ತರೋತ್ತರಗಳು ವಿಶೇಷಣಗಳಾಗಿವೆ. ಮತ್ತೆ ಉದಾ :—

(ಮುಂದೆನಾಗುವದು.)

ಅಂಕಲೀಲೆಯು.

(೧). '೩೬' ಈ ಸಂಖ್ಯೆಯ ಚಮತ್ಕಾರವಾದ ಗುಣವು:—

'೩೬' ಈ ಸಂಖ್ಯೆಯು ೬ ರ ವರ್ಗವಿರುತ್ತದೆ. ಅದರೆ ಈ ಸಂಖ್ಯೆಯ ಘಟಕಗಳಾದ ೩ ಮತ್ತು ೬ ಈ ಎರಡು ಅಂಕೆಗಳ ನಡುವೆ ೫ ಅಂಕೆಯನ್ನು ಎಷ್ಟು ಸಾರೆ ಬರೆಯುವಿರೋ, ಅಷ್ಟೇ ಸಾರೆ ೪ ಈ ಅಂಕೆಯನ್ನು ೩ ರ ಹಿಂದೆ ಬರೆಯಬೇಕು. ಆ ಮೇಲೆ ಬಂದ ಹೊಸ ಸಂಖ್ಯೆಯು ಪುನಃ ಪುನಃ ವರ್ಗವೇ ಆಗುತ್ತದೆ. ಮತ್ತು ಅದರ ವರ್ಗಮೂಲವು, ಹೊಸ ಅಂಕಪಂಕ್ತಿಯಲ್ಲಿ ೫ ಅಥವಾ ೪ ಈ ಅಂಕೆಗಳು ಎಷ್ಟು ಸಾರೆ ಬಂದಿರುತ್ತವೆಯೋ, ಅದಕ್ಕಿಂತ ಒಂದು ಸಾರೆ ಹೆಚ್ಚು '೬' ಈ ಅಂಕೆಯನ್ನು ಬರೆಯಲಾಗಿ ಬಂದ ಪಂಕ್ತಿಯು ಇರುತ್ತದೆ.

ಉ:— '೩೬' ಈ ಸಂಖ್ಯೆಯು ಘಟಕಗಳಾದ ೩ ಮತ್ತು ೬ ಇವುಗಳ ನಡುವೆ '೫' ಈ ಅಂಕೆಯನ್ನು ಒಂದು ಸಾರೆ, ಮತ್ತು '೪' ಈ ಅಂಕೆಯನ್ನು ೩ ರ ಹಿಂದೆ ಒಂದು ಸಾರೆ ಬರೆದರೆ, ಬರುವ '೪೩೫೬' ಈ ಅಂಕಪಂಕ್ತಿಯು ಮೇಲೆ ಹೇಳಿದಂತೆ '೬೬' ಈ ಸಂಖ್ಯೆಯ ವರ್ಗವಿರುತ್ತದೆ.

ಮತ್ತೆ ೩ ಮತ್ತು ೬ ಇವುಗಳ ನಡುವೆ '೫' ಈ ಅಂಕೆಯನ್ನು ಎರಡು ಸಾರೆ, ಮತ್ತು ೪ ಈ ಅಂಕೆಯನ್ನು ೩ರ ಹಿಂದೆ ಎರಡು ಸಾರೆ ಬರೆದರೆ ಬರುವ '೪೪೩೫೫೬' ಈ ಅಂಕಪಂಕ್ತಿಯು ಮೇಲೆ ಹೇಳಿದ ಪ್ರಕಾರ '೬೬೬' ಈ ಸಂಖ್ಯೆಯ ವರ್ಗವಿರುತ್ತದೆ. ಅದರಂತೆ

(೬೬೬೬) = ೪೪೪೩೫೫೫೬.

(೬೬೬೬೬) = ೪೪೪೪೩೫೫೫೫೬.

ಇತ್ಯಾದಿ.

(೨). '೬೩' ಈ ಸಂಖ್ಯೆಯ ಚಮತ್ಕಾರವಾದ ಗುಣವು:—

'೬೩' ಈ ಸಂಖ್ಯೆಯಲ್ಲಿ ೬ ಮತ್ತು ೩ ಈ ಎರಡು ಘಟಕಗಳು ಇರುತ್ತವೆ. ಇನ್ನು ಇವುಗಳ ನಡುವೆ ೨ ಈ ಅಂಕೆಯನ್ನು ಎಷ್ಟು ಸಾರೆ ಬರೆಯುವಿರೋ ಅಷ್ಟೇ ಸಾರೆ ೩ ಈ ಅಂಕೆಯನ್ನು ೬ ರ ಹಿಂದೆ ಬರೆದರೆ ಬರುವ ಹೊಸ ಅಂಕೆವಂಕ್ತಿಯು ಎರಡು ವಿಶಿಷ್ಟಸಂಖ್ಯೆಗಳ ಗುಣಾಕಾರವಿರುತ್ತದೆ. ಆ ಎರಡು ವಿಶಿಷ್ಟಸಂಖ್ಯೆಗಳು ಯಾವವೆಂದರೆ '೩'

ಈ ಅಂಕೆಯನ್ನು ಎಷ್ಟು ಸಾರೆ ಬರೆದಿರುವಿರೋ ಅದಕ್ಕಿಂತ ಒಂದು ಸಾರೆ ಹೆಚ್ಚು ೭ ರ ಪಂಕ್ತಿಯನ್ನು ಬರೆಯಲು ಬರುವ ಸಂಖ್ಯೆಯು ಅವುಗಳಲ್ಲಿ ಒಂದನೆಯದು. ಮತ್ತು '೯' ಈ ಅಂಕೆಯನ್ನು ಎಷ್ಟು ಸಾರೆ ಬರೆದಿರುವಿರೋ ಅದಕ್ಕಿಂತ ಒಂದು ಸಾರೆ ಹೆಚ್ಚು F ಈ ಅಂಕೆಯನ್ನು ಬರೆಯಲು ಬಂದ ಅಂಕಪಂಕ್ತಿಯು ಅವುಗಳಲ್ಲಿ ಎರಡನೆಯದು.

ಉ:— ೬೩ ಈ ಸಂಖ್ಯೆಯ ಘಟಕಗಳಾದ ೬ ಮತ್ತು ೩ ಇವುಗಳ ನಡುವೆ ೪ ಈ ಅಂಕೆಯನ್ನು ಒಂದು ಸಾರೆ, ಮತ್ತು ೬ರ ಹಿಂದೆ ೭ ಈ ಅಂಕೆಯನ್ನು ಒಂದು ಸಾರೆ ಬರೆದರೆ ಬರುವ '೭೬೭೩' ಈ ಅಂಕಪಂಕ್ತಿಯು ಮೇಲೆ ಹೇಳಿದಂತೆ '೭೭' ಮತ್ತು 'FF' ಈ ಎರಡು ಸಂಖ್ಯೆಗಳ ಗುಣಾಕಾರವಿರುತ್ತದೆ.

ಅದರಂತೆ ೬ ಮತ್ತು ೩ ಇವುಗಳ ನಡುವೆ ೮೮ ಮತ್ತು ೬ರ ಹಿಂದೆ ೭೭ ಬರೆದರೆ ಬರುವ '೭೭೬೮೮೩', ಈ ಸಂಖ್ಯೆಯು ೭೭೭ ಮತ್ತು FFF ಈ ಎರಡು ಸಂಖ್ಯೆಗಳ ಗುಣಾಕಾರವಿರುತ್ತದೆ.

ಅದರಂತೆ,

೭೭೭೭ × FFFF = ೭೭೭೬೮೮೮೩.

೭೭೭೭೭ × FFFFF = ೭೭೭೭೬೮೮೮೮೩.

ಇತ್ಯಾದಿ.

R. B, Kerur.

ವಿದ್ಯಾಭ್ಯಾತೆಯ ನೋಟೀಸುಗಳು.

ಪೂರ್ವಖಾನದೇಶ ಜಿಲ್ಹೆಯ ಜಾವುನೇರ ಊರ ಲೋಕಲ್-ಬೋರ್ಡ ಶಾಲೆಯೊಳಗಿನ ೬ನೇ ಇಯತ್ತೆಯ, ರಾಮಕೃಷ್ಣ ತೋಕಾರಾಮ ಬಾರಿ, ಮತ್ತು ರಾಮ ಕಿಸನ ಚತುರ್ಭುಜ ಮಾರವಾಡಿ ಎಂಬ ಇಬ್ಬರು ಹುಡುಗರು ಕಳೆದ ಜೂನ ತಿಂಗಳ ೭ನೇ ತಾರೀಖಿನ ದಿವಸ ಮಹನೀಯರಾದ ವ್ಹಾಯಿಸ್‌ರಾಯ ದೊರೆಗಳ ವರ್ಧಂತಿಯ ಉತ್ಸವವಾದ ಮರುದಿವಸ, ಶಾಲೆಯಲ್ಲಿ ವ್ಹಾಯಿಸ್‌ರಾಯ ದೊರೆಗಳ ವಿಷಯದಲ್ಲಿ ಅಯೋಗ್ಯವಾದ ಮಾತುಗಳನ್ನು ಆಡಿನ್ದು ತಿಳಿದು ಬಂದ ಕಾರಣ, ಸದರೀ ಇಬ್ಬರು ಹುಡುಗ

ರನ್ನು ೧ ವರ್ಷದ ವರೆಗೆ, ಅಂದರೆ ೧೯೧೪ನೇ ಇಸವಿಯ ಜುಲೈ ತಿಂಗಳ ಕೊನೆಯವರೆಗೆ ಯಾವ ಪ್ರಾಥಮಿಕ ಅಥವಾ ಅಂಗ್ಲೋ ವ್ಹರ್ನ್ಯಾಕ್ಯೂಲರ ಶಾಲೆಯಲ್ಲಿಯೂ ತಕ್ಕೊಳ್ಳಬಾರದೆಂದು ಮೈ॥ ಡಾಯರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಶನ್ ಸಾಹೇಬರವರ ಹುಕುಮು ಆಗಿರುತ್ತದೆ.

ಧಾರವಾಡ.
೧೯ನೇ ಅಗಷ್ಟ ೧೯೧೩. } P. Lory.
ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ

ನೋಟೀಸು.

ತಾರೀಖು ೧೫ನೇ ನವಂಬರ ೧೯೧೩ನೇ ಇಸವಿಯ ಸರಕಾರಿ ವಿದ್ಯಾಖಾತೆಯ ಜಾಹೀರಾತ ನಬಂದು ೧೯೪೪ನೇ ನೇದರಲ್ಲಿ ಗೊತ್ತು ಪಡಿಸಿದ ವ್ಹರ್ನಾಕ್ಯೂಲರ ಫೈನಲ್ ಪರೀಕ್ಷೆಯ ಅಭ್ಯಾಸಕ್ರಮದ ೧ನೇ ಸದರಿನ (ಬ) ಭಾಗದಲ್ಲಿಯ ವಿಷಯದ ಬಗ್ಗೆ, ಸನ್ ೧೯೧೪ನೇ ಇಸ್ವಿಯ ವ್ಹರ್ನಾಕ್ಯೂಲರ ಫೈನಲ್ ಪರೀಕ್ಷೆಗಾಗಿ ಮಿ. ಪಿ. ಎಸ್. ಚಂದಾವರ ಕರ ಬಿ. ಎ. ಕೃತ ಕನ್ನಡ ಹೊಸ ಭೂಮಿತಿ ೧ನೇ ಭಾಗ (೨ನೇ ಆವೃತ್ತಿ) ಪೂರ್ಣ, ಪುರವಣಿ ಸಹಿತ ಹಾಗು ಅದರಲ್ಲಿದ್ದ ಪ್ರಮೇಯಗಳಿಂದಲೂ ಕೃತ್ಯಗಳಿಂದಲೂ ಹೊರಡುವ ಸುಲಭ ಪ್ರಶ್ನೆಗಳು ಸಹಿತ ನೇಮಿಸಲ್ಪಟ್ಟದೆ.

ಧಾರವಾಡ ಎಜ್ಯುಕೇಶನಲ್ ಇನ
ಸ್ಪೇಕ್ಟರ ದಕ್ಷಿಣಭಾಗ ಇವರ ಆಫೀಸು. } P. Lory.
ತಾ॥ ೧೯ ನೇ ಅಗಷ್ಟ ೧೯೧೩. ಎಜ್ಯುಕೇಶನಲ್ ಇನಸ್ಪೇಕ್ಟರ
ದಕ್ಷಿಣಭಾಗ.

ಧಾರವಾಡ ಟ್ರೇನಿಂಗಕಾಲೇಜದ ಈ ವರ್ಷದ ಪ್ರವೇಶ ಪರೀಕ್ಷೆಯು ಬರುವ ಡಿಸಂಬರ ತಿಂಗಳ ತಾ॥ ೩ ಬುಧವಾರ ದಿವಸ ೧೧½ ಗಂಟೆಗೆ ಸರಿಯಾಗಿ ಪ್ರಾರಂಭವಾಗುವದು. ಉಮೇದವಾರರ ಹೆಸರುಗಳನ್ನು ತಾ॥ ೨ ಮಂಗಳವಾರ ಬೆಳಗಿನ ೭½ ಗಂಟೆಗೆ ಹಚ್ಚಿಕೊಳ್ಳಲಾಗುವದು. ಉಳಿದ ನಿಯಮಗಳು ಕಳೆದ ವರ್ಷದಂತೆ.

ಧಾರವಾಡ ಟ್ರೇನಿಂಗಕಾಲೇಜ
ತಾ॥ ೨೭/೯/೧೩. } V. B. Joshi,
ಪ್ರಿನ್ಸಿಪಾಲ,

ಪತ್ರವ್ಯವಹಾರ.

ಶ್ರೀಯುತ ಮೆ॥ ರಾವಸಾಹೇಬ ಕನ್ನಡ ಶಾಳಾಪತ್ರಿಕೆದ ಎಡಿಟರ ಮಹಾರಾಯರ ಸನ್ನಿಧಾನಕ್ಕೆ:—

ಸಿಂದಗಿ ತಾಲೂಕ ಬೂದೀಹಾಳ ಶಾಲೆಯ ಸ್ಕೂಲ ಪಂಚರಲ್ಲೋ ರ್ವನ ಸಾ॥ ನಮಸ್ಕಾರ ವಿನಂತಿ ವಿಜ್ಞಾಪನೆಯು:—

ಇದೇ ತಿಂಗಳ ೩೦ನೇ ತಾರೀಖಿನ ದಿವಸ ಈ ಊರಲ್ಲಿ ಇಲ್ಲಿಯ ಗ್ರಾಮಸ್ಥರ ಹಾಗು ಶಾಳಾ ಮಾಸ್ತರರ ಪೂರ್ಣ ಸಾಹಸದಿಂದ "ನೇಕ ನಾಮದಾರ ಲಾರ್ಡ ಹಾರ್ಡಿಂಜ" ಛೊರೆಗಳವರ ಜನ್ಮ ದಿವಸದ ಸಮಾರಂಭವು ಬಹು ಸಂಭ್ರಮದಿಂದ ನೆರವೇರಿತು. ಸದರ ತಾರೀಖಿನ ದಿವಸ ಶಾಳಾಗೃಹ, ಚಾವಡಿ, ಊರೊಳಗಿನ ಎಲ್ಲ ದೇವಾಲಯಗಳು ತಳಿರು ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಶೃಂಗರಿಸಲ್ಪಟ್ಟಿದ್ದವು. ಮುಂಜಾನೆ ೮ ಘಂಟೆಗೆ ವಿದ್ಯಾರ್ಥಿಗಳಿಂದ ಶರೀರಸಾಮರ್ಥ್ಯ ಬೆಳಿಸುವಂಥ ಆಟಗಳು ಆಡಲ್ಪಟ್ಟವು. ಕವಾಯತು ಮಾಡಿಸಲ್ಪಟ್ಟತು. ೧೧ ಘಂಟೆಗೆ ಈ ಊರಲ್ಲಿಯ ಸದ್ಗೃಹಸ್ಥರಾದ ರಾ. ದೌಲತಪ್ಪಾ ತಂದಿ ಶಂಕರಪ್ಪಾ ಚೌದರಿ ಇವರು ಸ್ವಸಂತೋಷದಿಂದಲೂ ಸ್ವಂತ ಖರ್ಚಿನಿಂದಲೂ ವ್ಹಾಯಸರಾಯರಾದ ಹಾರ್ಡಿಂಜ ಛೊರೆಗಳ ಪ್ರೀತ್ಯರ್ಥವಾಗಿ ಶಾಲೆಯ ಹುಡಗರಿಗೂ ಮತ್ತು ಉಳಿದ ಊರೊಳಗಿನ ಯಾವತ್ತೂ ಹುಡುಗರಿಗೂ ಮೃಷ್ಟಾನ್ನಭೋಜನವನ್ನು ಮಾಡಿಸುವ ಸಮಾರಂಭ ಮಾಡಿದರು. ಇದರ ಖರ್ಚು ೧೮ ರು॥ ಆಗಿರುವದು.

ಮಧ್ಯಾನ್ಹದ ೩ ಘಂಟೆಗೆ ಸಭೆಯಾಯಿತು. ಆರಂಭಕ್ಕೆ ಸಭೆಯ ಉದ್ದೇಶದ ಬಗ್ಗೆ ಇಲ್ಲಿಯ ಶಾಳಾಮಾಸ್ತರರಾದ ರಾ॥ ಜೀವಾಜಿ ಗಣೇಶ ಕುಲಕರ್ಣಿ ಇವರು ಪ್ರಾಸ್ತಾವಿಕ ಭಾಷಣವನ್ನು ಮಾಡಿ ರಾ. ರಾ. ಉದಂಡಪ್ಪಾ ಅಣ್ಣಾ ಪಾಟೀಲ ಇವರು ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚನೆ ಮಾಡಿದರು. ಆ ಮೇಲೆ ಎಲ್ಲರ ಅನುಮೋದನದಂತೆ ರಾ॥ ಉದಂಡಪ್ಪಾ ಪಾ॥ ಇವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ವ್ಹಾಯಸರಾಯರ ಭಾವಚಿತ್ರದ ಪಟವು ಅಧ್ಯಕ್ಷರಿಂದ ಸಿಂಹಾಸನದ ಮೇಲೆ ಕೂಡ್ರಿಸಲ್ಪಟ್ಟು ಅದಕ್ಕೆ ಪೂಮಾಲೆಯು ಹಾಕಲ್ಪ

ಟ್ಟಿತು. ಈ ಕಾಲಕ್ಕೆ ಸನಾಯಿ, ಬಜಂತ್ರಿ, ಕಹಳೆ ಮುಂತಾದ ವಾದ್ಯ ಗಳ ರಭಸವಾಯಿತು. ನಂತರ ವಿದ್ಯಾರ್ಥಿಗಳು ಹಾರ್ದಿಂಜ ಭೊರೆಗಳ ವರ ಕಲ್ಯಾಣಾರ್ಥವಾಗಿ ದೇವತಾ ಸ್ತೋತ್ರದ ಪದಗಳನ್ನು ಸ್ವರಮೇ ಲನದಿಂದ ಹಾಡಿ ಭೊರೆಗಳವರ ಸ್ತೋತ್ರಪರವಾದ ಪದಗಳನ್ನಾದರೂ ಬಹು ಸರಸವಾಗಿ ಅಂದರು. ಆಮೇಲೆ ವಿದ್ಯಾರ್ಥಿಗಳು ಗೆಜ್ಜೆಯ ಕೋ ಲಿನೊಂದಿಗೆ ಸುಸ್ವರದಿಂದ ಹಾಡುತ್ತ ಕೋಲಿನಾಟವಾಡಿದರು. ಇದೆಲ್ಲ ನೋಡಿ ಅಧ್ಯಕ್ಷರಾದ ರಾ. ಉದಂಡಪ್ಪಾ ಪಾಟೀಲ ಇವರು ಶಾಲೆಯ ಎಲ್ಲ ವಿದ್ಯಾರ್ಥಿಗಳಿಗೆ ಕೂಡಿ ೧ ರುಪಾಯಿದ ಮಿಠಾಯಿ ಹಂಚಿ ದ್ದಲ್ಲದೆ ವಿದ್ಯಾರ್ಥಿಗಳ ಗುಣಗಳನ್ನು ಪರೀಕ್ಷಿಸಿ ಒಟ್ಟು ನಾಲ್ಕು ರೂಪಾಯಿ ಇನಾಮು ಕೊಟ್ಟರು. ಇದಲ್ಲದೆ ಹಲಗಿ ಕೊಂಬಿನವರಿಗೆ, ಶನಾಯಿ ಬಜಂತ್ರಿಯವರಿಗೆ, ಮತ್ತು ಪೊಲೇಕಾರ ಮುಂತಾದ ನೌಕರ ಜನರಿಗೆ ಕೂಡಿ ೬ ರುಪಾಯಿ ಖುಷಿ ಕೊಟ್ಟರು. ಆ ಮೇಲೆ ರಾಜಶ್ರೀ ಮಡಿವಾ ಳಪ್ಪಾ ಕಲ್ಲಪ್ಪಾ ನಾಗೂರ ಇವರು ತಮ್ಮ ಸ್ವಂತ ಖರ್ಚಿನಿಂದ ಬಡಬ ಗ್ಗರಿಗೆ ವಸ್ತ್ರದಾನ ಮಾಡೋ ಸಮಾರಂಭದಲ್ಲಿ ಒಬ್ಬ ವಿದ್ಯಾರ್ಥಿಗೆ ೧॥ ರುಪಾಯಿದ ರುಮಾಲು ಸುತ್ತಿದರು. ಒಟ್ಟಿಗೆ ಇವರು ೧೭ ರುಪಾಯಿದ ವಸ್ತ್ರದಾನ ಮಾಡಿದರು. ಆ ಮೇಲೆ ಶಾಳಾ ಮಾಸ್ತರರು "ಈ ಊರ ಯಾವತ್ತು ಜನರು ಶ್ರಮಪಟ್ಟು ಈ ಸಮಾರಂಭವನ್ನು ಬಹು ಉಲ್ಲಾ ಸದಿಂದ ಮಾಡಿದ್ದು ನಿಮಗೆ ಭೂಷಣದ ಸಂಗತಿಯೇಯಾಗಿದೆ. ಪ್ರತಿ ಯೊಬ್ಬ ನಾಗರಿಕನು ರಾಜನಿಷ್ಠನಾಗಿರುವದು ಹಿತಕರವಾದದ್ದು" ಎಂಬ ಅಶಯದ ಭಾಷಣವನ್ನು ಮಾಡಿ ಈ ಶಾಲೆಯಲ್ಲಿ ಗಡಿಯಾರು ಇಲ್ಲದ್ದ ರಿಂದ ಬಹಳೇ ಅಡಚಣಿ ಆಗುತ್ತದೆ. ಆದ್ದರಿಂದ ಈ ಅಡಚಣಿಯನ್ನು ದೂರ ಮಾಡುವದಕ್ಕಾಗಿಯೂ ಮತ್ತು ಈ ಸಮಾರಂಭದ ಸ್ಮಾರಕಕ್ಕಾ ಗಿಯೂ ಒಂದು ಗಡಿಯಾರು ತರಿಸಿಕೊಟ್ಟರೆ ನೆಟ್ಟಗಾಗುವದು, ಎಂಬ ಉದ್ಗಾರವನ್ನು ಸಭಿಕರಿಗೆ ತೋರಿಸಿದರು. ಕೂಡಲೇ ಯಾವತ್ತು ಸಭೆ ಯವರು ಒಪ್ಪಿಕೊಂಡು ಗಡಿಯಾಳಕ್ಕಾಗಿ ೧೫ ರೂಪಾಯಿದ ವರ್ಗಣಿ ಮಾಡಿಕೊಟ್ಟು ರಾಜನಿಷ್ಠೆಯನ್ನೂ ಶಾಲೆಯ ಮೇಲೆ ಇದ್ದ ತಮ್ಮ ಪ್ರೇಮ ವನ್ನೂ ವ್ಯಕ್ತಪಡಿಸಿದರು.

ಗಡಿಯೊಳಕ್ಕಾಗಿ ವರ್ಗಣಿ ಕೊಟ್ಟವರ ವಿವರ:—

		ರೂಪಾಯಿ.
ರಾ|| ರಾ||	ಉದಂಡಪ್ಪಾ ನಾಹೇಬಗೌಡಾ ಪಾಟೀಲ	೨
,,	ಬಸಪ್ಪಾ ಶಂಕರಪ್ಪಾ ಎಳಮೇಲಿ	೧
,,	ಗುರಪ್ಪಾ ಶಂಕರಪ್ಪಾ ಚೌದರಿ	೨
,,	ನಿಂಗಪ್ಪಾ ದೇವಪ್ಪಾ ಕೊಳ್ಳಿ	೧
,,	ಉದಂಡಪ್ಪಾ ಗೋಲಪ್ಪಾ ಬಿ||	೧
,,	ಸಿದರಾಮಪ್ಪಾ ಧರ್ಮಪ್ಪಾ ಬಿ||	೧
,,	ಮೂರ್ತೆಪ್ಪಾ ಬಸಲಿಂಗಪ್ಪಾ ಲೋಣಿ	೧
,,	ಶಂಕರಪ್ಪಾ ಸಿವಪ್ಪಾ ಬಿರಾದಾರ	೧
,,	ನೀಲಪ್ಪಾ ನರಸಪ್ಪಾ ಬಿ||	೧
,,	ಸಂಜೀವಪ್ಪಾ ಗುರುಬಸಪ್ಪಾ ಕೊಣ್ಣೂರ	೧
,,	ಅಪ್ಪಪ್ಪಾ ಗೋಲಪ್ಪಾ ಬಿ||	೧
,,	ಕುಪ್ಪಣ್ಣಾ ಗುರಲಿಂಗಪ್ಪಾ ಚಿ. ಗೊ.	೧
,,	ಬಾಳಾಜಿ ರಾಘವೇಂದ್ರ ಕುಲಕರ್ಣಿ	೧
		೧೫ ರು.

ಈ ಪ್ರಕಾರ ಗಡಿಯೊಳದ ವರ್ಗಣಿಯು ಬಂದದ್ದು ಸ್ಕೂಲ ಕಮೀಟಿಯವರ ಕಡಿಗೆ ಕೊಟ್ಟತು. ತರುವಾಯ ವೀಳೆ, ಹಾರ, ತುರಾಯಿ ಕೊಟ್ಟು ಸಭಾವಿಸರ್ಜನೆ ಮಾಡಿತು. ರಾತ್ರಿ ೩ ಘಂಟೆಗೆ ಧೊರೆಗಳವರ ಫೋಟೊ ಪಲ್ಲಕ್ಕಿಯಲ್ಲಿರಿಸಿ ಅನೇಕ ವಾದ್ಯಗಳಿಂದಲೂ ಮದ್ದು ಬಾಣ ಗಳ ಶಬ್ದಸದಿಂದಲೂ ಮೆರವಣಿಗೆ ತೆಗೆದು ಯಾವತ್ತು ದೇವಾಲಯಗ ಗಲ್ಲಿ ದೀಪಾರಾಧನೆ ಮಾಡಿ ಧೊರೆಗಳವರ ಕಲ್ಯಾಣದ ಬಗ್ಗೆ ದೇವರ ಪ್ರಾರ್ಥನೆ ಮಾಡಲ್ಪಟ್ಟತು.

ತಾ|| ೨೩–೬–೧೩
ಮುಂ. ಭೂದಿಹಾಳ
ತಾ. ಸಿಂದಗಿ.

ಬಾಳಾಜಿ ರಾಘವೇಂದ್ರ ಕುಲಕರ್ಣಿ
ಸ್ಕೂಲ ಕಮೀಟಿ ಪಂಚ.

ಶಾಲಾಪತ್ರಿಕೆ.

ಪುಸ್ತಕ ೪೯. | ನವೆಂಬರ ೧೯೧೩. | ಸಂಚಿಕೆ ೧೧.

ಸ್ಫುಟ ವಿಷಯಗಳು.

೧. ಪಶುಪಕ್ಷಿಗಳ ನೈತಿಕ ಭಾವನೆಯು.

ಪಶುಪಕ್ಷಿಗಳ ರೀತಿಗಳ ವಿಷಯವಾಗಿ ವಿಶೇಷ ಶೋಧಗಳನ್ನು ಮಾಡಿದವರಾದ ಮಿ. ಈ. ಸೇಟನ್ ಎಂಬವರು ಈಚೆಗೆ ಒಂದು ಉಪನ್ಯಾಸ ಮಾಡಿದರು. ಅದರಲ್ಲಿ ಅವರು ಪಶುಪಕ್ಷಿಗಳ ಸಂಬಂಧವಾಗಿ ಶ್ರೋತೃ ಸಮಾಜಕ್ಕೆ ಮನೋರಂಜಕವಾದ ಎಷ್ಟೋ ಸಂಗತಿಗಳನ್ನು ಹೇಳಿದರು. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ಹೇಳುತ್ತೇವೆ:—

"ಪಶುಪಕ್ಷಿಗಳಿಗೆ ಬಾಯಿಬಲ್ಲಿನೊಳಗಿನ ಹತ್ತು* ಅಪ್ಪಣೆಗಳು ಗೊ

---

* ಈ ಹತ್ತು ಅಪ್ಪಣೆಗಳ ವಿಷಯವು ಕೆಳಗೆ ಬರೆದ ಪ್ರಕಾರ ಇರುತ್ತದೆ:—

೧. ನಾನು ನಿನ್ನ ದೇವರಾಗಿದ್ದೇನೆ. ನಿನ್ನನ್ನು ನಾನು ಬಂಧನದಿಂದ ಬಿಡಿಸಿರುವೆನು.

೨. ನೀನು ಯಾವ ಮೂರ್ತಿಯನ್ನೂ ಮಾಡಿಕೊಂಡು ಭಜಿಸಕೂಡದು.

೩. ದೇವರ ಹೆಸರನ್ನು ವ್ಯರ್ಥವಾಗಿ ಎತ್ತಬೇಡ.

೪. ವಿಶ್ರಾಂತಿಯ (ಏಳನೆಯ) ದಿವಸವನ್ನು ನೆನಪಿನಲ್ಲಿಟ್ಟು ಅದನ್ನು ಪವಿತ್ರ ದಿವಸವಾಗಿ ಪಾಲಿಸು.

೫. ನಿನ್ನ ತಾಯಿತಂದೆಗಳನ್ನು ಮನ್ನಿಸು. ಅದರಿಂದ ನಿನಗೆ ದೀರ್ಘಾಯುಷ್ಯವನ್ನು ಕೊಡುವನು.

೬. ನೀನು ಕೊಲ್ಲಕೂಡದು.

೭. ನೀನು ವ್ಯಭಿಚಾರವನ್ನು ಮಾಡಕೂಡದು.

೮. ನೀನು ಕದಿಯಕೂಡದು.

೯. ನಿನ್ನ ನೆರೆಯವನ ಮೇಲೆ ಸುಳ್ಳು ಸಾಕ್ಷಿಯನ್ನು ಹೇಳಕೂಡದು.

೧೦. ಪರರ ಮನೆ, ಪರಸ್ತ್ರೀ, ಪರರ ಆಳು, ಪರರ ತ್ಯಾಗ, ಪರರ ಎತ್ತು, ಪರರ ಕತ್ತೆ, ಪರರ ಯಾವ ಒಡವೆಯನ್ನೂ ಬಯಸಕೂಡದು.

ತ್ತಿರುತ್ತವೆಂದು ತೋರುತ್ತದೆ. ಮತ್ತು ಎಲ್ಲ ಪಶುಪಕ್ಷಿಗಳು ಆ ಅಪ್ಪನ ಹೆಗಳಂತೆ ಅಂತಃಕರಣ ಪೂರ್ವಕವಾಗಿ ನಡೆದುಕೊಳ್ಳುವವು. ತೋಳನ ಮರಿಗಳು ಹಿರಿಯರ ಆಜ್ಞೆಯನ್ನು ಎಂದೂ ವಿಚಾರಿಸದಿಲ್ಲ; ಮತ್ತು ಎಂದೂ ಅವು ತಮ್ಮತಮ್ಮೊಳಗೆ ಕೊಲೆ ಮಾಡುವದಿಲ್ಲ. ಬಹುಭಾರ್ಯಾತ್ವವನ್ನವಲಂಬಿಸುವ ಜಿಗರಿಗಳು ಏಕಪತ್ನೀವ್ರತಸ್ಥವಾದ ಜಿಗರಿಗಳಂತೆ ಸುಂದರವಾಗಿರುವದಿಲ್ಲ. ಪ್ರತಿಯೊಂದು ವನ್ಯಪಶುವಿಗೂ ಸ್ವತ್ತು ಅಂದರೇನು? ಎಂಬದು ಗೊತ್ತಿರುವದು. ಅವು ಬೇರೊಂದು ಪಶುವಿನ ಸ್ವತ್ತನ್ನು ಆ ಪಶುವಿನ ಸಮಕ್ಷ ಅಪಹರಿಸುವದಿಲ್ಲ. ನೆರೆಮನೆಯವರ ವಿರುದ್ಧವಾಗಿ ಸುಳ್ಳುಸಾಕ್ಷಿ ನುಡಿಯುವ ಪಶುಗಳಿಗೆ ಎಷ್ಟೋಸಾರೆ ಭಯಂಕರವಾದ ಪ್ರಾಯಶ್ಚಿತ್ತವನ್ನು ಅನುಭೋಗಿಸಬೇಕಾಗುವದು.

ಆದರೆ ವಿಶ್ವಕರ್ತನಾದ ದೇವರ ಅಸ್ತಿತ್ವದ ಭಾವನೆಯು ಪಶುಗಳಿಗೆ ಇರುವದು ಎಂಬದನ್ನು ಮಾತ್ರ ನಾನು ನಿಶ್ಚಿತವಾಗಿ ಹೇಳಲಾರೆನು. ಆದರೂ ಎಲ್ಲ ಪಶುಪಕ್ಷಿಗಳು ರವಿವಾರವನ್ನು ಪಾಲಿಸುತ್ತವೆಂದು ತೋರುತ್ತದೆ. ಒಂದು ಕೋಳಿಯು ರವಿವಾರ ದಿವಸ ತತ್ತಿಯನ್ನಿಡುತ್ತಿದ್ದಿಲ್ಲ. ಎಂಬ ಸಂಗತಿಯ ಮೇಲಿಂದ ಮೇಲಿನ ಮಾತಿಗೆ ಹೆಚ್ಚು ಬೆಂಬಲ ಬರುವದೆಂದು ನನಗೆ ತೋರುತ್ತದೆ. ಬಾಯಿಬಲ್ಲಿನ ಹತ್ತು ಅಪ್ಪಣೆಗಳೇ ಸುಧಾರಣೆಯ ನಿಯಮಗಳೆಂದು ಹೇಳಬಹುದು. ಅವೇ ವಿಶ್ವವ್ಯಾಪಿಗಳೆಂಬದನ್ನೂ ಸಿದ್ಧವಾಡಬಹುದು. ಈ ಹತ್ತು ನಿಯಮಗಳಲ್ಲಿ ನಾಲ್ಕು ಆಧ್ಯಾತ್ಮಿಕ ನಿಯಮಗಳು. ಉಳಿದವು ನೈತಿಕ ನಿಯಮಗಳು. ಈ ನೈತಿಕ ನಿಯಮಗಳನ್ನು ಪಶುಪಕ್ಷಿಗಳು ಪಾಲಿಸುವವು. ಆದರೆ ಈಲಾದ ಪಶುಗಳ ಬಗ್ಗೆ ಮಾತ್ರ ಈ ನಿಯಮವು ಹತ್ತುವದಿಲ್ಲ. ಕಾರಣವೇನಂದರೆ ಅವು ಮನುಷ್ಯರ ಸಹವಾಸದಿಂದ ಕೆಟ್ಟಿರುತ್ತವೆ. ಆದ್ದರಿಂದ ಪಶುಪಕ್ಷಿಗಳ ನೈಸರ್ಗಿಕ ಗುಣಗಳನ್ನು ಪರೀಕ್ಷಿಸುವದಕ್ಕೆ ಅಡವಿಯಲ್ಲಿಯ ಪಶುಗಳನ್ನು ಅಭ್ಯಾಸಿಸುವದು ನೆಟ್ಟಗೆ. ಹಿರಿಯರ ಅಪ್ಪಣೆಯಂತೆ ನಡೆದುಕೊಳ್ಳುವ ನಿಯಮವನ್ನು ಎಲ್ಲ ಪಶುಪಕ್ಷಿಗಳೂ ಪಾಲಿಸುವವು. ಹೋತ ಟೆಯನ್ನೂ ಅದರ ಮರಿಗಳನ್ನೂ ಎಲ್ಲರೂ ಬಲ್ಲರು. ಏನಾದರೊಂದು ಸಂಕಟವು ಬಂದೊದಗಿದರೆ, ಕೂಡಲೆ ತಾಯಿಯು ಮರಿಗಳನ್ನು ತನ್ನ ಹತ್ತರ ಬರುವದಕ್ಕೆ ಸೂಚನೆ ಮಾಡುವದು. ಕೂಡಲೆ ಮರಿಗಳೆಲ್ಲ

ಓಡಿ ಬಂದು ತಾಯಿಯ ಪಕ್ಕದೊಳಗೆ ಅಡಗಿಕೊಳ್ಳುವವು. ಅಡವಿಯ ಪಶುಗಳಲ್ಲಿಯೂ ಇದೇ ಸಂಗತಿಯು ದೃಷ್ಟಿಗೆ ಬೀಳುವದು. ಪ್ಯೂಮ ಎಂಬ ಒಂದು ಪಕ್ಷಿಯು ಪದಾರ್ಥಸಂಗ್ರಹಾಲಯದಲ್ಲಿ ಪಂಜರದೊಳಗಿತ್ತು. ಅದಕ್ಕೆ ಆರು ಮರಿಗಳಿದ್ದವು. ಪಂಜರದ ಹತ್ತಿರ ಯಾರಾದರೂ ಬಂದೊಡನೆಯೇ ಅದು ತನ್ನ ಮರಿಗಳನ್ನೆಲ್ಲ ಎತ್ತಿಕೊಂಡು ಹೋಗಿ ಪಂಜರದೊಳಗೆ ಹಿಂಭಾಗದಲ್ಲಿ ಇಡುತ್ತಿತ್ತು. ಯಾವದಾದರೊಂದು ಮರಿಯು ತಾಯಿಯ ಅಪ್ಪಣೆಯನ್ನು ಮೀರಿ ಮುಂದೆ ಬಂದರೆ, ಅದನ್ನು ಹೊಡೆಯುವದು. ಚಿಗರಿಗಳಾದರೂ ಹಿರಿಯರ ಅಪ್ಪಣೆಯನ್ನು ಮೀರುವದಿಲ್ಲ. ಆದರೆ ಅವುಗಳ ಸನ್ನೆಗಳ್ಯಾವವೆಂಬದನ್ನು ಮಾತ್ರ ನಾನು ಅರಿಯೆನು. ಒಮ್ಮೊಮ್ಮೆ ಅವು ಮುಖವನ್ನು ಬೆನ್ನಿಗೆ ತಿಕ್ಕಿ ಪರಸ್ಪರ ಮನೋಭಾವವನ್ನು ಸೂಚಿಸುವವು. ಕೂಡಲೆ, ಮರಿಗಳು ಅಡಗಿಕೊಳ್ಳುವವು. ಆ ತರುವಾಯ ತಾಯಿಯು ಬಂದ ಪ್ರಾಣಿಯು ಶತ್ರುವೋ ಮಿತ್ರನೋ ಎಂಬ ಬಗ್ಗೆ ವಿಚಾರ ಮಾಡುವದು.

ಪಶುಪಕ್ಷಿಗಳು ಸ್ವಜಾತೀಯ ಪ್ರಾಣಿಗಳನ್ನು ತಿನ್ನುವದು ತೀರ ಕಡಿಮೆ. ಈ ನೀಚವೃತ್ತಿಯು ಮನುಷ್ಯರಲ್ಲಿಯೇ ಕಂಡುಬರುವದು. ಹಾವು ಹಾವನ್ನು ಎಂದೂ ಕೊಲ್ಲುವದಿಲ್ಲ. ಪಶುಗಳು ವಿಜಾತೀಯ ಪ್ರಾಣಿಗಳ ಶವಗಳನ್ನು ಹರಿಯಬಹುದು. ಆದರೆ ಸ್ವಜಾತೀಯವುಗಳ ಪ್ರೇತಗಳನ್ನು ಎಂದಿಗೂ ಹರಿಯುವದಿಲ್ಲ. ಎಲ್ಲ ಪಶುಗಳು ಸಂಕಟ ಸಮಯದಲ್ಲಿ ಪರಸ್ಪರ ಸಹಾಯಮಾಡುವವು.

ಬಹುಭಾರ್ಯಾತ್ವವನ್ನು ಅವಲಂಬಿಸುವ ಪಶುಗಳು ಏಕಪತ್ನೀ ವ್ರತಸ್ಥ ಪಶುಗಳನ್ನು ಸರಿಗಟ್ಟಲಾರವು. ಅದ್ದರಿಂದ ಏಕಪತ್ನೀ ವ್ರತವುಳ್ಳ ಪಶುಗಳೇ ಶ್ರೇಷ್ಠವಾದವುಗಳು. ತೋಳನ ಮರಿಗಳು ದೊಡ್ಡವಾದ ಮೇಲೆ ತಮ್ಮ ತಾಯಿತಂದೆಗಳನ್ನು ನೆನಪಿಗೆ ತರುವದಿಲ್ಲ. ಅವರಂತೆಯೇ ತಾಯಿತಂದೆಗಳೂ ಮರಿಗಳನ್ನು ಗುರುತಿಸುವದಿಲ್ಲ. ಆದರೆ ತಾಯಿ ತಂದೆಗಳು ಮಾತ್ರ ಪರಸ್ಪರ ಮರೆಯುವದಿಲ್ಲ. ಇವರ ಬಗ್ಗೆ ಕಾನಡಾ ದೇಶದೊಳಗಿನ ಅಡವೀ ಕೋಳಿಯ ದೃಷ್ಟಾಂತವನ್ನು ಇಲ್ಲಿ ಕೊಡಬಹುದು. ಗಂಡು ಹೆಣ್ಣುಗಳಲ್ಲಿ ಯಾವದೊಂದು ಪ್ರಾಣಿಯು ಸಾಯಲು ಜೀವವಿಂಸುಳಿದ ಪ್ರಾಣಿಯು (ಅದು ಗಂಡೇ ಇರಲಿ, ಹೆಣ್ಣೇ

ಇರಲಿ) ತಾನು ಸಾಯುವವರೆಗೆ ಒಂದೇ ಇದ್ದು ಕಾಲ ಕಳೆಯ
ವದು."

---

೨. ಆಹಾರದ ಪದಾರ್ಥಗಳೂ ಆರೋಗ್ಯವೂ.

ಈಗಿನ ನಾಗರಿಕತೆಯ ಕಾಲದಲ್ಲಿ ಎಲ್ಲ ಪ್ರಕಾರದ ಕೆಲಸಗಳಲ್ಲಿ ವೇಳೆಯನ್ನೂ ಶ್ರಮವನ್ನೂ ಉಳಿಸಿಕೊಳ್ಳಬೇಕೆಂಬದರ ಕಡೆಗೆ ಎಲ್ಲರ ದೃಷ್ಟಿ ಇರುವದು. ಅದರಲ್ಲಿಯೂ ಪಟ್ಟಣಿಗರಲ್ಲಿ ಈ ದೃಷ್ಟಿಯು ವಿಶೇಷವಾಗಿ ಇರುವದು. ಈ ವಿಷಯದಲ್ಲಿ ಅವರಿಗೆ ಯಂತ್ರಗಳ ಸಹಾಯವು ಹೆಚ್ಚಾಗಿ ಆಗುವದು. ಆದರೆ ಮನುಷ್ಯ ಪ್ರಕೃತಿಯಲ್ಲಿ ಇವುಗಳಿಂದ ಯಾವ ಪರಿಣಾಮವಾಗುವದೆಂಬದನ್ನು ಯಾರೂ ನೋಡುವದಿಲ್ಲವೆಂಬದು ಶೋಚನೀಯ ಸ್ಥಿತಿಯು.

ಕಟ್ಟಿಗೆಗಿಂತ ಇದ್ದಲಿಯಿಂದ ಅಡಿಗೆ ಬೇಗನೆ ಆಗುವದು. ಇದ್ದಲಿಗಿಂತ ಸ್ಟೋವಿನಿಂದ ಬಹಳ ಬೇಗನೆ ಆಗುವದು. ಆದರೆ ಸ್ಟೋವಿನಿಂದ ಬೇಯಿಸಿದ ಪದಾರ್ಥಗಳಿಗಿಂತ ಇದ್ದಲಿಯಿಂದ ಬೇಯಿಸಿದ ಪದಾರ್ಥಗಳು ಹೆಚ್ಚು ರುಚಿಯಾಗಿಯೂ, ಸತ್ವವುಳ್ಳವಾಗಿಯೂ ಇರುವವು ಮತ್ತು ಕಟ್ಟಿಗೆಯಿಂದ ಸಾವಕಾಶವಾಗಿ ಬೇಯಿಸಿದ ಪದಾರ್ಥಗಳು ಇದ್ದಲಿಯಿಂದ ಬೇಯಿಸಿದ ಪದಾರ್ಥಗಳಿಗಿಂತ ಹೆಚ್ಚು ರುಚಿಯಾಗಿಯೂ ಸತ್ವವುಳ್ಳವಾಗಿಯೂ ಇರುವವು. ಹಿಟ್ಟಿನ ಗಿರಣಿಯಲ್ಲಿ ಬೀಸುವ ಕೆಲಸ ತೀವ್ರವಾಗಿ ಆಗುವದಲ್ಲದೆ ವೆಚ್ಚವೂ ಕಡಿಮೆ. ಆದರೆ ಅದರ ಉಷ್ಣದಿಂದ ಹಿಟ್ಟು ನಿಃಸತ್ವವಾಗುವದು.

ಜನರ ಆರೋಗ್ಯದ ಮೇಲೆ ಇದರ ಪರಿಣಾಮವು ಸ್ಪಷ್ಟವಾಗಿ ಕಾಣಿಸುವದು. ಹಳ್ಳಿವಾಡದ ಮನುಷ್ಯರನ್ನು ನೋಡಿರಿ. ಯಂತ್ರಗಳ ದೊರೆಯಿದ್ದರಿಂದ ಅವರು ತಮ್ಮ ಕೈಯಿಂದಲೇ ಸಿದ್ಧಪಡಿಸಿದ ರುಚಿಂದ ಮತ್ತು ಸತ್ವವುಳ್ಳ ಪದಾರ್ಥಗಳನ್ನು ತಿನ್ನುತ್ತಿರುವದರಿಂದ ಬಲವರೂ ಹುರುಪುಳ್ಳವರೂ ಇರುತ್ತಾರೆ. ಪಟ್ಟಣಿಗರು ಯಂತ್ರಗಳಿಸಿದ್ಧಪಡಿಸಿದ ಪದಾರ್ಥಗಳನ್ನು ತಿನ್ನುವದರಿಂದ ಅಶಕ್ತರೂ ನಿಸ್ತೇಜರೂ ಆಗುತ್ತಾರೆ. ಹಳ್ಳಿವಾಡದವರ ಮತ್ತು ಪಟ್ಟಣಿಗರ ಆರೋಗ್ಯದ ಕಡಿಮೆಗಳಿಗೆ ಬೇರೆ ಅನೇಕ ಕಾರಣಗಳಿದ್ದರೂ ಇದೂ ಒಂದು ಕಾ

ವಾಗಿರುವದು. ಆದ್ದರಿಂದ ಎಲ್ಲರೂ ಈ ವಿಷಯವನ್ನು ವಿಚಾರಿಸತಕ್ಕದ್ದು.

---

೩. ರೇಶಿಮೆ ಬಟ್ಟೆಗಳು ಒಮ್ಮೊಮ್ಮೆ ಬಹಳ ಬೇಗನೆ ಹರಿಯುವದಕ್ಕೆ ಕಾರಣವೇನು?

ನಿಜವಾದ ರೇಶಿಮೆಯು ಬಹಳ ದಿವಸ ತಡೆಯುವದು. ಆದರೆ ಈಚೆಗೆ ಅಂಗಡಿಯಲ್ಲಿ ದೊರೆಯುವ ರೇಶಿಮೆ ಬಟ್ಟೆಗಳು ಬಹು ಬೇಗ ಹರಿಯುವವು. ಮಡಿಕೆ ಬಿದ್ದಲ್ಲಿ ಕತ್ತರಿಸುವವು. ಕುತ್ತಿಗೆ ಮೊದಲಾದ ಬೆವರು ಬರುವ ಸ್ಥಳದಲ್ಲಿ ಅವು ಬಣ್ಣಗುಂದಿ ತೀವ್ರ ಕೊಳೆಯುವವು. ಈ ರೀತಿಯಾಗುವದಕ್ಕೆ ಈಗಿನ ವ್ಯಾಪಾರಿಗಳ ಪದ್ಧತಿಯೇ ಕಾರಣವು. ವ್ಯಾಪಾರಗಾರರು ಕಚ್ಚಾ ರೇಶಿಮೆಯನ್ನು ಕೊಂಡಾಗ ಅದರಲ್ಲಿ ರೇಶಿಮೆ ಹುಳಗಳ ಮೈಯ ಜಿಗುಟು ಅಂಟಿಕೊಂಡಿರುತ್ತದೆ. ಅದನ್ನು ಬಿಡಿಸುವದಕ್ಕಾಗಿ ಇದನ್ನು ನೀರಲ್ಲಿ ತೊಳೆಯಬೇಕಾಗುವದು. ತೊಳೆಯುವದರಿಂದ ಅದರ ಭಾರವು ಹತ್ತರಲ್ಲೊಂದು ಪಾಲು ಕಡಿಮೆ ಆಗುವದು. ತೊಳೆದ ಬಳಿಕ ಆ ರೇಶಿಮೆಗೆ ಬಣ್ಣವೆದ್ದುವರು. ಬಣ್ಣವೆದ್ದುವಾಗ ಅದನ್ನು ತವರದಿಂದ ಸಿದ್ಧಪಡಿಸಿದ ಒಂದು ತರದ ದ್ರವ್ಯದಲ್ಲಿ ಅದರ ಭಾರವು ಹೆಚ್ಚಾಗುವದಕ್ಕಾಗಿ ಕುದಿಸುವರು. ಅದರಲ್ಲಿ ಈ ದ್ರವ್ಯವನ್ನು ಒಮ್ಮೊಮ್ಮೆ ೧೨ ಔಂಸು ರೇಶಿಮೆಯ ತೂಕವು ೬೦ ರಿಂದ ೬೦ ಔಂಸು ಆಗುವವರೆಗೆ ಹಾಕುವರು. ಇಷ್ಟು ತವರು ಆ ರೇಶಿಮೆಯಲ್ಲಿ ಸೇರುವದರಿಂದ ಅದು ಕಡಿಮೆ ತರದ್ದಾಗುವದು. ಈ ತರದ ಕೃತ್ರಿಮ ರೇಶಿಮೆಯ ಬಟ್ಟೆಯನ್ನು ಗಂಟಿನಲ್ಲಿ ಕಟ್ಟಿಟ್ಟರೆ ಅದು ಬೇಗ ಕೆಡುವದಿಲ್ಲ. ಆದರೆ ಅದನ್ನು ಉಪಯೋಗಿಸ ಹತ್ತಿದರೆ ಹೊರಗಿನ ಹವೆಯ ಸಂಪರ್ಕದಿಂದ ಅದರಲ್ಲಿ ಸೇರಿನ ತವರಿನ ಕಣಗಳು ಕ್ರಮಕ್ರಮವಾಗಿ ಬೇರೆಯಾಗುವದರಿಂದ ಬಟ್ಟೆಯು ಶಿಥಿಲವಾಗುತ್ತ ನಡೆಯುವದು. ಅದರಿಂದ ಆ ಬಟ್ಟೆಯು ತೀವ್ರ ಹರಿಯುವದು. ರೇಶಿಮೆಯು ಶುದ್ಧವಾದದ್ದೋ, ಮೇಲೆ ಹೇಳಿದಂತೆ ಕೃತ್ರಿಮವಾದದ್ದೋ, ಎಂಬದನ್ನು ಸುಲಭವಾಗಿ ನೋಡಬೇಕೆಂದಿದ್ದರೆ, ಅದರದೊಂದು ಎಳೆಯನ್ನು ದೀಪದ ಮೇಲೆ ಹಿಡಿಯಬೇಕು. ಶುದ್ಧವಾದದ್ದಿದ್ದರೆ ಕೂದಲು ಸುಟ್ಟಂತೆ ಅದು ಗುಂಡಿನಂತೆ ಆಗುವದು. ಕೃತ್ರಿ

ಮವಾನದ್ದಿದ್ದರೆ ಕಾಗದದ ಸುಟ್ಟಂತೆ ಹಾಗೇ ಬೂದಿ ಉಳಿಯುವದು. ಈ ಬೂದಿಯು ಬಿರುಸು ಇದ್ದಂತೆ ಆ ರೇಶಿಮೆಯಲ್ಲಿ ತವರು ಹೆಚ್ಚಾಗಿ ಸೇರಿದೆಯೆಂದು ತಿಳಿಯಬೇಕು.

---

೪. ಸಾರ್ವಜನಿಕ ಸಂಸ್ಥೆಗಳು. ಬಂಬಯಿಯ ಸೋಶಲ್ ರಿಫಾರ್ಮರ ಎಂಬ ಪತ್ರಿಕಕರ್ತರು ಈ ದೇಶದೊಳಗಿನ ಸಾರ್ವಜನಿಕ ಸಂಸ್ಥೆಗಳ ಸಾಂಪ್ರತ ಸ್ಥಿತಿಯನ್ನು ಕುರಿತು ಕೆಳಗೆ ಬರೆದ ಅಶಯದ ಉದ್ಗಾರಗಳನ್ನು ಪ್ರಕಟಿಸಿದ್ದಾರೆ:—

"ಹಿಂದುಸ್ತಾನದೊಳಗಿನ ಅನೇಕ ಸಾರ್ವಜನಿಕ ಸಂಸ್ಥೆಗಳು ಲೋಕಾಶ್ರಯವನ್ನು ಅವಲಂಬಿಸಿಯೇ ನಡೆದಿರುವವು. ಆದರೆ ಈ ಲೋಕಾಶ್ರಯವನ್ನು ಬೊರಕೆಸುವ ಕಾರ್ಯವು ಬಹು ಮಟ್ಟಿಗೆ ಭಿಕ್ಷಾಟನೆಯನ್ನು ಹೋಲುವದು. ಈ ತರದ ಲೋಕಾಶ್ರಯವನ್ನು ಕೇಳುವ ಜನರಿಗೂ ಹೊಟ್ಟೆಯನ್ನು ಹೊರಕೊಳ್ಳುವದಕ್ಕಾಗಿ ಬಿಕ್ಕೇ ಬೇಡುವ ಜನರಿಗೂ ಇರುವ ಮಹದಂತರವನ್ನು ತಿಳಿದುಕೊಳ್ಳುವಷ್ಟು ಯೋಗ್ಯತೆಯು ಸಾಮಾನ್ಯ ಜನಸಮೂಹದಲ್ಲಿ ಇರುವದಿಲ್ಲವಾದ್ದರಿಂದ ಈ ಅವಸ್ಥೆಯು ಮೇಲಿಂದ ಮೇಲೆ ಬಿದಗುವದು. ಸ್ವಲ್ಪವಾದರೂ ಶರೀರವನ್ನೂ ದಣಿಸದೆ, ವಿಚಾರಶ್ರಮವನ್ನು ಮಾಡದೆ ಲಕ್ಷಾಂತರ ರೂಪಾಯಿಗಳನ್ನು ಎತ್ತಿ ಹಾಕುವಂಥ ಜನರ ಮುಷ್ಕೃತ್ಯಗಳನ್ನು ನೋಡಿ ಜನರು ಸಾಮಾನ್ಯವಾಗಿ ಸ್ವಲ್ಪವಾದರೂ ಅಸಮಾಧಾನ ಪಡುವದಿಲ್ಲ. ಹಾಗು ಸ್ವದೇಶಹಿತಕ್ಕಾಗಿ ತನ್ನ ಎದೆಯ ರಕ್ತವನ್ನು ಅಟ್ಟಿಸಿಕೊಂಡು ಅನೇಕ ತರದ ಕಷ್ಟಗಳನ್ನು ಅನುಭವಿಸುವಂಥ ಪುಣ್ಯಾತ್ಮನ ವಿಷಯದಲ್ಲಿ ಇವರಲ್ಲಿ ಆದರ ಬುದ್ಧಿಯೂ ಕಂಡು ಬರುವದಿಲ್ಲ. ಈಗೀಗ ಸಮಾಜದ ಮುಂದಾಳುಗಳಿಗೆ ಸಾಮಾನ್ಯ ಜನ ಸಮೂಹವು ಸ್ವಲ್ಪ ಮಟ್ಟಿಗೆ ಸಹಾಯ ಮಾಡಹತ್ತಿರುವದೆಂಬದು ನಿಜವು. ಆದರೂ ಎಷ್ಟೋ ತರುಣರು ತಾವು ಹಿಡಿದ ಸಾರ್ವಜನಿಕ ಹಿತದ ಕಾರ್ಯದ ಮಧ್ಯಮಾರ್ಗದಲ್ಲಿ ಅಕಾಲಿಕವಾದ ವೈಧವ್ಯವನ್ನು ಹೊಂದಿ ಪುರಸ್ಥೆಗೆ ಗುರಿಯಾಗಬೇಕಾಗುವದು."

ಸಮುದ್ರದ ಸಪಾಟಯಿಂದ ವಿಜಾಪುರ ಜಿಲ್ಲೆಯೊಳಗಿನ ಸ್ಥಳಗಳ ಎತ್ತರಗಳು

(ಕಳೆದ ಸಂಚಿಕೆಯ ಲನೇ ಪುಟದಿಂದ ಮುಂದೆ ಸಾಗಿದ್ದು.)

೪. ವಿಜಾಪುರ ತಾಲೂಕ.

೫. ಕನ್ನೂರ	೧೯೨೫ಫ್ಲೊ.	೩೧. ಸಾರವಾಡ	೧೭೬೫ಫ್ಲೊ.
೬. ಕಾರಜೋಳ	೧೩೪೯ ,,	೩೨. ಸಿವಣಿಗಿ	೧೮೮೪ ,,
೭. ಕರದಭಾವಿ	೧೯೪೬ ,,	೩೩. ತೊರವಿ	೨೦೦೯ ,,
೮. ಮುಮದಾಪುರ	೧೮೮೪ ,,	೩೪. ತಿಗಣಿಬಿದರಿ	೧೮೩೪ ,,
೯. ನಾಗಠಾಣ	೧೩೩೮ ,,	೩೫. ಕಂಬಾಗಿ	೧೩೬೯ ,,
೧೦. ನಿಡೋಣಿ	೨೦೩೬ ,,		

೫. ಹುನಗುಂದ ತಾಲೂಕ.

೧. ಹುನಗುಂದ	೧೩೬೩ಫ್ಲೊ.	೧೨. ಚಿತ್ತವಾಡಿಗಿ	೧೩೨೩ಫ್ಲೊ.
(ಗುಡ್ಡ	೧೯೩೦),,	೧೩. ಧನ್ನೂರ	೧೩೫೫ ,,
೨. ಐಹೊಳಿ	೧೩೧೮ ,,	೧೪. ಗಂಜೀಹಾಳ	೧೩೩೨ ,,
೩. ಅವಿಾನಗಡ	೧೮೨೩ ,,	೧೫. ಗುಡೂರ	೧೮೦೫ ,,
(ಗುಡ್ಡ	೨೨೧೩) ,,	೧೬. ಹಿರೇಬಾದವಾಡಿಗಿ	೧೩೩೦ ,,
೪. ಅಮರಾವತಿ	೧೩೩೯ ,,	೧೭. ಹಿರೇಮಾಗಿ	೧೮೨೩ ,,
೫. ಬಲಕುಂದಿ	೧೮೯೯ ,,	೧೮. ಹಿರೇಪಿತಗೇರಿ	೧೯೬೦ ,,
(ಗುಡ್ಡ	೨೧೯೧) ,,	೧೯. ಹಿರೇಸಿಂಗನ ಗುತ್ತಿ	೧೯೦೪ ,,
೬. ಬೇವಿನಮಟ್ಟಿ	೧೮೮೫ ,,	(ಗುಡ್ಡ	೧೯೦೩) ,,
೭. ಬೂದೀಹಾಳ, ಸ. ಕಮತಿಗಿ	೧೩೧೩ ,,	೨೦. ಹುಲಗಿನಹಾಳ	೧೩೫೨ ,,
೮. ಚಿಕ್ಕೊಡಗಲಿ	೧೯೪೨ ,,	೨೧. ಇದ್ದಲಗಿ	೧೩೩೦ ,,
೯. ಚಿಕ್ಕನಾಗಿ	೧೮೨೩ ,,	೨೨. ಕಮತಿಗಿ	೧೩೩೮ ,,
೧೦. ಚಿಲಾಪುರ	೧೩೫೫ ,,	(ಗುಡ್ಡ	೧೮೮೮) ,,
೧೧. ಚಿತ್ತರಗಿ	೧೩೩೩ ,,	೨೩. ಕಂದಗಲ್ಲ	೧೮೩೪ ,,
		೨೪. ಕರಡಿ	೧೩೫೬ ,,

೨೫. ಕೆಲೂರ	೧೬೦೫ಫ್ಲೂ	೩೧. ರಕ್ಕಸಗಿ	೧೩೨೯ಫ್ಲೂ
(ಗುಡ್ಡ	೨೦೮೩) ,,	೩೨. ಸಂಗಮ	೧೬೮೯ ,,
೨೬. ಕೋಡೀಹಾಳ	೧೩೧೫ ,,	೩೩. ಸೂಳಿಭಾಂವಿ	೧೮೩೮ ,,
೨೭. ಮರೋಳ	೧೬೬೯ ,,	೩೪. ತುಂಬ	೧೩೩೧ ,,
೨೮. ಮುರಡಿ	೧೯೫೦ ,,	೩೫. ವೂರತಿಗೇರಿ	೧೯೦೯ ,,
೨೯. ನಾಗೂರ	೧೮೩೩ ,,	೩೬. ಇಳಕಲ	೧೯೪೬ ,,
೩೦. ನಂದವಾಡಿಗಿ	೧೮೩೯ ,,		

---

೬. ಇಂಡೀ ತಾಲೂಕ.

೧. ಇಂಡೀ	೧೫೦೪ಫ್ಲೂ.	೨೦. ಹಿರೇಬೇವನೂರ	೧೫೩೬೪
೨. ಅಗರಖೇಡ	೧೫೬೦ ,,	೨೧. ಹೊತಿ೯	೧೬೮೩
೩. ಅಹಿರಸಿಂಗ	೧೫೦೧ ,,	೨೨. ಇಂಚಗೇರಿ	೧೩೬೧ ,,
೪. ಅಂಜುಟಗಿ	೧೫೮೩ ,,	೨೩. ಜಿಗಜೀವನಿ	೭೦೫
೫. ಅಥಗಾ೯	೧೬೧೦ ,,	೨೪. ಖೇಡಗಿ	೧೩೨೬ ,,
೬. ಬಳ್ಳೊಳ್ಳಿ	೧೫೯೦ ,,	೨೫. ಮುಸಳಿ	೧೪೮೧ ,,
೭. ಬರಲೋಡ	೧೬೨೬ ,,	೨೬. ನಾದಖುದ೯	೧೬೧೫ ,,
೮. ಬೆನಕನಹಳ್ಳಿ	೧೫೭೭ ,,	೨೭. ನಂದರಿಗಿ	೧೫೮೫ ,,
೯. ಬತ್ತಗುಣಿಕಿ	೧೫೩೬ ,,	೨೮. ನಿಂಬಾಳ	೧೫೪೫ ,,
೧೦. ಭುಯಾರ	೧೪೯೭ ,,	೨೯. ನಿಂಬರಿಗಿ	೧೬೧೮ ,,
೧೧. ಚಡಚಣ	೧೫೩೭ ,,	೩೦. ನೀವರಗಿ	೧೪೯೫ ,,
೧೨. ಚಣೆಗಾವ	೧೫೩೬ ,,	೩೧. ವಡನೂರ	೧೪೦೫ ,,
೧೩. ಚಿಕ್ಕಬೇವೂರ	೧೪೮೬ ,,	೩೨. ರೇವತಗಾವ	೧೪೯೫ ,,
೧೪. ಚಿಕ್ಕಮಣ್ಣೂರ	೧೬೦೫ ,,	೩೩. ರೋಡಗಿ	೧೩೬೯ ,,
೧೫. ಧೂಳಖೇಡ	೧೫೮೫ ,,	೩೪. ಸಾಲೊಟಗಿ	೧೫೯೭ ,,
೧೬. ಹಲಸಂಗಿ	೧೪೭೦ ,,	೩೫. ಸಾತಲಗಾವ	೧೬೭೧ ,,
೧೭. ಹತ್ತೆಳ್ಳಿ	೧೪೯೫ ,,	೩೬. ಸಿರಶಾಡ	೧೪೬೬ ,,
೧೮. ಹಾವಿನಾಳ	೧೫೭೭ ,,	೩೭. ತಡವಲಗಾ	೧೩೦೦ ,,
೧೯. ಹಿಂಗಣಿ	೧೫೩೭ ,,	೩೮. ತಾಂಬೇ	೧೫೪೬ ,,
		೩೯. ಝುಳಕಿ	೧೫೫೪ ,,

ಮಹಾಲಕ್ಷ್ಮಿ.

ನಮ್ಮ ಕರ್ನಾಟಕಕವಿಮಾಲಿಕೆಯಲ್ಲಿ ಪುರುಷರತ್ನಗಳು ಒಪ್ಪುತ್ತಿರುವಂತೆ ನಡುನಡುವೆ ಸ್ತ್ರೀಮುಕ್ತಾಮಣಿಗಳೂ ಮಿನುಗುತ್ತಿರುವವು. 'ಕಂತಿ' ಎಂಬ ಒಬ್ಬ ವಿದುಷೀಮಣಿಯು ಕ್ರಿ. ಶ. ೧೧೦೪ ರಿಂದ ೧೧೪೫ ರ ವರೆಗೆ ಆಳಿಹೋದ ದ್ವಾರಸಮುದ್ರದ ವಿಷ್ಣುವರ್ಧನ ಬಲ್ಲಾಳನೆಂಬ ಮಹಾರಾಜನ ಆಸ್ಥಾನಪಂಡಿತೆಯಾಗಿದ್ದು, ಆ ಕಾಲದಲ್ಲಿ ಕವಿತ್ವದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಅಭಿನವ ಪಂಪನನ್ನು ಕೂಡ ತನ್ನ ಕವಿತಾ ಚಾತುರ್ಯದಿಂದ ಮರುಳುಗೊಳಿಸಿದ್ದಳು. ಮೈಸೂರಿನ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ (೧೬೭೨–೧೭೦೪) ಇದ್ದ ಸಂಚಿಯ ಹೊನ್ನಮ್ಮನೆಂಬ ವಳು ಹದಿಬದೆಯ ಧರ್ಮ (ಪತಿವ್ರತಾಧರ್ಮ) ವೆಂಬ ಪದ್ಯಗ್ರಂಥವನ್ನು ಬರೆದು ನಮ್ಮ ಕರ್ನಾಟಕ ಸ್ತ್ರೀಸಮಾಜದ ಮೇಲೆ ಅನಂತ-ಉಪಕಾರವನ್ನು ಮಾಡಿರುವಳು. ಮಹಾದೇವಿಯಕ್ಕ, ನೀಲಮ್ಮ ಮೊದಲಾಗಿ ಇನ್ನೂ ಅನೇಕ ಗ್ರಂಥಕರ್ತ್ರಿಯರು ಆಗಿ ಹೋಗಿದ್ದರೂ ಇವರೆಲ್ಲರಲ್ಲಿ ಪ್ರೌಢವಾದ ಶ್ರೀರಾಮಪಟ್ಟಾಭಿಷೇಕವೆಂಬ ಕಾವ್ಯವನ್ನು ಬರೆದ 'ಮಹಾಲಕ್ಷ್ಮಿ' ಎಂಬ ವಳು ಹೆಚ್ಚಿನವಳಾಗಿದ್ದಾಳೆ. ಇವಳ ಮತ್ತು ಇವಳ ಗ್ರಂಥದ ಸ್ವಲ್ಪ ಪರಿಚಯವನ್ನು ಮಾಡಿಕೊಡುವದೇ ಈ ಲೇಖದ ಉದ್ದೇಶವು.

ಪ್ರತ್ಯೇಕವಾಗಿ ಮಹಾಲಕ್ಷ್ಮಿಯ ಚರಿತ್ರವು ಎಲ್ಲಿಯೂ ದೊರೆತಿಲ್ಲವಾದರೂ ಅವಳ ಗ್ರಂಥದಿಂದ ಅವಳ ಚರಿತ್ರದ ಕೆಲವು ಭಾಗವು ದೊರೆಯುವದು.

ಮಂಗಳೂರ್ ಡಿಸ್ಟ್ರಿಕ್ಟಿನಲ್ಲಿ ಉಡುಪಿ, ಎಂಬದೊಂದು ಪ್ರಸಿದ್ಧವಾದ ಕ್ಷೇತ್ರವು. ಅಲ್ಲಿ ಚಾವಡಿಯವರೆಂಬದೊಂದು ಬ್ರಾಹ್ಮಣ ಕುಟುಂಬವು ವಾಸವಾಗಿತ್ತು. ಆ ವಂಶದಲ್ಲಿ ಸುಮಾರು ೧೭ನೆಯ ಶತಕದ ಆರಂಭದಲ್ಲಿ ರಂಗಭಟ್ಟನೆಂಬ ವಿದ್ಯಾಪಕ್ಷಪಾತಿಯಾದ ಸುಶೀಲ ಬ್ರಾಹ್ಮಣನು ಹುಟ್ಟಿದನು. ಈ ರಂಗಭಟ್ಟನ ಮಗಳೇ ಮಹಾಲಕ್ಷ್ಮಿಯು. ಇವಳಿಗೆ ಬಾಲ್ಯದಿಂದಲೂ ವಿದ್ಯಾವ್ಯಾಸಂಗಕ್ಕೆ ಅನುಕೂಲವು ದೊರೆತಂತೆ ತೋರುವದು. ವಿದ್ಯೆಯಲ್ಲಿ ಅಭಿರುಚಿಯುಳ್ಳವಳಾದ್ದರಿಂದೇ ಆ ಅನುಕೂಲವರಿಸ್ಥಿತಿಯ

ಉಪಯೋಗವನ್ನು ಇವಳು ಸರಿಯಾಗಿ ಮಾಡಿಕೊಂಡಳು. ಇವರು ಸ್ಮಾರ್ತಬ್ರಾಹ್ಮಣರು. ತನ್ನ ಗ್ರಂಥದಲ್ಲಿ—

* "ಸಲೆನೋಡಲ್ಕೆದೆ ತಲೆಯೊಳ್ ನವಿರ್ಗಳಾಗಸಂ।
ಚಲಿತಮಧುಪದ್ಯುತಿಯನಾಳ್ದ ಮರೆ ಕಂಬುಗಳ।
ಹೊಳರವೆಯ್ಯಿಂಗಳ ನಯನವೆಸೆವ ಫಾಲಧೃತಪುನ್ನಾಗ
ಶೋಭೆ ನಿಮಿರೆ ॥

---

* ಈ ಪದ್ಯದಲ್ಲಿ ರಾಮಚಂದ್ರನಿಗೂ ಶಿವನಿಗೂ ಅಭೇದವನ್ನು ತೋರಿಸತಕ್ಕದ್ದಿರುವದರಿಂದ ಇಪರಲ್ಲಿಯ ವಾಕ್ಯಾಂಶಗಳೂ ವಿಶೇಷಣಗಳೂ ಎರಡರ್ಥಗಳಾಗುವಂತೆ ಸೇರಿಸಲ್ಪಟ್ಟಿವೆ:-

ರಾಮಚಂದ್ರನ ಪರವಾಗಿ:—ತಲೆಯೊಳ್ ನವಿರ್ಗಳ್ ಸಂಚಲಿತ ಮಧುಪದ್ಯುತಿಯಂ ಆಳ್ದು ಅಮರೆ, (ತಲೆಯಲ್ಲಿ ಕೂದಲುಗಳು ಹಾರಾಡುವ ತುಂಬಿಗಳ ಹೊಳಪನ್ನು ಹೊಂದಿ ಒಪ್ಪಿರಲು) ಮತ್ತ್ಯ ಕಂಬುಗಳ, ಹೊಳರವೆಯ್, ನಯನಂ, ಫಾಲಧೃತಪುನ್ನಾಗಶೋಭೆ ನಿಮಿರೆ, (ಶಂಖದಂತಿರುವ ಕುತ್ತಿಗೆ, ಕಾಂತಿಯುಳ್ಳ ಶರೀರವು, ಕಣ್ಣುಗಳು, ನೆತ್ತಿಯ ಮೇಲೆ ಧರಿಸಿದ ಪುನ್ನಾಗಪುಷ್ಪಗಳ ಶೋಭೆಯು ಉಂಟಾಗಿರಲು) ಕೆಲದೊಳ್ ಅಚಲಾತ್ಮಭವೆ ಇರೆ (ಒದಿಯಲ್ಲಿ ಭೂಮಿಯ ಮಗಳಾದ ಸೀತಾದೇವಿಯು ಇರಲು, ರಾಜಮೌಳಿ (ರಾಜರಲ್ಲಿ ಶ್ರೇಷ್ಠನೆನಿಸಿದ ಶ್ರೀರಾಮಚಂದ್ರನು).

ಶಿವನಪರವಾಗಿ:—ಐದೆ ತಲೆಯೊಳ್ ಅಗಸಂ ನವಿರ್ಗಳ್ ಚಲಿತಮಧುಪದ್ಯುತಿಯಂ ಆಳ್ದು ಅಮರೆ, ಐದು ತಲೆಗಳಲ್ಲಿ(ಶಿವನು-ಪಂಚಮುಖನು)ಆಕಾಶವೆಂಬ ಕೂದಲುಗಳುಳ್ಳವನು. (ಶಿವನಿಗೆ "ವ್ಯೋಮಕೇಶ" ನೆಂದು ಹೆಸರುಂಟು.) ಆದ್ದರಿಂದ ಅವನು ಆಕಾಶವೇ ಕೂದಲಾಗಿ ಉಳ್ಳವನು. ಜಲಿಸುವ ಚಂದ್ರನ (ಮಧುಪ=ಅಮೃತವನ್ನು ಇಟ್ಟುಕೊಂಡವನು) ಕಾಂತಿಯನ್ನು ಹೊಂದಿರಲು (ಚಂದ್ರಶೇಖರನಾದ್ದರಿಂದ), ಕಂಬುಗಳ ಹೊಳಪಮೆಯ್, ಇಂಗಳನಯನಂ, ಎಸೆವಫಾಲಂ, ಧೃತಪುನ್ನಾಗಶೋಭೆನಿಮಿರೆ (ಶಂಖಗಳ ಹೊಳಪುಳ್ಳ (ಬಿಳಿದಾದ) ಶರೀರವು, ಅಗ್ನಿಸೇತ್ರದಿಂದ ಶೋಭಿಸುವ ಹಣೆಯು, ಧರಿಸಿದ ಹಾವುಗಳ ಶೋಭೆಯು ಉಂಟಾಗಿರಲು, ಕೆಲದೊಳ್ ಅಚಲಾತ್ಮಭವೆ ಇರೆ(ಪಕ್ಕದಲ್ಲಿ ಪರ್ವತಪುತ್ರಿಯಾದ ಪಾರ್ವತೀದೇವಿಯು ಇರಲು), ರಾಜಮೌಳಿ (ಚಂದ್ರನನ್ನು ಕಿರೀಟದಲ್ಲಿ ಧರಿಸಿದ ಶಿವನು.)

[ಪೂರ್ವಾರ್ಧದ ಸಭಂಗಶ್ಲೇಷದಿಂದೂ, ಉತ್ತರಾರ್ಧದ ಅಭಂಗಶ್ಲೇಷದಿಂದೂ ಉಂಟಾದ ಅಭೇದಾಧ್ಯವಸಾಯದಿಂದ ಹೇತೂತ್ಪ್ರೇಕ್ಷೆಯನ್ನು ಮಾಡಿದ್ದಾಳೆ.]

ಕೆಲದೊಳಚಲಾತ್ಮಭವೆಮಿರೆ ರಾಜವೆಂಕಳಿಯೇಂ।
ತೊಳಗಿದನೊ ಶಿವನೊಳಂ ತನ್ನೊಳಂ ಭೇದಮೇಂ।
ತಿಲವಾತ್ಮವಿಲ್ಲೆಂಬ ಬೀಜುದನು ಮೊರಲ್ದು ಸಾರ್ಥಕವೆಮಂ
ನೆಗಳ್ಚುವಂತೆ" ॥
(೫ ಸ. ೬೨ ಪ.)

"..ಪರಬ್ರಹ್ಮ ನಿರ್ಗುಣ.....ಮೊಯಾರವಮಾರಾಮ ರಾಮನಾಮ"॥
(೫ ಸ. ೬೬ ಪ.)

ಮೇಲೆ ಹೇಳಿದ ಮೇರೆಗೆ ರಾಮಚಂದ್ರ ಶಿವರಲ್ಲಿ ಅಭೇದವನ್ನೂ ಪರಬ್ರಹ್ಮನಲ್ಲಿ ನಿರ್ಗುಣತ್ವವನ್ನೂ ಹೇಳಿದುದರಿಂದ ಇವಳು ಅದ್ವೈತಮತದವಳೆಂಬದಕ್ಕೆ ಸಂಶಯವಿಲ್ಲ. ಗ್ರಂಥಾರಂಭದಲ್ಲಿ ಶಿವಸ್ತುತಿಯನ್ನು ಮಾಡಿದ್ದರಿಂದ ಶಿವೋಪಾಸಕಳಿದ್ದಳೆಂದು ಹೇಳಬಹುದಾಗಿದೆ.

ತನ್ನ ಕಾಲವನ್ನು ಇವಳು ಗ್ರಂಥದಲ್ಲಿ ಹೇಳಿಲ್ಲ. ಕರ್ನಾಟಕ ಕವಿಗಳಲ್ಲಿ ಷಡಕ್ಷರಿಯ ಹೆಸರನ್ನು ಹೇಳಿದ್ದರಿಂದ ಷಡಕ್ಷರಿಯ ಕಾಲದಿಂದ ಈಚೆಗೆ ಅಂದರೆ ಕ್ರಿ. ಶ. ೧೬೨೭ಕ್ಕೆ ಈಚಿನವಳೆಂದೂ, ಗ್ರಂಥದ ಭಾಷಾಶೈಲಿಯನ್ನು ನೋಡಲು ಬಹಳ ಈಚಿನವಳಲ್ಲವೆಂದೂ ಗೊತ್ತಾಗುವದು. ಅಂದರೆ ೧೭ನೆಯ ಶತಕದ ಮಧ್ಯದಲ್ಲಿ ಇಲ್ಲವೆ ಅಂತ್ಯದಲ್ಲಿ ಜೀವಿಸಿದ್ದಳೆಂದು ಹೇಳಬಹುದು.

ಈ ಮಹಾಲಕ್ಷ್ಮಿಯು ತನ್ನ ಗ್ರಂಥದ ವಿಸ್ತಾರವಾದ ಪೀಠಿಕಾ ಸಂಧಿಯಲ್ಲಾಗಲಿ, ಕೊನೆಯಭಾಗದಲ್ಲಾಗಲಿ, ಪತಿಗೃಹದ ಇಲ್ಲವೆ ಪತಿಯ ಹೆಸರನ್ನೆ ಎತ್ತಲಿಲ್ಲ. "ಉಡುಪ ಪುರವೆಂಬ ಸುಕ್ಷೇತ್ರಮುಂಟಲ್ಲಿ ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ ..... ನೆರೆ ಪೇಳ್ದಳೀ ಸತ್ಕೃತಿಯನು" (೫ ಸ. ೯೭ ಪ.) ಎಂಬ ಪದ್ಯದಲ್ಲಿ ತನ್ನ ತಂದೆಯ ಹೆಸರನ್ನು ಮಾತ್ರ ತಿಳಿಸಿರುವಳು. ಪೀಠಿಕಾ ಸಂಧಿಯಲ್ಲಿ—

* "ಪೆತ್ತಯ್ಯನಯ್ಯನಿಂದನುದಿನದೊಳುಪ್ಪನ್ನ।
ವಿತ್ತು ಪೊರೆದವನಯ್ಯನಿಂದಾತನಿಂದ ಮಾ।

* ಹಡೆದ ತಂದಯು ಶ್ರೇಷ್ಠನು. ಅವನಿಗಿಂತ ನಿತ್ಯವೂ ಉಪ್ಪನ್ನವ ಕೊಟ್ಟು ಕಾಪಾಡಿದವನು ಹೆಚ್ಚಿನ ತಂದೆಯು. ಅವತ್ತಾಲಕ್ಕೆ ಒದಗಿದ ಘಟನು ಹಡೆದ ತಂದೆಯಗಿಂತಲೂ, ಅನ್ನ ವಿತ್ತು ಪೊರೆದವನಿಗಿಂತಲೂ ಹೆಚ್ಚಿನ ತಂದಯು.

ಪತ್ತಿಗೊದವಿದ ಭಟಂ ಪಿತನೆನ್ನದಾತನಾಪದ್ಬಾಂಧವಾದ್ಯ
ರಿಂದ ॥

ಉತ್ತಮೋತ್ತಮನು ಗುರುವಿಂತೆಂಬರೆನಗೆ ಧರೆ।
ಯತ್ತಣಿಂದೋರೊರ್ವರೊಂದೊಂದನುಪದೇಶಿ।
ಸುತ್ತ ಬಗೆ ಬಗೆಯ ಭಾವನೆಯಿತ್ತರನಿಬರೆಲ್ಲರ್ ಗುರು
ಗಳೆಂದೆರಗುವೆಂ ॥

(ಪೀ. ಸ. ಪ. ೩)

ಎಂದು ತನಗೆ ಜನಕ, ಅನ್ನದಾತ, ಆಪದ್ರಕ್ಷಕ, ವಿದ್ಯಾದಾತ, ಎಂಬ ನಾಲ್ಕು ವಿಧದ ತಂದೆಗಳೂ ಉಪಕಾರ ಮಾಡಿದವರೆಂದು ಹೇಳುತ್ತಾಳೆ. ಹೆಂಗಸಾದ್ದರಿಂದ ಉಪನಯನ ಮಾಡಿದ ತಂದೆಯು ಇರುವ ಸಂಭವವಿಲ್ಲ. (जनिताचोपनेताच यश्चविद्यां प्रयच्छति। अन्नदाता भयात्राता पञ्चैते पितरः स्मृताः) ಮೇಲಿನ ಪದ್ಯದಲ್ಲಿ ಉಪ್ಪನ್ನವಿತ್ತು ಪೊರೆದ ತಂದೆಯ ಉಲ್ಲೇಖ ಮಾಡಿದ್ದಾಳೆ. ಗ್ರಂಥದ ಕೊನೆಯ— "ಕನ್ನಡಿತಿ ಚಂಗಳದೇವಿ ಪೇಳೆಂದು ಪೇಳೆ ಪೇಳ್ದಳೀ ಸತ್ಕೃತಿಯನು" ಎಂಬ ಪದ್ಯದಲ್ಲಿ ಕನ್ನಡಿತಿ ಎಂಬುದಾಗಿ ಕನ್ನಡ ಭಾಷೆಯ ಅಭಿಮಾನವುಳ್ಳ 'ಚಂಗಳದೇವಿ' ಎಂಬವಳನ್ನು ಉಲ್ಲೇಖಿಸಿದ್ದಾಳೆ. ಮೇಲೆ ಬರೆದ ಎಲ್ಲಾ ಕಾರಣಗಳನ್ನು ವಿಚಾರಿಸಿ ನೋಡಲು ಇವಳ ತವರ್ಮನೆಯ, ಇಲ್ಲವೆ ಅತ್ತೆಯಮನೆಯ ಪ್ರಸಿದ್ಧಿಯು ಅಷ್ಟೊಂದು ಇರಲಿಲ್ಲವೆಂದೂ, ಆ ಕಾಲದಲ್ಲಿ ಆ ನಾಡಿನಲ್ಲಿ 'ಚಂಗಳದೇವಿ' ಎಂಬ ಒಬ್ಬ ಐಶ್ವರ್ಯವುಳ್ಳ ಸ್ತ್ರೀಯು ಇದ್ದಳೆಂದೂ, ಅವಳೇ ಮಹಾಲಕ್ಷ್ಮಿಗೆ ಅನ್ನ ಕೊಟ್ಟು ಸಲಹಿದ ಪಿತೃವೆಂದೂ ಊಹಿಸಲು ಅವಕಾಶವುಂಟೆಂದು ತೋರುವದು.

ಮಹಾಲಕ್ಷ್ಮಿಯ ಮನೆತನದ ಸ್ಥಿತಿಯು ಯಾವ ಪ್ರಕಾರವಿತ್ತೆಂಬದು ಗ್ರಂಥದಿಂದ ತಿಳಿವಂತೆ ಇಲ್ಲ. ಬಾಲ್ಯದಿಂದ ಸಂಸ್ಕೃತ ಕಾವ್ಯ-ಪುರಾಣ ಮೊದಲಾದವನ್ನು ವ್ಯಾಸಂಗ ಮಾಡಿದ್ದಳೆಂದೂ, ಕನ್ನಡದಲ್ಲಿಯೂ ಅನೇಕ

ವಿದ್ಯೆಯನ್ನು ಹೇಳಿದವನು ಹಿಂದೆ ಹೇಳಿದ ಮೂರು ತರದ ತಂದೆಗಳಿಗಿಂತ ಹೆಚ್ಚಿನ ತಂದೆಯು. ಇವರಲ್ಲಿ ನನಗೆ ಒಬ್ಬೊಬ್ಬರು ಒಂದೊಂದನ್ನು ಉಪದೇಶಿಸಿ ಬಗೆ ಬಗೆಯ ಜ್ಞಾನವನ್ನುಂಟು ಮಾಡಿದ್ದರಿಂದ ಇವರೆಲ್ಲರು ಗುರುಗಳೆಂದು ನಮಸ್ಕರಿಸುವೆನು.

ಕಾವ್ಯಗಳನ್ನೂ, ಭಾಷಾಮರ್ಯಾದೆಯನ್ನೂ ವ್ಯಾಕರಣವನ್ನೂ ಅಭ್ಯಾಸಿಸಿದ್ದಳೆಂದೂ ಇವಳ ಗ್ರಂಥದಿಂದೇ ವ್ಯಕ್ತವಾಗುತ್ತದೆ. ಇದಲ್ಲದೆ ವೇದದ ಕೆಲ ಕೆಲವು ಭಾಗದ ಅರ್ಥವನ್ನು ತಿಳಿದುಕೊಂಡಿದ್ದಳೆಂಬದು (ರಾಮಚಂದ್ರ ಪರಬ್ರಹ್ಮನ ವರ್ಣನೆಯನ್ನು ಮಾಡಿದ ಪ್ರಸಂಗದಲ್ಲಿ—"ಅಣೋರಣೀಯನುಂ ಮಹತೋಮಹೀಯನುಂ ನೀನೆಂಬುದು (ಋನೆ. ಸ. ೬೭ ಪ.) "ಪೊಗಳ್ವಿನಂ ನಿಗವಮಾಳಿಯೊಲ್ದತ್ಯತಿಷ್ಠದ್ದಶಾಂಗುಲಮೆನೆ" (ಋನೆ. ಸ. ೬೮ ಪ.) ಎಂಬ ವೇದವಾಕ್ಯಗಳನ್ನು ಅನ್ವಯಿಸಿಕೊಂಡಿರುವದರಿಂದ ಗೊತ್ತಾಗುವದು. ಈ ಮೇರೆಗೆ ಬಾಲ್ಯದಿಂದಲೂ ವಿದ್ಯಾವ್ಯಾಸಂಗ, ಗ್ರಂಥರಚನೆ ಮೊದಲಾದ ಸ್ತುತ್ಯವಾದ ಉದ್ಯೋಗಗಳಲ್ಲಿ ತನ್ನ ಆಯುಷ್ಯವನ್ನು ವೆಚ್ಚ ಮಾಡಿದ ಈ ವಿದುಷಿಯು ಸ್ತ್ರೀ ಸಮಾಜಕ್ಕೆ ದೃಷ್ಟಾಂತವಾಗಿದ್ದಾಳೆ.

ಇವಳು ಬರೆದ "ಶ್ರೀರಾಮ ಪಟ್ಟಾಭಿಷೇಕ" ವೆಂಬ ಗ್ರಂಥವು *ಖಂಡ ಕಾವ್ಯಗಳ ವರ್ಗಕ್ಕೆ ಸೇರಿದ್ದು. ಶ್ರೀರಾಮನು ವಿಭೀಷಣನಿಗೆ ಲಂಕೆಯಲ್ಲಿ ಪಟ್ಟವನ್ನು ಕಟ್ಟಿ ಪುಷ್ಪಕ ವಿಮಾನದಲ್ಲಿ ಪರಿವಾರದೊಡನೆ ಹೊರಟು ನಂದಿಗ್ರಾಮದಲ್ಲಿ ಭರತನನ್ನು ಕಂಡು ಅವನೊಡನೆ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದನೆಂಬದೇ ಈ ಗ್ರಂಥದ ಕಥಾಸಾರವು. ಇದರಲ್ಲಿ ನಾಂದೀಸಂಧಿ, ಪೀಠಿಕಾಸಂಧಿ, ಎಂಬೆರಡೂ, ಕಥೆಯನ್ನು ವರ್ಣಿಸಿದ ಮೂರೂ ಕೂಡಿ ಒಟ್ಟಿಗೆ ಐದು ಸಂಧಿಗಳುಂಟು. ಮುಖ್ಯವಾಗಿ ಪೀಠಿಕಾಸಂಧಿ, ಸಮುದ್ರವರ್ಣನೆ, ಶ್ರೀರಾಮನಿಗೂ ಆತನ ತಾಯಂದಿರಿಗೂ ದರ್ಶನ, ಪಟ್ಟಾಭಿಷೇಕಾನಂತರ ಶ್ರೀರಾಮಸ್ತೋತ್ರ ಮೊದಲಾದ ಭಾಗಗಳು ಬಹು ಮನೋಹರವಾಗಿವೆ. ಅವುಗಳಲ್ಲಿ ಕೆಲವು ಪದ್ಯಗಳನ್ನು ಇಲ್ಲಿ ಅವತರಿಸಿದೆ.

ಶಬ್ದ ಮಾಡುತ್ತಿರುವ ಸಮುದ್ರವನ್ನು ನೋಡಲು ಅದು ಗೋಳಿಡುವದೋ ಎಂಬಂತೆ ತೋರುವದು.

"ಹರಹರಾ! ಕಾಲವಿನ್ನೆಂತಿಹುದೊ ಸೌಭಾಗ್ಯ।
ಭರಿತನಾಗಿರ್ದಂದು ಸಕಲರೋಲೈಸಿದರ್।

---

* खंडकाव्यं भवेत्काव्यस्यैकदेशानुसारि च॥

ಸುರರಪೋಲಾಗಲದು ಬಡತನಂ ಪ್ರೊರ್ದೆ ಭಂಗಕ್ಕಿನಿತ್ತು
ಪಕ್ಕಾದೆನ್ನೈ॥

ಪೆರೆಮಗಂ ಬಾನೇರ್ದನೆಣುಗಿ ಯರಸನನುಯ್ದು।
ಧರೆಯತ್ತಸೇರ್ದಳರಸಿಯರು ಮೋರೊಂದೆಡೆಯೊ।
ಳಿರುವರೆನಗಿಲ್ಲ ಗತಿ ನೀನೆಂದು ಹರಿಗೆ ಮೊರೆಯಿಡುವದೆನ
ಲಬ್ಧಿ ಮೊರೆಗುಂ॥

(೩. ಸ. ೧೭ ಪ.)

[ಹರಹರಾ! ಕಾಲವೆಂಥಾದ್ದೊ! ಸಂಪತ್ತುಳ್ಳವನಾದಾಗ ನನ್ನನ್ನು ಎಲ್ಲರೂ ಸಲಯಿಸಿದರು. ಆ ಸಂಪತ್ತು ದೇವತೆಗಳ ಪಾಲು ಆಗಲು ಇಂಥ ನಿಕೃಷ್ಟಾವಸ್ಥೆಗೆ ಬಂದೆನು:-ಮಗನು-ಚಂದ್ರನು (ಸ್ವರ್ಗಕ್ಕೆ) ಹೋದನು. ಮಗಳು (ಲಕ್ಷ್ಮಿ) ಗಂಡನೊಡನೆ ಭೂಮಿಯಲ್ಲಿರಹತ್ತಿದಳು. ಹೆಂಡಿರು (ನದಿಗಳು) ಒಬ್ಬೊಬ್ಬರು ಒಂದೊಂದು ಕಡೆಗೆ ಇರುವರು. ನನಗೆ ಇನ್ನಾರೂ ಇಲ್ಲ. ನೀನೇ ಗತಿ; ಎಂದು ಶ್ರೀರಾಮಚಂದ್ರನೆದುರಿಗೆ ಗೋಳಿಡುವದೋ ಎಂಬಂತೆ ಸಮುದ್ರವು ಶಬ್ದ ಮಾಡುತ್ತಿರುವದು.]

ಮೋಹಿಗಳು ಸಮುದ್ರವನ್ನು ಪರೀಕ್ಷಿಸಿದಂತೆ ವರ್ಣಿಸುತ್ತಾಳೆ:—

ಏನಿಪಚ್ಚರಿ! ಬೇಡಿದರ್ಗೆ ಕರಿತುರಗಭೂ।
ಧೇನು ನವರತ್ನ ಕನ್ಯಾಕಲ್ಪ ಭೂರುಹ ನ।
ವೀನ ಪೀಯೂಷ ವಸ್ತ್ರಾಭರಣಗೇಹ ನಿಜದೇಹಂಗಳಂ
ಮಾಣದೆ॥

ದಾನವಿತ್ತಾದುದೇನಿರ್ಪುದೆಮಗೀಯಲೆಂ।
ದಾನೀರದಂಗಳಬ್ಧಿಯ ನಳ್ಕಿ ಬೇಡಿದೊಡೆ।
ತಾನಂಜಿದನೆ ಜೀವನಂಗೊಟ್ಟನೆನೆ ಚಿತ್ರವುಲ್ಲೆ ಧಾರ್ಮಿಕರ
ಚರಿತಂ॥

(೩೯ ಸ. ೩೩೯ ಪ.)

[ಏನಾಶ್ಚರ್ಯವಿದು! ಸಮುದ್ರನು ಬೇಡಿದವನಿಗೆ ಆನೆ, ಕುದುರೆ, ಭೂಮಿ, ಕಾಮಧೇನು, ನವರತ್ನಗಳು, ಕನ್ಯೆ, ಕಲ್ಪವೃಕ್ಷ, ಅಮೃತ,

ವಸ್ತ್ರಾಭರಣ, ಮನೆ, ಮೊದಲಾದವನ್ನು ದಾನವಾಗಿ, ಕೊಟ್ಟವನು.* ಆಯಿತು, ನಮಗೆ ಕೊಡುವದಕ್ಕೆ ಅವನ ಬಳಿಯಲ್ಲಿ ಇನ್ನೇನು ಉಳಿದಿದೆ? (ನಾವು ಅವನ ಬಳಿಯಲ್ಲಿ ಯಾಚನೆ ಮಾತಿ ಪರೀಕ್ಷಿಸುವ) ಎಂದು ಮೋಡಗಳು ಸಮುದ್ರನಲ್ಲಿ ಯಾಚನೆ ಮಾಡಲು ಅವನೇನು ಹೆದರಿದನೆ? ಅವುಗಳಿಗೆ ಜೀವನವನ್ನೇ (ಜೀವನ=ಜೀವ, ನೀರು) ಕೊಟ್ಟನು. ಧಾರ್ಮಿಕರ ಚರಿತ್ರವು ಆಶ್ಚರ್ಯಕರವಾದದ್ದಲ್ಲವೆ?]

ಇದೇ ಮೇರೆಗೆ ಸಮುದ್ರ ವರ್ಣನೆಯ ಪ್ರತಿಯೊಂದು ಪದ್ಯವು ಮನೋಹರವಾಗಿದೆ.

ವಿಮಾನವು ಪಂಚವಟಿಯ ಬಳಿಗೆ ಬರಲು ರಾಮಚಂದ್ರನು ಅಲ್ಲಿಯ ಮೊದಲಿನ ತಮ್ಮ ಎಲೆವನೆ ಮೊದಲಾದುವನ್ನು ತೋರಿಸುವನು:—

"ಅರಗಿಳಿಯನುಳಿದ ಪಂಜರದಂತೆ ಜೀವನಂ।
ತೊರೆದ ತನುವಂತೆ ಭಗಣೇಶನಡಗಿದ ಕಾ।
ರಿರುಳಿನಾಗಸದಂತೆ ತೋರ್ಪುದೆಲೆವನೆಯಂದಿನೆಡೆಯ
ನೋಡಬ್ಜಾನನೇ॥
ಪರೆದು ಕೀಳ್ಕೊಗಗೊಂಡು ಮಾಧವೀಲತೆಯೆ ಮಾ।
ಮರನೊಳೊಪ್ಪಂ ಬಿಟ್ಟುದಿತ್ತಿತ್ತ ಬಾಡಿದುದು।
ಕುರವಕಂ ನೋಡೆಂದು ತೋರೆ ಬಳಿಕಾರಥಂ ಪರಿದುನುತ್ತೆ
ರಕೆ ಜವದಿ॥
(೩ನೇ ಸ. ೪೨ನೆ ಪ.)

[ಕಮಲಮುಖೀ, ಅಂದಿನ ಎಲೆವನೆಯನ್ನು ನೋಡು; (೧) ಅರಗಿಳಿಯಿಲ್ಲದ ಪಂಜರದಂತೆಯೂ, (೨) ಜೀವವಿಲ್ಲದ ಶರೀರದಂತೆಯೂ, (೩) ಚಂದ್ರನಿಲ್ಲದ ಕತ್ತಲೆಯ ರಾತ್ರಿಯಂತೆಯೂ, (೧ ಹಾಳಾಗಿಯೂ, ೨ ಅಮಂಗಳವಾಗಿಯೂ, ೩ ಭಯಂಕರವಾಗಿಯೂ,) ತೋರುವದು. ವಾಸಂತೀ ಬಳ್ಳಿಯು ಹರಡಿಕೊಂಡು ಕೆಳಗೆ ಮೋರೆ ಹಾಕಿಕೊಂಡು

---

* ಸಮುದ್ರನು–ಐರಾವತ ಮೊದಲಾದ ಚತುರ್ದಶ ರತ್ನಗಳನ್ನು ದೇವತೆಗಳಿಗೆ ಕೊಟ್ಟಂತೆ ಪರಶುರಾಮನಿಗೆ ಭೂಮಿಯನ್ನು, ವೈಶ್ರವಣನಿಗೆ ಮನೆಯನ್ನು ಇಲ್ಲವೆ ಆಶ್ರಯವನ್ನು ಕೊಟ್ಟದ್ದು ಪುರಾಣಪ್ರಸಿದ್ಧವಾದದ್ದು.

ಮಾವಿನ ಮರನೊಡನೆ ಕೋಭಿಸದೆ ಬೇರೆಯಾಗಿದೆ. ಇತ್ತ ನೋಡು, ಗೋರಂಟಿ ಗಿಡವು ಬಾಡಿರುವದು; ಎಂದು ರಾಮನು ಸೀತೆಗೆ ತೋರಿಸುತ್ತಿರಲು ಆ ವಿಮಾನವು ವೇಗದಿಂದ ಉತ್ತರಕ್ಕೆ ಸಾಗಿತು.]

ರಾಮಚಂದ್ರನು ಲಂಕೆಯಿಂದ ಈಗಲೆ ಬರುವನೆಂಬ ಸುದ್ದಿಯನ್ನು ಹನುಮಂತನು ಮೊದಲೇ ತಿಳಿಸಿರಲು ಭರತ-ವಸಿಷ್ಠ ಮೊದಲಾದವರು ಪುರಜನರೊಂದಿಗೆ ಸಂಭ್ರಮದಿಂದ ಕಾದುಕೊಂಡಿರಲು, ವಿಮಾನದಲ್ಲಿ ಬರುತ್ತಿದ್ದ ರಾಮಚಂದ್ರನು ಅವರಿಗೆ ಕಾಣಿಸಿದನು:—

"ಉರ್ವೆನೆರೆ ಜನರ ಸಂತಸಗಡಲ್ ನಗೆಜೊನ್ನೆ।
ಪರ್ವೆಬಾಲರ ಸುಮಂತ್ರಾದಿ ನಾಯಕರಳಲ್।
ಮರ್ಬಳಯೆ ನೀರೆಯರ ಕಣ್ಮಿಕ್ಕಿನಲಿಯಲ್ ಭರತನ ಬಗೆ
ನ್ಯೆದಿಲರಳೆ॥
ಒರ್ಬಗೆ ಬೆಮರ್ವನಿಯನಿಬರೊಳೆತ್ತಂ ತೋರ್ದು।
ಪರ್ಬಿ ಮೈನವಿರಗೆಯದೊಪ್ಪಿರಲೊಸಗೆಗಮ್ಮೆ।
ಲರ್ಬಿಡದೆ ತೀಡಲಾದುದು ರಾಮಚಂದ್ರೋದಯಂ ಬುಧರ
ಬಾಯ್ಸವಿಗೆನೆ॥
(ಳನೆ ಸಂ—೩೪ನೇ ಪ.)

[ಜನರ ಸಂತೋಷವೆಂಬ ಸಮುದ್ರವು ಉಕ್ಕೇರಲು, ಬಾಲಕರ ನಗೆಯೆಂಬ ಬೆಳ್ದಿಂಗಳು ಹರಡಲು, ಸುಮಂತ್ರ ಮೊದಲಾದ ಅಧಿಕಾರಿಗಳ ಚಿಂತೆಯೆಂಬ ಕತ್ತಲೆಯು ಹರಿದು ಹೋಗಲು, ಸ್ತ್ರೀಯರ ಕಣ್ಣುಗಳೆಂಬ ಚಕೋರಪಕ್ಷಿಗಳು ಸಂತೋಷಬಡಲು, ಭರತನ ಹೃದಯವೆಂಬ ನೈದಿಲೆ ಅರಳಲು, ಎಲ್ಲರಲ್ಲಿ ಬೆಮರ ಹನಿಗಳು ತೋರಿ ಮೈಗೂದಲೆಂಬ ಸಸಿಗಳು ಒಪ್ಪಿರಲು, (ಚಂದ್ರನು ವನಸ್ಪತಿಗಳ ಪೋಷಕನು) ಹರ್ಷವೆಂಬ ಸುಗಂಧ ಮಾರುತನು ಬೀಸುತ್ತಿರಲು, ಬುಧರ (ದೇವತೆಗಳ—ಪಂಡಿತರ) ಸಂತೋಷಕ್ಕಾಗಿ ರಾಮಚಂದ್ರನೆಂಬ ಚಂದ್ರನ ಉದಯವು ಆಯಿತು.]

ಇಲ್ಲಿ ರಾಮನಲ್ಲಿ ಚಂದ್ರತ್ವವನ್ನು ರೂಪಿಸಿದ್ದರಿಂದ ಚಂದ್ರೋದಯದಲ್ಲಿ ಸಮುದ್ರದ ಏರಿಕೆ, ಬೆಳ್ದಿಂಗಳು ಬೀಳುವಿಕೆ, ಮೊದಲಾದ ಕಾರ್ಯಗಳು ಆಗುವಂತೆ ಇಲ್ಲಿಯೂ ಜನರ ಸಂತಸಗಡಲು ಉಕ್ಕೇರಿತು, ಮೊದಲಾಗಿ ರೂಪಕದಿಂದ ಚಮತ್ಕಾರವಾಗಿ ವರ್ಣಿಸಿರುವಳು. ಈ ವರ್ಣನೆ

ಯಿಂದ, ರಾಮಚಂದ್ರನ ಬರವನ್ನು ಹಾರೈಸಿಕೊಂಡಿದ್ದ ಜನರ ಹರ್ಷಕ್ಕೆ ಪಾರವೇ ಉಳಿಯಲಿಲ್ಲ. ರಾಮಚಂದ್ರನ ಆಗಮನಕಾಲದ ಉತ್ಸವದಿಂದ ಬಾಲಕರಿಗೂ ಹರ್ಷವಾಯಿತು. ಸಮರ್ಥನಾದ ರಾಜನು ಬಂದದ್ದರಿಂದ ಮಂತ್ರಿಗಳ ರಾಜ್ಯಭಾರದ ಚಿಂತೆಯು ಕಡಿಯಿತು. ಪರನು ಸುಂದರ ಮೂರ್ತಿಯ ದರ್ಶನಲಾಭದಿಂದ ಸೌಂದರ್ಯಾಭಿಲಾಷಿಣಿಯರಾದ ಹೆಂಗಸರ ಕಣ್ಣಿಗೆ ಪಾರಣೆಯಾಯಿತು. ಅಣ್ಣನ ಸಮಾಗಮದಿಂದ ಭರತನ ಮನಂದವು ಹೆಚ್ಚಿತು. ರಾಮಚಂದ್ರನಲ್ಲಿ ವಿಶೇಷವಾದ ಅನುರಾಗವಿದ್ದದರಿಂದ ಜನರಿಗೆ ಸಾತ್ವಿಕಭಾವಗಳಿನಿಸಿದ ಬೆವರೂ ರೋಮಾಂಚನಗಳೂ ಉಂಟಾದವು. ಎಲ್ಲರಲ್ಲಿಯೂ ಉತ್ಸವದ ಹರ್ಷವು ಗಾಳಿ ಸುಳಿದಂತೆ ಸುಳಿಯಿತು. ಎಂಬ ಅಭಿಪ್ರಾಯಗಳು ಹೊರಡುತ್ತವೆ.

ಕೌಸಲ್ಯಾರಾಮರ ದರ್ಶನ.

ಮುಗಿದರಳಿನೋಳ್ಪಕಣ್ಗಳ ಬಿಗಿಸಡಿಲ್ವ ಪು।
ರ್ವಗಳ ಬೆವರೊಡೆದು ನೆರೆದುಬ್ಬುವಾನನದ ಪೊ।
ದ್ದುಗೆಗೊಂಡ ಜಡೆಯ ತೊಡವಿಲಿಕೊಡಂಕೆಯ
ಕುಗ್ಗೀನೇರಮೆಳ್ದಪ್ಪಗಳದ ॥
ಸುಗಿದೊಗೆದ ಮೆಯ್ಯನೇರ್ತರಗೊಂಡು ಭಾವಿಸುವ।
ಬಗೆಯ ನಿಜಮಾತೆಯಂ ರಾಘವಂ ರಾಹು ಕೈ।
ದೆಗೆದ ಶಶಿಯಂತೆಸೆವ ರಾಮನಂ ಕುಶಲೆಯುಂ ಕಂಡರೋ
ರ್ವರಾಗ ॥
(ಸಂ-೫. ಪ-೧೯)

ಈ ಗ್ರಂಥದಲ್ಲಿ ಪಟ್ಟಾಭಿಷೇಕದ ಕಥೆಯನ್ನು ಮಾತ್ರ ವರ್ಣಿಸಿದ್ದರೂ ಉತ್ತರರಾಮಚರಿತ್ರದಲ್ಲಿ ಹೇಳಿದಂತೆ ವಿಮಾನವನ್ನೇರಿ ರಾಮನು ಅಯೋಧ್ಯೆಗೆ ಬಂದ ಸಂದರ್ಭದಲ್ಲೂ, ಇತರ ಪ್ರಸಂಗಗಳಲ್ಲೂ ರಾಮಾಯಣದ ಎಲ್ಲಾ ಕಥಾಭಾಗವನ್ನು ಸೂಚಿಸಿವ್ದಾಳೆ. ಅಂಥ ಒಂದು ಶ್ಲೋಕವನ್ನು ಕೆಳಗೆ ಕೊಟ್ಟಿದೆ.

---

೧. ಆಭರಣವಿಲ್ಲದ, ೨. ಕವಿಯ, ೩. ಕುತ್ತಿಗೆಯ, ೪. ಸುಕ್ಕುಗೊಂಡು, ೫. ಸರಳಭಾವವನ್ನು ವಹಿಸಿ, ೬. ಮನಸ್ಸಿನ ೭. ಕೌಶಲ್ಯೆ.

ರಾಮನು ಕೌಶಲ್ಯೆಯ ಚರಣಕ್ಕೆರಗಿದನು:—

ಕೆತ್ತಡಿಯ ಜನ್ನಮುಂ ಕಾದು ಪೆಂಗ್ಗೆಯ್ದಡಿಯಿ ।
ನೊತ್ತಿಕಲ್ಲಂ ಹರನ ಬಿಲ್ಮುರಿದು ಭಾರ್ಗವನೆ ।
ನೊಕ್ಕಟ್ಟಗುಳಿದಯ್ಯನಾಣೆಯಂ ಬಿಡದಡವಿಯಂ
ಸಾರ್ದು ಕೇಶರ್ಕಳ ॥

ಪೊತ್ತಮುಂ ಪೊರೆದು ಕಡಲಂ ಕಟ್ಟಿ ದಾನವರ ।
ನೆತ್ತರಂ ಚೆಲ್ಲಿ ತಿರಪೊರೆಯಳಿಸಿದ ಜಸವಂ ।
ಪೊತ್ತಭಾರಕೆ ಸಿದಂ ಬಾಗಿತೆನೆ ಮಾತೆಯಡಿಗೆರಗಿದಂ
ಶ್ರೀರಾಮನು ॥

(ಸಂ–೫. ಪ–೨೧)

[ಋಷಿಯಾದ ವಿಶ್ವಾಮಿತ್ರನ ಯಜ್ಞವನ್ನು ಕಾದು, ಹೆಜ್ಜೆಯಿಂದ ಕಲ್ಲನ್ನು ಮೆಟ್ಟಿ ಸ್ತ್ರೀಯನ್ನಾಗಿ ಮಾಡಿ (ಅಹಲ್ಯೆಯನ್ನು), ಶಿವನ ಬಿಲ್ಲನ್ನು ಮುರಿದು (ಸೀತಾಸ್ವಯಂವರ) ಪರಶುರಾಮನನ್ನು ಸೋಲಿಸಿ, ತಂದೆಯ ಅಪ್ಪಣೆಯನ್ನು ವೀರದೆ ವನಕ್ಕೆ ತೆರಳಿ, ವಾನರರ ದಂಡನ್ನು ಕೂಡಿಸಿ, ಸಮುದ್ರಕ್ಕೆ ಸೇತುವೆಕಟ್ಟಿ ರಾಕ್ಷಸರನ್ನು ಕೊಂದು ಭೂಭಾರವನ್ನು ಇಳಿಸಿ ಬಂದಂಥ ಕೀರ್ತಿಯನ್ನು ಹೊತ್ತ ಭಾರಕ್ಕಾಗಿ ತಲೆಯು ಬಾಗಿತೋ ಎಂಬಂತೆ ಶ್ರೀರಾಮನು ತಾಯಿಯ ಪಾದಕ್ಕೆರಗಿದನು.]

ಸಂಸ್ಕೃತ ಶ್ಲೋಕಗಳ ಭಾವಪರಿವರ್ತನೆ ಮಾಡುವದೂ ಇವಳಿಗೆ ಚೆನ್ನಾಗಿ ಸಾಧಿಸಿರುವದು. ಕಾಲಿದಾಸನ—

"मन्दः कवियशः प्रार्थी गमिष्याम्युपहास्यताम् ।
प्रांशुलभ्ये फले लोभाद्बाहुरिव वामनः" ॥

ಎಂಬ ಶ್ಲೋಕದ ಭಾವವನ್ನು ಪರಿವರ್ತಿಸಿದ ಪದ್ಯವನ್ನು ಅವತರಿಸಿದೆ:—

ತೊಟ್ಟ ತುದಿಮರನೊಳಿಹ ಪಣ್ಗೆ ಗುರಿಬಾಯ್ವಿಟ್ಟು ।
ಮುಟ್ಟಕೊಯ್ದಪೆನೆಂಬ ಭ್ರಾಂತಿಯಿಂ ಕೈಸಿಳ್ಕಿ ।
ದಿಟ್ಟಸುತ ನೆಗೆಯಲುಜ್ಜುಗಿಪ ವಾಮನನಂತೆ ಕವಿತಾಸು
ಲಕ್ಷಣಗಳ ॥

ಗುಟ್ಟನರಿಯದೆ ಕಷ್ಟಸಾಧ್ಯವಹ ಕೃತಿಗೆ ಮನ।
ಗೊಟ್ಟಳೆಂದೆನ್ನ ನಗೆಗೀಡುಮಾಡದೆ ಜಗದಿ।
ಪುಟ್ಟಿದವರಿಗೆ ಮನದ ಬಯಕೆ ಪಿರಿದೆಂದು ಮನ್ನಿಪುದಿದಂ
ಸರ್ವಜನರು ॥

(ಪೀ. ಸಂ. ೪ ನೇ ಪ.)

ಇಲ್ಲಿಗೆ ಅವತರಣಿಕೆಗಳು ಸಾಕು. ಇಷ್ಟರಿಂದಲೇ ಅವಳ ಗ್ರಂಥದ ಪರಿಚಯವು ಪಾತಕರಿಗೆ ಆಗಿರಬಹುದು. ಇದರಲ್ಲಿಯ ಅವತರಣಿಕೆಗಳನ್ನು ಆರಿಸಬೇಕಾದ ಅವಶ್ಯವೇ ಬೀಳಲಿಲ್ಲ. ಯಾವ ಪದ್ಯವನ್ನು ತೆಗೆದುಕೊಂಡರೂ ಅದು ಮನೋಹರವಾಗಿಯೂ ವಿಚಾರಾರ್ಹವಾಗಿಯೂ ಇರುವದು. ಅಲ್ಲಲ್ಲಿ ಎಷ್ಟೋ ನೀತಿಗಳು ಅಡಕವಾಗಿವೆ. ಈ ಗ್ರಂಥವು ಕನ್ನಡ ವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಹೊಂದಲು ತಕ್ಕದ್ದಾಗಿದೆ. ಇಂಥ ಗ್ರಂಥವನ್ನು ಕನ್ನಡನಾಡಿನ ಹೆಂಗಸು ಬರೆದಿರುವಳೆಂಬದು ಗೌರವಾಸ್ಪದವಾದ ವಿಷಯವು. ಉಪಸಂಹಾರದಲ್ಲಿ—

"ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ।
ಕನ್ನಡಿಗನೊರೆದ ನುಡಿಯೆಂದು ಸಂಭಾವಿಪುದು।
ಕನ್ನಡಿಗನೇಕ ಪೆಸರಿರ್ದೊಡೇನಕ್ಕು ಫಲವೆಸೆವಮೊಗ
ಗಾಣ್ಬದಲ್ತೇ" ॥

(ಪೀ. ಸಂ. ೮ ನೇ ಪ.)

ಹೆಂಗಸಿನ ಗ್ರಂಥವನ್ನೇನು ಓದಬೇಕು? ಎಂದು ಹೀಯಾಳಿಸದೆ ಗಂಡಸು ಬರೆದ ಗ್ರಂಥವನ್ನು ಮನ್ನಿಸುವಂತೆ ತನ್ನ ಗ್ರಂಥವನ್ನು ಎಲ್ಲರೂ ಮನ್ನಿಸಬೇಕೆಂದು ಗ್ರಂಥಕರ್ತ್ರಿಯು ಪೀಠಿಕೆಯಲ್ಲಿ ವಿನ್ನವಿಸಿದಂತೆ, ಆನಂದ, ವ್ಯವಹಾರಜ್ಞಾನ, ನೀತಿ ಮೊದಲಾದ ಫಲಗಳನ್ನು ಕೊಡುವ ಈ ಕಾವ್ಯವನ್ನು ಎಲ್ಲ ಕನ್ನಡಿಗರೂ ಒಮ್ಮೆಯಾದರೂ ಅವಶ್ಯವಾಗಿ ಓದಿ ನೋಡಬೇಕೆಂದು ವಿನ್ನವಿಸುತ್ತೇನೆ.

ಧಾರವಾಡ.
ತಾ॥ ೨೪-೯-೧೩ } ಪೂಜಾರ.

ಬ್ರಹ್ಮಚರ್ಯ

(ಮಿಕೆ. ರ. ನರೇಂದ್ರ ಇವರು ತರುಣ ವಿದ್ಯಾರ್ಥಿಗಳಿಗೋಸ್ಕರ ಬರೆದದ್ದು)-

೧. ಭೂಮಿಯಲ್ಲಿ ಯಾವದೊಂದು ಬೀಜವನ್ನು ಬಿತ್ತಬೇಕಾದರೆ, ಅದಕ್ಕೆ ಯೋಗ್ಯಕಾಲವನ್ನು ನೋಡಬೇಕಾಗುತ್ತದೆ. ಅದರಂತೆ ಮನುಷ್ಯಪ್ರಾಣಿಯ ವನಸ್ಸಿನಲ್ಲಿ, ಯಾವದೊಂದು ವಿಚಾರವನ್ನು ಪ್ರೇರಿಸಬೇಕಾದರೆ, ಅದಕ್ಕೆ ಅನುಕೂಲವಾದ ವಯಸ್ಸು ನೋಡುವದು ಅವಶ್ಯವದೆ. ಇನ್ನು ನಾನು, ತಮ್ಮೆಲ್ಲರ ಮುಂದೆ ಇಡುವ ವಿಚಾರಕ್ಕೆ ತಮ್ಮ ಸಾಂಪ್ರತದ ವಯಸ್ಸೇ ಯೋಗ್ಯವಿರುವದರಿಂದ, ನನ್ನ ಅಲ್ಪವಿಚಾರವನ್ನು ತಮ್ಮ ಮುಂದೆ ಇಡುತ್ತೇನೆ.

೨. ಹಿಂದುಸ್ತಾನದ ಜನರ ವಯಸ್ಸಿನ ಕಡಿಗೆ ಸೂಕ್ಷ್ಮದೃಷ್ಟಿಯಿಂದ ನೋಡಿದರೆ, ದೀರ್ಘಾಯುಷಿಗಳಾದ ಜನರು ತೀರ ಕಡಿಮೆ ಇದ್ದದ್ದು ಕಂಡುಬರುತ್ತದೆ. ಋಷಿಕಾಲದ ಸಂಗತಿಯನ್ನು ಬಿಟ್ಟು, ಸುಮಾರು ನೂರು ವರ್ಷಗಳ ಹಿಂದಿನ ಸ್ಥಿತಿಯನ್ನು ನೋಡಿದರೂ, ದೀರ್ಘಾಯುಷಿಗಳಾದ ಜನರು ಸಮಾಜದಲ್ಲಿ ಹೆಚ್ಚು ಇದ್ದದ್ದು ಕಂಡುಬರುವದು.

೩. ಮನುಷ್ಯಜಾತಿಯ ಹಿತಕರ್ತರಾದ ಎಷ್ಟೋ ಜನರು, ಬೇರೆ ಬೇರೆ ದೇಶಗಳಲ್ಲಿ ಜನರು ಬಾಳುವ ಕಾಲನಿರ್ಣಯವನ್ನು ಮಾಡಿದ್ದರಿಂದ, ಗೊತ್ತಾದದ್ದೇನಂದರೆ–ಪಾಶ್ಚಿಮಾತ್ಯ ದೇಶಗಳಲ್ಲಿ ಜನರ ವಯಸ್ಸು ಹೆಚ್ಚಾಗುತ್ತ ನಡೆದಿದ್ದು, ಹಿಂದುಸ್ತಾನದಲ್ಲಿ ಮಾತ್ರ ದಿನಬಂದಕ್ಕೆ ಕಡಿಮೆಯಾಗುತ್ತ ನಡೆದಿರುತ್ತದೆ; ಪೃಥ್ವಿಯೊಳಗಿನ ಎಲ್ಲ ದೇಶಗಳಿಗಿಂತ ಹಿಂದುಸ್ತಾನದ ಜನರ ಆಯುಷ್ಯವು, ತೀರ ಕಡಿಮೆಯಾಗುತ್ತ ನಡೆದಿರುತ್ತದೆಂದು ಅಮೇರಿಕದ ಒಬ್ಬ ಶೋಧಕನು ಮತಪಡುತ್ತಾನೆ.

೪. ಭರತಖಂಡದ ಜನರ ವಯೋಮಾನವು, ದಿನದಿನಕ್ಕೆ ಕಡಿಮೆಯಾಗುತ್ತ ನಡೆದಿರುವದಕ್ಕೆ ಹಲವು ಸಂಗತಿಗಳು ಅಂಶತಃ ಕಾರಣವಾಗಿದ್ದರೂ, ಬ್ರಹ್ಮಚರ್ಯಾಭಾವವು ಪ್ರೇಷ್ಠ ಕಾರಣವೆಂದು ಶೋಧಕರ ಮತ ಉಂಟು. ಶುದ್ಧವಾದ ಹವೆಯೂ, ನಿರ್ಮಲವಾದ ನೀರೂ, ನಿದುಷ್ಟವಾದ ಆಹಾರವೂ, ನಿರುಪದ್ರವಿಯಾದ ಸ್ವಸ್ಥತೆಯೂ ದೊರಕಿದರೆ ಮೇಲಾದ ಶರೀರಸಂಪತ್ತು ವ್ಯಾಪ್ತವಾಗಬಹುದೆಂದು ತೋರುತ್ತದೆ. ಆದರೆ

ಗ್ರಾಮವಾಸಿಗಳಾದ ನಮಗೆ ಇವೆಲ್ಲ ವಸ್ತುಗಳು ಸದಾ ಉತ್ತಮ ಸ್ಥಿತಿಯಲ್ಲಿ ದೊರಕುವೆನು ಅಸಾಧ್ಯವೇ ಸರಿ; ಆದ್ದರಿಂದ ಇವುಗಳ ದೋಷವನ್ನು ಸಹನವಾಡುವ ಮೇಲಾದ ಉಪಾಯವನ್ನ, ಬ್ರಹ್ಮಚರ್ಯವೇ ಆಗಿರುತ್ತದೆ. ಯಾವನು ೨೫-೩೦ ವರ್ಷದ ವರೆಗೆ ಬ್ರಹ್ಮಚರ್ಯದಿಂದ ಇರುವನೋ, ಆತನು ತನ್ನ ಶರೀರಕ್ಕೆ ಒದಗುವ ಎಲ್ಲ ನೈಸರ್ಗಿಕ ಆಪತ್ತುಗಳನ್ನು ತಾಳಿಕೊಂಡು ಬಹಕಾಲ ಬಾಳಬಹುದು.

೫. ಮನುಷ್ಯಪ್ರಾಣಿಯು ೧೫ ೧೬ ವರುಷದವನಾಗುತ್ತಲೇ ಆತನ ಶರೀರದಲ್ಲಿ ಜೀವನಕಣಗಳು ಪಸರಿಸಹತ್ತುತ್ತವೆ. ಈ ಜೀವನಕಣಗಳಿಗೆ ಧಾತು, ಶುಕ್ರ, ರೇತಸ್, ಇಂದ್ರಿಯ ಮುಂತಾದ ಹೆಸರುಗಳುಂಟು. ಅದರಿಂದ ಒಂದು ಪ್ರಕಾರದ ತೇಜವು ಕಾಣಿಸಲಾರಂಭಿಸುತ್ತದೆ. ಅದಕ್ಕೇ ಜನರು ಪ್ರಾಯವೆನ್ನುವರು. ಈ ಕಾಲಕ್ಕೆ ಶರೀರದಲ್ಲಿ ಸೃಷ್ಟಿ ವ್ಯಾಪಾರದಿಂದುಂಟಾದ ಜೀವನಕಣಗಳು, ಶರೀರದಲ್ಲಿ ಎಲ್ಲ ಕಡೆಗೂ ವ್ಯಾಪಿಸುವ ಕಾರ್ಯವು ಆರಂಭವಾಗುವದು; ಮಿತ್ರರೇ! ಈ ಜೀವನಕಣಗಳು ನಾವು ತಿನ್ನುವ ಆಹಾರದಿಂದುಂಟಾಗುವ ರಕ್ತದಲ್ಲಿ ದೊರೆಯುತ್ತಿದ್ದರೂ ಬಹು ದುರ್ಬಲವಾಗಿರುವವು. ೪೦ ತೊಲ ರಕ್ತದಲ್ಲಿ ಒಂದು ತೊಲ ಜೀವನಕಣಗಳು ಇರುತ್ತವೆಂದು ಶೋಧಕರ ಮತ ಉಂಟು. ಈ ಜೀವನಕಣಗಳು ಶರೀರದಲ್ಲಿ ಹೆಚ್ಚು ಹೆಚ್ಚು ವ್ಯಾಪಿಸಿದಂತೆ ಅದಕ್ಕೆ ಮೇಲಾದ ಗಟ್ಟಿಗತನವು ಪ್ರಾಪ್ತವಾಗುತ್ತದೆ; ಮತ್ತು ಆಹಾರದೊಳಗಿಂದ ಶರೀರಕ್ಕೆ ಉಪಯೋಗವಾಗುವ ಮೂಲತತ್ವಗಳು ಹೆಚ್ಚಾಗಿ ತೆಗೆದುಕೊಳ್ಳುವ ಸಾಮರ್ಥ್ಯವು ಶರೀರಕ್ಕೆ ಪ್ರಾಪ್ತವಾಗುತ್ತದೆ. ಉಗೆಬಂಡಿಯೊಳಗಿನ ಉಗೆಯು ಹೆಚ್ಚು ಹೆಚ್ಚು ಕಾದಹಾಗೆ ಅದು ಹೆಚ್ಚು ಹೆಚ್ಚು ಸಾಮರ್ಥ್ಯವುಳ್ಳದ್ದು ಆಗುವಂತೆ, ಬ್ರಹ್ಮಚರ್ಯ ಪಾಲಿಸಿದವನ ಶರೀರದಲ್ಲಿ ಜೀವನಕಣಗಳು ಹೆಚ್ಚಾಗಿ ತುಂಬಿಕೊಂಡಿರುವದರಿಂದ, ಅವನ ಶರೀರವಾದರೂ ಹೆಚ್ಚು ಕಾರ್ಯಕ್ಷಮವಾಗುತ್ತದೆ. ಉಗೆಬಡಿಂಯ ಉಷ್ಣತೆಯು ಕಡಿಮೆಯಾದ ಕೂಡಲೆ ಅದರ ಕಸವು ಹಿಮ್ಮೆಟ್ಟುವಂತೆ ನಮ್ಮ ಶರೀರದ ಸ್ಥಿತಿಯಾಗಿರುವದಿಲ್ಲ. ನಮ್ಮ ಹಿತದ ಸಲುವಾಗಿ ಸುಮಾರು ೨೫ ವರ್ಷದವರೆಗಾದರೂ ಬ್ರಹ್ಮಚರ್ಯವನ್ನು ನಾವು ಪಾಲಿಸಿದರೆ, ಅದರಿಂದ ಪ್ರಾಪ್ತವಾದ ಸಾಮರ್ಥ್ಯವು, ಸುಮಾರು ೬೦ ವರುಷದ ವರೆಗೆ ನಮಗೆ ಉಪಯೋಗವಾಗುತ್ತದೆ.

೬. ಪ್ರಿಯ ಬಂಧುಗಳೇ, ಜೀವನಕಣಗಳು ಇರುವ ಶರೀರಕ್ಕೆ ನಾವು ಕಬ್ಬಿಣ ಗಾಣವೆಂದೆನ್ನಬಹುದು. ಕಬ್ಬಿಣ ಗಾಣದಲ್ಲಿ ಕಬ್ಬು ಹಾಕಿದರೆ ಹೆಚ್ಚಾಗಿ ರಸ ಹೊರಡುವಂತೆ, ಬ್ರಹ್ಮಚರ್ಯ ಪಾಲಿಸಿದವನ ಶರೀರದಲ್ಲಿ ಪಚನವ್ಯಾಪಾರವು ಹೆಚ್ಚಾಗಿ ಸಾಗುತ್ತದೆ. ಆತನ ಪಾಚಕರಸವು ಅದ್ಭುತ ಸಾಮರ್ಥ್ಯವುಳ್ಳದ್ದು ಇರುವದರಿಂದ ಅದಕ್ಕೆ ನಾವು ನಿಗಿನಿಗಿ ಕೆಂಡದ ಮೇಲೆ ಹಾಕಿದ ಹಸಿಬಿಸಿ ಪದಾರ್ಥಗಳು ಹ್ಯಾಗೆ ಸುಟ್ಟು ಬೂದಿಯಾಗುವವೋ, ಅದೇ ಪ್ರಕಾರ ಬ್ರಹ್ಮಚಾರಿಯು ಯಾವ ಪ್ರಕಾರದ ಆಹಾರ ತಿಂದರೂ, ಅದರಿಂದ ತೊಂದರೆಯಾಗಲಾರದು. ಒಟ್ಟಿಗೆ ಹೇಳ ತಕ್ಕದ್ದೇನೆಂದರೆ, ಸೃಷ್ಟಿಜನ್ಯ ದೋಷಗಳನ್ನು ತಡೆದುಕೊಳ್ಳುವಷ್ಟು ಸಾಮರ್ಥ್ಯವು ಬ್ರಹ್ಮಚಾರಿಯಲ್ಲಿ ಉಂಟಾಗುತ್ತದೆ.

೭. ಬ್ರಹ್ಮಚರ್ಯವನ್ನು ಪಾಲಿಸಿದವನ ಶರೀರದಲ್ಲಿ ಹೆಚ್ಚಾಗಿ ರಕ್ತವನ್ನುಂಟು ಮಾಡುವ ಸಾಮರ್ಥ್ಯವು ಪ್ರಾಪ್ತವಾಗುವದರಿಂದಲೂ, ಜೀವನಕಣಗಳು ಮಿತಿಮೀರಿ ಬೆಳೆಯುವದರಿಂದಲೂ, ಆತನ ಮಿದುಳು ಬಲವುಳ್ಳದ್ದಾಗುತ್ತದೆ. ಬಲವಾದ ಮಿದುಳೇ ಮೇಲಾದ ಬುದ್ಧಿ ಸಾಮರ್ಥ್ಯದ ಆಧಾರವಾಗಿರುವದು. ಶ್ರೀಮತ್ ಶಂಕರಾಚಾರ್ಯ, ಸ್ವಾಮಿ ವಿವೇಕಾನಂದ ಮೊದಲಾದವರಿಗೆ, ತಮ್ಮ ಅಲೌಕಿಕ ಬುದ್ಧಿಸಾಮರ್ಥ್ಯವನ್ನು ತೋರಿಸುವ ಸಾಮರ್ಥ್ಯವು ಹ್ಯಾಗೆ ಪ್ರಾಪ್ತವಾಯಿತು? ೩೨ ವರ್ಷದ ಒಳಗಾಗಿ ವೇದಾಂತದಂಥ ಗಹನವಿಷಯದ ಮೇಲೆ ನೂರಾರು ಗ್ರಂಥಗಳನ್ನು ಬರೆಯುವ ಸಾಮರ್ಥ್ಯವು ಶಂಕರಾಚಾರ್ಯರಿಗೆ ಬಂದದ್ದರ ಮರ್ಮವೇನು? ಅರ್ವಾಚೀನ ಶಾಸ್ತ್ರಜ್ಞರಲ್ಲಿ ಅಗ್ರಗಣಿಯಾದ ನ್ಯೂಟನನು ಹಲವು ಶೋಧಗಳನ್ನು ಯಾತರ ಬಲದಿಂದ ಮಾಡಿದನು? ಇವುಗಳ ಉತ್ತರವು ಬ್ರಹ್ಮಚರ್ಯ! ಬ್ರಹ್ಮಚರ್ಯ!! ಎಂದು ಹೇಳಬಹುದು. ಬ್ರಹ್ಮಚರ್ಯದಿಂದ ಸ್ಮರಣಸಾಮರ್ಥ್ಯವು ಮಿತಿಮೀರಿ ಬೆಳೆಯುವದರಿಂದ, ಎಂಥ ಗಹನ ವಿಷಯಗಳ ವ್ಯಾಸಂಗ ಮಾಡಿದರೂ, ಅಭ್ಯಾಸಿಯು ನಿರುತ್ಸಾಹಿಯಾಗುವದಿಲ್ಲ. ಅದು ಕಾರಣವೇ ವಿದ್ಯಾರ್ಥಿಯು ಬ್ರಹ್ಮಚಾರಿಯಾಗಿರುವದು ಅವಶ್ಯವದೆ.

೮. ನಾವು ದೊಡ್ಡವರಾಗಿ ಗೃಹಸ್ಥಾಶ್ರಮಿಗಳಾಗುವದರ ಮರ್ಮವೇನು? ಮನುಷ್ಯನು ಗೃಹಸ್ಥಾಶ್ರವಿ-ಯಾಗುವದು, ಸೃಷ್ಟಿಯ ಸ್ವಾಭಾವಿಕ ಬಲವು ಆಗಿದ್ದರೂ ಅದರ ಫಲಿತವೇನು? ಜಗತ್ತಿನೊಳಗಿನ ಎಲ್ಲ ಜಡ

ವೆಗಳಿಗಿಂತ ಹೆಚ್ಚಾಗಿ ಆನಂದವನ್ನುಂಟು ಮಾಡುವಂಥ ಸಂತತಿಯನ್ನು ಪಡೆದು ಮೇಲಾದ ಸೌಖ್ಯದಲ್ಲಿ ಲೋಲಾಡಬೇಕೆಂದಲ್ಲವೇ? ನಮ್ಮಿಂದ ಉತ್ಪನ್ನವಾಗುವ ಸಂತತಿಯು ನಿರೋಗಿಯಾದದ್ದೂ, ಜಾಣತನವುಳ್ಳದ್ದೂ, ಬಹು ಕಾಲ ಬಾಳುವಂಥಾದ್ದೂ ಆಗಬೇಕಾದರೆ ನಾವು ಗೃಹಸ್ಥಾಶ್ರಮಿಯಾಗಲಿಕ್ಕೆ ಅವಸರ ಮಾಡಿ ಫಲವಿಲ್ಲ. ಬೆಳೆಯಲ್ಲಿ ಕಾಳು ಆದ ಕೂಡಲೆ ಅದು ಬಿತ್ತಲಿಕ್ಕೆ ಬರುವದೋ? ಅಥವಾ ಅದನ್ನು ಕೊಯ್ದು ಇಟ್ಟರೆ ಪಕ್ವ ಫಲದಂತೆ ತಾಳಬಹುದೋ? ಅದರಂತೆ ಯೌವನೋದಯವಾಗುತ್ತಲೇ ನಾವು ಪ್ರಾಪಂಚಿಕರು ಆದರೆ, ಶರೀರವು ಹಾಳಾಗಿ ಹೋಗುವದಲ್ಲದೆ, ನಾವು ಬಹು ದಿವಸ ಬಾಳಲಾರೆವು. ಮತ್ತು ನಮ್ಮಿಂದ ಉತ್ಪನ್ನವಾದ ಸಂತತಿಯು, ಅಲ್ಪಾಯುಷಿಯಾದದ್ದು ಆಗುವದು. ಸಂಪೂರ್ಣವಾಗಿ ಬೆಳೆದ ಬೆಳೆಯು ಕೆಲವು ಕಾಲ ಇಟ್ಟರೆ ತಾಳಲಿಕ್ಕೂ, ಪುನಃ ಮೇಲಾದ ಬೆಳೆಯನ್ನು ಉತ್ಪನ್ನ ಮಾಡಲಿಕ್ಕೂ ಉಪಯೋಗವಾಗುವಂತೆ ಬ್ರಹ್ಮಚರ್ಯಾದಿಂದ ಜೀವನ ಕಣಗಳನ್ನು ಬಲಪಡಿಸಿದ ಮೇಲೆ ಗೃಹಸ್ಥಾಶ್ರಮಿಗಳಾದರೆ ನಮ್ಮಿಂದ ಬಲವಾದ ಸಂತತಿಯು ಉತ್ಪನ್ನವಾಗುವದಲ್ಲದೆ ನಾವು ಬಹುಕಾಲ ಬಾಳುವೆವು.

೯. ಯಾವ ಕಾರಣದಿಂದಲೋ, ನಮ್ಮಲ್ಲಿ ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳುವ ಪದ್ಧತಿಯು ಕಟ್ಟಾಗಿ, ತೀವ್ರ ಪ್ರಾಪಂಚಿಕರಾಗುವದು ಬೆಳೆಯುತ್ತ ನಡೆದದ್ದರಿಂದ, ಜನರು ಅಲ್ಪಾಯುಷಿಗಳೂ ಅಶಕ್ತರೂ ಆಗುತ್ತ ನಡೆದಿದ್ದಾರೆ. ಮತ್ತು ಇಂಥ ಅಶಕ್ತ ಪ್ರಜೆಗಳಿಂದ ಹುಟ್ಟಿದ ಸಂತತಿಯ ನಾಶವು ಮಿತಿಮೀರಿ ನಡೆದಿರುತ್ತದೆ. ಚಿಕ್ಕ ಚಿಕ್ಕ ಮಕ್ಕಳೇ ಹೆಚ್ಚಾಗಿ ಸಾಯುತ್ತಾರೆಂದು ಒಬ್ಬ ಶೋಧಕನ ಮತವುಂಟು. ವಿಚಾರ ಮಾಡಿ ನೋಡಲು ಬಾಲವಿಧವೆಯರ ಸಂಖ್ಯೆಯು ಬೆಳೆಯುತ್ತ ನಡೆದದ್ದರ ತಪ್ಪು ನಮ್ಮದೇ ಇರುತ್ತದೆ. ಈ ಎಲ್ಲ ಅನರ್ಥಪರಂಪರೆಗಳು ಕಟ್ಟಾಗುವದಕ್ಕೆ ಮೇಲಾದ ಉಪಾಯವು ಬ್ರಹ್ಮಚರ್ಯವೇ ಆಗಿರುತ್ತದೆ.

೧೦. ಸಾರಾಂಶ, ನಾವು ಮನುಷ್ಯ ಶರೀರವನ್ನು ತಾಳಿದ್ದು ಸಾರ್ಥಕವಾಗುವದಕ್ಕೂ, ನಮ್ಮ ತಂದೆತಾಯಿಗಳ ಇಚ್ಛೆಯನ್ನು ಪೂರ್ಣ ಮಾಡಲಿಕ್ಕೂ, ಹುಟ್ಟಿದ ಮನೆತನವನ್ನು ಮುಂದೆ ಕಾಯ್ದುಕೊಳ್ಳಲಿಕ್ಕೂ, ಜನ್ಮಿಸಿದ ಗ್ರಾಮಕ್ಕೆ ಶೋಭೆಯನ್ನುಂಟುಮಾಡಲಿಕ್ಕೂ, ಜನ್ಮಕೊಟ್ಟ ರಾಷ್ಟ್ರದ

ಮೇಲಾದ ನಾಗರಿಕನಾಗಲಿಕ್ಕೂ ಬ್ರಹ್ಮಚರ್ಯವು ಅತ್ಯವಶ್ಯವಾಗಿರುತ್ತದೆ. ಮಾರುತಿಯು ವಜ್ರಶರೀರಿಯಾದದ್ದೂ, ಲಕ್ಷ್ಮಣನು ಇಂದ್ರಜಿತುವನ್ನು ಗೆದ್ದದ್ದೂ ಬ್ರಹ್ಮಚರ್ಯದ ಬಲದಿಂದಲ್ಲವೇ? ಈ ಮೇರೆಗೆ ಸಕಲ ಸುಖಕ್ಕೆ ಕಾರಣವಾದ ಬ್ರಹ್ಮಚರ್ಯದ ವರ್ಣನೆಯನ್ನು ಈ ಚಿಕ್ಕ ವಿನಂತಿಪತ್ರದಲ್ಲಿ ಎಷ್ಟೆಂದು ಮಾಡಲಿ? ಮೇಲಾಗಿ ಅದನ್ನು ವರ್ಣನೆಮಾಡುವ ಸಾಮರ್ಥ್ಯವು ಅಲ್ಪಮತಿಯಾದ ನನಗೆಲ್ಲಿರುವದು?

ಗಂ. ಯೌವನೋದಯಮುಖಿಗಳಾದ ನನ್ನ ಪ್ರಿಯ ಬಾಂಧವರುಗಳಿರಾ! ನನ್ನ ಮನಸ್ಸಿನಲ್ಲಿ ಬಂದ ಅಲ್ಪ ವಿಚಾರವನ್ನು ನಿಮ್ಮ ಮುಂದೆ ಇಟ್ಟಿರುತ್ತೇನೆ. ತಾವೆಲ್ಲರೂ ನನ್ನ ವಿನಂತಿಯನ್ನು ಚನ್ನಾಗಿ ವಿಚಾರ ಮಾಡಿರಿ. ಬಲ್ಲವರನ್ನು ಕೇಳಿರಿ; ಆ ಮೇಲೆ ನನ್ನ ವಿನಂತಿಯು ನಿಮ್ಮ ಮನಸ್ಸಿಗೆ ಬಂದರೆ ಅದಕ್ಕೆ ಲಕ್ಷ ಕೊಡಿರಿ; ಸುಮಾರು ೨೫ ವರುಷದವರೆಗಾದರೂ ಬ್ರಹ್ಮಚರ್ಯವನ್ನು ಪಾಲಿಸಿರಿ; ಅಲ್ಲಿಯವರೆಗೆ ಶರೀರಕ್ಕೆ ಸಾಮರ್ಥ್ಯ ಬರುವ ವ್ಯಾಯಾಮ ಮಾಡಿರಿ; ಏಕಾಗ್ರತೆಯಿಂದ ಬುದ್ಧಿಸಾಮರ್ಥ್ಯವನ್ನುಂಟು ಮಾಡುವ ಯಾವದೊಂದು ವಿಷಯದ ವ್ಯಾಸಂಗ ಮಾಡಿರಿ; ಈ ಪ್ರಕಾರ ಮಾಡಿ ಬಹುಕಾಲ ಬಾಳಿ ಅತ್ಯಗಾಧವಾದ ಈ ಸೃಷ್ಟಿಯಲ್ಲಿ ಒದಗುವ ಎಲ್ಲ ಸುಖಗಳನ್ನು ಅನುಭೋಗಿಸಿರಿ.

ಪತ್ರವ್ಯವಹಾರ.

ವಿದ್ಯಾಸಾಗರದಲ್ಲಿ ಆನಂದದಿಂದ ಕ್ರೀಡಿಸುವ ಕನ್ನಡ ಶಾಲಾಪತ್ರಿಕದ ಎಡಿಟರ ದೊರೆಗಳ ಚರಣ ಸನ್ನಿಧಿಗೆ—

ವಿನಯಾನ್ವಿತ ಪ್ರಾರ್ಥನೆಗಳು:— ರಾವಸಾ॥ ಕಂಭೂರಾವ ಆನಿಖಿಂಡಿ, ಬೆಳಗಾವ ಜಿಲ್ಲೆಯ ಡೆ. ಎ. ಇನ್‌ಸ್ಪೇಕ್ಟರ ಸಾಹೇಬರವರು ಕಳೆದ ತಿಂಗಳ (ಸಪ್ಟಂಬರ) ಕೊನೆಗೆ ಪೆನ್‌ಶನ್ ಹೊಂದಿದ ಕಾರಣ, ಅವರ ಸನ್ಮಾನಾರ್ಥವಾಗಿ, ನೆರೆದ ಮಹಾಸಮಾರಂಭದಲ್ಲಿ ಕನ್ನಡ ವಿದ್ಯಾರ್ಥಿಗಳು ಅಂದ ಕವಿತೆಗಳನ್ನು ತಮ್ಮೆಡೆಗೆ ಬರೆದು ಕಳಿಸಿರುವೆನು. ತಮ್ಮ ಅಂದವಾದ ಪತ್ರಿಕದಲ್ಲಿ ಅವುಗಳನ್ನು ಮುದ್ರಿಸುವ ಕೃಪೆ ಮಾಡಬೇಕು:—

॥ ತರಳವೃತ್ತ ॥

ಮೆರೆವ ಕನ್ನಡ ನಾಡಿನೊಳ್ ಸಲೆ ಜನ್ಮಿಸಿರ್ದಭಿಮಾನದಿಂ।
ಸರಸದೇಶದಿ ಬುದ್ಧಿವರ್ಧಕ ಕಾರ್ಯವಾಚರಿಸುತ್ತ ತಾವ್ ॥

ಹರುಷದಿಂ ಕೃತಕಾರ್ಯರಾಗುತೆ ಶಾಂತಚಿತ್ತವನ್ಯೈದುತಂ।
ಕರುಣದಾನೆಯಖಿಂಡಿವಂಶದ ಶಂಭುರಾಯರು
ಶೋಭಿಪರ್ ॥೧॥

ಪರಮತಂತುಪುರಾದಿ ಪತ್ತನದಾಂಗ್ಲ ಶಾಲೆಯೊಳಿರ್ದುತಾವ್।
ಸರಸ ಶಿಕ್ಷಣದಿಂದೆ ಶಿಷ್ಯರ ಬುದ್ಧಿವರ್ಧನ ಗೆಯ್ಯುತಂ ॥
ವರಸುಶಿಕ್ಷಣ ಕಾರ್ಯದಲ್ಲುರೆ ಕೀರ್ತಿತಾಳುತ ಸತ್ವರಂ।
ಬರದೊಳುನ್ನತ ತಾಣಮುಂ ಕ್ರಮದಿಂದೆ ತಾಳ್ದರು
ಜಾಣ್ಮೆಯಿಂ ॥೨॥

॥ ಉತ್ಪಲಮಾಲೆ ॥

ಶಿಕ್ಷಣಕಾರ್ಯದಲ್ಲಿ ವರದಕ್ಷತೆಯಾಂತುರೆ ದೇಶಭಾಷೆಯಾ।
ಶಿಕ್ಷಕವರ್ಗಕುತ್ತಮ ಪರೀಕ್ಷಕರಾಗುತೆ ಶಾಲೆಯಲ್ಲಿ ಸ ॥
ಶ್ಚಿಕ್ಷಣ ಮಾರ್ಗಮುಂ ತಿಳುಪಿ ಲಕ್ಷವನಿತ್ತತಿಯತ್ನದಿಂದೆ ತಾ।
ವಕ್ಷಯ ಕೀರ್ತಿಯುಂ ಪಡೆದು ಸಕ್ಷಮದಿಂ ನೆಲದೊಳ್ವಿ
ರಾಜಿಪರ್ ॥೩॥

ಕಂದ॥ ವೇಣುಗ್ರಾಮದ ಭಾಗದೆ।
ಜ್ಞಾನವ ಬೀರಲ್ಕೆ ಬಂದು ತಮ್ಮಯ ಕಾರ್ಯವೆ ॥
ನ್ಯೂನತ್ವವಿಲ್ಲದಿವರುರೆ।
ಜಾಣ್ಮೆಯೊಳಿಸಗಿದರು ಜನರು ಪೊಗಳುವ ತೆರದಿಂ ॥೪॥

ಕಂದ॥ ವರ ಸಂಸ್ಕೃತ ಭಾಷೆಯು ತಾ।
ನಿರದಿವರಿಗೆ ದಾಸಿಯಾಗಿ ತನ್ನಯ ಮರ್ಮವೆ ॥
ಸರಸದಿ ತಿಳಿಸಿದ ತೆರದಿಂ।
ದುರೆ ಸಂಸ್ಕೃತ ಭಾಷೆಯಲ್ಲಿ ಜಸಮುಂ ಪಡೆದರ್ ॥೫॥

ಕಂದ॥ ಇವರಾಳ್ಕೆಯಲ್ಲಿ ನ್ಯಾಯಂ।
ತವಕದೆ ನೆಲಸಿತ್ತು ಪಕ್ಷಪಾತಂ ತಾನೆದು ॥
ಭುವಿಯೊಳ್ ನಿಲ್ಲದೆ ಪೋದುದು।
ಸವನಾಯ್ತೆಲ್ಲರ್ಗೆ ಕಾರ್ಯದಭಿರುಚಿ ನಿರುತಂ ॥೬॥

ಕಂದ॥ ವರಶಂಭುದರ್ಶನಂ ತಾಂ।
ದುರಿತಕ್ಷಯ ಮಾಡುವಂತೆ ತನ್ನಾಮವನು ॥

ಧರಿಸಿದ ರಾಯರ ಕಾಲಂ।
ಬರದಿಂದಲಸಮನು ಕಳೆದುದ್ಯೈ ಶಿಕ್ಷಕರ ॥೩॥

॥ ಚಂಪಕಮಾಲೆ ॥

ಗಣಿತದ ಮರ್ಮಮಂ ಸಲೆ ಸುವಾಚನ ಪದ್ಧತಿಯಂ ಸುರೀತಿಯಿಂ।
ದೆಣಿಕೆಗೆ ತಂದು ಯತ್ನದೆ ಸುಧಾರಿಸುತುತ್ತಮ ಮಾರ್ಗದಿಂದೆ ತಾ॥
ವಣುಗರ ಬುದ್ಧಿಯಂ ಬಲುವಿಕಾಸವಗೆಯ್ಯುತ ತಮ್ಮಭಾಗದೊಳ್।
ಕನಿಕರದಿಂದೆ ವಿದ್ಯೆಯ ವಿಚಾರವ ವರ್ಧಿಸಿ ಶೋಭಿಪರ್
ಗಡಾ! ॥೪॥

॥ ಶಾರ್ದೂಲವಿಕ್ರೀಡಿತವೃತ್ತ ॥

ಇಂತೀಪ್ರಾಂತದಿ ವಿದ್ಯೆಯಂ ಕರುಣದಿಂ ಸನ್ಮಾರ್ಗದಿಂ ಪೆರ್ಚಿಸು।
ತ್ತಂತ್ಯಕ್ಕಾಂತುರೆ ವೇಣುಪತ್ತನದಿ ಸದ್ವಿಶ್ರಾಮಮಂ ತೋಷದಿಂ ॥
ಶಾಂತಸ್ವಾಂತದಿ ಸಂತಸಂದಳೆದಿಹಾ ಶ್ರೀಶಂಭುರಾಯಗ್ರ್ಯಮಾ।
ಕಾರತಂ ಸಂತತವಿಹಾಗೆ ಸತ್ಕರುಣದಿಂ ದೀರ್ಘಾಯುರಾ-
ರೋಗ್ಯಮಂ ॥೯॥

ಕಂದ ॥ ವರ ಪರಮೇಶ್ವರ ದಯದಿಂ।
ದುರುತರ ಜಯಮಿರ್ಕೆಯಿವರ ಕಾರ್ಯದೊಳೆಂದುಂ ॥
ಚಿರಮಿರ್ಕೆಯಿವರ ಕೀರ್ತಿಯು [illegible]
ನರಸಿಕರದೆ ಮೆರೆವತೆರದಿ ಸುರುಚಿರದಿಂದಂ ॥೧೦॥

ಪತ್ರವಿಸ್ತಾರಕ್ಕೆ ಕ್ಷಮೆಯಿರಬೇಕು. ಇಂತೀ ವಿಜ್ಞಾಪ್ತಿಗಳು.

ಬೆಳಗಾವ.
ತಾ. ೧೭-೧೦-೧೩.

ಅನಂತ ವಿನಾಯಕ ಬೋಡೆ.
ಬೆಳಗಾವ ಕನ್ನಡ ೧ನೆಯ ನಂಬರ ಶಾಲೆಯ
ವಿದ್ಯಾರ್ಥಿ.

ಶ್ರೀಯುತ ರಾಜಮಾನ್ಯರಾಜಶ್ರೀ ಗುರುವರ್ಯ ಕರ್ನಾಟಕ ಶಾಲಾ ಪತ್ರಿಕಾ ಕರ್ತರ ಸನ್ನಿಧಿಗೆ—

ತಮ್ಮ ಶಿಷ್ಯಮಂಡಳಿಗಳಲ್ಲೋರ್ವನ ಶಿರಸಾಷ್ಟಾಂಗ ವಿನ್ನೆಹಂಗಳು. ಮಹನೀಯರೇ, ಕೆಳಗೆ ಕೊಟ್ಟ ಎರಡು ಗಣಿತದ ಉದಾಹರಣೆಗಳನ್ನು ಯುಕ್ತಕಂಡಲ್ಲಿ ತಮ್ಮ ಸುಂದರ ಮಾಸಪತ್ರಿಕೆಯಲ್ಲಿ ದಯಮಾಡಿ ಇಂಬು ನ್ನಿತ್ತು ಮುದ್ರಿಸಬೇಕೆಂದು ಕೋರುತ್ತೇನೆ:—

೧ನೇ ಉದಾ:—ಒಂದು ರಾಜಪಾಡೆಗೆ ಏಳು ಅಗಸೇ ಬಾಗಿಲುಗಳುಂಟು. ಕೆಲವು ಬ್ರಾಹ್ಮಣರು ರಾಜದರ್ಶನಕ್ಕೆ ಹೋಗಬೇಕೆಂದು ಯೋಚಿಸಿ ಮೊದಲನೇ ಅಗಸೆಯ ಹತ್ತರ ಬಂದು ತಮ್ಮ ಟೋಳಿಯ ಅರ್ಧ ಜನರನ್ನು ಬಿಟ್ಟು ಎರಡನೇ ಅಗಸೆಯ ಹತ್ತರ ಹೋದರು. ಎರಡನೇ ಅಗಸೆಯಲ್ಲಿ ಉಳಿದ ಟೋಳಿಯ ಅರ್ಧಬಿಟ್ಟು ಮೂರನೇ ಅಗಸೆಯ ಹತ್ತರ ಹೋದರು. ಹೀಗೆ ಕ್ರಮೇಣ [illegible] ಈ ಪ್ರಕಾರ ಏಳನೇ ಅಗಸೆಯನ್ನು ದಾಟಿ ಉಳಿದ ಜನರು ರಾಜನಿಗೆ ಭೆಟ್ಟಿಯಾದರು. ಆಗ ರಾಜನು, ಗಣಿತಶ್ರೇಢಿಯಂತೆ ಮೊದಲನೆಯವನಿಗೆ ೨, ಎರಡನೆಯವನಿಗೆ ೫, ಮೂರನೆಯವನಿಗೆ ೮, ಈ ಪ್ರಕಾರ ರೂಪಾಯಿ ಕೊಡಲು ಆ ರೂಪಾಯಿ ತಕ್ಕೊಂಡು ಮೊದಲಿದ್ದ ಅಗಸೆಗಳಲ್ಲಿಯ ಎಲ್ಲಾ ಜನರೂ ಕೂಡಿ ಹಂಚಿಕೊಳ್ಳಲು ಪ್ರತಿಯೊಬ್ಬ ಬ್ರಾಹ್ಮಣನಿಗೆ ಒಂದೊಂದು ರೂಪಾಯಿ ಬಂತು. ಅದರೆ ಮೂಲ ಹೋದ ಟೋಳಿಯ ಜನರು ಎಷ್ಟು?

೨ನೇ ಉದಾ:—ಒಂದು ಕಿಲ್ಲೆಗೆ ಒಂದೇ ರಸ್ತೆಗೆ ಮೂರು ಅಗಸೆಗಳುಂಟು. ಪ್ರತಿಯೊಂದು ಅಗಸೆಯಲ್ಲಿ ಎಷ್ಟೆಷ್ಟೋ ದಂಡು ಅದೆ. ಪರರಾಯರ ದಂಡು ಬಂದು ಮೊದಲನೇ ಅಗಸೆಗೆ ಮುತ್ತಿಗೆಹಾಕಿತು. ಆಗ ದಂಡಿನ ಮುಖ್ಯಸ್ಥನು ಉಳಿದ ಎರಡು ಅಗಸೆಯವರಿಗೆ ನನ್ನಲ್ಲಿದ್ದಷ್ಟು ದಂಡು ಪ್ರತಿಯೊಬ್ಬರು ಕಳುಹಿಸಿಕೊಡಿರೆಂದು ಹೇಳಿದನು. ಆಗ ಎರಡೂ ಅಗಸೆಯವರು ಅದರಂತೆ ಸಹಾಯಕ್ಕೆ ದಂಡು ಕಳುಹಿಸಲು ಮೊದಲನೇ ಅಗಸೆಯ ಮುತ್ತಿಗೆ ಮುರಿದು ಎರಡನೇ ಅಗಸೆಗೆ ಬಿತ್ತು. ಆಗ ೨ನೇ ಅಗಸೆಯವನು ತನ್ನಲ್ಲಿದ್ದಷ್ಟು ಜನರನ್ನು ಎರಡೂ ಅಗಸೆಯಿಂದ ಸಹಾಯಪಡಕೊಂಡು ಮುತ್ತಿಗೆ ಒಡಿಸಿದನು. ಇದೇ ಮೇರೆಗೆ ೩ನೇ ಅಗಸೆಗೆ ಮುತ್ತಿಗೆ ಬೀಳಲು, ಅವನೂ ತನ್ನಲ್ಲಿದ್ದಷ್ಟು ಜನರ ಸಹಾಯ ಎರಡೂ ಅಗಸೆಯಿಂದ ಪಡಕೊಂಡು ಮುತ್ತಿಗೆ ಒಡಿಸಿದನು. ಆಗ ಮೂರೂ ಅಗಸೆಯಲ್ಲಿ ಅಷ್ಟಷ್ಟೇ ಜನರಾಗಿದ್ದರು. ಅದರೆ ಮೊದಲು ಪ್ರತಿಯೊಂದು ಅಗಸೆಯಲ್ಲಿದ್ದ ದಂಡು ಎಷ್ಟು ಹೇಳು. ಇಂತೀ ಬಿನ್ನಹಂಗಳು.

ಶಾಳಾ ಗಣಿತಾಲೂಕ ಬಾಗೇ;
ನಾಡಿ ಜಿಲ್ಲಾ ವಿಜಾಪೂರ
ತಾರೀಖು ೧೫-೧-೧೩

ತಮ್ಮ ವಿಧೇಯ ಶಿಷ್ಯ
ಎಲಗೂದ ಭೀಮಾಜಿ ಕುಲಕರ್ಣಿ
ಸ್ಕೂಲಮಾಸ್ತರ

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು.

೧. ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ದಶಂಬರ ತಿಂಗಳ ೩ನೇ ತಾ|| ಬುಧವಾರ ೧೧ಕ್ಕೆ ಘಂಟೆಗೆ ಸರಿಯಾಗಿ ಪ್ರಾರಂಭವಾಗುವದು. ಎಲ್ಲ ಉಮೇದವಾರರು ಆ ದಿವಸ ಟ್ರೇನಿಂಗಕಾಲೇಜದಲ್ಲಿ ಪರೀಕ್ಷೆಗೆ ಹಾಜರ ಆಗಬೇಕು. ಉಮೇದವಾರರ ಹೆಸರು ಹಚ್ಚಿಕೊಳ್ಳುವ ಕೆಲಸವು ದಶಂಬರ ೩ನೇ ತಾರೀಖು ಮಂಗಳವಾರ ಬೆಳಿಗಿನ ೭½ ಘಂಟೆಗೆ ಪ್ರಾರಂಭವಾಗುವದು. ಆ ಸಮಯಕ್ಕೆ ಉಮೇದವಾರರು ಕೆಳಗೆ ಕಾಣಿಸಿದ ಮೂರು ಕಾಗದಗಳನ್ನು ಹೆಸರು ಹಚ್ಚಿಕೊಳ್ಳುವವರ ಕಡೆಗೆ ಕೊಡಲಿಕ್ಕೆ ಬೇಕು:—

(೧) ಮುಲ್ಕೀ ಅಥವಾ ಹ್ವರ್ನಾಕ್ಯುಲರ ಫೈಯನಲ್ ಪರೀಕ್ಷೆಯ ಸರಟಿಫೀಕೀಟು.

(೨) ಒಳ್ಳೇ ನಡತೆಯ ಬಗ್ಗೆ ಮತ್ತು ತಾವು ಯಾವ ಜಿಲ್ಹೆಗೆ ಹೆಸರು ಹಚ್ಚಿಸತಕ್ಕವರೋ ಆ ಜಿಲ್ಹೆಯಲ್ಲಿ ಕಾಯಂ ಇರುವವರೆಂಬ ಬಗ್ಗೆ (ಈ ನೋಟೀಸಿನ ಕೊನೆಯಲ್ಲಿ ಕೊಟ್ಟ ನಮೂನೆಯಂತೆ) ತಾವು ಕಲಿತ ಶಾಲೆಯ ಹೆಡ್ಡಮಾಸ್ತರರ ಸರ್ಟಿಫಿಕೀಟು.

(೩) ಜಾಮೀನಪತ್ರ—ಈ ನೋಟೀಸಿನ ಕಡೆಗೆ ಕೊಟ್ಟನಮೂನೆಯಂತೆ ನಾದಾ ಕಾಗದದ ಮೇಲೆ ಬರಿಸಿ ಜಾಮೀನದಾರರ ಸಹಿ ಮಾಡಿಸಿ ಅದರ ಕಡೆಯಲ್ಲಿ ಕೊಟ್ಟಿರುವ ಗ್ರಾಮಸ್ಥರ ದಾಖಲೆ ಸಹಿತ ತಯಾರ ಮಾಡಿದ್ದು.

ಮೇಲಣ್ಣಿಸಿದ ಮೂರು ದಾಖಲೆಗಳನ್ನು ಹಾಜರ ಮಾಡಿದ ಹೊರತು ಹೆಸರು ಹಚ್ಚಿಕೊಳ್ಳಲಿಕ್ಕಿಲ್ಲ.

೨. ಈ ಪರೀಕ್ಷೆಯು ವ್ಹರ್ನ್ಯಾಕ್ಯುಲರ ಫೈಯನಲ್, ಅಂದರೆ ದೇಶಭಾಷೆಯ ೭ನೇ ಇಯತ್ತೆಯ (ಡ್ರಾಯಿಂಗ ಸಹಿತ) ಎಲ್ಲ ವಿಷಯಗಳಲ್ಲಿ ಆಗುವದು. ಬರಹದಲ್ಲಿ ಕೆಟ್ಟ ಅಕ್ಷರ, ಅಶುದ್ಧ ಬರಹ, ವಿರಾಮ ಚಿಹ್ನಗಳ ಉಪಯೋಗವನ್ನು ಸರಿಯಾಗಿ ಮಾಡದೆ ಇರೋಣ, ಅಚ್ಚು

ಕಟ್ಟುತನವಿಲ್ಲದೆ ಇರೋಣ ಈ ಕುಂದುಗಳು ಕಂಡು ಬರುವ ಉಮೇದವಾರರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ.

೩. ಉಮೇದವಾರರು ಡಿಶಂಬರ ೧ನೇ ತಾರೀಖಿಗೆ ೧೭ ವರ್ಷ ಸಂಪೂರ್ಣ ಆದವರೂ ೨೨ ವರ್ಷ ಮಿಕ್ಕದವರೂ ಇರಲಿಕ್ಕೆ ಬೇಕು.

ವಿಶೇಷ ಸೂಚನೆ:—ಧಾರವಾಡ ಊರಲ್ಲಿ ಅಥವಾ ಕಾಲೇಜದಲ್ಲಿ ಪ್ಲೇಗ ಬೇನೆಯ ಸಂಸರ್ಗದ ಲಕ್ಷಣಗಳು ತೋರಲಾಗಿ ಕಾಲೇಜದ ವಿದ್ಯಾರ್ಥಿಗಳು ಪ್ಲೇಗದ ಮೈಲಿಯನ್ನು ಚುಚ್ಚಿಸಿಕೊಳ್ಳಬೇಕೆಂದು ಕಾಲೇಜದ ಡಾಕ್ಟರರಾದ ಸಿವ್ಹಿಲ್‌ಸರ್ಜನ್ ಸಾಹೇಬರವರು ಅಭಿಪ್ರಾಯಪಟ್ಟರೆ, ಅದರಂತೆ ಕಾಲೇಜದ ವಿದ್ಯಾರ್ಥಿಗಳು ಮೈಲಿಯನ್ನು ಚುಚ್ಚಿಸಿಕೊಳ್ಳಲಿಕ್ಕೆ ಬೇಕು. ಇದಕ್ಕೆ ಒಪ್ಪಿಗೆ ಇಲ್ಲದ ಉಮೇದವಾರರನ್ನು ಕಾಲೇಜಕ್ಕೆ ಸೇರಿಸಿಕೊಳ್ಳಲಿಕ್ಕಿಲ್ಲ. ಇಂಥ ಉಮೇದವಾರರು ಕಾಲೇಜದ ಪ್ರವೇಶ ಪರೀಕ್ಷೆಗೆ ಬರಬಾರದು.

೪. ಉಮೇದವಾರರು ವ್ಯಂಗವುಳ್ಳವರು ಇರಕೂಡದು. ೫ ಫೂಟಿಗಿಂತ ಕಡಿಮೆ ಎತ್ತರವಿದ್ದವರು, ತೊದಲುವವರು, ಕಿವುಡರು, ಮೆಳ್ಳರು, ಕುಂಟರು ಇಂಥವರನ್ನು ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

೫. ಉಮೇದವಾರರು ತಾವು ಕಾಯಂವಾಗಿ ಇರುವ ಜಿಲ್ಹೆಗೇ ಹೆಸರು ಹಚ್ಚಿಸತಕ್ಕದ್ದು. ಸಂಸ್ಥಾನದ ಹದ್ದಿನೊಳಗಿನ ಉಮೇದವಾರರು ತಮ್ಮ ಸಂಸ್ಥಾನದ ಡಿ. ಎ. ಇನಸ್ಪೆಕ್ಟರರವರ ಪರವಾನಗಿಯನ್ನು ತಂದ ಹೊರ್ತು, ಅವರ ಹೆಸರು ಹಚ್ಚಿಕೊಳ್ಳಲಿಕ್ಕಿಲ್ಲ.

೬. ಪ್ರತಿಯೊಬ್ಬ ಉಮೇದವಾರನು ತನ್ನ ಸಂಗಡ ತಕ್ಕಷ್ಟು ಅರಿವೆ ಅಂಚಕಡಿಗಳನ್ನೂ ಹಾಸಿಗೆ ಹುಪ್ಪಡಿಗಳನ್ನೂ ತರಲಿಕ್ಕೆ ಬೇಕು. ಪ್ರತಿಯೊಬ್ಬನಿಗೆ ಮೇಲಿನ ಅಂಗಿಗಳು ಅಂದರೆ ಕೋಟುಗಳು ೩, ಒಳಗಿನ ಪೈರಣಗಳು, ಅಥವಾ ಬಗಲಬಂಡಿಗಳು ೩, ೧ ಹಚ್ಚಡ, ೧ ಕಂಬಳಿ ಇಷ್ಟು ಇರಲಿಕ್ಕೆ ಬೇಕು.

೭. ಪ್ರತಿ ಒಬ್ಬ ಉಮೇದವಾರನ ಬಳಿಯಲ್ಲಿ ಬಿನ್ ಇಯತ್ತೈಯಿಂದ ೭ನೇ ಇಯತ್ತೈಯ ವರೆಗೆ ಬೇಕಾಗುವ ಎಲ್ಲ ಹೊಸಕ್ರಮಿಕ ಪುಸ್ತಕಗಳೂ, ೭ನೇ ಇಯತ್ತೈಯ ಇತರ ಎಲ್ಲ ಪುಸ್ತಕಗಳೂ ಇರಲಿಕ್ಕೇಬೇಕು.

೬. ಮೇಲೆ ಬರೆದ ಪುಸ್ತಕಗಳಲ್ಲದೆ ಬೇರೆ ಅವಶ್ಯಕ ಪುಸ್ತಕಗಳನ್ನೂ ಚಿತ್ರಕಲೆ ಮುಂತಾದವುಗಳ ನಾಮಾನುಗಳನ್ನೂ ಕೊಂಡುಕೊಳ್ಳುವಕ್ಕೆ ೧೦ ರೂಪಾಯಿಗಳು ಬೇಕಾಗುವವು. ಮತ್ತು ಬೋರ್ಡಿಂಗಿನ ಅಥವಾ ನ್ನದ ಸಂಬಂಧದಿಂದ ೧೦ ರೂಪಾಯಿಗಳು ಬೇಕಾಗುವವು. ಆದ ಕಾರಣ ಪ್ರತಿ ಒಬ್ಬ ಉಮೇದವಾರನು ೩೦ ರೂಪಾಯಿಗಳನ್ನು ಸಂಗಡ ತರಲಿಕ್ಕೆ ಬೇಕು.

V. B. JOSHI.

ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜ ಧಾರವಾಡ.

ಪ್ರವೇಶ ಪರೀಕ್ಷೆಯ ಉಮೇದವಾರನು ಸಂಗಡ ತಂಬಿ ತಾತಕ್ಕ ಜಾಮೀನ ಪತ್ರದ ನಮೂನೆಯು.

ನಾವು ೧. ....

೨. ....

ಈ ಬರಹದ ಮೂಲಕವಾಗಿ ....

ಎಂಬವನಿಗೆ ಜಾಮೀನ ಆಗಿ, ...

ಬರಕೊಡುವದೇನಂದರೆ:— ಸದರೀ ....

ಇವನು ಧಾರವಾಡ ಟ್ರೇನಿಂಗ ಕಾಲೇಜದ ಕೋಡಿಸಿದ ನಿಯಮಗಳ ಪ್ರಕಾರ ನಡೆಯುವದಕ್ಕೆ ಒಪ್ಪಿಕೊಂಡಂತೆ ನಡೆಯುವನು. ಅವನು ಆ ಪ್ರಕಾರ ನಡೆಯುವದಕ್ಕೆ ತಪ್ಪಿದರೆ ನಾವು ಇಬ್ಬರು ಕೂಡಿ ಅಥವಾ ನಮ್ಮಲ್ಲಿ ಪ್ರತಿ ಒಬ್ಬರು ಪ್ರತಪ್ರತ್ಯೇಕವಾಗಿ, ಬೇರೊಬ್ಬನ ಉಜೂರು ಹೇಳದೆ ಸರಕಾರಕ್ಕೆ ೩೦೦ (ನುನ್ನೂರು) ರೂಪಾಯಿಗಳನ್ನು ಕೊಡುವದಕ್ಕೆ ಈ ಲೇಖದಿಂದ ಒಪ್ಪಿಕೊಳ್ಳುತ್ತೇವೆ. ತಾ|| ಮಾಹೆ ಸನ

ಸಹಿ. ೧. .....

೨. .....

ದಾಖಲೆ ಕೊಡುವದೇನಂದರೆ:—ಮೇಲೆ ಸಹಿ ಮಾಡಿದ ಇಬ್ಬರು ತಮಾನದಾರರಲ್ಲಿ ಪ್ರತಿ ಒಬ್ಬರು ಬೇರೆ ಬೇರೆಯಾಗಿ.....
.....ಇವನಿಗೆ ೩೦೦ (ಮುನ್ನೂರು) ರೂಪಾಯಿಗೆ ಜಾಮೀನು ಗುವದಕ್ಕೆ ಲಾಯಕ್ಕು ಇದ್ದು ಕಬೂಲ ಇದ್ದಾರೆ. ತಾ, ಮಾಹೆ ಸ೯

೧. ..... ಕೆಲಸ ನೋಡುವ ಗೌಡ.

ಹಿ.

೨. ..... ಕೆಲಸ ನೋಡುವ ಕುಲಕರ್ಣಿ

ಬಿಳ್ಳೇ ನಡತೆಯ ಮತ್ತು ವಾಸಸ್ಥಳದ ಬಗ್ಗೆ

ಸರ್ಟಿಫಿಕೇಟು.

ನಾನು ಹೆಡ್‌ಮಾಸ್ತರ ಶಾಲಾ.....ಜಿಲ್ಲಾ.....ಸರ್ಟಿ
ಕೇಟು ಕೊಡುವದೇನಂದರೆ— .....ಈತನು
ಳ್ಳೇ ನಡತೆಯುವನಿದ್ದು,.....ಜಿಲ್ಲೆಯಲ್ಲಿದ್ದ ..... ಎಂಬ
ಊರು ಅವನೆ ಕಾಯಂವಾದ ವಾಸಸ್ಥಳವಿರುತ್ತದೆ.

ಶಾಲಾ—

ಜಿಲ್ಲಾ ಹೆಡಮಾಸ್ತರ್

ತಾ|| ಮಾಹೆ ಸ೯

ಕೆಳಗಿನ ಪಟ್ಟಿಯಲ್ಲಿ ಕೊಟ್ಟ ಪುಸ್ತಕಗಳು ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರ ಮಾಡಲ್ಪಟ್ಟವೆ.

ಸಂಖ್ಯೆ	ಪುಸ್ತಕದ ಹೆಸರು.	ಭಾಷೆ.	ಯಾತರ ಬಗ್ಗೆ ಮಂಜೂರು ಮಾಡಿದೆ?	ಕ್ರಯ. ರೂ.	ಆ.	ಪೈ.
೧	ದಾತಾರ ಆರ್ ಎನ್, ಹೆಚ್ ಎನ್, ಮತ್ತು ಜಿ ಎನ್ ಕೃತ ಗಿಳಿಯ ಚಿತ್ರ ಬಣ್ಣದ್ದು, ವ್ಹಾರ್ನಿಶ್ ಮಾಡಿದ್ದು, ಅರಿವೆಹಚ್ಚಿದ್ದು, ಮತ್ತು ರೂಲುಗಳುಳ್ಳದ್ದು.	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ.	೦	೮	೦
೨	ಸದರ ನವಿಲಿನ ಚಿತ್ರ. ಸದರ	ಸದರ	ಸದರ	೦	೮	೦
೩	ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ:- ಬಿ. ವೆಂಕಟಾಚಾರ್ ಕೃತ ಅವ್ಯತಪುಲಿನ.	ಸದರ	ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗಳ ಮತ್ತು ಇನಾಮುಗಳ ಬಗ್ಗೆ.	೦	೧೦	೦
೪	ಆರ್. ನರಸಿಂಹಾಚಾರ್ ಮತ್ತು ಎಸ್.ಬಿ. ನರಸಿಂಹಾಚಾರ್ ಕೃತ ಕರ್ನಾಟಕ ಕವಿಚರಿತ್ರೆ.	ಸದರ	ಸದರ ಮತ್ತು ಹಿಂಗ್ಲೋ ವ್ಹರ್ನಾಕ್ಯೂಲರ ಶಾಲೆಗಳ ಬಗ್ಗೆ	೫	೦	೦
೫	ಬುಕ್‌ಡಿಪೋ ನವಲ್‌ಕಿಶೋರಪ್ರೆಸ್ ಲಖನೌ ಉರ್ದು ಕಾಯಿದಾ-ಮೌಲವಿ ಮಹಮ್ಮದ ಇಸ್ಮಾಯಿಲ್ ಕೃತ.	ಉರ್ದು.	ಉರ್ದು ಶಾಲೆಗಳಲ್ಲಿ ಉಪಯೋಗಿಸುವ ಬಗ್ಗೆ	೦	೧	೬
೬	ಸದರ ಉರ್ದು ವಾಚನ–					
	-ಪುಸ್ತಕ ನಂಬರ ೧.	ಸದರ	ಸದರ	೦	೧	೧
೭	ಸದರ ಸದರ ನಂಬರ ೨	ಸದರ	ಸದರ	೦	೨	೧
೮	ಸದರ ಸದರ ನಂಬರ ೩	ಸದರ	ಸದರ	೦	೩	೬
೯	ಸದರ ಸದರ ನಂಬರ ೪	ಸದರ	ಸದರ	೦	೪	೬
೧೦	ಸದರ ಸದರ ನಂಬರ ೫	ಸದರ	ಸದರ	೦	೪	೧

ಶಾಲಾಪತ್ರಕ.

ಪುಸ್ತಕ ೪೯. | ದಿಸೆಂಬರ ೧೯೧೩. | ಸಂಚಿಕೆ ೧೨

ಪರಲೋಕವಾಸಿಗಳಾದ

ಶ್ರೀ. ರಾ॥ ರಾ॥ ರಾವಜೀ ಬಾಳಾಜೀ ಕರಂದೀಕರ

ಬಿ. ಎ. ಆನರ್ಸ್. ಎಸ್. ಬಿ.

ಕಳೆದ ವರ್ಷದ ನವೆಂಬರ ತಿಂಗಳ ೧೧ನೆಯ ತಾರೀಖಿಗೆ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಎಂಬ ಸರಕಾರದ ಶ್ರೇಷ್ಠವಾದ ಪದವಿಯಿಂದ ನಿವೃತ್ತರಾಗಿ, ದೇಶಕಾರ್ಯಕ್ಕಾಗಿ ತನುಮನಧನಗಳನ್ನು ಅರ್ಪಿಸುವದಕ್ಕೆ ಸಿದ್ಧರಾದಂಥ ಮಹಾನುಭಾವರಾದ ಶ್ರೀ. ರಾ. ರಾ. ರಾವಜೀ ಬಾಳಾಜೀ ಕರಂದೀಕರರವರ ಭಾವಚಿತ್ರವನ್ನೂ ಚರಿತ್ರವನ್ನೂ ಅದೇ ತಿಂಗಳ ಶಾಲಾಪತ್ರಕದಲ್ಲಿ ಕೊಟ್ಟೆವಷ್ಟೇ. ಅಂದಿನಿಂದ ಸಂದ ಒಂದು ವರ್ಷಕ್ಕೇ ಈ ಮಹನೀಯರ ಅತಿ ದುಃಖಕರವಾದ ಮರಣವಾರ್ತೆಯನ್ನು ಬರೆಯುವ ಪ್ರಸಂಗವು ನಮ್ಮ ಪಾಲಿಗೆ ಬರುವದೆಂದು ನಾವು ಎಂದೂ ಕನಸುಮನಸಿನಲ್ಲಿಯೂ ಎಣಿಸಿದ್ದಿಲ್ಲ. ಆದರೆ, ದೈವಗತಿಯು ದುರ್ಜ್ಞೇಯವಾದದ್ದು. ಈ ಮಹನೀಯರು ಸರಕಾರದ ಉದ್ಯೋಗದಿಂದ ನಿವೃತ್ತರಾದ ಕೂಡಲೆ ಮುಂಬಯಿಯ ಶಾಯದೆ ಕೌನ್ಸಿಲಿನ ಸಭಾಸದರಾಗಿ ದಕ್ಷಿಣಭಾಗದ ಮ್ಯುನಿಸಿಪಾಲಿಟಿಗಳಿಂದ ಆರಿಸಲ್ಪಡಲು ಯತ್ನಮಾಡಿದರು. ಆದರೆ, ಮುಂದೆ ಆಗತಕ್ಕ ಸಂಗತಿಯು ದುರ್ಬಿಜ್ಞವೋ ಏನೋ ಎಂಬಂತೆ, ಇಡೀ ಆಯುಷ್ಯದಲ್ಲಿ ಅವರು ಕೈಯಲ್ಲಿ ಹಿಡಿದಂಥ ಕಾರ್ಯಕ್ಕೆ ಎಂದೂ ಅಪಯಶವು ಬಾರದಿದ್ದರೂ, ಈ ಕಾರ್ಯದಲ್ಲಿ ಅವರಿಗೆ ಯಶಸ್ಸು ದೊರೆಯಲಿಲ್ಲ. ಎಂದೂ ಸೋಲನ್ನು ಅರಿಯದಂಥ ಉದಾತ್ತಧೀಗಳ ಮನಸ್ಸು ಇಂಥ ಸಂಗತಿಯಿಂದ ನೊಂದುಕೊಳ್ಳುವದು ಸಾಹಜಿಕವೇ. ಮೊದಲೇ ಅವರ ಶರೀರದಲ್ಲಿ ಮನೆಮಾಡಿಕೊಂಡಿದ್ದ ಶಾರೀರಿಕವ್ಯಾಧಿಯಿಂದ ಕೆಲ ಮಟ್ಟಿಗೆ ಉಂಟಾಗಿದ್ದ ಶಾರೀರಿಕದೌರ್ಬಲ್ಯವು ಈ ಮನೋವ್ಯಥೆಯಿಂದ

ಹೆಚ್ಚಾಗಿ, ಅವರಿಗೆ ಹೃದಯದ ವಿಕಾರವು ಉಂಟಾದಂತೆ ತೋರುತ್ತದೆ. ಕಡೆಗೆ, ಇದರಿಂದಲೇ ಕಳೆದ ತಿಂಗಳ ೧೫ನೆಯ ತಾರೀಖಿನ ದಿವಸ ಒಮ್ಮಿಂದೊಮ್ಮೆ ಅವರ ದೇಹಾವಸಾನವಾಯಿತೆಂಬುದನ್ನು ಬರೆಯುವದಕ್ಕೆ ಅತ್ಯಂತ ವಿಷಾದ ಪಡುತ್ತೇವೆ.

ಇವರ ಮರಣದಿಂದ ಕನ್ನಡಿಗರಲ್ಲಿ ತಳವೂರಿಕೊಂಡು ನಿಂತಿದ್ದ ಜಾಡ್ಯವನ್ನು ಹೋಗಲಾಡಿಸಲಿಕ್ಕೆ ಯತ್ನಿಸುತ್ತಿದ್ದ ಒಬ್ಬ ಮಹಾಪುರುಷರು ಮಾಯವಾದರು. ಭ್ರಾತೃವರ್ಗವನ್ನು ಪುತ್ರವತ್ ಭಾವಿಸಿ, ಕಾಲಕಾಲಕ್ಕೆ ಅವರಿಗೆ ಆಪ್ತಾಲೋಚನೆಯನ್ನು ಹೇಳಿ, ಅವರ ಕ್ಷೇಮಕ್ಕೆ ಅನುಕೂಲತೆಯನ್ನು ಮಾಡಿಕೊಡುತ್ತಿದ್ದ ಸದ್ಗುರುವು ಮರೆಯಾದನು. ತರುಣರನ್ನು ಹುರಿದುಂಬಿಸಿ, ಅವರು ತಮ್ಮ ಜ್ಞಾನವನ್ನು ಬೆಳಿಸಿಕೊಂಡು, ಆತ್ಮೋನ್ನತಿಗೂ ದೇಶೋನ್ನತಿಗೂ ಅನುರೂಪಗೃಹಸ್ಥರಾಗುವಂತೆ ವರ್ತಿಸಿರೆಂದು ಬೋಧಿಸುವ ಉಪದೇಶಕನು ಕಾಣದಂತಾದನು. ಜಗತ್ತಿಗೆ, ಹೋಲಿಸಿದರೆ ತಾನೊಂದು ತೃಣವೆಂದು ಭಾವಿಸಿ, ತನ್ನೊಬ್ಬನಿಂದೇನಾದೀತೆಂದು ನಿರಾಶನಾಗಿ ಕೈಯುಚ್ಚಿಕೊಂಡು ಕುಳಿತುಕೊಳ್ಳುವ ಉದಾಸೀನನಿಗೆ, ಒಂದೇ ವ್ಯಕ್ತಿಯಾದರೂ ಎಂಥ ಘನಕಾರ್ಯವನ್ನು ಮಾಡಬಹುದೆಂಬುದನ್ನು ತೋರಿಸುವ ಚಿತ್ರವು ಹರಿದು ಹೋಯಿತು. ಇವರು ನಿರಲಸವೃತ್ತಿಯ ಪುತ್ತಳಿಯು; ನಿಯಮಿತತನದ ಮೂರ್ತಿಯು; ಸತತೋದ್ಯೋಗದ ಪ್ರತಿಮೆಯು; ನಿರ್ದಾಕ್ಷಿಣ್ಯದ ಬೊಂಬೆಯು; ಮಿತವ್ಯಯದ ಮೂರ್ತಸ್ವರೂಪವು: ಸಚ್ಛೀಲದ ನಿಧಿಯು ಆಗಿದ್ದರೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಕುಟುಂಬದ ಮುಖ್ಯನ ಮರಣದಿಂದ ಆ ಕುಟುಂಬದ ಯೋಗಕ್ಷೇಮಕ್ಕೆ ಬಾಧೆಬರುವದರಿಂದ ಆ ಕುಟುಂಬದವರಿಗೆ ದುಃಖವಾಗುವದು ಸಹಜವು. ಆದರೆ ಈ ಮಹಾಪುರುಷರು ಅಂತ್ಯಕಾಲದಲ್ಲಿ ಮಾಡಿಟ್ಟ ಯೋಜನೆಯಿಂದ ಇಡೀ ಕನ್ನಡನಾಡಿನವರಿಗೆ ಸ್ವಕುಟುಂಬದ ಪೋಷಕನ ವಿಯೋಗವಾದಷ್ಟು ದುಃಖವು ಆಗಿರುವದು. ಯಾವ ಮಹನೀಯರ ಇಡೀ ಆಯುಷ್ಯದ ಶ್ರಮದ ಫಲವು ದೇಶಬಾಂಧವರ ಸಾತ್ವಿಕ ಹಿತಕ್ಕೆ ವ್ಯಯವಾಗುವದೋ ಆ ಮಹಾನುಭಾವರು ನಿಜವಾಗಿ ಮೃತವಾಗಿಲ್ಲೆಂತಲೇ ಹೇಳ

ಬೇಕು. ಪ್ರಸ್ತುತದಲ್ಲಿ ಭರತಖಂಡಕ್ಕೆ ನೀತಿವಂತರಾಗಿ ಬಾಳಿ, ನ್ಯಾಯದಿಂದ ಸಂಪದಭಿವೃದ್ಧಿಯೆನ್ನು ಮಾಡಿ, ಅದರಿಂದ ಸ್ವಜನರ ಸೌಖ್ಯವನ್ನು ಬೆಳಿಸುವಂಥ ಪುರುಷರ ಕೊರತೆಯುಂಟು. ಅಂಥ ಮಹಾಮಹಿಮರ ಮಾಲಿಕೆಯಲ್ಲಿ ಈ ಮಹನೀಯರನ್ನು ಸೇರಿಸಲಿಕ್ಕೆ ಏನೂ ನಿರ್ಬಂಧ ತೋರುವದಿಲ್ಲ. ನಾವು ಹತಭಾಗ್ಯರಿಂತಲೇ ಇಂಥವರನ್ನು ಕಳೆದುಕೊಂಡೆವು. ಇವರು ಇನ್ನು ಕೆಲಕಾಲ ಬದುಕಿದ್ದರೆ ಕನ್ನಡಿಗರಿಗೆ ಹೆಚ್ಚು ಲಾಭವಿತ್ತೆಂಬದಕ್ಕೆ ಸಂಶಯವಿಲ್ಲ. ಯಾಕಂದರೆ, ಇವರ ಆಯುಷ್ಯದ ಪ್ರತಿಕ್ಷಣವು ಉಪದೇಶ ರೂಪದಿಂದಲೂ, ದ್ರವ್ಯರೂಪದಿಂದಲೂ ನಮ್ಮ ಹಿತಕ್ಕೆ ಅನುಕೂಲವಾಗುತ್ತಿತ್ತು. ಆದರೆ ಈಶಸಂಕಲ್ಪದ ಮುಂದೆ ಕ್ಷುದ್ರ ಪ್ರಾಣಿಗಳಾದ ನಮ್ಮ ಕೋರಿಕೆಯ ಆಟವು ನಡೆಯುವದೆಂತು? ಆಗಲಿ, ಈಶ್ವರನ ಸಂಕಲ್ಪಕ್ಕೆ ತಲೆಬಾಗುವದೇ ಮಾನವನ ಕರ್ತವ್ಯವು. ಆದರೂ, ಈ ವಿವೇಂಗತರಾದ ಮಹಾಪುರುಷರಿಗೆ, ಶ್ರೀಭಗವಂತನೇ, ನಿನ್ನ ಚರಣಾರವಿಂದದಲ್ಲಿ ಶಾಂತಿಯನ್ನು ದಯಪಾಲಿಸೆಂತಲೂ, ಇಂಥ ಸತ್ಪುರುಷರನ್ನು ಕಾಲಕಾಲಕ್ಕೆ ಉತ್ಪನ್ನಮಾಡಿ ನಮಗೆ ಸಹಾಯ ಮಾಡೆಂತಲೂ ಆ ಘನ ಮಹಿಮನನ್ನು ಪ್ರಾರ್ಥಿಸುವದೇ ನಮ್ಮ ಕರ್ತವ್ಯವಾಗಿರುತ್ತದೆ. ಅದರಂತೆಯೇ ಪರಮಾತ್ಮನನ್ನು ಬೇಡಿಕೊಂಡು ಈ ದುಃಖಲೇಖವನ್ನು ಮುಗಿಸುತ್ತೇವೆ.

॥ श्रीगुरुः शरणम् ।

श्रुत्वा करंदीकर इत्युपाख्यः श्रीरावजीराव उदारचेताः ॥
दिवं प्रयातः सहसेति वृत्तं मनो न दूयेततरां नु कस्य ? ॥ १ ॥
दिने दिने लोकमिमं विहाय लोकांतरं नो कति वा व्रजंति ? ॥
तथाविधाः किंतु नरा दुरापा ये शोकमर्हंति मृता जनानाम् ॥ २ ॥
कामं जनाः संत्विह कोटिशोऽन्ये कुबेरतुल्याः किल ये धनेन ॥
तथापि किं तद्द्रविणेन तेषां ? श्रीमान् स नूनं य उदारचित्तः ॥ ३ ॥
मृतो महात्मा स इति ब्रुवंतु जनाः, परं नेति वयं वदामः ॥
स एव जीवन्नपि धिक्! गतासुर्वृणाति कीर्तिर्न शुभा मुदा यम् ॥ ४ ॥

अहो प्रभावो द्रविणस्य यत्तत् बध्नाति गाढं मनुजं स्वपाशैः ॥
आसन्नकालोऽपि न येन तस्मान्निजं मनो मोचयितुं प्रभुः सः ॥ ५ ॥
यथा विवेकेन विना विरागो यथैव शौर्येण विना नृपालः ॥
यथा सतीत्वेन विना च नारी मोघा तथौदार्यमृते किल श्रीः ॥ ६ ॥
निधाय कोशे पितरः सुतार्थं रक्षंतु नाम द्रविणं न हानिः ॥
आसन्नकाला धिगपुत्रिणोऽपि लुभ्यंति तच्चित्रतरं किमस्मात् ? ॥ ७ ॥
इतोऽप्यहो दुःखतरं न किंचित् यत् केऽपि लक्ष्मीतनया धनं स्वम् ॥
विनाश्य नीचव्यसनेष्वशेषं रुक्पीडिता यांत्युपहासमंते ! ॥ ८ ॥
किंवा, किमेभिर्बहुलैर्धनांधैरेकोऽप्यलं श्रील उदारधीमान् ॥
वरं बहुभ्यः किल बभ्रुलेभ्य एकोऽपि चूतः फलपत्रयुक्तः ॥ ९ ॥
श्रीमन् ! करंदीकर ! भो महात्मन् ! धन्योऽसि धन्योऽसि विवेकशालिन् ! ॥
दानादपुत्रोऽपि हि शिष्यवृत्तेर्जातोऽसि नूनं बहुपुत्रकत्वम् ॥ १० ॥
दानानि नैकानि, परं न तानि त्वद्दत्तदानेन समानि नूनम् ॥
तानि क्षणं शर्मकराणि भिक्षोरिदं सदाऽध्येतृशुभावहं तु ॥ ११ ॥
किंचार्थिनो धूर्ततमाः प्रहृष्या सदा मुखस्तोत्रविधानशौंडाः ॥
विद्यार्थिनः किंतु निसर्गशुद्धाः कृतोपकारं सततं स्मरंति ॥ १२ ॥
धन्याऽसि मातः ! खलु देवि ! राधे ! प्राप्तस्त्वया यत् सदुदारभर्ता ॥
त्वं चापि तस्यास्यनुरूपपत्नी रत्नं समायात् किल कांचनेन ॥ १३ ॥
विद्यार्थिनो हंत सुता यदीया गृहं महाराष्ट्रमिदं च यस्याः ॥
सा नाथकीर्तिर्धवला सखी ते पुण्याऽसि पुण्याऽसि भुवि त्वमंब ! ॥ १४ ॥

भवतु सदुपयोगस्त्वद्धनस्येह नित्यं ।
जयतु तदवलंबी दीनविद्यार्थिवर्गः ॥
अनुभवतु तवात्मा स्वर्गसौख्यं सदेति ।
लपति किल महात्मन् ! राव ! लिंगेशशिष्यः

धारवाड,
मार्गशीर्ष शुद्ध
प्रतिपद्, ३५

इति विनीतः
सहस्रबुद्धे दत्तोपाह्वः चिंतामणिः

ಸ್ಫುಟ ವಿಷಯಗಳು.

೧. "ಚಕ್ಷುರ್ವೈ-ಸತ್ಯಂ" ಎಂಬ ವಾತು ನಿಜವೋ?

ಕಣ್ಣುಟ್ಟ ನೋಡಿದ ಸಂಗತಿಯು ಮೇಲೆ ನಂಬಿಗೆಯನ್ನಿಡಲಿಕ್ಕೆ ಅಡ್ಡಿಯಿಲ್ಲೆಂದು ಜನರು ಅನ್ನುತ್ತಾರೆ. ಚಕ್ಷುರಿಂದ್ರಿಯವು ಮನುಷ್ಯನಿಗೆ ಅತ್ಯುಪಯುಕ್ತವಾದದ್ದೆಂಬದರಲ್ಲಿ ಸಂದೇಹವಿಲ್ಲ. ಆದರೆ ಕಣ್ಣಿಗೆ ಬಿದ್ದದ್ದೆಲ್ಲ ನಿಜವೆಂತಲೂ, ಅದಿಷ್ಟೇ ನಿಜವೆಂತಲೂ ಯಾರೂ ತಿಳಿಯಬಾರದು. ಕಣ್ಣಿನ ಮೇಲೆ ನಂಬಿಗೆಯನ್ನಿಟ್ಟು ನಡೆಯುವದಾದರೆ ಹವೆಯು ಅದೆ ಎಂದು ಹ್ಯಾಗೆ ಅನ್ನಬೇಕು? ಯಾಕಂದರೆ ಹವೆಯು ಕಣ್ಣಿಗೆ ಕಾಣುವದಿಲ್ಲ. ಇದೇ ಮೇರೆಗೆ ಕಣ್ಣಿಗೆ ಕಾಣುವದೆಲ್ಲ ನಿಜವೆನ್ನಬೇಕಾದರೆ ಸೂರ್ಯನು ಪೃಥ್ವಿಯ ಸುತ್ತು ಮುತ್ತು ತಿರುಗುತ್ತಾನೆಂದು ಅನ್ನಬೇಕಾಗುವದು. ಆದರೆ ವಸ್ತುಸ್ಥಿತಿಯು ಹಾಗಿರುವದಿಲ್ಲ. ಆದಕಾರಣ 'ಚಕ್ಷುರ್ವೈಸತ್ಯಂ" ಎಂಬ ಗೀರ್ವಾಣ ಭಾಷೆಯ ಲೋಕೋಕ್ತಿಯು ಜೇರೆ ಲೋಕೋಕ್ತಿಗಳಂತೆಯೇ ಇರುತ್ತದೆ; ಅಂದರೆ, ಒಂದೊಂದು ಪ್ರಸಂಗದಲ್ಲಿ ಮಾತ್ರ ನಿಜವಿರುತ್ತದೆ ಎಂಬ ವಾತನ್ನು ಲಕ್ಷದಲ್ಲಿಡತಕ್ಕದ್ದು. ಕಣ್ಣಿಗೆ ಕಾಣಿಸದಂಥ ಲಕ್ಷಾವಧಿ ವಸ್ತುಗಳು ಇರುತ್ತವೆ. ಕ್ಷಯರೋಗದ ಅಥವಾ ಪ್ಲೇಗಿನ ಸೂಕ್ಷ್ಮ ಜಂತುಗಳು ನಮ್ಮ ಕಣ್ಣಿಗೆ ಕಾಣಿಸದಿದ್ದರೂ ಅವುಗಳಿಂದ ನಾವಿರ ಗಟ್ಟಲೆ ಜನರ ಪ್ರಾಣಹಾನಿಯಾಗುತ್ತಿರುವದು, ಸೂಕ್ಷ್ಮದರ್ಶಕ ಯಂತ್ರದ ಸಹಾಯವಿಲ್ಲದೆ ಈ ಜಂತುಗಳ ಅಸ್ತಿತ್ವವು ಸಹ ನಮಗೆ ನಿಜವಾಗಿ ತೋರುವದಿಲ್ಲ. ಈ ಯಂತ್ರದ ಸಹಾಯವಿದ್ದರೂ ಕೂಡ ಹವೆಯು ಕಣ್ಣಿಗೆ ಕಾಣುವದಿಲ್ಲ. ಈ ಚಕರ್ಮ ಚಕ್ಷುವಿಗೆ ಅಗೋಚರವಾದ ಇನ್ನೂ ಎಷ್ಟೋ ಒಡವೆಗಳು ಈ ಜಗತ್ತಿನಲ್ಲಿರುತ್ತವೆ. ಒಬ್ಬ ಫ್ರೆಂಚ ವಿದುಷಿಯಾದ ಭಾಹಸುಕರಿ ಎಂಬವಳು ರೇಡಿಯಮ್ ಧಾತುವಿನಿಂದ ಸಣ್ಣ ಸಣ್ಣ ಕಣಗಳು ಹೊರಬೀಳುತ್ತಿರುವವೆಂದು ಗೊತ್ತು ಹಚ್ಚಿರುವಳು. ಈ ಕಣಗಳು ಕಣ್ಣಿಗೆ ಕಾಣವಿದ್ದರೂ ಅವುಗಳಿಂದ ಉಷ್ಣತೆಯು ಉತ್ಪನ್ನವಾಗುವದು; ಫೋಟೋಗ್ರಾಫದೊಳಗಿನ ಚಿತ್ರಪಟ (Film) ದ ಮೇಲೆ ಕಲೆಗಳು ಬೀಳುವವು; ನಮ್ಮ ಚಕರ್ಮವು ಸುಡುವದು. ಈ ಕಾರ್ಯಗಳಿಂದ ಅವುಗಳ ಅಸ್ತಿತ್ವವು ನಮಗೆ ತಿಳಿಯುವದು.

ರಡಿಯುವ ಧಾತುವಿನ ಈ ಕಣಗಳು ಅತ್ಯಂತ ಸೂಕ್ಷ್ಮವಾಗಿರುವವು. ಲಕ್ಷಪಟ್ಟು ದೊಡ್ಡದಾಗಿ ಕಾಣುವ ಸೂಕ್ಷ್ಮದರ್ಶಕ ಯಂತ್ರದೊಳಗಿಂದ ನೋಡಿದರೂ ಕೂಡ ಅವು ಕಾಣುವದಿಲ್ಲ.

ಸಾರಾಂಶವೇನಂದರೆ, ಈವಿಶ್ವದ ವಿಸ್ತಾರಕ್ಕೂ ಅದರ ರಚನೆಯ ಸೂಕ್ಷ್ಮತ್ವಕ್ಕೂ ತುಲನೆ ಮಾಡಿ ನೋಡಿದರೆ ನಮ್ಮ ಕಣ್ಣುಗಳೆಂದರೆ ತೀರ ಗ್ರಾಮ್ಯ ತರದ ಯಂತ್ರವಾಗಿರುತ್ತವೆಂದು ಅನ್ನಬೇಕಾಗುವದು. ಮನುಷ್ಯನ ಚರ್ಮಚಕ್ಷುವು ಹೀಗಿದ್ದರೂ ಜ್ಞಾನಚಕ್ಷುವು ಮಾತ್ರ ಸಾವಕಾಶವಾಗಿ ವಿಶ್ವದ ಗೂಢಸಂಗತಿಗಳನ್ನು ಹೊರಗೆಡವುತ್ತಿರುವದು.

---

೨. ನಾಯಿಯ ವಿಷದಲ್ಲಿರುವ ಸೂಕ್ಷ್ಮ ಜಂತುಗಳ ಶೋಧವು.

ಆಧುನಿಕ ಭಿಷಗ್ವರ್ಯರ ಪ್ರವೃತ್ತಿಯು ಪ್ರತಿಯೊಂದು ರೋಗದ ಸೂಕ್ಷ್ಮ ಜಂತುಗಳನ್ನು ಶೋಧಿಸುವದರ ಕಡೆಗೆ ಇರುತ್ತದೆ. ಮೈಲಿ, ವಿಷಮಜ್ವರ, ಕ್ಷಯ, ಪ್ಲೇಗು ಮೊದಲಾದ ಭಯಂಕರವಾದ ರೋಗಗಳ ಸೂಕ್ಷ್ಮಜಂತುಗಳ ಶೋಧವಾಗಿರುತ್ತದೆ. ಸೂಕ್ಷ್ಮದರ್ಶಕಯಂತ್ರದೊಳಗಿಂದ ಈ ಜಂತುಗಳನ್ನು ನೋಡಬಹುದು. ಇವುಗಳ ಶೋಧದಿಂದ ಆ ಜಂತುಗಳನ್ನು ಕೊಲ್ಲುವ ಒಂದು ಬಗೆಯ ರಸವನ್ನು ಸಿದ್ಧಮಾಡುವ ಕೆಲಸದಲ್ಲಿ ಬಹಳ ಸಹಾಯವಾಗುತ್ತದೆ. ನಾಯಿಯು ಕಚ್ಚುವದರಿಂದ ಆಗುವ ಅನರ್ಥಗಳನ್ನು ದೂರಮಾಡುವದಕ್ಕಾಗಿ ಪಾಸ್ಚ್ಯರ ಇನ್‌ಸ್ಟಿಟ್ಯೂಟ ಎಂಬ ಸಂಸ್ಥೆಯು ಬಹಳ ಪ್ರಯತ್ನಗಳನ್ನು ಮಾಡುತ್ತಿರುವದು. ಈ ಸಂಸ್ಥೆಯ ಔಷಧೋಪಚಾರಗಳಿಂದ ಎಷ್ಟೋ ಜನರಿಗೆ ಗುಣವಾಗಿರುವದು. ಆದರೆ ಈ ರೋಗ (Hydrophobia) ದ ಸೂಕ್ಷ್ಮ ಜಂತುಗಳು (Microbes) ಇನ್ನೂವರೆಗೆ ಶೋಧಿಸಲ್ಪಟ್ಟಿದ್ದಿಲ್ಲ. ಅದರೆ ಪ್ರೊಫೆಸರ್ ದಿಜೇಪ್ರೋ ನೋಗುಶಿ ಎಂಬ ಒಬ್ಬ ಜಪಾನಿ ಪಂಡಿತರು ಆ ಜಂತುಗಳನ್ನು ಗೊತ್ತುಹಚ್ಚಿ ಕೀರ್ತಿ ಹೊಂದಿರುವರು. ಈ ಗೃಹಸ್ಥರು ಅಮೇರಿಕದೊಳಗಿನ ರಾಕ್ ಫೇಲರವೆಂಬ ಸಂಸ್ಥೆಯೊಳಗೆ ಶೋಧಮಾಡುವ ಕೆಲಸದಲ್ಲಿ ತೊಡಗಿದ್ದು ಅವರು ಸದ್ಯಕ್ಕೆ ತೆಗೆದ ಶೋಧದಿಂದ ನಾಲ್ಕೂಕಡೆಗೆ ಜನರು ಅವರನ್ನು ಹೊಗಳಹತ್ತಿದ್ದಾರೆ. ಪಾಸ್ಚ್ಯರ ಇನ್‌ಸ್ಟಿಟ್ಯೂಟದ

ಮುಖ್ಯವರಡಿತರಾದ ಡಾ. ಮೆಚನಿಕಾಫ್ ಎಂಬವರು ಪ್ರೊ. ನೋಗುಚಿ ಇವರು ತೆಗೆದ ಶೋಧಕ್ಕಾಗಿ ಅವರನ್ನು ವರ್ಣಿಸಿ, ಈ ಶೋಧದಿಂದ ನಾಯಿಯ ವಿಷಕ್ಕೆ ಉಪಾಯಗಳ ಯೋಜನೆಯನ್ನು ಮಾಡುವ ತೊಂದರೆಗಳು ಕಡಿಮೆಯಾಗುವವೆಂದು ಅಂದಿದ್ದಾರೆ. ಪ್ರೊ. ನೋಗುಚಿ ಇವರು ಸುಮಾರು ನಾಲ್ವತ್ತು ವರ್ಷ ವಯಸ್ಸಿನವರಿರುವರು. ಅವರ ಬಿಂದು ಕೈಯು ಮುರಿದಿರುತ್ತದೆ. ಚಿಕ್ಕಂದಿನಲ್ಲಿ ಅವರಿಗೆ ತುಬಾಕಿಯ ಮದ್ದಿನ ಕೂಡ ಅಡುವದು ಬಹಳ ಸೇರುತ್ತಿತ್ತು. ಬಿಂದಾನೊಂದು ದಿನಸ ಅವರು ಆ ಮದ್ದಿನಕೂಡ ಅಡುತ್ತಿರುವಾಗ ಬಿಮ್ಮಿಂದೊಮ್ಮೆ ಅದಕ್ಕೆ ಉರಿಹತ್ತಿ ಅದರಲ್ಲಿ ಅವರ ಕೈಯು ಆಹುತಿಯಾಯಿತು. ಜಪಾನದಲ್ಲಿ ಅವರು ಡಾಕ್ಟರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇಂದಿಗೆ ಸುಮಾರು ಎಂಟುವರ್ಷದ ಕೆಳಗೆ ಅವರು ರಾಕ್‌ಫೆಲರ ಎಂಬ ಸಂಸ್ಥೆಗೆ ಹೋಗಿದ್ದು ಇಂದಿನವರೆಗೆ ಹೊಸಹೊಸ ಶಾಸ್ತ್ರೀಯ ಗೂಢ ಸಂಗತಿಗಳನ್ನು ಗೊತ್ತುಹಚ್ಚುವ ಕೆಲಸದಲ್ಲಿ ಹಗಲಿರುಳು ಪ್ರಯತ್ನ ಮಾಡತೊಡಗಿರುವರು.

---

೩. ಅಂತರಿಕ್ಷದಲ್ಲಿ ವಿಮಾನಗಳ ಮೇಲಿನ ಕಸರತ್ತು.

ಡೊಂಬರು ನೆಲದ ಮೇಲೆ ನಾನಾಪ್ರಕಾರದ ಕಸರತ್ತುಗಳನ್ನು ಮಾಡುವದನ್ನು ಅನೇಕರು ನೋಡಿದ್ದಾರೆ. ಸರ್ಕಸುಗಳಲ್ಲಿ ಜೋಕಾಲಿಗಳ ಮೇಲೆಯೂ ಹಲವು ತರದ ಕಸರತ್ತುಗಳು ಮಾಡಲ್ಪಡುವವು. ಆದರೆ ಇತ್ತೀತ್ಯಲಾಗಿ ಫ್ರಾನ್ಸದೇಶದ ಒಬ್ಬ ಸಾಹಸಿಗನು ಅಂತರಿಕ್ಷದಲ್ಲಿ ವಿಮಾನಗಳ ಮೇಲೆ ನಾನಾಬಗೆಯ ಕಸರತ್ತುಗಳನ್ನು ಮಾಡಿತೋರಿಸಿ ಪ್ರೇಕ್ಷಕರನ್ನು ದಂಗುಬಡಿಸಿದನು. ಈ ವಿಲಕ್ಷಣ ಸಾಹಸಿಗನಾದ ವೈಮಾನಿಕನ ಹೆಸರು ವೇಗೋ. ಈತನು ವಿಮಾನದ ಮೇಲೆ ಜೀವದ ಪರಿವೆ ಇಲ್ಲದೆ ಬೇಕಾದಂಥ ಸಾಹಸದ ಕೆಲಸಗಳನ್ನು ಮಾಡಲಿಕ್ಕೆ ಹಿಂದೆ ಮುಂದೆ ನೋಡುವವಿಲ್ಲ. ಮರಣದ ಬಾಯಲ್ಲಿ ಹಾರಿಕೊಳ್ಳಲಿಕ್ಕೆ ಇವನು ಯಾವಾಗಲು ಸಿದ್ಧನಾಗಿರುವನು. ಕೆಲವು ದಿವಸಗಳ ಪೂರ್ವದಲ್ಲಿ ವೇಗೋನ ವಿಮಾನವು ಭಂದಿಂದ ಮೇಲಕ್ಕೇರುತ್ತಿರುವಾಗ ಅವನು ನೆಲಕ್ಕೆ ಹಾರಿಕೊಂಡನು. ಮೊನ್ನೆ ಮೊನ್ನೆ ಈ ಧೈರ್ಯಶಾಲಿಯು ವಿಮಾನದೊಳಗಿಂದ

ಮೂರುಸಾವಿರ ಭೂಟು ಮೇಲಕ್ಕೆ ಹೋಗಿ ಅಲ್ಲಿಂದ ವಿಮಾನವನ್ನು ಮಗ್ಗಲುಮಾಡಿ ಅದನ್ನು ನಡಿಸುವ ಚಾಕರನನ್ನು ಗಟ್ಟಿಯಾಗಿ ಹಿಡಕೊಂಡು ತಲೆ ಕೆಳಗೆ ಕಾಲು ಮೇಲೆಮಾಡಿ ಸಾನೂರುಯಾರ್ಡ ಅಂತರವನ್ನು ಹಾಯ್ದು ಸೆಂಕಡುಗಳಲ್ಲಿ ಕೆಳಗಿಳಿದನು. ಅದನ್ನು ಕಂಡು ಪ್ರೇಕ್ಷಕರು ಭಯದಿಂದಲೂ ಆಶ್ಚರ್ಯದಿಂದಲೂ ಚಕಿತರಾದರು. ತರುವಾಯ ವೇಗೋನು ತನ್ನ ವಿಮಾನವನ್ನು ಯಥಾಸ್ಥಿತವಾಗಿ ಮಾಡಿಕೊಂಡು ನೆಲಕ್ಕೆ ಇಳಿದನು. ಜೀವದ ಅಂಜಿಕೆಗೆ ಈಸಲಿಕ್ಕೆ ಕಲಿಯಲಾರದ ಜನರು ವೇಗೋನ ಚರಿತ್ರದಿಂದ ಬೋಧವನ್ನು ತಕ್ಕೊಳ್ಳತಕ್ಕದ್ದು.

ಸಟ್ಟುದ್ರದ ಸಪಾಟಿಯಿಂದ ವಿಜಾಪುರೆ ಜಿಲ್ಲೆಯೊಳಗಿನ ಸ್ಥಳಗಳ ಎತ್ತರಗಳು.

(ಕಳೆದ ಸಂಚಿಕೆಯ ಲನೇ ಪುಟದಿಂದ ಮುಂದೆ ಸಾಗಿದ್ದು.)

೭. ಮುದ್ದೇಬಿಹಾಳ ತಾಲೂಕ.

೧. ಮುದ್ದೇಬಿಹಾಳ	೧೮೯೩ ಫೂ.	೧೫. ಕೋಳೂರ	೧೭೨೬ ಫೂ
೨. ಆಲೂರ	೧೭೧೭ ,,	೧೬. ಕೊಣ್ಣೂರ	೧೮೧೬ ,,
೩. ಬಸರಕೋಡ	೧೮೬೮ ,,	೧೭. ಕುಜಬಾಳ	೧೬೪೦ ,,
೪. ಬಳಗಾನೂರ	೧೭೬೫ ,,	೧೮. ಕುಂಟೋಜಿ	೧೮೯೪ ,,
೫. ಬಿದರಕುಂದಿ	೧೮೪೭ ,,	೧೯. ಲಕ್ಕುಂಡಿ	೧೭೯೯ ,,
೬. ಹಡಲಗೇರಿ	೧೭೪೦ ,,	೨೦. ಮದರಿ	೧೬೫೦ ,,
೭. ಹಿರೂರ	೧೭೦೮ ,,	೨೧. ಮಡಿಕೇಶ್ವರ	೧೭೪೫ ,,
೮. ಹುಲ್ಲೂರ	೧೭೩೪ ,,	೨೨. ಮೈಲೇಶ್ವರ	೧೬೬೧ ,,
೯. ಹುನಕುಂಟ	೧೭೧೭ ,,	೨೩. ಮೂರೇಹಾಳ	೧೬೯೯ ,,
೧೦. ಇಂಗಳಗೇರಿ	೧೭೮೭ ,,	೨೪. ನಾಲ್ವತ್ತವಾಡ	೧೭೪೦ ,,
೧೧. ಕಾಳಗಿ	೧೬೭೬ ,,	೨೫. ನಾವದಗಿ	೧೭೧೩ ,,
೧೨. ಕುಂದಗನೂರ	೧೭೪೮ ,,	೨೬. ಪಡೆಕನೂರ	೧೭೯೮ ,,
೧೩. ಡವಳಗಿ	೧೮೯೪ ,,	೨೭. ವೀರಾಪೂರ	೧೮೭೧ ,,
೧೪. ಕೊಡಗಾನೂರ	೧೮೦೯ ,,	೨೮. ರಕ್ಕಸಗಿ	೧೬೯೭ ,,

ವೀರರತ್ನ-ಬಾಜೀಪ್ರಭು ದೇಶಪಾಂಡೆ.

(೧೬೬೦-೬೧ ಜಾನೆದಾರಿ)

ಇಂದ್ರನ ವಜ್ರಾಯುಧಕ್ಕೆ ಹೆದರಿ ಸಮುದ್ರವನ್ನು ಮೊರೆ ಹೊಗುವೆದು ಹೇಡಿತನವೆಂದು ತಿಳಿದು, ಒಳಕ್ಕೆ ಹೋಗದೆ ಸ್ಥೈರ್ಯದಿಂದ ಅಲ್ಲಿಯೇ ಅಡ್ಡವಾಗಿ ನಿಂತಿರುವದೋ ಎಂಬಂತೆ ಪಶ್ಚಿಮದಿಕ್ಕಿನಲ್ಲಿ ಸಮುದ್ರಕ್ಕೆ ಸಮಾಂತರವಾಗಿ ಹಬ್ಬಿಕೊಂಡಿದ್ದ ಸಹ್ಯಾದ್ರಿಯ ಉನ್ನತವಾದ ಶಿಖರಗಳನ್ನೂ ಅವುಗಳನ್ನು ಬಳಸಿ ಹರಿಯುವ ಭೀಮಾ, ನೀರಾ, ಗೋದಾವರೀ, ಕೃಷ್ಣಾನದಿಗಳ ಶ್ಯಾಮಲವಾದ ಜಲಸ್ರವಾಹವನ್ನೂ ನೋಡಲು ಮನಸ್ಸು ಆನಂದರಸದಲ್ಲಿ ಓಲಾಡುವದು. ಈ ಆನಂದವನ್ನು ಕ್ಷಣಕಾಲ ಅನುಭವಿಸುವಷ್ಟರಲ್ಲಿ ಅದರ ಹತ್ತರವೇ ಉದಯಹೊಂದಿ ತಮ್ಮ ಕೀರ್ತಿಯಿಂದ ನಾಲ್ಕೂದಿಕ್ಕುಗಳನ್ನು ಬೆಳಗಿದ ಹಲವು ವೀರಪುರುಷರ ಚರಿತ್ರಸೌಂದರ್ಯವು ನೆನಪಿಗೆ ಬರಲು ಅದರೆದುರಿಗೆ ಈ ಪ್ರಾಕೃತಿಕ ಸೌಂದರ್ಯವು ಏನೂ ಅಲ್ಲವೆಂದೆನಿಸುವದು. ಬಾಜಿಪ್ರಭು ದೇಶಪಾಂಡೆ, ಎಂಬವನು ಅಲ್ಲಿಯು ಆ ಪ್ರಕಾರದ ವೀರರಲ್ಲೊಬ್ಬನು. ಮಹಾರಾಷ್ಟ್ರದ ಇತಿಹಾಸದಲ್ಲಿ ಇವನ ಚರಿತ್ರವು ಅದ್ಭುತವಾಗಿರುವದು.

ಶಿವಾಜಿಯ ಅಭ್ಯುದಯ, ಅತನ ಸ್ವರಾಜ್ಯಪ್ರತಿಷ್ಠೆಯ ಕಲ್ಪನೆ ಇವುಗಳಿಂದ ಆ ಕಾಲದಲ್ಲಿ ಮಹಾರಾಷ್ಟ್ರ ದೇಶವು ಹೊಸ ಆಶೆಯಿಂದಲೂ ಶಕ್ತಿಯಿಂದಲೂ, ಮುಂದುವರಿಯುತ್ತಿತ್ತು. ಮಹಾರಾಷ್ಟ್ರದ ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಎಲ್ಲೆಲ್ಲಿಯೂ ಸ್ವರಾಜ್ಯಸ್ಥಾಪನೆಯ ಸುದ್ದಿಯೇ ಸುದ್ದಿ. ಕವಿಗಳೂ, ಸಾಧುಗಳೂ ಕೂಡ ಪುರಾಣವನ್ನೆ ಹೊಸ ಜಾಗರೂಕತೆಯುಂಟಾಗುವಂತೆ ಉಪದೇಶಿಸತೊಡಗಿದ್ದರು. ಇದರಿಂದ ಶಿವಾಜಿಯ ಉದ್ದೇಶ್ಯವು ಈಡೇರುವದಕ್ಕೆ ಬಹಳ ಅನುಕೂಲವಾಗಿತ್ತು.

"ಶಿವಾಜಿಗೆ ಶ್ರೀಭವಾನಿಯು ಪ್ರಸನ್ನಳಾಗಿರುವಳು, ಅವನಿಗೆ ನಿಶ್ಚೇಪವು ದೊರೆತಿರುವದು" ಈ ಮೊದಲಾದ ಸುದ್ದಿಗಳಿಂದಂತೂ ಜನರ ಮನಸ್ಸಿನಲ್ಲಿ ಶಿವಾಜಿಯ ವಿಷಯವಾಗಿ ಭಕ್ತಿಯೂ, ತಮ್ಮ ಕರ್ತವ್ಯವಿಷಯವಾಗಿ ಅತಿಶಯವಾದ ಹುರುಪೂ ಹುಟ್ಟಿದ್ದವು. ಗುಡ್ಡಗಾಡಿನ ಒಬ್ಬೊಬ್ಬರೇ

ಸರದಾರರು ಶಿವಾಜಿಯನ್ನು ಹಿಂಬಾಲಿಸತೊಡಗಿದರು. ಆದರೆ ಒಬ್ಬನು ಶಿವಾಜಿಗೆ ವಿರುದ್ಧವಾಗಿ ನಿಂತನು. ಅವನೇ 'ಬಾಜಿ' ಯು. ಇವನು ಮಾವಳ ಪ್ರಾಂತದಲ್ಲಿ 'ಹಿರಡಸ' ದ ದೇಶಮುಖರ ಆಶ್ರಯದಲ್ಲಿದ್ದ ಸರದಾರನು. ಇವನು ಸಾಮಾನ್ಯವೀರನಲ್ಲ. ಶಿವಾಜಿಯ ಪ್ರಯತ್ನಗಳಿಗೆ ಹುಡುಗಾಟಿಕೆ, ಎಂದು ಹಾಸ್ಯಮಾಡುತ್ತಿದ್ದನು. ಆದರೆ ಶಿವಾಜಿಯು ಅವನೊಡನೆ ಯುದ್ಧದ ಪ್ರಸಂಗವನ್ನು ತಂದುಕೊಳ್ಳಲಿಲ್ಲ. ಬಾಜಿಯು ಯೋಗ್ಯತೆಯನ್ನು ಅವನು ಬಲ್ಲವನಿದ್ದನು. ಎಂದಾದರೂ ಒಂದು ದಿವಸ ತನ್ನಂತೆ ಬಾಜಿಯೂ ತನ್ನ ಜನ್ಮಭೂಮಿಯ ಉದ್ಧಾರಕ್ಕಾಗಿ ಪ್ರಾಣಕೊಡುವದಕ್ಕೆ ಹಿಂದೆ ಮುಂದೆ ನೋಡಲಾರನೆಂದು ಶಿವಾಜಿಗೆ ನಂಬಿಗೆಯಿತ್ತು.

ಒಂದು ದಿನ ಶಿವಾಜಿಯ ಈ ನಂಬಿಗೆಯು ನಿಜವಾಯಿತು. ಬಾಜಿಯು ಒಮ್ಮೆ ದಾರಿಯಲ್ಲಿ ಶಿವಾಜಿಯನ್ನು ಅಕ್ರಮಿಸಿದನು. ಆದರೆ ಶಿವಾಜಿಯ ಸೌಮ್ಯವೂ ಗಂಭೀರವೂ ಆದ ಮುಖವನ್ನು ನೋಡಿದೊಡನೆ ಬಾಜಿಯು ಏನೋ ಒಂದು ಕಾರಣದಿಂದ ಯುದ್ಧದ ನಡುವೆಯೇ ಶಿವಾಜಿಯ ಚರಣದಲ್ಲಿ ಖಡ್ಗವನ್ನಿಟ್ಟು ಅವನನ್ನು ಹಿಂಬಾಲಿಸುವದಕ್ಕೆ ಒಡಂಬಟ್ಟನು; ಮತ್ತು ಶಿವಾಜಿಯು ಮಹಾರಾಷ್ಟ್ರದ ಏಕಚ್ಛತ್ರಾಧಿಪತಿಯೆಂದು ಒಪ್ಪಿಕೊಂಡನು. ಅಂದಿನಿಂದ ಬಾಜಿಯು ಶಿವಾಜಿಯ ನಂಬಿಗೆಯ ಸಹಾಯಕನಾದನು. ಈ ಬಾಜಿಯ ಶೌರ್ಯದಿಂದಲೂ ಯುದ್ಧಕೌಶಲ್ಯದಿಂದಲೂ ಶಿವಾಜಿಯು ಹಲವು ಕಾಳಗಗಳಲ್ಲಿ ಜಯಪಡೆದನು.

ಕನಕಗಿರಿಯ ಯುದ್ಧದಲ್ಲಿ ಅಫಜುಲಖಾನನ ನೋಸದಿಂದ ಶಿವಾಜಿಯು ತಮ್ಮನಾದ ಸಂಭಾಜಿಯು ಕೊಲ್ಲಲ್ಪಟ್ಟನು. ಮತ್ತು ಅಫಜುಲಖಾನನು ಶಿವಾಜಿಯ ಮೇಲೆ ದಂಡೆತ್ತಿಬರುವಾಗ ತುಳಜಾಪುರದ ಭವಾನಿಯ, ಮತ್ತು ಪಂಢರಪುರದ ವಿಠೋಬನ ದೇವಾಲಯಗಳನ್ನು ಕೆಡಿಸಿದ್ದನು. ಈ ಕಾರಣಗಳಿಂದ ಶಿವಾಜಿಯ ಕೋಪಾಗ್ನಿಯು ಪ್ರಜ್ವಲಿತವಾಗಿತ್ತು. ಇತ್ತ ಸೊಕ್ಕಿಗೇರಿದ ಆ ಖಾನನು ವಿಜಾಪುರದಿಂದ ಹೊರಡುವಾಗ "ಶಿವಾಜಿ ಗುಡ್ಡಗಾಡಿನ ಇಲಿ; ಅನಾಯಾಸವಾಗಿ ಅದನ್ನು ಹಿಡಿದು ತರುತ್ತೇನೆ" ಎಂದು ದರ್ಬಾರದಲ್ಲಿ ಪೌರುಷ ತೋರಿಸಿ ದೊಡ್ಡ ಸೈನ್ಯದೊಂದಿಗೆ ಹೊರಟನು. ಆಗ ಶಿವಾಜಿಯು ಸ್ವಲ್ಪ ಸೈನ್ಯದೊಡನೆ ಪ್ರತಾಪಗಡದಲ್ಲಿರುತ್ತಿದ್ದನು. ಅಫಜುಲನೂ ಗಿರಿದುರ್ಗದಲ್ಲಿ ಸೇರಿರುವ ಶಿವಾಜಿಯನ್ನು ಸೆರೆಹಿಡಿಯುವದು

ಅಸಂಭವವೆಂದು ತಿಳಿದು ಯುಕ್ತಿಯಿಂದ ಕೆಲಸವನ್ನು ಸಾಧಿಸಬೇಕೆಂದು ನೋಡುತ್ತಿದ್ದನು. ಮತ್ತು ಈ ಉದ್ದೇಶವನ್ನು ನೆರವೇರಿಸುವದಕ್ಕೆ ಒಬ್ಬ ಬ್ರಾಹ್ಮಣ ವಕೀಲನನ್ನು ಪ್ರೇರಿಸಿದ್ದನು. ಆದರೆ ಕೊನೆಗೆ ಶಿವಾಜಿಯು ಜಾಗರೂಕತೆಯ ಮುಂದೆ ಅಟಸಾಗದೆ ತಾನೇ ಜೀವಕ್ಕೆರವಾದನೆಂಬದು ಇತಿಹಾಸಪ್ರಸಿದ್ಧವಾದದ್ದು.

ಅಫಜುಲಖಾನನ ಕೊಲೆಯನ್ನು ಕೇಳಿ ಬೆಂಕಿಯಾಗಿ ವಿಜಾಪುರದ ಮಹಮ್ಮದಆದಿಲ್‌ಶಹನು ಸಿದ್ದಿಜೋಹರನೆಂಬ ಸರದಾರನನ್ನೂ ತಂದೆಯ ಕೊಲೆಯಿಂದ ಸಂತಪ್ತನಾದ ಅಫಜುಲನ ಮಗ ಫಾಜಲ ಮಹಮ್ಮದನನ್ನೂ ಅಪಾರಸೈನ್ಯದೊಡನೆ ಮಹಾರಾಷ್ಟ್ರದ ಮೇಲೆ ಕಳುಹಿದನು. ಈ ದೊಡ್ಡ ಸೈನ್ಯಕ್ಕೆ ಎದುರಾಗದೆ ಶಿವಾಜಿಯು ಪನ್ಹಾಳಗಡದಲ್ಲಿ ಹೋಗಿ ನಿಂತನು. ಸಿದ್ದಿಯೂ, ಫಾಜಲನೂ ಪನ್ಹಾಳಗಡಕ್ಕೆ ಮುತ್ತಿಗೆ ಹಾಕಿದರು. ನಾಲ್ಕು ತಿಂಗಳು ಮುತ್ತಿಗೆಯಿಟ್ಟರೂ ಅವರಿಗೆ ಕೋಟೆಯಲ್ಲಿ ಪ್ರವೇಶಿಸುವದಾಗಲಿಲ್ಲ. ಆದರೆ ಕೋಟೆಯಲ್ಲಿ ಆಹಾರ ಸಾಮುಗ್ರಿಯು ಮಾತ್ರ ತೀರಿಹೋಯಿತು. ಶಿವಾಜಿಗೆ ಹೊರಗಿನ ಸುದ್ದಿಯು ಏನೂ ಹತ್ತದಂತಾಯಿತು ಆದ್ದರಿಂದ ಅವನು ಕೋಟೆಯಿಂದ ಹ್ಯಾಗಾದರೂ ಹೊರಬೀಳಲೇ ಬೇಕೆಂದು ನಿಶ್ಚಯಿಸಿ ಸಿದ್ದಿಗೆ ಶರಣು ಹೋದಂತೆ ನಟಿಸಿ ಒಪ್ಪಂದದ ಸಂಧಾನವನ್ನು ಹಚ್ಚಿ ಒಂದುದಿನ ಮಧ್ಯರಾತ್ರಿಯ ಕತ್ತಲಲ್ಲಿ ತನ್ನ ಸೈನ್ಯದೊಡನೆ ಕೋಟೆಯನ್ನಿಳಿದು ಶತ್ರುಗಳ ಪಾಳ್ಯವನ್ನು ದಾಟಿ ಹೋದನು. ಎಷ್ಟೋ ವೇಳೆಯಾದ ಮೇಲೆ ಈ ಸುದ್ದಿಯು ತಿಳಿಯಲು ಶತ್ರುಗಳು ಬಹು ವೇಗದಿಂದ ಬೆನ್ನಮೇಲೆ ಸಾಗಿ ಬಂದರು. ಈ ದಿನ ಶಿವಾಜಿಯು ಹೂಡಿದ ಆಟವೆಲ್ಲ ಮುರಿಯುವ ಪ್ರಸಂಗವೇ ಬಂತು. ಮುಂದೆ ಬಹು ಇಕ್ಕಟ್ಟಾದ ರಂಗಣವೆಂಬ ಗಿರಿದುರ್ಗವು. ಶಿವಾಜಿಯು ಅದನ್ನು ಏರುವದರಲ್ಲಿ ತೊಡಗಿದ್ದನು. ಶಿವಾಜಿಯು ಸೈನ್ಯದೊಡನೆ ಏರಿ ಹೋಗುವದರೊಳಗೆ ಶತ್ರುಸೈನ್ಯವು ಆ ದಾರಿಯ ಬಾಯಿಗೆ ಬಂದು ಮುಟ್ಟುವಂತೆ ಇತ್ತು. ಶತ್ರುಗಳು ಅಲ್ಲಿಗೆ ಬಂದು ತೋಪುಗಳನ್ನು ಹೂಡಿದ್ದರೆ ಶಿವಾಜಿಯ ದಂಡು ಕ್ಷಣದಲ್ಲಿ ನಷ್ಟವಾಗುವಂತೆ ಇತ್ತು. ಶಿವಾಜಿಯು ಈ ವಿಪತ್ತನ್ನು ನೋಡಿ ಹತಾಶನಾದನು. ವಿಷಾದದ ಚಿಹ್ನವು ಅವನ ಮೋರೆಯ ಮೇಲೆ ತೋರಹತ್ತಿತು.

'ಬಾಜಿ' ದೇಶಪಾಂಡೆಯು ಒಡೆಯನ ಈ ಅವಸ್ಥೆಯನ್ನು ನೋಡಿ ಮುಂದೆ ಬಂದು "ಒಡೆಯರೇ, ಚಿಂತೆಯೇಕೆ? ತಾವು ಸೈನ್ಯದೊಡನೆ ಮುಂದಕ್ಕೆ ಸಾಗಬೇಕು. ತಾವು ಕೋಟೆಯಲ್ಲಿ ಪ್ರವೇಶಿಸಿ ಕ್ಷೇಮದಿಂದ ಮುಟ್ಟಿದ್ದನ್ನು ತೋಫಿನ ಧ್ವನಿಯಿಂದ ತಿಳಿಸುವವರೆಗೆ ನಾನು ಕೆಲವು ಸೈನ್ಯದೊಡನೆ ಈ ದಾರಿಯನ್ನು ಕಾಯುವೆನು. ಒಬ್ಬ ವೈರಿಯನ್ನೂ ಒಳಗೆ ಬಿಡುವದಿಲ್ಲ" ಎಂದನು.

ಶಿವಾಜಿಯು ಬಾಜಿಗೆ ಈ ಸಾಹಸಕಾರ್ಯವನ್ನು ಮಾಡಬೇಹವೆಂದು ಬೇಕಾದಷ್ಟು ಹೇಳಿದನು. ಮತ್ತು ಅವನನ್ನು ಕುರಿತು "ಬಾಜೀ, ಸಾಯುವದೇ ಬಂದಿದೆ. ಮಹಾರಾಷ್ಟ್ರರಾಜ್ಯದ ಗೌರವಕ್ಕಾಗಿ ಎಲ್ಲರೂ ಕೂಡಿಯೇ ಸಾಯುವ" ಎಂದನು. ಅದಕ್ಕೆ ಬಾಜಿಯು "ಪ್ರಭುವೇ, ಹಾಗಾಗದು. ನಾನು ತಮ್ಮನ್ನು ಕಾಪಾಡಿದರೆ ಇಡಿ ಮಹಾರಾಷ್ಟ್ರ ರಾಜ್ಯವನ್ನೇ ಕಾದಂತಾಗುತ್ತದೆ. ಆದ್ದರಿಂದ ಸೈನ್ಯದೊಡನೆ ತೀವ್ರ ಮುಂದಕ್ಕೆ ಸಾಗಬೇಕು. ಮಹಾರಾಷ್ಟ್ರದ ಕಲ್ಯಾಣದ ಭಾರವು ತನ್ನ ಮೇಲೆ ಇರುತ್ತದೆ" ಎಂದು ಹೇಳಿದನು.

ನಿರ್ವಾಹವಿಲ್ಲದೆ ಶಿವಾಜಿಯು ಮುಂದೆ ಸಾಗಿದನು. ಸ್ವಲ್ಪವೇಳೆಯಲ್ಲಿ ಸಮುದ್ರದಂತಿದ್ದ ವಿಜಾಪುರ ಸೈನ್ಯವು ಕೋಟೆಯ ಬಾಯಿಗೆ ಬಂದಿತು. ಬಂದರೇನು? ಒಬ್ಬನೇ ವೀರನು ಕೆಲವು ಜನ ಸೈನಿಕರೊಡನೆ ಇಂಥ ಮಹಾ ಸೈನ್ಯಕ್ಕೆ ಮುಂದೆ ಹೋಗಲೀಯನು!

ಕೋಟೆಯಿಂದ ತೋಫಿನ ಧ್ವನಿಯು ಕೇಳಬರುವವರೆಗೆ ಬಾಜಿಯು ಅತಿ ಸಾಹಸದಿಂದ ಹೋರಾಡಿದನು. ಆದರೆ ಇನ್ನು ಬಾಜಿಯ ಆಟವು ನಡೆಯದಂತಾಯಿತು. ಇಷ್ಟರಲ್ಲಿ ತೋಫಿನ ಧ್ವನಿಯು ಕೇಳಿಸಿತು. ಅತ್ತ ಶಿವಾಜಿಯು ಅತಂಕವಿಲ್ಲದೆ ಕೋಟೆಯನ್ನು ಸೇರಿದನು. ಇತ್ತ ಬಾಜಿಯು ಆನಂದದಿಂದ ಮೃತ್ಯುವನ್ನು ಆಲಿಂಗಿಸಲು ಸಿದ್ಧನಾಗಿ ನಿಂತನು. ಅಸಂಖ್ಯ ಜನರ ತಲೆಗಳನ್ನು ಕಡಿದು ತನ್ನ ಸಂಗಡಿಗರೊಡನೆ ಬಾಜಿಯು ರಣಾಂಗಣದಲ್ಲಿ ಶಯನವಾಡಿದನು. ದೇಹವಿಡುವಾಗ ಆನಂದದಿಂದ—"ನನ್ನ ಕರ್ತವ್ಯವನ್ನು ನಾನು ಮಾಡಿದೆನು" ಎಂಬ ಉದ್ಗಾರವನ್ನು ತೆಗೆದನು. ತನ್ನ ಜನ್ಮ ಭೂಮಿಯಾದ ಇಂಗ್ಲಂಡನ ಉದ್ಧಾರವನ್ನು ಮಾಡಿದ ವಿರಾಗ್ರೇಸರನಾದ ನೆಲ್ಸನ್ನನೂ ಮರಣ ಸಮಯದಲ್ಲಿ ಇದೇ ಉದ್ಗಾರವನ್ನು ತೆಗೆದಿದ್ದನು.

ಆಗ ಕತ್ತುಗಳು ಶಿವಾಜಿಯು ಪಾರಾದನೆಂತಲೂ, ಇನ್ನು ತಾವು ಹೆಣಗುವದು ವ್ಯರ್ಥವೆಂತಲೂ ತಿಳಿದರು.

ಮಹಾರಾಷ್ಟ್ರ ಜನಾಂಗದ ಜೀವವೆನಿಸಿದ ಶಿವಾಜಿಯನ್ನು ರಕ್ಷಿಸಿದ ಬಾಜಿಯು ಅನಂತವಾದ ಕಾಲದಲ್ಲಿ ಅಡಗಿ ಹೋಗಿರುವನು. ಆದರೂ ಅವನ ಹೆಸರು ಜಗತ್ತಿನೆದುರಿಗೆ ಪ್ರಕಾಶಿಸುತ್ತಿರುವದು.

ಧಾರವಾಡ
ತಾ॥ ೨೬-೮-೧೯೧೩ } M. P. Pujar.

ನೊಣಗಳು.

ಸೊಳ್ಳೆಗಳಲ್ಲಿದ್ದಂತೆ ನೊಣಗಳಲ್ಲಿಯೂ ಅನೇಕ ವರ್ಗಗಳುಂಟು. ಒಂದು ವರ್ಗದ ನೊಣಗಳು ಸೊಳ್ಳೆಗಳಂತೆ ಪ್ರಾಣಿಶರೀರದ ರಕ್ತವನ್ನು ಹೀರಿಕೊಳ್ಳುವವು. ಆಫ್ರಿಕಾ ಖಂಡದಲ್ಲಿ ನಿದ್ರಾರೋಗವೆಂಬದೊಂದು (ಸ್ಲೀಪಿಂಗ್ ಸಿಕ್‌ನೆಸ್) ರೋಗವಿರುತ್ತದೆ. ಆ ರೋಗದಿಂದ ಮನುಷ್ಯನು ಮೊದಲು ನಿದ್ರಾಧೀನನಾಗುತ್ತಾನೆ. ಕೆಲವು ದಿನ ನಿದ್ದೆಯಲ್ಲಿದ್ದ ಬಳಿಕ ಆ ನಿದ್ದೆಯೇ ದೀರ್ಘನಿದ್ರೆಯಾಗಿ ಪರಿಣಮಿಸುವದು! ಒಂದು ತರದ ನೊಣಗಳ ಕಡಿತದಿಂದ ಈ ರೋಗವುಂಟಾಗುವದು. ಸೊಳ್ಳೆಗಳು ಮನುಷ್ಯಶರೀರದಲ್ಲಿ ಮಲೇರಿಯದ ಬೀಜಗಳನ್ನು ತಂದು ಸೇರಿಸುವಂತೆ ಮೇಲೆ ಹೇಳಿದ ನೊಣಗಳು ನಿದ್ರಾರೋಗದ ಬೀಜಗಳನ್ನು ಸೇರಿಸುವವು. ಈ ರೋಗವು ಇನ್ನೂ ನಮ್ಮ ದೇಶಕ್ಕೆ ಬಂದಿಲ್ಲವೆಂಬದೊಂದು ಆನಂದದ ವಿಷಯವು.

ಉಳಿದ ವರ್ಗದ ನೊಣಗಳು ಮನುಷ್ಯಶರೀರದಲ್ಲಿ ಕಡಿತದಿಂದ ಪ್ರತ್ಯಕ್ಷವಾಗಿ ರೋಗ ಬೀಜಗಳನ್ನು ಸೇರಿಸದಿದ್ದರೂ ಪರೋಕ್ಷವಾಗಿ ಅನೇಕ ರೋಗ ಬೀಜಗಳನ್ನು ಹರಡುವವು. ಕೆಲವು ರೋಗಗಳ ಬೀಜಗಳು ರೋಗಿಗಳ ಮಲಮೂತ್ರಗಳಲ್ಲಿರುವವು. ಅವುಗಳ ಮೇಲೆ ಕುಳಿತ ನೊಣಗಳ ಕೈಕಾಲು ರೆಕ್ಕೆ ಸೊಂಡಿ ಮೊದಲಾದವುಗಳಲ್ಲಿ ಆ ರೋಗಬೀಜಗಳು ಅಂಟಿಕೊಳ್ಳುವವು. ಆ ನೊಣಗಳು ಮತ್ತೆ ಆಹಾರದ ಪದಾರ್ಥಗಳಲ್ಲಿಯೂ ಸೇರುವವು. ಇದರಿಂದ ಆ ಪದಾರ್ಥಗಳನ್ನು ತಿಂದವರಿಗೆ ಆ ರೋಗಗಳು ಬರುವ ಸಂಭವವುಂಟು.

ಕೆಲವು ರೋಗಗಳ ಬೀಜಗಳು ಅಣುಜಂತುರೂಪವಾಗಿರುವವು. ಕೆಲವು ರೋಗಬೀಜಗಳು ಉದ್ಭಿಜ್ಜಜಾತಿಯವು. ಅವುಗಳಿಗೆ ಬ್ಯಾಕ್ಟೀರಿಯಾ ಎಂದೆನ್ನುವರು. ಮಾರಿಕಾ ಮೊದಲಾದ ರೋಗಗಳ ಬೀಜಗಳು ಈ ವರ್ಗದಲ್ಲಿ ಸೇರುವವು.

ನೊಣಗಳು ತತ್ತಿಗಳಿಂದ ಹೊರಟು ಪೂರ್ಣಾವಸ್ಥೆಯನ್ನು ಹೊಂದುವವರೆಗೆ ಕೆಲವು ಸ್ಥಿತ್ಯಂತರಗಳಾಗುವವು. ಹೆಣ್ಣು ನೊಣವು ಸಗಣಿ, ಲದ್ದಿ, ಬೇರೆ ಪ್ರಾಣಿಗಳ ಮಲ, ಕೊಳೆಯುವ ಪದಾರ್ಥಗಳು ಇವುಗಳಲ್ಲಿ ತತ್ತಿಗಳನ್ನಿಡುವದು. ಒಂದು ಬಾರಿಗೆ ೧೫೦ ರ ವರೆಗೆ ದಿನಕ್ಕೆ ನಾಲ್ಕು ಬಾರಿ ತತ್ತಿಗಳನ್ನಿಡುವದು. ತತ್ತಿಗಳು ಬಿಳಿಯವಾಗಿ ಒಂದು ಕಡೆಗೆ ಮೊನೆಯಾಗಿರುವವು. ಅವು ೮ ಘಂಟೆಯಿಂದ ೩ ದಿನಗಳೊಳಗೆ ಒಡೆಯುವವು. ಆಗ ೫೦ ರಿಂದ ೮೦ ಉಷ್ಣತೆಯಿರಬೇಕಾಗುವದು. ೮೦ ಉಷ್ಣತೆಯಿದ್ದರೆ ೮ ಘಂಟೆ ಕಾಲದಲ್ಲಿಯೇ ಒಡೆಯುವವು. ತತ್ತಿಯಿಂದ ಹೊರಬಿದ್ದಾಗ ಅವು ಮೊದಲು ಕೀಟಾವಸ್ಥೆಯಲ್ಲಿರುವವು. ಆಗ ಇವು ಹೊಲಸನ್ನು ತಿಂದು ಬೆಳೆಯುವವು. ಇವುಗಳ ತುದಿಯು ಸಣ್ಣಾಗಿಯೂ, ಹಿಂಭಾಗವು ದಪ್ಪವಾಗಿಯೂ ಇರುವದು. ಈ ಕೀಟಾವಸ್ಥೆಯನ್ನು ದಾಟಲಿಕ್ಕೆ ೫ ರಿಂದ ೨೧ ದಿವಸಗಳು ಬೇಕಾಗುವವು. ಈ ಕಾಲಾವಧಿಯು ಹವೆಯ ಉಷ್ಣಮಾನವನ್ನವಲಂಬಿಸಿರುವದು. ಬಳಿಕ ಇವು ಸಮಾಧಿಯ ಅವಸ್ಥೆಯನ್ನು ಹೊಂದುವವು. ಈ ಸ್ಥಿತಿಯನ್ನು ದಾಟಲಿಕ್ಕೆ ಬೇಕಾಗುವ ಕಾಲಾವಧಿಯೂ ಹವೆಯ ಉಷ್ಣಮಾನವನ್ನೆ ಅವಲಂಬಿಸಿರುವದು. ಇದು ಬಹುತರ ೫ ದಿವಸಗಳಿಂದ ಒಂದು ತಿಂಗಳವರೆಗೆ ಇರುವದು. ಬಳಿಕ ಇವು ಪತಂಗಾವಸ್ಥೆಯನ್ನು ಹೊಂದುವವು. ಇದೇ ಇವುಗಳ ಕೊನೆಯ ಅವಸ್ಥೆಯು. ಒಟ್ಟಿಗೆ ತತ್ತಿಯಿಂದ ಪೂರ್ಣಾವಸ್ಥೆಗೆ ಬರುವದಕ್ಕೆ ೧೦ ದಿನ ಮೊದಲ್ಗೊಂಡು ೩ ತಿಂಗಳು ಕಾಲಾವಧಿ ಬೇಕಾಗುವದೆಂಬದು ಸ್ಪಷ್ಟವಿದೆ.

ಗ್ರೀಷ್ಮವರ್ಷಾಋತುಗಳಲ್ಲಿ ನೊಣಗಳು ಹೆಚ್ಚಾಗಿರುವವು. ಚಳಿಗಾಲದಲ್ಲಿ ಕಡಿಮೆಯಾಗುವವು. ಯಾಕಂದರೆ ಗ್ರೀಷ್ಮವರ್ಷರ್ತುಗಳಲ್ಲಿ ಇವುಗಳ ಬೆಳವಣಿಗೆಗೆ ಬೇಕಾಗುವ ಉಷ್ಣತೆಯು ಸಾಕಾಗುವಷ್ಟು ಇರುವದು. ಚಳಿಗಾಲದಲ್ಲಿ ತಕ್ಕಷ್ಟು ಇರುವದಿಲ್ಲ.

ಸವೊಥಿಸ್ಥಿತಿಯಲ್ಲಿ ಇದ್ದ ನೊಣವು ಕೋಶದಿಂದ ಹೊರಬಿದ್ದ ಕೂಡಲೆ ಅದರಲ್ಲಿ ಹಾರಾಡುವ ಶಕ್ತಿ ಇರುವದಿಲ್ಲ. ಆಗ ಅದು ಕೆಲವು ವೇಳೆ ತನ್ನ ಪಕ್ಕಗಳನ್ನು ಗಾಳಿಗೆ ತೆರೆದಿಡುವದು. ಅದರಿಂದ ಅದಕ್ಕೆ ಹಾರಾಡುವ ಶಕ್ತಿ ಬರುವದು. ತರುವಾಯ ಆಹಾರಕ್ಕಾಗಿ ಅತ್ತಿತ್ತ ಸುಳಿದಾಡುವದು. ಹೆಣ್ಣು ನೊಣವು ೧೦ ದಿವಸಗಳಲ್ಲಿ ತತ್ತಿಗಳನ್ನಿಡುವದಕ್ಕೆ ಯೋಗ್ಯವಾಗುವದು. ಗ್ರೀಷ್ಮ ಕಾಲದಲ್ಲಿ ಇದಕ್ಕೂ ಮುಂಚೆಯೇ ತತ್ತಿಗಳನ್ನಿಡಬಹುದು. ಚಳಿಯು ವಿಶೇಷವಿದ್ದ ಕಾಲದಲ್ಲಿ ಬಹಳ ನೊಣಗಳು ಸಾಯುವವು. ಕೆಲವು ಉಷ್ಣವಾದ ಸ್ಥಳಕ್ಕೆ ಹೋಗಿ ಪ್ರಾಣ ಉಳಿಸಿಕೊಳ್ಳುವವು. ವಸಂತ ಋತು ಬಂದೊಡನೆ ಅವು ಹೊರ ಹೊರಟು ವಂಶವೃದ್ಧಿಯನ್ನು ಮಾಡುವವು. 'ಹಾವರ್ಡ' ಸಾಹೇಬರು ಒಂದು ಹೆಣ್ಣು ನೊಣದಿಂದ ೪೦ ದಿವಸಗಳಲ್ಲಿ ೧೫ ಕೋಟಿ ೨೦ ಲಕ್ಷ ಸಂತಾನವು ಹುಟ್ಟಬಹುದೆಂದೂ, ಅದರ ಭಾರವು ೧೦ ಮಣವಾಗಬಹುದೆಂದೂ ಗೊತ್ತು ಪಡಿಸಿರುವರು.

ಕೆಲವರು ಸಣ್ಣ ನೊಣಗಳೇ ಬೆಳೆದು ದೊಡ್ಡವಾಗುವವೆಂದು ತಿಳಿದಿರುವರು; ಇದು ತಪ್ಪು. ನೊಣವು ಕೋಶದಿಂದ ಹೊರಬಿದ್ದ ಬಳಿಕ ಅದರ ಆಕಾರದಲ್ಲಿ ಹೆಚ್ಚು ಕಡಿಮೆಯಾಗುವದಿಲ್ಲ. ಕೋಶದಲ್ಲಿ ಸವಾಥಿಸ್ಥಿತಿಯಲ್ಲಿರುವಾಗ ಅವುಗಳಿಗೆ ಆಹಾರದ ಆವಶ್ಯಕತೆಯಿರುವದಿಲ್ಲ. ಆದರೆ ತತ್ತಿಯಿಂದ ಹೊರಬಿದ್ದು ಕೀಟಾವಸ್ಥೆಯಲ್ಲಿರುವಾಗ ಆಹಾರವು ಬೇಕಾಗುವದು. ಆಗ ಇವುಗಳಿಗೆ ದೊರೆತ ಆಹಾರದಿಂದ ಶರೀರವು ಪುಷ್ಟವಾದಂತೆ ಮುಂದೆ ಪತಂಗಾವಸ್ಥೆಯನ್ನು ಹೊಂದಿದಾಗ ಅವುಗಳ ಶರೀರವು ದೊಡ್ಡವಾಗುವದು.

ನೊಣಗಳು ಬಹುತರ ಮಲ ಮೂತ್ರ ಕಫ ಮೊದಲಾದ ಹೊಲಸಿನ ಪದಾರ್ಥಗಳನ್ನು ತಿಂದು ಬದುಕುವವು. ಆದರೂ ನಮ್ಮ ಆಹಾರದ ಪದಾರ್ಥಗಳ ಮೇಲೂ ಬಂದು ಕೂಡ್ರುವವು. ಇವುಗಳ ಸೊಂಡಿ-ಕಾಲುಗಳು ಕೇಶಮಯವಾಗಿರುವದರಿಂದ ರೋಗಿಗಳ ಮಲ ಮೂತ್ರಗಳ ಮೇಲೆ ಕುಳಿತ ನೊಣಗಳ ಸೊಂಡಿ-ಕಾಲುಗಳಿಗೆ ರೋಗ ಬೀಜಗಳು ಹತ್ತಿ ಎಲ್ಲ ಕಡೆಗೆ ಹರಡಲ್ಪಡುವವು.

ರಕ್ತಾತಿಸಾರ, ಮೂರೀ ಬೇನೆ, ಕ್ಷಯ, ಶಿಶುಗಳ ಉದರಾಮಯ, ಟಾಯ್‌ಫಾಯಿಡ್ ಜ್ವರ, ಮೊದಲಾದ ರೋಗಗಳ ಬೀಜಗಳು ಆಯಾ

ರೋಗಿಗಳ ಮಲಮೂತ್ರಗಳಲ್ಲಿರುವದರಿಂದ ಅವುಗಳ ಮೇಲೆ ಕುಳಿತ ನೊಣಗಳ ಮೈಗೆ ಅರೋಗ ಬೀಜಗಳು ಹತ್ತಿಕೊಂಡು ಬೇರೆ ಜನರ ಮೈಯಲ್ಲಿಯೂ ರೋಗವನ್ನು ಹಬ್ಬಿಸುವವು.

ಸಗಣಿ, ಲದ್ದಿ, ಕೊಳೆಯುವ ಉದ್ಭಿಜ್ಜಗಳು, ಮೊದಲಾದವೇ ಮುಖ್ಯವಾಗಿ ನೊಣಗಳ ಜನ್ಮಸ್ಥಾನಗಳು. ನೊಣಗಳ ಉಪದ್ರವವನ್ನು ಕಡಿಮೆ ಮಾಡುವದಾದರೆ ಮೇಲೆ ಹೇಳಿದ ಹೊಲಸಿನ ಪದಾರ್ಥಗಳನ್ನು ದೂರ ಚಲ್ಲಿ ಮನೆಯ ಸುತ್ತಣ ಭಾಗವು ಸ್ವಚ್ಛವಾಗಿರುವಂತೆ ಮಾಡಬೇಕು. ಸಮಾಧಿಸ್ಥಿತಿಯಲ್ಲಿರುವಾಗ ಅವುಗಳ ಮೇಲೆ ಚಿಮಣಿ ಎಣ್ಣೆಯನ್ನು ಚಲ್ಲಿದರೆ ಅವು ಸಾಯುವವು. ಮನೆಯಲ್ಲಿ 'Pyrethrum' ಎಂಬ ಪುಡಿಯನ್ನು ಸುಟ್ಟರೆ ನೊಣಗಳು ಅಲ್ಲಿ ನಿಲ್ಲುವದಿಲ್ಲ. ಮನೆಯ ಬಾಗಿಲು ಕಿಡಕಿಗಳಿಗೆ ಜಾಳಿಗೆ ಪರದೆಗಳನ್ನು ಹಾಕಬೇಕು. ಆಹಾರದ ಪದಾರ್ಥಗಳನ್ನು ಎಂದೂ ತೆರೆದಿಡಬಾರದು.

ಅಲಂಕಾರದರ್ಪಣ–ವಿಕಲ್ಪವಲ್ಯಲಂಕಾರವು.

(ಕಳೆದ ಅಕ್ಟೋಬರ ತಿಂಗಳ ಸಂಚಿಕೆಯ ೨೬ನೇ ಪುಟದಿಂದ ಮುಂದೆ ಸಾಗಿದ್ದು.)

ಕಂದ ॥ ತವನಯನ ಕಿವಿಯವರಿಪುವು ।
ಕಿವಿಗಳು ತೊಗಿಪವು ಭುಜವ ಭುಜಗಳು ಜಾನುಂ ॥
ತವೆ ಹತ್ತರಿಪುವು ಜಾನುಗ ।
ಳವನಿಪ ಪೋಲುವವು ರನ್ನಗನ್ನಡಿಗಳನು ॥

ಅರ್ಥ–ನಿನ್ನ ಕಣ್ಣುಗಳು ಕಿವಿಗಳನ್ನು ಮುಟ್ಟುವವು. ಕಿವಿಗಳು ಭುಜಗಳನ್ನು ತೊಗಿಸುವಂತೆ ತೋರುವವು. ಭುಜಗಳು ಮೊಳಕಾಲುಗಳನ್ನು ಸವಿಾಪಿಸುವವು. ಮೊಳಕಾಲುಗಳು ರನ್ನಗನ್ನಡಿಗಳಂತಿರುವವು ಎಂದು ಹೇಳಿದೆ. ಇಲ್ಲಿ ಕಣ್ಣು-ಕಿವಿ-ಭುಜ-ಜಾನುಗಳು ಉತ್ತರೋತ್ತರ ವಿಶೇಷಣವುಳ್ಳವಾಗಿ ಗೃಹೀತ ಮುಕ್ತರೀತಿಯಿಂದ ಹೇಳಲ್ಪಟ್ಟವೆ. ಮತ್ತೆ

ಉದಾ:—

---

* ಹಿಂದೆ ಕೊಟ್ಟದ್ದರಲ್ಲಿ ಸಂಶಯವು ತೋರಿದ್ದರಿಂದ ಪುನಃ ಕೊಟ್ಟಿತು.

ವಾರ್ಧಿಕ ॥ ಅವುದದು ದಿಕ್ಕಾಲ ಸವುವಿರ್ದುದದರಲ್ಲಿ ।
ಯಾವನವ ಪ್ರಜ್ವಲಿಪನೆಲ್ಲಿವನ ಕಿರಣಗಳು ।
ತಾವವಮೃತರೂಪವನ್ನು ತಳೆದಪುವವನು
ಯಾವ ರಾಶಿಯೊಳು ॥
ಜೀವವನು ಹೊಂದಿರುವನದಕೆ ಪಿತ್ತನು ಯಾವ ।
ನವಗೆ ಹವಿಯನು ಕೊಡುವನಾವನವನೇತರಿಂ ।
ಜೀವಿಸುವನದರ ಗುಣವನು ವಹಿಪುದಾವುದೀ
ಯೆಂಟರಿಂ ಸಲಹೆ ಶಿವನು ।

ಅರ್ಥ–ದಿಕ್ಕಾಲಗಳಿಗೆ ಸವುವಾಗಿ ಇರುವದು ಆಕಾಶವು. ಅದರಲ್ಲಿ ಪ್ರಕಾಶಿಸುವವನು ಸೂರ್ಯನು. ಅವನ ಕಿರಣಗಳು ಅಮೃತರೂಪವನ್ನು ಹೊಂದುವ ಸ್ಥಾನವು ಚಂದ್ರನು. ಅವನು ಹುಟ್ಟುವ ಸ್ಥಾನವು ನೀರಿನ ರಾಶಿಯಾದ ಸವುದ್ರವು. ಅದಕ್ಕೆ ಪಿತ್ತರೂಪವಾಗಿರುವವನು ಅಗ್ನಿಯು. ಅವನಿಗೆ ಹವಿಯನ್ನು ಕೊಡುವವನು ಹೋತೃವು. ಅವನಿಗೆ ಜೀವರೂಪವಾಗಿರುವದು ವಾಯುವು. ಅದರ ಗುಣವನ್ನು ಧರಿಸುವದು ಭೂಮಿಯು. ಈ ಎಂಟರಿಂದ ಕೂಡಿದ ಶಿವನು ನಮ್ಮನ್ನು ರಕ್ಷಿಸಲಿ, ಎಂದು ಹೇಳಿದೆ. ಇಲ್ಲಿ ಆಕಾಶ ಮೊದಲಾದವು ಪೂರ್ವ ಪೂರ್ವ ವಿಶೇಷಣಗಳುಳ್ಳವಾಗಿ ಗೃಹೀತ ಮುಕ್ತರೀತಿಯಿಂದ ಹೇಳಲ್ಪಟ್ಟವೆ. (ಅಪಾಂ ಪಿತ್ತಂ ಅಪ್ಪಿತ್ತಂ ಎಂದು ಅಗ್ನಿಗೆ ಅಮರಕೋಶದಲ್ಲಿ ನಾಮವು. ವಾಯುವಿನದು ಗಂಧಗುಣವು.)

---

೪೬. ಮಾಲಾದೀಪಕಾಲಂಕಾರವು. ಲಕ್ಷಣ:—ದೀಪಕಾಲಂಕಾರವೂ ಏಕಾವಲ್ಯಲಂಕಾರವೂ ಕೂಡಿ ವರ್ಣಿತವಾದರೆ ಈ ಅಲಂಕಾರವಾಗುವದು. ಉದಾ:—

ಕಂದ ॥ ಕಾವನೆರೆಯೆವಳ ಮನೆವನು ।
ಆ ಮನವದು ನಿನ್ನ ತನುವ ಸೇರಿಪುವಾಗಳ್ ॥

ಅರ್ಥ–ಕಾವನು ಅವಳ ಮನವನ್ನು ಸೇರಿದನು. ಆ ಮನವು ನಿನ್ನ ಶರೀರವನ್ನು ಸೇರಿತು, ಎಂದು ಹೇಳಿದೆ. ಇಲ್ಲಿ ಸೇರು ಎಂಬ ಕ್ರಿಯೆಯು ಎರಡೂ ವಾಕ್ಯಗಳಿಗೆ ಸಾಧಾರಣವಾಗಿರುವದು. ಕಾರಣ ಅದು ದೀಪಕ ವೆನಿಸುವದು. ಹಾಗು ವಾಕ್ಯದಲ್ಲಿ ಗೃಹೀತ ಮುಕ್ತರೀತಿಯಾದರೂ ತೋರು

ವದು. ಕಾರಣ ಇಲ್ಲಿ ದೀಪಕೈಕಾವಲಿಗಳ ಯೋಗವುಂಟಾಯಿತು. ಮತ್ತೆ ಉದಾ :—

ಅಶ್ವಧಾಟಿ ॥ ಕೋದಂಡದಿಂ ಶರವ, ಬಾಣಂಗಳಿಂ ಶಿರವ,
ಭೂಮಂಡಲಂ ಶಿರದೆ ಶ್ರೀ ।
ಮದ್ಧೀನುರೂಪಧರೆ, ಯಿಂದಾನೃಪತ್ವವದ,
ರಿಂದೈದೆ ಕೀರ್ತಿಯನು ತದ್ ॥
ಭೂದೇವಲೋಕಗಳ, ನಾಕೀರ್ತಿಯಿಂದಕ್ಷಣ,
ವೊಂದೊಂದರಲ್ಲಿಬಿಡದೆ ।
ಭೂದೇವ ಸಾಧಿಸಿದ, ನಿನ್ನನ್ನು ಸಂಗರದೊ,
ಳಾರಿನ್ನುಗೆಲ್ಲುವವರು? ॥

ಇಲ್ಲಿ 'ಕೋದಂಡದಿಂ ಶರವ ಸಾಧಿಸಿದ ನಿನ್ನನ್ನು' ಮೊದಲಾದ ಆರು ವಾಕ್ಯಗಳಿಗೆ 'ಸಾಧಿಸು' ಎಂಬದೊಂದೇ ಕ್ರಿಯೆಯು ಸಾಧಾರಣವಾಗಿರುವದರಿಂದ ಅನು ದೀಪಕವೆನಿಸುವದು. ಹಾಗು ಶರ-ಶಿರ-ಭೂಮಿ-ನೃಪತ್ವ-ಕೀರ್ತಿಗಳು ಉತ್ತರೋತ್ತರ ವಿಶೇಷಣವುಳ್ಳವಾಗಿ ಗೃಹೀತ ಮುಕ್ತರೀತಿಯಿಂದ ಹೇಳಲ್ಪಟ್ಟವೆ. ಕಾರಣ ಇಲ್ಲಿ ದೀಪಕೈಕಾವಲಿಗಳ ಯೋಗವುಂಟಾಯಿತು.

---

೪೯. ಸಾರಾಲಂಕಾರವು. ಲಕ್ಷಣ :—ಶ್ಲಾಘ್ಯಗುಣವಾಗಲಿ, ಅಶ್ಲಾಘ್ಯಗುಣವಾಗಲಿ, ಇವೆರಡೂ ಆಗಲಿ, ಉತ್ತರೋತ್ತರವಾಗಿ ಉತ್ಕರ್ಷವಾಗುವಂತೆ ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ :—

ಕಂದ ॥ ಮಧುರವು ಮಧುವದರಿಂದಲು ।
ಸುಧೆಯದು ಸುಧೆಗಿಂತ ಕವಿಯ ವಚನವು ಮಧುರಂ ॥

ಇಲ್ಲಿ 'ಮಧು' ಮೊದಲಾದವುಗಳಲ್ಲಿ ಮಾಧುರ್ಯಗುಣವು ಉತ್ತರೋತ್ತರವಾಗಿ ಉತ್ಕರ್ಷರೂಪದಿಂದ ವರ್ಣಿಸಲ್ಪಟ್ಟದೆ. ಮತ್ತೆ ಉದಾ:—

ವಾರ್ಧಿಕ ॥ ಹರಿಯ ಹೊಟ್ಟೆಯೊಳಿರುವವೀಮೂರು ಲೋಕಂಗ ।
ಳುರಗಪತಿಯೊಳಗವನು ಮಲಗುವನು ಫಣಿಪತಿಯು ।
ಶರಧಿಯೊಳಗೊಂದು ಕಡೆಯೊಳಗಿರುವನಾ ಶರಧಿಯದು
ಕುಂಭಸಂಭವನಿಗೆ ॥

ಸರಿದುದೊಂದೇ ಗುಟುಕಿನಿಂದಲಜನೀ ನಭದೊ ।
ಳಿರುವನಾ ಹೊನ್ನೆಹುಳದಂತೆಯಾಕಾಶವದು ।
ತೋರುತಿಹದೈದನೆಯ ಜಾರ್ಜರಾಜನ ಕೀರ್ತಿ
ಕರ್ಣದಿಂದೀವರಂಬೋಲ್ ॥

ಇಲ್ಲಿ 'ಮೂರುಲೋಕ, ವಿಷ್ಣು, ಶೇಷ, ಸಮುದ್ರ, ಅಗಸ್ತ್ಯ, ಆಕಾಶ, ಕೀರ್ತಿಯೆಂಬ ಸ್ತ್ರೀಯಳ ಕರ್ಣಕುವಲಯ ಇವುಗಳಲ್ಲಿ ವಿಸ್ತೃತ್ವಗುಣವು ಉತ್ತರೋತ್ತರವಾಗಿ ಉತ್ಕರ್ಷರೂಪದಿಂದ ವರ್ಣಿಸಲ್ಪಟ್ಟದೆ. ಇವೆರಡು ಶ್ಲಾಘ್ಯಗುಣೋತ್ಕರ್ಷಕ್ಕೆ ಉದಾಹರಣಗಳು. ಇನ್ನು ಅಶ್ಲಾಘ್ಯಗುಣೋತ್ಕರ್ಷವು ಹೇಗಂದರೆ :—

ಕಂದ ॥ ಹಗುರದು ತೃಣದಿಂದವಳೆಯು ।
ಹಗುರನು ಯಾಚಿಸುವನವಳೆಯಿಂದಲು ನಿಜದಿಂ ॥
ಜಗದೊಳು ಗಾಳಿಯಿನುಳಿದನೆ ।
ಮಿಗೆಯೆನ್ನಂ ಬೇಡಿಕೊಂಬುವಾಶೆಯಲಿವನು ॥

ಇಲ್ಲಿ 'ತೃಣ' ಮೊದಲಾದವುಗಳಲ್ಲಿ ಹಗುರತನವೆಂಬ ಗುಣವು ಉತ್ತರೋತ್ತರವಾಗಿ ಅಧಿಕ್ಯರೂಪದಿಂದ ವರ್ಣಿಸಲ್ಪಟ್ಟದೆ. ಇಲ್ಲಿ ಹಗುರತನವೆಂದರೆ ಸಣ್ಣ ಮನಸುತನವೆಂಬರ್ಥವು. ಇನ್ನು ಉಭಯಗುಣೋತ್ಕರ್ಷವು ಹೇಗಂದರೆ :—

ಕಂದ॥ ಪಿರಿಯದು ಗಿರಿಯೆದು; ಗಿರಿಯಿಂ ।
ದುರೆಪಿರಿದೈ ಶರಧಿ; ಶರಧಿಯಿಂದಲು ನಭವು ॥
ಪಿರಿಯದು; ನಭದಿಂ ಬ್ರಹ್ಮನು ।
ಪಿರಿದೈಯದರಿಂದಲಾಶೆಯದು ನೆರೆ ಪಿರಿದೈ ॥

ಇಲ್ಲಿ ಗಿರಿ, ಸಮುದ್ರ, ಆಕಾಶ, ಬ್ರಹ್ಮ ಇವುಗಳಲ್ಲಿ ಶ್ಲಾಘ್ಯ ಗುಣೋತ್ಕರ್ಷವೂ, ಆಶೆಯಲ್ಲಿ ಪ್ರಕೃತಕ್ಕೆ ಅನುಕೂಲವಾದ ಅಶ್ಲಾಘ್ಯ ಗುಣೋತ್ಕರ್ಷವೂ ಕ್ರಮೇಣ ಆಧಿಕ್ಯರೂಪದಿಂದ ವರ್ಣಿಸಲ್ಪಟ್ಟದೆ.

---

೫೦. ಯಥಾಸಂಖ್ಯಾಲಂಕಾರವು. ಲಕ್ಷಣ:— ಕ್ರಮವಾಗಿ ಹೇಳಿದ ಪದಗಳ ಅರ್ಥಗಳಿಗೆ ಕ್ರಮವಾಗಿ ಹೇಳಿದ ಕ್ರಿಯೆಗಳಲ್ಲಿ ಅನ್ವಯವು ತೋರಿದರೆ ಈ ಅಲಂಕಾರವಾಗುವದು. ಉದಾ:—

ಕಂದ॥ ರಂಜಿಸು ಭಂಜಿಸು ಜವದಿಂ ।
ಸಂಜಯಿಸೈ ಮಿತ್ರ-ಶತ್ರುವಿಪದಂಗಳನು ॥

ಇಲ್ಲಿ ಕ್ರಮವಾಗಿ ಹೇಳಿದ ಮಿತ್ರಾದಿ ಕರ್ಮಕಾರಕಗಳು ಕ್ರಮವಾಗಿ ಹೇಳಿದ 'ರಂಜಿಸು' ಮೊದಲಾದ ಕ್ರಿಯಾಪದಗಳಲ್ಲಿ ಅನ್ವಯವನ್ನು ಹೊಂದುದವು. ಮತ್ತೆ ಉದಾ:—

ಕಂದ॥ ಮಿಗೆದಂತವ ಲೋಚನೆಗಳ ।
ಬಗೆಯದೆ ಕಿಡುಮನದ ಭರದೆ ಕಿವಿಮೂಗುಗಳಂ ॥
ಅಗಿಯುತ ಬಗೆಯುತ ತೆಗೆಯುತ ।
ಬಗೆ ಬಗೆಯುಲಿ ಮುಗಿಸುರ್ಮಹಾಕೋಪವನು ॥
॥ ಮಡದಿಯರಂ ಬಣಿವೆಗಳಂ ।
ಸುಡುಗರಳವನವರು ಬಿಡದೆ ಬಡದನಗಳಿಗುಂ ॥
ಮೆಡುತಲಿ ಸುಡುತಲಿ ಕೊಡುತಲಿ ।
ಕಡವನು ತೀರಿಸುವರೊಬ್ಬ ರೊಬ್ಬರಕೂಡ್ಯೈ ॥
(ಗ್ರಾಮ್ಯಜನವರ್ಣನಾಶತಕ)

ಇಲ್ಲಿ ಮೊದಲನೇ ಪದ್ಯದ 'ದಂತವ' ಮೊದಲಾದ ಕರ್ಮಕಾರಕಗಳು 'ಅಗಿ' ಮೊದಲಾದ ಕ್ರಿಯೆಗಳಲ್ಲಿಯೂ, ಎರಡನೇ ಪದ್ಯದ 'ಮಡದಿಯರಂ' ಮೊದಲಾದ ಕರ್ಮಕಾರಕಗಳು 'ಮೆಡು' ಮೊದಲಾದ ಕ್ರಿಯೆಗಳಲ್ಲಿಯೂ ಅನ್ವಯವನ್ನು ಹೊಂದುವವು.

ಕ್ರಮೇಣ ಉಕ್ತವಾಗಿರುವ ಉಪಮಾದಿಗಳಿಗೆ ಕ್ರಮೇಣ ಉಕ್ತವಾಗಿರುವ ಕ್ರಿಯಾಪದಗಳಲ್ಲಿ ಅನ್ವಯವು ತೋರಿದಲ್ಲಿಯೂ ಈ ಅಲಂಕಾರವಾಗುವದು. ಹೇಗಂದರೆ:—

ಭಾಮಿನಿ॥ ಒಡಲು ಕೊಟ್ಟಿಹ ಶಿಷ್ಯನಂದದೆ ।
ಬಿಡಿಸಿದೆಡೆಗಳ ತೆರದೆ ವಿಷವನು ।
ಬಿಡನು ಧನಗಳನುಣ್ಣನೈಸಲೆ ಕೃಪಣನೀ ಜಗದೆ ॥

ಇಲ್ಲಿ "ಶಿಷ್ಯನಂದದೆ" "ಎಡೆಗಳ ತೆರದೆ" ಎಂಬ ಉಪಮಾನಗಳು ಕ್ರಮವಾಗಿ 'ಬಿಡನು, 'ಉಣ್ಣನು' ಎಂಬ ಕ್ರಿಯಾಪದಗಳಲ್ಲಿ ಅನ್ವಯವನ್ನು ಹೊಂದುವವು.

೫೦. ಪರ್ಯಾಯಾಲಂಕಾರವು. ಲಕ್ಷಣ.— ... ...ಪ್ರಮೆಯಿಂದ ಒಂದಕ್ಕೇ ಅನೇಕ ಆಧಾರಗಳ ಸಂಶ್ರಯತ್ವವು ಉಂಟಾಯಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ರಾವಾವದನೋಪಮೆಯದು।
ತಾವರಸಂ ಬಿಟ್ಟು ಪೊಕ್ಕುದಾಚಂದ್ರಮನಂ॥

ಇಲ್ಲಿ "ಕಾಂತಾವದನೋಪಮತ್ವಕ್ಕೆ" ಕ್ರಮವಾಗಿ "ಕಮಲ" ಚಂದ್ರರೂಪವಾದ ಆಧಾರಗಳ ಸಂಶ್ರಯತ್ವವು ಉಕ್ತವಾಗಿದೆ. ಕಮಲ ಸಂಶ್ರಯತ್ವವು ಸ್ಪಷ್ಟವಾಗಿ ಹೇಳಲ್ಪಡದೇ ಇದ್ದರೂ "ಬಿಟ್ಟು" ಎಂಬ ಪದದಿಂದ ಅದು ಗಮ್ಯವಾಗುವದು. ಉಪಮೇಯವು ರಾತ್ರಿಯಲ್ಲಿ ಕಮಲವನ್ನು ಬಿಟ್ಟು ಚಂದ್ರನಲ್ಲಿ ಹೋಗುವದು ಸ್ವಾಭಾವಿಕವು. ಮತ್ತೆ ಉದಾ:—

ಭಾಮಿನಿ॥ ಬಿಡುವುದೀಜಘನವದು ಕೃಶತೆಯ।
ನಡುವ ಪಡೆವುದು; ತರಲಗತಿಗಳ।
ಬಿಡುವವೀಚರಣಂಗಳಕ್ಷಿಗಳ್ಕೈದೆ ಪಡೆದಪುವು॥
ಬಿಡದೆ ಮುಖವೀಯೆನುಪಮತ್ವವ।
ಹುಡುಗೆಯೇ, ನಿನ್ನೆದೆಯು ಕುಚಗಳ।
ನೊಡನೆ ಪಡೆದುದು ಯೌವ್ವನದ ಗುಣವಿನಿಯಮತ್ವದಲಿ॥

ಇಲ್ಲಿ "ಕೃಶತೆ"-"ತರಲಗತಿ"-"ಅನುಪಮತ್ವ"-"ಕುಚತ್ವಗಳಿಗೆ" ಕಾಲಕ್ರಮದಿಂದ ಬೇರೆ ಬೇರೆ ಆಧಾರಗಳ ಸಂಶ್ರಯತ್ವವು ಉಕ್ತವಾಗಿದೆ. ಇವೆರಡು ಉದಾಹರಣಗಳಲ್ಲಿ ಉತ್ತರಾಧಾರಗಳ ಸಂಶ್ರಯತ್ವವು ಶಬ್ದಗಳಿಂದ ಹೇಳಲ್ಪಟ್ಟಿದೆ. ಪೂರ್ವಾಧಾರಸಂಶ್ರಯತ್ವವನ್ನು ಊಹಿಸಿ ತಿಳಿಕೊಳ್ಳತಕ್ಕದ್ದು. ಇನ್ನು ಸರ್ವತ್ರ ಶಾಬ್ದಿಕ ಪರ್ಯಾಯವು ಹೇಗಂದರೆ:—

ಭಾಮಿನಿ॥ ಜಡಧಿಯಲಿ ಮೊದಲಿದ್ದೆ ಬಳಿಕಾ।
ಮೃಡನ ಕಂದವನಪ್ಪಿದೈ ಬಳಿ।
ಕೊಡನೆ ನೀನೆಡೆಗೊಟ್ಟೆ ನೀಚರ ನುಡಿಗಳೆಡೆಗಳನು॥
ಬಿಡದೆ ಹೆಚ್ಚಿಗೆ ಹೆಚ್ಚಿ ನೆಡೆಯಲಿ।

ಎಡೆಗೊಡುವ ಕ್ರಮವನ್ನೆದಾರಿಂ।
ಗಡನೆ ಬೇಳ್ಪೈ ಕಾಲಕೂಟವೆ ತಿಳಿದೆ ನೀನಿದನು॥

ಇಲ್ಲಿ "ಕಾಲಕೂಟವು" "ಸಮುದ್ರ-ಶಿವನಕಂಠ-ನೀಚರನುಡಿ ಳೆಂಬ ಆಧಾರಗಳನ್ನು ಕ್ರಮವಾಗಿ ಆಶ್ರಯಿಸಿತೆಂದು ಹೇಳಿದೆ. ಇ ಶುದ್ಧ ಪರ್ಯಾಯವು. ಇನ್ನು ಸಂಕೋಚಪರ್ಯಾಯವು ಹೇಗಂದರೆ:-

ಭಾಮಿನಿ॥ ಪೊಡವಿಯೆಲ್ಲನ ತಿರುಗಿ ಬಳಿಕೀ।
ಗಿಡದ ನೆರಳಲಿ ಕಳೆದು ಶ್ರಮವನು।
ಪೌಢತನವನು ಹೊಂದೆ ಭಾಸ್ಕರನೀಗ ಶೈತ್ಯವದು॥
ತಡವು ಮಾಡದೆ ಜಡಗಳೆಡೆಯನು।
ಬಿಡದೆ ಪೊಕ್ಕುದು ಜಂತುಗಳ ತವು।
ಗೆಡರು ಬರೆ ಪೊಡಮಡುವವಾಪನೆ ಮಹಿಮೆರೆಡೆಗಳನು॥

ಇಲ್ಲಿ ಶೈತ್ಯವು ಉತ್ತರೋತ್ತರವಾಗಿ ಸಂಕುಚಿತವಾದ ಆಧಾರಗಳ ಗವನ ಮಾಡಿತೆಂದು ಹೇಳಿದೆ. ಕಾರಣ ಇದು ಸಂಕೋಚಪರ್ಯಾಯ ವೆನಿಸುವದು. ಇನ್ನು ವಿಕಾಸಪರ್ಯಾಯವು ಹೇಗಂದರೆ:—

ಭಾಮಿನಿ॥ ಮೊದಲು ತುಟಿಯೊಳಗಿತ್ತು ರಾಗವು।
ಹೃದಯದಲ್ಲಿಯು ತೋಪುದೀಗಲು।
ಪದುಮನಯನೆಯೆ, ಮುಗಿವೆ ಕರಗಳನೊಡೆದು ಬೇಳೆನಗೆ

ಇಲ್ಲಿ "ರಾಗವು" ಕ್ರಮವಾಗಿ ವಿಸ್ತೃತವಾದ ಆಧಾರಗಳಲ್ಲಿ ಗವಿ ಸಿತೆಂದು ಹೇಳಿದೆ. ಕಾರಣ, ಇದು ವಿಕಾಸಪರ್ಯಾಯವು.

೨. ಒಂದೇ ಆಧಾರದಲ್ಲಿ ಅನೇಕ ಆಧೇಯಗಳು ಕ್ರಮವಾ ಉತ್ಪತ್ತಿಯಾದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಭಾಮಿನಿ॥ ಬಿಡದೆ ಮೊದಲೊಳು ತಡೆಯದೆಲ್ಲಿಯು।
ಕೂಡಿದೀ ದೇಹವದು ಬಳಿಕಾ।
ಗೊಡನೆ ಪ್ರಿಯ ನೀನಾದೆ ಪ್ರಿಯತಮೆಯಾದೆನಾನಾಗ॥
ಬಡಗಂಡ ನೀನಾದೆಯೊಗಲು।
ಮಡದಿಯಲ್ಲವೆ ನಾನದಿನ್ನೇಂ।
ಸುಡು, ಬಿಡದ ಜೀವಗಳ ಫಲವಿದು ಬಂದುದಿಂದೆನುಗೆ॥

ಇಲ್ಲಿ ದಂಪತಿಗಳಲ್ಲಿ ಮೊದಲು ಅಭೇದ್ಯತ್ವವೂ, ಆ ಮೇಲೆ ಪ್ರಿಯ ಪ್ರಿಯೆತವಾಭಾವವೂ, ಬಳಿಕ ಗಂಡ ಹೆಂಡರ ಭಾವವೂ ಬಂದುದು ಎಂದು ಆಧೇಯ ಪರ್ಯಾಯವು ಉಕ್ತವಾಗಿದೆ.

---

೫೨. ಪರಿವೃತ್ಯಲಂಕಾರವು. ಲಕ್ಷಣ:— ನ್ಯೂನಾಧಿಕ ವಸ್ತುಗಳ ವಿನಿಮಯವಾದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಕಡೆಗಣ್ಣಿನೊಂದು ಶರವನು ।
ಬಿಡುತಲೆ ಪಿಡಿಯುವನು ಶತ್ರುಸಂಪದಗಳನು ॥

ಇಲ್ಲಿ ಕಡೆಗಣ್ಣಿನ ಶರದಿಂದ ಸಂಪತ್ತು ತಗೆದುಕೊಳ್ಳುವನೆಂದು ಹೇಳಿದೆ. ಕಾರಣ ನ್ಯೂನಾಧಿಕ ವಸ್ತುಗಳ ವಿನಿಮಯವಾದಂತಾಯಿತು. ಮತ್ತೆ ಉದಾ :—

ಭಾಮಿನಿ ॥ ಇಂದು ಶೋಕವದೇನು ವಯಗಳು ।
ಸಂದ ಗೃಧ್ರರ ರಾಜಗಾಸುರ ।
ಮಂದಿರವನೈದಿರುವ ಧೀರೋದ್ಧತ ಜಟಾಯುಷಗೆ ॥
ಇಂದುವಿನ ಪ್ರಜ್ವಲಿಪಕಿರಣಗ ।
ಳಿಂದೆ ಮಿಗೆ ಥಳಥಳಿಪ ಜಸವೆದು ।
ಬಂದುದಾ ಜರ್ಜರಕಲೇವರವ್ಯಯಲಾವನಿಗೆ ॥

ಇಲ್ಲಿ ಜೀರ್ಣದೇಹದಿಂದ ಉಜ್ವಲವಾದ ಯಶವು ಬಂತೆಂದು ಹೇಳಿದೆ. ಕಾರಣ ನ್ಯೂನಾಧಿಕಗಳ ವಿನಿಮಯವಾದಂತಾಯಿತು.

೫೩. ಪರಿಸಂಖ್ಯಾಲಂಕಾರವು. ಲಕ್ಷಣ:—ಒಂದು ವಸ್ತುವನ್ನು ಒತ್ತಟ್ಟಿಗೆ ನಿಷೇಧಿಸಿ ಬೇರೊತ್ತಟ್ಟಿಗೆ ಇರುವದೆಂದು ವರ್ಣಿಸುವಲ್ಲಿ ಈ ಅಲಂಕಾರವಾಗುವದು. ಉದಾ :—

ಕಂದ ॥ ಸುಮುಹಾದೀಪದೊಳಲ್ಲದೆ ।
ಕಾಮುಕರೊಳದೆಲ್ಲಿಯಿಲ್ಲ ಸ್ನೇಹದ ಕ್ಷಯವು ॥

ಇಲ್ಲಿ 'ಸ್ನೇಹದ ಕ್ಷಯವನ್ನು ಕಾಮುಕರಲ್ಲಿ ನಿಷೇಧಿಸಿ ದೀಪದಲ್ಲಿ ಇತ್ತೆಂದು ಹೇಳಿದ್ದಾನೆ. (ಸ್ನೇಹ-ಎಣ್ಣೆ ಮೊದಲಾದವು; ಅನುರಾಗ) ಮತ್ತೆ ಉದಾ:—

ಭಾವಿನಿ ॥ ಬರೆ ದನದ ತೊಡೆಯಲ್ಲಿ ಲೇಖದೊ ।
ಳಿರದು ಧರೆಯೊಳಗಾಗ ಮಳಿಕಂ ।
ಬರದೊಳಲ್ಲದೆ ತೋರದೈ ನೆರೆವರ್ಷಣಾರ್ಥದಲಿ ॥
ಕರಿಯು ಭರ್ಜನದೊಳಗದಲ್ಲದೆ ।
ಇರದು ಗಜದಲಿ ಕತ್ತಿಯೆದುತಾ ।
ನಿರುವುದೈ ನಾಪಿಕರೊಳಿರದದು ಖಡ್ಗದರ್ಥದಲಿ ॥

ಇಲ್ಲಿ 'ಬರೆ-ಮಳೆ-ಕರಿ-ಕತ್ತಿ'ಗಳನ್ನು 'ಲೇಖ-ವರ್ಷಣ-ಅನೇ-ಖಡ್ಗ'ಗಳ ಅರ್ಥಗಳಲ್ಲಿ ನಿಷೇಧಿಸಿ 'ದನದ ಬರೆ-ಕಬ್ಬಿಣಮಳೆ-ಹುರಿ-ನಾಪಿಕರ ಕತ್ತಿಗಳ, ಅರ್ಥಗಳಲ್ಲಿ ಇರುವವೆಂದು ಹೇಳಿದ್ದಾನೆ. ಇವು ಶಾಬ್ದಿಕ ನಿಷೇಧದ ಉದಾಹರಣಗಳು. ಇವುಗಳಲ್ಲಿ ಅಸದರ್ಥವರ್ಣನೆಯದೆ.

ಇನ್ನು ಕೆಲವು ಕಡೆಗಳಲ್ಲಿ ನಿಷೇಧಗಳನ್ನು ಊಹಿಸಿ ತಿಳಕೊಳ್ಳಬೇಕಾಗುವದು. ಅವು ಆರ್ಥಿಕ ನಿಷೇಧಗಳೆನಿಸುವವು. ಉದಾ:—

ಭಾವಿನಿ ॥ ವಿೂರುವವು ಶ್ರುತಿವರ್ಗವನು ಪುರ।
ನಾರಿಯರ ನಯನೋತ್ಪಲಂಗಳು।
ತೋರುವದು ವಕ್ರತ್ವವೀಶನ ಶಿರದ ಚಂದ್ರನಲಿ॥
ವೀರರೈದನೆ ಜಾರ್ಜರಾಳುವ।
ಧಾರುಣಿಯೊಳದುವೆಲ್ಲಿಯುಂ ನೆರೆ।
ವಿೂರಿರುವದಾ ಸೌಖ್ಯಶಾಂತಿಯ ಶರಧಿ ಮೇರೆಯೆನು ॥

ಅರ್ಥ–ನಯನಗಳು ಶ್ರುತಿವರ್ಗವನು ವಿೂರುವವು, ಎಂದರೆ ಕರ್ಣಾಂತ ವಿಶ್ರಾಂತವಾದ ಲೋಚನಗಳು. ಇಲ್ಲಿ ಶ್ರುತಿ ವಿರುದ್ಧವಾದ "ಮಗನು ತಂದೆಯ ಮಾತು ವಿೂರುವದು, ಹೆಂಡತಿಯು ಗಂಡನ ಮಾತು ವಿೂರುವದು," ಮೊದಲಾದ ವಿೂರುವ ಕ್ರಿಯೆಗಳ ನಿಷೇಧಗಳನ್ನು ಅಕ್ರಮಿಕ ರೀತಿಯಿಂದ ಊಹಿಸಿಕೊಳ್ಳಬೇಕಾಗಿದೆ. ಇದರಂತೆ ವಕ್ರತ್ವ ಮೊದಲಾದವುಗಳಲ್ಲಿಯಾದರೂ ಊಹಿಸಿಕೊಳ್ಳಬೇಕು. (ಶ್ರುತಿ=ಕಿವಿ; ವೇದ. ವಕ್ರತ್ವ=ಸೊಟ್ಟು; ಕೆಡುಕುತನ). ಮತ್ತೆ ಉದಾ:—

ಕಂದ ॥ ಜಡಿಯೆಂಬರಲ್ಪ ವರ್ಷಕೆ ।
ಮಡಿಯೆಂಬರ್ಗ್ರಾವ್ಯರಾಲವಾಲಂಗಳಿಗೆ ॥

ಕಡೆಯೆಂಬರ್ಕಟಕಕೆ ಕಣ್ ।
ಬಡಿಯೆಂಬಸರ್ವಪ್ರತಿಜ್ಞೆಗೈವಗೆ ನಿರುತಂ ॥
(ಗ್ರಾಮ್ಯಜನವರ್ಣನಾಶತಕ)

ಜಡಿ=ಹೊಡೆ; ಅಲ್ಪವರ್ಷ; ಮುಡಿ = ಸಾಯಿ; ಅಲವಾಲ; ಕಡೆ = ಮುಥಿಸು; ಕೈಯಲ್ಲಿಹಾಕುವ ಬೆಳ್ಳಿಯ ಆಭರಣ; ಖಡೆ; ಕಣ್ಬಡಿ = ಕಣ್ಣುಬಡಕೋ; ಖರೇ ಹೇಳು;)

ಮೇಲಿನವೆರಡು ಉದಾಹರಣಗಳಲ್ಲಿ ಸದರ್ಥ ವರ್ಣನೆಯದೆ. ಇನ್ನು ಇವುಗಳ ವಿಶ್ರತ್ವವು ಹೇಗಂದರೆ:—

ಕಂದ ॥ ಬೇಡಿಗೆ ಲಾಡಿಗಳೆಂಬರ್ ।
ಬಾಡೆಂಬರು ಕಾಯಿಪಲ್ಲೆ ಹಣ್ಣಿಗೆ ನಿರುತಂ ॥
ಬೀಡೆಂಬಲ್ಲೋರ್ಹಕೆ ಬಿನ್ ।
ಬಾಡಿಗೆ ಮನೆಯೆಂಬರಾತುರಂಗದ ಜೇಲಂ ॥
(ಗ್ರಾ. ವೆ. ಶ.)

(ಬೇಡಿ = ನಿಗಡ; ಬೀರಸಾಬನೆಲಾಡಿ; ಬಾಡು = ನಿಸ್ತೇಜವಾಗುವ ಕಾಯಿಪಲ್ಲೆಮೊದಲಾದವು; ಬೀಡು = ಮನೆ; ಕಬ್ಬಿಣ; ಬಿನ್‌ಬಾಡಿಗೆ ಮನೆ = ಬಾಡಿಗೆಯಿಲ್ಲದ ಮನೆ. ಜೇಲು;) ಇಲ್ಲಿ 'ಬೇಡಿ–ಬಾಡು' ಎಂಬವು ಸದರ್ಥದಲ್ಲಿಯೂ; 'ಬೀಡು–ಬಿನ್ ಬಾಡಿಗೆಮನೆ' ಎಂಬವು ಅಸದರ್ಥದಲ್ಲಿಯೂ ವಿನ್ಯಸ್ತವಾಗಿವೆ. ಇನ್ನು:—

ಕಂದ ॥ ಹನಿಯೆಂಬುವರಾಫಾಲಕೆ ।
ಮನಿಯೆಂಬುದು ಪೀಠದೊಳ್ಪ್ರಯೋಗಿಸುತಿರ್ವರ್ ॥
ದಣವೆನ್ನುವರಾಪಶುವಿಗೆ ।
ಮಣವೆಂಬರ್ಗ್ರಾಮ್ಯ ಜನರು ಚಿತ್ತಕೆ ನಿರುತಂ ॥
॥ ಭರಮಣನೆಂಬರ್ವಿಪ್ರಗೆ ।
ಕರೆವರ್ಭಷವರ್ಣನೆಂದು ವೃಷಭಕೆ ನಿರುತಂ ॥
ಭರ್ರೆನ್ನುವರಾಹ್ವಾನಕೆ ।
ಥರ್ರೆಂಬರ್ಗ್ರಾಮ್ಯ ಜನರು ತಾರೆಂಬುದಕೆ ॥

ಇವಾದರೂ ಸೂಕ್ಷ್ಮ ಬುದ್ಧಿಯಿಂದ ಊಹಿಸಿಕೊಂಡರೆ ಇದೇ ಅಲಂಕಾರದಲ್ಲಿ ಬರುವವು. ಆದರೆ ಕೆಲವರು ವ್ಯಾಕರಣ ದೋಷಗಳೆಂದು ಅಷ್ಟೇ

ಪಿಸುವರು. ಕಾವ್ಯವರ್ಣನೆಯಲ್ಲಿ ಇವು ಪರಿಸಂಖ್ಯಾಲಂಕಾರಗಳೆಂಬದಕ್ಕೆ ಏನೂ ಸಂದೇಹವಿಲ್ಲ. ಹಣಿ = ಹನಿ; ಮಣಿ = ಮನಿ; ಧನ = ದಣ; ಮನ = ಮಣ; ಬ್ರಾಹ್ಮಣ = ಭರಮಣ; ವೃಷಭ = ಭಷವಣ್ಣ; ಬರ್ರಿ = ಭರ್ರಿ ತರ್ರಿ = ಥರ್ರಿ ಎಂದು ಕೆಡಿಸಿ ನುಡಿಯುವರು.)

೫೪. ವಿಕಲ್ಪಾಲಂಕಾರವು. ಲಕ್ಷಣ:– ಸಮಾನ ಬಲವುಳ್ಳ ಕ್ರಿಯೆಗಳು ಒಮ್ಮೇಲೆ ಆಗುವದಕ್ಕೆ ವಿರೋಧವು ತೋರಲು ವಿಕಲ್ಪ ವಿಧಿಯನ್ನು ಹೇಳುವರು. ಅಲ್ಲಿ ಈ ಅಲಂಕಾರವಾಗುವದು. ಉದಾ:–

ಕಂದ ॥ ಬಾಗಿಪುದು ಶಿರವನೆಲ್ಲರು ।
ಬೇಗದಲಥವಾ ಸುಭುಜರು ಚಾಪವನೀಗಳ್ ॥

ಇಲ್ಲಿ ಒಡಂಬಡಿಕೆ ಕಾಳಗಗಳ ಕರ್ತವ್ಯವನ್ನು ಬೋಧಿಸುವ ಶಿರ ಚಾಪಗಳನ್ನು ಬಾಗಿಸುವ ಕ್ರಿಯೆಗಳು ಒಮ್ಮೆಲೇ ಸಂಭವಿಸುವದು ಅಶಕ್ಯವು ಅಂದರೆ, ತಲೆಬಾಗಿಸುವವನು ಬಿಲ್ಲು ಹಿಡಿದು ಕಾಳಗಕ್ಕೆ ಬರುವದೂ, ಕಾಳಗಕ್ಕೆ ಬರುವವನು ತಲೆಯನ್ನೂ ಬಾಗಿಸುವದೂ ಅಶಕ್ಯವು. ಕಾರಣ ಇಲ್ಲಿ ವಿಕಲ್ಪ ವಿಧಿಯು ಹೇಳಲ್ಪಟ್ಟಿದೆ. ಮತ್ತೆ ಉದಾ:–

ಭಾಮಿನಿ ॥ ಮಳೆಯ ಹನಿಗಳು ಬೀಳುವವು ಬಿಡ ।
ದಿಳೆಯೊಳಿಲ್ಲಾ ಕಡೆಯೊಳೀಗಲು ।
ಬಳಿಸಿಹವು ಮೋಡಗಳು ಕಾಣಿವವು ನೆರೆ ಕಲಾಪಿಗಳು ॥
ಕಳೆದನೆನ್ನಯ ದೇಹ ತಾಪಂ ।
ಗಳನದೆಲ್ಲವನಿನ್ನು ನಿಜದಿಂ ।
ತಳುವದೀಗಲು ಬಂದು ಕಾಂತೆಕೃತಾಂತರೊಳಗೋರ್ವಂ॥

ಇಲ್ಲಿ ಪ್ರಿಯಸಮಾಗಮವಾಗಲು ಮರಣವು ಒದಗುವದು ಅಸಂಭವವು. ಮರಣವು ಒದಗಲು ಪ್ರಿಯಸಮಾಗಮವಾಗುವದು ಅಶಕ್ಯವು. ಕಾರಣ ಇಲ್ಲಿ ವಿಕಲ್ಪವಿಧಿಯು ಉಕ್ತವಾಗಿದೆ.

---

೫೫. ಸಮುಚ್ಚಯಾಲಂಕಾರವು. ಲಕ್ಷಣ:—೧. ಒಂದಕ್ಕೊಂದು ವಿರೋಧಿಗಳಾಗದೆ ಒಮ್ಮೆಲೇ ಸಂಭವಿಸಲಿಕ್ಕೆ ಯೋಗ್ಯಗಳಾದ ಅನೇಕ ಕ್ರಿಯೆಗಳ ಗುಂಫನದಿಂದ ಈ ಅಲಂಕಾರವಾಗುವದು. ಉದಾ.—

ಕಂದ ॥ ಸಾಯುವೆರು ಹಿಂದೆ ನೋಳ್ಪರು ।
ಕಾಯವ ಕಂಪಿಸುತ ಶರಣುಬರುವೆರು ನಿನಗೆ ॥

ಇಲ್ಲಿ ಒಮ್ಮೆಲೇ ಸಂಭವಿಸಲು ಯೋಗ್ಯಗಳಾದ 'ಸಾಯು' ಮೊದಲಾದ ಕ್ರಿಯೆಗಳ ಗುಂಫನವು ಮಾಡಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ ॥ ಗೆಳೆಯ ನಿನ್ನಯ ಪ್ರೇಮಶಲ್ಯವ ।
ದಿಳಿಯಲಾಕೆಯ ಮನದೊಳೀಗಲು ।
ಬಳಲುವಳು ಮೂರ್ಛೆಯನು ತಳಿವಳು ಹೊರಳುವಳು
ನೆಲದೆ ॥
ಮಲಗುವಳು ಕೂಡುವಳು ಚಿಂತಿಸು ।
ತಿಳಿಯ ಬರೆವಳು ಭ್ರಾಂತಿಯನು ನೆರೆ ।
ತಳಿವಳಳುವಳು ನೀರಡಿಸಿ ಶ್ರಮಬಡುವಳಂಗನೆಯು ॥

ಇಲ್ಲಿ ಅನೇಕ ಕ್ರಿಯೆಗಳು ಸಂಭವಿಸಲಿಕ್ಕೆ ಕೆಲವು ಕಾಲವು ಬೇಕೆಂಬದು ಯೋಗ್ಯವಿದ್ದರೂ ವಿರಹಾತಿಶಯವನ್ನು ತೋರಿಸಲಿಕ್ಕೆ ಇವುಗಳ ಯೌಗಪದ್ಯವು ಮಾಡಲ್ಪಟ್ಟಿದೆ.

೨. ಬಂದು ಗುಣವೇ ಕಾರ್ಯಸಿದ್ಧಿಗೆ ಸಾಕಾಗಿರಲು ಅಲ್ಲಿ ಅಂಥವೇ ಅನೇಕ ಗುಣಗಳು 'ನಾ ಮೊದಲು ನೀ ಮೊದಲೆಂದು' ಕಾರ್ಯಸಿದ್ಧಿಗೆ ಮುಂದರಿಯುವವೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ ॥ ಸಲೆ ಮದಿಸುತಿರುವವಿವನಂ ।
ಕುಲರೂಪವು ವಯವು ವಿದ್ಯೈಧನಸಂಪದಗಳ್ ॥

ಇಲ್ಲಿ ಮದಿಸಲಿಕ್ಕೆ 'ಕುಲ' ವೆಂಬದೊಂದೇ ಹೇತುವು ಸಾಕಾಗಿರಲು ಇಂಥವೇ ರೂಪ ಮೊದಲಾದವುಗಳೂ ಕೂಡ ಅವನನ್ನು ಮದಿಸಲಿಕ್ಕೆ ಹೇತುಗಳಾಗಿರುವವೆಂದು ಹೇಳಿದೆ. ಮತ್ತೆ ಉದಾ:—

ಭಾಮಿನಿ ॥ ಕೊಡುವದಾಗತ ಜನಕೆ ತೋಷವ ।
ಮಾಡುವುದು; ಪರಕಥೆಯ ನಿಂದೆಯ ।
ಕೂಡಿಸದೆ ಪೇಳುವುದು; ಬಿಡುವುದು ಧನವು ಬರೆ ಮದವ ॥
ಮಾಡಿ ಹಿತವನು ತಾನು ನುಡಿಯದೆ ।
ಕೂಡುವುದು; ವರರೂಪಕೃತಿಯನೊಡ ।
ನೊಡನೆನುಡಿಯುವದಿವು ಕುಲೀನತೆಯನ್ನು ತಿಳಿಸುವವು ॥

ಇಲ್ಲಿ 'ಕುಲೀನತ್ವವನ್ನು ತಿಳಿಯಲಿಕ್ಕೆ' ದಾತೃತ್ವವೊಂದೇ ಹೇತು ಸಾಕಾಗಿರಲು ಇಂಥ ಅನೇಕ ಗುಣಗಳು ಕುಲೀನತೆಯನ್ನು ತಿಳಿಸುವದೆ ನಗಾಧವು.

---

೫೬. ಕಾರಕದೀಪಕಾಲಂಕಾರವು. ಲಕ್ಷಣ:—ಬಂದೇ ಕಾರಕ ನ್ನು ಅನುಸರಿಸುವಂಥ ಕ್ರಮವಾಗಿ ಆಗತಕ್ಕಂಥ ಕ್ರಿಯೆಗಳ ಗುಂಫನವ ದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಪೋಗುವಳು ತಿರುಗಿಬರುವಳು ।
ರಾಗದೆ ಹಾದಿಗರ ಕೇಳುತಿರುವಳು ನೋಳ್ಪಳ್ ॥

ಇಲ್ಲಿ ವಿವಕ್ಷಿತಕರ್ತೃಕಾರಕವನ್ನು ಅನುಸರಿಸಿ ಕ್ರಮೇಣ ಆಗತ ಕ್ಕಂಥ ಪೋಗು ಮೊದಲಾದ ಕ್ರಿಯೆಗಳ ಗುಂಫನವು ಮಾಡಲ್ಪಟ್ಟದೆ ಉದಾ:—

ವಾರ್ಧಿಕ ॥ ಮುಲಗಿಹನು ಜಳಕವನು ಮಾಳ್ಪನುಣ್ಣುವನು ಕೂ ।
ದಲಗಳನುವೊಣಗಿಪನದೊಳಗೆ ಪೋಗಿಹನಾಟ ।
ದೊಳಗಿಹನು ನುಡಿಯಲವಸರವಿಲ್ಲವಿನ್ನೊಮ್ಮೆ ತಿರುಗಿ
ನೀನಿಲ್ಲಿಬಾರ್ಯೈ ॥
ಗಳಹದಲೆ ಪೋಗೆಂದು ದ್ವಾರಾಧಿಪತಿಯ ಕೋ ।
ಲೊಳು ನುಗಿಸಿಕೊಳುತಿರುವ ನಮ್ಮನೀಗಲು ಲಕುಮಿ ।
ತಿಳಿದುನೋಡೌ, ನೀನು ಸರಸಿರುಹದಂತರಂಗದೆ
ಕುಡಿಯು ಕಣ್ಣಿನಿಂದೆ ॥

ಇಲ್ಲಿ ಅಧ್ಯಾಹೃತವಾದ ಪ್ರಭುಕರ್ತೃಕಾರಕವನ್ನು ಅನುಸರಿಸಿ ಕವೇಣ ಆಗತಕ್ಕಂಥ "ಮಲಗು" ಮೊದಲಾದ ಕ್ರಿಯೆಗಳ ಗುಂಫನವು ಮಾಡಲ್ಪಟ್ಟದೆ. ಸಮುಚ್ಚಯಾಲಂಕಾರದಲ್ಲಿ ಕ್ರಮವಿವಕ್ಷೆಯಿಲ್ಲದೆ ಅನೇ ಕ ಕ್ರಿಯೆಗಳ ಯೌಗಪದ್ಯವಿರುವದು. ಆದರೆ ಇಲ್ಲಿ ಕ್ರಮವಿವಕ್ಷೆಯುಳ್ಳ ಅನೇಕ ವಾಕ್ಯಗಳಿಗೆ ಬಂದೇ ಕಾರಕವಿರುವದರಿಂದ ಇದು ಕಾರಕದೀ ಪಕವೆನಿಸುವದು. ಇದು ಪ್ರಥಮ ಸಮುಚ್ಚಯಕ್ಕೆ ಪ್ರತಿದ್ವಂದ್ವವಾಗಿ ರುವದು.

---

೫೭. ಸಮಾಧ್ಯಲಂಕಾರವು. ಲಕ್ಷಣ:—ಒಬ್ಬನು ಒಂದು ಕಾರ್ಯವನ್ನು ಆರಂಭಿಸಿರಲು ಅದಕ್ಕೆ ಬೇರೊಂದರಿಂದ ಸುಕರತ್ವವು ಒದಗಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ನಾರಿಯರಾತುರರಾಗಲು ।
ನಾರಿದನುರೆ ತರಣಿಯಸ್ತಗಿರಿಮೇಲೆಯನು ॥

ಇಲ್ಲಿ ಆತುರತ್ವವೊಂದೇ ಪ್ರಿಯಾಭಿಸರಣಕ್ಕೆ ಸಾಕಾದ ಕಾರಣವಿರುವದು. ಅದು ಅಂಧಕಾರಾಗಮವನ್ನು ಅಪೇಕ್ಷಿಸುವದಿಲ್ಲ. ಕಾರಣ ಅಕಸ್ಮಾತ್ತಾಗಿ ಒದಗಿದ ಅಂಧಕಾರವು ಆ ಕಾರ್ಯಕ್ಕೆ ಸುಕರತ್ವವನ್ನು ಮಾತ್ರ ಉಂಟು ಮಾಡಿತು. ಮತ್ತೆ ಉದಾ:—

ಭಾಮಿನಿ ॥ ಇವಳ ಮುನಿಸನು ಕಳೆಯಲಾಗಲು ।
ಜವದೆ ನಾ ಪದಗಳಲಿ ಬೀಳಲು ।
ತವೆ ಘನವು ಗರ್ಜಿಸಿದುದೆನಗುಪಕಾರ ಮೊಳ್ಪವೊಲು ॥

ಇಲ್ಲಿ "ಪದಗಳ ಮೇಲೆ ಬೀಳಲು" ಮುನಿಸು ಕಳೆಯುವದೊಂದೇ ಸಾಕಾದ ಕಾರಣವಿರುವದು. ಅದು ಮೇಘದ ಗರ್ಜನೆಯನ್ನು ಅಪೇಕ್ಷಿಸುವದಿಲ್ಲ. ಕಾರಣ ಅಕಸ್ಮಾತ್ತಾಗಿ ಒದಗಿದ ಮೇಘಗರ್ಜನೆಯು ಭೀತಿಯು ಬೀಳುವ ಕ್ರಿಯೆಗೆ ಸುಕರತ್ವವನ್ನು ಮಾತ್ರ ಉಂಟು ಮಾಡಿತು. ಇದು ದ್ವಿತೀಯ ಸಮುಚ್ಚಯಕ್ಕೆ ಪ್ರತಿದ್ವಂದ್ವವಾಗಿರುವದು. ಅಲ್ಲಿ ಪ್ರತ್ಯೇಕವಾಗಿ ಸಮರ್ಥಗಳಾಗಿರುವ ಅನೇಕ ಗುಣಗಳು ಒಂದು ಕಾರ್ಯವನ್ನು ಸಾಧಿಸಲು ಯತ್ನಯಿಸುತ್ತಿರುವವು. ಆದರೆ ಇಲ್ಲಿ ಒಂದು ಕ್ರಿಯೆಯನ್ನು ಆರಂಭಿಸಿರಲು ಮತ್ತೊಂದು ಅದಕ್ಕೆ ಸುಕರತ್ವವನ್ನು ಮಾತ್ರ ಉಂಟು ಮಾಡುವದು.

೫೮. ಪ್ರತ್ಯನೀಕಾಲಂಕಾರವು. ಲಕ್ಷಣ:—ಜಯಶಾಲಿಯಾದ ಶತ್ರುವಿನ ಪಕ್ಷವನ್ನು ಗ್ರಹಿಸಿದವನಲ್ಲಿ ಪರಾಕ್ರಮವನ್ನು ತೋರಿಸಿದನೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಅಂಬುಜಗಳಜಿತ*ನೇತ್ರವ ।
ಹಿಂಬಾಲಿಪ ಕವಿಗಳನ್ನು ಕೇಳ್ಮಾಡಿದವ್ಯೆ ॥

---

* ಪಾಠಾಂತರ.—'ಜಯ'

ಇಲ್ಲಿ ಬಲವುಳ್ಳ ಕೆತ್ತುವಾದ ನೇತ್ರವನ್ನು ಹಿಂಬಾಲಿಸುವ ಕಿವಿಗಳನ್ನು ಕಮಲಗಳು ಧಿಃಕರಿಸಿದವೆಂದು ಹೇಳಿದೆ. ಕಿವಿಯ ಮೇಲೆ ಕಮಲಗಳನ್ನು ಇಟ್ಟುಕೊಳ್ಳಲು ಅವು ಕೆಳಗಾಗುವದು ಸಹಜವೇ. ದೀರ್ಘವಾದ ನಯನಗಳಿರುವದರಿಂದ ಕಿವಿಗಳು ಅನುಸರಿಸುವವೆಂದು ಹೇಳಲ್ಪಟ್ಟದೆ. ಕೆಲ್ಲಲ್ಪಡದ ನೇತ್ರಗಳು, ಎಂದರೆ ಕಮಲಗಳಿಗಿಂತ ನೇತ್ರಗಳು ಸುಂದರವಾಗಿರುವವೆಂಬರ್ಥ. ಮತ್ತೆ ಉದಾ:—

(ಮುಂದೆ ಸಾಗುವದು)

ತಾ. ೨೬–೬–೧೩ ಇಸ್ವಿ. ಉಪೇಂದ್ರಶರ್ಮಾ ತೋಳಮಟ್ಟಿ.

ದೊಡ್ಡಬಳ್ಳಾಪುರದಲ್ಲಿ ನಡೆದ ಬಹುಮಾನಸಭೆ.

ಕಳೆದ ಸಪ್ಟಂಬರ ೨೩ನೆಯ ತಾ. ಶನಿವಾರ ಮೈಸೂರ ಸಂಸ್ಥಾನದ ಸೀನಿಯರ್ ಕೌನ್‌ಸಿಲರ್ ಮ|| ಎಚ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್ ರವರು ದೊಡ್ಡಬಳ್ಳಾಪುರದ ಪ್ರಾಂತ್ಯ ದಯಮಾಡಿಸಿದ್ದಾಗ ಅಲ್ಲಿನ ಎಲ್ಲ ಸ್ಕೂಲುಗಳ ವಿದ್ಯಾರ್ಥಿಗಳಿಗೂ ಬಹುಮಾನಗಳನ್ನು ಕೊಡುವ ಉದ್ದೇಶದೊಡನೆ ಸೇರಿದ್ದ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು. ಸ್ಕೂಲ್ ಕಟ್ಟಡವು ರಮಣೀಯವಾಗಿ ಅಲಂಕರಿಸಲ್ಪಟ್ಟಿತ್ತು. ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರೂ, ಕನ್ನಡ ಮತ್ತು ಹಿಂದು ಸ್ಥಾನಿ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರುಗಳೂ, ಮುನ್‌ಸಿಫರು ಅಮಲದಾರರು ಮುಂತಾದ ಸ್ಥಳಾಧಿಕಾರಿಗಳೂ, ಮ್ಯುನಿಸಿಪಲ್ ಕೌನ್‌ಸಿಲರುಗಳು ಲಾಯರುಗಳು ಮುಂತಾದ ಪುರಪ್ರಮುಖರೂ ಸಭೆಯನ್ನಲಂಕರಿಸಿದ್ದರು.

ಗರಲ್ಸ್ ಸ್ಕೂಲಿನ ವಿದ್ಯಾರ್ಥಿನಿಯರು ಸುಖಾಗಮನಸೂಚಕವಾದ ಹಾಡನ್ನೂ, ದೇವರ ಪ್ರಾರ್ಥನೆಯನ್ನೂ ರಮ್ಯವಾಗಿ ಹಾಡಿ ಸಭೆಯನ್ನು ಉಪಕ್ರಮ ಮಾಡಿದರು. ಕಿಂಡರ್‌ಗಾರ್ಟನ್ ಹಾಡು, ಬಾಯಿಪಾಠ, ಸಂಭಾಷಣೆ ಮುಂತಾದವುಗಳನ್ನು ಬೇರೆ ಬೇರೆ ಸ್ಕೂಲುಗಳ ವಿದ್ಯಾರ್ಥಿಗಳು ಬಹಳ ತೃಪ್ತಿಕರವಾಗಿ ನಡಿಸಿದ ಬಳಿಕ ಎ. ವಿ. ಸ್ಕೂಲ್

ಹೆಡ್‌ಮಾಸ್ತರ್ ಮತ್ತೂ ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿನ್‌ಟೆಂಡೆಂಟರಾದ ಮು|| ಡಿ. ಕೊಂಗಾಡಿಯಪ್ಪನವರು ತಮ್ಮ ಛಾರ್ಜಿನಲ್ಲಿರುವ ಎರಡು ಸ್ಕೂಲುಗಳ ರಿಪೋರ್ಟುಗಳನ್ನು ಮಾತ್ರವೇ ಅಲ್ಲದೆ ಈ ಊರಿನ ಇತರ ಎಲ್ಲ ಸ್ಕೂಲುಗಳ ರಿಪೋರ್ಟುಗಳನ್ನೂ ಓದಿದರು. ಈ ರಿಪೋರ್ಟುಗಳಿಂದ ಈ ಊರಿನಲ್ಲಿರುವ ಸ್ಕೂಲುಗಳೆಲ್ಲವೂ ಅಭಿವೃದ್ಧಿ ಸ್ಥಿತಿಯಲ್ಲಿರುವಂತೆಯೂ, ಪುರನಿವಾಸಿಗಳು ಇಲ್ಲಿನ ಬಾಲಕರ ವಿದ್ಯಾವಿಚಾರದಲ್ಲಿ ವಿಶೇಷ ಶ್ರದ್ಧೆಯನ್ನು ತೋರ್ಪಡಿಸುತ್ತಿರುವಂತೆಯೂ ತಿಳಿಯಲಾಯಿತು.

ತರುವಾಯ ಸಭಾಧ್ಯಕ್ಷರವರು ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಯರಿಗೂ ಬಹುಮಾನಗಳನ್ನು ಹಂಚಿ ಸಮಸ್ತರಿಗೂ ಹೃದಯಂಗಮವಾಗುವಂತೆ ಉಪನ್ಯಾಸ ಮಾಡಿದರು. ಅದರ ಸಾರಾಂಶವೇನೆಂದರೆ, ಪಾರಿತೋಷಕ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದರು ಕಡೆಯಲ್ಲಿ ತಮ್ಮ ಅಭಿಪ್ರಾಯವನ್ನು ಕೆಲವು ವಾಕ್ಯಗಳಿಂದ ತಿಳಿಯಪಡಿಸುವ ಪದ್ಧತಿಯುಂಟು. ಅದರಂತೆ ಈಗ ಎ. ವಿ. ಸ್ಕೂಲ್ ಹೆಡ್‌ಮಾಸ್ತರವರು ಓದಿದ ರಿಪೋರ್ಟುಗಳಲ್ಲಿ ಕಂಡ ಪ್ರತಿ ಸ್ಕೂಲಿನ ವಿಷಯದಲ್ಲಿಯೂ ವಿವರವಾಗಿ ಪ್ರಸ್ತಾಪಿಸುತ್ತಾ ಬಂದದ್ದೇ ಆದರೆ ವಿಶೇಷ ಕಾಲವಿಳಂಬವಾಗುವುದು. ಅಷ್ಟು ತಮ್ಮಗಳಿಗೆ ಬೇಜಾರುಮಾಡಲು ಇಷ್ಟವಿಲ್ಲ. ಕೆಲವಂಶಗಳನ್ನು ಮಾತ್ರ ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇನೆ. ಈ ದೊಡ್ಡಬಳ್ಳಾಪುರದಲ್ಲಿ ೭,೫೦೦ ಪ್ರಜೆಗಳಿರುತ್ತಾರೆ. ಇಲ್ಲಿರುವ ಎಲ್ಲ ಸ್ಕೂಲುಗಳಲ್ಲಿಯೂ ಸೇರಿ ೬೭೮ ಮಂದಿ ವಿದ್ಯಾರ್ಥಿಗಳೂ, ೨೬೩ ಮಂದಿ ವಿದ್ಯಾರ್ಥಿನಿಯರೂ ವ್ಯಾಸಂಗಮಾಡುವರು; ಎಂದರೆ ಸ್ವಲ್ಪ ಹೆಚ್ಚುಕಡಿಮೆ ೧,೦೦೦ ಮಕ್ಕಳು ವ್ಯಾಸಂಗದಲ್ಲಿದ್ದಂತಾಯಿತು. ಇದು ಬಹಳ ಸಂತೋಷಪ್ರದವಾಗಿದೆ. ತಾಲೂಕ ಹೆಡ್‌ಕ್ವಾರ್ಟರುಗಳಲ್ಲಿ ಬೇರೆ ಯಾವ ಕಡೆಯೂ ಇಷ್ಟು ಹೆಚ್ಚು ಮಂದಿ ವ್ಯಾಸಂಗದಲ್ಲಿರಲಾರರೆಂದು ನಾನು ಭಾವಿಸುತ್ತೇನೆ. ಈ ಟವನಿನ ಎಲ್ಲ ಸ್ಕೂಲುಗಳ ಅಭಿವೃದ್ಧಿಗೂ ಎ. ವಿ. ಸ್ಕೂಲ್ ಹೆಡ್‌ಮಾಸ್ತರ ಮು|| ಡಿ. ಕೊಂಗಾಡಿಯಪ್ಪನವರ ಶ್ರದ್ಧಾಭಕ್ತಿಯೇ ಮೂಲಕಾರಣ. ಇವರು ಸ್ಥಳವಂದಿಗರಾಗಿ ಈ ಸ್ಕೂಲಿನಲ್ಲಿಯೇ ಪ್ರಾರಂಭದಿಂದಲೂ ಅವಿಚ್ಛಿನ್ನವಾಗಿ ಉತ್ಸಾಹದಿಂದ ಕೆಲಸಮಾಡುತ್ತಾ ತಮ್ಮ

ಯಾವತ್ಕಾಲವನ್ನೂ ವಿನಿಯೋಗಿಸುತ್ತಿದ್ದಾರೆ. ಇವರು ದೇಹಶ್ರಮವಿಂ
ಸಹ ಲೆಕ್ಕಿಸದೆ ಕೆಲಸಮಾಡುತ್ತಿರುವುದನ್ನು ನಾನಾ ಮುಖವಾಗಿ ಕೆ
ವುದು ಮಾತ್ರವೇ ಅಲ್ಲದೆ ಸ್ವತಃ ಪರೀಕ್ಷಿಸಿಯೂ ತಿಳಿದಿರುವೆನು.

ತಾಲೂಕ ಜಾಗಗಳಲ್ಲಿ ಎ. ವಿ. ಸ್ಕೂಲುಗಳನ್ನು ಸ್ಥಾಪಿಸಿದ
ಕವೇನೆಂದರೆ, ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆ
ಕ್ಕೇ ವಿದ್ಯಾರ್ಥಿಗಳು ಪೂರ್ಣವಾಯಿತ್ಯವನ್ನು ಸಂಪಾದಿಸಿದೆಂ ಮು
ಸದೆ ಇನ್ನೂ ದೊಡ್ಡ ದೊಡ್ಡ ಪರೀಕ್ಷೆಗಳಿಗೆ ವ್ಯಾಸಂಗಮಾಡಲು
ತ್ನಿಸಬೇಕು. ಪ್ರತಿಯೊಂದು ಸ್ಕೂಲಿನಲ್ಲಿಯೂ ಪ್ರಜ್ಞಾಶಾಲಿ
ವಿದ್ಯಾರ್ಥಿಗಳು ಕೆಲವರು ಇದ್ದೇ ಇರುವರು. ಅಂಥವರಿಗೆ ಮೇ
ವಿದ್ಯಾಭ್ಯಾಸಕ್ಕೆ ತಕ್ಕ ಸಹಾಯ ಸಂಪತ್ತಿಗಳನ್ನು ಉಪಪನ್ನರಾದ
ಮನುಷ್ಯರುಗಳು ಕಲ್ಪಿಸುತ್ತಾ ಬಂದಲ್ಲಿ ಎಷ್ಟೋ ಉಪಕಾರವಾ
ಸರಕಾರದವರೂ ಸಹ ಈ ವಿಷಯದಲ್ಲಿ ಸಾಧ್ಯವಾದಷ್ಟು ಸಹಾ
ಬಲು ಸಿದ್ಧರಾಗಿರುತ್ತಾರೆ. ಈ ಊರಿನ ದೊಡ್ಡ ಮನುಷ್ಯರು
ಸ್ಕೂಲುಗಳ ವಿದ್ಯಾರ್ಥಿಗಳಿಗೆ ನಾನಾ ವಿಧವಾಗಿ ಸಹಾಯಮಾಡುತ್ತಿ
ದನ್ನು ಕೇಳಿ ಸಂತೋಷಿಸುತ್ತೇನೆ. ಅಲ್ಲದೆ ಇಲ್ಲಿಯೆ ಎಲ್ಲ ಸ್ಕೂ
ಉಪಾಧ್ಯಾಯರುಗಳೂ ಅನ್ಯೋನ್ಯಭಾವದಿಂದ ಕೆಲಸ ಮಾಡುತ್ತಿ
ಸಹ ಸ್ತೋತ್ರಾರ್ಹವಾಗಿರುತ್ತದೆ. ಈಗತಾನೇ ಓದಿದ ರಿಪೋ
ಎ. ವಿ. ಸ್ಕೂಲ್ ಲೈಬ್ರೆರಿ ವಿಷಯವು ಪ್ರಸ್ತಾಪಿಸಲ್ಪಟ್ಟಿರುತ್ತದೆ.
ಗಳಲ್ಲಿ ಪುಸ್ತಕವನ್ನು ಭದ್ರವಾಗಿ ಬೇಕುರಿಸಿದ ಮಾತ್ರಕ್ಕೇ ಪ್ರಯೋ
ವಿಲ್ಲ. ಅವುಗಳನ್ನು ವಿದ್ಯಾರ್ಥಿಗಳೂ ಉಪಾಧ್ಯಾಯರೂ ಸಹ
ಗಮಾಡಿ ಉಪಯೋಗಿಸುತ್ತಾ ಬರಬೇಕಾದದ್ದು ಆವಶ್ಯಕವೆಂಬು
ಗವನದಲ್ಲಿಡಬೇಕು. ಘನತೆಯನ್ನೈದಿದ ನಮ್ಮ ಶೀಮನ್ ಮಾ
ಸಾಹೇಬ ಬಹಾದುರವರ ಸರಕಾರದವರು ವಿದ್ಯಾಭ್ಯಾಸದ
ಅತ್ಯಂತ ಉದಾರವಾದ ಸಹಾಯವನ್ನು ಮಾಡಲು ಬದ್ಧ
ರುತ್ತಾರೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಕಳೆದ ವರ್ಷ
ರೂಪಾಯಿಗಳನ್ನು ಮಂಜೂರ್ ಮಾಡಿರುವದಲ್ಲದೆ ಈ ವರ್ಷವೂ
ದ್ರವ್ಯವನ್ನು ದಯಪಾಲಿಸುತ್ತಾರೆ. ಸರಕಾರದವರೊಡನೆ ತಾವ
ಏಕೀಭವಿಸಿ ತನುಗೆ ಆಗಬೇಕಾದ ಕಾರ್ಯಗಳನ್ನು ಸೂಚಿಸಿ

END

END

CONTD IN
NEXT ROLL

CONTD IN
NEXT ROLL